ಕನ್ನಡ ಭಾಷಾಭಿವೃದ್ಧಿ ಯೋಜನೆ

ಕನ್ನಡ ವಿಶ್ವಕೋಶ ವಿಷಯವಾರು ಗ್ರಂಥಮಾಲೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಇಂಗ್ಲಿಷೇತರ ಸಾಹಿತ್ಯ



ಪ್ರಧಾನ ಸಂಪಾದಕರು
ಪ್ರೊ. ಕೆ. ಎನ್. ಗಂಗಾನಾಯಕ್

ಸಂಪಾದಕರು
ಡಾ. ಶಿರಗಾನಹಳ್ಳಿ ಶಾಂತನಾಯ್ಕ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

ಕನ್ನಡ ಭಾಷಾಭಿವೃದ್ಧಿ ಯೋಜನೆ

ಕನ್ನಡ ವಿಶ್ವಕೋಶ: ವಿಷಯವಾರು ಗ್ರಂಥಗಳು

ಮಾಲೆ-೩

ಇಂಗ್ಲಿಷೇತರ ಸಾಹಿತ್ಯ

ಪ್ರಧಾನ ಸಂಪಾದಕರು

ಪ್ರೊ. ಕೆ. ಎನ್. ಗಂಗಾನಾಯಕ್

ಇಂಗ್ಲಿಷೇತರ ಸಾಹಿತ್ಯ

ಸಂಪಾದಕರು
ಡಾ. ಶಿರಗಾನಹಳ್ಳಿ ಶಾಂತನಾಯ್ಕ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
೨೦೧೧

Inglishethara Sahithya - a collection of selected articles on Other than English Literature from Kannada Encyclopaedia volumes, Edited by Dr. Shiraganahalli Shanthanaik., Published by Kuvempu Institute of Kannada Studies, University of Mysore. Manasagangotri, Mysore-06.
Chief Editor: Dr. K.N. Ganganaik, Director.
First Edition : 2011, PP XXIV+245.

ಬೆಲೆ : ಒಂದು ನೂರು ರೂಪಾಯಿಗಳು
Price : Rs. 100/-

ಡಿಟಿಪಿ : ಕನ್ನಡ ವಿಶ್ವಕೋಶ ವಿಭಾಗ
ಮುದ್ರಣ : ರಾಜಾ ಪ್ರಿಂಟರ್ಸ್, ಬೆಂಗಳೂರು
ಮಾರಾಟಗಾರರು : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ,
ಮೈಸೂರು – ೫೭೦೦೦೬

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೦೨-೦೯-೨೦೧೧

ಕರ್ನಾಟಕ ಸರ್ಕಾರ

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ದೊರೆತಿದ್ದು; ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ತಲಾ ೨ ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು, ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಈ ಮೊತ್ತವನ್ನು ಕನ್ನಡ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಾತ್ರ ಉಪಯೋಗಿಸಬೇಕೆಂದೂ ಹಾಗೂ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳು ಕ್ರಿಯಾಯೋಜನೆಗಳನ್ನು ರೂಪಿಸಿ ಒಪ್ಪಿಗೆ ಪಡೆದುಕೊಳ್ಳಬೇಕೆಂದೂ ಸೂಚಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರವಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಶಾಸನ, ಇತಿಹಾಸ, ಗ್ರಂಥಸಂಪಾದನೆ, ಸಾಹಿತ್ಯ ಚರಿತ್ರೆ, ಅನುವಾದ, ನಿಘಂಟು ರಚನೆ, ತಂತ್ರಜ್ಞಾನ ಹಾಗೂ ಕನ್ನಡೇತರರಿಗೆ ಕನ್ನಡ ಪರಿಚಯಿಸುವ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿವೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲ್ಗೊಂಡಿದ್ದು, ಅವರ ಎಲ್ಲಾ ಸಂಶೋಧನಾ ಅಧ್ಯಯನಗಳು ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠಮಟ್ಟದ ಬೆಳವಣಿಗೆಯನ್ನು

ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಕನ್ನಡ ಭಾಷಾಭಿವೃದ್ಧಿಗೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ರೂಪಿಸಿಕೊಂಡ ಹಲವಾರು ಯೋಜನೆಗಳಲ್ಲಿ ಕನ್ನಡ ವಿಶ್ವಕೋಶಗಳನ್ನು ಆಧರಿಸಿದ ವಿಷಯವಾರು ಗ್ರಂಥಗಳ ಪ್ರಕಟಣೆಯೂ ಒಂದು. ಶ್ರೀಸಾಮಾನ್ಯರಿಗೆ, ವಿದ್ಯಾರ್ಥಿಗಳಿಗೆ ಆಯಾ ವಿಷಯಗಳ ಪ್ರಾಥಮಿಕ ಜ್ಞಾನ ದೊರಕುವಂತೆ, ಅದರಿಂದ ಅವರ ತಿಳಿವಿನ ಮನೋಭಿಲಾಷೆ ಹೆಚ್ಚಾಗುವಂತೆ ಈ ಪುಸ್ತಕಗಳು ರೂಪುಗೊಂಡಿವೆ. ಸಿಂಧುವನ್ನು ಬಿಂದುವಿನಲ್ಲಿ ತೋರಿಸುವ ಕೆಲಸವಿದು. ಈ ಮಾಲೆಯ ನೂರು ಪುಸ್ತಕಗಳ ಯೋಜನೆಯಲ್ಲಿ ಪ್ರಕಟವಾಗುತ್ತಿರುವ ಈ ಗ್ರಂಥಗಳು ಕನ್ನಡವನ್ನೂ ಕನ್ನಡ ವಿಶ್ವಕೋಶಗಳ ಸಾರವನ್ನೂ ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಮೇಲ್ಪಂಕ್ತಿ ಹಾಕಿಕೊಟ್ಟಿವೆ. ಇದಕ್ಕಾಗಿ ಶ್ರಮಿಸಿದ ಪ್ರಧಾನ ಸಂಪಾದಕರು, ಸಂಯೋಜನ ಸಂಪಾದಕರು, ಪರಿಣತರ ಸಮಿತಿ, ಸಂಪಾದಕರು, ಸಂಪಾದಕ ಸಮಿತಿ ಹಾಗೂ ಈ ಕಾರ್ಯದಲ್ಲಿ ನೆರವಾದ ಎಲ್ಲರನ್ನೂ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನಗೆಲ್ಲಲಿ ಎಂದು ಹಾರೈಸಿ ಶುಭಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿ

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. ೩೩೦, ೩ನೆಯ ಮಹಡಿ,
ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೦೬-೦೭-೨೦೧೧

ಶುಭಾಕಾಂಕ್ಷೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು-ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡುಬರುತ್ತವೆ. ಪ್ರಸಕ್ತಶಕಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಪ್ರಸಕ್ತಶಕ 450ರ ಹಲ್ಮಿಡಿ ಶಾಸನ ಕನ್ನಡದ ಮೊದಲ ಲಿಖಿತ ರೂಪದ ದಾಖಲೆ. ಕನ್ನಡದ ಆದಿಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಳುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಿಗೆ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ' ಯೋಜನೆಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಗೆಗಳು ಸಿದ್ಧವಾಗುತ್ತಿವೆ. ಈ ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ರಾಜವಂಶೀಯ ಶಾಸನ ಪ್ರಕಟಣೆ, ಗ್ರಂಥ ಸಂಪಾದನೆ ಕನ್ನಡ ವಿಶ್ವಕೋಶಗಳನ್ನು ಆಧರಿಸಿದ ವಿಷಯವಾರು ಗ್ರಂಥಗಳ ಪ್ರಕಟಣೆ, 'ಕರ್ನಾಟಕ' ಸಂಪುಟದ ಇಂಗ್ಲಿಷ್ ಅನುವಾದ, ಸಾಹಿತ್ಯ ಪಾರಿಭಾಷಿಕ ಪದಕೋಶ ರಚನೆ, ಅನ್ಯಭಾಷಾ ಪದನಿಷ್ಪತ್ತಿ ಕೋಶ ರಚನೆ, ಹೊನ್ನ ಕೋಗಿಲೆ ಎಂಬ ಏಳು ಕ್ರಿಯಾಯೋಜನೆಗಳನ್ನು ರೂಪಿಸಿ, ಕೆಲಸ ಮಾಡುತ್ತಿದೆ. ಈಗ ಕನ್ನಡ ವಿಶ್ವಕೋಶಗಳನ್ನು ಆಧರಿಸಿದ ವಿಷಯವಾರು ನೂರು ಗ್ರಂಥಗಳ ಪ್ರಕಟಣೆಯಲ್ಲಿ ಪ್ರಧಾನ ಸಂಪಾದಕರು,

ಸಂಯೋಜನ ಸಂಪಾದಕರು, ಸಂಪಾದಕರು, ಪರಿಣತರ ಸಮಿತಿ, ಸಂಪಾದಕ ಸಮಿತಿ ಮತ್ತಿತರರು ಭಾಗಿಯಾಗಿದ್ದಾರೆ. ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ ಎಲ್ಲರಿಗೆ ಅಭಿನಂದನೆಗಳನ್ನು ಹೇಳುತ್ತಾ, ಕನ್ನಡದ ಜ್ಞಾನಕ್ಷಿತಿಜವನ್ನು ವಿಸ್ತರಿಸುವ ಇಂಥ ಕೆಲಸಗಳು ಮತ್ತೂ ಮುಂದುವರಿಯಲಿ ಎಂದು ಹಾರೈಸುತ್ತೇನೆ.

ಕನ್ನಡದ ತೇರು ಎಳೆಯುವ ಮಹತ್ತ್ಕಾರ್ಯದಲ್ಲಿ ಎಲ್ಲ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಸವರಾಜು, ಐ.ಎ.ಎಸ್. ಅವರನ್ನು ಹಾಗೂ ಆಯುಕ್ತರಾದ ಶ್ರೀ ಮನುಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಯೋಜನೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟು ಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಿದಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವುದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆ ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವುದು. ಕನ್ನಡಿಗರಿಗೆ ಒಳಿತಾಗಲಿ; ಸರ್ವರೂ ಸುಖಶಾಂತಿಯಿಂದ ಬದುಕಿ ಬಾಳಲೆಂದು ಹೃದಯ ತುಂಬಿ ಹಾರೈಸುವೆ.

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು
ಕರ್ನಾಟಕ ಸರ್ಕಾರ

ಬಸವರಾಜು, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

ಕೊಠಡಿ ಸಂಖ್ಯೆ ೨
ನೆಲಮಹಡಿ, ವಿಕಾಸಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೦೫-೦೯-೨೦೧೧

ಶುಭಸಂದೇಶ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯ ಎದ್ದು ಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿರುತ್ತದೆ. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿಯ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರಜ್ಞ ಟಾಲೆಮಿಯ ಪ್ರವಾಸಿ ಬರೆವಣಿಗೆಯಲ್ಲಿಯೇ ಕನ್ನಡನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪವಿರುವುದನ್ನು ಸಂಶೋಧಕರು ಬೆಳಕಿಗೆ ತಂದಿದ್ದಾರೆ. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ಧಾಪುರ ಭಾಗದಲ್ಲಿ ದೊರಕಿದ ಶಾಸನದಿಂದಲೇ ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿಯೇ ತನ್ನ ಶಾಸನಗಳನ್ನು ಹಾಕಿಸಿದನೆಂದರೆ, ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ಐದನೆಯ ಶತಮಾನದ ಶಾಸನ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ, ಸೂಕ್ತ ಎಂಬ ಕಾರಣಕ್ಕಾಗಿ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ನೀಡಿ ಅದರಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿರುತ್ತಾರೆ. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಕುರಿತಾಗಿ ಅನೇಕ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಲವು ಕ್ರಿಯಾಯೋಜನೆಗಳನ್ನು ಕೈಗೆತ್ತಿಕೊಂಡು ಕಾರ್ಯ ನಿರ್ವಹಿಸುತ್ತಿದೆ. ರಾಜವಂಶಶಾಸನ ಸಂಪುಟಗಳು, ಗ್ರಂಥ ಸಂಪಾದನೆ, ಕನ್ನಡ

ವಿಶ್ವಕೋಶ ವಿಷಯವಾರು ಗ್ರಂಥಗಳ ರಚನೆ, 'ಕರ್ನಾಟಕ' ವಿಷಯ ವಿಶ್ವಕೋಶದ ಇಂಗ್ಲಿಷ್ ಭಾಷಾಂತರ, ಸಾಹಿತ್ಯ ಪಾರಿಭಾಷಿಕ ಪದಕೋಶ ರಚನೆ, ಅನ್ಯಭಾಷಿಕ ಪದನಿಷ್ಪತ್ತಿ ಕೋಶ ಯೋಜನೆ, ಹೊನ್ನ ಕೋಗಿಲೆ – ಇವು ಮುಖ್ಯವಾದವು. ಈಗ ಕನ್ನಡ ವಿಶ್ವಕೋಶಗಳನ್ನು ಆಧರಿಸಿದ ವಿಷಯವಾರು ನೂರು ಗ್ರಂಥಗಳ ಪ್ರಕಟಣೆಯ ಯೋಜನೆಯಲ್ಲಿ ಉಪಯುಕ್ತವಾದ ರೀತಿಯಲ್ಲಿ ಗ್ರಂಥಗಳನ್ನು ಸಂಪಾದಿಸಿಕೊಟ್ಟಿರುವ ಸಂಪಾದಕ ವಿದ್ವಾಂಸರನ್ನೂ ಸಂಪಾದಕ ಸಮಿತಿಯನ್ನೂ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಿ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಹಾ.ತಿ. ಕೃಷ್ಣೇಗೌಡ ಅವರನ್ನೂ ಈ ಕಾರ್ಯದಲ್ಲಿ ಅನೇಕ ಬಗೆಯಲ್ಲಿ ನೆರವಾದ ಇತರರನ್ನೂ ಈ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಕೆಲಸ ಮುಂದುವರಿಸುತ್ತಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಯೋಜನೆಯ ಪ್ರಧಾನ ಸಂಪಾದಕರೂ ಆದ ಡಾ. ಕೆ.ಎನ್. ಗಂಗಾನಾಯಕ್ ಅವರನ್ನೂ ಕುಲಪತಿ ಪ್ರೊ. ವಿ.ಜಿ. ತಳವಾರ್ ಅವರನ್ನೂ ಕುಲಸಚಿವ ಶ್ರೀ ಪಿ.ಎಸ್. ನಾಯಕ್ ಅವರನ್ನೂ ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಸವರಾಜು, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ಮನು ಬಳಿಗಾರ್, ಕ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ
ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨
ದಿನಾಂಕ : ೦೬-೦೭-೨೦೧೧

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು ವೀರಯುಗ ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನು ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು 'ವಿಕ್ರಮಾರ್ಜುನ ವಿಜಯ'ವಾದರೆ, ರನ್ನ ಬರೆದದ್ದು 'ಸಾಹಸಭೀಮ ವಿಜಯ'. ಅಂತೆಯೇ ಪೊನ್ನನೂ 'ಭುವನೈಕರಾಮಾಭ್ಯುದಯ' ಕಾವ್ಯವನ್ನು ಬರೆಯುತ್ತಾನೆ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜಮಾರ್ಗಕಾರನು ಕನ್ನಡ ನಾಡಿನ ಜನರನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳೂ ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜಮಾರ್ಗಕಾರ ಕನ್ನಡ ಜನ ಕವಿಗಳು, ಕಲಿಗಳು ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀ ಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ, ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಒಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ. ಅಕ್ಕಮಹಾದೇವಿ, ಬಸವಣ್ಣ, ಹರಿಹರ, ರಾಘವಾಂಕ, ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು. ಅದಕ್ಕನುಗುಣವಾದ ಕಥೆ, ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತ್ತು. 'ವೀರನಾರಾಯಣನೇ ಕವಿ, ಲಿಪಿಕಾರ, ಕುವರವ್ಯಾಸ, ಕೇಳುವ ಸೂರಿಗಳು ಜಂಗಮ ಜನಾರ್ದನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಬರೆವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ

ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಸಾಹಿತ್ಯ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈ ಸಂಬಂಧದಲ್ಲಿ ಈಗ ಎಲ್ಲ ವಿಶ್ವವಿದ್ಯಾನಿಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ, ತತ್ಸಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಕೊಂಡಿವೆ.

ಈ ನಿಟ್ಟಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಕೂಡ ಅನೇಕ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗಳಲ್ಲಿ ಕನ್ನಡ ವಿಶ್ವಕೋಶಗಳನ್ನು ಆಧರಿಸಿದ ವಿಷಯವಾರು ನೂರು ಗ್ರಂಥಗಳ ಪ್ರಕಟಣೆಯೂ ಒಂದು. ಜ್ಞಾನಸಮುದ್ರವನ್ನು ಬೊಗಸೆಯಲ್ಲಿ ಹಿಡಿಯುವ ಕೆಲಸವಿದು. ಈ ಕೆಲಸವನ್ನು ಆಗಮಾಡುವಲ್ಲಿ ವಿದ್ವಾಂಸರ ಪಡೆಯೇ ಕೆಲಸ ಮಾಡಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ವಿ.ಜಿ. ತಳವಾರ್ ಅವರನ್ನೂ, ಕುಲಸಚಿವರಾದ ಶ್ರೀ ಪಿ.ಎಸ್. ನಾಯಕ್ ಅವರನ್ನೂ ಮೊದಲಿಗೆ ಅಭಿನಂದಿಸುತ್ತೇನೆ. ಈ ಯೋಜನೆಯ ಪ್ರಧಾನ ಸಂಪಾದಕರೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಆದ ಪ್ರೊ. ಕೆ.ಎನ್. ಗಂಗಾನಾಯಕ್ ಅವರನ್ನೂ ಅವರೊಡನೆ ದುಡಿದ ಸಂಪಾದಕ ವಿದ್ವಾಂಸರನ್ನೂ ಸಂಚಾಲಕರನ್ನೂ ಇವರಿಗೆ ನೆರವಾದ ಸಂಪಾದಕ ಸಮಿತಿಯನ್ನೂ ಪರಿಣತರ ಸಮಿತಿಯನ್ನೂ ಮತ್ತಿತರರನ್ನೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಮನುಬಳಿಗಾರ್
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕುಲಪತಿಗಳ ಮಾತು

ಕನ್ನಡ ನಾಡು ನುಡಿಗೆ ಸುಮಾರು ಎರಡು ಸಾವಿರ ವರ್ಷಗಳಷ್ಟು ಸುದೀರ್ಘ ಇತಿಹಾಸವಿದೆ. ಪ್ರಸಕ್ತಶಕಪೂರ್ವದಿಂದಲೇ ಕನ್ನಡ ಭಾಷೆ ಇತ್ತೆಂಬುದಕ್ಕೆ ಆಧಾರಗಳಿವೆ. ಕನ್ನಡನಾಡು ನುಡಿಯನ್ನು ಹೆಸರಿಸುವ ಹಲವು ಹತ್ತು ಆಧಾರಗಳು ಸಂಸ್ಕೃತ ಮತ್ತು ಪ್ರಾಕೃತ ಕಾವ್ಯಗಳಿಂದ ದೊರೆಯುತ್ತವೆ. ಮಹಾಭಾರತ, ರಾಮಾಯಣ, ವೇದಗಳು ಕೂಡ ಕನ್ನಡ ಭಾಷೆಯ ಪ್ರಾಚೀನತೆಗೆ ಪುರಾವೆಗಳನ್ನು ಒದಗಿಸುತ್ತವೆ. 'ಕನ್ನಡ ಮಾತು' 'ನಾಡು' ಮತ್ತು 'ನುಡಿ' ಎರಡಕ್ಕೂ ಅನ್ವಯಿಸಿದಂತೆ ಬಳಕೆಯಾಗುತ್ತಿದ್ದುದನ್ನು 'ಕವಿರಾಜಮಾರ್ಗ'ವೇ ಸೂಚಿಸುತ್ತದೆ. ಕನ್ನಡದ ಉಪಲಬ್ಧ ಈ ಮೊದಲ ಗ್ರಂಥದಲ್ಲಿ ಉಲ್ಲೇಖಿತವಾಗಿರುವ ಕೃತಿಗಳೂ ಕೃತಿಕಾರರೂ ಕನ್ನಡದ ಪ್ರಾಚೀನತೆಯೆಡೆಗೆ ಬೆರಳು ತೋರಿಸುತ್ತಿರುವುದು ಸ್ಪಷ್ಟವೇ ಇದೆ. ಕನ್ನಡಿಗರ ಸಾಹಸವನ್ನೂ ಉದಾರ ಮನಸ್ಸನ್ನೂ ಕಾವ್ಯಕಟ್ಟುವ ಕಲೆಯನ್ನೂ ಪ್ರಾಚೀನಕಾಲದಿಂದಲೂ ಕಾವ್ಯಗಳು ವರ್ಣಿಸುತ್ತಲೇ ಬಂದಿವೆ.

ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆಯನ್ನು ರಕ್ಷಿಸುವಲ್ಲಿ ಶಾಸನಗಳೂ ಸಾಹಿತ್ಯಕೃತಿಗಳೂ ವಹಿಸುತ್ತಾ ಬಂದಿರುವ ಪಾತ್ರ ಅಸದೃಶವಾದುದು. ಕರ್ನಾಟಕದ ಶಾಸನಗಳದೇ ಒಂದು ಪ್ರತ್ಯೇಕ ಇತಿಹಾಸ. ಸಮೃದ್ಧವೂ ಶ್ರೀಮಂತವೂ ಆದ ಶಿಷ್ಟ ಸಂಸ್ಕೃತಿಯ ಪರಂಪರೆಯನ್ನು ಇದು ಹೇಳುತ್ತದೆ. ಇದಕ್ಕೆ ನಮ್ಮಲ್ಲಿ ಪ್ರಕಟವಾಗಿರುವ ಶಾಸನಸಂಪುಟಗಳೇ ಸಾಕ್ಷಿಯಾಗಿವೆ. ಪ್ರಸಕ್ತಶಕದ ಆರಂಭದಿಂದಲೂ ಕನ್ನಡದಲ್ಲಿ ಸಾಹಿತ್ಯ ರಚನೆಯಾಗುತ್ತಿದ್ದು, ಪ್ರಬುದ್ಧ ಸಾಹಿತ್ಯ ಪರಂಪರೆಯೊಂದು ನಮ್ಮಲ್ಲಿದೆ; ವೈವಿಧ್ಯ ಮತ್ತು ವೈಶಿಷ್ಟ್ಯಕ್ಕೆ ಅದು ಹೆಸರಾಗಿದೆ. ಜಾಗತಿಕ ಮಟ್ಟದಲ್ಲಿ ನಿಲ್ಲಬಹುದಾದ ಕಾವ್ಯಕೃತಿಗಳೂ ಕವಿಗಳೂ ಕನ್ನಡದಲ್ಲಿರುವುದು ಹೆಮ್ಮೆಪಡಬೇಕಾದ ಸಂಗತಿ. ಕನ್ನಡ ಭಾಷೆ ತನ್ನೆಲ್ಲ ಸಮಕಾಲೀನ ಗುಣಗಳನ್ನು ಕೂಡಿಕೊಂಡು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡವೆಂಬ ಸ್ಥಿತ್ಯಂತರಗಳನ್ನು ಪಡೆದುಕೊಂಡು ವಿಕಾಸಗೊಂಡಿರುವುದು ಗಮನಿಸಬೇಕಾದ ಸಂಗತಿ. ಹೀಗೆ ಕನ್ನಡ ಭಾರತೀಯ ಮುಖ್ಯ ಸಾಹಿತ್ಯಕ ಭಾಷೆಗಳಲ್ಲಿ ಒಂದಾಗಿ ಸಮೃದ್ಧತೆ, ಪ್ರಬುದ್ಧತೆ ಮತ್ತು ವೈವಿಧ್ಯತೆಗಳಿಂದ ಬಹುದೊಡ್ಡ ಸ್ಥಾನವನ್ನು ಪಡೆದಿದೆ.

ಈ ಹಿನ್ನೆಲೆಯಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತದ್ದು ಸಹಜವಾಗಿಯೇ ಇದೆ. ಈ ವಿಶೇಷ ಸಂದರ್ಭವನ್ನು ಪರಿಗಣಿಸಿ ಕರ್ನಾಟಕದ ಘನ ಸರ್ಕಾರ ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಕರ್ನಾಟಕದ ಎಲ್ಲ ವಿಶ್ವವಿದ್ಯಾನಿಲಯಗಳಿಗೂ ಎರಡೆರಡು ಕೋಟಿ ಅನುದಾನವನ್ನು ನೀಡಿತು; ಇದರಲ್ಲಿ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿತು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಕ್ರಿಯಾಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲು ಎಲ್ಲ ವಿಶ್ವವಿದ್ಯಾನಿಲಯಗಳ ಕನ್ನಡ ವಿಭಾಗಗಳಿಗೆ ಸೂಚಿಸಿತು.

ಆ ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಪ್ರಮುಖವೆನಿಸುವ ಏಳು ಕ್ರಿಯಾಯೋಜನೆಗಳನ್ನು ಕೈಗೆತ್ತಿಕೊಂಡು ಉತ್ತಮ ಕೆಲಸ ಮಾಡುತ್ತಿದೆ. ಆ ಯೋಜನೆಗಳು ಇಂತಿವೆ: 1. ರಾಜವಂಶೀಯ ಶಾಸನ ಸಂಪುಟಗಳು; 2. ಹಸ್ತಪ್ರತಿಗಳ ಸಂರಕ್ಷಣೆ, ದಾಖಲೀಕರಣ ಮತ್ತು ಗಣಕೀಕರಣ; 3. ಕನ್ನಡ ವಿಶ್ವಕೋಶ ಆಧರಿಸಿದ ವಿಷಯವಾರು ಗ್ರಂಥಗಳ ಪ್ರಕಟಣೆ; 4.'ಕರ್ನಾಟಕ' ವಿಷಯ ವಿಶ್ವಕೋಶ ಸಂಪುಟದ ಇಂಗ್ಲಿಷ್ ಅನುವಾದ; 5. ಸಾಹಿತ್ಯ ಚಿಂತನೆಗಳ ಪಾರಿಭಾಷಿಕ ಪದಕೋಶ; 6. ಅನ್ಯಭಾಷಾ ಪದನಿಷ್ಪತ್ತಿಕೋಶ; 7. ಹೊನ್ನಕೋಗಿಲೆ. ಈ ಎಲ್ಲ ಯೋಜನೆಗಳ ಕಾರ್ಯ ತ್ವರಿತಗತಿಯಲ್ಲಿ ಸಾಗುತ್ತಿದ್ದು, ಪ್ರಗತಿಯ ವಿವಿಧ ಹಂತದಲ್ಲಿದೆ; ಕೆಲವು ಕೃತಿಗಳಂತೂ ಈಗ ಬಿಡುಗಡೆಗೆ ಸಿದ್ಧಗೊಳ್ಳುತ್ತಿವೆ.

ಕರ್ನಾಟಕ ಸರ್ಕಾರ ಉದಾರವಾಗಿ ಅನುದಾನ ನೀಡದಿದ್ದರೆ ಈ ಕಾರ್ಯಗಳು ನಡೆಯುವುದು ಸಾಧ್ಯವಾಗುತ್ತಿರಲಿಲ್ಲ. ಇದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮ ವಂದನೆಗಳೂ ಕೃತಜ್ಞತೆಗಳೂ ಸಲ್ಲಬೇಕಾಗಿದೆ. ಹಾಗೆಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಗೋವಿಂದ ಎಂ. ಕಾರಜೋಳ ಅವರಿಗೂ, ಕಾರ್ಯದರ್ಶಿಗಳಾದ ಶ್ರೀ ಬಸವರಾಜು, ಐ.ಎ.ಎಸ್. ಅವರಿಗೂ, ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ರೂಪಿಸಿಕೊಂಡ ಏಳು ಯೋಜನೆಗಳಲ್ಲಿ ಕನ್ನಡ ವಿಶ್ವಕೋಶಗಳನ್ನು ಆಧರಿಸಿದ ವಿಷಯವಾರು ಗ್ರಂಥಗಳ ಪ್ರಕಟಣೆಯೂ ಒಂದು. ಸಮುದ್ರದೋಪಾದಿಯಲ್ಲಿರುವ 'ವಿಶ್ವಜ್ಞಾನ'ವನ್ನು 'ಹಿಡಿ' ರೂಪದಲ್ಲಿ ಶ್ರೀಸಾಮಾನ್ಯರಿಗೆ, ಜ್ಞಾನಾಕಾಂಕ್ಷಿಗಳಿಗೆ, ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ರೀತಿಯಲ್ಲಿ ಈ ಗ್ರಂಥಗಳನ್ನು ರೂಪಿಸಲಾಗಿದೆ. ಬಹಳ ಶ್ರಮವಹಿಸಿ, ಸಮರ್ಥವಾಗಿ ಸಂಪಾದನ ಕಾರ್ಯವನ್ನು ನಿರ್ವಹಿಸಿದ ಎಲ್ಲ ಸಂಪಾದಕ ವಿದ್ವಾಂಸರನ್ನೂ ಸಂಪಾದಕ ಸಮಿತಿಯನ್ನೂ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಯೋಜನೆಯನ್ನು ಅತೀವ ಶ್ರದ್ಧೆ ಹಾಗೂ ಪರಿಶ್ರಮದಿಂದ ನಿರ್ವಹಿಸುತ್ತಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಯೋಜನೆಯ ಪ್ರಧಾನ ಸಂಪಾದಕರೂ ಆದ ಪ್ರೊ. ಕೆ.ಎನ್. ಗಂಗಾನಾಯಕ್ ಅವರನ್ನೂ ಅವರೊಡನೆ ಕನ್ನಡ ವಿಶ್ವಕೋಶ ಯೋಜನೆಯಲ್ಲಿ ತನುಮನದಿಂದ ದುಡಿಯುತ್ತಿರುವ ಡಾ. ಹಾ.ತಿ. ಕೃಷ್ಣೇಗೌಡ ಅವರನ್ನೂ ಉಳಿದೆಲ್ಲರನ್ನೂ ವಿಶ್ವವಿದ್ಯಾನಿಲಯದ ಪರವಾಗಿ ಅಭಿನಂದಿಸುತ್ತೇನೆ. ಈ ಎಲ್ಲ ಯೋಜನೆಗಳೂ ಬೇಗನೆ ಪೂರ್ಣಗೊಂಡು ಆ ದಿಶೆಯಲ್ಲಿ ಹೊಸ ವಿಕ್ರಮವನ್ನು ಸಾಧಿಸಲಿ ಎಂಬುದಾಗಿ ಹಾರೈಸುತ್ತೇನೆ.

ಪ್ರೊ. ವಿ.ಜಿ. ತಳವಾರ್
ಕುಲಪತಿಗಳು
ಮೈಸೂರು ವಿಶ್ವವಿದ್ಯಾನಿಲಯ

ಕುಲಸಚಿವರ ಮಾತು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡ ಕ್ರಿಯಾಯೋಜನೆಯಲ್ಲಿ ಕನ್ನಡ ವಿಶ್ವಕೋಶ ಸಂಪುಟಗಳನ್ನು ಆಧರಿಸಿದ ವಿಷಯವಾರು ನೂರು ಗ್ರಂಥಗಳನ್ನು ಹೊರತರುತ್ತಿರುವುದು ಅತ್ಯಂತ ಸಂತೋಷದ ವಿಚಾರವಾಗಿದೆ. ಈಗಾಗಲೇ ಕನ್ನಡ ವಿಶ್ವಕೋಶ ಸಂಪುಟಗಳು ಮತ್ತು ವಿಷಯ ವಿಶ್ವಕೋಶ ಸಂಪುಟಗಳು ವಾಚಕರ ಗಮನವನ್ನು ಸೆಳೆದಿವೆ; ಅತ್ಯಂತ ಉಪಯುಕ್ತ ಆಕರ ಗ್ರಂಥಗಳೆಂದು ಜನಮನ್ನಣೆ ಗಳಿಸಿವೆ. ಆದರೆ ಕನ್ನಡ ವಿಶ್ವಕೋಶ ಸಂಪುಟಗಳು ಅಲಭ್ಯವಾಗಿದ್ದು ಅವುಗಳ ಪುನರ್ ಮುದ್ರಣಕಾರ್ಯ (ಸ್ಥೂಲ ಪರಿಷ್ಕಾರದೊಡನೆ) ಯೋಜನೆ ಈಗ ಚಾಲನೆಗೊಂಡಿದೆ. ಈ ಸಂಪುಟಗಳು ಕಾಲಮಿತಿಯ ಯೋಜನೆಯಲ್ಲಿ ಆದಷ್ಟು ಬೇಗ ವಾಚಕರಿಗೆ ದೊರಕಲಿವೆ. ಎಲ್ಲ ಸಂದರ್ಭದಲ್ಲಿಯೂ ಎಲ್ಲರಿಗೂ ಈ ಸಂಪುಟಗಳು ನೋಡಲು ಸಿಗುವುದಿಲ್ಲ. ಕನ್ನಡ ವಿಶ್ವಕೋಶಗಳ ಜ್ಞಾನ ಬೇರೆ ಬೇರೆ ನೆಲೆಯಲ್ಲಿ ಕನ್ನಡ ವಾಚಕರಿಗೆ ಉಪಯೋಗಕ್ಕೆ ಬರಬೇಕು ಎಂಬ ಆಶಯದೊಂದಿಗೆ ಶ್ರೀಸಾಮಾನ್ಯರನ್ನು, ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಆಯಾ ವಿಷಯಗಳ ಕೆಲವು ಆಯ್ದ ಪ್ರಾತಿನಿಧಿಕ ಲೇಖನಗಳನ್ನು ಒಂದೆಡೆ ಕಲೆಹಾಕಿ, ಅವುಗಳ ಮಾಹಿತಿಯನ್ನು ಸಮಗ್ರವಾಗಿ ಮರು ಪರಿಶೀಲಿಸಿ, ತಿದ್ದುಪಡಿ ಮಾಡಿ ಈಗ ಚಿಕ್ಕ ಚಿಕ್ಕ ಪುಸ್ತಕಗಳ ರೂಪದಲ್ಲಿ ಹೊರತರುತ್ತಿರುವುದು ಕನ್ನಡದ ವಿಶ್ವಜ್ಞಾನವನ್ನು ಸಾಮಾನ್ಯರ ಬಳಿಗೆ ಕೊಂಡೊಯ್ಯುತ್ತಿರುವ ಭಗೀರಥ ಪ್ರಯತ್ನವಾಗಿದೆ. ಈ ಕೆಲಸ 'ಸಿಂಧು'ವನ್ನು 'ಬಿಂದು'ವಿನಲ್ಲಿ ಪ್ರತಿಫಲಿಸುವ ಸ್ವರೂಪದ್ದಾಗಿದೆ. ಈ ಬಗೆಯ ಸಂಗ್ರಹಕಾರ್ಯ ಅತ್ಯಂತ ಪರಿಶ್ರಮದ್ದೂ ಅತ್ಯಂತ ಜವಾಬ್ದಾರಿಯುತವಾದದ್ದೂ ಆಗಿದೆ. ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ಕ್ಷೇತ್ರದ ಜ್ಞಾನದೀವಿಗೆಗಳಾಗಿ ವಾಚಕರ ಮನವನ್ನು ಆವರಿಸಲಿವೆ. ಇಂಥ ಮಹತ್ತ್ವದ ಜ್ಞಾನದಾಸೋಹದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕ್ರಿಯಾಶೀಲತೆ ಆದರ್ಶಪ್ರಾಯವಾದುದಾಗಿದೆ. ಈ ಯೋಜನೆಯ ಕೆಲಸವನ್ನು ಆಗಮಾಡುತ್ತಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಕೆ.ಎನ್. ಗಂಗಾನಾಯಕ್ ಅವರನ್ನೂ ಈ ಯೋಜನೆಯ ಸಂಚಾಲಕರಾದ ಡಾ. ಹಾ.ತಿ. ಕೃಷ್ಣೇಗೌಡ ಅವರನ್ನೂ ಸಂಪಾದಕ ಸಮಿತಿಯನ್ನೂ ಪರಿಣತರ ಸಮಿತಿಯನ್ನೂ ಆಯಾ ಕೃತಿಗಳ ಸಂಪಾದಕತ್ವ ವಹಿಸಿಕೊಂಡು ಈ ಕೆಲಸವನ್ನು ನಿರ್ವಹಿಸಿಕೊಟ್ಟ ಸಂಪಾದಕರುಗಳನ್ನೂ ಈ ಕೆಲಸದಲ್ಲಿ ನೆರವಾದ ಎಲ್ಲರನ್ನೂ ವಿಶ್ವವಿದ್ಯಾನಿಲಯದ ಪರವಾಗಿ ಅಭಿನಂದಿಸುತ್ತೇನೆ.

ಪಿ.ಎಸ್. ನಾಯಕ್
ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ

ಪ್ರಧಾನ ಸಂಪಾದಕರ ನುಡಿ

ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಕನ್ನಡ ಭಾಷೆಯು ತಮಿಳು ಭಾಷೆಯನ್ನು ಬಿಟ್ಟರೆ ಭಾರತದ 'ಜೀವಂತ' ಭಾಷೆಗಳಲ್ಲೆಲ್ಲಾ ಅತ್ಯಂತ ಪ್ರಾಚೀನವಾದ ಸಾಹಿತ್ಯ ಪರಂಪರೆಯನ್ನುಳ್ಳ ಭಾಷೆಯಾಗಿದೆ. ಕನ್ನಡ ಭಾಷೆ ಎಷ್ಟು ಪ್ರಾಚೀನವಾದದ್ದೆಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆಯಾದರೂ ಪ್ರಸಕ್ತಶಕದ ಆರಂಭದ ಕಾಲದಲ್ಲಿ ಕನ್ನಡವು ಜನಭಾಷೆಯಾಗಿತ್ತೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳೇನೂ ಇಲ್ಲ. ಪ್ರ.ಶ.ಸು.೪೫೦ರ ಕನ್ನಡದ ಪ್ರಥಮ ಉಪಲಬ್ಧ ಶಾಸನವಾದ ಹಲ್ಮಿಡಿ ಶಾಸನದಲ್ಲಿ ಕನ್ನಡ ಬರೆವಣಿಗೆಯ ಬಗೆಗೆ ಪ್ರಥಮ ದಾಖಲೆ ದೊರೆಯುತ್ತದೆ. ಪೂರ್ವದ ಹಳಗನ್ನಡದ ಗದ್ಯಶೈಲಿಯಲ್ಲಿರುವ ಈ ಶಾಸನವನ್ನು ನೋಡಿದರೆ, ಕನ್ನಡ ಭಾಷೆ ಆ ಕಾಲಕ್ಕಾಗಲೇ ಬರೆವಣಿಗೆಗೆ ಪಳಗುತ್ತಿರುವ ಅವಸ್ಥೆಯಲ್ಲಿದ್ದದ್ದೂ, ಸಂಸ್ಕೃತದ ದಟ್ಟವಾದ ಪ್ರಭಾವಕ್ಕೆ ಒಳಗಾಗಿದ್ದದ್ದೂ ಕಂಡುಬರುತ್ತದೆ.

ಕನ್ನಡ ಭಾಷೆ ಬಹಳ ಪ್ರಾಚೀನವೆಂಬುದು ಸುಸ್ಪಷ್ಟ. ಆದರೆ ಎಷ್ಟು ಪ್ರಾಚೀನವೆಂದು ಹೇಳುವುದು ಮಾತ್ರ ಕಷ್ಟವಾಗಿದೆ. ಬರೆವಣಿಗೆಗೆ ಬರುವ ಮುನ್ನ ಬಹಳ ಕಾಲದವರೆಗೆ ಆಡುಭಾಷೆಯಾಗಿ ಬಳಕೆಯಾಗಿದ್ದಿರಬೇಕು. ಕನ್ನಡದ ಪ್ರಾಚೀನತೆಗೆ ಸಂಬಂಧಿಸಿದಂತೆ ಹಲವಾರು ಉಲ್ಲೇಖಗಳು ಭಾರತೀಯ ಪ್ರಾಚೀನ ಭಾಷೆಗಳ ಗ್ರಂಥಗಳಲ್ಲಿ ದೊರೆಯುತ್ತವೆ. ಛಾಂದೋಗ್ಯ ಉಪನಿಷತ್ತಿನಲ್ಲಿ 'ಮಟಚಿ' ಎಂಬ ಪದವಿದೆ. ಇದು ಕನ್ನಡದ ಮಿಡತೆಯೇ ಆಗಿದೆಯೆಂಬುದು ವಿದ್ವಾಂಸರ ಅಭಿಮತ. ನಮಗೆ ದೊರೆತಿರುವ ಪ್ರಾಚೀನ ಪದಗಳಲ್ಲಿ ಇದೂ ಒಂದು. ವರಾಹ ಮಿಹಿರನ ಬೃಹತ್ ಸಂಹಿತೆ ಮತ್ತು ರಾಜಶೇಖರನ ಕಾವ್ಯಮೀಮಾಂಸೆ ಗ್ರಂಥಗಳಲ್ಲಿ ಕರ್ನಾಟಕದ ಉಲ್ಲೇಖವಿದೆ. ಮಹಾಭಾರತದಲ್ಲಿ 'ಉನ್ನತ್ಯಕಾ'ಕ್ಕೆ 'ಕರ್ನಾಟಕ' ಪಾಠವಿದೆ. ಪ್ರ.ಶ.೧ನೆಯ ಶತಮಾನದ ಹಾಲನ ಗಾಥಾಸಪ್ತಶತಿಯಲ್ಲಿ ಕನ್ನಡದ ಮಾತುಗಳಿವೆ; 'ಮಹಾವಂಶ'ದಲ್ಲಿ 'ವನವಾಸಿ' ಪ್ರಯೋಗವಿದೆ; ಪ್ರ.ಶ.೨ನೆಯ ಶತಮಾನದ ತಮಿಳಿನ 'ಶಿಲಪ್ಪದಿಗಾರಂ' ನಲ್ಲಿ 'ಕರುನಾಡಗರ್' ಎಂಬ ಶಬ್ದ ಕಾಣಿಸಿಕೊಂಡಿದೆ. 'ಅಗನಾನೂರ್' ಶಾಸನದಲ್ಲಿ 'ಎಱುಮೈನಾಡು' ಪದವಿದೆ. ಮರಾಠಿಯ ಜ್ಞಾನೇಶ್ವರಿ ಯಲ್ಲಿ ಕನ್ನಡದ ಪ್ರಸ್ತಾಪವಿದೆ. ಈ ಎಲ್ಲ ಕಾರಣಗಳಿಂದ ಪ್ರಸಕ್ತಶಕಪೂರ್ವದಿಂದಲೇ ಕನ್ನಡ ಮಾತಿನ (ಭಾಷೆಯ) ಪ್ರಾಚುರ್ಯವಿದ್ದಿರಬೇಕೆಂದು ಹೇಳಲಾಗಿದೆ.

ಪ್ರ.ಶ. ೨ನೆಯ ಶತಮಾನದ ಬೌದ್ಧ ಗ್ರಂಥವಾದ 'ಲಲಿತ ವಿಸ್ತರ' ಎಂಬ ಕೃತಿಯಲ್ಲಿ ಭಾರತದ ವಿವಿಧ ಭಾಷೆಗಳ ಲಿಪಿಗಳ ಉಲ್ಲೇಖವಿದೆ. ಅದರಲ್ಲಿ ಬರುವ 'ಕನಾರಿ' ಎಂಬ ಲಿಪಿಯು ಕನ್ನಡ ಲಿಪಿಯನ್ನೇ ಸೂಚಿಸುತ್ತದೆ ಎಂದು ಪಾಂಡುರಂಗರಾವ್ ದೇಸಾಯಿ ಹೇಳಿದ್ದಾರೆ.

ಭಾರತಾಂತರ್ಗತವಾಗಿರುವ ಕನ್ನಡನಾಡು ನಿಸರ್ಗ ಸಂಪತ್ತಿನಲ್ಲಿ, ಕಲಾ ಶ್ರೀಮಂತಿಕೆಯಲ್ಲಿ, ಪ್ರಾಚೀನ ವೈಭವದಲ್ಲಿ ಜಗತ್ತಿನ ಯಾವ ಭೂಭಾಗಕ್ಕೂ ಕನಿಷ್ಠವಾದದ್ದಲ್ಲ. ಸುದೀರ್ಘವೂ, ವೈವಿಧ್ಯಸಂಪನ್ನವೂ, ಶ್ರೀಮಂತವೂ ಆದ ಭವ್ಯ ಪರಂಪರೆ ಅದಕ್ಕಿದೆ. ಇತಿಹಾಸಪೂರ್ವ ಕಾಲದಿಂದ ಈ ನಾಡು ಸುಸಂಸ್ಕೃತ

ಜನಾಂಗಕ್ಕೆ ಆಸರೆಯಾಗಿತ್ತೆಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆಯುತ್ತವೆ. ಹರಪ್ಪ, ಮೊಹೆಂಜೋದಾರೊ ನಾಗರಿಕತೆಗೆ ಕನ್ನಡಿಗರೆ ಮೂಲ ಪುರುಷರಿರಬೇಕೆಂಬ, ಪ್ರಸಕ್ತಶಕಪೂರ್ವದಲ್ಲಿ ಹಲವು ಶತಮಾನಗಳ ಹಿಂದೆಯೇ ಅವರು ಪಾಶ್ಚಾತ್ಯ ದೇಶಗಳೊಡನೆ ಸಂಬಂಧ ಹೊಂದಿದ್ದರೆಂಬ ಸಂಗತಿಗಳಿಗೆ ಇಂಬಾಗುವ ಪುರಾವೆಗಳು ದುರ್ಲಭವೇನಲ್ಲ. ಹರಪ್ಪ ಎಂಬ ಹೆಸರೇ ಕನ್ನಡದ್ದಾಗಿರಬಾರದೇಕೆ ಎಂದೂ ಆ ಸಂಸ್ಕೃತಿಯ ಸೃಷ್ಟಿಗೆ ಕಣ್ಣರ್ ಎಂಬ ಜನ ಕಾರಣರಾಗಿರಬೇಕೆಂದೂ, ಅವರೇ ಕನ್ನಡಿಗರೆಂದೂ ಹೇಳಲಾಗಿದೆ.

ಅದೇನೇ ಇರಲಿ ಐತಿಹಾಸಿಕ ಕಾಲದಲ್ಲಂತೂ, ವಿಜಯನಗರ ಸಾಮ್ರಾಜ್ಯದ ಅಂತ್ಯದವರೆಗಾದರೂ ಕನ್ನಡನಾಡು ಜಗತ್ತಿನ ಪ್ರಬಲ ರಾಷ್ಟ್ರಗಳೊಡನೆ ಸರಿಸಮನಾಗಿ ಪ್ರವರ್ಧಮಾನ ಸ್ಥಿತಿಯಲ್ಲಿದ್ದು, ಪ್ರವಾಸಿಗಳ ಕಣ್ಮನಗಳನ್ನು ಸೆಳೆದಿತ್ತೆಂಬ ವಿಷಯದಲ್ಲಿ ಸಂದೇಹವಿಲ್ಲ. ಗಂಗರ ಕಾಲದಿಂದ ಕನ್ನಡಿಗರು ಭರತಖಂಡದ ಉದ್ದಗಲಗಳಲ್ಲಿ ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಪ್ರಭಾವ ಬೀರಿದ್ದರೆಂಬುದು ಚಾರಿತ್ರಿಕ ಸಂಗತಿಯಾಗಿದೆ. ೯ನೆಯ ಶತಮಾನದ 'ಕವಿರಾಜಮಾರ್ಗ'ದ ಕರ್ತೃ ಕನ್ನಡಿಗರನ್ನು ಕುರಿತು,

> ಸುಭಟರ್ಕಳ್ ಕವಿಗಳ್ ಸು
> ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್
> ಅಭಿಮಾನಿಗಳತ್ಯುಗ್ರರ್
> ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ (೨–೨೮)

ಎಂದು ಅಭಿಮಾನದಿಂದ, ಹೆಮ್ಮೆಯಿಂದ ಪ್ರಶಂಸೆ ಮಾಡಿದ್ದಾನೆ. ಹಾಗಾಗಿ ಒಂದಾನೊಂದು ಕಾಲದಲ್ಲಿ ಕರ್ನಾಟಕಕ್ಕೆ ಮಹಾರಾಷ್ಟ್ರವೆಂಬ (ದೊಡ್ಡನಾಡು) ಹೆಸರಿತ್ತೆಂಬುದನ್ನು, ಕನ್ನಡ ವೀರರು ನೇಪಾಳದ ತನಕ ಕನ್ನಡ ಬಾವುಟವನ್ನು ಹಾರಿಸಿದರೆಂಬುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಮತ್ತು ದಕ್ಷಿಣಾಪಥಗಳು ವಿಭಿನ್ನವಾಗಿರಲಿಲ್ಲವೆಂಬುದು ಅತಿಶಯೋಕ್ತಿಯಾಗಲಾರದು.

ಆಳುವ ಜನ ಪ್ರಜಾನುರಾಗಿಗಳಾಗಿದ್ದು ಪ್ರಬಲವಾಗಿದ್ದರೆ ದೇಶ ಸುಭಿಕ್ಷದಿಂದ ಕೂಡಿರುತ್ತದೆ. ಅಂತಹ ರಾಷ್ಟ್ರದಲ್ಲಿ ಕಲೆ ಸಾಹಿತ್ಯ ಸಂಸ್ಕೃತಿ ಸಮೃದ್ಧವಾಗಿ ಬೆಳೆಯುತ್ತದೆಂಬುದಕ್ಕೆ ಅನೇಕ ನಿದರ್ಶನಗಳು ಇಂದಿಗೂ ಜೀವಂತವಾಗುಳಿದಿವೆ. ಜಗತ್ತಿನ ಎಲ್ಲ ಧರ್ಮಗಳಿಗೆ ಕನ್ನಡನಾಡು ಆಸರೆಯಾಗಿದ್ದರೂ, ದೊರೆಗಳ ವಿವೇಕ, ಔದಾರ್ಯ ಹಾಗೂ ದಕ್ಷತೆಗಳಿಂದಾಗಿ ಮತೀಯ ಕಲಹಗಳು ವಿರಳವಾಗಿದ್ದುವೆಂದೂ ಅವು ಸಂಭವಿಸುವ ಸೂಚನೆ ಗೋಚರಿಸುತ್ತಿದ್ದಂತೆಯೆ ಶಾಂತಿಯನ್ನು ಕುದುರಿಸುತ್ತಿದ್ದರೆಂದೂ ಶಾಸನಗಳಿಂದ ತಿಳಿದುಬರುತ್ತದೆ.

ಕನ್ನಡ ನಾಡು ಫಲವತ್ತಾದ ಪ್ರದೇಶ. ನಿಸರ್ಗದೇವಿಯ ಕೃಪೆ ಹಲವಂಗದಲ್ಲಿ ನಾಡಿನಲ್ಲೆಲ್ಲಾ ಪಸರಿಸಿದೆ. ಇಲ್ಲಿ ನೀರಿಗೆ ಕೊರತೆಯಿಲ್ಲ. ವನಸಂಪತ್ತು ಹೇರಳವಾಗಿದ್ದು, ನಾನಾ ನಮೂನೆಯ ಬೆಳೆ ಕಣ್ಣಿಗೆ ಕೋರೈಸುತ್ತದೆ. ಖನಿಜಗಳಿಗೆ ಬರವಿಲ್ಲದ

ಕನ್ನಡನಾಡು ಇಂದಿಗೂ ಚಿನ್ನದನಾಡೆಂದು, ಗಂಧದಗುಡಿಯೆಂದು ಪ್ರಸಿದ್ಧಿ ಪಡೆದಿದೆ. ನಿಸರ್ಗ ಸಂಪತ್ತು ಇಂದಿಗೂ ಕೃಪಣವಾಗದೆ ವನದೇವಿ, ಜಲದೇವಿಯರ ತೌರೆಂದು ಪ್ರಸಿದ್ಧಿ ಪಡೆದಿದೆ. ಕಾಡು-ಕಡಲು, ಸಹ್ಯಾದ್ರಿ-ಕೊಡಚಾದ್ರಿ, ಕೃಷ್ಣಾ-ಕಾವೇರಿಯರು ಕನ್ನಡ ಮಕ್ಕಳ ಕೈಂಕರ್ಯಕ್ಕೆಂದು ಕಟಿಬದ್ಧವಾಗಿವೆ.

ಇಂತಹ ಪರಂಪರೆಯನ್ನುಳ್ಳ ಕರ್ನಾಟಕದಲ್ಲಿ ಕನ್ನಡ ಭಾಷೆಯೇ ಪ್ರಾಧಾನ್ಯ. ಕರ್ನಾಟಕ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ಕರ್ನಾಟಕ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ತಲಾ ೨ ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು, ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಹೀಗೆ ಬಿಡುಗಡೆ ಮಾಡಿರುವ ಹಣದಲ್ಲಿ ಕನ್ನಡ ಭಾಷಾಭಿವೃದ್ಧಿಗೆ ಸಂಬಂಧಿಸಿದಂತೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ರೂಪಿಸಿಕೊಂಡ ಹಲವಾರು ಯೋಜನೆಗಳಲ್ಲಿ ಕನ್ನಡ ವಿಶ್ವಕೋಶದ ಲೇಖನಗಳನ್ನಾಧರಿಸಿದ ವಿಷಯವಾರು ಗ್ರಂಥಗಳ ರಚನೆ ಯೋಜನೆಯೂ ಒಂದು. ಕನ್ನಡ ಸಾಹಿತ್ಯ, ಸಂಸ್ಕೃತಿ, ನೆಲ, ಜಲ, ಇತಿಹಾಸ, ರಾಜಕೀಯ, ತತ್ವಶಾಸ್ತ್ರ, ವಿಜ್ಞಾನದ ಹಲವಾರು ವಿಷಯಗಳನ್ನಾಧರಿಸಿದಂತೆ ಈ ಮಹತ್ವಪೂರ್ಣ ಯೋಜನೆಯನ್ನು ಸಾಕಾರಗೊಳಿಸಲಾಗಿದೆ. ಸಾಹಿತ್ಯ, ಸಂಸ್ಕೃತಿ, ಮಾನವಿಕ, ವಿಜ್ಞಾನ - ಈ ವಿಷಯವನ್ನು ಕುರಿತಂತೆ ಗ್ರಂಥಗಳು ಸಾಮಾನ್ಯ ಜನರಿಗೆ ಸುಲಭ ಬೆಲೆಯಲ್ಲಿ ಸಿಗಲೆಂಬ ಸದುದ್ದೇಶದಿಂದ ಆಯಾಯ ವಿಷಯ ತಜ್ಞರಿಂದ ಈ ಕೃತಿಗಳನ್ನು ಸಂಪಾದಿಸಿ, ಪರಿಷ್ಕರಿಸಿ ಆಯಾ ವಿಷಯಗಳಿಗೆ ಸಂಬಂಧಿಸಿದ ಪೂರ್ಣ ಪರಿಚಯ ದೊರೆಯುವಂತೆ ಸಿದ್ಧಪಡಿಸಲಾಗಿದೆ. ಹೀಗೆ ವೈವಿಧ್ಯಮಯ ವಸ್ತು ವಿಷಯಗಳನ್ನು ಕುರಿತಂತೆ ಕೃತಿಗಳನ್ನು ಸಂಪಾದಿಸಿಕೊಟ್ಟ ವಿಷಯತಜ್ಞರು, ಸಂಪಾದಕರು ಅಭಿನಂದನಾರ್ಹರು. ಅವರೆಲ್ಲರಿಗೂ ಹೃತ್ಪೂರ್ವಕ ನಮನಗಳು. ಈ ಯೋಜನೆ ಪೂರ್ಣಗೊಳ್ಳಲು ಪ್ರೋತ್ಸಾಹಿಸಿದ ಕುಲಪತಿ ಪ್ರೊ. ವಿ. ಜಿ. ತಳವಾರ್ ಅವರಿಗೂ, ಕುಲಸಚಿವರಾದ ಪ್ರೊ. ಪಿ.ಎಸ್. ನಾಯಕ್ ಅವರಿಗೂ ಕರ್ನಾಟಕ ಸರ್ಕಾರಕ್ಕೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಯೋಜನೆಯನ್ನು ಸಮರ್ಥವಾಗಿ ಮುನ್ನಡೆಸಲು ಕೈಜೋಡಿಸಿದ ಈ ಯೋಜನೆಯ ಸಂಚಾಲಕರಾದ ಡಾ. ಹಾ. ತಿ. ಕೃಷ್ಣೇಗೌಡ, ಸಂಪಾದಕರು, ಸಂಪಾದಕ ಸಮಿತಿ ಸದಸ್ಯರು, ಪರಿಣತ ಸಮಿತಿಯ ಸದಸ್ಯರು, ಸಂಸ್ಥೆಯ ಸಹೋದ್ಯೋಗಿ ಮಿತ್ರರು ಹಾಗೂ ಈ ಕಾರ್ಯದಲ್ಲಿ ನೆರವಾದ ಎಲ್ಲರೂ ಅಭಿನಂದನಾರ್ಹರು. ಈ ಕೃತಿಗಳು ನಾಡಿನ ಎಲ್ಲಾ ವಿದ್ವಾಂಸರು ಹಾಗೂ ಸಹೃದಯರಿಗೆ ಹೆಚ್ಚು ಹೆಚ್ಚು ಉಪಯುಕ್ತವಾಗುತ್ತವೆಂಬ ಭರವಸೆಯೊಂದಿಗೆ ಶುಭ ಕೋರುತ್ತೇನೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು-೫೭೦೦೦೬

ಪ್ರೊ. ಕೆ.ಎನ್. ಗಂಗಾನಾಯಕ್
ಪ್ರಧಾನ ಸಂಪಾದಕ
ಹಾಗೂ ನಿರ್ದೇಶಕ

ಸಂಚಾಲಕರ ನುಡಿ

ಪ್ರಪಂಚದ ಜ್ಞಾನವನ್ನು ಸಂಚಯಿಸಿ ಒಂದೆಡೆ ಪುಸ್ತಕ ರೂಪದಲ್ಲಿ ನೀಡುವ ಪ್ರಯತ್ನ ಕಾಲದೇಶಗಳನ್ನು ಮೀರಿ ಎಲ್ಲ ಭಾಷಾ ಸಾಹಿತ್ಯಗಳಲ್ಲಿಯೂ ಕಂಡುಬರುತ್ತದೆ. ಆಧುನಿಕ ಪ್ರಪಂಚದಲ್ಲಿ ಇಂಥದ್ದೊಂದು ಮಹತ್ತ್ವದ ಪ್ರಯತ್ನವನ್ನು ಅದ್ಭುತವಾಗಿ ಮಾಡಿದಂತಹ ಒಂದು ಆಕರ ಗ್ರಂಥವೆಂದರೆ ಅದು ಎನ್‌ಸೈಕ್ಲೊಪೀಡಿಯ ಬ್ರಿಟಾನಿಕ. ಇದು ಪ್ರಪಂಚದಾದ್ಯಂತ ಗಳಿಸಿದ ಮನ್ನಣೆ, ಜನಪ್ರಿಯತೆ, ಉಪಯುಕ್ತತೆ ಅಸಾಧಾರಣವಾದದ್ದು. ಎನ್‌ಸೈಕ್ಲೊಪೀಡಿಯ ಬ್ರಿಟಾನಿಕವನ್ನೇ ಮಾದರಿಯಾಗಿಟ್ಟು ಕೊಂಡು ಕನ್ನಡದಲ್ಲಿಯೂ ಕನ್ನಡ ವಿಶ್ವಕೋಶ ಸಂಪುಟಗಳನ್ನು ಪ್ರಕಟಿಸುವ ಪ್ರಯತ್ನ ನಡೆದು ಈಗ ೧೪ ಸಂಪುಟಗಳು ಪ್ರಕಟಗೊಂಡಿವೆ (೧೯೬೯-೨೦೦೪). ಜೊತೆಗೆ ಈ ೧೪ ಸಂಪುಟಗಳ ಸಿ.ಡಿ. ಅವತರಣಿಕೆಯೂ ಪ್ರಕಟವಾಗಿದೆ. ಸುಮಾರು ಐದು ದಶಕಗಳ ದೀರ್ಘಾವಧಿಯಲ್ಲಿ ಪ್ರಕಟವಾಗಿರುವ ಕನ್ನಡ ವಿಶ್ವಕೋಶ ಸಂಪುಟಗಳು ಈಗ ವಾಚಕರಿಗೆ ದುರ್ಲಭವಾಗಿವೆ; ಎಲ್ಲ ಸಂಪುಟಗಳೂ ದೊರೆಯುತ್ತಿಲ್ಲ. ಈ ಅಂಶವನ್ನು ಮನಗಂಡು ಕರ್ನಾಟಕ ಸರ್ಕಾರ ಇವುಗಳ ಪುನರ್‌ಮುದ್ರಣ ಯೋಜನೆಗೆ ಒಪ್ಪಿಗೆ ನೀಡಿ ಉದಾರವಾಗಿ ಧನಸಹಾಯ ಮಾಡಿದೆ; ಪುನರ್‌ಮುದ್ರಣ ಕಾರ್ಯವನ್ನು ಸ್ಥೂಲ ಪರಿಷ್ಕಾರದೊಡನೆ ಕೈಗೆತ್ತಿಕೊಳ್ಳಲಾಗಿದೆ. ಒಂದೊಂದಾಗಿ ಈ ಸಂಪುಟಗಳು ಪ್ರಕಟವಾಗಲಿವೆ. ಸದ್ಯದಲ್ಲಿಯೇ ಒಂದು ಮತ್ತು ಎರಡನೆಯ ಸಂಪುಟಗಳು ಹೊರಬರಲಿವೆ.

ಕನ್ನಡ ವಿಶ್ವಕೋಶ ಸಂಪುಟಗಳು ಸಾಮಾನ್ಯ ವಾಚಕರಿಗೆ ಸುಲಭವಾಗಿ ಒಂದೆಡೆಯಲ್ಲಿ ದೊರೆಯುವುದಿಲ್ಲ. ಜೊತೆಗೆ ಈ ಬೃಹತ್ ಸಂಪುಟಗಳನ್ನು ದೊರಕಿಸಿಕೊಂಡು ನೋಡುವ ಸಂದರ್ಭಗಳು ಕೂಡ ಕಷ್ಟಸಾಧ್ಯ. ಈ ಕಾರಣದಿಂದಾಗಿ ಪ್ರಪಂಚದ ಜ್ಞಾನವನ್ನು ಶ್ರೀಸಾಮಾನ್ಯರಿಗೆ, ವಿದ್ಯಾರ್ಥಿವೃಂದಕ್ಕೆ ಸುಲಭವಾಗಿ ದೊರಕಿಸಿಕೊಡಬೇಕೆಂಬ ಉದ್ದೇಶದಿಂದ ಕನ್ನಡ ವಿಶ್ವಕೋಶ ಸಂಪುಟಗಳನ್ನು ಆಧರಿಸಿದ ವಿಷಯವಾರು ಗ್ರಂಥಗಳನ್ನು ಪ್ರಕಟಿಸುವುದು ಅತ್ಯಂತ ಉಪಯುಕ್ತವೆಂದು ಆಲೋಚಿಸಲಾಯಿತು. ಕನ್ನಡ ವಿಶ್ವಕೋಶ ಸಂಪುಟಗಳಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ನೂರಾರು ಲೇಖನಗಳಿವೆ. ಆ ಲೇಖನಗಳೆಲ್ಲ ೧೪ ಸಂಪುಟಗಳ ವ್ಯಾಪ್ತಿಯಲ್ಲಿ ಚದುರಿಹೋಗಿವೆ. ಆನುಷಂಗಿಕವಾಗಿ ಆಯಾ ಲೇಖನಗಳನ್ನು ಒಟ್ಟಿಗೆ ಗಮನಿಸುವುದು, ಓದುವುದು ಕಷ್ಟಸಾಧ್ಯವಾದ ಸಾಹಸ. ಹೀಗೆ ನೂರಾರು ಪುಟಗಳಲ್ಲಿ ಚದುರಿಹೋಗಿರುವ ಲೇಖನಗಳಲ್ಲಿ ಕೆಲವು ಪ್ರಮುಖ ಹಾಗೂ ತೀರ ಮುಖ್ಯವೆನಿಸುವ ಲೇಖನಗಳನ್ನು ಆದ್ಯತೆಯ ಮೇಲೆ ಆಯ್ಕೆ ಮಾಡಿಕೊಂಡು ಒಂದೆಡೆ ಸಂಕಲಿಸಿಕೊಡುವುದು, ಆಯಾ ವಿಷಯದ ಸ್ಥೂಲ ಪರಿಚಯ ವಾಚಕರಿಗೆ ಒಂದೆಡೆ ದೊರಕುವಂತೆ ಮಾಡುವುದು ಈ ಯೋಜನೆಯ ಆಶಯ. ಅದರಂತೆ ಪ್ರತಿ ಪುಸ್ತಕವನ್ನು ಸುಮಾರು ೨೫೦ ಪುಟಗಳ ಮಿತಿಯಲ್ಲಿ ಸಂಕಲಿಸಬೇಕೆಂದು

ತೀರ್ಮಾನಿಸಲಾಯಿತು. ಹೀಗೆ ವಿಷಯವಾರು ಸಂಕಲನಗೊಂಡ ಲೇಖನಗಳನ್ನು ಭಾಷೆ, ವಿಷಯದ ದೃಷ್ಟಿಯಿಂದ ಓದಿ, ತಿದ್ದುಪಡಿಮಾಡಿ, ಪರಿಷ್ಕರಿಸಿ, ಸಂಗ್ರಹಿಸಿ, ವಿಸ್ತರಿಸಿ, ಅಂಕಿಅಂಶಗಳನ್ನೂ ಇಸವಿಗಳನ್ನೂ ಗಮನಿಸಿ, ಭಾಷೆಯನ್ನು ಸರಳಗೊಳಿಸಿ ಅಚ್ಚುಕಟ್ಟು ಮಾಡುವ ಪ್ರಯತ್ನ ಮಾಡಲಾಗಿದೆ. ಹೀಗೆ ಮಾಡುವಲ್ಲಿ ನಾವು ಮೂಲ ಲೇಖಕರ ಹೆಸರನ್ನು ಉಳಿಸಿಕೊಂಡಿದ್ದೇವೆ. ಆಯಾ ಪುಸ್ತಕದ ಸಂಪಾದಕತ್ವದ ಸಂಪೂರ್ಣ ಹೊಣೆಗಾರಿಕೆ ಆಯಾ ಪುಸ್ತಕದ ಸಂಪಾದಕರದ್ದು. ಆಯಾ ಸಂಪಾದಕರು ತಮ್ಮ ಕರ್ತವ್ಯವನ್ನು ಶ್ರಮವಹಿಸಿ ನಿರ್ವಹಿಸಿರುತ್ತಾರೆ.

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಭಾಷಾಭಿವೃದ್ಧಿಗಾಗಿ ನೀಡಿದ ಉದಾರವಾದ ಧನಸಹಾಯದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿವೆ. ಕನ್ನಡ ವಿಶ್ವಕೋಶದ ಜ್ಞಾನವನ್ನು ಶ್ರೀಸಾಮಾನ್ಯರ ಬಳಿಗೆ ಕೊಂಡೊಯ್ಯುವುದು, ಕನ್ನಡ ವಿಶ್ವಕೋಶವನ್ನು ಜನಪ್ರಿಯಗೊಳಿಸುವುದು ಈ ಯೋಜನೆಯ ಬಹುಮುಖ್ಯ ಆಶಯ. ನೂರು ಪುಸ್ತಕಗಳ ಈ ಯೋಜನೆಯಲ್ಲಿ ಮೊದಲ ಕಂತಿನಲ್ಲಿ ನಾವು ಐವತ್ತು ಪುಸ್ತಕಗಳ ಪ್ರಕಟಣೆಗೆ ಅನುವು ಮಾಡಿಕೊಂಡಿದ್ದೇವೆ. ಈ ಪುಸ್ತಕಗಳು ಪ್ರಕಟವಾದ ಅನಂತರ ಇನ್ನು ೫೦ ಪುಸ್ತಕಗಳ ಪ್ರಕಟಣೆಯನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಗೆ ಒಪ್ಪಿಗೆ ನೀಡಿದ ಕರ್ನಾಟಕ ಸರ್ಕಾರಕ್ಕೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಈ ಯೋಜನೆಗೆ ಚಾಲನೆ ನೀಡಿದ ಕುಲಪತಿಗಳಾದ ಪ್ರೊ. ವಿ.ಜಿ. ತಳವಾರ್ ಅವರಿಗೂ ಕುಲಸಚಿವರಾದ ಶ್ರೀ ಪಿ.ಎಸ್. ನಾಯಕ್ ಅವರಿಗೂ ಈ ಪುಸ್ತಕಗಳ ಪ್ರಧಾನ ಸಂಪಾದಕರಾದ ಪ್ರೊ. ಕೆ.ಎನ್. ಗಂಗಾನಾಯಕ್ ಅವರಿಗೂ ಪುಸ್ತಕಗಳನ್ನು ಸಂಪಾದಿಸಿಕೊಟ್ಟ ಆಯಾ ಪುಸ್ತಕಗಳ ಸಂಪಾದಕರಿಗೂ ಸಂಪಾದಕ ಸಮಿತಿಯ ಸದಸ್ಯರಿಗೂ ಈ ಯೋಜನೆಯ ಅನುಷ್ಠಾನದಲ್ಲಿ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಪರಿಣತ ಸಮಿತಿಯ ಸದಸ್ಯರಿಗೂ ಈ ಯೋಜನೆಯ ಕೆಲಸ ಕಾರ್ಯಗಳಲ್ಲಿ ದುಡಿದು ಸಹಕರಿಸಿದ ಕನ್ನಡ ವಿಶ್ವಕೋಶ ವಿಭಾಗದ ಸಹೋದ್ಯೋಗಿಗಳಿಗೂ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಡಾ. ಹಾ.ತಿ. ಕೃಷ್ಣೇಗೌಡ
ಸಂಚಾಲಕ ಹಾಗೂ ಕಾರ್ಯನಿರ್ವಾಹಕ ಸಂಪಾದಕ
ಕನ್ನಡ ವಿಶ್ವಕೋಶ

ಸಂಪಾದಕರ ನುಡಿ

೧೪೫೩ರಲ್ಲಿ ತುರ್ಕರು ಕಾನ್‌ಸ್ಟಾಂಟಿನೋಪಲ್‌ನ ವಶಪಡಿಸಿಕೊಂಡು ಏಷ್ಯ ಖಂಡಕ್ಕೆ ಇದ್ದ ಒಂದೇ ಒಂದು ಭೂಮಾರ್ಗವನ್ನು ಮುಚ್ಚಿದಾಗ ಇಂಗ್ಲಿಷರು ತಹತಹಗೊಂಡು ಪ್ರಪಂಚದ ಎಲ್ಲಾ ನಕಾಶೆಯ ಹುಡುಕಾಟದಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯವನ್ನು ವ್ಯವಸ್ಥಿತ ಅಧ್ಯಯನ ಮಾಡಿದರ ಪರಿಣಾಮವೇ ಇಂಗ್ಲೆಂಡಿನಲ್ಲಿ ಪುನರುತ್ಥಾನವಾಯಿತು. ಅಂದ ಮೇಲೆ ಇಂಗ್ಲಿಷೇತರ ಸಾಹಿತ್ಯದ ಅಗಾಧ ಶಕ್ತಿ ಎಷ್ಟಿರಬಹುದು ಎಂದು ಅಂದಾಜು ಮಾಡಿ ಈ ಗ್ರೀಕ್ ಮತ್ತು ಲ್ಯಾಟಿನ್‌ನಂತಹ ಶಾಸ್ತ್ರೀಯ ಸಾಹಿತ್ಯ ಯಾವತ್ತು ಜಗತ್ತಿನ ಜನಜೀವನದಿಂದ ಬೇರ್ಪಡಲು ಸಾಧ್ಯವೇ ಇಲ್ಲ. ಇದೇ ರೀತಿ ಫ್ರೆಂಚ್, ಜರ್ಮನ್, ರಷ್ಯನ್, ಪೋಲೀಷ್, ನಾರ್ವೆ ಮುಂತಾದ ಸಮೃದ್ಧ ಸಾಹಿತ್ಯದ ಅಧ್ಯಯನ ಮತ್ತು ಅದನ್ನು ಸಂಪಾದಿಸುವ ಹಿರಿಯ ಜವಾಬ್ದಾರಿಯನ್ನು ನೀಡಿದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ ಹಾಗೂ ಯೋಜನೆಯ ಪ್ರಧಾನ ಸಂಪಾದಕರೂ ಆದ ಪ್ರೊ. ಕೆ.ಎನ್. ಗಂಗಾನಾಯಕ್ ಅವರಿಗೂ ಕನ್ನಡ ವಿಶ್ವಕೋಶ ವಿಭಾಗದ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಹಾ.ತಿ. ಕೃಷ್ಣೇಗೌಡ ಅವರಿಗೂ ನಾನು ಚಿರಋಣಿಯಾಗಿದ್ದೇನೆ. ಸಾಹಿತ್ಯ ರಚನೆ ಮತ್ತು ಅಧ್ಯಯನಶೀಲತೆ ಒಂದು ಪ್ರಕ್ರಿಯೆ. ಗ್ರೀಕ್, ಲ್ಯಾಟಿನ್, ಫ್ರೆಂಚ್, ಜರ್ಮನ್ ಬಹುಮುಖ್ಯವಾಗಿ ಕ್ರಾಂತಿಯ ಸಮಯದಲ್ಲಿ ಬರೆಯಲ್ಪಟ್ಟ ಉತ್ಕೃಷ್ಟವಾದ ರಷ್ಯನ್ ಸಾಹಿತ್ಯ ಮಾನವ ಜನಾಂಗಕ್ಕೆ ನೀಡಿದ ಅತ್ಯುನ್ನತ ಕೊಡುಗೆ. ಒಂದು ವ್ಯವಸ್ಥೆಯ ಸಂಪೂರ್ಣ ಬದಲಾವಣೆ ಈ ಸಾಹಿತ್ಯದಿಂದ ಮಾತ್ರ ಸಾಧ್ಯ ಎಂಬುದನ್ನು ಎರಡೂ ಉದಾಹರಣೆಗಳಿಂದ ನೋಡಬಹುದು. ಜಾರ್ ದೊರೆಗಳ ದರ್ಬಾರು, ಅಮಾನವೀಯ ನಡತೆಯ ಜಮೀನ್ದಾರರು ಮತ್ತು ಕ್ಲರ್ಜಿಗಳನ್ನು ಬುಡಮೇಲು ಮಾಡಿದ ರಷ್ಯ ಮತ್ತು ಫ್ರಾನ್ಸ್ ದೇಶಗಳು ಸಾಹಿತ್ಯದ ಮೂಲಕ ಮನುಕುಲಕ್ಕೆ ಅಗಾಧವಾದ ಅದಮ್ಯ ಚೈತನ್ಯವನ್ನು ನೀಡಿವೆ. ಇಲ್ಲಿ ಬರುವ ಸಾಹಿತ್ಯದ ಎಲ್ಲಾ ಪ್ರಕಾರಗಳು ಮನುಷ್ಯಕೇಂದ್ರಿತ ಮತ್ತು ಪ್ರಕೃತಿ ಕೇಂದ್ರಿತವಾದಂತವುಗಳು. ಹೊಸ ಸಿದ್ಧಾಂತಗಳು, ಆಲೋಚನೆಗಳು, ಹೊಸ ಸಾಹಿತ್ಯದ ಪ್ರಕಾರಗಳು ಜಗತ್ತಿನ ಎಲ್ಲಾ ಸಾಹಿತ್ಯ ಪ್ರಕಾರಗಳ ಮೇಲೆ ಪ್ರಭಾವ ಬೀರಿವೆ. ವಿಶ್ವಕೋಶದ ಪ್ರತಿ ಪುಟಗಳನ್ನು ಪ್ರತಿ ಸಂಚಿಕೆಗಳನ್ನು ತಿರುವಿ ಹುಡುಕಾಡುವ ಪ್ರಯಾಸವಿಲ್ಲದೆ ಯುರೋಪ್ ದೇಶಗಳ ಒಟ್ಟಾರೆ ಅಲ್ಲದಿದ್ದರೂ ಸಂಕ್ಷಿಪ್ತ ಮಾಹಿತಿ ಒಂದೆಡೆ ಸಿಗುತ್ತದೆ ಮತ್ತು ಓದುಗನಿಗೆ ಪರಿಚಯಾತ್ಮಕವಾದ ಮಾಹಿತಿ ಈ ಪುಸ್ತಕದಲ್ಲಿ ಸಿಗುತ್ತದೆ. ಆದ್ದರಿಂದ ಕನ್ನಡ ವಿಭಾಗದ ಈ ಕಾರ್ಯ ಶ್ಲಾಘನೀಯ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕ ಈ ಸಂದರ್ಭದಲ್ಲಿ ಮಹತ್ವದ ಕೃತಿಗಳು ಮುದ್ರಣಗೊಳ್ಳುತ್ತಿವೆ. ಈ ಸಂದರ್ಭದಲ್ಲಿ ಅತಿ ಪುರಾತನ ಭಾಷೆಗಳಾದ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಜೊತೆಗೆ ಜಗತ್ತಿಗೆ ಅತ್ಯುತ್ತಮ ಸಾಹಿತ್ಯದ ಕೊಡುಗೆ ನೀಡಿದ ಫ್ರೆಂಚ್ ಭಾಷಾ ಸಾಹಿತ್ಯದ ಮಾಹಿತಿ ಕನ್ನಡ ಭಾಷಾ ಓದುಗರಿಗೆ ದೊರೆಯುತ್ತಿರುವುದು ಸಂತೋಷದ ಸಂಗತಿ. ಈ ಪ್ರಕ್ರಿಯೆಯಲ್ಲಿ ನೆರವು ನೀಡಿದ ಸಮಸ್ತರಿಗೂ ಗೌರವಪೂರ್ವಕ ಅಭಿನಂದನೆಗಳು.

ಡಾ. ಶಿರಗಾನಹಳ್ಳಿ ಶಾಂತನಾಯ್ಕ
ಸಂಪಾದಕರು

ಪರಿವಿಡಿ

I ಗ್ರೀಕ್ ಸಾಹಿತ್ಯ

ಗ್ರೀಕ್ ಕಾವ್ಯ: ಸಾಧನೆಯ ದೃಷ್ಟಿಯಿಂದಾಗಲಿ ಪ್ರಭಾವದ ದೃಷ್ಟಿಯಿಂದಾಗಲಿ ಪ್ರಾಚೀನ ಗ್ರೀಸಿನ ಕಾವ್ಯ ಹಿರಿದಾದುದು. ಇಡೀ ಯೂರೋಪಿನ ಸಾಹಿತ್ಯದ ಮೇಲೆ ಗ್ರೀಕ್ ಕಾವ್ಯ ಪರಿಣಾಮಕಾರಿ ಪ್ರಭಾವ ಬೀರಿತು. ಅಲ್ಲದೆ ವಿಶ್ವಸಾಹಿತ್ಯಕ್ಕೆ ಸಾಧನೆಯ ಉತ್ತುಂಗ ಶಿಖರಗಳನ್ನು ನಿರ್ಮಿಸಿಕೊಟ್ಟಿತು. ಇಂದು ಉಳಿದುಬಂದಿರುವುದು ಗ್ರೀಕ್ ಕಾವ್ಯದ ಒಂದು ಭಾಗ ಅಷ್ಟೆ. ಬಿಜ಼ಾಂಟಿಯಂನ ವಿದ್ವಾಂಸರ ಶ್ರಮ ಮತ್ತು ಶ್ರದ್ಧೆಗಳಿಂದ ಇಷ್ಟಾದರೂ ಉಪಲಬ್ಧವಾಗಿದೆ. ಅಳಿದುಳಿದಿರುವುದು ಅದೆಷ್ಟೆ ಸ್ವಲ್ಪವಾದರೂ ಅದರ ಗುಣಮಟ್ಟ ಮಾತ್ರ ಎಂಥವರನ್ನೂ ಬೆರೆಗುಗೊಳಿಸುವಂತಿದೆ.

ಗ್ರೀಕ್ ಸಾಹಿತ್ಯ ಹೇಗೆ ಪ್ರಾರಂಭವಾಯಿತು ಎನ್ನುವುದು ತಿಳಿದಿಲ್ಲ. ಹೋಮರನ ಇಲಿಯಡ್ ಮತ್ತು ಆಡಿಸಿಗಳು ನಮಗೆ ದೊರೆತಿರುವ ಅತಿ ಪ್ರಾಚೀನ ಕೃತಿಗಳು. ಇವನ ನಿಜವಾದ ಹೆಸರು, ಕಾಲ, ದೇಶ, ಕೃತಿಗಳು ಎಲ್ಲ ವಾದಗ್ರಸ್ತ ವಿಷಯಗಳು. ಈತ ಪ್ರ.ಶ.ಪೂ ಎಂಟನೆಯ ಅಥವಾ ಒಂಭತ್ತನೆಯ ಶತಮಾನಕ್ಕೆ ಸೇರಿದ್ದಿರಬೇಕು. ಹೋಮರನ ಮಹಾಕಾವ್ಯಗಳಂಥ ಶ್ರೇಷ್ಠ ಕೃತಿಗಳು ಹಿಂದಣ ಒಂದು ಪರಂಪರೆ ಮತ್ತು ಹಲವು ಕವಿಗಳ ಸಿದ್ಧತೆ ಇಲ್ಲದೆ ಉದ್ಭವಿಸಲಾರವು. (ಆರ್ಫ್ಯೂಸ್ ಮತ್ತು ಮ್ಯೂಸಿಯಸ್ ಎಂಬ ಕವಿಗಳ ಹೆಸರು ಕೇಳಿಬರುತ್ತದೆ. ವಿವರಗಳಾಗಲಿ ಕೃತಿಗಳಾಗಲಿ ದೊರೆತಿಲ್ಲ.) ತನ್ನ ಹಿಂದಿನ ಲಾವಣಿಕಾರರ ಹಾಡುಗಳ ಸಾಮಗ್ರಿಯನ್ನೂ ವರ್ಣನೆಯ ವಿಧಾನವನ್ನೂ ಛಂದಸ್ಸನ್ನೂ ಬಳಸಿಕೊಂಡು ಹೋಮರ್ ಜಗತ್ತಿನ ಅತಿಶ್ರೇಷ್ಠ ಕಾವ್ಯಗಳಲ್ಲಿ ಎರಡನ್ನು ರಚಿಸಿದ. ಯೂರೋಪಿನಲ್ಲಿ ಮಹಾಕಾವ್ಯ ಉದಿಸಿತು. ಹೋಮರ್ ಕಾಲಮಾನದಲ್ಲಿ ಮಾತ್ರ ಆದಿಕವಿಯಲ್ಲ. ಮಹಾಕಾವ್ಯ, ಗಂಭೀರನಾಟಕ, ವಿನೋದ ನಾಟಕ ಇವೆಲ್ಲದರ ಚರಿತ್ರೆಗಳೂ ಅವನ ಕಾವ್ಯಗಳಲ್ಲಿ ಪ್ರಾರಂಭವಾದುವು. ಪ್ರಾಯಶಃ ಇವನ ಸಮಕಾಲೀನ ಹೆಸಿಯಡ್. ಇವನ ಮಹಾಕೃತಿ ವರ್ಕ್ಸ್ ಅಂಡ್ ಡೇಸ್. (ಇವನ ಕೃತಿ ಮೂಲದಲ್ಲಿದ್ದಂತೆ ಉಳಿದು ಬಂದಿದೆ ಎನ್ನವಂತಿಲ್ಲ.) ಈತ ಕಳೆದು ಹೋದ ಭವ್ಯ ವೀರಯುಗವನ್ನು ಬಿತ್ತರಿಸುವುದಿಲ್ಲ. ಸಮಸ್ಯೆಗಳಿಂದ ಮತ್ತು ಕಷ್ಟಗಳಿಂದ ತುಂಬಿದ ಸಮಕಾಲೀನ ಸಮಾಜವನ್ನು ಚಿತ್ರಿಸುತ್ತಾನೆ. ಹೋಮರನ ಕಾವ್ಯಗಳಲ್ಲಿ ಬಡವರು ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾರೆ. ಹೆಸಿಯಡ್ ಬಡವರ ವಿಷಯವಾಗಿಯೆ ಬರೆಯುತ್ತಾನೆ. ಇವನದು ಕಹಿ ನಿರಾಶೆಯ ಮನೋಭಾವ. ಪ್ರಕೃತಿಯಲ್ಲ ಆಸಕ್ತಿ ತೋರುವ ಯೂರೋಪಿನ ಮೊದಲ ಕವಿ ಈತ. ಶ್ರಮಪಟ್ಟು ಕೆಲಸ ಮಾಡು, ನ್ಯಾಯವಾಗಿ ನಡೆಮಕೊ –

ಇದು ಇವನ ಉಪದೇಶದ ಸಾರ. ಈತನೋ ಈತನ ಶಿಷ್ಯನೋ ಬರೆದ ಥಿಯೋಜನಿ ಗ್ರೀಕ್ ದೇವತೆಗಳನ್ನು ಕುರಿತ ಕಾವ್ಯ. ಈತನ ಅನಂತರ ಅನೇಕ ಕವಿಗಳು ಈತನನ್ನು ಅನುಕರಿಸಿದರಾದರೂ, ಅವರ ಕೃತಿಗಳಲ್ಲಿ ಕಾವ್ಯಗುಣ ಕಡಿಮೆ.

ಹೋಮರನನ್ನು ಅನುಸರಿಸಿ ಹಲವರು ಟ್ರಾಯ್ ಮತ್ತು ತೀಬ್ಸ್ ಸಮಸ್ಯೆಗಳನ್ನು ಕುರಿತು ಬರೆದರು. ಇವು ಉಳಿದುಬಂದಿಲ್ಲ. ಪ್ರ.ಶ.ಪೂ ನಾಲ್ಕು ಐದನೆಯ ಶತಮಾನಗಳಲ್ಲಿ ಅವನ ಮಹಾಕಾವ್ಯದ ಅಣಕ ಬ್ಯಾಟ್ರಕೊಮ್ಯೈಯೊ ಮ್ಯಾಕಿಯ (ಕಪ್ಪೆಗಳ ಮತ್ತು ಇಲಿಗಳ ಯುದ್ಧ) ದೊರೆತಿದೆ. ಹೋಮರನ ಭಜನಗೀತೆಗಳೆನಿಸಿಕೊಂಡ ಮೂವತ್ತಮೂರು ಕೃತಿಗಳು ಉಪಲಬ್ಧವಾಗಿವೆ. ಇವನ್ನು ಹೋಮರ್ ರಚಿಸಲಿಲ್ಲ. ಹಲವು ದೇವತೆಗಳ ಮಹಿಮೆಗಳನ್ನು ವರ್ಣಿಸುವ ಗೀತೆಗಳು ಇವು. ಹೋಮರ್, ಹೆಸಿಯಡ್ ಮತ್ತು ಮೇಲೆ ಸೂಚಿಸಿದ ಅವರನ್ನು ಅನುಕರಿಸಿದ ಕವಿಗಳು ಹೆಕ್ಸಾಮೀಟರ್ ಎಂಬ ಛಂದಸ್ಸನ್ನು ಬಳಸಿದರು.

ಕಾವ್ಯದಲ್ಲಿ ವೈಯಕ್ತಿಕ ಅಂಶ ತಕ್ಕಮಟ್ಟಿನ ಪ್ರಾಧಾನ್ಯ ಪಡೆಯುವುದನ್ನು ಹೆಸಿಯಡ್‌ನ ಕಾವ್ಯಗಳಲ್ಲಿಯೆ ಕಾಣುತ್ತೇವೆ. ಮಹಾಕಾವ್ಯದ ಯುಗ ಮುಗಿಯುತ್ತ ಬಂದಂತೆ ಈ ವೈಯಕ್ತಿಕ ಅಂಶ ಬೆಳೆಯಿತು. ಇದರೊಂದಿಗೆ ಹೆಕ್ಸಾಮೀಟರಿನ ಬದಲು ಬೇರೆ ಛಂದಸ್ಸುಗಳನ್ನು ಕವಿಗಳು ಆರಿಸಿಕೊಂಡರು. (ಪ್ರ.ಶ.ಪೂ ಸು. ೮ ನೆಯ ಶತಮಾನದಲ್ಲಿ ಸಂಗೀತದಲ್ಲಿ ಹೊಸ ಆಸಕ್ತಿ ಪ್ರಾರಂಭವಾಯಿತು; ಇದೂ ಕಾವ್ಯದ ಚರಿತ್ರೆಯನ್ನು ಪ್ರಭಾವಿಸಿದಂತೆ ತೋರುತ್ತದೆ.) ಕೊಳಲಿನ ವಾದನಕ್ಕೆ ಹೊಂದಿಕೊಂಡ ಎಲಿಜಿಯಕ್ ಕಾವ್ಯ ಪ್ರಾರಂಭದಲ್ಲಿ ಪ್ರಣಯ ಮತ್ತು ಶೌರ್ಯಗಳನ್ನು ಹಾಡಿ ಹೊಗಳಿತೆಂದು ಕಾಣುತ್ತದೆ. ಎಫೀಸಸಿನ ಕ್ಯಾಲಿನಸ್‌ನ (ಪ್ರ.ಶ.ಪೂ. ಸು. ೬೬೦) ಕವನ ಈ ಪ್ರಕಾರದಲ್ಲಿ ನಮಗೆ ದೊರೆತಿರುವ ಅತಿ ಪ್ರಾಚೀನ ರಚನೆ. ಕೊಲೊಫಾನನ ಮಿಮ್ನೆರ್‌ಮಸ್ (ಪ್ರ.ಶ.ಪೂ ಸು. ೬೩೦) ಇಂದ್ರಿಯ ಸುಖವನ್ನು ನಿಸ್ಸಂಕೋಚವಾಗಿ ಹೊಗಳಿದ ಮೊದಲ ಕವಿ. ಆಕಿಲೋಕಸ್ (ಪ್ರ.ಶ.ಪೂ ೭ ನೆಯ ಶತಮಾನ) ಎಲಿಜಿಯಕ್ ಕಾವ್ಯದ ವಸ್ತುಗಳ ವ್ಯಾಪ್ತಿಯನ್ನು ಹಿಗ್ಗಿಸಿದ; ಐಯಾಂಬಿಕ್ ಮತ್ತು ಟ್ರೊಕೆಯಿಕ್ ಛಂದಸ್ಸುಗಳಿಗೆ ಪರಿಪೂರ್ಣತೆಯನ್ನು ತಂದುಕೊಟ್ಟ. ತನ್ನ ಟೀಕೆಯ ತೀಕ್ಷ್ಣತೆಯಿಂದ ಈತ ಚೇಳು ಎಂಬ ಹೆಸರನ್ನು ಪಡೆದ. ಇವನ ಬರೆಹದಲ್ಲಿ ಯಾವ ಆದರ್ಶವೂ ಕಾಣದು.

ದೇವತೆಗಳ ಪೂಜೆಯಲ್ಲಿ ಸಂಗೀತ ಮತ್ತು ನೃತ್ಯವನ್ನು ಬಳಸುವ ಸಂಪ್ರದಾಯ ಗ್ರೀಕರಲ್ಲಿತ್ತು. ನಾಯಕನೊಬ್ಬನ ಮಾರ್ಗದರ್ಶನದಲ್ಲಿ ಲಯಬದ್ಧ ಚಲನೆಗಳೊಂದಿಗೆ ಮೇಳದವರು ಹಾಡುಗಳನ್ನು ಹಾಡುತ್ತಿದ್ದರು. ಈ ಸಂಪ್ರದಾಯದಿಂದ ಮೇಳ ಕಾವ್ಯ ಉದಿಸಿತು. ಸಾಮಾನ್ಯವಾಗಿ ಇದು ಒಬ್ಬ ದೇವತೆಯನ್ನು ಅಥವಾ ದೇವತಾ ಸದೃಶ ಶೂರನನ್ನು ಕುರಿತದ್ದು. ಇದರಲ್ಲಿ ನೀತಿವಾಕ್ಯಗಳೂ ಸಮೃದ್ಧವಾಗಿರುತ್ತಿದ್ದುವು. ಸ್ಪಾರ್ಟಾದ ಆಲ್ಕ್‌ಮನ್ ಬರೆದ ಕವನಗಳ ಭಾಗಗಳು ಮಾತ್ರ ದೊರೆತಿದ್ದರೂ ಆತ ಪ್ರತಿಭಾವಂತ ಎನ್ನುವುದಕ್ಕೆ ತಕ್ಕಷ್ಟು ಸಾಕ್ಷ್ಯ ಇಲ್ಲಿದೆ.

ಪ್ರ.ಶ.ಪೂ ಸು. ೬೦೦ ರ ಹೊತ್ತಿಗೆ ಪ್ರಪಂಚದಲ್ಲಿ ಮೊಟ್ಟಮೊದಲ ಬಾರಿಗೆ ಹೊಸದೊಂದು ಕಾವ್ಯಪ್ರಕಾರ ಲೆಸ್ಬಾಸಿನಲ್ಲಿ ಉದಯವಾಯಿತು. ಇದೇ ಲಿರಿಕ್ (ಭಾವಗೀತೆ). ಲೈರ್ ಎಂಬ ವಾದ್ಯಕ್ಕೆ ಹೊಂದಿಕೊಂಡ ಹಾಡು ಲಿರಿಕ್. ಈಗ ಗ್ರೀಸಿನ ಲಿರಿಕ್‌ಗಳು ಉಳಿದುಬಂದಿದ್ದರೂ ಅವುಗಳ ಸಂಗೀತಭಾಗ ಸಂಪೂರ್ಣವಾಗಿ ನಷ್ಟವಾಗಿದೆ. ಭಾವಗೀತೆಯ ಚರಿತ್ರೆಯಲ್ಲಿ ಮೊದಲಿನ ಹೆಸರು ಟರ್‌ಪ್ಯಾಂಡರನದು (ಪ್ರ.ಶ.ಪೂ. ೭ನೆಯ ಶತಮಾನ). ಬಹು ಪ್ರಸಿದ್ಧ ಕವಿಗಳು ಅಲ್‌ಸೇಯಿಯಸ್ (೭ನೆಯ ಶತಮಾನದ ಉತ್ತರಾರ್ಧ) ಮತ್ತು ಸ್ಯಾಫೊ (೭ನೆಯ ಶತಮಾನ). ಅಲಸೇಯಿಯಸ್‌ನ ಕವನಗಳಲ್ಲಿ ಸೂಕ್ಷ್ಮತೆ ಇಲ್ಲ. ಆದರೆ ಭಾವದ ತೀವ್ರತೆ, ಭಾಷೆಯ ಮಿತವ್ಯಯ ಉಂಟು. ವಿವರಗಳನ್ನು ಕಾಣುವ ಕಣ್ಣುಂಟು. ಚಟುವಟಿಕೆಯ, ತೀಕ್ಷ್ಣ ಭಾವನೆಗಳ ಮನುಷ್ಯ ಬರೆದ ಕವನಗಳು ಇವು. ಸ್ಯಾಫೊ ನಮಗೆ ತಿಳಿದಿರುವ ಮಟ್ಟಿಗೆ ಪ್ರಪಂಚದ ಮೊದಲ ಕವಯಿತ್ರಿ. ಹಲವು ದಂತಕಥೆಗಳ ಕೇಂದ್ರ ಇವಳು. ಪ್ಲೇಟೊ ಇವಳನ್ನು ಕಾವ್ಯದೇವತೆಗಳ ಸಾಲಿನಲ್ಲಿ ನಿಲ್ಲಿಸಿದ. ಭಾವೋದ್ವೇಗಕ್ಕೆ ಇನ್ನೊಂದು ಹೆಸರೇ ಸ್ಯಾಫೊ ಎನ್ನುವಂತಿದೆ ಇವಳ ಪ್ರಣಯಗೀತೆಗಳು. ಇವಳದು ನೇರವಾದ, ಸರಳವಾದ, ಉದ್ವೇಗಪೂರ್ಣ ಭಾಷೆ. ಗ್ರೀಕ್ ಕಾವ್ಯದಲ್ಲಿ ವಿರಳವಾದ ಪ್ರಕೃತಿವರ್ಣನೆ ಇವಳ ಕವನಗಳಲ್ಲಿ ಸಾಕಷ್ಟಿದ್ದು ಇವಳ ಆಳವಾದ ನಿಸರ್ಗ ಪ್ರೇಮಕ್ಕೆ ಸಾಕ್ಷಿಯಾಗಿದೆ. ಇವಳ ಪ್ರಣಯ ಗೀತೆಗಳಲ್ಲಿ ಬಹು ಸಂಖ್ಯೆಯವು ಬಾಲಕಿಯರನ್ನು ಕುರಿತವು ಎಂಬುದು ಕುತೂಹಲಕರ ಅಂಶ. ನಿತ್ಯದ ಭಾಷೆಗೆ ಇವಳ ಕವನಗಳಲ್ಲಿ ಅಭೂತ ಪೂರ್ವ ನಯ ಮತ್ತು ಶಕ್ತಿ ಲಭ್ಯವಾಗಿವೆ. ಬೆಂಕಿಯಂತೆ, ಪ್ರವಾಹದಂತೆ ತನ್ನ ಚೇತನ ನಮ್ಮ ಸುತ್ತುಗಟ್ಟಿದ ಪ್ರಣಯವನ್ನು ವರ್ಣಿಸುವಾಗಲೂ ಸುಸಂಸ್ಕೃತ ಮನೋಧರ್ಮವನ್ನು ಈಕೆ ಪ್ರಕಟಿಸುತ್ತಾಳೆ. ಜಗತ್ತಿನ ಸಾಹಿತ್ಯದಲ್ಲಿಯೇ ಕುತೂಹಲಕರವಾದ ವ್ಯಕ್ತಿತ್ವವನ್ನು ಪಡೆದ ಕವಯಿತ್ರಿಗಳಲ್ಲಿ ಒಬ್ಬಳು, ಸ್ಯಾಫೊ.

ಅಲ್‌ಸೇಯಿಯಸ್ ಮತ್ತು ಸ್ಯಾಫೊಗಳ ಭಾವಗೀತೆಗಳು ತುಂಬ ಜನಪ್ರಿಯವಾಗಿ ಏಷ್ಯ ಮೈನರ್ ಪ್ರದೇಶಕ್ಕೆ ಹಬ್ಬಿದುವು. ಭಾವಗೀತೆಯ ಚರಿತ್ರೆಯಲ್ಲಿ ಮುಂದಿನ ದೊಡ್ಡ ಹೆಸರು ಈ ಪ್ರದೇಶದ (ಟೀ ಆಸ್‌ನ) ಅನಾಕ್ರಿಯಾನನದು (ಪ್ರ.ಶ.ಪೂ. ೫೭೨ – ೪೮೫). ಈತ ಭೋಗಪ್ರಿಯನಾದರೂ ಇಂದ್ರಿಯಲೋಲುಪ ಎನ್ನುವುದು ಉತ್ಪ್ರೇಕ್ಷೆಯಾದೀತು. ಪ್ರಣಯ ಮತ್ತು ಮದ್ಯಪಾನಗಳನ್ನು ಹೊಗಳುವ, ಲಘುಹೃದಯದಿಂದ ಹೊರಹೊಮ್ಮಿದ ಲವಲವಿಕೆಯ ಕವನಗಳು ಇವನವು. ಪುರಾಣ ಪ್ರತಿಮೆಗಳನ್ನು ಈತ ವಿಶೇಷವಾಗಿ ಬಳಸುತ್ತಾನೆ. ಇವನನ್ನು ಅನುಕರಿಸಿದವರು ಬಹುಮಂದಿ. ಆದರೆ ಅವರಲ್ಲಿ ಯಾರೂ ಇವನನ್ನು ಸರಿಗಟ್ಟಲಿಲ್ಲ.

ಪ್ರ.ಶ.ಪೂ. ಆರನೆಯ ಶತಮಾನದಲ್ಲಿ ಕವಿಗಳು ಆಶ್ರಯದಾತರನ್ನು ಹೆಚ್ಚಾಗಿ ಅವಲಂಬಿಸಬೇಕಾಗಿ ಬಂದಿತು. ತಮ್ಮ ಕಲೆಯಲ್ಲಿ ವೈವಿಧ್ಯವನ್ನು ಅರಸಬೇಕಾಯಿತು. ಇದರಿಂದ ಮೇಳಗೀತ ಮತ್ತೆ ಪ್ರಾಧಾನ್ಯ ಪಡೆಯಿತು. ಈ ಕಾಲಕ್ಕೆ ಸೇರಿದ ಓಮೆರದ

ಸ್ಟೆನಿಕೊರಸನ (ಪ್ರ.ಶ.ಪೂ. ೬೩೦-೫೫೩) ಕವನಗಳಲ್ಲಿ ಕೆಲವು ತುಂಡುಗಳು ಮಾತ್ರ ಲಭ್ಯವಾಗಿವೆ. ಮೇಳದ ಪ್ರಗಾಥಕ್ಕೆ ಹೊಸ ರೂಪ ಕೊಟ್ಟು ಭಾವಗೀತೆ ಮತ್ತು ಕಥನಗಳ ಅಂಶವನ್ನು ಈತ ಬೆಳೆಸಿದನೆಂದು ಕಾಣುತ್ತದೆ. ರೀಜಿಯಮ್ಮಿನ ಇಬಿಕಸ್ (ಪ್ರ.ಶ.ಪೂ. ಆರನೆಯ ಶತಮಾನ) ಪ್ರಣಯ ಕವನಗಳನ್ನು ಬರೆದ. ಈ ಕಾವ್ಯ ಪ್ರಕಾರವನ್ನು ಪ್ರತಿಭೆಯಿಂದ ಬೆಳಗಿಸಿದವರು ಸಿಮೊನೈಡೀಸ್ (ಪ್ರ.ಶ.ಪೂ. ೫೫೬- ೪೬೭), ಪಿಂಡಾರ್ (ಪ್ರ.ಶ.ಪೂ. ೫೧೨-೪೪೮) ಮತ್ತು ಬ್ಯಾಕಿಲಿಡೀಸ್ (ಪ್ರ.ಶ.ಪೂ. ೫೦೫-೪೫೦). ಮೇಳಗೀತವೆಲ್ಲ ಸಾಮಾನ್ಯವಾಗಿ ದೇವತೆಗಳನ್ನು ಕುರಿತವು. ಅವು ಅವರ ಮಹಿಮೆಯನ್ನು ಬಿತ್ತರಿಸುತ್ತವೆ. ಅವರಿಗೆ ಪ್ರಾರ್ಥನೆಗಳನ್ನು ಸಲ್ಲಿಸುತ್ತವೆ. ಕೆಲವು ಮೇಳಗೀತಗಳು ಆಳುವ ಪ್ರಭುಗಳನ್ನು ಕುರಿತವು. ಎಲಿಜಿ ಮೇಳಗೀತ ಎರಡು ಪ್ರಕಾರಗಳಲ್ಲಿಯೂ ಖ್ಯಾತಿ ಗಳಿಸಿದ ಸಿಮೊನೈಡೀಸನ ಕವನಗಳಲ್ಲಿ ಲಭ್ಯವಾಗಿ ರುವುದು ಕೆಲವೇ. ಮ್ಯಾರಥಾನ್ ಕದನದ ಅನಂತರ ಅಲ್ಲಿ ಮಡಿದ ವೀರಶ್ರೇಷ್ಠರಿಗೆ ಚರಮ ಗೀತೆಗಳನ್ನು ಬರೆಯುವ ಸ್ಪರ್ಧೆಯಲ್ಲಿ ಸಿಮೊನೈಡೀಸ್ ಈಸ್ಕಿಲಸನನ್ನು ಸೋಲಿಸಿದ ಎಂದು ಐತಿಹ್ಯ ಉಂಟು. ಕಾವ್ಯ ಮಾತನಾಡುವ ಚಿತ್ರ, ಚಿತ್ರ ಮೌನವಾದ ಕಾವ್ಯ. ಎಂಬುದು ಇವನ ಸೂತ್ರಗಳಲ್ಲಿ ಒಂದು. ಇವನ ಕವನಗಳಲ್ಲಿ ದೃಶ್ಯಗಳು ವಿವರಗಳಿಂದ ತುಂಬಿಕೊಂಡು ಕಣ್ಣಿಗೆ ಕಟ್ಟುತ್ತವೆ. ಬಾಳಿನ ಅನಿಶ್ಚಯತೆಯ ಗಾಢ ಅರಿವು ಇವನ ಕಾವ್ಯದಲ್ಲಿ ಸಂಯಮದ ವಿಷಾದವನ್ನು ಮೂಡಿಸುತ್ತದೆ. ಚರಮಗೀತೆಗಳ ಎರಡು ಪಂಕ್ತಿಗಳಲ್ಲಿ ಅಥವಾ ನಾಲ್ಕು ಪಂಕ್ತಿಗಳಲ್ಲಿ ಒಬ್ಬ ವ್ಯಕ್ತಿಯ ಇಡೀ ಜೀವನವನ್ನು ಅಥವಾ ಸಾಧನೆಯನ್ನು ಈತ ಅಡಕ ಮಾಡಬಲ್ಲ. ಆಳವಾದ ಭಾವ ಇವನ ಕಾವ್ಯಗಳ ಸರಳ ಭಾಷೆಯಲ್ಲಿ ಅಡಗಿದೆ. ಇವನ ಸೋದರಳಿಯ ಬ್ಯಾಕಿಲಿಡೀಸ್ ಇವನಿಂದ ಪ್ರಭಾವಿತನಾದವ. ಕಥನ ಕವನದಲ್ಲಿ ಬ್ಯಾಕಿಲಿಡೀಸನದು ಎತ್ತಿದ ಕೈ. ಓದುಗರನ್ನು ಈತ ರೋಮಾಂಚನಗೊಳಿಸಬಲ್ಲ. ಮೇಳಕಾವ್ಯದಲ್ಲಿ ಪೌರಾಣಿಕ ಕಥೆಗಳನ್ನು ಸಮೃದ್ಧವಾಗಿ ಬಳಸಿಕೊಂಡ ಇವನದು ತಿಳಿಯಾದ ಶೈಲಿ. ಪಿಂಡಾರ್ ಗ್ರೀಸಿನ ಮಹಾಕವಿಗಳಲ್ಲಿ ಒಬ್ಬ. ನಾಡಿನ ಮಹಾ ಸಾಧನೆಗಳನ್ನು ಬರಲಿರುವ ಪೀಳಿಗೆಗಳಿಗೆ ಉಳಿಸಿಡುವುದು ಕಾವ್ಯದ ಮೊದಲ ಕರ್ತವ್ಯ ಎಂದು ಈತ ನಂಬಿದ್ದ. ಕಾವ್ಯ ಮನುಷ್ಯನ ಶೌರ್ಯ ಹಿರಿಮೆಗಳ ಮೇಲೆ ಅಮರವಾದ ಪ್ರಭೆಯನ್ನು ಚೆಲ್ಲುತ್ತದೆ. ಸತ್ತವರ ಚೇತನಗಳೂ ಕಾವ್ಯವನ್ನು ಆಲಿಸುತ್ತವೆ, ಆಸ್ವಾದಿಸುತ್ತವೆ ಎಂದು ಇವನ ನಂಬಿಕೆ. ಉದ್ದೇಶಿತ ಚಾತುರ್ಯದ ಜಟಿಲ ಕಲೆ ಇವನದು. ಇವನ ಕವನ ಗಳಲ್ಲಿ ಉಳಿದು ಬಂದಿರುವುವು ಬಹುಮಟ್ಟಿಗೆ ಗ್ರೀಸಿನ ಕ್ರೀಡಾ ಮಹೋತ್ಸವಗಳಿಗಾಗಿ ಬರೆದ ಮೇಳಗೀತೆಗಳು. ಇವನ ಕವನಗಳು ಕ್ಷಿಷ್ಟ ಪದಗಳ ಹೊಸ ಜೋಡಣೆಯಿಂದ ದೃಶ್ಯ ಕಣ್ಣಿಗೆ ಕಟ್ಟುವಂತೆ ಮಾಡಬಲ್ಲ ಸಂತೋಷವನ್ನು ನೀಡಬಲ್ಲ ಶಕ್ತಿ ಇವಕ್ಕಿದೆ.

ಈ ಮೂವರು ಪ್ರಖ್ಯಾತ ಕವಿಗಳ ಅನಂತರ ಮೇಳಗೀತ ಇಳಿಮುಖವಾಯಿತು. ನಾಟಕ ಪ್ರಾಧಾನ್ಯ ಗಳಿಸಿತು. ಇವರ ಅನಂತರ ಬಂದ ಕವಿಗಳಲ್ಲಿ ಸಾಮಾನ್ಯವಾಗಿ ಸಂಗೀತದ ಅಂಶವೇ ಹೆಚ್ಚು. ಶೈಲಿಯಲ್ಲಿ ಕೃತಕತೆ ತಲೆದೋರುತ್ತದೆ. ಪ್ರ.ಶ.ಪೂ. ೪೦೪ರಲ್ಲಿ ಆದ ಅಥೆನ್ಸ್ ನಗರದ ಪತನ ಗ್ರೀಕ್ ಸಾಹಿತ್ಯಕ್ಕೇ ಒದಗಿದ ಮಹಾ ವಿಪತ್ತಾಯಿತು. ಪ್ರ.ಶ.ಪೂ ಮೂರನೆಯ ಶತಮಾನದಲ್ಲಿ ಗ್ರೀಕ್ ಕಾವ್ಯ ಸ್ವಲ್ಪಮಟ್ಟಿಗೆ ಅಲೆಗ್ಸಾಂಡ್ರಿಯದಲ್ಲಿ ತಲೆ ಎತ್ತಿತು. ಕ್ಯಾಲಿಮಾಕಸ್ (ಪ್ರ.ಶ.ಪೂ. ೩೧೦ – ೨೪೦) ಮತ್ತು ಇನ್ನು ಕೆಲವರು ಕವನಗಳನ್ನು ಬರೆದರು. ಇವರು ಬಹು ಶ್ರೇಷ್ಠವೆನ್ನಬಹುದಾದ ಕಾವ್ಯವನ್ನು ಬರೆಯಲಿಲ್ಲ. ಆದರೆ ಗಮನಿಸಬೇಕಾದ ಸಾಧನೆ ಇವರದು. ರೊಮ್ಯಾಂಟಿಸಿಸಂ ಮೊದಲು ಕಾಣಿಸಿಕೊಳ್ಳುವುದು ಇವರ ಕಾವ್ಯದಲ್ಲಿ. ಸಂತೃಪ್ತ ಜೀವನದ ಗ್ರಾಮಾಂತರ ಕಾವ್ಯ ಪ್ರಾರಂಭವಾದುದು ಇವರಿಂದ. ಕ್ಯಾಲಿಮಾಕಸ್ ಭಜನ ಗೀತಗಳನ್ನೂ ನಾಟುನುಡಿಗಳನ್ನೂ ಬರೆದ. ಇವನ ಸಮಕಾಲೀನ ರೋಡ್ಸಿನ ಅಪೊಲೋನಿಯಸ್ (ಪ್ರ.ಶ.ಪೂ. ೨೯೫ – ೨೧೫) ಮಹಾಕಾವ್ಯವನ್ನು ಆರಿಸಿಕೊಂಡು ಮಧುರಪ್ರಣಯವನ್ನು ಸುಂದರವಾಗಿ ಚಿತ್ರಿಸಿದ್ದಾನೆ. ಕಥೆ ಹೇಳುವಾಗ ಈತ ದೃಶ್ಯಗಳು ಕಣ್ಣಿಗೆ ಕಟ್ಟುವಂತೆ ಮಾಡಬಲ್ಲ. ತಿಯಾಕ್ರಿಟಸ್ (ಪ್ರ.ಶ.ಪೂ. ೩೧೬ – ೨೬೦) ಮುಂದಿನ ಕಾವ್ಯದ ಮೇಲೆ ತುಂಬ ಪ್ರಭಾವ ಬೀರಿದವ. ಸಿಸಿಲಿಯ ಕುರುಬರ ಜೀವನವನ್ನು ನೆಪಮಾಡಿಕೊಂಡು ಸಂತೃಪ್ತ ಜೀವನವನ್ನು ವರ್ಣಿಸಿ ಸುಂದರವಾದ ಕವನಗಳನ್ನು ಬರೆದು ಪ್ಯಾಸ್ಟೊರಲ್ ಸಂಪ್ರದಾಯವನ್ನು ಈತ ಪ್ರಾರಂಭಿಸಿದ. ನಿಸರ್ಗವನ್ನು ಪ್ರೀತಿಸಿ ಅದರ ನೂರು ವಿವರಗಳನ್ನು ಆಸಕ್ತಿಯಿಂದ ಗುರುತಿಸಿದ ಕವಿಯ ಕೃತಿಗಳು ಇವು. ಶಬ್ದಗಳನ್ನು ಈತ ಬಹು ಎಚ್ಚರಿಕೆಯಿಂದ ಆರಿಸಿದ್ದಾನೆ. ಮಾಸ್ಕಸ್ (ಪ್ರ.ಶ.ಪೂ. ೧೨೦) ಮತ್ತು ಬಿಯಾನ್ (ಪ್ರ.ಶ.ಪೂ. ೧೨೦) ಇವನನ್ನು ಅನುಕರಿಸಿದರು.

ಕ್ಯಾಲಿಮಾಕಸ್ ಮತ್ತೆ ಜನಪ್ರಿಯಗೊಳಿಸಿದ ನಾಟುನುಡಿ ಶತಮಾನಗಳ ಕಾಲ ಉಳಿದು ಬಂತು. ಟಾರೆಂಟಮಿನ ಲಿಯೊನಿಡಾಸ್ (ಪ್ರ.ಶ.ಪೂ. ೨೭೪), ಆಸ್‌ಕ್ಲೆ ಪಿಯಡೀಸ್ (ಪ್ರ.ಶ.ಪೂ. ೨೯೦), ಮಿಲಿಯೇಜರ್ (ಪ್ರ.ಶ.ಪೂ. ೯೦), ಮೊದಲಾದವರು ಈ ಮಾಧ್ಯಮವನ್ನು ಬಳಸಿದರು.

ಯೂರೋಪಿನ ಕಾವ್ಯಕ್ಕೆ ಮಾತ್ರವಲ್ಲ, ಇಡೀ ಜಗತ್ತಿನ ಕಾವ್ಯಕ್ಕೆ ಗ್ರೀಸಿನ ಕೊಡುಗೆ ಅಮೂಲ್ಯವಾದುದು. ಮಹಾಕಾವ್ಯ, ಮೇಳಗೀತ, ಭಾವಗೀತೆ, ನಾಟುನುಡಿ, ಪ್ರಗಾಥ, ಗ್ರಾಮಾಂತರಕಾವ್ಯ– ಈ ಎಲ್ಲ ಕಾವ್ಯಪ್ರಕಾರಗಳ ತೊಟ್ಟಿಲು ಪ್ರಾಚೀನ ಗ್ರೀಸ್. ಈ ಎಲ್ಲ ಪ್ರಕಾರಗಳಲ್ಲಿ ಕವಿದಿಗ್ಗಜರನ್ನು ಈ ಪುಟ್ಟದೇಶ ಕೊಟ್ಟಿತು. ಹೋಮರ್, ಹೆಸಿಯಡ್, ಅಲ್‌ಸೇಯಿಯಸ್, ಸ್ಯಾಫೊ, ಅನಾಕ್ರಿಯಾನ್, ಸಿಮೊನೈಡೀಸ್, ಪಿಂಡಾರ್, ಬ್ಯಾಕಿಲಿಡೀಸ್ – ಯಾವ ನಾಡಾದರೂ ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಹೆಸರುಗಳು ಇವು. ಹಲವು ಬಗೆಯ ಅಪೂರ್ವ

ಪ್ರಯೋಗಗಳ ತವರು ಗ್ರೀಸ್ ಕಾವ್ಯ. ವಿಭಾವನೆ ಹಾಗೂ ಬೌದ್ಧಿಕ ಶಕ್ತಿಗಳ ಅಪೂರ್ವ ಸಮ್ಮಿಲನವನ್ನು ಪ್ರಾಚೀನ ಗ್ರೀಕ್ ಕಾವ್ಯಗಳಲ್ಲಿ ಕಾಣುತ್ತೇವೆ. ಗ್ರೀಕ್ ಕವಿಗಳು ಧೀಮಂತರು. ಅಲ್ಲದೇ ಇವರ ಕಾವ್ಯದಲ್ಲಿ ಅಮೂರ್ತತೆಗೆ ಅವಕಾಶವೇ ಇಲ್ಲ. ಪಲಾಯನದ ಮನೋಧರ್ಮ ಇವರ ಬಳಿ ಸುಳಿಯದು. ಯಾವ ಭ್ರಾಂತಿಗಳಿಗೂ ವಶರಾಗದೆ ಜೀವನದ ವಾಸ್ತವಿಕತೆಯನ್ನು ಎದುರಿಸುವ ಕವಿಗಳು, ಈ ನಾಡಿನವರು. ಮನುಷ್ಯನೇ ಈ ಕಾವ್ಯದ ಕೇಂದ್ರ. ಮನುಷ್ಯನ ದೇಹ, ಮನುಷ್ಯನ ರಾಗಭಾವಗಳು, ಅವನ ಬಯಕೆಗಳು, ಅವನ ವಿಧಿ ಇವುಗಳಲ್ಲಿ ಗ್ರೀಕ್ ಕವಿಯ ಆಸಕ್ತಿ. ದೇವತೆಗಳೂ ಮುಖ್ಯರಾಗುವುದು ಮನುಷ್ಯನ ಜೀವನದಲ್ಲಿ ಅವರ ಪಾತ್ರದಿಂದ ಭೂಮಿಯ ಮೇಲಿನ ಬಾಳಿನ ಚಟುವಟಿಕೆ, ಸೊಗಸು, ಸೌಂದರ್ಯಗಳಿಗೆ ಮಾರು ಹೋಗುತ್ತಾನೆ ಗ್ರೀಕ್ ಕವಿ. ಆದರೆ ಈ ಜೀವನವನ್ನು ವಿಶಾಲವಾದ ಹಿನ್ನೆಲೆಯಲ್ಲಿ ಕಾಣುತ್ತಾನೆ; ಅದು ಎಷ್ಟು ಹ್ರಸ್ವ, ಅದರಲ್ಲಿ ಎಷ್ಟು ನೋವಿದೆ ಎಂಬುದನ್ನು ಗುರುತಿಸುತ್ತಾನೆ. ಆದರೆ ಅತಿಭಾವುಕತೆಗೆ ವಶನಾಗುವುದಿಲ್ಲ. ಧೀಮಂತ, ಗಂಭೀರ ಚಿಂತನೆ ಭಾವುಕತೆಗೆ ಕಡಿವಾಣ ಹಾಕುತ್ತದೆ. ಬಾಳನ್ನು ಸಮಗ್ರವಾಗಿ ಕಾಣುವ ವಿಶಿಷ್ಟ ದೃಷ್ಟಿ. ಇಲ್ಲಿಯ ಮಹಾಕವಿಗಳದು. ವಿಶ್ವಕಾವ್ಯದ ಚರಿತ್ರೆಯ ಪ್ರಾರಂಭದ ಅಧ್ಯಾಯಗಳಲ್ಲಿ, ಬಹು ಉಜ್ವಲವಾದ ಅಧ್ಯಾಯಗಳಲ್ಲಿ ಒಂದು, ಗ್ರೀಕ್ ಕಾವ್ಯದ ಚರಿತ್ರೆ.

(ಎಲ್.ಎಸ್.ಎಸ್.)

ಗ್ರೀಕ್ ವಿಮರ್ಶೆ

ಪ್ರಾಚೀನ ಗ್ರೀಸಿನಲ್ಲಿ ಅಧಿಕೃತ ಕಾವ್ಯವಿಮರ್ಶೆ ಕಾಣಸಿಗುವುದು ಸೃಜನಾತ್ಮಕ ಕಾವ್ಯಕೃಷಿ ಆದ ಹಲವಾರು ಶತಮಾನಗಳ ಅನಂತರ ಎಂದರೆ ಪ್ರ.ಶ.ಪೂ.ಸು. ೫ನೆಯ ಶತಮಾನದ ಕೊನೆಯ ಭಾಗದಲ್ಲಿ. ಆರಿಸ್ಟಾಫನೀಸ್ ಮುಂತಾದ ಹಳೆಯ ಹರ್ಷನಾಟಕಕಾರರೂ ಪ್ಲೇಟೊ ಮತ್ತು ಸಾಕ್ರಟೀಸರೂ ತತ್ತ್ವ ದೃಷ್ಟಿಯಿಂದಲೂ ಉದ್ದೇಶಪೂರ್ವಕವಾಗಿಯೂ ತಮ್ಮ ಕಾಲದ ಮತ್ತು ಹಿಂದಣ ಕವಿಗಳನ್ನು ಪರಿಶೀಲಿಸತೊಡಗಿದುದೇ ವಿಮರ್ಶೆಯ ಪ್ರಾರಂಭ. ಅದಕ್ಕೆ ಹಿಂದೆ ಜ್ಞಾನಿಗಳಿಂದಲೂ ಸ್ವತಃ ಕಾವ್ಯಕರ್ತರಿಂದಲೂ ಕಾವ್ಯವನ್ನು ಕುರಿತ ನಾನಾ ಹೇಳಿಕೆಗಳು ಆಗಿಬಂದುವು. ಕಾವ್ಯದ ಧ್ಯೇಯ ಯಾವುದು, ಕಾವ್ಯ ಹೇಗಿರಬೇಕು, ಹೇಗಿರಕೂಡದು, ಇತ್ಯಾದಿ ನೀತಿಸೂತ್ರ ಅವರಿಂದ ಘೋಷಿತವಾಯಿತು. ಭವ್ಯಕಾವ್ಯ, ಪ್ರಗಾಥ, ರೂಪಕ ಕಾವ್ಯ, ಚರಿತ್ರೆ, ತಾತ್ತ್ವಿಕ ಪ್ರಬಂಧ, ಭಾಷಣಗಳಲ್ಲಿ ಅಂಥ ವಾಕ್ಯಾವಳಿ ಪ್ರ.ಶ.ಪೂ. ೮ನೆಯ ಶತಮಾನದಿಂದಲೂ ಕಾಣಬರುತ್ತವೆ. ಜನಜೀವನಕ್ಕೆ ಕಾವ್ಯ ನಿಕಟವೂ ಅತ್ಯಗತ್ಯವೂ ಆಗಿದ್ದಿತಾಗಿ ಜೀವನದ ಪ್ರಸ್ತಾಪ ಚಿಂತನೆಗೆ ಬಂದಾಗಲೆಲ್ಲ ಕಾವ್ಯದ ಪ್ರಸ್ತಾಪ ತಾನಾಗಿಯೇ ಉಕ್ಕಿ ಬರುತ್ತಿದ್ದುದು ನ್ಯಾಯವೆ. ಆದರೂ ಹೋಮರ್, ಪಿಂಡರ್, ಸಿಮೊನಿಡೀಸ್, ಹೆರಾಕ್ಲಿಟಸ್, ತುಸಿಡಿಡೀಸ್ ಮೊದಲಾದವರು ಕವಿಗಳು, ವಿಚಾರ ಸಾಹಿತಿಗಳು, ಚಾರಿತ್ರಕರೇ ಹೊರತು ವಿಮರ್ಶಕರಲ್ಲ. ಅವರೂ ಇತರರೂ ವಿಮರ್ಶೆಗೆ

ತಳಹದಿ ಹಾಕಿದರೆಂದು ಧಾರಾಳವಾಗಿ ಹೇಳಬಹುದು. ಗ್ರೀಕರಿಗೆ ಕಾವ್ಯವೆಂಬುದು ಕೇವಲ ಒಂದು ಆಹ್ಲಾದಕಾರಕ ವಾಗ್‌ವ್ಯವಸಾಯವಾಗಿರಲಿಲ್ಲ. ಅದರಿಂದ ನೀತಿಬೋಧೆ ಆಗಲೇ ಬೇಕೆಂದು ಅವರ ಆಕಾಂಕ್ಷೆ. ಆರಿಸ್ಟಾಟಲ್ ಪ್ರವೇಶಮಾಡಿ ಕಾವ್ಯಕ್ಕೆ ಪ್ರತ್ಯೇಕ ಅಸ್ತಿತ್ವವೂ ಅದರದೇ ಆದ ಪರಿಣಾಮವೂ ಉಂಟೆಂದು ಸ್ಥಾಪಿಸಲು ಪ್ರಯತ್ನಿಸಿದ. ಆದರೆ ಅವನಲ್ಲಿಯೂ ಕಾವ್ಯಕಲಾಪದಿಂದ ಜನ ಒಳ್ಳೆಯತನ ಕಲಿಯತಕ್ಕದ್ದು ಎಂಬ ನಿಯಮದ ಕಿಂಚಿದ್ವಾಸನೆ ಇದ್ದೇ ಇದೆ.

ಕಾವ್ಯಸ್ಫೂರ್ತಿಯ ವಿಚಾರವಾಗಿಯೂ ಭಾಷಣವಿದ್ಯೆಯ ಎರಡು ಬಗೆಗಳ ಮೇಲೂ ಹೋಮರ್ ಗಮನಾರ್ಹವಾದ ಮಾತುಗಳನ್ನು ಆಡಿದ್ದಾನೆ. ಕಾವ್ಯ ರಚನೆಯಲ್ಲಿ ಆವೇಶದ ಭಾಗ ಎಷ್ಟು, ತಂತ್ರ ನಿಯಂತ್ರಣದ ಭಾಗ ಎಷ್ಟು ಎಂಬ ಸಮಸ್ಯೆಯನ್ನು ಪಿಂಡರ್ ಪುನಃ ಯೋಚನಾಪರರ ಮುಂದಿಟ್ಟ. ಕೊರಿನ್ನಾ ಎಂಬ ಕವಯಿತ್ರಿ ಪುರಾಣ ಕಥಾವಳಿಯನ್ನು ಹೆಚ್ಚಾಗಿ ಉಪಯೋಗಿಸದಿದ್ದರೆ ಲೇಸು ಎಂದು ಪಿಂಡರನಿಗೆ ಉಪದೇಶಿಸಿದಳು. ಸಿಮೊನಿಡೀಸ್ ಚಿತ್ರಣವನ್ನು ಮಾತಾಡದ ಕಾವ್ಯವೆಂದೂ ಕಾವ್ಯವನ್ನು ಮಾತಾಡುವ ಚಿತ್ರಣವೆಂದೂ ಕರೆದ. ಹೆರಾಕ್ಲಿಟೀಸ್ ಕ್ಸೆನೊಫೇನೀಸ್ ಮೊದಲಾದವರು ಬಿಡಿ ಕವಿಗಳನ್ನು ಕುರಿತು ಟೀಕೆ ಮಾಡಿದರು. ತುಸಿಡಿಡೀಸ್ ಕಾವ್ಯದ ಪ್ರಯೋಜನ ಆಹ್ಲಾದವೊ ಶೀಲಪ್ರಚೋದನೆಯೊ ಎಂಬ ಪ್ರಶ್ನೆಯನ್ನು ಒತ್ತಿ ಒತ್ತಿ ಕೇಳಿದ. ಆರಿಸ್ಟಾಟಲನ ತರುವಾಯವೂ ಲೇಖಕರು ತಮ್ಮ ಕೃತಿ ಯಾವ ಪ್ರಕಾರದ್ದೇ ಆಗಲಿ ಅದರಲ್ಲಿ ಇಂಥ ವಿಚಾರವಾಣಿಗೆ ಉತ್ಸಾಹದಿಂದ ಅವಕಾಶವೀಯುತ್ತಿದ್ದರು.

ಹೋಮರ್ ಹೇಸಿಯಡ್ಡರು ಗ್ರೀಕ್ ಸಂಸ್ಕೃತಿಗೆ ಮೂಲಾಧಾರ, ಮುಖ್ಯಾಧಾರ. ದೇವತೆಗಳಿಗೆ ಅವರಿಬ್ಬರೂ ಮಾನವತ್ವ ಆರೋಪಿಸಿ ದೈವದ್ರೋಹಿಗಳಾದರೆಂದು ಕೆಲವು ದಾರ್ಶನಿಕರು ಹಳಿದದ್ದನ್ನು ಸಹಿಸಲಾರದೆ ಅನಾಕ್ಸಿಮಾಂಡರ್, ಸ್ಟೆಸಿಂಬ್ರೋಟಸ್, ಗ್ಲೌಕಸ್ ಮೊದಲಾದ ಕವಿಪ್ರೇಮಿಗಳು ಅವರ ಕಾವ್ಯವನ್ನು ಅನ್ಯಾರ್ಥ ಕಾವ್ಯವಾಗಿ ತೆಗೆದುಕೊಳ್ಳಬೇಕೆಂದು ವಾದಿಸಿದರು. ಅಪಾಲೊ ವಧೆಕಾರ, ಅವನ ಶರಜಾಲ ಕೊಲ್ಲುವ ಸಾಧನ–ಎಂದು ಭ್ರಾಂತಿಪಡುವುದು ತಪ್ಪು, ಅಪಾಲೊ ಸೂರ್ಯದೇವ, ಅವನು ಕಳಿಸುವುದು ರಶ್ಮಿಸಮೂಹ ಎಂದು ಅರ್ಥ ಮಾಡಿಕೊಳ್ಳಬೇಕು– ಈ ರೀತಿ ಕೆಲವರಿಂದ ಕವಿಸಮರ್ಥನೆ ನಡೆಯಿತು. ಇನ್ನೂ ಕೆಲವರಿಗೆ ಅನ್ಯಾರ್ಥಕ್ಕೂ ಹಿಂದೆ ಅಧ್ಯಾತ್ಮಿಕಾರ್ಥ ಗೂಢವಾಗಿದೆಯೆಂದೇ ನಂಬಿಕೆ. ಒಪ್ಪಲಾಗದ ಅಭಿಪ್ರಾಯವಾದರೂ ಇವು ಪ್ರಕಟಿಸುವ ಕಾವ್ಯಾದರವನ್ನು ಮೆಚ್ಚಬೇಕು; ಕಾವ್ಯಾದರ ಸಾಕ್ಷಾತ್ ವಿಮರ್ಶೆಯಲ್ಲದಿದ್ದರೂ ವಿಮರ್ಶೆಗೊಂದು ಸೋಪಾನ.

ಹಳೆಯ ಹರ್ಷನಾಟಕ ಜೀವನದ ವಿಡಂಬನಾತ್ಮಕ ವಿಮರ್ಶೆಯಲ್ಲದೆ ಮತ್ತೇನೂ ಆಗಿರಲಿಲ್ಲ. ಆ ನಾಟಕಕಾರರು ಪ್ರಮುಖವಾಗಿ ರಾಜಕೀಯ ಮುಂದಾಳುಗಳನ್ನು ಅವಹೇಳನ ಗೈಯುವ ಇಚ್ಛೆಯುಳ್ಳವರಾದರೂ ಸಾಕ್ರಟೀಸ್ ಮೊದಲಾದ

ತತ್ತ್ವಜ್ಞರೂ ಯುರಿಪಿಡೀಸ್ ಈಸ್ಕಿಲಸ್ ಮೊದಲಾದ ಗಂಭೀರನಾಟಕಕಾರರೂ ಅವರ ಲಕ್ಷ್ಯದಿಂದ ಹೊರಗಾಗಲಿಲ್ಲ. ಆರಿಸ್ಟಾಫನೀಸ್ ನಡೆಸಿರುವ ಹೋಲಿಕೆಯೂ ಸಾರಿರುವ ತೀರ್ಮಾನವೂ ಅತ್ಯುತ್ಕೃಷ್ಟ ವಿಮರ್ಶೆ. ಅವನ ಒಲವು ಹೆಚ್ಚಾಗಿ ಈಸ್ಕಿಲಸನ ಪರವಾಗಿ ಇದ್ದರೂ ಆ ಕವಿಯ ದೋಷಗಳಿಗೆ ಅವನು ಕಣ್ಮುಚ್ಚಲಿಲ್ಲ; ವಿರೋಧಿ ಯುರಿಪಿಡೀಸನ ಸುಶ್ರಾವ್ಯ ಕವಿತ್ವಕ್ಕೆ ಮಾನ್ಯತೆ ಇದ್ದೇ ಇತ್ತು. ಕಾವ್ಯಪಂಕ್ತಿಗಳ ತೂಕ ಅಳತೆ ಮುಂತಾದ ವಿಚಾರ ವಿಮರ್ಶೆಯ ವೈಪರೀತ್ಯವನ್ನೂ ಆತ ಪರಿಹಾಸ ಮಾಡಿದ. ಎಲ್ಲಕ್ಕೂ ಮೇಲಾಗಿ ಮಹೋನ್ನತ ಕವಿ ಇಲ್ಲದಿದ್ದರೆ ಮನುಷ್ಯ ಸಮಾಜ ಮೆರೆಯಲಾರದು ಎಂಬ ಅವನ ಅಭಿಮತ ಸ್ವಾಗತಾರ್ಹ, ಮನನೀಯ, ಪ್ರಭಾವಯುಕ್ತ.

ಪ್ಲೇಟೊವಿನ ದೃಷ್ಟಿಗೆ ಕವಿಯ ನಿರೂಪಣೆ ಆದರ್ಶ ಸತ್ಯದಿಂದ ಎರಡು ಮಜಲು ಈಚೆ, ಆದ್ದರಿಂದ ಅದು ಸುಳ್ಳು. ಅಲ್ಲದೆ ಶ್ರೋತೃಗಳೂ ನೋಟಕರೂ ಭಾವಾತಿರೇಕದ ಆವೇಶದಲ್ಲಿ ತೊಳಲುವಂತೆ ಮಾಡಿ ಅವರನ್ನು ದುರ್ಬಲಗೊಳಿಸುತ್ತಾನೆ, ಕವಿ–ಎಂದು ಭಾಸವಾಯಿತು. ಮಾದರಿ ರಾಷ್ಟ್ರದಲ್ಲಿ ಕವಿವರ್ಗಕ್ಕೆ ಸ್ಥಾನವಿಲ್ಲ ಎಂದೇ ಅವನ ತೀರ್ಪು. ಇದೊಂದು ಮುಖ. ಇನ್ನೊಂದು ಮುಖವೂ ಉಂಟು. ತನಗೆ ರೆಕ್ಕೆಯಿದೆಯೊ ಎಂಬಂತೆ ಕವಿ ಮೇಲುಮೇಲಕ್ಕೆ ಏರಬಲ್ಲ. ತನ್ನ ಗಾನಸದೃಶವೂ ಚಿತ್ತಾಕರ್ಷವೂ ಆದ ಶಾಬ್ದಿಕ ಪ್ರೇರಣೆಯಿಂದ ನಮ್ಮನ್ನು ಮರಳುಗೊಳಿಸಬಲ್ಲ; ಅವನೊಂದು ಪೂಜ್ಯ ವಸ್ತು–ಇದೂ ಪ್ಲೇಟೊವಿನನ ವರ್ಣನೆಯೆ. ಅವನ ತಪ್ಪು ಅರ್ಥಗಳನ್ನು ಚಚಿಸುವುದೇ ವಿಮರ್ಶೆಗೆ ಉಪಯುಕ್ತವಾದ ಕೆಲಸವೆಂದು ಲೋಕದ ಅಭಿಪ್ರಾಯ. ಹಾಗೂ ಆರಿಸ್ಟಾಟಲನನ್ನು ಕೆರಳಿಸಿ ಕಾವ್ಯಮೀಮಾಂಸೆ ಅವನಿಂದ ಆಗುವಂತೆ ಎಸಗಿದುದೂ ಪ್ಲೇಟೊವಿನ ಪರಮೋಪಕಾರ.

ಆರಿಸ್ಟಾಟಲ್ ಕಾವ್ಯಕಲೆ ಮತ್ತು ಭಾಷಣವಿದ್ಯೆ ಚಿಕ್ಕ ಪುಸ್ತಕಗಳಾದರೂ ವಿಮರ್ಶೆಯ ಒಂದು ಗ್ರಂಥಾಲಯಕ್ಕೆ ಸಮ. ಕಾವ್ಯಕ್ಕೂ ಚರಿತ್ರೆಗೂ ಇರುವ ಭೇದ, ಕಾವ್ಯಕ್ಕೂ ತತ್ತ್ವಶಾಸ್ತ್ರಕ್ಕೂ ಇರುವ ಭೇದ, ಅವೆರಡಕ್ಕಿಂತ ಕಾವ್ಯದ ಹಿರಿಮೆಯೇನು, ಕಾವ್ಯದ ಪ್ರಕಾರಗಳಾದ ಭವ್ಯಕಾವ್ಯ, ಗಂಭೀರನಾಟಕ ಹಾಗೂ ಹರ್ಷನಾಟಕ. ಪ್ರಗಾಥಗಳ ವೈಲಕ್ಷಣ್ಯ ಎಲ್ಲಿದೆ, ಗಂಭೀರನಾಟಕದ ಆರು ಅಂಗಗಳು, ಅವುಗಳಲ್ಲಿ ವಸ್ತುಸಂವಿಧಾನಕ್ಕೆ ಏಕೆ ಪ್ರಾಧಾನ್ಯ, ಉಳಿದ ಅಂಗಗಳ ಸ್ವರೂಪ, ನಾಯಕನ ಗುಣಧರ್ಮ ಎಂತಿರಬೇಕು, ಅವನ ಸ್ಥಿತಿವ್ಯತ್ಯಾಸಕ್ಕೆ ಯಾವುದು ಕಾರಣ, ಗಂಭೀರ ನಾಟಕದಿಂದ ಆಗುವ ಚಿತ್ತಶುದ್ಧ, ಕಾವ್ಯ ಭಾಷೆ, ನೃತ್ಯಮೇಳ ರಂಗಸಜ್ಜುಗಳ ವಿಚಾರ–ಇವು ಕಾವ್ಯಕಲೆ ವಿವರಿಸುವ ವಿಷಯ. ಭಾಷಣ ವಿದ್ಯೆಯನ್ನು ಸ್ವಲ್ಪಮಟ್ಟಿನ ಗದ್ಯಮೀಮಾಂಸೆಯೆಂದೂ ನಿರ್ದೇಶಿಸಬಹುದು. ಪ್ರ.ಶ.ಪೂ.೪ನೆಯ ಶತಮಾನದಲ್ಲಿ ವಾಗ್ವಿದ್ಯೆಗೆ ಅತಿಶಯ ಉಪಯೋಗವೂ ಅದರ ಆವಶ್ಯಕತೆಯೂ ಇದ್ದುವು. ಗದ್ಯ ಹೇಗಿದ್ದರೆ ಮನವೊಪ್ಪಿಸುತ್ತದೆ, ಭಾಷಣದ ಅಂಗಗಳಾವುವು ಅವುಗಳ ಯುಕ್ತ ಸಂಯೋಜನೆ, ಅಲಂಕಾರಗಳ ಬಳಕೆ, ಪದಕೋಶ, ಲಯಬದ್ಧ ವಾಕ್ಯಗಳ ರಚನೆ

ಮುಂತಾದ ವಿವರಗಳಿಂದ ತುಂಬಿಕೊಂಡಿದೆ– ಆರಿಸ್ಟಾಟಲನ ಗ್ರಂಥ. ಅವನಿಂದ ವಿಮರ್ಶೆ ಸ್ಥಾಪಿತವಾಯಿತು. ಮುಂದೆಯೂ ಅನೇಕ ಶತಮಾನಗಳ ಕಾಲ ಪಾಶ್ಚಾತ್ಯ ಜಗತ್ತಿಗೆಲ್ಲ ಅವನೇ ದಾರಿತೋರುಗನಾದ. ಅವನ ಲೋಪಗಳು ಈಚೆಗೆ ಚೆನ್ನಾಗಿ ಗೊತ್ತಾಗಿರುವುದರಿಂದ ಈಗಲೂ ಅವನ ಗುಣಗಳಿಂದ ಸಮರ್ಪಕ ಲಾಭ ಸಿಕ್ಕುವುದು ನಿಸ್ಸಂದೇಹ.

ಗೀತಾತ್ಮಕ ಕಾವ್ಯದ ವಿಷಯವಾಗಿ ಆರಿಸ್ಟಾಟಲ್ ಹೆಚ್ಚೇನೂ ಹೇಳಿಲ್ಲ. ಅದಕ್ಕೆ ಕಾರಣ ವಾಗ್ಮಿಕಲೆಯ ಕೋನದಿಂದ ಕಾವ್ಯಪ್ರಭೇಧಗಳನ್ನೂ ಚರಿತ್ರೆಯನ್ನೂ ಅವನು ವೀಕ್ಷಿಸಿದ್ದು. ಗೀತವಾಗಲಿ ಪ್ರಗಾಥವಾಗಲಿ ಆ ವೀಕ್ಷಣಕ್ಕೆ ಒಳಪಡಬಾರದು. ಪ್ರ.ಶ.ಪೂ. ೪ನೆಯ ಶತಮಾನದ ಮತ್ತು ಮುಂದಣ ಶತಮಾನಗಳ ಗ್ರೀಕ್ ವಿಮರ್ಶೆ ಭಾಷಣಕಲೆಯ ಹೊರೆಯನ್ನು ಪೂರ್ತಿ ಕೊಡವಿಕೊಳ್ಳಲಿಲ್ಲ. ಪ್ರ.ಶ.ಪೂ.ಸು. ೨ನೆಯ ಶತಮಾನದ ವಿಮರ್ಶಕಶ್ರೇಷ್ಠ ಲಾಂಜೈನಸ್ ಕೂಡ ಅದನ್ನೆಸಗಿ ಸ್ವತಂತ್ರನಾಗಲು ಅಶಕ್ತನಾದ. ಪ್ರ.ಶ.ಪೂ. ೪ನೆಯ ಶತಮಾನದಲ್ಲಿ ವಿಮರ್ಶೆ ನೆರವೇರಿಸಿದ ಕಾರ್ಯದ ವಿವರ ಹೀಗಿದೆ; ೧ ಪದ್ಯಶೈಲಿ ಗದ್ಯಶೈಲಿಗಳ ವರ್ಗೀಕರಣ, ೨ ಕವಿಗಳು ಪ್ರಯೋಗಕ್ಕೆ ತಂದ ಸಾಹಿತ್ಯಪ್ರಭೇಧಗಳ ಆಂಗಿಕ ರಚನೆಯ ತಾತ್ತ್ವಿಕ ವಾಖ್ಯಾನ, ೩ ಕವಿಗೆ ನಿಸರ್ಗದತ್ತವಾದ ಶಕ್ತಿ ಮತ್ತು ಕವಿಯ ಅಧ್ಯವಸಾಯಗಳ ಪರಸ್ಪರ ಸಂಬಂಧ, ೪ ಸಾಹಿತ್ಯದ ಉದ್ದೇಶದ ಲಕ್ಷಣ ನಿರೂಪಣೆ, ೫ ಚರಿತ್ರೆಯ ಆವಶ್ಯಕತೆ.

ಗ್ರೀಕ್ ರಾಷ್ಟ್ರಗಳು ಅಲೆಗ್ಸಾಂಡರನ ಸಾರ್ವಭೌಮತ್ವಕ್ಕೆ ಒಳಗಾದ ಮೇಲೆ ಸಾಹಿತ್ಯ ವಾಸ್ತವ ಬಾಳಿನ ಸೊಗಡನ್ನು ಬಿಟ್ಟುಕೊಟ್ಟು ಗ್ರಾಂಥಿಕವೂ ಕೃತಕವೂ ಆಯಿತು. ಸ್ವಾತಂತ್ರ್ಯ ನಾಶಗೊಂಡಾಗ ಸ್ವಂತಿಕೆಗೆ ಪ್ರಚೋದನೆ ಮತ್ತಾವುದರಿಂದಲೂ ಬಾರದು. ಹಳೆಯ ಗಂಭೀರನಾಟಕಗಳ ಪುನರುತ್ಥಾನ ಇಲ್ಲವೆ ಅನುಕರಣ ; ಯುರಿಪಿಡೀಸನ ನಾಟಕಗಳಿಂದ ಸ್ಫೂರ್ತಿ ಪಡೆದು ವಿರಚಿಸಿದ ಹೊಸ ವಿನೋದ ನಾಟಕ; ವಿದ್ಯಾಶಾಲೆಗಳಲ್ಲಿ ಅಭ್ಯಾಸಕ್ಕಾಗಿ ಬರೆದ ಭಾಷಣಗಳು– ಇವೇ ಆ ಕಾಲದ ಸಾಹಿತ್ಯ. ಬುದ್ಧಿಚಾತುರ್ಯಕ್ಕೆ ಆಸ್ಪದ ಕೊಡುವ ನಾಟುನುಡಿ ಮಾತ್ರ ಸಮೃದ್ಧವಾಗಿ ಬೆಳೆಯಿತು. ಪಂಡಿತಸಮೂಹ ಬಹುವಾಗಿಯೇ ಇತ್ತು. ಅವರ ಕಾಲವಿನಿಯೋಗಕ್ಕೆ ತಕ್ಕ ಉದ್ಯೋಗವೂ ಸಿದ್ಧವಾಗಿತ್ತು. ಅಲೆಗ್ಸಾಂಡ್ರಿಯದ ಬೃಹತ್ ಗ್ರಂಥಾಲಯದ ವಿದ್ವಾಂಸರೂ ಇತರರೂ ದಿಟವಾಗಿ ಲೋಕೋಪಯುಕ್ತವಾದ ಜವಾಬ್ದಾರಿ ಕೆಲಸವನ್ನೇ ಮಾಡಿ ಕೃತಕೃತ್ಯರಾದರು. ಹಿಂದಣ ಗ್ರಂಥಗಳ ಪಾಠನಿರ್ಣಯ, ಟೀಕು ಟಿಪ್ಪಣಿ ವ್ಯಾಖ್ಯಾನಗಳ ರಚನೆ, ವ್ಯಾಕರಣ ಅಲಂಕಾರ ಶಾಸ್ತ್ರಗಳ ಸುವ್ಯವಸ್ಥೆ ನಾನಾ ವಿಧದ ವರ್ಗೀಕರಣ–ಎಲ್ಲವನ್ನೂ ಅತ್ಯಂತ ಶ್ರದ್ಧೆಯಿಂದ ಅವರು ಮಾಡಿದರು. ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೆ ಬಿಡದೆ ಅಂಟಿಕೊಂಡಿರುವ ವಿವಾದಗ್ರಸ್ತ ಪ್ರಶ್ನೆಗಳ ಕೂಲಂಕಷ ಚರ್ಚೆಯೂ ಅವರಿಂದ ಆಯಿತು. ಕಾವ್ಯದಲ್ಲಿ ಮುಖ್ಯಸ್ಥಾನ ವಿಷಯಕ್ಕೋ ವಿಷಯ ನಿರೂಪಣರೀತಿಗೋ? ಶಿಷ್ಟ ಶೈಲಿಗೂ ಆಡಂಬರ ಶೈಲಿಗೂ ಇರುವ ವ್ಯತ್ಯಾಸವೇನು?

ಎರಡಕ್ಕೂ ನಡುವಣ ಮಧ್ಯಶೈಲಿ ಎಂಬುದಿಲ್ಲವೇ? ಕಾವ್ಯ ಬೋಧಪ್ರದವಾಗಿರಬೇಕೊ ಆಹ್ಲಾದಕರವಾಗಿರಬೇಕೊ? ಯಾವುದು ಪ್ರಮಾಣ ಸಾಹಿತ್ಯ? ಅದರ ಅಧಿಕಾರವಿಧಿಗಳಿಗೆ ಮಣಿಯುವುದು ಒಳ್ಳೆಯದೊ ಮಣಿಯದೆ ಕವಿ ತನ್ನತನವನ್ನು ಪ್ರಕಟಿಸುವುದು ಒಳ್ಳೆಯದೊ? ಕಾವ್ಯ ಹೆಚ್ಚೊ ತತ್ತ್ವಶಾಸ್ತ್ರ ಹೆಚ್ಚೋ? ಪದ್ಯದ ಛಂದಸ್ಸಿಗೂ ಗದ್ಯದ ಲಯಕ್ಕೂ ಸಾಮ್ಯವುಂಟೆ? ಇಂಥ ಸಮಸ್ಯೆಗಳನ್ನು ವಿದ್ವಜ್ಜನರು ಬರೀ ವಿನೋದಕ್ಕಾಗಿ ಅಲ್ಲ, ಶಾಸ್ತ್ರೀಯ ಪರಾಮರ್ಶೆಗಾಗಿ ಎತ್ತಿಕೊಂಡರು. ವಿಮರ್ಶಾ ಪ್ರಬಂಧಗಳು ಪುಷ್ಕಳವಾಗಿ ಹುಟ್ಟಿದುವು. ಆದರೆ ಎಲ್ಲೋ ಕೆಲವು ಚೂರುಪಾರನ್ನು ಬಿಟ್ಟರೆ ಮಿಕ್ಕಿದ್ದೇನೂ ಉಪಲಬ್ಧವಾಗಿಲ್ಲದಿರುವುದು ವಿಷಾದಕರ. ವಾಗ್ಮಿಕಲೆ ಅವರ ಪ್ರಯತ್ನದ ಫಲವಾಗಿ ಒಂದು ಪರಿಷ್ಕಾರವಾದ ಶಾಸ್ತ್ರವಾಯಿತು. ಪಾರಿಭಾಷಿಕ ಪದಗಳ ಸಂಖ್ಯೆ ಹುಲುಸಾಗಿ ಬೆಳೆಯಿತು. ಪ್ರಾಸದ ನಾನಾ ಬಗೆಗೂ ಪುನರುಕ್ತಿ ಅಲಂಕಾರದ ನಾನಾವಿಧಕ್ಕೂ ಬೇರೆಬೇರೆ ಹೆಸರು ಬಂತು. ಹಾಗೆಯೇ ಸಾಹಿತ್ಯಕ್ಕೂ ಅದರ ವಿಮರ್ಶೆಗೂ ಸಂಬಂಧಪಡದೆ ಬರೀ ಕುತೂಹಲ ಕೆರಳಿಸುವ ವಿಚಿತ್ರ ವಿಚಾರಗಳ ಚರ್ಚೆ ಸತತವಾಗಿ ನಡೆಯಿತು. ಪೆನಿಲಪಿ ಸಹಾಯ ಕೋರಿ ತನ್ನ ತಂದೆಗೆ ಏತಕ್ಕೆ ಹೇಳಿಕಳಿಸಲಿಲ್ಲ, ಮೆನಿಸನ ಬಳಿಗೆ ಏತಕ್ಕೆ ಮಗನನ್ನು ಕಳಿಸಿದಳು? ಮನುಷ್ಯರು ಊಟಕ್ಕೆ ಮುನ್ನ ಕೈತೊಳೆದು ಕೊಳ್ಳುತ್ತಾರೆ, ದೇವತೆಗಳು ಏತಕ್ಕೆ ಹಾಗೆ ಮಾಡುವುದಿಲ್ಲ? ಇಂಥ ಕೆಲವು ಅಸಂಗತ ಟೀಕೆಗಳನ್ನೆತ್ತಿಕೊಂಡು ಹೋಮರ್ ಕವಿಯನ್ನು ವಿಮರ್ಶಿಸಿದೆವೆಂದು ಕೊಂಡರು.

ಅಲೆಗ್ಸಾಂಡರ್‌ನ ಅವಧಿ ಮುಗಿದ ತರುವಾಯ ಗ್ರೀಕ್ ರಾಷ್ಟ್ರಗಳು ರೋಮನ್ ಚಕ್ರಾಧಿಪತ್ಯಕ್ಕೆ ಅಧೀನವಾದವು. ರೋಮನರಿಗಾದರೊ ಗ್ರೀಕ್ ಭಾಷೆ ಸಾಹಿತ್ಯ ಸಂಸ್ಕೃತಿಗಳನ್ನು ಕಂಡು ಆಶ್ಚರ್ಯಗೂಡಿದ ಪ್ರೀತಿ. ಆದ್ದರಿಂದ ಅವೆಲ್ಲವನ್ನೂ ಉಲ್ಲಾಸದಿಂದ ಅವರು ತಮ್ಮದನ್ನಾಗಿಸಿಕೊಂಡರು. ಕೊನೆಗೆ ಗ್ರೀಕರ ದೇವವರ್ಗವೇ ಹೆಸರು ಬದಲಾಯಿಸಿಕೊಂಡು ರೋಮನರದಾಯಿತು. ಹಲವು ಗ್ರೀಕ್ ವಿದ್ವಾಂಸರು ರೋಮನರಿಂದ ಮನ್ನಣೆಯನ್ನೂ ಸಂಭಾವನೆಯನ್ನೂ ಪಡೆದುಕೊಂಡರು. ಸೃಜನಕಾವ್ಯ ಕ್ಷೇತ್ರದಲ್ಲಿ ಒಂದು ಬಗೆಯ ಗದ್ಯಕಥೆ, ಕಲ್ಪನೆ ವಾಸ್ತವತೆ ಎರಡೂ ಸೇರಿಕೊಂಡ ಜೀವನಚರಿತ್ರೆ–ಎರಡೇ ನೂತನವಾಗಿ ಎದ್ದು ಬಂದ, ಸಾಹಿತ್ಯಪ್ರಕಾರಗಳು. ಆ ಕಾಲದ ಗ್ರೀಕರಿಗೆ ಪ್ರ.ಶ.ಪೂ. ೮ರಿಂದ ೫ನೆಯ ಶತಮಾನದ ವರೆಗಿನ ಗ್ರೀಕ್ ಕಾವ್ಯ ಪ್ರಾಚೀನವಾಗಿಯೇ ತೋರಿಬಂದು, ಅದರ ವಿಚಾರದಲ್ಲಿ ಅವರ ಭಕ್ತಿ ಶ್ರದ್ಧೆಯನ್ನು ಕುದುರಿಸಿತು. ಅದನ್ನು ಪಠಿಸಿ ಅದರಿಂದ ಸ್ಫೂರ್ತಿ ಪಡೆದು ಅದರ ಮಾದರಿಯನ್ನು ಅನುಕರಿಸುವುದೇ ಅರ್ವಾಚೀನ ಕವಿಗೆ ಶ್ರೇಯಸ್ಸಿನ ಮಾರ್ಗವೆಂದು ಅವರು ಮನಗಂಡರು. ಅಲ್ಲಿ ಇಲ್ಲಿ ದೂರ ದೂರ ಅವರು ಇದ್ದುದರಿಂದ ಯಾವೊಂದು ಸಾಹಿತ್ಯಕೂಟ ಏರ್ಪಡಿಸಿಕೊಳ್ಳುವುದಕ್ಕೂ ಅವರಿಗೆ ಸಾಧ್ಯವಾಗಲಿಲ್ಲ. ಆದರೂ ಉಚ್ಚಮಟ್ಟದ ವಿಮರ್ಶೆಯೂ ಸಾಹಿತ್ಯ ವ್ಯಾಖ್ಯಾನವೂ ಅವರಿಂದ ಆಯಿತು:

೧ ಪ್ರಾಚೀನ ಸಾಹಿತ್ಯದ ಸಕ್ರಮ ವಿಂಗಡಣೆ, ಅದರ ಅಧ್ಯಯನಕ್ಕೆ ಬೇಕಾದ ನಿರ್ದಿಷ್ಟ ರೀತಿನೀತಿಯ ರೂಪುರೇಖೆ; ೨ ಭಾವಗೀತೆ ಮತ್ತು ಪ್ರಗಾಥಗಳಿಗೆ ಯೋಗ್ಯ ಮರ್ಯಾದೆ (ಆರ್ಕಿಲೋಕಸ್ ಸ್ಯಾಫೊ ಆಲ್ಕಿಯಸ್ ಮೊದಲಾದ ದೊಡ್ಡ ಕವಿಗಳನ್ನು ಪ್ಲೇಟೊ ಆರಿಸ್ಟಾಟಲ್ ಕೂಡ ನಿರ್ಲಕ್ಷಿಸಿದ್ದರು); ೩ ಪದ್ಯವಾಗಲಿ ಗದ್ಯವಾಗಲಿ ಭಾವಾತ್ಮಕವಾಗಿದ್ದರೇ ಅದು (ಕಾವ್ಯ–ಎಂಬ) ನಿಜಾಂಶದ ಗ್ರಹಿಕೆ; ೪ ಆಟ್ಟಿಕ್–ಏಷ್ಯನ್ ವಿವಾದದ ಸಮಜಾಯಿಷಿ; ಒಂದರ ಸೆಣಕತಲುತನಕ್ಕೂ ಇನ್ನೊಂದರ ಬೊಜ್ಜಿಗೂ ಮಧ್ಯವಾದ ಸೂಕ್ತ ಮಾಸಲಶೈಲಿ ಉಂಟೆಂದು ಘೋಷಣೆ; ೫ ಕಾವ್ಯಕ್ಕೆ ಸತ್ತ್ವವನ್ನೂ ಸೌಂದರ್ಯವನ್ನೂ ಎರೆಯುವ ಯಾವುದೊ ಕವಿಶಕ್ತಿ ಆಯ್ದು ಕವಿಗಳಿಗೆ ದತ್ತವಾಗಿದೆ, ಅದರ ಮೂಲವನ್ನೂ ಕಾರ್ಯವಿಧನವನ್ನೂ ಬುದ್ಧಿಬಲದಿಂದ ಕಂಡುಹಿಡಿಯಲಾಗುವುದಿಲ್ಲ (ಇದೊಂದು ಅಮೂಲ್ಯ ಅಭಿಪ್ರಾಯ).

ಆ ಕಾಲದ ಕೆಲವು ವಿಮರ್ಶಕರ ಒಪ್ಪತಕ್ಕ ಸೂಕ್ತಗಳನ್ನು ಇಲ್ಲಿ ಉದಾಹರಿಸಿದೆ: ಹ್ಯಲಿಕಾರ್ನಸಸ್ಸಿನ ಡಯೊನೀಸಸ್; 'ಶುದ್ಧವೂ ಸ್ವಾಭಾವಿಕವೂ ಆದ ಶಬ್ದಗಳನ್ನು ಆರಿಸಿಕೊಂಡು ಅವನ್ನು ಘನತೆ ಇಂಪು ಎರಡೂ ಕೂಡಿಬರುವಂತೆ ಪೋಣಿಸತಕ್ಕದ್ದು, ಒಟ್ಟಿನಲ್ಲಿ ರಮ್ಯತೆ ಹುಟ್ಟುವುದು ಎಲ್ಲ ಬಿಡಿ ಅಂಶಗಳ ಬಿಡಿ ರಮ್ಯತೆಯಿಂದ. ಲಯಬದ್ಧವಾಕ್ಯಕ್ಕೆ ವಿವಿಧ ತೆರನುಂಟು; ಎಲ್ಲವನ್ನೂ ಬಳಸಿಕೊಂಡು ಸಮಷ್ಟಿಲಾವಣ್ಯವನ್ನು ಉತ್ಪತ್ತಿ ಮಾಡಬೇಕು, ವೈವಿಧ್ಯವನ್ನೇ ಕಾಣದ ಬರೆವಣಿಗೆ ನೀರಸ, ಫಿಲೊಸ್ಟ್ರಾಟಸ್; 'ಅನುಕರಣೆಗಿಂತ ವಿಭಾವನೆ ಹೆಚ್ಚು ಜಾಣೆ; ಕಂಡದ್ದನ್ನು ಮಾತ್ರ ಅವಳು ಬಣ್ಣಿಸಬಲ್ಲಳು. ಇವಳಾದರೊ ಕಣ್ಣಿಗೆ ಕಾಣದ್ದನ್ನು ಕಂಡದ್ದನ್ನು ಹೋಲಿಕೆಯ ಮೇಲೆ, ಬಣ್ಣಿಸಬಲ್ಲಳು, ಲ್ಯೂಸಿಯನ್; 'ನೀನು ಸಾಹಿತಿ ಎನ್ನಿಸಿಕೊಳ್ಳಬೇಕೆ? ಆಧುನಿಕ ಕುತಾರ್ಕಿಕರ ಕೆಟ್ಟ ಯುಕ್ತಿಗಳನ್ನು ಬಳಸದಿರು; ಅವರ ಕೃತಕ ನಾಜೂಕಿಗೆ ಒಲಿಯಬೇಡ. ಅಂದಚಂದವನ್ನೂ ಸುಸ್ಪಷ್ಟತೆಯನ್ನೂ ಆರಾಧಿಸು. ಅರ್ಥವನ್ನು ಮೊದಲು ನೆನೆದು ಆಮೇಲೆ ಉಚಿತ ಪದಗಳನ್ನು ಕಂಡುಹಿಡಿ; ವಿಜಾತೀಯ ಪದದಿಂದ ಮೋಹಿತನಾಗಿ ಅದಕ್ಕೆ ತಕ್ಕ ಅರ್ಥವನ್ನು ಹೊಂದಿಸಹೋಗಬೇಡ'.

ಪ್ರ.ಶ.ಪೂ. ೩ನೆಯ ಶತಮಾನದ ಲಾಂಜೈನಸ್ ನಿಜವಾಗಿ ಮೇಲ್ಮಟ್ಟದ ವಿಮರ್ಶಕ. ಆರಿಸ್ಟಾಟಲ್ ಒಬ್ಬನೇ ಅವನನ್ನು ಮೀರಿಸಿದಾತ. ಅವನ ಕೃತಿ ಚಿಕ್ಕದು; ಅದನ್ನು 'ಮಹೋನ್ನತಿಯನ್ನು ಕುರಿತು' ಎಂದು ಕರೆಯುವುದು ರೂಢಿ. ಸರಿಸುಮಾರಾಗಿ ಅದರ ಪ್ರತಿಯೊಂದು ವಾಕ್ಯವೂ ಎಲ್ಲ ಕಾಲದ ಶ್ರೇಷ್ಠ ಸಾಹಿತ್ಯಕ್ಕೂ ಸರಿಯಾಗಿ ಅನ್ವಯಿಸಬಲ್ಲ ಅರ್ಥಪುಷ್ಟವಾದ ಹೇಳಿಕೆ. ಸಾರಸ್ವತ ವಿಷಯಗಳ ಆಳಕ್ಕೆ ಇಳಿದು ಶಾಶ್ವತ ತತ್ತ್ವಗಳನ್ನು ಕಂಡುಕೊಳ್ಳುವುದರಲ್ಲಿ ಅವನು ನಿಸ್ಸೀಮ. ಇವು ಅವನ ಕೆಲವು ಅಣಿಮುತ್ತುಗಳು: ಪದಗುಚ್ಛಗಳ ಸರ್ವೋತ್ಕೃಷ್ಟತೆ ಮತ್ತು ಪರಿಪೂರ್ಣ ಹೊಂದಾಣಿಕೆಯೇ ಮಹೋನ್ನತಿ. ಆ ಗುಟ್ಟನ್ನು ಉದ್ಘ ಕವಿಗಳು

ಅರಿತಿದ್ದಾರೆ. ಯಾವುದು ಅಸಾಮಾನ್ಯವೊ ಅದು ಶ್ರೋತೃಗಳನ್ನು ಬರಿ ಮನವೊಪ್ಪಿಸಿ ಸುಮ್ಮನಾಗದು. ಆನಂದ ಪರವಶತೆಗೆ ಅವರನ್ನು ಒಯ್ಯುತ್ತದೆ. ಕಾವ್ಯರಚನೆಯಲ್ಲಿ ಪ್ರಕೃತಿಯ ಭಾಗವೆಷ್ಟು, ನಿಯಮಾವಳಿಯ ಭಾಗವೆಷ್ಟು ಎಂಬ ಪ್ರಶ್ನೆಗಳಿಗೆ ಅವನ ಉತ್ತರ–ಪ್ರಕೃತಿಯಿಂದ ದ್ರವ್ಯಗಳ ಸರಬರಾಜು, ನಿಯಮಾವಳಿಯಿಂದ ಅವುಗಳ ಒಪ್ಪಓರಣ. ಭಾವೋದ್ರೇಕದ ವಾಗ್ಮಿತೆಯನ್ನು ಮತ್ತಾವುದೂ ಸರಿಗಟ್ಟದು. ಉಚಿತ ಜಾಗದಲ್ಲಿ ಅದು ಬಂದರೆ ಅದರ ಉನ್ಮಾದಾವೇಶ ಉಕ್ತಿಯಲ್ಲಿ ತುಂಬಿಕೊಂಡು ದೈವಪ್ರೇರಣೆಯ ಕಣಿವಚನ ದಂತಾಗುತ್ತದೆ. ಆಡಿಸಿ ಕಾವ್ಯದಲ್ಲಿ ಹೋಮರ್ ಸಂಜೆಯ ಸೂರ್ಯನಾಗಿದ್ದಾನೆ; ಮಹತ್ತ್ವವುಂಟು, ಆದರೆ ಕಾವು ಕುಂದಿ ಹೋಗಿದೆ. ಮುಪ್ಪಿನ ವಿಚಾರ ನಾನು ಪ್ರಸ್ತಾವಿಸುತ್ತಿರುವುದು. ಆದರೆ ಅದು ಹೋಮರನ ಮುಪ್ಪು. ಅಲಂಕಾರವೆಂದು ತೋರದಿರುವುದೇ ಉತ್ತಮ ಕಾವ್ಯಾಲಂಕಾರ. ಸುಂದರ ಶಬ್ದಗಳು ಮನಸ್ಸಿನ ನೈಜ ವಿಶಿಷ್ಟ ಪ್ರಭೆ. ಯಾರ ಮನೋಧರ್ಮ ಅತಿ ಶ್ರೇಷ್ಠವೊ ಅವರಲ್ಲಿ ದೋಷರಾಹಿತ್ಯ ಕಡಿಮೆ. ಮಹೋನ್ನತಿ ಅದರ ಲೇಖಕರನ್ನು ಭಗವಂತನ ಸರ್ವಶಕ್ತಚಿತ್ತದ ಹತ್ತಿರಕ್ಕೆ ಕೊಂಡೊಯ್ಯುತ್ತದೆ. ಸಾಹಿತ್ಯದ ಮೇಲೆ ಸರಿಯಾದ ತೀರ್ಪನ್ನೀಯುವುದು ಬಲು ಪ್ರಯತ್ನದ ಕೊನೆಯಲ್ಲಿ ಎದ್ದು ಬರುವ ಬೆಳೆ.

ಬೇಕಾದಷ್ಟು ತಕ್ಕ ನಿದರ್ಶನವನ್ನು ಕೊಡದೆ ಲಾಂಜೈನಸ್ ಒಂದು ಕಡೆಯೂ ಮಾತಾಡಿಲ್ಲ; ಅದೂ ಅವನ ಒಂದು ಹಿರಿಮೆ. (ಎಸ್.ವಿ.ಆರ್.)

ಗ್ರೀಕ್ ನಾಟಕಗಳು (ಪ್ರಾಚೀನ)

ಪ್ರಾಚೀನ ಗ್ರೀಕ್ ನಾಟಕಾಲಯದ ಮತ್ತು ನಾಟಕಗಳ ಅಭಿಮಾನದೇವತೆ ಡೈಯೊನೈಸಸ್. ಕೆಲವು ಮುಖ್ಯ ಗ್ರಾಮಗಳಲ್ಲೂ ಆಥೆನ್ಸ್ ಮುಂತಾದ ನಗರಗಳಲ್ಲೂ ಆತನ ಹೆಸರಿನಲ್ಲಿ ಶೀತಕಾಲದಿಂದ ವಸಂತ ಸಮಯದತನಕ ಹಲವು ಸಣ್ಣ ದೊಡ್ಡ ಉತ್ಸವಗಳು ಜರುಗುತ್ತಿದ್ದವು. ಆರಾಧನಾ ಪ್ರಕ್ರಿಯೆಯ ಜೊತೆಗೆ ನರ್ತನಸಹಿತ ಗೀತ ಹಾಡುವುದೇ ಉತ್ಸವಕ್ಕೆ ಸಾರ್ವಜನಿಕರ ಕಾಣಿಕೆ. ನೃತ್ಯಮೇಳಕ್ಕೆ ಡಿಥಿರ‍್ಯಾಂಬ್ (ಆವೇಶಕುಣಿತ) ಎಂದು ಅಂಕಿತ. ಅದರ ವಿಷಯ ಡೈಯೊನೈಸಸ್ಸನ ಕಷ್ಟಸುಖಮಿಶ್ರಿತ ಜೀವನದ ಘಟನಾವಳಿ. ನೃತ್ಯ ಮೇಳದಲ್ಲಿ ಐವತ್ತು ಮಂದಿ, ಡೈಯೊನೈಸಸ್ಸನ ಪರಿವಾರದವರಾದ ಸ್ಯಾಟಿರ‍್ರೈ ಮತ್ತು ಸೈಲಿನೈಗಳಂತೆ ವೇಷ ಧರಿಸಿ ಭಾಗವಹಿಸುತ್ತಿದ್ದರು. ಒಳ್ಳೆಯ ಗೀತೆಗಳನ್ನು ಕಟ್ಟಿಕೊಟ್ಟು ಹೆಸರುಗೊಂಡ ಏರಿಯನ್ ನಾಟ್ಯದ ಮಧ್ಯೆ ಮಧ್ಯೆ ಬಳಸುವುದಕ್ಕಾಗಿ ಸಂಭಾಷಣಾ ಪದ್ಯ ಪಂಕ್ತಿಗಳನ್ನು ತಂದು ಸೇರಿಸಿದ. ಅದನ್ನು ನಾಟಕತೆಯ ಪ್ರಥಮ ಪ್ರವೇಶ ಎನ್ನಬಹುದು. ಆಮೇಲೆ ಬಂದ ಥೆಸ್ಪಿಸ್ ಐವತ್ತು ನರ್ತಕರ ಎದುರಿಗೆ ಒಬ್ಬ ನಟನನ್ನು (ಹೈಪೊಕ್ರಿಟೀಸ್ – ಉತ್ತರ ಹೇಳುವವ) ತಂದಿರಿಸಿ, ಕಥನಮಯವಾಗಿದ್ದ ನೃತ್ಯಗೀತವನ್ನು ಕಥಾಭಿನಯಕ್ಕೆ ತಿರುಗಿಸಿ, ನಾಟಕದ ನಿಜಸ್ಥಾಪಕನಾದ. ಸಂವಾದಕ್ಕೆ ಸ್ವಲ್ಪ ಗಮನವೂ ಪ್ರಶಸ್ತಿಯೂ ದೊರಕಿದರೂ ನೃತ್ಯಗೀತ (ಕೋರಸ್, ಮೇಳಗೀತ) ತನ್ನ ಮುಖ್ಯಪ್ರಭಾವವನ್ನು

ಉಳಿಸಿಕೊಂಡೇ ಇತ್ತು. ಈಸ್ಕಿಲಸ್ ಎರಡನೆಯ ನಟನನ್ನು ತಂದು ಸೇರಿಸಿದ ಅನಂತರವೂ ಅದು ಕುಗ್ಗಲಿಲ್ಲ. ಗಂಭೀರವಾಗಲಿ ವಿನೋದವಾಗಲಿ ಲೇವಡಿಯಾಗಲಿ ಎಲ್ಲ ಬಗೆಯ ನಾಟಕಕ್ಕೂ ಕೋರಸ್ ಎಂಬ ನಾಮಧೇಯವೇ ಬಲುಕಾಲ ಸಲ್ಲುತ್ತಿತ್ತು. ಟ್ರ್ಯಾಜೆಡಿ ಕಾಮೆಡಿ ಸ್ಯಾಟಿರ್ ನಾಟಕಗಳ ಉಚ್ಛ್ರಾಯ ಸಮಯದಲ್ಲೂ ಕವಿಗೆ ತನ್ನ ರೂಪಕಗಳನ್ನು ಪ್ರದರ್ಶಿಸಲು ಅಪ್ಪಣೆಯೀಯುವ ರಹದಾರಿಗೆ 'ಅವನಿಗೊಂದು ಕೋರಸ್ ಕೊಟ್ಟರು' (ಹಿ ವಾಸ್ ಗಿವನ್ ಎ ಕೋರಸ್) ಎಂಬ ನಿರೂಪಣೆ ಇರುತ್ತಿತ್ತು. ಪ್ರದರ್ಶನಾಧಿಕಾರಿ ಕವಿಗೆ ನಿನ್ನ ಟ್ರ್ಯಾಜಡಿ ಅಥವಾ ಕಾಮೆಡಿ ಶುರುವಾಗಲಿ ಎನ್ನುವುದರ ಬದಲು ನಿನ್ನ ಕೋರಸ್ ಪ್ರವೇಶಿಸಲಿ ಎನ್ನುತ್ತಿದ್ದ. ಈಸ್ಕಿಲಸ್ಸನ ಸುಧಾರಣೆಯನ್ನು ಮುಂದುವರಿಸಿ ಸಾಫೊಕ್ಲೀಸ್ ಮೂರನೆಯ ನಟನನ್ನು ತಂದು ಕೂಡಿಸಿದ ಮೇಲೂ ನೃತ್ಯಗೀತವಿಲ್ಲದೆ ನಾಟಕ ನಡೆಯುವಂತಿರಲಿಲ್ಲ.

ಡೈಯೊನೈಸಸ್ ಪೂಜೆಯ ಅಂಗವಾದ ನೃತ್ಯಗೀತ ಬಹುಶಃ ಒಂದೇ ಬಗೆಯದಾಗಿರದೆ ಹಲವು ವಿಧದ ಭಾವ ಭಾವನೆಗಳನ್ನು ಪ್ರಕಟಿಸುವ ಸಾಮೂಹಿಕ ಸಾಧನವಾಗಿತ್ತು. ಕೆಲವು ವೇಳೆ ಕೋಪ, ಮರುಕ, ಭಯ, ವಿಸ್ಮಯ ಮೊದಲಾದ ಗಂಭೀರರಾಗವೂ ಮತ್ತೆ ಕೆಲವು ವೇಳೆ ಪರಿಹಾಸ ಸಮ್ಮೋದ ವಿಡಂಬನ ನಗುಗೇಲಿ ಮುಂತಾದ ಹಗುರ ರಾಗವೂ ಅದರಲ್ಲಿ ತುಂಬಿರುತ್ತಿತ್ತು. ಭಾವಗಳ ಮಿಶ್ರಣ ತೋರಿಬರುತ್ತಿದ್ದದ್ದೂ ಉಂಟು. ಕ್ರಮೇಣ ನೃತ್ಯಗೀತ ಕವಲೊಡೆದು ಮೂರು ಮುಖ್ಯ ಪ್ರಕಾರದ ನಾಟಕಗಳ ಉತ್ಪತ್ತಿಗೆ ಕಾರಣವಾಯಿತು; ಗಂಭೀರ ನಾಟಕ (ಟ್ರ್ಯಾಜಿಡಿ), ಹರ್ಷನಾಟಕ (ಕಾಮೆಡಿ), ಮಿಶ್ರನಾಟಕ (ಸ್ಯಾಟಿರ್ ಪ್ಲೇ). ಅವು ಮೂರಕ್ಕೂ ತಮ್ಮತಮ್ಮದೇ ಆದ ವಿಕಾಸ, ಚರಿತ್ರೆ, ಸಾರ್ಥಕತೆ, ಒದಗಿ ಬಂದದ್ದು ನ್ಯಾಯವೇ.

೧ ಗಂಭೀರನಾಟಕ: ಟ್ರ್ಯಾಜೆಡಿ ಅರ್ಥಾತ್ ಗ್ರೀಕ್ ಭಾಷೆಯ 'ಟ್ರ್ಯಾಜೆಡಿಯ' ಎದ್ದುಬಂದದ್ದು ಅದೇ ಭಾಷೆಯ ಟ್ರ್ಯಾಗಡಾಯ್ ಎಂಬ ಪದದಿಂದ. ಟ್ರ್ಯಾಗಡಾಯ್ ಎಂದರೆ ಪ್ರಾಯಶಃ ಹೋತನಂತೆ ವೇಷ ಹಾಕಿಕೊಂಡು ಡೈಯೊನೈಸಸ್ಸನ ಹಿಂಬಾಲಕರಾದ ಸ್ಯಾಟಿರ್ ತಂಡ ತಾವೆಂದು ನಟಿಸುತ್ತ, ನೃತ್ಯಗೀತದಲ್ಲಿ ಭಾಗವಹಿಸು ತ್ತಿದ್ದವರು; ಅಥವಾ ಒಂದು ಹೋತದ ಬಹುಮಾನಕ್ಕಾಗಿ ನರ್ತಿಸುತ್ತಿದ್ದ ಗುಂಪು; ಅಥವಾ ಡೈಯೊನೈಸಸ್ಸನ ಬಲಿ ಪೀಠದಲ್ಲಿ ಹೊಯ್ದು ಕೆಡವಿದ ಹೋತನ ಸುತ್ತ ಭಯಭಕ್ತಿಯಿಂದ ನರ್ತಿಸುತಿದ್ದವರು. ಹೀಗೇ ಎಂದು ಹೇಳವುದು ಸಾಧ್ಯವಿಲ್ಲ. ಒಬ್ಬಿಬರು ವಿದ್ವಾಂಸರಂತೂ ಗಂಭೀರನಾಟಕಕ್ಕೂ ಹೋತಕ್ಕೂ ಏನೇನೂ ಸಂಬಂಧ ಇಲ್ಲವೆಂದು ಹೇಳಿದ್ದಾರೆ; ಏತಕ್ಕೆಂದರೆ, ಟ್ರ್ಯಾಜೆಡಿ ಎಂಬ ಪದ ಅರ್ಥವತ್ತಾಗಿ ಪ್ರಭಾವಯುಕ್ತವಾಗಿ ಬಳಕೆಗೆ ಬರುವ ಹೊತ್ತಿಗಾಗಲೆ ಏರಿಯನ್, ಥೆಸ್ಪಿಸ್, ಅಳಿದು ಹಲವು ದಶಕ ಕಳೆದು ಹೋಗಿದ್ದುವು; ನಾಟಕದ ಸ್ವರೂಪವೂ ನೃತ್ಯಗೀತದ ಸ್ವರೂಪವೂ ಬಹುಮಟ್ಟಿಗೆ ಬದಲಾಗಿ ಹೋಗಿತ್ತು. ಆ ಪದ, ಪಾರಿಭಾಷಿಕ ಪದವಾಗಿಯೇ ಉಪಯೋಗ.

ಬೆಟ್ಟದ ತಪ್ಪಲಿನ ಬಯಲು ಪ್ರದೇಶವೇ ನಾಟಕಾಲಯದ ಜಾಗ. ಅಲ್ಲಿ ಕುದುರೆಲಾಳದ ಆಕಾರದ ಸ್ಥಳವನ್ನು ಅಣಿಮಾಡಿ, ಮಧ್ಯದಲ್ಲಿ ನೃತ್ಯಮೇಳದ ವರ್ತುಳವನ್ನು ಗುರುತಿಸಿ, ಅದರ ನಡುವೆ ಡೈಯೊನೈಸಸ್ಸನ ವೇದಿಕೆಯನ್ನು ನಿರ್ಮಿಸಲಾಗುತ್ತಿತ್ತು. ಮೇಳದವರ ಸಂಖ್ಯೆಯನ್ನು ಐವತ್ತರಿಂದ ಹನ್ನೆರಡಕ್ಕೆ ಈಸ್ಕಿಲಸ್ ಇಳಿಸಿದ. ಸಾಫೊಕ್ಲೀಸ್ ಹದಿನೈದಕ್ಕೆ ಏರಿಸಿದ. ಅವರನ್ನು ಚಚ್ಚೌಕ ಕ್ರಮದಲ್ಲಿ ನಿಲ್ಲಿಸುವ ಏರ್ಪಾಡಿತ್ತು. ಅವರು ನರ್ತಿಸುತ್ತ ಪ್ರವೇಶಿಸಿದೊಡನೆ ನಾಟಕದ ಪ್ರಾರಂಭ; ಕೊನೆಯಲ್ಲಿ ಅವರು ನರ್ತಿಸುತ್ತ ಕಣ್ಮರೆಯಾಗುವುದೇ ನಾಟಕದ ಅಂತ್ಯ. ಅವರ ಗೀತನಾಟ್ಯ ಆಮೇಲೆ ಚಿಕ್ಕ ನೇಪಥ್ಯದ ಮೇಲೆ ಪಾತ್ರಗಳ ಸಂವಾದ, ಪುನಃಗೀತನಾಟ್ಯ, ಅನಂತರ ಸಂವಾದ–ಹೀಗಿರುತ್ತಿತ್ತು. ನಾಟಕದ ಬೆಳೆವಣಿಗೆ. ಗೀತವೂ ನೃತ್ಯವೂ ನಾನಾ ಭೇದಗಳಿಂದ ಕೂಡಿರುತ್ತಿದ್ದವು.

ಸುಮಾರು ಹತ್ತು ಹದಿನೈದುಸಾವಿರ ಮಂದಿ ಪ್ರೇಕ್ಷಕರಾಗಿ ಕುಳ್ಳಿರುತ್ತಿದ್ದರು; ಯಾವ ಶುಲ್ಕವನ್ನೂ ಅವರು ಕೊಡಬೇಕಾದ್ದಿರಲಿಲ್ಲ. ಮೇಳದವರಿಗೂ ನಟರಿಗೂ ತಕ್ಕ ತರಬೇತು ಕೊಡುವುದು ಕವಿಯ ಜವಾಬ್ದಾರಿ; ಆಗೊಮ್ಮೆ ಈಗೊಮ್ಮೆ ಕವಿ ತನ್ನ ನಾಟಕದಲ್ಲಿ ತಾನೇ ಒಂದು ಪಾತ್ರವಹಿಸುತ್ತಿದ್ದ. ನಟರಿಗೆ ಗೊತ್ತಾದ ವೇತನ ಆಡಳಿತವರ್ಗದವರಿಂದ ಬಟವಾಡೆಯಾಗುತ್ತಿತ್ತು. ರಂಗಸಜ್ಜು ನಟರ ವೇಷಭೂಷಣ ಮುಂತಾದ ಪರಿಕರದ ಖರ್ಚನ್ನು ಚುನಾಯಿತ ಧನವಂತ ಹೊರುತ್ತಿದ್ದ. ನಾಟಕ ಕಾರದಲ್ಲಿ ಮೂವರನ್ನು ಆರಿಸಿಕೊಂಡು, ಅವರಲ್ಲಿ ಒಬ್ಬೊಬ್ಬನಿಂದಲೂ ಮೂರು ಗಂಭೀರನಾಟಕ ಮತ್ತು ಒಂದು ಮಿಶ್ರನಾಟಕ, ಹೀಗೆ ಒಟ್ಟು ನಾಲ್ಕರ ಕಟ್ಟು (ಟೆಟ್ರೋಲಜಿ) ಸಿದ್ಧವಾಗುವಂತೆ ಮಾಡಿ ಅಧಿಕಾರ ಸಂಪುಟ ಒಂದು ಸ್ಪರ್ಧೆ ಹೂಡುತ್ತಿತ್ತು. ಗೆದ್ದವನಿಗೂ ಧನವಂತನಿಗೂ ಕಿರೀಟದ ಬಹುಮಾನ. ನಟರು ಮೊಗವಾಡ, ರಜಾಯಿನಂಥ ಬಟ್ಟೆಯ ನಿಲುವಂಗಿ, ತಲೆಯ ಮೇಲೆ ಒಂದು ಕಿರೀಟ, ಕಾಲಿಗೆ ಮರದ ದಪ್ಪ ಅಟ್ಟೆಯ ದೊಡ್ಡ ಬೂಟು–ಇವುಗಳಿಂದ ಅಲಂಕೃತರಾಗಿ ಸುಮಾರು ಆರೂವರೆ ಏಳು ಅಡಿ ಎತ್ತರದವರಾಗಿ ಸೌಮ್ಯ ವೈಭವದ ನಿಧಾನ ಹೆಜ್ಜೆಯಿಂದ ಪರಿಣಾಮ ಬೀರುತ್ತಿದ್ದರು. ಸ್ತ್ರೀಪಾತ್ರಗಳಲ್ಲೂ ಗಂಡಸರೇ. ಪರಚಿತವಾದ ಪುರಾಣ ಕಥಾವಳಿಯಿಂದಲೇ ನಾಟಕಕ್ಕೆ ವಿಷಯವನ್ನು ಕವಿ ತೆಗೆದು ಕೊಳ್ಳಬೇಕಾಗಿತ್ತು. ಒಂದೇ ಮುಖ್ಯ ಘಟನಾವಳಿ, ಕ್ಲುಪ್ತಕಾಲದಲ್ಲೂ ಹೆಚ್ಚು ಕಡಿಮೆ ಒಂದೇ ಸ್ಥಳದಲ್ಲೂ ಅದು ಜರುಗಬೇಕು. ಕೆಲವೇ ಪಾತ್ರಗಳ ಸಂಭಾಷಣೆ ಇರಬೇಕು. ಘೋರ ಘಟನೆ ರಂಗದ ಮೇಲೆ ನಡೆಯಕೂಡದು, ವಾದವಿವಾದವೇ ಕೃತ್ಯ, ಭಾಷೆ ಛಂದಸ್ಸುಗಳು ನಿಯಮಬದ್ಧ–ಹೀಗೆ ಕಟ್ಟುಕಟ್ಟಳೆ ಇದ್ದಿತಾಗಿ ಕವಿಯ ಸ್ವಾತಂತ್ರ್ಯಕ್ಕೆ ಸಾಕಷ್ಟು ಆಸ್ಪದವಿರಲಿಲ್ಲ. ಆದರೂ ಗ್ರೀಕ್ ಗಂಭೀರನಾಟಕ ಮಾನವ ಸ್ವಭಾವದ ಮೂಲ ಚಲನವಲನಗಳ ನಿಕಟ ಪರಿಚಯವನ್ನು ನಮಗೆ ಮೂಡಿಸುತ್ತದೆ. ಅದನ್ನು ಸರಿಗಟ್ಟುವ ಮಹಾಸಾಹಿತ್ಯ ಈಚಿನ ಯುಗಗಳಲ್ಲಿ ದಿಟವಾಗಿ ಅಪರೂಪ.

ಪ್ರ.ಶ.ಪೂ. ೫ನೆಯ ಶತಮಾನ ಗ್ರೀಕ್ ಗಂಭೀರನಾಟಕದ ಸುವರ್ಣಯುಗ. ಪ್ರ.ಶ.ಪೂ. ಸು. ೪೯೯ ರಿಂದ ೪೦೩ ಅವಧಿಯಲ್ಲಿ ಆಗಿಬಂದ ಮೂವರು ಮಹಾ ಕವಿಗಳೇ ಅದನ್ನು ನಡೆಸಿಕೊಂಡವರು, ಗಂಭೀರನಾಟಕಕಾರತ್ರಯ ಎಂಬ ಘನಮರ್ಯಾದೆಯನ್ನು ಪಡೆದುಕೊಂಡವರು; ಅವರಾರೆಂದರೆ ಈಸ್ಕಿಲಸ್, ಸಾಫೊಕ್ಲೀಸ್, ಯುರಿಪಿಡೀಸ್, ಅವರಿಗೆ ಕೊಂಚ ಪೂರ್ವದಲ್ಲಿ ಇದ್ದು ನಾಟಕ ರಚಿಸಿದ ಫ್ರೀನಿಕಸ್, ಪ್ರಾಟಿನಸ್, ಕೀರಿಲಸ್ಸರು ಕೇವಲ ನಾಮಾವಶೇಷರಾಗಿದ್ದಾರೆ. ಸಮಕಾಲೀನರಾಗಿದ್ದ ಇಯಾನ್, ಆಕಿಯುಸ್, ಆಗಥಾನರೂ ಕೆಲವು ಚೂರುಪಾರುಗಳಿಂದ ಉಳಿದಿದ್ದಾರೆಯೇ ವಿನಾ ಪೂರ್ಣ ಗ್ರಂಥಗಳಿಂದ ಅಲ್ಲ. ಮೋರಿಕಸ್, ನೊತಿಪ್ಪಸ್, ಅಕೆಸ್ಟರ್, ಥಿಯಾಗ್ನಿಸ್ ಮುಂತಾದ ಇತರ ಕೆಲವು ನಾಮಾಂಕಿತಗಳು ಆರಿಸ್ಟಾಫನೀಸನ ಅವಹೇಳನದಿಂದ ತಿಳಿದುಬರುತ್ತವೆಯೇ ಹೊರತು ಅವರ ಒಂದು ಚೂರು ಕೃತಿ ಕೂಡ ಉಳಿದುಬಂದಿಲ್ಲ.

ಪ್ರ.ಶ.ಪೂ. ೪ನೆಯ ಶತಮಾನದಲ್ಲಿ ಗಂಭೀರನಾಟಕದ ವಾರ್ಷಿಕ ಪ್ರದರ್ಶನ ಏನೂ ಕಡಿಮೆಯಾಗಲಿಲ್ಲ. ನಾಟಕಕಾರತ್ರಯದ ಕೃತಿಗಳು ಮತ್ತೆಮತ್ತೆ ಅಪೇಕ್ಷಿತವಾದುವು, ಹಿತವಾದುವು. ಅಲ್ಲದೆ ಹೊಸ ನಾಟಕಗಳ ರಚನೆಗೂ ವಿಶೇಷ ಪ್ರೋತ್ಸಾಹ ಸಿಕ್ಕಿತು. ಹಾಗಾಗಿ ನಾಟಕಕಾರರು ಅತಿ ಚುರುಕಿನಿಂದ ರೂಪಕ ಕಟ್ಟಿ ಹೊರತರಬೇಕಾಗಿ ಬಂತು. ಹೇರಳವಾಗಿಯೂ ಕಟ್ಟಬೇಕಾಯಿತು. ಥಿಯೊಡೆಕ್ಟೀಸ್ ೫೦, ಕಾರ್ಸಿನಸ್ ೧೬೦, ಆಸ್ಟಿಡಾಮಸ್ ೨೪೦–ಈ ರೀತಿ ಅವರ ಬರೆಹ ಪಟ್ಟಿಯಾಗಿದೆ. ಗುಣದಲ್ಲಾದರೂ ಅವಾವುದಕ್ಕೂ ರವೆಯಷ್ಟು ಮೆಚ್ಚಿಕೆಯೂ ಲಭಿಸಲಾಗದು. ನೂರಾರು ಕೃತಿಗಳಲ್ಲಿ ಒಂದೂ ಉಳಿದುಬಂದಿಲ್ಲ. ಈಸ್ಕಿಲಸ್ ಸಾಫೊಕ್ಲೀಸ್ ಯುರಿಪಿಡೀಸರು ಬರೆದವೆಂದು ನಮೂದಿತವಾಗಿರುವ ಕೃತಿಗಳ ಸಂಖ್ಯೆ ಕ್ರಮವಾಗಿ ೯೦, ೧೨೩, ೯೨; ಅಲೆಗ್ಸಾಂಡ್ರಿಯನ್ ಅವಧಿಯಲ್ಲಿ ಪ್ರಚುರದಲ್ಲಿದ್ದ ಅವರ ಕ್ರಮವಾಗಿ ೭೨. ದೊಡ್ಡಸಂಖ್ಯೆ ೭೮, ಒಟ್ಟು ೩೦೫ರಲ್ಲಿ ಈಗ ಲಭ್ಯವಾಗಿರುವುವು ೩೩; ಕ್ರಮವಾಗಿ ೭, ೭, ೧೯–ಅಷ್ಟೆ. ಆ ಶ್ರೇಷ್ಠತ್ರಯ ಹೊರ ತಂದ ಅಲೆಗ್ಸಾಂಡ್ರಿಯನ್ ಅವಧಿಯಲ್ಲಿ ಸುಮಾರು ೨೪೦ ಆದರೂ ಇದ್ದಿರಬೇಕು. ಆಗಿರುವ ನಷ್ಟ ಆಗಾಧವೆಂದೇ ಹೇಳಬೇಕು.

ಇರುವ ಅವರ ರೂಪಕಗಳಿಂದ ಅವರ ಬೇರೆ ಬೇರೆ ಶಕ್ತಿಯನ್ನೂ ಸ್ವಂತ ಲಕ್ಷಣಗಳನ್ನೂ ಅರಿಯುವುದು ಸಾಧ್ಯ. ಒಬ್ಬನಿಂದ ಇನ್ನೊಬ್ಬನಿಗೆ ಗಂಭೀರ ನಾಟಕ ಸರಿಯುವಾಗ ಅದಕ್ಕಾದ ವಿಕಾಸ ಸಹಜವೂ ತರ್ಕಸಮ್ಮತವೂ ಸಮರ್ಪಕವೂ ಆಗಿತ್ತು. ಅದರ ಎರಡು ಭಾಗಗಳಾದ ಸಂಭಾಷಣೆ ಮತ್ತು ಸಂಗೀತಗಳಲ್ಲಿ ಎರಡನೆಯದಕ್ಕೆ ಸ್ವಾಭಾವಿಕವಾಗಿಯೇ ಇಳಿಮುಖ. ಈಸ್ಕಿಲಸ್ಸನಲ್ಲಿ ಕೋರಸ್ ಭಾಗ ೩/೫ ರಿಂದ ೨/೫ ಕ್ಕೂ ಸಾಫೊಕ್ಲೀಸನಲ್ಲಿ ೧/೩ ರಿಂದ ೧/೬ ಕ್ಕೂ ಯುರಿಪಿಡೀಸನಲ್ಲಿ ೧/೭ ರಿಂಧ ೧/೧೦ ಕ್ಕೂ ಇಳಿದು ಕಡಿಮೆಯಾದದ್ದು ಎಷ್ಟೊಂದು

ಯುಕ್ತ ಬದಲಾವಣೆ. ಮೂವರಿಗೂ ಮನುಜವರ್ಗಕ್ಕೂ ದೇವವರ್ಗಕ್ಕೂ ಇರುವ ಸಂಬಂಧ ಮುಖ್ಯ ವಿಚಾರವಾಗಿದ್ದರೂ ಅದರ ಪ್ರತಿಪಾದನೆಯಲ್ಲಿ ಮಾನವಾಂಶಕ್ಕೆ ಕವಿಯ ಲಕ್ಷ್ಯ ಹೆಚ್ಚು ಹೆಚ್ಚಾದದ್ದನ್ನೂ ಅವನ ದೃಷ್ಟಿ ಸ್ಥೂಲದಿಂದ ಸೂಕ್ಷ್ಮವಾದ್ದನ್ನೂ ಕಾಣುತ್ತೇವೆ. ಈಸ್ಕಿಲಸ್ಸನ ಪಾತ್ರಗಣ ದೇವತೆಗಳು ಉಪ ದೇವತೆಗಳು ಅತಿಮಾನವರು. ಸಾಪೋಕ್ಲೀಸನದು ಆದರ್ಶ ಮಾನವರು, ಯುರಿಪಿಡೀಸನದು ಮಾನವರು. ಮೂವರ ಗಂಭೀರ ಸಿದ್ಧಾಂತಗಳಲ್ಲೂ ಅದೇ ಬಗೆಗೆ ವ್ಯತ್ಯಾಸವಿದೆ. ಮಾಡುವವ ಮನುಷ್ಯ; ಮಾಡಿದ್ದನ್ನು ಉಣ್ಣುವವ ಮನುಷ್ಯ ದೇವತೆಗಳನ್ನು ಬಯ್ಯುವುದೇಕೆ? ಅತಿಗೆ ಹೋಗದೆ ಮಿತದಲ್ಲಿರುವ ನರನಿಗೆ ಸದಾ ನೆಮ್ಮದಿ-ಎಂದು ಈಸ್ಕಿಲಸ್ ಮನಗಂಡು, ಮನಸ್ಸಿಟ್ಟು ಉಪದೇಶಿಸಿದ. ಸಾಪೋಕ್ಲೀಸ್ ಮುಂದೆ ನಡೆದು, ನಿರಪರಾಧಿಗೂ ಸಂಕಟ ಬರಬಹುದು. ಅದು ವಿಧಿಯ ಲೀಲೆ; ಬಂದದ್ದನ್ನು ಸ್ಥೈರ್ಯದಿಂದ ತಾಳಿ ಮನುಷ್ಯ ಉದಾತ್ತನಾಗಬೇಕು ಎಂದು ಹೇಳಿದ. ಯುರಿಪಿಡೀಸ್, ನೋವೂ ಬರುವುದರಲ್ಲಿ ದೇವತೆಗಳ ಕೈವಾಡ ಇದ್ದೇ ಇದೆ; ಮನುಷ್ಯನ ಸ್ಥಿತಿಯನ್ನು ಕುರಿತು ಎಷ್ಟು ಕನಿಕರಪಟ್ಟರೂ ಸಾಲದು ಎಂದು ಒತ್ತಿನುಡಿದ. ಈಸ್ಕಿಲಸ್ಸನ ಹಿರಿಯ ಗುಣ ಮಹಾಘನತೆ; ಅವನ ಮಹೋನ್ನತ ಶೈಲಿಯ ವಾಗ್‌ವೈಭವ ಅವನಿಗೇ ಮೀಸಲು. ಮಿತಿ, ಸಂಕ್ಷಿಪ್ತತೆ, ಅರ್ಥಪೂರ್ಣ ಸರಳತೆ, ತುಂಬಿಸೂಸುವ ಧ್ವನಿ, ಮಾಧುರ್ಯ- ಇವು ಸಾಪೋಕ್ಲೀಸನ ಲೇಖನವಿಧಾನ; ಶಿಷ್ಟತೆಗೆ ಅತ್ಯುತ್ಕೃಷ್ಟ ಉದಾಹರಣೆ. ಯುರಿಪಿಡೀಸನ ಧೋರಣೆ ಮನುಜ ಸಮಾಜಕ್ಕೆ ಹತ್ತಿರ ಹತ್ತಿರ. ಗೊಂದಲದಲ್ಲಿ ಸಿಕ್ಕಿಬಿದ್ದು ರಾಗಗ್ರಸ್ತರಾದ ಹೆಣ್ಣುಗಂಡುಗಳ ಮಾತುಕತೆಯನ್ನು ಕಾವ್ಯಮಯವಾಗಿ ಪರಿಷ್ಕರಿಸುವ ಜಾಣ್ಮೆ ಅವನಿಗೆ ದೈವದತ್ತವಾಗಿತ್ತು; ಮನಮೋಹಕವಾದ ಇಂಪನ್ನು ಪದಸರಣಿಗೆ ಕೂಡಿಸುವ ಕೌಶಲವೂ ಅವನಿಗಿತ್ತು. ಮುಂದಣ ಶತಮಾನಗಳಲ್ಲಿ ಅವನಿಗೇ ಅತ್ಯಧಿಕ ಪ್ರತೀತಿ.

೨ ಮಿಶ್ರನಾಟಕ: ಅನುಬಂಧವಾಗಿ ಅಥವಾ ಮುಕ್ತಾಯವಾಗಿ ಪ್ರತಿಯೊಬ್ಬ ಕವಿಸ್ಪರ್ಧಿಯೂ ಬರೆಯಲೇಬೇಕಾಗಿದ್ದ ಮಿಶ್ರನಾಟಕ ಒಂದು ಸಮಸ್ಯೆಯಾಗಿದೆ. ಕಾರಣ, ನಮಗೆ ಲಭ್ಯವಾಗಿರುವ ಮಿಶ್ರನಾಟಕ ಒಂದೇ ಒಂದು – ಯುರಿಪಿಡೀಸನ ಸೈಕ್ಲಾಪ್ಸ್. ಅದರ ಕಥಾವಸ್ತು, ಟ್ರಾಯಿನಿಂದ ಹಿಂದಿರುಗುವಾಗ ಆಡಿಸಿಯಸ್ ತನ್ನ ಜೊತೆಯವರೊಂದಿಗೆ ಒಂದೇ ಕಣ್ಣಿನ ದೈತ್ಯ ಪಾಲಿಫೀಮನಿಗೆ ಸಿಕ್ಕಿಬಿದ್ದು , ಅವನಿಗೆ ದ್ರಾಕ್ಷಾಮದ್ಯ ಕುಡಿಸಿ ನಿದ್ರಿಸುವಂತೆ ಮಾಡಿ, ದಪ್ಪ ಕೋಲನ್ನು ಚೂಪು ಮಾಡಿ ಬೆಂಕಿಯಲ್ಲಿ ಕಾಸಿ, ಅದನ್ನು ದೈತ್ಯನ ಕಣ್ಣಿನೊಳಕ್ಕೆ ಚುಚ್ಚಿ ಕುರುಡಾಗಿಸಿ ಅವನ ಹಿಡಿತದಿಂದ ತಪ್ಪಿಸಿಕೊಂಡು ಯಾನ ಕೈಗೊಂಡ ಆಖ್ಯಾಯಿಕೆ. ನಾಟಕಕ್ಕೆ ನೃತ್ಯಮೇಳ, ಪಾನದೇವತೆ ಬಾಸ್ಸನ ಅನುಯಾಯಿಗಳಾದ ಸ್ಯಾಟಿರ್ ಮಂದಿ. ಅವರಲ್ಲಿ ಮುದುಕನಾದ ಸೈಲಿನಸ್ ಇನ್ನೊಂದು ಪಾತ್ರ. ಒಬ್ಬ ವಿದೂಷಕನಂತೆ ಅವನ ಚಿತ್ರಣವಾಗಿದೆ. ಅವನನ್ನೂ ಸ್ಯಾಟಿರರನ್ನೂ ಬಲಾತ್ಕಾರದಿಂದ ಹಿಡಿದುತಂದು ಪಾಲಿಫೀಮ್ ತನ್ನ

ಗುಲಾಮರನ್ನಾಗಿಸಿಕೊಂಡಿದ್ದಾನೆ. ಅಡಿಸಿಯಸ್ಸಿಗೆ ಅವನು ಕೊಟ್ಟ ಮದ್ಯಕ್ಕೆ ಪ್ರತಿಯಾಗಿ ದೈತ್ಯನ ಹಾಲು, ಚೀಸು, ಮಾಂಸ ಮೊದಲಾದವನ್ನು ಕೊಟ್ಟು, ದೈತ್ಯ ಬಂದೊಡನೆ ಅವನ್ನು ಆಗಂತುಕರೇ ಅಪಹರಿಸಿದರೆಂದು ಸುಳ್ಳಾಡಿ ತಲೆತಪ್ಪಿಸಿಕೊಳ್ಳುತ್ತಾನೆ; ದೈತ್ಯನಿಗೆ ಕಾಣದಂತೆ ಮದ್ಯಕ್ಕೆ ಕೈಹಾಕುವ ಅವನ ಪ್ರಯತ್ನ ಹುಡುಗಾಟದಂತೆ ಹಾಸ್ಯಾಸ್ಪದ. ಸ್ಯಾಟಿರರು ವಿನೋದಕ್ಕಿಂತ ಹೆಚ್ಚಾಗಿ ವಿಲಾಸಿಗಳು; ಅವರದ್ದು ಕುಡಿತ ಕುಣಿತ ಸಂಭೋಗಗಳ ಮಾತೇ ಮಾತು. ಕೋರಸ್ಸಿನ ನರ್ತನ ರಭಸ ಆವೇಶದಿಂದ ಕೂಡಿದ್ದಾಗಿರಬೇಕು; ಆ ಸೂಚನೆ ಇದೆ. ಪಾಲಿಫೀಮ್ ಆಡಿಸಿಯಸ್ಸಿನ ಜನರಲ್ಲಿ ಮೈತುಂಬಿಕೊಂಡ. ಇಬ್ಬರನ್ನು ಬಡಿದು ಕೊಂದು ಅವರ ಮಾಂಸವನ್ನು ಸುಟ್ಟು ಬೇಯಿಸಿ ಭಕ್ಷಿಸುವ ವೃತ್ತಾಂತ ಕಥಿತವಾಗುತ್ತದೆ. ಕುರುಡನಾದ ಪಾಲಿಫೀಮ್ ಅಡಿಸಿಯಸ್ ಮತ್ತು ಇತರರನ್ನು ಹಿಡಿಯಲು ತಡಕಾಡುವುದು. ಬಲಗಡೆ ಇದ್ದಾರೆ, ಹಿಂದೆ ಇದ್ದಾರೆ ಎಂದು ಸ್ಯಾಟಿರರು ಹುಸಿಮಾತು ಹೇಳುವುದು. ಅವನು ಹಾಗೆ ನುಗ್ಗಿ ಗವಿಯ ಕಲ್ಲಿಗೆ ತಲೆ ಚಚ್ಚಿಕೊಳ್ಳುವುದು–ಇಂಥ ವಿನೋದವೂ ಉಂಟು. ಏರಿಯನ್ ರಚಿಸಿದ ಒಂದು ನೃತ್ಯಗೀತಕ್ಕೆ ಹೆಸರು ಟಿರ್ಬ್ಯಾಸಿಯ; ಅದು ಸ್ಯಾಟಿರರು ಸೈಲಿನೈಗಳ ಅತ್ಯಾಮೋದದ ದಾಂಧಲೆ ಕುಣಿತ. ಅದರಿಂದ ಈ ಮಿಶ್ರನಾಟಕ ಪ್ರಾಯಶಃ ಬೆಳೆದುಬಂತು. ಗಂಭೀರನಾಟಕವನ್ನು ಹಲವು ಘಂಟೆ ನೋಡಿ ನಲುಗಿದ ಪ್ರೇಕ್ಷಕರಿಗೆ ಕೇವಲ ೭೦೦ ಪಂಕ್ತಿಗಳ ಕಿರುನಾಟಕ ಹಾಸ್ಯ ಗಲಭೆ ಭಾವಾವೇಶಗಳನ್ನು ತುಸು ಹೊತ್ತು ಒದಗಿಸಿ ಚಿತ್ತಸ್ವಾಸ್ಥ್ಯ ಪಡೆಯುವುದಕ್ಕೆ ಸಹಾಯಕ ವಾಗುತ್ತಿತ್ತೊ ಏನೊ.

೩. ಹರ್ಷನಾಟಕ: ಪ್ರಾಚೀನ ಗ್ರೀಕ್ ಹರ್ಷನಾಟಕ ಗಂಭೀರನಾಟಕದಂತೆ ಏಕರೂಪದ್ದಾಗಿರಲಿಲ್ಲ. ಹಳೆಯದು, ನಡುವಣದು, ಹೊಸದು ಎಂಬ ಮೂರು ರೂಪಗಳನ್ನು ಅದು ತಾಳಿತು. ಪ್ರ.ಶ.ಪೂ. ಸು. ೫೨೦ ರಿಂದ ಪ್ರ.ಶ.ಪೂ ೪೦೦ರ ವರೆಗೆ ಹಳೆಯದರ ಅವಧಿ; ಪ್ರ.ಶ.ಪೂ. ೪೦೦ರಿಂದ ಪ್ರ.ಶ.ಪೂ. ಸು. ೩೩೬ರ ತನಕ ನಡುವಣದರ ಅವಧಿ; ಅಲ್ಲಿಂದ ಸುಮಾರು ನೂರು ವರ್ಷ, ಎಂದರೆ ಪ್ರಾಚೀನ ರೋಮನರು ಗ್ರೀಕರ ಸಾಹಿತ್ಯವನ್ನು ಅನುಕರಣ ಮಾಡತೊಡಗುವ ವರೆಗೆ. ಹೊಸದರ ಅವಧಿ. ಅನೇಕರು ಹರ್ಷನಾಟಕವನ್ನು ವಿಪುಲವಾಗಿ ರಚಿಸಿ ಪ್ರದರ್ಶಿಸಿದ್ದರೂ ಆರಿಸ್ಟಾಫನಿಸನ ಕೃತಿಗಳಲ್ಲಿ ಹನ್ನೊಂದುನ್ನು ಬಿಟ್ಟರೆ ಮತ್ತಾವ ಕೃತಿಯೂ ಲಭ್ಯವಾಗಿಲ್ಲ. ಅಷ್ಟೇ ಅಲ್ಲ. ನಡುವಣ ಹರ್ಷನಾಟಕ ಹೇಗಿತ್ತೆಂದು ಊಹಿಸಬಹುದೇ ಹೊರತು ಅದರ ಯಥಾರ್ಥ ಚಿತ್ರ ದೊರೆಯುವುದಿಲ್ಲ. ಹೊಸ ಹರ್ಷನಾಟಕದ ಗ್ರೀಕ್ ನಿದರ್ಶನ ಯಾವುದೂ ಇಲ್ಲದಿದ್ದರೂ ಪ್ಲಾಟಸ್ ಸ್ಟಾಷಿಯಸ್‌ಟೆರೆನ್ಸ್ ಎಂಬ ಪ್ರಾಚೀನ ರೋಮನರ ಹರ್ಷನಾಟಕ ಅದರ ಮಾದರಿಯಲ್ಲಿ ಕಟ್ಟಿದ್ದಾದ್ದರಿಂದ ಅದರ ಲಕ್ಷಣ ನಮಗೆ ತಿಳಿಯುತ್ತದೆ. ಅಷ್ಟೊಂದು ವಿನೋದ ನಾಟಕಗಳ ನಷ್ಟ ಹೇಗಾಯಿತೊ ಏಕಾಯಿತೊ ಹೇಳಲಾಗದು.

ಕಾಮೆಡಿ (ಹರ್ಷನಾಟಕ) ಎಂಬ ಶಬ್ದ ಕೋಮೆ ಎಂದರೆ ಹಳ್ಳಿ ಎಂಬುದರಿಂದ ಉತ್ಪನ್ನವಾಯಿತೆಂದೂ ಹಳ್ಳಿಗಾಡಿನವರು ಗುಂಪುಗಂಪಾಗಿ ಹಾಡಿ ಲೇವಡಿ ಕುಣಿತವನ್ನು ಮೆರೆಯಿಸುತ್ತ ನೋಟಕರಿಗೆ ಸಂತಸ ಉಂಟುಮಾಡುತ್ತಿದ್ದರೆಂದೂ ಅದರಿಂದ ಕಾಮೆಡಿಯ ಪ್ರಾರಂಭವೆಂದೂ ಆರಿಸ್ಟಾಟಲ್ ವಿವರಿಸಿದ. ಆ ಸ್ವಚ್ಛಂದ ತಂಡದವರು ಬಹುವಾಗಿ ಶಿಶ್ನಗೀತ ಗಾಯನಮಾಡುತ್ತ ಶಿಶ್ನಲಾಂಛನವನ್ನು (ಫ್ಯಾಲಸ್) ಅಲಂಕರಿಸಿ ಎತ್ತಿಹಿಡಿಯುತ್ತಿದ್ದುದರಿಂದ ಅವರಿಗೆ ನಗರಗಳಲ್ಲಿ ಅವಕಾಶ ಸಿಕ್ಕದೆ ಹೋಯಿತು; ಕ್ರಮೇಣ ಆ ಅಶ್ಲೀಲತೆ ನಗರಗಳನ್ನೂ ಪ್ರವೇಶಿಸಿತು. ಇದೂ ಅವನ ಅಭಿಪ್ರಾಯ. ಆದರೆ ಕಾಮೆಡಿ ಪದ ಬಂದದ್ದು ಕೋಮೆಯಿಂದಲ್ಲ; ಕಾಮಾಸ್ (ಬಹುವಚನ ಕಾಮಾಯ್) ಪದದಿಂದ, ಅದರ ಅರ್ಥ ಮೋದಗಾರರು (ರೆವೆಲರ್ಸ್.) ದ್ರಾಕ್ಷಿಯನ್ನು ಕೊಯ್ದು ಮದ್ಯಮಾಡುವ ಸಮಯದಲ್ಲೂ ಬೆಳೆಯನ್ನು ಕೊಯ್ದು ಕಣಜಕ್ಕೆ ತುಂಬುವಾಗಲೂ ಜನರಿಗೆ ಸ್ವಾಭಾವಿಕವಾಗಿ ಸುಗ್ಗಿಯ ಉಲ್ಲಾಸ. ಕುಡಿತ ಕುಣಿತ ಪೈರುಪಚ್ಚೆಗಳ ಆಧಿದೇವತೆಯಾದ ಡೈಯೊನೈಸಸನನ್ನು ಭಜಿಸುತ್ತ ಒಂದೆರಡು ದಿನ ಆಮೋದದ ಹಬ್ಬವನ್ನು ಆಚರಿಸುತ್ತಿದ್ದರು; ಅದರ ಅಂಗವಾಗಿ ಪ್ರಜೋತ್ಪತ್ತಿಯ ಸಂಕೇತಕ್ಕೆ ಅವರು ಮುಚ್ಚುಮರೆಯಿಲ್ಲದೆ ಪೂಜೆ ಸಲ್ಲಿಸಿದುದು ಅಚ್ಚರಿಯಲ್ಲ. ಅಷ್ಟೇಕೆ, ಕಾಮೆಡಿ ಕಲಾತ್ಮಕವಾಗಿ ಅಭಿವೃದ್ಧಿ ಹೊಂದಿದ ಮೇಲೂ ಅದರ ನಟರು ದೊಡ್ಡ ಕೃತಕ ಶಿಶ್ನವನ್ನು ತಮ್ಮ ವೇಷದ ಭಾಗವಾಗಿ ಕಟ್ಟಿಕೊಳ್ಳುತ್ತಿದ್ದರು. ಕಾಮೆಡಿ ಅಂತ್ಯವಾಗುವುದು ನಾಯಕನಾಯಕಿಯರ ವಿವಾಹದಿಂದ; ಗ್ರೀಕರಲ್ಲೂ ಅವರ ಶಿಷ್ಯರಾದ ರೋಮನರಲ್ಲೂ ಕೆಲವು ವೇಳೆ ಯಾವುದೊ ಹುಡುಗಿಯನ್ನು ತಂದು ನಾಯಕನಿಗೆ ಮದುವೆಮಾಡಿಸುವುದೂ ನಾಟಕದಲ್ಲಿ ಜರುಗುತ್ತಿತ್ತು. ಮೈಥ್ಯಾನದ ವಿಚಾರ ನಿರ್ಲಜ್ಜೆಯಿಂದ ಪ್ರಕಟಿತವಾಗುತ್ತಿತ್ತು, ನಟರ ಮೂಲಕ. ಆರಿಸ್ಟಾಫನೀಸ್ ತನ್ನಿಂದ ಹರ್ಷನಾಟಕದ ಶುದ್ಧೀಕರಣ ಮತ್ತು ಅಂದಗೊಳಿಕೆ ಆಯಿತು, ಎಂದು ಹೇಳಿದ ಮಾತಿನಲ್ಲಿ ಅವನ ಹಿಂದೆ ಅದು ಹೇಗಿದ್ದಿತೆಂಬುದು ವೇದ್ಯವಾಗುತ್ತದೆ. ಗಂಭೀರನಾಟಕಕ್ಕಿಂತ ಹರ್ಷನಾಟಕ ವಾಸ್ತವಿಕ ಜೀವನಕ್ಕೆ ಬಲು ಹತ್ತಿರವಾದ್ದು.

ಕಾಮೆಡಿ ಮೊದಲು ಬೆಳೆದುಬಂದದ್ದು ಸಿಸಿಲಿಯಲ್ಲಿ, ಆಮೇಲೆ ಆಟಿಕದಲ್ಲಿ. ನಾನಾ ರೀತಿಯ ವಿನೋದ ದೃಶ್ಯಗಳೂ ಪ್ರಸಂಗಗಳೂ ಮೂಕಾಭಿನಯಗಳೂ ಮೆಗಾರಾ ಮೊದಲಾದ ಸ್ಥಳಗಳಲ್ಲಿ ಎದ್ದುಬಂದುವು. ಪ್ರ.ಶ.ಪೂ ಸು. ೫೮೦ರ ಹೊತ್ತಿಗೇ ಸುಸಾರಿಯನ್ ಎಂಬಾತನ ಮೆಗಾರಾ ಪ್ರಹಸನಕ್ಕೆ ಪ್ರಸಿದ್ಧಿ ಬಂದಿತ್ತು. ಪ್ರ.ಶ.ಪೂ ಸು. ೫೨೬ರಲ್ಲಿ ಜನಿಸಿದ ಎಪಿಕಾರ್ಮಸ್ ಪಡೆದ ಖ್ಯಾತಿ ದೊಡ್ಡದು. ಆತ ಮೆಗಾರಾದಲ್ಲಿದ್ದು ಆಮೇಲೆ ಸಿರಕ್ಯೂಸಿಗೆ ಹೋದ. ಅವನ ಕೃತಿಗಳು ಮೂರು ಬಗೆಯವು: ಪುರಾಣ ಕಥಾವಳಿಯ ಶ್ರೇಷ್ಠ ಪುರುಷರನ್ನು ನಕಲಿಗೈಯುವ ಅಣಕನಾಟಕ; ಜನಜೀವನದ ಸಾಮಾನ್ಯ ಲಘುಪ್ರಸಂಗಗಳ ದೃಶ್ಯಾವಳಿ; ತತ್ತ್ವ ಪ್ರಮುಖವಾದ ವಾದವಿವಾದ. ತ್ವರೆ ಗಡಿಬಿಡಿ ಓಡಾಟಗಳಿಂದ ಅವನ ನಾಟಕ

ತುಂಬಿರುತ್ತಿತ್ತಂತೆ. ಇನ್ನೊಬ್ಬ ನಾಟಕಕಾರ ಸೊಫ್ರಾನ್; ಗಂಡು ಮೈಮ್, ಹೆಣ್ಣು ಮೈಮ್ ಎಂಬ ಎರಡು ಬಗೆಯ ಕೃತಿ ಅವನಿಂದ ರಚಿತವಾದುವು. ಅವನಿಗೂ ಪ್ರಖ್ಯಾತಿಯಿತ್ತು. ಸಿಸಿಲಿಯ ವಿನೋದನಾಟಕದ ಪ್ರಭಾವ ಆಟ್ಟಿಕದ ಮೇಲೂ ಬಿದ್ದಿತೆಂಬುದು ನಿಸ್ಸಂದೇಹ.

ಆದರೂ ಹರ್ಷನಾಟಕ ಕಲಾಪೂರ್ಣವಾದದ್ದೂ ಉತ್ತಮ ಪ್ರಗತಿ ಹೊಂದಿದ್ದೂ ಆಟಿಕದ ಪ್ರಧಾನಪಟ್ಟಣವೂ ಪ್ರಾಚೀನ ಗ್ರೀಕರ ಸಮಸ್ತಸಂಸ್ಕೃತಿಯ ಏಕೈಕ ಕೇಂದ್ರವೂ ಆದ ಅಥೆನ್ಸಿನಲ್ಲಿ. ಪ್ರ.ಶ.ಪೂ. ಸು. ೪೮೬ರಂದು ಹರ್ಷನಾಟಕಕ್ಕೆ ಅಧಿಕೃತವಾಗಿ ಕೋರಸ್ಸು ಸಿಕ್ಕಿತು; ಎಂದರೆ ರಾಷ್ಟ್ರದ ಡೈಯೊನೈಸಿಯ ಲೀನಿಯ ಉತ್ಸವ ಸಮಯದಲ್ಲಿ ಅದೂ ಪ್ರದರ್ಶನಗೊಳ್ಳಬೇಕೆಂದು ನೇಮಕವಾಯಿತು. ಐದು ಕವಿಗಳಿಗೆ ಒಬ್ಬೊಬ್ಬರೂ ಒಂದೊಂದು ಕೃತಿ ಆಡಿಸುವಂತೆ ಏರ್ಪಾಡು. ಗೆದ್ದವನಿಗೆ ಬಹುಮಾನ. ಅವರು ಗಂಭೀರನಾಟಕದ ವಸ್ತುಸಂವಿಧಾನವನ್ನೇ ಅನುಕರಿಸಿ ಹರ್ಷನಾಟಕಕ್ಕೂ ಒಂದು ಅಂಗಾಂಗ ಸಂಯೋಜನೆಯನ್ನು ನೆರವೇರಿಸಿದರು. ಮೋದಗಾರರಿಂದ ಇಳಿದುಬಂದಿದ್ದ ಪರಿಹಾಸ ಚತುರೋಕ್ತಿ ವ್ಯಕ್ತಿವಿಡಂಬನ ಗೇಲಿಯ ಜೊತೆಗೆ ರಾಜಕೀಯ ಸಾಮಾಜಿಕ ಸಾಹಿತ್ಯಕ ಕಟುವಿಮರ್ಶೆಯನ್ನೂ ಸೇರಿಸಿದರು. ದೇವತೆಯ ಹಬ್ಬವಾದ್ದರಿಂದ ಕೋರಸ್ಸಿನ ನೃತ್ಯಗೀತ ಕಡ್ಡಾಯವಾಗಿ ಇರಬೇಕಾಯಿತು. ಹೀಗೆ ಕಾವ್ಯ ನಾಟ್ಯ ಸಂಗೀತ ಚಾಟೂಕ್ತಿ ಚರ್ಚೆ ಉಪದೇಶ ಭಾಷಣ ವಿಡಂಬನೆ ಮೊದಲಾದ ಅಂಶಗಳ ಕೂಟವಾದ್ದು ಹಳೆಯ ಹರ್ಷನಾಟಕದ ಸ್ವಂತಿಕೆ, ಸ್ವಾರಸ್ಯ, ಸೊಗಸು. ಕೋರಸ್ಸಿನ ಸಂಖ್ಯೆ ೨೪; ಕೆಲವು ಸಾರಿ ಅದು ೧೨, ೧೨ ಆಗಿ ಇಬ್ಭಾಗವಾಗುತ್ತಿತ್ತು, ಮುಖ್ಯವಾಗಿ ಗಂಡು ಹೆಣ್ಣುಗಳ ಸಮಾಗಮ ಅವಶ್ಯಕವಾದಾಗ. ಆದಿಯಲ್ಲಿ ಒಂದು ಪೀಠಿಕೆ, ಆಮೇಲೆ ಪಕ್ಷಿಗಳಂತೆ ವಸನ ಧರಿಸಿದ ನೃತ್ಯಮೇಳದ ಪ್ರವೇಶ, ಅನಂತರ ನಾಟಕದ ಮುಖ್ಯವಿಷಯವಾದ ಒಂದು ಸೆಣಸಾಟ, ಅನಂತರ ನಮಗೆ ವಿಸ್ಮಯ ಹಿಡಿಸುವ ಒಂದು ವಿಚಿತ್ರ ಅಂಶ: ಮುಂಬರುವಿಕೆ (ಪ್ಯರಾಬಸಿಸ್). ಅದರಲ್ಲಿ ಮುಖ್ಯ ಪಾತ್ರವೂ ಪ್ರತ್ಯಕ್ಷವಾಗಿ ಕವಿಯೊ ರಂಗದ ಮುಂಭಾಗಕ್ಕೆ ಬಂದು ನಾನಾ ವಿಚಾರಗಳನ್ನು ಕುರಿತು ಸ್ಪಷ್ಟ ಅಭಿಪ್ರಾಯ ಒತ್ತಿಹೇಳುತ್ತಿದ್ದ. ಪ್ಯಾರಾಬೇಸಿಸ್ ಆದ ಮೇಲೆ ಕೆಲವು ಘಟನಾವಳಿ (ಎಪಿಸೋಡಿಯ). ಅವು ನಾಟಕದ ಕಥೆಯನ್ನು ಮುಂದುವರಿಸುವುದಕ್ಕಿಂತ ಹೆಚ್ಚಾಗಿ ಸೆಣಸಾಟದ ತೀರ್ಮಾನಕ್ಕೆ ಪುಷ್ಟಿಕೊಡುವ ಉದಾಹರಣೆ. ಮುಕ್ತಾಯವಾಗಿ ಭೋಜನಕೂಟಕ್ಕೊ ವಿವಾಹಕ್ಕೊ ತೆರಳುವ ಗಲಭೆ, ಮೆರವಣಿಗೆ.

ನಾಟಕದ ವಿಷಯ ಕಲ್ಪಿತವೂ ನವನವ್ಯವೂ ನಗು ಬರಿಸುವಂಥದೂ ದ್ವಿಪಕ್ಷವುಳ್ಳದ್ದೂ ಜಗಳಕ್ಕೆ ಆಸ್ಪದ ಕೊಡುವಂಥದೂ ಆದರೆ ಸಮಕಾಲೀನ ಪರಿಸ್ಥಿತಿಗೆ ಮೋಪಾಗಿ ಅನ್ವಯಿಸುವುದೂ ಆದ ಒಂದು ಸಮಸ್ಯೆ: ಈ ಹಾಳು ಒಲಿಂಪಿಕ್ ದೇವತೆಗಳಿಂದ ನರರಿಗೆ ತ್ರಾಸ: ಅವರೇತಕ್ಕೆ ಆಗಸದಲ್ಲಿ ಒಂದು ಅಡ್ಡ ರಾಜ್ಯ

ಸ್ಥಾಪಿಸಿ ಆಹುತಿ ಅರ್ಪಣೆ ಯಾವುದೂ ದೇವತೆಗಳಿಗೆ ತಲಪದಂತೆ ತಡೆಗಟ್ಟಬಾರದು? ಗಂಡಸರು ಎಲ್ಲವನ್ನೂ ಹದಗೆಡಿಸಿಬಿಟ್ಟಿದ್ದಾರೆ: ಹೆಂಗಸರು ಆಡಳಿತವನ್ನು ಪೂರ್ತಿ ಕಸಿದುಕೊಂಡು ನೇರ್ಪಾಟಿಸಬಾರದೇತಕ್ಕೆ? ಸರಿ, ಎರಡು ಕಕ್ಷಿಗಳು ಅನಿವಾರ್ಯ; ವಾಗ್ಯುದ್ಧ ಹಣಾಹಣಿ ಆಗಲೇಬೇಕು. ನೃತ್ಯಮೇಳದ ಕೆಲಸ ಹೋರಾಟಕ್ಕೆ ಸಮಾಧಾನ ಬಗೆಯುವುದಲ್ಲ, ಅದನ್ನು ಇನ್ನೂ ಹೆಚ್ಚಾಗಿ ಉಲ್ಬಣ ಗೊಳಿಸುವುದು. ವಿನೋದಪ್ರಮುಖವಾದರೂ ಆರಿಸ್ಟಾಫನೀಸನ ನಾಟಕಗಳಲ್ಲಿ ಮನನೀಯವಾದ ವಿವೇಕತತ್ತ್ವ ಹೇರಳವಾಗಿದೆ; ಹಾಸ್ಯಗಾರನಾದರೂ ಅವನೊಬ್ಬ ಹೃದಯಸೂರೆಮಾಡುವ ಅತ್ಯುತ್ತಮ ಕವಿ, ಮನಸ್ಸು ತುಂಬುವ ದೊಡ್ಡ ದಾರ್ಶನಿಕ.

ಹಳೆಯ ಹರ್ಷನಾಟಕಕಾರರಲ್ಲಿ ಮೊದಲು ಹೆಸರು ಗಳಿಸಿದವ ಕ್ರಾಟಿನಸ್ (ಪ್ರ.ಶ.ಪೂ. ಸು. ೫೨೦–ಪ್ರ.ಶ.ಪೂ. ೪೨೩). ಆತ ೨೧ ಕೃತಿಗಳನ್ನು ಕಟ್ಟಿದನಂತೆ. ಪ್ರಧಾನ ವ್ಯಕ್ತಿ ಪೆರಿಕ್ಲೀಸನನ್ನೇ ಆತ ತನ್ನ ವಿಡಂಬನೆಗೆ ಗುರಿಮಾಡಿದ. ಅವನೊಬ್ಬ ಕುಡುಕ, ಶಕ್ತಕವಿಯಾಗಿದ್ದರೂ ಅವನ ವೃದ್ಧಾಪ್ಯದಲ್ಲಿ ಯುವಕನಾದ ಆರಿಸ್ಟಾಫನೀಸ್ ಶೂರರು ಎಂಬ ತನ್ನ ನಾಟಕದಲ್ಲಿ ಅವನನ್ನು ಅಪಹಾಸ್ಯಗೈದ; ಕ್ರಾಟಿನಸ್ ರೇಗಿ ಮದ್ಯದ ಹೂಜಿ ಎಂಬ ಹರ್ಷನಾಟಕ ಬರೆದು, ಸ್ಪರ್ಧೆಯಲ್ಲಿ ಆರಿಸ್ಟಾಫನೀಸನ ಘನ ಕೃತಿ ಮೋಡಗಳು ಎಂಬುದನ್ನು ಸೋಲಿಸಿ, ಬಹುಮಾನಗಳಿಸಿದ. ಕ್ರೇಟೀಸ್ ಮತ್ತು ಅವನ ಹಿಂಬಾಲಕ ಪೆರಿಕ್ರೇಟೀಸ್ ಇಬ್ಬರೂ ಒಳ್ಳೆಯ ಕವಿಗಳು. ಕ್ರೇಟೀಸ್ ಮೊದಲಾಗಿ ಬಿಡಿ ವ್ಯಕ್ತಿಯ ಅವಹೇಳನವನ್ನು ತ್ಯಜಿಸಿ ಹಲವರಿಗೆ ಅನ್ವಯಿಸುವ ಸಾಧಾರಣ ಸಂಗತಿಯ ವಿಡಂಬನವನ್ನು ಬಳಕೆಗೆ ತಂದ. ಆಮೇಲೆ ಬಂದ ಯೂಪೋಲಿಸ್ ಶ್ರೇಷ್ಠ ಕವಿ, ಕಲ್ಪನಾ ಪ್ರವೀಣ, ಬಲಿಷ್ಠ ವಿಡಂಬನಕಾರ, ಆರಿಸ್ಟಾಫನೀಸನ ಸಮಕಾಲೀನ, ಸ್ನೇಹಿತ, ಜೊತೆಗಾರ ಕಾವ್ಯಕರ್ತೃ, ಹಾಗೂ ವಿರೋಧಿ.

ನಡುವಣ ಹರ್ಷನಾಟಕದ ಬಗೆಗೆ ಹೇಳುವ ಸಂಗತಿ ಹೆಚ್ಚಾಗಿಲ್ಲ, ಹಳೆಯ ಹರ್ಷನಾಟಕದ ವ್ಯಕ್ತಿನಿಂದೆ ಬಯ್ಗುಳ ಕೀಳು ಅಪಹಾಸ್ಯ ಅದರಲ್ಲಿ ಇರಲಿಲ್ಲ. ಬದಲಾಗಿ ಉಚ್ಚ ಕೃತಿಗಳ ಅಣಕ, ಪುರಾಣ ಕಥಾವಳಿಯ ಹೀನಯಿಕೆ, ತತ್ತ್ವಶಾಸ್ತ್ರದ ಟೀಕೆ, ಸಾಹಿತ್ಯದ ಲಘು ವಿಮರ್ಶೆಗಳು ತುಂಬಿಕೊಂಡು ರಸಯುಕ್ತವಾಗುತ್ತಿದ್ದುವು. ಆಂಟಿಫೇನೀಸ್ ಮತ್ತು ಅಲೆಕ್ಸಿಸ್ ನಡುನಾಟಕದ ಲೇಖಕರು. ಒಬ್ಬೊಬ್ಬರೂ ಇನ್ನೂರಕ್ಕೂ ಹೆಚ್ಚಾಗಿ ರೂಪಕ ರಚಿಸಿದರಂತೆ. ಆರಿಸ್ಟಾಫನೀಸ್ ಕೊನೆಯಲ್ಲಿ, ಎಂದರೆ ಪ್ರ.ಶ.ಪೂ ೩೮೮ರಲ್ಲಿ, ಬರೆದ ಕೃತಿ ಧನ (ಪ್ಲೂಟಸ್). ಇದು ಅವನ ಇತರ ಕೃತಿಗಳಿಂದ ಬಹುಮಟ್ಟಿಗೆ ಬೇರೆಯಾಗಿದೆ. ಅದು ಹಳೆಯ ಹರ್ಷನಾಟಕ ಅಲ್ಲವೇ ಅಲ್ಲ, ನಡುವಣ ಹರ್ಷನಾಟಕ ಎಂದು ತಜ್ಞರು ನಿರ್ಧರಿಸಿದ್ದಾರೆ. ನಡುವಣ ಹರ್ಷನಾಟಕದಲ್ಲಿ ಕಟ್ಟರೆ ಊಟದ ಮತ್ತು ಕಂಠ ಪೂರ್ತಿ ಪಾನದ ಆಸಕ್ತ ವರ್ಣನೆ ಮತ್ತೆಮತ್ತೆ ಬರುತ್ತಿತ್ತಂತೆ. ಅದು ಕವಿಗಳ ದೈಹಿಕಾಪೇಕ್ಷೆಯ ಕ್ಷುದ್ರತನವೆಂದು ದೂರಿದ್ದಾರೆ. ನಿಜಾಂಶ ಅದಲ್ಲ. ಆಗಿನದು ಬರಗಾಲ. ಕ್ಷುದ್ಬಾಧೆಯಿಂದ ಸಂತಪ್ತರಾದವರಿಗೆ ಮೃಷ್ಟಾನ್ನಭೋಜನದ ವಿವರಣೆಯೇ ಒಂದು ವಿಧದಲ್ಲಿ ತೃಪ್ತಿಕಾರಕ.

ಹೊಸ ಹರ್ಷನಾಟಕದ ಕರ್ತರಲ್ಲಿ ಮಿನಾಂಡರ್, ಫಿಲಿಮಾನ್, ಡೀಫಿಲಸ್ ಮುಖ್ಯರು. ಮೊದಲಿನ ಇಬ್ಬರೂ ಬರೆದ ರೂಪಕ ೨೦೦ಕ್ಕೂ ಹೆಚ್ಚು; ಮೂರನೆಯವ ಬರೆದವು ೧೦೦. ಮಿನಾಂಡರ್ ಬಹಳ ಖ್ಯಾತಿವಂತ, ದಕ್ಷ. ಅವರ ಯಾರದೂ ಒಂದು ಕೃತಿಯೂ ಉಳಿದುಬಂದಿಲ್ಲ. ಹೊಸ ನಾಟಕದ ಲಕ್ಷಣಗಳು ನಮಗೆ ಅರಿವಾಗಬೇಕಾದರೆ ಪ್ರಾಚೀನ ರೋಮನರ ಹರ್ಷನಾಟಕಕಾರರ ಬರೆವಣಿಗೆ ಉಂಟು, ಅದರ ನಿರ್ದುಷ್ಟ ಸಹಾಯವೂ ಉಂಟು. ರೋಮನರ ಟೆರೆನ್ಸ್, ಅವನಿಗಿಂತಲೂ ಹೆಚ್ಚಾಗಿ ಪ್ಲಾಟಸ್, ಗ್ರೀಕ್ 'ಹೊಸ' ಹರ್ಷನಾಟಕಕ್ಕೆ ಕನ್ನಡಿ. ಅದರ ಲಕ್ಷಣಗಳಲ್ಲಿ ಮುಖ್ಯವಾದವು ಇವು; ಕಾಲ್ಪನಿಕ ಪಾತ್ರಗಳ ಮೂಲಕ ಸಮಕಾಲದ ವಾಸ್ತವ ಜೀವನದ ಚಿತ್ರಣ; ಕಥಾಸಂವಿಧಾನದ ಅಚ್ಚುಕಟ್ಟು; ಪಾತ್ರಶಿಲ್ಪ; ಬರಿ ಚತುರೋಕ್ತಿಯಲ್ಲದ ಉತ್ತಮ ಹಾಸ್ಯ; ಮೇಲಾಗಿ ಸಾಹಸ ಗೂಡಿದ ರೊಮ್ಯಾಂಟಿಕ್ ಪ್ರಣಯ. ಹಲವಾರು ನಾಟಕಗಳಲ್ಲಿ ಕೊನೆಯ ಅಂಶದ ಮೇಲೆಯೇ ಅವಧಾರಣೆ. ನಾಯಕಿ ವೇಶ್ಯಾವರ್ಗಕ್ಕೆ ಸೇರಿದವಳಾಗಿರಬಹುದು. ಪ್ರಾಮಾಣಿಕ ಪ್ರಿಯ ದೊರೆತು ಅವನ ಮುಖಾಂತರ ಅಡ್ಡಿ ಅಡಚಣೆ ದಾಟಿ ಅವಳು ಗೃಹಸ್ಥೆಯಾಗುತ್ತಾಳೆ. ಅಥವಾ ನಾಯಕಿ ಬಾಲ್ಯದಲ್ಲಿ ಅಪಹೃತಳಾಗಿ ಕೆಟ್ಟ ಹೆಂಗಸರ ಕೈಗೆ ಸಿಕ್ಕೆ ತೊಳಲಿ ಕೊನೆಗೆ ಒಬ್ಬ ಧೀರ ಬಂಧುವಿನಿಂದ ಬಿಡುಗಡೆ ಹೊಂದುತ್ತಾಳೆ. ಒಂದೆರಡು ನಾಟಕಗಳಲ್ಲಿ ಉನ್ನತ ವಂಶದವಳೊ ರಾಜಕುಮಾರಿಯಾದವಳೊ ಕಷ್ಟಗಳಿಗೆ ಪಕ್ಕಾಗಿ ಪಾರಾಗುತ್ತಾಳೆ. ಒಟ್ಟಿನಲ್ಲಿ ನಾಟಕ ನಗುವಿಗಿಂತಲೂ ಹೆಚ್ಚಾಗಿ ಒಳ್ಳೆಯ ರಾಗಭಾವವನ್ನು ಪ್ರಚೋದಿಸುತ್ತದೆ. ಹೊಸ ಹರ್ಷನಾಟಕಕ್ಕೆ ಯುರಿಪಿಡೀಸನ ಇಯಾನ್ ಮೊದಲಾದ ನಾಟಕಗಳೇ ಆಕರ; ಆಧುನಿಕ ನಾಟಕ ಹೊಸ ಹರ್ಷನಾಟಕದ ಸಂತಾನ. (**ಎಸ್.ವಿ.ಆರ್.**)

ಆರಿಸ್ಟಾಫನೀಸ್ (ಪ್ರ.ಶ.ಪೂ. ೪೪೪-೩೮೫) ಸುಮಾರು ನಲವತ್ತು ನಾಟಕಗಳನ್ನು ಬರೆದ. ಅವುಗಳಲ್ಲಿ ಬರಿ ಹನ್ನೊಂದು ನಾಟಕಗಳು ಉಳಿದಿವೆ. ಇವನ ನಾಟಕಗಳಲ್ಲಿ ಪ್ರಸಂಗಗಳು ಒಂದಕ್ಕೊಂದು ಹೊಂದಿಕೊಂಡು ವಿಕಸಿತವಾಗುವುದಿಲ್ಲ. ಇವನ ನಾಟಕಗಳಿಗಾಗಿ ನೃತ್ಯಮೇಳಗಳ ಹೆಸರುಗಳೇ ಸಾಮಾನ್ಯ ಕೆಲವು ನಾಟಕಗಳಲ್ಲಿ ಪ್ರಾಣಿಗಳು ಪಕ್ಷಿಗಳು ನೃತ್ಯಮೇಳ; ಆದುದರಿಂದಲೇ ಅವುಗಳಿಗೆ 'ದಿ ಫ್ರಾಗ್' 'ದಿ ಬರ್ಡ್ಸ್' ಮೊದಲಾದ ಹೆಸರುಗಳು.

ಪ್ರ.ಶ.ಪೂ. ೪೧೩ರಲ್ಲಿ ಅಥೆನ್ಸ್ ಪೆಲಿಪೊನೀಷಿಯನ್ ಯುದ್ಧದಲ್ಲಿ ಸೋತು ತೇಜೋವಧೆಯನ್ನು ಅನುಭವಿಸಿತು. ಈ ಕಾಲದನಂತರ ಅರಿಸ್ಟೋಫೆನೀಸ್ ಬರೆದ ನಾಟಕಗಳಲ್ಲಿ ಹಿಂದಿನ ಲವಲವಿಕೆ, ಚೈತನ್ಯಗಳಲ್ಲಿ, ಫ್ಯಾಂಟಿಸಿಯ ಪ್ರಾಧಾನ್ಯವಿಲ್ಲ. ಗ್ರೀಕ್ ನಾಟಕದ ಮಹಾಯುಗಕ್ಕೆ ತೆರೆ ಬೀಳುತ್ತಿರುವುದು ಸ್ಪಷ್ಟವಾಗಿದೆ.

ಇವರ ಮುಂಚಿನ ನಾಟಕಗಳು ಅದ್ಭುತ ಮನರಂಜನೆ ನೀಡುತ್ತವೆ ಅರಿಸ್ಟೋಫೆನೀಸನ ಹಾಸ್ಯ ಯಾವಾಗಲೂ ಸದಭಿರುಚಿಯದು ಎಂದು ಹೇಳುವಂತಿಲ್ಲ. ನಮಗೆ ಅಸಾಧ್ಯ ಎನ್ನಿಸುವ, ತೀರ ಒರಟು ಎನ್ನಿಸುವ ಮಾತುಗಳೂ ಉಂಟು. ದೈಹಿಕ ಚಟುವಟಿಕೆಗಳನ್ನು ಆಧರಿಸಿದ ಹಾಸ್ಯವೂ ಉಂಟು.

ಆರಿಸ್ಟಾಫನೀಸ್ ಫ್ಯಾಂಟಸಿಯನ್ನು ದೃಷ್ಟಿಗೆ ರಂಜಕವಾಗಿ ಬಳಸುತ್ತಾನೆ ಒಂದು ಅಸಂಬದ್ಧ ಕಲ್ಪನೆಯನ್ನು (ಉದಾ ಭೂಮಿಗೂ ಸ್ವರ್ಗಕ್ಕೂ ನಡುವೆ ಗೋಡೆಯನ್ನು ಕಟ್ಟುವುದು) ಅದು ತರ್ಕಬದ್ಧ ಎನ್ನುವಂತೆ ಬಳಸಬಲ್ಲ. ತನ್ನ ಹಾಸ್ಯನಾಟಕಗಳಲ್ಲಿ ಗಂಭೀರ ವಿಷಯಗಳನ್ನು ಪ್ರಸ್ತಾಪಿಸಿದ. ಅವನು ತನ್ನನ್ನು 'ಡಿಸ್ಕಲಾಯ್' (ಉಪಾಧ್ಯಾಯ) ಎಂದು ಕರೆದುಕೊಳ್ಳುತ್ತಾನೆ. ತನ್ನ ನಗರದ ಆಡಳಿತದಲ್ಲಿ, ಧೋರಣೆಯಲ್ಲಿ ಕಂಡ ಸಣ್ಣತನವನ್ನು, ದ್ವೇಷ ಅಸೂಯೆಗಳನ್ನು ಎತ್ತಿ ತೋರಿಸುತ್ತಾನೆ. ಶಾಂತಿಗಾಗಿ ಹಂಬಲಿಸುತ್ತಾನೆ.

ಯೂರೋಪಿನ ಸಾಹಿತ್ಯದ ಮೇಲೆ ಮಾತ್ರವಲ್ಲ, ಜಗತ್ತಿನ ಹಲವು ದೇಶಗಳ ಸಾಹಿತ್ಯಗಳ ಮೇಲೆ ಪ್ರಾಚೀನ ಗ್ರೀಕ್ ನಾಟಕವು ಪ್ರಭಾವ ಬೀರಿದೆ. ಯೂರೋಪ್ ಮತ್ತು ಅಮೆರಿಕಗಳ ನಾಟಕಕಾರರು ಮತ್ತೆ ಮತ್ತೆ ಪ್ರಾಚೀನ ಗ್ರೀಕ್ ನಾಟಕಗಳು, ಅವುಗಳಲ್ಲಿ ವ್ಯಕ್ತವಾದ ಜೀವನ ಪರಾಮರ್ಶೆ, ಇವುಗಳತ್ತ ತಿರುಗುತ್ತಾರೆ. ಕನ್ನಡ ಸಾಹಿತ್ಯದ ನವೋದಯದ ಪ್ರಾರಂಭದಲ್ಲಿ ಆಚಾರ್ಯ 'ಶ್ರೀ' ಯವರು ಈಸ್ಕಿಲಸನ 'ಪಾರಸಿಕರು' ನಾಟಕವನ್ನೇ ಅನುವಾದಿಸಿದರು. 'ಅಶ್ವತ್ಥಾಮ' ನಾಟಕಕ್ಕೆ ಸಫೋಕ್ಲಿಸನ 'ಅಯಾಸ್' ನಾಟಕವನ್ನು ಆಧಾರ ಮಾಡಿಕೊಂಡರು. ಪ್ರಾಚೀನ ಗ್ರೀಸ್‌ನ ಶ್ರೇಷ್ಠ ನಾಟಕಗಳು ಮತ್ತೆ ಮತ್ತೆ ಕನ್ನಡಕ್ಕೆ ಅನುವಾದವಾಗುತ್ತಲೇ ಇದೆ. (ಎಲ್.ಎಸ್.ಎಸ್.)

ಆರಿಸ್ಟಾಫನೀಸ್

ನಲವತ್ತು ವರ್ಷಕ್ಕೂ ಮೀರಿ ರೂಪಕರಚನೆಯಲ್ಲಿ ನಿರತನಾಗಿದ್ದು ಸುಮಾರು ೪೩ ಕೃತಿಗಳನ್ನು ಹೊರತಂದ ಸುಪ್ರಸಿದ್ಧ ಗ್ರೀಕ್ ಕವಿ. ಅವುಗಳಲ್ಲಿ ಹನ್ನೊಂದು ಯಾವ ವಿಕೃತಿಗೂ ಒಳಗಾಗದೆ ಉಳಿದು ಬಂದಿದೆ. ಪುರಾತನ ಗ್ರೀಕರಲ್ಲಿ ಆಗಿಬಂದ ವಿನೋದ ನಾಟಕಕಾರರಲ್ಲಿ ಅವನೇ ಅಗ್ರೇಸರನೆಂಬುದು ನಿರ್ವಿವಾದ. ಆದರೂ ನಮಗೆ ಗೊತ್ತಾಗಿರುವ ಅವನ ಜೀವನಸಂಗತಿಗಳು ತೀರ ಕಡಿಮೆ. ಹುಟ್ಟಿದ್ದು ಅಟ್ಟಿಕದಲ್ಲಿ ಸು. ಪ್ರ.ಶ.ಪೂ. ೪೪೮ರಲ್ಲಿ, ಸತ್ತ ಸಂವತ್ಸರ ಯಾವುದೆಂಬು ದು ಗೊತ್ತೇ ಇಲ್ಲ; ಪ್ರ.ಶ.ಪೂ. ೩೮೫ ಅಥವಾ ೩೮೦ ಎಂದೂ ಊಹಿಸಿದ್ದಾರೆ. ತಂದೆ ಫಿಲಿಪ್ಪಸ್ ಅಥೆನ್ಸಿನ ಒಂದು ಬುಡಕಟ್ಟಿನವನಾಗಿ, ಒಂದು ಅಧಿಕೃತ ಮೊಹಲ್ಲಾಕ್ಕೆ ಸೇರಿದವನಾಗಿದ್ದ. ಈಜಿನ ದ್ವೀಪದಲ್ಲಿ ಅವನಿಗೊಂದು ಸಣ್ಣ ಭೂ ಸ್ವಾಮಿತ್ವವಿತ್ತು. ಅರಿಸ್ಟೋಫೆನೀಸ್ ಇನ್ನೂ ಚಿಕ್ಕ ಹುಡುಗನಾಗಿದ್ದಾಗಲೇ ತಂದೆಯೊಂದಿಗೆ ಈಜಿನಕ್ಕೆ ಹೋಗಿ ಇರಬೇಕಾಯಿತು. ಬಹುಶಃ ಅದನ್ನೇ ಆಧಾರ ಮಾಡಿಕೊಂಡು ಮುಂದೆ ಜನನಾಯಕ ನಾದ ಕ್ಲಿಯಾನ್ ಅವನ ಮೇಲೆ ಅಥೇನ್ಸಿನ ಪೌರತ್ವದ ದುರಾಕ್ರಮಣದ ಆಪಾದನೆ ಹೊರಿಸಿ ನ್ಯಾಯಸ್ಥಾನದ ಮುಂದು ಅವನನ್ನು ನಿಲ್ಲಿಸಿದ, ಆಪಾದನೆ ತೀರ ಸುಳ್ಳು; ಮುಯ್ಯಿ ತೀರಿಸಿಕೊಳ್ಳುವ ಸಲುವಾಗಿ ಕ್ಲಿಯನ್ ಹಾಗೆ ಮಾಡಿದ್ದು. ಯುವಕನಾಗಿ ದ್ದಾಗಲೇ ಆರಿಸ್ಟಾಫನೀಸ್ ನಾಟಕ ಬರೆಯಲಾರಂಭಿಸಿದ ಪ್ರಥಮ ಕೃತಿ ಪ್ರ.ಶ.ಪೂ. ೪೨೭ರಲ್ಲಿ ಪ್ರದರ್ಶಿತವಾದ ಔತಣಪ್ರಿಯರು (Daitaleis); ಅದಕ್ಕೆ

ಸ್ಪರ್ಧೆಯಲ್ಲಿ ಎರಡನೆಯ ಬಹಮಾನ ಬಂತು. ೪೨೬ರಲ್ಲಿ ನೇಪಥ್ಯವನ್ನು ಕಂಡ ಅವನ ಎರಡನೆಯ ಸಾಹಿತ್ಯ ಸಾಹಸ ಬ್ಯಾಬಿಲೋನಿಯನ್ನರು, ಅದಕ್ಕೂ ಎರಡನೆಯ ಬಹುಮಾನ ದೊರಕಿತು. ಇವೆರಡೂ ಈಗ ನಷ್ಟವಾಗಿದೆ. ತನ್ನ ಮೂರನೆಯ ನಾಟಕ ಅಕಾರ್ನಿಯನ್ನರು ಎಂಬುದನ್ನು ೪೨೫ರಲ್ಲಿ ಪ್ರದರ್ಶಿಸಿ, ಎದುರಾಳಿಗಳಾದ ಹೆಸರಾಂತ ವಿನೋದನಾಟಕಕಾರರಾದ ಕ್ರ್ಯಾಟಿನಸ್ ಮತ್ತು ಯುಪೊಲಿಸ್‌ರನ್ನು ಸೋಲಿಸಿ, ಪ್ರಥಮಸ್ಥಾನ ಪಡೆದುಕೊಂಡ. ಲೋಕಕ್ಕೆ ಉಪಲಬ್ದವಾಗಿರುವ ಅವನ ನಾಟಕಗಳು, ಜನಿಸಿದ ಕ್ರಮ, ಆರ್ಜಿಸಿದ ಫಲ, ಹೀಗಿವೆ.

ಪ್ರ.ಶ.ಪೂ. ೪೨೫ ಅಕಾರ್ನಿಯನ್ನರು (Acharne) ಮೊದಲನೆಯ ಸ್ಥಾನ, ಪ್ರ.ಶ.ಪೂ. ೪೨೪ ರಕ್ಷಕವೀರರು (Hippei) ಮೊದಲನೆಯ ಸ್ಥಾನ, ಪ್ರ.ಶ.ಪೂ. ೪೨೩ ಮೋಡಗಳು (Nephelai) ಮೊದಲನೆಯ ಸ್ಥಾನ, ಪ್ರ.ಶ.ಪೂ. ೪೨೨ ಖಣಜಗಳು (Sphekes) ಮೊದಲನೆಯ ಸ್ಥಾನ, ಪ್ರ.ಶ.ಪೂ. ೪೨೧ ಶಾಂತಿ (Eirene) ಎರಡನೆಯ ಸ್ಥಾನ ಮುಂದಣ ಏಳು ವರ್ಷದ ದಾಖಲೆಯೆಲ್ಲ ಮಾಯವಾಗಿದೆ.

ಪ್ರ.ಶ.ಪೂ. ೪೧೪ ಹಕ್ಕಿಗಳು (Ornithes) ಎರಡನೆಯ ಸ್ಥಾನ, ಪ್ರ.ಶ.ಪೂ. ೪೧೧ ಲೂಸಿಸ್ಟ್ರಾಟಿ (Lusistrati), ಪ್ರ.ಶ.ಪೂ. ೪೧೧ ಥೆಸ್ಮೊಫರಿಯ ವ್ರತದ ಹೆಣ್ಣುಗಳು (Thesmophriazusia), ಪ್ರ.ಶ.ಪೂ. ೪೦೮ ಐಶ್ವರ್ಯ (Ploutos) – (ಪ್ರಥಮ ಪ್ರತಿ), ಪ್ರ.ಶ.ಪೂ. ೪೦೫ ಕಪ್ಪೆಗಳು (Batrachoi), ಪ್ರ.ಶ.ಪೂ. ೩೯೨ ಮಂತ್ರಾಲೋಚನೆಯ ಮಹಿಳೆಯರು (Eeetesiazousai), ಪ್ರ.ಶ.ಪೂ. ೩೮೮ ಐಶ್ವರ್ಯ (Ploutos)–(ದ್ವಿತೀಯ ಪ್ರತಿ).

ಆಮೇಲೆ ಎರಡು ನಾಟಕಗಳನ್ನು ಮಗ ಅರೇರಸ್‌ಗಾಗಿ ಲಿಖಿಸಿದನಂತೆ, ಎರಡೂ ಈಗಿಲ್ಲ. ಅವುಗಳಲ್ಲಿ ಒಂದಾದ ಕಾಕಲಸ್ (Kokalus) ಹೊಸಬಗೆಯ ವಿನೋದ ನಾಟಕಕ್ಕೆ ಮಾರ್ಗ ತೋರಿಸಿತು.

ತನ್ನ ಪ್ರಥಮ ರೂಪಕವಾದ ಔತಣಪ್ರಿಯರನ್ನು ತನಗಿಂತ ವಯಸ್ಸಿನಲ್ಲಿ ದೊಡ್ಡವನಾದ ನಟ ಕ್ಯಾಲಿಸ್ಟ್ರಾಟಸ್‌ನ ಅಂಕಿತದಲ್ಲಿ ಪ್ರದರ್ಶಿಸಿದ. ಹಾಗೇ ಬ್ಯಾಬಿಲೋನಿಯನ್ನರು, ಅಕಾರ್ನಿಯನ್ನರು, ಹಕ್ಕಿಗಳು, ಲೂಸಿಸ್ಟ್ರಾಟಿಗಳಿಗೂ ಆ ನಟನೇ ಬಹಿರಂಗದ ಆಶ್ರಯ, ಮುಂದೆ, ಖಣಜಗಳು, ಕಪ್ಪೆಗಳು ಎಂಬ ಕೃತಿಗಳಿಗೂ ಇನ್ನೊಬ್ಬ ನಟ ಫಿಲಾನಿಡೀಸ್ ಸಟೆಜನಕನಾದ, ನಾಟಕಗಳ ಕರ್ತೃ ಆರಿಸ್ಟಾಫನೀಸ್ ಎಂಬ ನಿಜಾಂಶ ಎಲ್ಲರಿಗೂ ಚೆನ್ನಾಗಿ ತಿಳಿದಿದ್ದಿತು. ಹಾಗಾದರೆ ಕೃತ್ರಿಮವೇತಕ್ಕೆ? ಏತಕ್ಕೆಂದು ಕರಾರುವಕ್ಕಾಗಿ ಹೇಳಲಾಗುವುದಿಲ್ಲ. ಬಹುಶಃ ಕವಿ ಇನ್ನೂ ವಯೋಧರ್ಮದಿಂದ ಕಿರಿಯನಾಗಿದ್ದದು ಒಂದು ಕಾರಣ. ನಾಟ್ಯ ಮೇಳಕ್ಕೆ ಶಿಕ್ಷಣಕೊಟ್ಟು ಸಮರ್ಪಕವಾಗಿ ತರಬೇತುಮಾಡುವ ಜವಾಬ್ದಾರಿಗೆ ಅವಶ್ಯಕವಾದ ಜ್ಞಾನವೂ ಅನುಭವವೂ ಅವನಲ್ಲಿ ಇರಲಿಲ್ಲವೆನ್ನಬಹುದು. ಆದರೆ ಅವನ ಉದ್ಘಕೃತಿಯಾದ

'ಹಕ್ಕಿಗಳು' ಬೆಳಕು ಕಾಣುವ ಹೊತ್ತಿಗೆ ಅವನಿಗೆ ವಯಸ್ಸು ೩೭; ೧೩ ವರ್ಷಕ್ಕೂ ಮೇಲ್ಪಟ್ಟು ನಾಟಕ ಶಾಲೆಯ ನಿಕಟ ಸಂಪರ್ಕ ಏರ್ಪಟ್ಟಿತ್ತು. 'ಕಪ್ಪೆಗಳು' ಏಳುವಹೊತ್ತಿಗೆ ವಯಸ್ಸು ೪೨. ನಾಟಕಶಾಲೆಯ ಸಂಬಂಧ ಪೂರ್ತಿ ೨೨ ವರ್ಷ. ಯಥಾರ್ಥವಾಗಿ ಹೀಗಿದ್ದರೂ ತನ್ನ ನಾಮಧೇಯವನ್ನು ಮರೆಮಾಚಿದ್ದೇಕೆ? ಅವನ ವಿನೋದ ನಾಟಕವೆಲ್ಲ ಕುಚೋದ್ಯಕ್ಕೆ ಮೀಸಲು ಲೇಖಕನರೆಂಬ ಅಂಶವನ್ನೂ ಹುಡುಗಾಟಕ್ಕೆ ಈಡುಮಾಡುವ ಬಯಕೆ ಪ್ರಾಯಶಃ ಅವನಲ್ಲಿ ಮೂಡಿತ್ತೋ ಏನೋ!

ಪುರಾತನ ವಿನೋದಕಾರರಲ್ಲಿ ಹಳೆಯ ಬಗೆಗೆ (ಓಲ್ಡ್ ಕಾಮೆಡಿ) ಸೇರಿದವ ರೆಲ್ಲ ಸಾಮಾನ್ಯವಾಗಿ ಹಿಂದಿನದನ್ನು ಹೊಗಳುವವರು ಇಂದಿನದನ್ನು ತೆಗಳುವವರು. ಅವರಲ್ಲಿ ಅತ್ಯಂತ ಮೇಧಾವಿಯೂ ಪ್ರಚಂಡಪ್ರತಿಭಾವಂತನೂ ಆದ ಆರಿಸ್ಟಾಫನಿಸ್ ಗಂತೂ ಅಥೇನ್ನಿನ ಸುವರ್ಣಸಮಯವೆಂದು ಪ್ರಕಾಶಮಾನವಾಗಿದ್ದ ಮ್ಯಾರಥಾನ್ ದಿವಸಗಳು ಬಾಯಲ್ಲಿ ನೀರೂರಿಸುತ್ತಿದ್ದುವು. ಆ ತಲೆಮಾರಿನ ಗ್ರೀಕ್ ಜನತೆಯಲ್ಲಿ ರೂಢಮೂಲವಾಗಿದ್ದ ದೈವಭಕ್ತಿ, ದೇಶಭಕ್ತಿ, ಪೂರ್ವಾಚಾರಪ್ರಿಯತೆ, ಹಿರಿಯರಲ್ಲಿ ಕಿರಿಯರಿಗಿದ್ದ ಹೆಗ್ಗೌರವ, ನಿಷ್ಕಾಪಟ್ಯ, ಸುಶೀಲ, ಸರಳತೆ, ಕುಟುಂಬ ಗೃಹಸ್ವಾಮಿಯ ಹಿಡಿತದಲ್ಲಿರುವಿಕೆ, ಧೈರ್ಯ, ಧಾರಾಳ, ಪರಾಕ್ರಮ, ಆಶಾವಾಧ?ಎಲ್ಲವೂ ಅವನಿಗೆ ಅಚ್ಚುಮೆಚ್ಚು, ಅಂಥ ಉದಾತ್ತ ಆದರ್ಶದಿಂದ ಎಷ್ಟೋಕೀಳುಮಟ್ಟದಲ್ಲಿ ಸಡಿಲವಾಗಿ ನಡೆಯುತ್ತಿದ್ದ ತನ್ನ ಸಮಕಾಲೀನ ಸನ್ನಿವೇಶಗಳನ್ನು ಪರೀಕ್ಷಿಸಿ ಆತ ರೋಷಭರಿತನಾಗುತ್ತಿದ್ದ. ಮಂದಿಯ ವೈಯಕ್ತಿಕ ರೀತಿನೀತಿಗೆ ಹದ್ದುಂಟೆ? ಹಳತವುಂಟೆ? ನಾನಾ ವಿಧದ ಸ್ವೇಚ್ಛಾಚಾರ ತಾನೇ ತಾನು. ಸಾಮಾಜಿಕ ಬದುಕಿನಲ್ಲಿ ಬರೀ ನಟನೆ, ಮೋಸ, ಸ್ವಾರ್ಥಪರತೆ, ರಾಜಕೀಯದಲ್ಲಿ ಅಪ್ರಾಮಾಣಿಕತೆ, ವಾಗಾಡಂಬರ, ವಂಚನೆ, ದ್ರೋಹ. ವಿದ್ಯಾಭ್ಯಾಸದಲ್ಲಿ ನವೀನಸಿದ್ಧಾಂತಗಳ ಪ್ರಚಾರ, ಮೇಲುಮೇಲಣ ಬುರುಗು, ಕುತರ್ಕ, ಸಮಗೀತ, ಕಾವ್ಯ ರೂಪಗಳಲ್ಲಿ ವಿಕಾರವಾದ ಮಾರ್ಪಾಟುಗಳು, ಇಂಥ ಆತಂಕಕಾರಿ ವ್ಯವಹಾರಗಳಿಂದ ರೋಸಿಹೋಗಿ, ಅವನ್ನು ಕವಿ ತನ್ನ ಭಯಂಕರ ಅಣಕಕ್ಕೂ ಲೇವಡಿಗೂ ತಿರುತಿರುಗಿ ಈಡುಮಾಡಿ ನೊಂದ ತನ್ನ ಹೃದಯಕ್ಕೆ ಕೊಂಚ ಸಮಾಧಾನವನ್ನು ತಂದುಕೊಂಡ. ಸೋಲನ್, ಪೀಸಿಸ್ಟ್ರಾಟಸ್‌ರ ಜಾಗದಲ್ಲಿ ಕ್ಲಿಯಾನ್, ಲುಮಾಕಸ್ಸರೆ? ಈಸ್ಕಿಲಸ್ಸನ ಗದ್ದುಗೆಯ ಮೆಲೆ ಯುರಿಪಿಡೀಸ್? ಆಂತರ್ಯದಲ್ಲಿ ಜ್ಯೋತಿಯನ್ನು ಹೊತ್ತುತ್ತಿದ್ದ ಜ್ಞಾನಿಗಳ ಬದಲು ಶುಲ್ಕ ಪಡೆದು ಪಾಠಕಲಿಸುವ ಸೋಫಿಸ್ಟ್ ಉಪಾಧ್ಯಾಯರೆ? ಇದೇ ಅವನ ತೀವ್ರ ತಾಪ, ಬಾಳಿನ ಸಕಲ ಮುಖ್ಯ ಶಾಖೆಗಳನ್ನೂ ತನ್ನ ದೃಷ್ಟಿಗೆ ತೆಗೆದುಕೊಂಡು ವಿಮರ್ಶನಗೈದ ಕವಿಗೆ ಯವುದನ್ನೇ ಆಗಲಿ ಯಾರನ್ನೇ ಆಗಲಿ ಅವಲೋಕಿಸುವಾಗ ಹುಚ್ಚು ನಗು ಎಬ್ಬಿಸುವ ತೀಕ್ಷ್ಣ ಹಾಸ್ಯವೇ ಸಾಧನ. ಗಂಭೀರನಾಟಕ ಎಲ್ಲೂ ಹಗುರವಾಗಬಾರದು. ವಿನೋದ ನಾಟಕದೊಳಕ್ಕೆ ಗಾಂಭೀರ್ಯ ನುಗ್ಗಬಾರದು. ಇದೊಂದು ಕಟ್ಟಾಜ್ಞೆಯಂತಿತ್ತು. ಆ ಸಮಯದಲ್ಲಿ ಪರಿಣಾಮವಾಗಿ

ಸಾಮಾಜಿಕರು ಆರಿಸ್ಟಾಫನೀಸನ ಪರಿಹಾಸ, ಹದಿರುನುಡಿ, ಗೇಲಿಗಳಿಂದ ಉಲ್ಲಾಸ ಹೊಂದುತ್ತಿದ್ದರೇ ವಿನಾ ಅವನ ಹಾಸ್ಯ ವ್ಯಂಗ್ಯಗಳ ಒಳಗಡೆ ಮಂಡಿಸಿದ್ದ ಉತ್ತಮ ತತ್ತ್ವಗಳ ಕಡೆಗೆ ತಮ್ಮ ಲಕ್ಷ್ಯವನ್ನು ಹರಿಯಗೊಡುತ್ತಿರಲಿಲ್ಲ. ಬರುತ್ತ ಬರುತ್ತ ತನ್ನ ಅಪಹಾಸ್ಯದಿಂದ ಏನೊಂದು ಸತ್ಪುಧಾರಣೆಯೂ ಆಗಲಿಲ್ಲವೆಂಬ ಸತ್ಯಾಂಶ ಕಂಡು, ಮನಗಂಡು, ಕವಿ ಬೇಸರಪಟ್ಟ, ಅವನನ್ನು ಹತಾಶೆ ಆವರಿಸಿತು. ಆದರೂ ತೆಪ್ಪಗೆ ಕುಳ್ಳಿರುತ್ತದೆಯೆ ಕವಿತಾಚಾಪಲ್ಯ? ಬರಿ ಅಭೀಷ್ಟ, ಕೇವಲ ಕನಸು ಕೂಡ ನಾಚನ ಅದ್ಭುತಗಳ ಮೇಲೆ ಕೆಲವು ವಿನೋದ ನಾಟಕಗಳನ್ನು ಕಟ್ಟಿದ್ದ.

ಇಷ್ಟೇ ಆಗಿದ್ದಿದ್ದರೆ ಪ್ರಪಂಚದ ಸಾಹಿತಿಗಳಲ್ಲಿ ಒಬ್ಬ ಎನ್ನಿಸಿಕೊಳ್ಳುತ್ತಿರಲಿಲ್ಲ. ಅವನು, ಆ ಧವಳಕೀರ್ತಿಯನ್ನು ಅವನಿಗೆ ತಂದುಕೊಟ್ಟಿರುವುದು ಅವನ ಅದ್ವಿತೀಯ ಕಾವ್ಯಶಕ್ತಿ. ಯುರಿಪಿಡೀಸನ ನಾಟಕಕ್ರಮವನ್ನು ಪಾತ್ರಚಿತ್ರಣವನ್ನೂ ಆತ ಎಷ್ಟೇ ಕಟುವಾಗಿ ದೂಷಿಸಿದರೂ ಆ ಕವೀಶ್ವರನ ಮಧುವಾಣಿಗೆ ಮನಸೋತಿದ್ದ, ಯುರಿಪಡೀಸನನ್ನು ಪೂರ್ತಿ ಕಂಠಪಾಟಮಾಡಿದ್ದ, ಅಯತ್ನಿತವಾಗಿ ತನ್ನ ವಿನೋದನಾಟಕದಲ್ಲೂ ಅವನಂತೆಯೇ ಇಂಪಾದ ಗೀತೆಗಳನ್ನು ತಂದು ಜೋಡಿಸಿ ಶ್ರೋತೃಗಳನ್ನು ಮುಗ್ಧಗೊಳಿಸಿದ. ಶೈಲಿಯಲ್ಲಿ ಅವರಿಬ್ಬರಿಗೂ ಸಾದೃಶ್ಯ ಎಷ್ಟರಮಟ್ಟಿಗೆ ಕಂಡು ಬಂದಿತೆಂದರೆ, ಅದನ್ನು ಬಣ್ಣಿಸುವುದಕ್ಕೆ ಕ್ರ್ಯಟಿನಸ್ ಯೂರಿಪಿಡರಿಸ್ಟೋಫನೀಸ್ ಎಂಬ ಹೊಸಪದವನ್ನು ನಿರ್ಮಿಸಿದ. ಅದಿರಿಲಿ, ಆರಿಸ್ಟ್ ಫನೀಸ್ ಹೀಗೆ ಜೀವನವಿಮರ್ಶೆಯನ್ನೂ ಘನವೂ ಸೂಕ್ಷ್ಮವೂ ಆದ ಅಭಿಪ್ರಾಯಪುಂಜವನ್ನೂ ಒದಗಿಸುತ್ತಾನೆ. ಹಾಸ್ಯ ಪ್ರಮುಖವಾದ ವಿಡಂಬನವನ್ನು ಎಂದೂ ಎಲ್ಲೂ ಕೈಬಿಡುವುದಿಲ್ಲ. ಜೊತೆಗೆ ಜಾಣ ವಿಭಾವನೆಯಿಂದಲೂ ತೀವ್ರರಾಗದಿಂದಲೂ ಕೂಡಿದ ಸುಶ್ರಾವ್ಯ ಭಾವಗೀತೆಗಳನ್ನೂ ಮಳೆಗರೆಯುತ್ತಾನೆ. ಇಂಥ ಸತ್ಕಾರಯೋಗ್ಯವಾದ ಸಂಮಿಶ್ರತೆಯ ವೈಚಿತ್ರ್ಯ ಮತ್ತಾವ ಕವಿವರ್ಯನಲ್ಲೂ ಗೋಚರಿಸುವುದಿಲ್ಲ.

ನಾಟಕವಸ್ತುವಿನ ಸಂವಿಧಾನದಲ್ಲೂ ಆರಿಸ್ಟಾಫನೀಸನ ಮಾದರಿಗೆ ಪ್ರತ್ಯೇಕ ವೈಲಕ್ಷಣ್ಯವಿದೆ. ನಾಲ್ಕಾರು ಘಟನಾವಳಿಗಳಿಂದಾದ ಸಮಕಟ್ಟಿನ ಆಖ್ಯನ ಅವನಂಗಡಿಯ ಮಾಲಲ್ಲ, ನಿಜ ನುಡಿಯಬೇಕಾದರೆ, ಕಥೆ ಹೇಳುವುದಲ್ಲ ಅವನ ಉದ್ದೇಶ, ಸಿಡಿಲಿನಂತೆ ಸಿಡಿದು ಕ್ಷೋಭೆ ಉಂಟು ಮಾಡುವ ಯಾವುದೋ ವಿನೂತನ ಮನೋಗತ ಅಥವಾ ಮಹಾಸಂಕಲ್ಪವೇ ನಾಟಕದ ತಿರುಳು, ಸರ್ವಸ್ವ, ಅದನ್ನು ಹಲವು ಪುಟ್ಟ ದೃಶ್ಯಗಳ ಸಹಾಯದಿಂದಲೂ ಮೇಳಗೀತಗಳ ಮೂಲಕವೂ ಪ್ರತಿಪಾದಿಸುವುದೇ ಕವಿಯ ಕೆಲಸ. ನಾಟಕದಲ್ಲಿ ಮೂರು ಅಂಗಗಳನ್ನು ಕಾಣುತ್ತೇವೆ. ಪ್ರಾರಂಭದಲ್ಲಿ ನಾಯಕ ಪಾತ್ರ ಆಗಮಿಸಿ ತನ್ನಲ್ಲಿ ಉದಯವಾಗಿರುವ ವಿಸ್ಮಯಕಾರಕವಾದರೂ ಉಪಯುಕ್ತವಾದ ಹೆಬ್ಬಯಕೆಯನ್ನು ವಚನಿಸುತ್ತದೆ, ಅದನ್ನು ಕಾರ್ಯಚರಣೆಗೆ ತರುವ ಕರ್ತವ್ಯವನ್ನು ಕೂಡಲೇ ಕೈಗೊಂಡು ಕಠೋರ ಅಡಚಣೆಗಳು ಅಡ್ಡ ಬಂದರೂ ಉಪಾಯದಿಂದ ಅವನ್ನು ಅತಿಕ್ರಮಿಸಿ, ಹಿಡಿದ ಪ್ರಯತ್ನವನ್ನು ನೆಲೆಗೆ

ಮುಟ್ಟಿಸಿ, ಖುತಕೃತ್ಯವಾಗುತ್ತದೆ ಆಮೇಲೆ, ಮಧ್ಯದ ಭಾಗವಾಗಿ, ನಾಟ್ಯಮೇಳ ಸಾಮಾಜಿಕ ಸಂದೋಹದ ಎದುರಿಗೆ ನಿಂತು, ಕವಿಯ ಪರವಾಗಿ ಹಾಡು ಹಾಡಿ, ಭಾಷಣ ಮಾಡಿ, ಹುರಿದುಂಬಿಸುತ್ತದೆ. ಇದೆ ಮುಂಭಾಗಕ್ಕೆ ಅಡಿಯಿಡುವಿಕೆ (ಪ್ಯಾರಬಸಿಸ್) ಎಂಬ ಕುತೂಹಲಜನಕವಾದ ಸಂಗತಿ. ಮೂರನೆಯ ಭಾಗದಲ್ಲಿ ನಾಯಕನ ಯೋಜನೆಯಿಂದ ಉಂಟಾಗಿರುವ ಸತ್ಫಲಗಳನ್ನು ಕೆಲವು ಬಿಡಿ ದೃಶ್ಯಗಳು ತೋರಿಕೊಡುತ್ತವೆ. ನಾಯಕನ ಹಿರಿಮೆಯನ್ನು ಸ್ಪಷ್ಟಗೊಳಿಸಿ, ಆತನನ್ನು ಒಂದು ವಿಧದ ದೇವತ್ವಕ್ಕೆ ಏರಿಸಿ ಮುಕ್ತಾಯವಾಗುತ್ತದೆ. ಸಡಗರದ ನಾಟಕ. ಅಸಾಧಾರಣವಾದ ವಿಚಿತ್ರಾಭಿಪ್ರಾಯವೇ ನಾಟಕದ ರಸಯುಕ್ತ ಕೊಡುಗೆ, ಲೋಕಾಚಾರಕ್ಕೆ ವಿಪರ್ಯಾಸವಾದರೂ ಅದು ತಿರಸ್ಕಾರಯೋಗ್ಯವಾದ ತಿರುಗು ಮುರುಗಲ್ಲ. ತಲೆಕೆಳಗಲ್ಲ. ಚಿಂತನೆಯನ್ನು ಕೆರಳಿಸುವ ಪ್ರಚೋದನೆ ಅದು ಆತನ ಪ್ರತಿಯೊಂದು ನಾಟಕವೂ ಕಾರ್ಯಗತವಾದ ಒಂದೊಂದು ತಮಾಷೆ. ನಗು ಬರಿಸುವ ವಾಕ್ಯವೂ ಕೈ ಮೈ ಒಲೆದಾಟವೂ ಹಾಗಿರಲು, ಇಡೀ ವಿರಚನೆಯೇ ಒಂದು ಕುಚೋದ್ಯ.

ವಿನೋದನಾಟಕವನ್ನು ತಾನೇ ತಿದ್ದಿ ಸಿಂಗರಿಸಿ ಕೊಳೆ ಮಾಲಿನ್ಯವೆಲ್ಲವನ್ನೂ ತೊಡೆದು ಹಾಕಿ ಅಂದಗೊಳಿಸಿದಾತನೆಂದು ಹೆಮ್ಮೆಯಿಂದ ಹೇಳಿಕೊಂಡ, ಆರಿಸ್ಟ್ಟೆಫನೀಸ್, ತನ್ನ ಕೈಗೆ ಅದು ಬಂದಾಗ ಒರಟು, ಒಡ್ಡು, ಪೋಕರಿತನಗಳಿಂದ ಅದರ ರೂಪ ಕುರೂಪವಾಗಿತ್ತಂತೆ, ಗ್ರಾಮ್ಯತೆ, ಅಶ್ಲೀಲ, ಅವಲಕ್ಷಣಗಳನ್ನು ತೆಗೆದುಹಾಕಿ, ಸುಸಂಸ್ಕೃತ ನಡೆನುಡಿ ಹಾವ ಭಾವ ಒಯ್ಯಾರಗಳನ್ನು ಹೊಂದಿಸಿಕೊಟ್ಟು, ನಾಗರಿಕ ಸಮಾಜಕ್ಕೆ ಅದು ಸಮಂಜಸವಾಗುವಂತೆ ಏರ್ಪಡಿಸಿದನಂತೆ, ಒಣ ಜಂಭವಲ್ಲ ಈ ಮಾತು. ಆರಿಸ್ಟಾಫನೀಸ್ ವಿನೋದನಾಟಕಕ್ಕೆ ಶಿಸ್ತನ್ನು ತಂದುಕೊಟ್ಟ; ಆದರೆ ಅಶ್ಲೀಲತೆ ಅತಿರೇಕಗಳು ಅವನಲ್ಲೂ ಅಲ್ಪ ಸ್ವಲ್ಪ ಉಂಟು.

ಅಕಾರ್ನಿಯನ್ನರು ಎಂಬ ನಾಟಕದ ಮುಖ್ಯ ಪಾತ್ರ ಡಿಕಿಯೊಪೊಲಿಸ್ (ಪ್ರಾಮಾನಿಕತೆ, ರಾಜ್ಯನೀತಿ) ಗ್ರಾಮಾಂತರದವನಾದರೂ ವಿವೇಕಶಾಲಿ, ಅಥೇನ್ಸ್ ಎಚ್ಚರಗೇಡಿತನದಿಂದ ಸ್ಪಾರ್ಟದೊಂದಿಗೆ ಯುದ್ಧ ಹೂಡಿರುವುದರಿಂದ ಆತ ತನ್ನ ಮನೆ ಜಮೀನನ್ನು ಬಿಟ್ಟು ಕೊಟ್ಟು ನಗರಕ್ಕೆ ಬಂದು ನಿಲ್ಲಬೇಕಾಗಿದೆ. ಸೌಕರ್ಯವಿಲ್ಲ, ವಿಶ್ರಾಂತಿಯಿಲ್ಲ. ಹೊತ್ತನ್ನು ಮರೆಸುವ ವ್ಯವಸಾಯವಿಲ್ಲ. ನರಳುತ್ತಿದ್ದಾನೆ, ಅರ್ಧದೇವತೆ ಆಂಪಿತಿಯಸ್‌ನನ್ನು ದೇವವರ್ಗ ಮಧ್ಯಸ್ತಿಕೆಗೋಸ್ಕರ ನೇಮಿಸಿ, ಕಳಿಸಿದ್ದಾರೆ; ಆದರೆ ಅವನ ಬಳಿ ಸ್ಪಾರ್ಟಕ್ಕೆ ಹೋಗಿಬರುವ ಖರ್ಚಿಗೆ ದುಡ್ಡಿಲ್ಲ. ರಾಷ್ಟ್ರಸಭೆಯನ್ನು ಹೊಕ್ಕು ಪ್ರಯಾಣದ ವೆಚ್ಚವನ್ನು ಬೇಡುತ್ತಾನೆ; ಆಡಳಿತಗಾರರಿಂದ ಅವನಿಗೆ ಕೋಲುಸೇವೆಯಾಗುತ್ತದೆ. ಪರ್ಷಿಯಕ್ಕೆ ಹೋಗಿದ್ದ ರಾಯಭಾರಿಗಳು ಆ ಆಸ್ಥಾನದ ಸಚಿವ ಶ್ರೀಮಂತ ರಾಜನೇತ್ರನೊಂದಿಗೆ ಹಿಂತಿರುಗಿ, ಅಲ್ಲಿಂದ ಹೇರಳ ಹೊನ್ನು ಬರುವ ಭರವಸೆ ಇದೆ ಎನ್ನುತ್ತಾರೆ. ಅದೆಲ್ಲ ಮೋಸದ ಕುತಂತ್ರವೆಂಬುದನ್ನು ಡಿಕಿಯೊಪೊಲಿಸ್ ಬಲ್ಲ, ಆದರೆ ಅವನೊಬ್ಬನೇ ಕದನ ವಿರೋಧಿ, ಏನನ್ನು

ತಾನೇ ಮಾಡಬಲ್ಲ? ಬಲಿದ ದುಗುಡತನ ಮಧ್ಯೆ ಅವನಿಗೊಂದು ಯೋಜನೆ ಹೊಳೆಯುತ್ತದೆ. ಅಂಪಿತಿಯಸ್‌ನನ್ನು ಗುಟ್ಟಾಗಿ ಕರೆದು, ಎಂಟು ಹಣವನ್ನು ಅವನಿಗಿತ್ತು, ತನ್ನೊಂದು ಸಂಸಾರಕ್ಕೆ ಮಾತ್ರ ಅನ್ವಯಿಸುವ ಪ್ರತ್ಯೇಕ ಶಾಂತಿಕೌಲಿಗೆ ಸ್ಪಾರ್ಟವನ್ನು ಒಪ್ಪಿಸೆಂದು ನಿರೂಪವಿತ್ತು ಬೀಳ್ಕೊಡುತ್ತಾನೆ. ಥ್ರೇಸಿನಿಂದ ಕಾಡುಜನರ ರೌದ್ರಸೈನ್ಯವೊಂದು ಅಥೆನ್ಸಿನ ಸಹಾಯಕ್ಕೆ ಬರುತ್ತದೆ; ಅವರು ಸಿಕ್ಕಿದ್ದೆಲ್ಲವನ್ನೂ ಅಧಿಕಾರಿಗಳ ಕಣ್ಣೆದುರೇ ದೋಚಿಕೊಳ್ಳುತ್ತಾರೆ. ಪಾಪ, ಡಿಕೊಯೊಪೊಲಿಸನ ತಿಂಡಿತೀರ್ಥವೂ ಅವರ ಪಾಲು. ಇಮ್ಮಡಿಯಾಗುತ್ತದೆ, ಅವನ ವ್ಯಸನ. ಆ ಸಮಯಕ್ಕೆ ಶುಭವಾರ್ತೆಯೊಡನೆ ಅಲ್ಲಿಗೆ ಬರುತ್ತಾನೆ. ಆಂಪಿತಿಯಸ್, ಸ್ಪಾರ್ಟದವರು ಮೂರು ಬಗೆಯ ಮದ್ಯವನ್ನು ಶಾಂತಿಕರಾರಾಗಿ ಕಳಿಸಿದ್ಧಾರೆ. ೫ ವರ್ಷದ್ದು, ೧೦ವರ್ಷದ್ದು, ೩೦ ವರ್ಷದ್ದು. ಡಿಕಿಯೋಪೊಲಿಸಿನಿಗೆ ಕಡೆಯದೇ ಬಲುರುಚಿ. ಆದರೂ ಅವನ ಕಷ್ಟಗಳು ಕೊನೆಗೊಂಡಿಲ್ಲ. ದೇಶದ್ರೋಹಿಯೆಂದು ಅವನ್ನು ಸಂಬೋಧಿಸುತ್ತ ಉಗ್ರರಾದ ಜನ ದಂಡ ವಿಧಿಸುವುದಕ್ಕೆ ಹಾತೊರೆಯುತ್ತಿದ್ದಾರೆ. ಡಿಕಿಯೊಪೊಲಿಸ್ ಯುರಿಪಿಡೀಸನಲ್ಲಿಗೆ ಓಡಿಹೋಗಿ ಅವನಿಂದ ಟ್ರ್ಯಜಿಕ್ ನಟನ ಚಿಂದಿ ಬಟ್ಟೆ ಮಣ್ಣು ಪಾತ್ರೆ ದೊಣ್ಣೆಗಳನ್ನು ಎರವು ಪಡೆದು, ಸಭೆಗೆ ಹಿಂದಿರುಗಿ, ಬಾಷಣ ಮಾಡುತ್ತಾನೆ. ಎದುರಾಳಿ ಯುದ್ಧಾಪೇಕ್ಷಿ ಲಮಾಕಸ್‌ನನ್ನು ಸೋಲಿಸುತ್ತಾನೆ. ವಾಕ್ಸಮರದಲ್ಲಿ, ಆಮೇಲೆ ಪ್ಯಾರಬಸಿಸ್. ಮೂರನೆಯ ಭಾಗದಲ್ಲಿ ಡಿಕಿಯೊಪೊಲಿಸ್‌ನೊಡನೆ ಕೊಟ್ಟು ತೆಗೆದುಕೊಳ್ಳುವುದಕ್ಕೆ ತಮ್ಮ ತಮ್ಮ ಸರಕಿನೊಂದಿಗೆ ಮೆಗಾರದಿಂದ ಥೀಬ್ಸಿನಿಂದ ಜನ ಧಾವಿಸುತ್ತಾರೆ. ಅಲ್ಲಿಗೆ ಬಂದ ಕೆಲವು ಅಥೆನ್ಸಿನವರಿಗೆ ಅದೃಷ್ಟಶಾಲಿಯನ್ನು ಕಂಡು ಮೆಚ್ಚಿಕೆ, ಅಸೂಯೆ. ಲಮಕಸ್ಸನಾದರೊ ಸಂಗರತೃಷ್ಣೆಯನ್ನು ಬಿಡುವುದಿಲ್ಲ. ಪೆಟ್ಟುತಿಂದು ಗಾಯಗಳ ನೋವಿನಿಂದ ಬಸವಳಿದು ಹಿಂತಿರುಗಿ ಗೋಳಾಡುತ್ತಾನೆ. ಹಠಮಾರಿ, ಡಿಕಿಯೋಪೊಲಿಸನಿಗೆ ಕುಗ್ಗದ ಸಮ್ಮೋಧ.

ರಕ್ತವೀರರು ವಿಲಕ್ಷಣಪ್ರತಾಪದಿಂದ ಕಾಂತಿಪೂರ್ಣವಾಗಿರುವ ರೂಪಕ. ಕೇಂದ್ರ ವ್ಯಕ್ತಿ ಡೀಮಸ್?ಆಸತಿವಂತ, ಮುಂಗೋಪಿ, ಸಂಶಯ ಸ್ವಭಾವದವ, ಮನೆ ಮಂದಿ ಆಳುಕಾಳು ಯಾರನ್ನೂ ಆತ ನಂಬುವುದಿಲ್ಲ; ಆದರೆ ಪ್ಯಾಫ್ಲಗೋನಿಯದ ಒಬ್ಬನನ್ನು ಗುಲಾಮನಾಗಿ ಕೊಂಡಂದಿನಿಂದ ಅವನಿಗೆ ತಾನೇ ಅಡಿಯಾಳಾಗಿದ್ದಾನೆ. ಗುಲಾಮ ಯಜಮಾನನನ್ನು ತನ್ನ ಕೈಗೊಂಬೆಯಂತೆ ಆಡಿಸುತ್ತಿದ್ಧಾನೆ. ಆ ಠಕ್ಕನಿಂದ ಇತರ ಸೇವಕರೆಲ್ಲರಿಗೂ ಚಿತ್ರಹಿಂಸೆ. ತಡೆದು ತಡೆದು ಸಾಕಾಗಿ ಇಬ್ಬರೂ ಮಸಲತ್ತು ನಡೆಸುತ್ತಾರೆ. ಬಹಳ ಹಿಂದೆ ಬಾಕಿಸ್ ದೇವತೆ ಕಣಿ ಹೇಳುತ್ತೆಂದು ಡೀಮಸ್‌ಗೆ ಬಿನ್ನವಿಸುತ್ತಾರೆ. ಅದೇನೆಂದರೆ, ಡೀಮಸ್ ಕ್ರಮವಾಗಿ ನಾಲ್ಕು ಚಿಲ್ಲರೆ ವ್ಯಾಪಾರಿಗಳ ಉಸ್ತುವಾರಿಗೆ ಒಳಗಾಗತಕ್ಕದ್ದು; ಅಗಸೆಹಗ್ಗದವ, ಕುರಿಮಂದೆಯವ, ಚಕ್ಕಳದವ, ಕರಿಕಡುಬನ್ನು ಮಾರುವವ, ಪ್ಯಾಫ್ಲಗೋನಿಯದ ಮನುಷ್ಯನೇ ಚಕ್ಕಳದ ವರ್ತಕ; ಅವನ ಅಧಿಕಾರ ಇನ್ನೇನು ಮುಗಿಯುತ್ತದೆ ಆತ ಬಂದು ಗುಡುಗಾಡಿದರೂ

ಅಂಜದೆ, ಅವರಿಬ್ಬರೂ ಹುಡುಕಾಡಿ ನಾಲ್ಕನೆಯ ಬೀದಿ ವ್ಯಾಪಾರಿಯನ್ನು ಕಂಡು ಹಿಡಿದು, ಅವನ ಭವಿಷ್ಯ ದೊಡ್ಡದೆಂದು ಪುಸಲಾಯಿಸಿ, ತಮ್ಮ ವೈರಿಯೆದುರು ಹೋರಾಟಕ್ಕೆ ಅವನನ್ನು ಕೆರಳಿಸುತ್ತಾರೆ, ಸುಳ್ಳು, ಕಳವು, ಭಾಷಾ ಭಂಗ, ಧೃಷ್ಟತನ, ಬಡಾಯಿ ಎಲ್ಲದರಲ್ಲೂ ಅವನ ಕೈಯೇ ಮೇಲಾಗಿ, ಪ್ಯಾಫ್ಲಗೋನಿಯದವನ ವಂಚನೆಯೂ ಟೊಳ್ಳೂ ಬಯಲಾಗುತ್ತವೆ. ಅಪಜಯವನ್ನು ಒಪ್ಪಿಕೊಂಡು ಆತ ಹಿಂದಕ್ಕೆ ಸರಿಯುತ್ತಾನೆ. ಅವನಿಗೆ ಇನ್ನು ಮುಂದೆ ಕೋರಿಸೆಟ್ಟಿಯಾಗುವುದೊಂದೇ ಉದರಭರಣಕ್ಕೆ ಇರುವ ಉಪಾಯ. ಹಿತಚಿಂತಕನ ಅಧಿಕಾರಮುದ್ರೆಯನ್ನು ಡೀಮಸ್ ಹೊಸಬನಿಗೆ ಕೊಡುತ್ತಾನೆ. ಹಾಗೆ ಮಾಡಿದ ತಕ್ಷಣವೇ ಡೀಮಸ್‌ಗೆ ತಾರುಣ್ಯ, ಲವಲವಿಕೆ, ಗೆಲವು, ಆಸಕ್ತಿಗಳು ಕೂಡಿಬರುತ್ತವೆ, ಕಳೆಯೇರುತ್ತದೆ, ಅವನ ಮುಖ, ಕಣ್ಮರೆಯಾಗಿದ್ದ ಶಾಂತಿ ಸುಭಿಕ್ಷದ ಕಾಲ ಪುನಃ ಪ್ರಾಪ್ತಿಸಿದಂತೆ ಅವನಿಗೆ ಸಂತೋಷವಾಗುತ್ತದೆ.

ಕವಿಯ ಇಂಗಿತವನ್ನು ಸರ್ವರೂ ಸುಲಭವಾಗಿ ಗ್ರಹಿಸಬಹುದಾಗಿತ್ತು. ಅಥೆನ್ಸಿನ ಜನತೆಯೇ ಡೀಮಸ್, ವಿಧೇಯ ಸೇವಕರು ನೀಕಿಯಸ್, ಡಿಮೀಟ್ರಿಯಸ್ ಎಂಬ ದಂಡಾಧೀಶರು. ಪ್ಯಾಫ್ಲಗೋನಿಯದ ದಗಾಕೋರನೇ ದುಷ್ಟನೂ ದಬ್ಬಾಳಿಕೆಯವನೂ ಆದ ಮುಖಂಡ ಕ್ಲಿಯಾನ್, ಪ್ರ.ಶ.ಪೂ೪೨೬ರಲ್ಲಿ ಕ್ಲಿಯಾನ್ನನ್ನು ಹೆಸರಿಟ್ಟು ಅವಹೇಳನಗೈದು, ಅವನ ಸೇಡಿಗೆ ಪಕ್ಕಾಗಿ, ಸಂಕಟಪಟ್ಟಿದ್ದ, ಯುವಕ ಅರಿಸ್ಟೋಫೆನೀಸ್. ಆಕಸ್ಮಿಕ ವಿದ್ಯಮಾನಗಳಿಂದ ಕ್ಲಿಯಾನ್ ದರ್ಪ ಮೇಲಕ್ಕೇರಿತ್ತು. ವ್ಯಕ್ತಿಗಳನ್ನು ನಿರ್ದೇಶಿಸಿ ನಕಲಿ ಮಾಡಕೂಡದೆಂಬ ಕಾನೂನನ್ನು ಪ್ರಾಯಶಃ ಜಾರಿಗೆ ತಂದ ಪ್ಯಾಫ್ಲಗೋನಿಯದ ಕೊಂಡಾಳೇ ಕ್ಲಿಯನ್ ಎಂಬುದು ಅರೆಬುದ್ಧಿಯ ನೋಟಕರಿಗೂ ತಕ್ಷಣ ಅರ್ಥವಾಗುತ್ತಿತ್ತು. ಪ್ಯಾಫ್ಲಸ್ ಎಂದರೆ ನೊರೆ. ಭಾಷಣ ಮಾಡುವಾಗ ಕ್ಲಿಯಾನ್‌ನ ತುಟಿಗಳಿಂದ ನೊರೆ ಉಕ್ಕುತ್ತಿತ್ತು. ಆ ಪಾತ್ರವನ್ನು ವಹಿಸಿಕೊಳ್ಳಲು ಯಾವ ನಟನೂ ಮುಂದಕ್ಕೆ ಬರಲಿಲ್ಲವಂತೆ, ಅರಿಸ್ಟೋಫೆನೀಸನೇ ಅದನ್ನು ಕೈಗೊಳ್ಳಬೇಕಾಯಿತು. ಅಷ್ಟಕ್ಕೆ ಮುಗಿಯಲಿಲ್ಲ ತಡೆಗಳ ಕಥೆ. ಕ್ಲಿಯನ್‌ನ ವಿಕಾಟನುಕರಣದ ಮೊಗವಾಡ ಅವಶ್ಯಕವಾಗಿತ್ತು. ಅದನ್ನು ತಯಾರಿಸಿ ಕೊಡುವ ಕುಶಲಕೆಲಸಗಾರ ಎಲ್ಲಿಂದ ಬರಬೇಕು? ಆದರೂ ಕವಿ ಛಲವನ್ನು ಬಿಡಲಿಲ್ಲ. ಆದಿಯಲ್ಲಿ ನಟರು ಬಳಸಿಕೊಳ್ಳುತ್ತಿದ್ದ ವೇಷದ್ರವ್ಯವನ್ನು ನೆನಪಿಗೆ ತಂದುಕೊಂಡು ತನ್ನ ಮುಖಕ್ಕೆ ಹೆಂಡದ ಗಷ್ಟನ್ನು ಸವರಿಕೊಂಡು ಅನುಕಾರ್ಯನಾದನಂತೆ, ಕೆಟ್ಟ ಧೈರ್ಯಕ್ಕೆ ಇದೊಂದು ಉತ್ತಮ ನಿದರ್ಶನ.

ಕಲಾದೃಷ್ಟಿಯಿಂದ ದಕಳಪಿಯೂ ಸಪ್ಪೆಯೂ ಆಗಿರುವ ಮೋಡಗಳು ಕವಿಯ ನಾಟಕಚಕ್ರದಲ್ಲಿ ಅತ್ಯಂತ ಪ್ರಸಿದ್ಧವಾದದ್ದು, ಬಹಳ ಪರಿಚಿತವಾದ್ದದು, ಅದರಲ್ಲಿ ಅಪಹಾಸ್ಯಕ್ಕೆ ಪಶುವಾಗಿರುವಾತನಿಗೆ ಸಾಕ್ರಟೀಸ್ ಎಂದು ನಾಮಧೇಯ, ಚಾರಿತ್ರಿಕ ಮಹಾವ್ಯಕ್ತಿ ಸಾಕ್ರಟೀಸನ ವ್ಯಂಗ್ಯ ಚಿತ್ರವಲ್ಲ ಅದು, ನಿರ್ಬಂಧವೇನನ್ನೂ

ಲೆಕ್ಕಿಸದ ಆವೇಶ ಕಲ್ಪನೆಯ ನಿರ್ಮಾಣವಷ್ಟೇ. ಅಷ್ಟೇಕೆ, ನಾಟಕ ಜರುಗುತ್ತಿದ್ದಾಗ ತತ್ತ್ವಜ್ಞ ಸಾಕ್ರಟೀಸ್ ಪ್ರೇಕ್ಷಕನಾಗುತ್ತಿದ್ದ, ಮಗ್ಗುಲಿನವರಿಗಿಂತ ಹೆಚ್ಚು ಗಟ್ಟಿಯಾಗಿ ನಗುತ್ತಿದ್ದ. ನಾಟಕದ ಕಥಾವಸ್ತು ಹೀಗಿದೆ; ವಯಸ್ಕ ರೈತ ಸ್ಟ್ರೆಪ್ಸಿಯಡೀಸ್ ಹೆಂಡತಿಯ ಷೋಕಿಯಿಂದಲೂ ಮಗನ ಜೂಜುಕೋರತನದಿಂದಲೂ ಕೈ ಬರಿದುಮಾಡಿಕೊಂಡು ಋಣಭಾರದಿಂದ ಬಾಗಿ ತೊಳಲುತ್ತಿದ್ದಾನೆ. ಸಾಲಗಾರರನ್ನು ವಂಚಿಸುವ ತಂತ್ರ ಬೇಕಾಗಿದೆ. ಅವನಿಗೆ. ಸಾಕ್ರಟೀಸನೆಂಬ ಉಪಾಧ್ಯಾಯ ತಪ್ಪನ್ನು ಸರಿಯೆಂದು ಸಮರ್ಥಿಸಬಲ್ಲ ನವ್ಯನೈಪುಣ್ಯ ವನ್ನು ಬೋಧಿಸುತ್ತಿರುವ ಸುದ್ದಿ ತಾಕುತ್ತದೆ, ಅವನ ಕಿವಿಯನ್ನು . ಆ ವಿದ್ಯೆಯನ್ನು ಕಲಿತುಕೊಂಡು ಬಾ ಎಂದು ಮಗ ಫೀಡಿಪ್ಪಿಡೀಸನಿಗೆ ಹೇಳುತ್ತಾನೆ. ಆತ ಒಪ್ಪವುದಿಲ್ಲ. ಮುದುಕ ತಾನೇ ವಿದ್ಯಾರ್ಥಿಯಾಗುತ್ತಾನೆ. ಸಾಕ್ರಟಿಸನ ಫಂಟಿಸ್ಟಿರಿಆನ್ ಶಾಲೆಯಲ್ಲಿ, ಗುಡುಗು ಮಳೆಗಳನ್ನು ಕರೆಯುವ ಮೋಡಗಳೇ ದೇವರು ಜ್ಯೂಸ್ ಅಲ್ಲ. ಎಂಬುದೇ ಪ್ರಥಮಪಾಠ. ಮುಂದಣ ಪಾಠಗಳು ಇನ್ನೂ ಜಟಿಲ, ಶ್ರಮಸಾಧ್ಯ. ಸ್ಟ್ರೆಪ್ಸಿಯಡೀಸನ ಚಿತ್ತವೆಲ್ಲ ಕಡೆದ ಕಡೆ; ಬೋಧನೆಯನ್ನು ಅದೆಂತು ಒಳಕ್ಕೆ ತೆಗೆದುಕೊಂಡಿತು? ಫೀಡಿಪ್ಪಡೀಸ್ ಅವನ ಜಾಗಕ್ಕೆ ಬರಲೇಬೇಕಾಗುತ್ತದೆ. ಗುರು ಸಾಕ್ರಟೀಸ್ ಅವನನ್ನು ನ್ಯಾಯ ಅನ್ಯಾಯಗಳ ಹತ್ತಿರಕ್ಕೆ ಕಳಿಸುತ್ತಾನೆ. ವಿವಾದ ನಡೆದು ಅನ್ಯಾಯ ಗೆಲ್ಲುತ್ತದೆ. ಪ್ರಬುದ್ಧನಾದ ಈಡಿಪ್ಪಡೀಸ್ ಮನೆಗೆ ಹಿಂತಿರುಗಿ, ಹಣ ಕೊಟ್ಟಿದ್ದವರನ್ನು ತಬ್ಬಿಬ್ಬು ಮಾಡಿ ಬರಿಗೈಯಲ್ಲಿ ಹೋಗುವಂತೆ ವ್ಯವಸ್ಥೆಗೊಳಿಸುತ್ತಾನೆ ಮತ್ತು ಅದೇ ಜಾಣ್ಮೆಯನ್ನು ಉಪಯೋಗಿಸಿಕೊಂಡು ತಂದೆ ಏಟು ಕೊಡುತ್ತಾನೆ. ಕಾರ್ಯದಲ್ಲಿ ತಂದೆಗೆ ಉತ್ತಮ ನೆರವು ನೀಡುತ್ತಾನೆ. ನವ್ಯ ವಿದ್ಯೆಯೆಂದರೆ ಸ್ಟ್ರೆಪ್ಸಿಯಡೀಸನಿಗೆ ಈಗ ಸೇರುವುದಿಲ್ಲ; ರೋಷದಿಂದ ಉನ್ಮತ್ತನಾಗಿ ಸಾಕ್ರಟೀಸನ ವಿದ್ಯಾಲಯಕ್ಕೆ ಬೆಂಕಿಯಿಡುವ ನಿರ್ಧಾರದಿಂದ ಅದರತ್ತ ಸರಿಯುತ್ತಾನೆ. ಈ ರೂಪಕವೇ ತನ್ನ ಕೃತಿಗಳಲ್ಲಿ ಅತ್ಯುತ್ತಮವಾದುದೆಂಬ ನೆಚ್ಚಿಕೆ ಕವಿಗಿದ್ದಂತೆ ತೋರುತ್ತದೆ.

ಋಣಜಗಳು ಎಂಬ ನಾಟಕದಲ್ಲಿ ನ್ಯಾಯದರ್ಶಿಗಳ (ಜ್ಯೂರಿ) ನೇಮಕವನ್ನು ಹಳಿಯಲಾಗಿದೆ. ಅದರಲ್ಲೂ ತಂದೆ ಮಕ್ಕಳ ವಿರುದ್ಧ ನಡೆತೆಯ ಹೋರಾಟವೇ ಅದರ ಸಾರ ವಿಷಯ.

ಕಲ್ಪನಾವೈಭವ ಒಡೆದುಮೂಡಿರುವುದು ಶಾಂತಿ ಎಂಬ ರೂಪಕದಲ್ಲಿ, ಅಲ್ಲದೆ ಅದರಲ್ಲಿ ನೀಕಿಯಸ್ಸನ ನೇತೃತ್ವದಲ್ಲಿ ಇನ್ನೇನು ಆಗಲಿರುವ ಅಥೆನ್ಸ್‌ಸ್ಪಾರ್ಟಗಳ ಹಂಗಾಮಿ ಒಡಂಬಡಿಕೆಯ ಮುಂಗಾಣ್ಕೆ ಆಶ್ಚರ್ಯಕರವಾಗಿ ಕಾಣಬಂದಿದೆ. ಅಥೆನ್ಸಿನ ದ್ರಾಕ್ಷಿತೋಟಗಾರ ಟ್ರೈಗಾಯಿಅಸ್‌ಗೂ ಅವನ ಮನೆಯವರಿಗೂ ಅನ್ನಾಭಾವ ತಟ್ಟಿದೆ. ರೆಕ್ಕೆಯ ತೇಜಿ ಪೇಗಾಸಸ್ಸನ್ನು ಹತ್ತಿ ಆಕಾಶಕ್ಕೇರಿದ ಪುರಾಣವೀರ ಬೆಲರಫಾನನ್ನು ತಾನೇ ಹಿಂಬಾಲಿಸಬಾರದು ಎಂದು ನಾಯಕ ಆಲೋಚಿಸುತ್ತಾನೆ. ಕುದುರೆಯ ಬದಲು ಅವನಿಗೊಂದು ದೈತ್ಯಕಾರದ ಜೀರುಂಡೆ ದೊರಕುತ್ತದೆ. ಅದರ ಮೇಲೆ

ಕುಳಿತು. ಎಟ್ನ ಪರ್ವತದ ಶಿಖರದಿಂದ ಕುಪ್ಪಳಿಸಿ, ಹರಿ ಏರಿ, ಒಲಿಂಪಸ್ ಸ್ವರ್ಗವನ್ನು ತಲುಪುತ್ತಾನೆ ಆ ಲೋಕ ಶೂನ್ಯವಾಗಿದೆ; ಬಾಗಿಲಬಂಟ ಹರ್ಮಿಸ್, ಆಡಳಿತಗಾರ ಯುದ್ಧದೇವ ಪಾಲಿಮಸ್, ಇಬ್ಬರ ಹೊರತು ಮಿಕ್ಕದೂತರುಗಳೆಲ್ಲರೂ ಸುಮ್ಮನೆ ಕಚ್ಚಾಡುತ್ತಿರುವ ಗ್ರೀಕರ ಮೇಲಣ ಜುಗುಪ್ಸೆಯಿಂದ ಒಲಿಂಪಸ್ಸನ್ನು ಪರಿತ್ಯಜಿಸಿ ಎಲ್ಲಿಗೋ ಹೊರಟು ಹೋಗಿದ್ದಾರೆ. ಶಾಂತಿಯನ್ನು ಕೂಪದ ತಟ್ಟತಳದಲ್ಲಿ ಹುದುಗಿಸಿದ್ದಾನೆ ಸಂಗರ ದೇವ. ಸಮಸ್ತ ಗ್ರೀಕ್ ರಾಷ್ಟ್ರಗಳನ್ನೂ ಒರಳಿನಲ್ಲಿ ಕುಟ್ಟು ಪುಡಿಮಾಡುವುದೇ ಆ ಕ್ರೂರಿಯ ಇಚ್ಚೆ. ಎಂದರೆ, ಒರಳಿನೊಳಕ್ಕೆ ಈರುಳ್ಳೀ (ಮೆಗಾರ) ಲೀಕ್‌ಗಡ್ಡೆ (ಪ್ರಾಸಿಯ) ಚೀಸ್ (ಸಿಸಿಲಿ) ಜೆನುತುಪ್ಪ (ಅಥೆನ್ಸ್)ಗಳನ್ನು ಸುರಿದಿದ್ದಾನೆ. ನೇರ್ಪಾಗಿ ಜಜ್ಜುವ ಎರಡು ಒನಕೆಗಳಿಗಾಗಿ ಅರಸುತ್ತ ನಡೆಯುತ್ತಾನೆ. ದೊರೆ ಅದೇ ಸೂಕ್ತ ಗಳಿಗೆಯೆಂದು ಬಗೆದು, ಟ್ರಿಗಾಯಿಅಸ್ ಗ್ರೀಸಿನಿಂದ ರೈತರನ್ನು ಬೇಗ ಕರೆಸಿಕೊಳ್ಳುತ್ತಾನೆ. ಹರ್ಮಿಸನ ಕೈ ಬೆಚ್ಚಗೆ ಮಾಡಿ ಅವನನ್ನು ಒಲಿಸಿಕೊಳ್ಳುತ್ತಾರೆ. ಎಲ್ಲರ ಮೆಹನತ್ತಿಗೆ ಫಲವಾಗಿ ಬಾವಿಯಿಂದ ಮೆಲಕ್ಕೆದ್ದು ಬರುತ್ತಾಳೆ ಶಾಂತಿ. ಸ್ವಲ್ಪವೂ ವಿಳಂಬವಿಲ್ಲದೆ ಅವಳೊಂದಿಗೆ ಎಲ್ಲರೂ ಭೂಮಿಗೆ ಇಳಿದುಬಿಡುತ್ತಾರೆ. ಗ್ರೀಸಿನಲ್ಲೆಲ್ಲ ಮಹಾದಾನಂದ, ಟ್ರಿಗಾಯಿಸ್‌ಗೂ ಶಾಂತಿಗೂ ವಿವಾಹಕ್ಕಾಗಿ ಸಿದ್ದತೆಗಳ ಸಂಭ್ರಮವೇ ಸಂಭ್ರಮ.

ಲೂಸಿಸ್ಟ್ರಾಟಿ ರೂಪಕದಲ್ಲಿ (ಲೂಸಿಸ್ಟ್ರಾಟ=ದಳ ವಿಸರ್ಜಕ) ಅಥೆನ್ಸಿನ ಹಠಮಾರಿತನ, ಕಾಳಗಾಪೇಕ್ಷೆಗಳಿಂದ ತನಗಾದ ಅಗಾಧ ಹೇವರಿಕೆಯನ್ನು ಕವಿ ಸುವ್ಯಕ್ತಗೊಳಿಸಿದ್ದಾನೆ. ಏನಾದರೂ ಒಂದು ಮನುಷ್ಯಾತೀತ ವೈಪರೀತ್ಯ ಜರುಗಿದಲ್ಲದೆ ತನ್ನ ನಾಡಿಗೆ ಬುದ್ಧಿ ಬರುವುದಿಲ್ಲವೆಂದು ಅವನ ಮತ. ನಾಟಕದಲ್ಲಿ ಜಗಳಗಂಟಿ ಪುರುಷಜಾತಿಗೆ ವಿವೇಕ ಬೋದಿಸುವ ಹೊಣೆಗಾರಿಕೆಯನ್ನು ತನ್ನ ಕೈಗೆ ತೆಗೆದುಕೊಳ್ಳುತ್ತದೆ. ಸ್ತ್ರೀಜಾತಿ ಲೂಸಿಸ್ಟ್ರಾಟ ಮಹಿಳೆಯರ ಮುಖ್ಯಸ್ಥೆ. ಸ್ಪಾರ್ಟದಿಂದ ಲ್ಯಾಂಪಿತೊವನ್ನು ಕರೆಸಿಕೊಳ್ಳುತ್ತಾಳೆ. ಇತರ ಶತ್ರುರಾಜ್ಯಗಳಿಂದಲೂ ಅವಳ ಆಹ್ವಾನದಂತೆ ಪ್ರತಿನಿದಿಗಳು ಬಂದು ಗುಂಪಾಗುತ್ತಾರೆ. ಶಯನಗಾರಗಳಿಂದ ತಮ್ಮ ತಮ್ಮ ಗಂಡಂದಿರನ್ನು ಹೊರದೂಡುವುದೇ ಅವರ ಸಂಗ್ರಾಮಬೇರಿ. ಆಮೇಲೆ ಗಂಡಸರೆಲ್ಲ ಎಲ್ಲೊ ದಣಿದು ನಿದ್ದೆಗೈಯ್ಯುತ್ತಿರುವಾಗ ಹೆಂಗಸರು ಪಟ್ಟಣದ ದುರ್ಗವನ್ನು ಸ್ವಾಧೀನಪಡಿಸಿಕೊಳ್ಳುತ್ಥಾರೆ. ಅದನ್ನು ಕಸಿದುಕೊಳ್ಳುವ ಪ್ರಯತ್ನದಲ್ಲಿ ಪುನಃ ಪುನಃ ಸೋಲಾಗುತ್ತದೆ. ಪುರುಷರಿಗೆ. ಯಾವ ಪ್ರಲೋಭನೆಗೂ ಸಿಕ್ಕವುದಿಲ್ಲ. ಗಟ್ಟಿಮನಸ್ಸಿನ ಹೆಂಗಸರು. ಆಗ ಕದನವಿರಾಮದ ಘೋಷಣೆಯೊಡನೆ ದೂತ ಆಗಮಿಸುತ್ತಾನೆ. ಸ್ಪಾರ್ಟದಿಂದ, ಲೂಸಿಸ್ಟ್ರಾಟಳ ಸಮಾಧಾನದ ಸಲಹೆ ಸರ್ವರಿಗೂ ಒಪ್ಪಾಗುತ್ತದೆ, ಭರ್ತಬಾರ್‍ಯೆಯರು ಜೋಡಿ ಜೋಡಿಯಾಗಿ ಮೆರವಣಿಗೆ ತೆರಳುತ್ತಾರೆ. ಉಲ್ಲಾಸಪೂರಿತರಾಗಿ.

ಅದೇ ೪೧೧ರಲ್ಲಿ ಬಂದ ಥೆಸ್ಮೊಫರಿಯ ವ್ರತದ ಹೆಣ್ಣುಗಳು ಎಂಬ ನಾಟಕದಲ್ಲೂ ಕಾರುಬಾರು ಹೆಂಗಸರದ್ದೇ. ಯುರಿಪೀಡೀಸ್ ಹೆಂಗಸರನ್ನು ಹೀನಾ ಮಾನಾ ಬೈದು ಲಜ್ಜೆಗೆ ದಬ್ಬಿದ್ದಾನೆಂದು ಅವನ ಮೇಲೆ ಅವರಿಗೆಲ್ಲ ಕೆಂಡಗೋಪ. ಯಾವ ರೀತಿ ಸೇಡು ತೀರಿಸಿಕೊಳ್ಳಬೇಕೆಂಬುದನ್ನುಕಂಡು ಹಿಡಿಯುವುದಕ್ಕೆ ಹಬ್ಬದ ನೆಪದಲ್ಲಿ ಗುಪ್ತ ಸಭೆ ಸೇರುತ್ತದೆ. ಉರಿಪಡೀಸ್ ನರಸೋಗಿನ ನರಿ. ಮಾವನಿಗೆ ಹೆಣ್ಣುವೇಷ ಹಾಕಿ ಅವನನ್ನು ಕಳಿಸುತ್ತಾನೆ, ರಹಸ್ಯಬೇದನಕ್ಕೆ. ಚಾಣಾಕ್ಷಮಹಿಳೆಯರಿಗೆ ಅವನಾರೆಂದು ಗೊತ್ತಾಗುತ್ತದೆ. ನಿರ್ಭಾಗ್ಯ ವೃದ್ಧನನ್ನು ಬಂಧನದಲ್ಲಿ ಇಡುತ್ತಾರೆ. ಯುರಿಪಡೀಸನ ಗಂಭೀರ ನಾಟಕವೆಲ್ಲ ಅರಿಸ್ಟೋಫೆನೀಸನ ಅಂಗೈ ಮೇಲಿದ್ದದ್ದು ಪ್ರಮಾಣವಾಗುತ್ತದೆ. ಈ ನಾಟಕದಲ್ಲಿ!

ಹಳೆಯ ಬಗೆಯ ವಿನೋದ ನಾಟಕದಲ್ಲಿ ಎಂಥ ಅಳ್ಳಯರಾಮ ವಿಕಟತ್ವ ಕುಣುದಾಡುತ್ತಿದ್ದರೂ ಅದು ಎಷ್ಟು ಎತ್ತರಕ್ಕೆ ಹತ್ತಬಹುದೆಂಬುದನ್ನು ಸಾರುತ್ತದೆ– ಹಕ್ಕಿಗಳು ಎಂಬ ಕೃತಿ. ಅದೇ ಕವಿಯ ಶ್ರೇಷ್ಠತಮಸೃಷ್ಟಿ, ಅದರಲ್ಲಿ ವರ್ಣನೆಗೊಂಡಿರುವ ಮೇಘಕೋಗಿಲೆಯೂರು ಕವಿಯ ಸ್ವಪ್ನದ ಆದರ್ಶರಾಜ್ಯ. ಪೀತಿಟಾಯರಸ್ ಮತ್ತು ಯುಎಲ್‌ಪಿಡೀಸ್ ಇಬ್ಬರಿಗೂ ಅಥೆನ್ಸಿನ ಬಾಳು ಅತ್ಯಂತ ದುಸ್ಸಾಹವಾಗಿದೆ. ಪುರಾತನ ಯುಗದಲ್ಲಿ ಥ್ರೇಸಿನ ದೊರೆಯಾದ ಟೇರಿಅಸ್ ಅಥೆನ್ಸಿನ ರಾಜಕುಮಾರಿ ಪ್ರೋಕ್ನಿಯನ್ನು ವರಿಸಿ, ಕಾರಾಣಾಂತರದಿಂದ ಹೂಪೊ ಹಕ್ಕಿಯಾಗಿ ಪರಿವರ್ತನಗೊಂಡು ಉಪಖ್ಯಾನ ಅವರ ಜ್ಞಾಪಕಕ್ಕೆ ಬರುತ್ತದೆ. ಆ ಪಕ್ಷಿಯ ಬಳಿಗೆ ನಡೆದು, ತಮ್ಮ ವಾಸಕ್ಕೆ ಯಾವ ಪ್ರದೇಶ ಸಲ್ಲಬಹುದೆಂದು ಕೇಳುತ್ತಾರೆ. ಟೇರಿಅಸ್ ನಿರ್ದೇಶಿಸುವ ಯಾವ ಜಾಗವೂ ಅವರಿಗೆ ಸರಿತೋರುವುದಿಲ್ಲ. ಆಗೊಂದು ಸ್ಫೂರ್ತಿ ಚಿಮ್ಮುತ್ತದೆ. ಪೀತಿಟಾಯರಸ್ಸನ ಆಂತರ್ಯದಿಂದ. ಖಗಪ್ರಪಂಚ ಒಟ್ಟುಗೂಡಿ. ನೀಳ್ದುನಿಂದ ಬಿತಿಗಳಿಂದ ದುರ್ಭೇದ್ಯವಾದ ನಗರವೊಂದನ್ನು ವಾಯುಮಂಡಲದಲ್ಲಿ ಏತಕ್ಕೆ ಕಟ್ಟಿ ಎಬ್ಬಿಸಬಾರದು? ಹಾಗೆ ಮಾಡಿದರೆ ಮೇಲಣ ದೇವತೆಗಳೂ ಕೆಳಗಣ ಮನುಷ್ಯರೂ ವಿಹಗಸಂಕುಲಕ್ಕೆ ತಲೆಬಾಗಲೇ ಬೇಕಾಗುತ್ತದೆ. ಬಿತ್ತಿದ ಬೀಜಗಳನ್ನು ಭಕ್ಷಿಸತೊಡಗಿದರೆ ಭೂಮಿಯವರು ಹತೋಟಿಗೆ ಸಿಕ್ಕುತ್ತಾರೆ. ಅವು ಹರಕೆ ಹೊತ್ತು ಅರ್ಪಿಸುವ ಬಲಿಗಳ ಧೂಮವನ್ನು ತಡೆಗಟ್ಟಿಬಿಟ್ಟರೆ ದೇವತೆಗಳಿಗೆ ಕ್ಷಾಮ. ಅವರೂ ಮಣಿಯಬೇಕಾಗುತ್ತದೆ, ಹಕ್ಕಿಗಳಿಗೆ, ಪಕ್ಷಿಗಳ ನೃತ್ಯಮೇಳ ಯುಕ್ತಿಯುಕ್ತವಾದ ಆ ಉದ್ಯಮವನ್ನು ನಿರಾಕರಿಸುತ್ತದೆ. ಪ್ರಾರಂಭದಲ್ಲಿ, ಕೊನೆಗೆ ತನ್ನ ಸಮ್ಮತಿಯನ್ನು ಕೊಡುತ್ತದೆ. ಪೀತಿಟಾಯರಸ್ ಯುಎಲ್‌ಪಿಡೀಸರೇ ವಾಸ್ತುಶಿಲ್ಪಿಗಳು. ಬಗಲಿನಲ್ಲಿ ಅವರಿಗೂ ಪಕ್ಷ ಅಂಕುರಿಸಿ ಹೊಮ್ಮಿ ಅವರ ಮೇಸ್ತ್ರಿ ಕಾಯ ಸಂಗಮವಾಗುತ್ತದೆ. ಕ್ಷಿಪ್ರದಲ್ಲಿ ಎದ್ದು ನಿಂತ ನಗರ ನಭಕ್ಕೆ ಭೂಷಣವಾಗತ್ತದೆ.

ಕೂಡಲೇ ಅತಿಥಿಗಳು ಸಾಲಾಗಿ ದಯಮಾಡಿಸುತ್ತಾರೆ. ಮೊದಲು ಬಂದ ಕವಿಗೆ ಅವನ ಪ್ರಶಂಸಾಪ್ರಗಾಥಕ್ಕಾಗಿ ಅಂಗಿ, ಒಳ ಅಂಗಿಯ ಉಡುಗೊರೆ ಲಭ್ಯವಾಗುತ್ತದೆ. ಆಮೇಲಣ ಶಕುನಗಾರ, ನಕ್ಷತ್ರವಿಜ್ಞಾನಿ, ಅಥೇನ್ಸಿನ ನಿಯೋಗಿ?

ಮೂವರನ್ನೂ ಛೀಮಾರಿಮಾಡಿ ಬಡಿತದ ಬೆದರಿಕೆ ಹಾಕಿ ಓಡಿಸುತ್ತಾನೆ ಪೀತಿಟಾಯರಸ್. ಹೊಸ ಶಾಸನದ ಪ್ರತಿಗಳನ್ನು ಮಾರುವ ಬೀದಿವ್ಯಾಪಾರಿ ಕಾಲಿಡುತ್ತಾನೆ; ಅವನಿಗೂ ಆಗುತ್ತದೆ ಅದೇ ಶಾಸ್ತಿ. ಅನಂತರ ಪ್ಯಾರಬಸಿಸ್, ಅರಿಸ್ಟೋಫೆನೀಸನ ಗಂಭೀರಜ್ಞಾನಕ್ಕೂ ವಿಭಾವನಾವೈವಿಧ್ಯಕ್ಕೂ ರಸಪುಷ್ಟ ಕವಿತ್ವಕ್ಕೂ ಅದೊಂದು ಸಾಕ್ಷ್ಯ ಸಾಕು.

ಮೇದಿನಿಗೆ ಇಳಿಯಬಂದ ದೇವದೂತ ಈರಿಸ್ ಕೋಗಿಲೆಯೂರಿನ ಕಾವಲು ಸಿಪಾಯಿಗಳಿಗೆ ಸೆರೆಸಿಕ್ಕುತ್ತಾಳೆ. ಅವಳ ಹತ್ತಿರ ರಹದಾರಿ ಇಲ್ಲ. ಮುಂದಕ್ಕೆ ಹೋಗಗೊಡದೆ, ಪ್ರಶ್ನೆ ಕೇಳಿ ಆಕೆಯನ್ನು ತಲ್ಲಣಗೊಳಿಸಿ ಪೀಡಿಸುತ್ತಾನೆ. ಪೀತಿಟಾಯರಸ್. ಅಳುತ್ತ ಅವಳು ಹಿಂತಿರುಗುತ್ತಾಳೆ ತಂದೆ ಜೂಸನ ಬಳಿಗೆ, ಆಮೇಲೆ ದೂತನೊಬ್ಬ ಬಂದು, ಭೂಮಂಡಲವನ್ನೆಲ್ಲ ಮುಸುಕಿರುವ ಹಕ್ಕಿ ಹುಚ್ಚನ್ನು ಕಣ್ಣಿದುರಿಗೆ ಇಟ್ಟಂತೆ ಬಣ್ಣ ಬಣ್ಣದ ನುಡಿಗಳಿಂದ ಬಣ್ಣಿಸುತ್ತಾನೆ. ಹಕ್ಕಿಯಂತೆ ನಡಿಗೆ, ಹಕ್ಕಿಯಂತೆ ಚಿಲಿಪಿಲಿ, ಹಕ್ಕಿಯಂತೆ ಊಟ, ಹಕ್ಕಿಯ ಹೆಸರನ್ನಿಟ್ಟುಕೊಳುವುದೇ ಹೆಮ್ಮೆ ಮಂದಿಗೆಲ್ಲ, ಕೋಗಿಲೆಯೂರಿನಲ್ಲಿ ನೆಲಸುವುದಕ್ಕೆ ಅನೇಕರು ಬಂದು ಬಿಡಬಹುದೆಂದು ಅಲ್ಲಿಗೆ ಹಿಂದಿರುಗಿಸುತ್ತಾನೆ, ಅವರನ್ನು ಪೀತಿಟಾಯರಸ್,

ಭಾರಿ ಛತ್ರಿಯ ಕೆಳಗೆ ಅವಿತುಕೊಂಡು ಹೆಜ್ಜೆಯಿಡುತ್ತ ಆಗಮಿಸುತ್ತಾನೆ, ಹಳೆಯ ಮನುಷ್ಯಮಿತ್ರ ಪ್ರಾಮಿತಿಅಸ್, ದೇವಲೋಕದಲ್ಲಿ ಪರಿಸ್ಥಿತಿ ತುಂಬ ಹದಗೆಟ್ಟಿದೆಯೆಂದು ವರದಿ ಹೇಳಿ, ಅಲ್ಲಿಂದ ಬರುವ ರಾಯಬಾರಿಗಳೊಂದಿಗೆ ಗಡುಸಾಗಿ ವರ್ತಿಸಿ, ಬಿರುಸು ಷರತ್ತುಗಳನ್ನು ಅವರ ಮೇಲೆ ಹೇರಬೇಕೆಂದು ಉಪದೇಶ ಮಾಡುತ್ತಾನೆ, ಬರುವ ರಾಯಬಾರಿಗಳಾರು? ಮತಿವಂತ ಪಾಸೀಡನ್, ಹೊಟ್ಟೆಬಾಕ ಹೆರಾಕ್ಲೀಸ್, ಪೆದ್ದ ಟ್ರೆಬಲಸ್, ಪೆದ್ದನಿಗೆ ಏನೂ ಅರ್ಥವಾಗುವುದಿಲ್ಲ ಅವನ ಮಾತು ಯಾರಿಗೂ ಅರ್ಥವಾಗುವುದಿಲ್ಲ; ಹೆರಾಕ್ಲೀಸನಿಗೆ ತಿಂಡಿತೀರ್ಥದ ಯೋಚನೆಯೇ ಯೋಚನೆ. ಪೀತಿಟಾಯರಸ್ ಹೇಳುವುದಕ್ಕೆಲ್ಲ ಹೂಗುಟ್ಟಿಬಿಡುತ್ತಾರೆ. ಅವರು, ಪಾಸೀಡನ್ ಆಗುವುದಿಲ್ಲವೆಂದರೆ ಕೇಳುವರಾರು? ಯತ್ನವಿಲ್ಲದೆ ಅವನೂ ಒಪ್ಪಿಕೊಳ್ಳುತ್ತಾನೆ. ಪೃಥ್ವಿಯ ಅರಸೊತ್ತಿಗೆ ಬಹಳ ಹಿಂದೆ ಇದ್ದಂತೆ ಪಕ್ಷಿಗಳಿಗೇ ಮರಳಿ ಬರುತ್ತದೆ; ಜೂಸನ ಮಗಳಾದ ಬ್ಯಾಸಲಿಯ (ಪ್ರಭುತ್ವ) ಪತ್ನಿಯಾಗುತ್ತಾಳೆ. ಮಹಾಪರಾಕ್ರಮಿ ಪೀತಿಟಾಯರಸ್ಸಿಗೆ, ವಿವಾಹದ ಸಿದ್ದತೆಗಳಿಂದ ನಾಟಕಕ್ಕೆ ಸಮಾಪ್ತಿ. ರಾಜಕೀಯದ ಗೊಂದಲವಿಲ್ಲದ ಶುದ್ಧಸಾಹಿತ್ಯವನ್ನು ಕವಿ ಇಲ್ಲಿ ಒದಗಿಸಿದ್ದಾನೆ.

ರಾಜಕೀಯದ ಸೋಂಕಿಲ್ಲದ ಅರ್ಥಗಭಿತವಾದ 'ಕಪ್ಪೆಗಳು' ನಾಟಕದಲ್ಲಿ ಯುರಿಪಿಡೀಸನ ಮರಣದಿಂದ ಗಂಭೀರನಾಟಕ ಕುಗ್ಗಿ ಕುಂಟಾಗಿದೆ. ಕಲಾಭೀಮಾನದೇವತೆ ಡಯೋನಿಸಸ್ಸಿಗೆ ದುಗುಡ, ನರಕಕ್ಕಿಳಿದು ಪ್ಲೂಟೊನನ್ನು ಒಲಿಸಿಕೊಂಡು ಯುರಿ ಪಿಡೀಸ್ ಮತ್ತೆ ಹುಟ್ಟಿ ಬರುವಂತೆ ಎಸಗಬೇಕೆಂದು ಸಂಕಲ್ಪಗೊಳುತ್ತಾನೆ. ಹಿಂದೊಮ್ಮೆ ಹಿರಾಕ್ಲೀಸ್ ನರಕಕ್ಕೆ ಇಳಿಯುವ ಸಾಹಸದಲ್ಲಿ

ವಿಜಯಿಯಾಗಿದ್ದ, ಅವನಿಂದ ಸಿಂಹದ ಚರ್ಮ ಮತ್ತು ದೊಣ್ಣೆಯನ್ನು ಎರವಲು ಪಡೆದು ದಾಸ ಗ್ಸಾಂತಿಯಸ್ಸೊಡನೆ ಇಳಿಯುತ್ತಾನೆ. ಅಧೋಲೋಕಕ್ಕೆ, ಅಲ್ಲಿ ಈಸ್ಕಿಲಸ್ಸಿಗೂ ಯುರಿಪಿಡೀಸಿಗೂ ಜಗಳ. ಇಬ್ಬರ ಪದ್ಯಪಂಕ್ತಿಗಳನ್ನು ಎದುರುಬದುರು ತಟ್ಟೆಲ್ಲಿಟ್ಟು ತೂಗುತ್ತಾರೆ. ಈಸ್ಕಿ ಲಸ್ಸನ ತೂಕ ಪ್ರತಿಯೊಂದು ಬಾರಿಯೂ ಅಧಿಕ. ಕೊನೆಗೆ ಅವನಿಂದಲೇ ಗಂಭೀರ ನಾಟಕಕ್ಕೆ ಪುನರ್ಜೀವವೆಂದು ನಿಶ್ಚಯಿಸಿ ಅವನನ್ನು ವರದಾನವಾಗಿ ಪಡೆದುಕೊಂಡು ಹಿಂದಿರುಗುತ್ತಾನೆ. ಡಯೋನೀಸಸ್. ಕೈ ಕೈ ಹಿಸುಕಿಕೊಳ್ಳುತ್ತ ಹಲ್ಲು ಕಡಿಯುತ್ತ ಗೊಣಗುಟ್ಟುತ್ತಾನೆ, ಯುರಿಪಿಡೀಸ್.

ಸೈರಕ್ಯೂಸಿನ ಸರ್ವಾಧಿಕಾರಿ ಅಥೇನ್ಸಿನ ರಾಜಕೀಯ ವೃತ್ತಾಂತವನ್ನು ಅರಿಯಬಯಸಿದನಂತೆ, ಉತ್ತರವಾಗಿ ಪ್ಲೇಟೊ ಅವನಿಗೆ ಅರಿಸ್ಟೋಫೆನೀಸನ ರಕ್ಷಕವೀರರು ನಾಟಕವನ್ನು ಓದೆಂದು ಕೊಟ್ಟನಂತೆ! ಓದುರಿಗೆ ಕೆಲವು ಶತಮಾನಗಳ ಕಾಲ ಅರಿಸ್ಟೋಫೆನೀಸ್ ಹೋಮರನಿಗೆ ಎರಡನೆಯವನಾಗಿದ್ದ. ಅನಂತರ ಅಂಕೆಗೆಟ್ಟವನೂ ಅಸಂಸ್ಕೃತನೂ ಆಗಿ ತೋರಿಬಂದ. ಹಲವಾರು ಶತಮಾನಗಳ ಕಾಲ, ೧೯ನೆಯ ಶತಮಾನದ ಎರಡನೆಯ ಭಾಗದಿಂದ ವಿನೋದ ನಾಟಕದಲ್ಲಿ ಪ್ರಥಮ ಪೀಠ ಅವನಿಗೆ ಸಲ್ಲತಕ್ಕದ್ದೆಂಬ ಅಭಿಪ್ರಾಯ ಮಾನ್ಯವಾಗುತ್ತದೆ.

ವಿಮರ್ಶಕ: ಆರಿಸ್ಟಾಫನೀಸನನ್ನು ವಿಮರ್ಶಕನೆಂದು ಕರೆಯಲು ಅನೇಕ ಪಂಡಿತರು ಒಪ್ಪರು. ಆದರೂ ನುರಿತ ವಿಮರ್ಶನ ಮನೋಭಾವ, ಧೀಶಕ್ತಿ, ಕೈಚಳಕಗಳನ್ನು ನಾವು ಅವನಲ್ಲಿ ಕಾಣುತ್ತೇವೆ. ಪ್ರಾಚೀನ ಗ್ರೀಕ್ ಹರ್ಷನಾಟಕ? ಅದರಲ್ಲೂ ಅದರ ಹಳೆಯ ಪ್ರಭೇದ?ಉದ್ದಕ್ಕೂ ಜೀವನದ ವಿಮರ್ಶೆಯಾಗಿತ್ತು. ಅರಿಸ್ಟೋಫೆನೀಸನಿಗಂತೂ ತನ್ನ ಪರಿಹಾಸ್ಯದ ಹಿಂದೆ ಇರುತ್ತಿದ್ದ ವಿಮರ್ಶೆಯನ್ನು ಮಂದಿ ಗ್ರಹಿಸಬೇಕೆಂಬುದೇ ಮುಖ್ಯ ಅಭೀಷ್ಟ. ಯುರಿಪಿಡೀಸ್ ಗಂಭೀರ ನಾಟಕದ ಮಟ್ಟವನ್ನು ಮೇಲಿನಿಂದ ಕೆಳಕ್ಕಿಳಿಸಿ ಅದನ್ನು ಕೀಳುಮಾಡಿದನೆಂಬ ನಂಬಿಕೆ ಅರಿಸ್ಟೋಫೆನೀಸನ ಸಮಕಾಲೀನರಲ್ಲಿ ಅನೇಕರಿಗೆ ಧೃಢವಾಗಿತ್ತು. ಆದ್ದರಿಂದ ಆ ಟ್ರ್ಯಾಜಿಕ್ ಕವಿಯನ್ನು ಕಟುಟೀಕೆಗೆ ಗುರಿ ಮಾಡುವ ಉದ್ಯಮದಲ್ಲಿ ಅರಿಸ್ಟೋಫೆನೀಸ್ ಸುಮಾರು ಇಪ್ಪತ್ತು ವರ್ಷ ನಿರತನಾಗಿದ್ದ. ಅವನ ಆಕ್ಷೇಪ ಅಭಿಪ್ರಾಯ ಅಶಯಗಳೆಲ್ಲ ಅವನ ಕಪ್ಪೆಗಳು ಎಂಬ ನಾಟಕದಲ್ಲಿ ಒಡೆದು ಮೂಡಿವೆ. ಯುರಿಪಿಡೀಸನ ಸಂಶಯ ಪ್ರಮುಖ ಚಿತ್ತವೃತ್ತಿ, ಕುಯುಕ್ತಿ ಕೂಡಿದ ವಾದ ಚಟ, ಧಾರ್ಷ್ಟ್ಯ, ಅತಿ ಮರುಕದ ವೈಪರೀತ್ಯ, ನವೀನತೆಗೆ ಆಥುರ? ಇವ್ಯಾವುದೂ ಸರಿಬೀಳಲಿಲ್ಲ. ಅರಿಸ್ಟೋಫೆನೀಸನಿಗೆ, ಯುರಿಪೀಡಿಸನ ನಾಟಕಗಳಲ್ಲಿ ತಪ್ಪದೆ ಬರುವ ದೀರ್ಘ ಪೀಠಿಕೆಯ ಶುಷ್ಕವರದಿ, ಬೇಸರ ಹಿಡಿಸುವ ಆಖ್ಯಾನ ಸಮುಚ್ಚಯ, ಶಬ್ದಚಮತ್ಕಾರ, ಎರಡರ್ಥದ ಸಂದಿಗ್ದವಾಕ್ಯ, ಯಂತ್ರದ ಮೂಲಕ ಆಕಾಶದಿಂದ ಭೂಮಿಗೆ ಇಳಿದುಬಂದು ರಾಜಿಮಾಡಿಸಿ ಹೋರಾಟ ನಿಲ್ಲಿಸುವ ದೇವತೆ? ಮುಂತಾದುವುಗಳಿಂದ ಗಂಭೀರನಾಟಕದ ಮಹಿಮೆಯೂ ಬೆಡಗೂ ಕಳೆದುಕೊಂಡಿದವೆಂದು ಆರಿಸ್ಟಾಫನೀಸನ

ಪರಧಾನ ದೂಷಣೆ, ಆದ್ದರಿಂದ ಅವನ ಅಭಿಪ್ರಾಯದಂತೆ ಅಥೆನ್ಸಿನ ಯೋಗಕ್ಷೇಮಕ್ಕೆ ಇರುವುದು ಒಂದೇ ಉಪಾಯ; ನೈಜ ಗಂಭೀರ ನಾಟಕ ಕವಿಯಾದ ಈಸ್ಕಿಲಸ್ಸನನ್ನು ಪುನರುಜ್ಜೀವನಗೊಳಿಸಿ ಅಧೋಲೋಕದಿಂದ ಇಹಲೋಕಕ್ಕೆ ಬರುವಂತೆ ಮಾಡಬೇಕು; ನವ್ಯತೆಯ ಗೀಳು ಎಂಥ ವಿಕಟಾತಿಶಯಕ್ಕೂ ಅಭಾಸಕ್ಕೂ ಕವಿಗಳನ್ನು ಎಳೆಯುತ್ತದೆ. ಎಂಬುದನ್ನು ಲವಲವಿಕೆಯಿಂದ ಆತ ದೃಷ್ಟಾಂತಗೈಯುತ್ತಾನೆ. ಈ ಕೃತಿಯಲ್ಲಿ ಗಂಭೀರ ನಾಟಕದ ಅಗ್ರಪೀಠ ತನ್ನದೆ ಎಂದು ರಂಪ ಮಾಡುತ್ತಾನೆ ಯುರಿಪಿಡೀಸ್, ಉಚ್ಚಪ್ರತಾಪದ ಈಸ್ಕಿಲಸ್ಸನಿಗೆ ಆ ಭಂಡನನ್ನು ಕಂಡು ಕಡುಗೋಪ, ತೀವ್ರ ಜುಗುಪ್ಸೆ, ಯತ್ನವಿಲ್ಲದೆ ಆತನೊಡನೆ ಪಂದ್ಯಕ್ಕೆ ಒಪ್ಪಿಕೊಳ್ಳಬೇಕಾಗುತ್ತದೆ. ನಾಟಕಾಲಯದ ಅಧಿದೇವತೆ ಡಯೋನೀಸನೆ ತೀರ್ಪುಗಾರ, ಸ್ಪರ್ಧೆಯ ವಿಧಾನ ಅಚ್ಚರಿಯ ಬಗೆಯದು. ತಕ್ಕಡಿಯನ್ನು ಇಡುತ್ತಾರೆ. ಅದರ ಒಂದು ತವೆಯನ್ನು ಕೈಯಿಂದ ಹಿಡಕೊಂಡು ಈಸ್ಕಿಲಸ್ ತನ್ನೊಂದು ಹೇಳಿಕೆಯನ್ನೂ ಉಚ್ಚರಿಸಬೇಕು.; ಇನ್ನೊಂದು ತವೆಯನ್ನು ಹಿಡಿದುಕೊಂಡು ಈಸ್ಕಿಲಸ್ ತನ್ನೊಂದು ಹೇಳಿಕೆಯನ್ನೂ ಉಚ್ಚರಿಸಬೇಕು; ಇನ್ನೊಂದು ತವೆಯನ್ನು ಹಿಡಿದುಕೊಂಡು ಯುರಿಪಿಡೀಸನೂ ಹಾಗೆಯೇ ಮಾಡಬೇಕು. ಯಾರ ಕಡೆ ಪಾತ್ರೆ ಹೆಚ್ಚು ಭಾರದಿಂದ ಕೆಳಕ್ಕೆ ಕುಸಿಯುತ್ತದೋ ಅವನೇ ವಿಜಯಶಾಲಿ ! ಯುರಿಪಿಡೀಸನಿಗೆ ಸೋಲಿನ ಮೇಲೆ ಸೋಲು. ಹಾಗೂ ಅವನ ಕಾವ್ಯ ಪಂಕ್ತಿಗಳ ಏಕನಾದವನ್ನು ಪ್ರತ್ಯಕ್ಷಗೊಳಿಸಿ ಅವಹೇಳನ ಗೈಯುತ್ತಾನೆ. ಈಸ್ಕಿಲಸ್, ಹೀಗಾದರೂ ಆರಿಸ್ಟಾಫನೀಸ್ ತನ್ನ ಕೈಯಲಗುವಷ್ಟು ನಿಷ್ಪಕ್ಷಪಾತ ವರ್ತನೆಯನ್ನೇ ಪ್ರಕಟಿಸುತ್ತಾನೆ. ಯುರಿಪೀಡಿಸನಲ್ಲಿ ಏನೇ ದೋಷವಿರಲಿ, ಅವನ ಕವಿತೆಯ ಮಾಧುರ್ಯಕ್ಕೂ ಹೃದಯಂಗಮಕ್ಕೂ ಎಲ್ಲರೂ ಕಾಣಿಕೆ ನೀಡಬೇಕು. ಅವನ ನಾಟಕಗಳನ್ನೆಲ್ಲ ಕಂಠಪಾಠ ಮಾಡಿಕೊಂಡಿದ್ದ ಆರಿಸ್ಟಾಫನೀಸ್! ಅತ್ತ ಕಡೆ, ಈಸ್ಕಿಲಸ್ಸನ ಮಹಾ ಘನತೆಯ ಶೈಲಿ ಎಷ್ಟೋಸಾರಿ ಬರಿ ವಾಗಾಡಂಬರಕ್ಕೂ ಪಟಾಟೋಪಕ್ಕೂ ಪಕ್ಕಾಗುವುದನ್ನು ಅವನು ಗಮನಿಸಿದ್ದಾನೆ. ಪಾತ್ರವನ್ನು ರಂಗದ ಮೇಲೆ ತಂದು ತುಸುಹೊತ್ತು ಅದು ಮೌನದಿಂದ ನಿಲ್ಲುವಂತೆ ಏರ್ಪಡಿಸುವುದು. ಈಸ್ಕಿಲಸ್ಸನ ಪ್ರೀತಿಯ ರಚನಾಕ್ರಮ. ಅದು ಪದೇ ಪದೇ ಕಾಣಬಂದು ಅದೇನು ಕೃತ್ರಿಮ ಕಲೋಪಾಯವೋ ಎಂಬ ಶಂಕೆ ಉಂಟಾಗುವ ಸಂಭವವಿದೆಯೆಂಬುದನ್ನು ಆರಿಸ್ಟಾಫನೀಸ್ ಮರೆತಿಲ್ಲ.

ಉತ್ತಮ ವಿಮರ್ಶಕನ ಲಾಂಛನ ಹೀಗೆ ಆರಿಸ್ಟಾಫನೀಸನ ಹಣೆಯಲ್ಲಿ ಕಂಗೊಳಿಸುತ್ತದೆ.

(ಎಸ್.ಪಿ.ಆರ್.)

ಈಸ್ಕಿಲಸ್ (ಪ್ರ.ಶ.ಪೂ. ೫೨೫–೪೫೬)

ಪ್ರಾಚೀನ ಗ್ರೀಸಿನ ನಾಟಕ ಸಾಹಿತ್ಯ ಕರ್ತೃತ್ರಯ ಶಿಖಾಮಣಿಗಳಲ್ಲಿ ಒಬ್ಬ. ಈತ ಹುಟ್ಟಿದ್ದು ಅಥೆನ್ಸಿನ ಹತ್ತಿರದಲ್ಲಿದ್ದ ಎಲ್ಯೂಸಿಸ್ ಗ್ರಾಮದಲ್ಲಿ ದೊಡ್ಡ ವಂಶಕ್ಕೆ ಸೇರಿದವ. ಪರ್ಷಿಯಾದೊಡನೆ ಪ್ರ.ಶ.ಪೂ. ೪೦೦ರಲ್ಲಿ ನಡೆದ ಯುದ್ಧಗಳಲ್ಲಿ

ಭಾಗವಹಿಸಿದ್ದ. ತನಗಾಗಿ ಅವನೇ ಬರೆದುಕೊಂಡ ಒಂದು ಸಮಾಧಿಲೇಖವಿದೆ. ಅದರಲ್ಲಿ ತನ್ನ ಕಲಿತನವನ್ನು ಹೊಗಳಿಕೊಂಡಿದ್ದಾನೆಯೇ ಹೊರತು ಕವಿತೆಗಳನ್ನು ಪ್ರಸ್ತಾಪಿಸಿಯೇ ಇಲ್ಲ. ಸರ್ವಾಧಿಕಾರಿ ಹೈರಾನನ ಆಹ್ವಾನದ ಮೇಲೆ ಕೆಲವು ಬಾರಿ ಸೈರಕ್ಯೂಸಿಗೆ ಹೋಗಿಬಂದ. ಸಿಸಿಲಿ ದ್ವೀಪದ ಗೆಲ ಎಂಬ ಕಡೆ ಅವನಿಗೆ ಮರಣ ಪ್ರಾಪ್ತಿಸಿತು. ದಂತಕಥೆಯೊಂದು ಹೇಳುವಂತೆ, ಹೊರಗಡೆ ಕುಳಿತುಕೊಂಡಿದ್ದಾಗ ಮೇಲೆ ಹಾರುತ್ತಿದ್ದ ಹದ್ದು ಅವನ ಪಟ್ಟು ಹಿಡಿದ ತಲೆಯನ್ನು ಬಂಡೆಯೆಂದು ಬಗೆದು ತಾನು ಹಿಡಿದು ತಂದಿದ್ದ ಆಮೆಯನ್ನು ಅವನ ನೆತ್ತಿಗೆ ಬೀಳಿಸಿತಂತೆ! ಪ್ರಾಯಶಃ ಈಸ್ಕಿಲಸ್ ಪೂಜಾರಿಗಳ ಮನೆತನಕ್ಕೆ ಸೇರಿದವನಿರಬೇಕು. ಒಮ್ಮೆ ಆರಾಧನಾ ರಹಸ್ಯವನ್ನು ರಟ್ಟು ಮಾಡಿದನೆಂಬ ಅಪಾದನೆಯನ್ನು ಹೊರಿಸಿ ಅವನನ್ನು ನ್ಯಾಯಸ್ಥಾನಕ್ಕೆ ಎಳೆದಿದ್ದರಂತೆ, ಆ ಅಪರಾಧ ತನ್ನಿಂದ ಆಗಿಲ್ಲವೆಂದು ಆತ ರುಜುವಾತು ಕೊಟ್ಟು ಬಿಡುಗಡೆ ಹೊಂದಿದನಂತೆ.

ಪ್ರಾಚೀನರ ಅಭಿಮತದಂತೆ, ಈಸ್ಕಿಲಸ್ ರುದ್ರನಾಟಕದ (ಟ್ರ್ಯಾಜೆಡಿ; ಗಂಭೀರ ನಾಟಕ) ಎರಡನೆಯ ಸಂಸ್ಥಾಪಕ, ಥೆಸ್ಪಸ್ ಮೊದಲನೆಯವ. ಆದರೆ ಥಸ್ಪಿಸ್ ಕಂಡುಹಿಡಿದು ಪ್ರಯೋಗಕ್ಕೆ ತಂದ ಕಲಾಕೃತಿ ಯಥಾರ್ಥವಾಗಿ ಹೀತ–ನಾಟ್ಯ, ನಿಜವಾದ ಅರ್ಥದಲ್ಲಿ ರುದ್ರನಾಟಕವಲ್ಲ. ತರುವಾಯ ಬಂದ ಫ್ರೀನಿಕಸ್ಸನ ಕೈಯಲ್ಲೂ ಕೃತಿ ಮುಖ್ಯಾಗಿ ಗೀತ–ನಾಟ್ಯವಾಗಿಯೇ ಉಳಿದಿತ್ತು. ವಸ್ತುಸಂವಿಧಾನ, ಪಾತ್ರಕಲ್ಪನೆ, ಭಾವಾರ್ಥ, ಪ್ರದರ್ಶನ ಕ್ರಮವೆಲ್ಲದರಲ್ಲೂ ಬಹಳ ಬದಲಾವಣೆಯನ್ನು ಕೂಡಿಸಿಕೊಟ್ಟು, ಖಚಿತವಾದ ಅರ್ಥದಲ್ಲಿ ರುದ್ರ ನಾಟಕವನ್ನು ಸೃಷ್ಟಿಸಿದಾತ ಈಸ್ಕಿಲಸ್. ಅವನೂ ಪ್ರಾರಂಭದಲ್ಲಿ ತನ್ನ ಹಿಂದಿನವರ ಹೆಜ್ಜೆಯನ್ನೇ ಅನುಸರಿಸಿದ. ಬರಬರುತ್ತ ನಾಟಕದ ಸ್ವಾರಸ್ಯ ಇರುವುದು ನೇಪಥ್ಯದ ಮೇಲೆ ಜರುಗುವ ಸಂವಾದದಲ್ಲಿ; ನಾಟಕಾಲಯದ ಅಂಗಳದಲ್ಲಿ ನಡೆಯುವ ಸಂಗೀತ ನೃತ್ಯಗಳಲ್ಲಿ ಅಲ್ಲ–ಎಂಬುದನ್ನು ಆತ ಚೆನ್ನಾಗಿ ಮನಗಂಡ. ಅವನಿಂದ ೯೦ ನಾಟಕಗಳು ರಚಿತವಾದುವಂತೆ; ಅವುಗಳಲ್ಲಿ ಏಳು ಉಳಿದು ಬಂದಿವೆ. ಈ ಏಳರ ಮೂಲಕವೇ ಅವನ ಬೆಳೆವಣಿಗೆಯನ್ನು ನಾವು ಗ್ರಹಿಸಬಹುದು. ಅವನ ಪ್ರಥಮ ವಿರಚನೆಗಳಲ್ಲಿ ಒಂದಾದ ಸಪ್ಲಿಯಾಂಟ್ಸ್ (ಆಶ್ರಮ ಯಾಚಕಿಯರು) ಎಂಬ ರೂಪಕದಲ್ಲಿ ಸಂಗೀತ ಭಾಗ ಐದನೆಯ ಮೂರರಷ್ಟು. ಮಧ್ಯದ ಕೃತಿಗಳಲ್ಲಿ ಒಂದಾದ ದಿ ಪರ್ಷಿಯನ್ಸ್ (ಪರ್ಷಿಯನ್ನರು) ಎಂಬುದರಲ್ಲಿ ಅರ್ಧದಷ್ಟು; ಕಡೆಯ ಕವಿತೆಯಲ್ಲಿ ಒಂದಾದ ಮಂಗಳ ದೇವಿಯರು ಎಂಬುದರಲ್ಲಿ ಐದನೆಯ ಎರಡರಷ್ಟು, ಕೋರಸ್ ಎಂಬ ನೃತ್ಯ–ಮೇಳವನ್ನು ಸಂಪೂರ್ಣವಾಗಿ ತೆಗೆದು ಹಾಕಿ ನಾಟಕವನ್ನು ನಾಟಕವಾಗಿಯೇ ನಿರ್ಮಿಸುವ ಧೈರ್ಯ ಯಾವ ಕವಿಗೂ ಬರಲಿಲ್ಲ. ಏತಕ್ಕೆಂದರೆ ನಾಟಕ ಎದ್ದು ಬಂದದ್ದು ನೃತ್ಯಮೇಳದಿಂದ. ನೃತ್ಯಮೇಳ ಡಯೊನೀರಸ್ ದೇವತೆಯ ಆರಾಧನೆಯ ಅಂಗವಾಗಿತ್ತು. ವಿಶೇಷ ಎದೆಗಾರಿಕೆ ಯೂರಿಪಿಡಿಸ್ ಕೂಡ ತನ್ನ ರುದ್ರನಾಟಕದಲ್ಲಿ ಸಂಗೀತ–ನಾಟ್ಯಕ್ಕೆ ಹತ್ತನೆಯ ಒಂದರಷ್ಟು ಜಾಗ ಕೊಟ್ಟಿದ್ದಾನೆ.

ಈಸ್ಕಿಲಸ್ ಬರುವವರೆಗೂ ಒಬ್ಬನೇ ನಟ ಇರುತ್ತಿದ್ದ. ನೃತ್ಯಕೂಟದೊಡನೆಯೇ ನಟನ ಸಂಭಾಷಣೆ ಆಗಬೇಕಾಗಿತ್ತು. ಪ್ರೇಕ್ಷಕರ ಲಕ್ಷ್ಯ ನೃತ್ತವರ್ತುಲ ಮತ್ತು ನೇಪಥ್ಯ ಎರಡರ ಮೇಲೂ ಜೊತೆ ಜೊತೆಯಾಗಿ ಹಾಯಬೇಕಾಗಿತ್ತು. ಎರಡನೆಯ ನಟನನ್ನು ಉಪಯೋಗಿಸಿಕೊಳ್ಳಲಾರಂಭಿಸಿದ. ನಾಟಕದ ಘಟನಾವಳಿಯನ್ನು ಅರುಹುವ ಮತ್ತು ಮುಂದುವರಿಸುವ ಸಂವಾದ ಆ ಎರಡು ಪಾತ್ರಗಳಿಂದಲೇ ಆಗುವ ಅವಕಾಶ ಒದಗಿ ಬಂತು. ನೋಟಕರ ಗಮನವೂ ಹೆಚ್ಚು ಹೆಚ್ಚಾಗಿ ಅವರಿಬ್ಬರ ಕಡೆಗೆ ತಿರುಗಹತ್ತಿದವು. ನಾಟ್ಯರಂಗಕ್ಕಿಂತ ನಾಟಕರಂಗಕ್ಕೆ ಪ್ರಾಧಾನ್ಯ ಅಧಿಕವಾಯ್ತು. ಇನ್ನೊಂದು ಸುಂದರ ಬದಲಾವಣೆಯೂ ಈಸ್ಕಿಲಸ್ಸನಿಂದ ಏರ್ಪಾಟಾಯಿತು. ನೃತ್ಯಮೇಳದ ಸಂಖ್ಯೆಯನ್ನು ಐವತ್ತರಿಂದ ಹನ್ನೆರಡಕ್ಕೆ ಈತ ಇಳಿಸಿದ. ಕಲಾತ್ಮಕವಾದ ಪ್ರಗತಿಯನ್ನು ಸಾಧಿಸುತ್ತ ಹೋಗುವುದೇ ಅವನ ಹೆಬ್ಬಯಕೆಯಾಗಿತ್ತೆಂದು ತೋರುತ್ತದೆ. ಮೊದಮೊದಲು ಅನೇಕ ಯಂತ್ರ ಸೌಕರ್ಯಗಳನ್ನು ತಯಾರಿಸಿಕೊಂಡು ಅವುಗಳ ಸಹಾಯದಿಂದ ಅನುಕಾರ್ಯರನ್ನು ಆಕಾಶದಿಂದ ಕೆಳಕ್ಕೆ ಇಳಿಸುವುದು, ನೃತ್ಯಕೂಟ ನೆಲದಿಂದ ಮೇಲಕ್ಕೆದ್ದು ಈ ಕಡೆಯಿಂದ ಆ ಕಡೆಗೆ ಹಾರಿ ಹೋಗುವಂತೆ ಎಸಗುವುದು. ಗುಡ್ಡದ ಒಂದು ಭಾಗ ಇದ್ದಕ್ಕಿದ್ದಂತೆ ಪಾತಾಳಕ್ಕೆ ಉರುಳಿ ಬೀಳುವಂತೆ ತೋರಿಸುವುದು. ಇತ್ಯಾದಿ ಅದ್ಭುತಗಳನ್ನು ಪ್ರದರ್ಶಿಸಿದರೆ ರುದ್ರನಾಟಕ ಕಳೆಯೇರುವುದೆಂದು ಅವನ ಭಾವನೆ. ಕ್ರಮೇಣ ಅಂಥ ವ್ಯಾಪಾರವೆಲ್ಲ ನಾಟಕಕ್ಕೆ ಕೇವಲ ಬಾಹ್ಯಾಂಶ, ಅಮುಖ್ಯ ಎಂಬ ಸತ್ಯ ಅವನ ಮನಸ್ಸಿಗೆ ಅಂಟಲಾರಂಭಿಸಿತು. ನಾಟಕದ ಅಂತಃಸತ್ತ್ವ ಇರುವುದು ಪಾತ್ರಗಳಲ್ಲಿ, ಘಟನೆಗಳಲ್ಲಿ–ಎಂದು ಅವನು ನಿಶ್ಚಯಿಸಿಕೊಂಡ. ಅಗಾಧ ಸಾಮರ್ಥ್ಯದ ಪ್ರಚಂಡ ವ್ಯಕ್ತಿಗಳನ್ನು ಕಡೆದು ನಿಲ್ಲಿಸಿದ. ಮಾನವ ಜೀವನದ ಹಾಸು ಹೊಕ್ಕಾಗಿರುವ ಹೋರಾಟ, ಅಪಘಾತಭೀತಿ, ದುಃಖ, ದೈವಬಲ–ಪುರುಷಪ್ರಯತ್ನಗಳ ರುದ್ರತೋರ್ಕೆಗಳನ್ನು ಎದೆಯಲ್ಲಿ ನಾಟುವಂತೆ ನಿರೂಪಣೆಗೈದ. ಧೈರ್ಯಸ್ಥೈರ್ಯದ ಆಶಾವಾದಿತ್ವವನ್ನು ಬೋಧಿಸುವ ಒಂದು ಘನಗಾಂಭೀರ್ಯವನ್ನು ಪ್ರಚುರಗೊಳಿಸಿದ. ಹೀಗೆ ರುದ್ರನಾಟಕವನ್ನು ಮಹೋನ್ನತಿಗೆ ಏರಿಸಿ, ಆಗ ಜನರಂಜಕವಾಗಿದ್ದ ಭವ್ಯಕಾವ್ಯ ದೊಂದಿಗೆ (ಎಪಿಕ್ ಪೊಯಟ್ರಿ) ಅದು ಸ್ಪರ್ಧೆ ನಿಲ್ಲುವಂತೆ ಚೈತನ್ಯ ತುಂಬಿಕೊಟ್ಟ..

ಸರ್ವಾಧಿಕಾರಿ ಪೈಸಿಸ್ಟ್ರ್ಯಾಟಸನ ಒತ್ತಾಯದಿಂದಲೂ ಪರಿಪೋಷಣೆ ಯಿಂದಲೂ ಅಥೆನ್ಸಿನಲ್ಲಿ ಸಾಂಸ್ಕೃತಿಕ ಪುನರುಜ್ಜೀವನ ಉಂಟಾಯಿತು. ಪುರಾತನ ಮಹಾಕವಿಗಳಾದ ಹೋಮರ್ (ಪ್ರ.ಶ.ಪೂ. ೮ನೆಯ ಶತಮಾನ) ಮತ್ತು ಇನಿಯಡ್ (ಪ್ರ.ಶ.ಪೂ ೭ನೆಯ ಶತಮಾನ) ಬಿಟ್ಟುಹೋದ ಕಾವ್ಯಗಳನ್ನು ಗಮಕಿಗಳು ವಾಚನ ಮಾಡತೊಡಗಿದರು. ಜನರು ಉಲ್ಲಾಸದಿಂದ ಕೇಳತೊಡಗಿದರು. ಆದಿಕಾಲದ ಗ್ರೀಕರ ಪುರಾಣ ಕಥಾವಳಿಗಳ ಪರಿಚಯ ಎಲ್ಲರಿಗೂ ಸಿಕ್ಕಿತು. ಆದರೆ ಆ ಕಥಾಸಮೂಹದಲ್ಲಿ ದೇವತೆಗಳ ನಡೆವಳಿಕೆಯಾಗಲಿ ಮನುಷ್ಯರ ವರ್ತನೆಯಾಗಲಿ ದೋಷರಹಿತವಾಗಿರಲಿಲ್ಲ. ದೇವತೆಗಳೂ ವಿಷಯತೃಷ್ಣೆಗಳ ದಾಸರೇ. ಮನುಷ್ಯರಂತೂ

ಸ್ವಾರ್ಥ, ಸ್ವೇಚ್ಛೆ, ದುರಂಹಕಾರ, ದುರ್ಬುದ್ಧಿಗಳಿಂದ ಕೂಡಿದವರು. ನರರನ್ನು ಕಾಡಿ ಪೀಡಿಸುತ್ತ ಅವರ ನರಳಾಟವನ್ನು ನೋಡುತ್ತ ನಗುವುದೇ ದೇವತೆಗಳ ಕೆಲಸ. ನರರನ್ನು ಕಂಡು ಅವರಿಗೆ ಅಸೂಯೆ. ನರರು ಎಲ್ಲಿ ಸೌಖ್ಯದಲ್ಲಿದ್ದುಬಿಟ್ಟಾರೊ ಎಂದು ಮತ್ಸರಿಸಿ, ಅವರಿಗೆಮದಾಂಧತೆಯನ್ನು ಕೊಟ್ಟು, ಅವರು ದುರ್ಧೈರ್ಯದಿಂದ, ಏನೊಂದನ್ನೂ ಲೆಕ್ಕಿಸದೆ ಅನ್ಯಾಯಗಳನ್ನು ಹೊಡುವಂತೆ ಮಾಡಿ, ಅವರ ಆಕಸ್ಮಿಕ ಪತನಕ್ಕೆ ಕಾರಣರಾಗುತ್ತಾರೆ–ದೇವತೆಗಳು. ಭೂಮಿಯಲ್ಲಿ ಹುಟ್ಟಿ ಬಂದವನಿಗೆ ಕುಗ್ಗದ ಸಂಕಟವೇ ಜೋಡಿ. ಇಂಥ ಅನೇಕ ಮೂಢನಂಬಿಕೆಗಳು ಗ್ರೀಕ್ ಜನತೆಯಲ್ಲಿ ಬೇರೂರಿದ್ದವು. ಕವಿಗಳಿಲ್ಲರೂ ಪುರಾತನ ಕಥೆಗಳನ್ನೇ ಆಧಾರವಾಗಿ ಬಳಸಿಕೊಳ್ಳಬೇಕಾಗಿತ್ತು. ವಾಸ್ತವಿಕವೂ ಸಮಕಾಲೀನವೋ ಆದ ಸಂಗತಿಗಳನ್ನು ಕುರಿತು ರೂಪಕ ರಚಿಸುವುದು ಗ್ರೀಕರಿಗೆ ಹಿಡಿಸುತ್ತಿರಲಿಲ್ಲ. ಆದರೂ ಕವಿಗೆ ಬೇರೊಂದು ವಿಧದಲ್ಲಿ ಅಪಾರ ಸ್ವಾತಂತ್ರ್ಯ ಇರುತ್ತಿತ್ತು. ಆರಿಸಿಕೊಂಡ ಘಟನಾವಳಿಯಲ್ಲಿ ಪ್ರಧಾನ ಅಂಶಗಳಲ್ಲಿ ಪಲ್ಲಟಗೊಳಿಸದೇ ಇಟ್ಟುಕೊಂಡರೆ ಸಾಕು. ವಿವರಗಳಲ್ಲೂ ಅಥಾಸರಣಿಯ ವ್ಯವಸ್ಥೆಯಲ್ಲೂ ಸೂಚಿತವಾಗುವ ಸಿದ್ಧಾಂತದಲ್ಲೂ ತನ್ನ ಇಚ್ಛೆಗೆ ಅನುಗುಣವಾಗಿ ಕವಿ ವ್ಯತ್ಯಾಸ ಮಾಡಿಕೊಳ್ಳಬಹುದಾಗಿತ್ತು. ಹಾಗೆ ತನ್ನ ಪಾಲಿಗೆ ಬಂದ ಸ್ವಾತಂತ್ರ್ಯವನ್ನು ಈಸ್ಕಿಲಸ್ ಜವಾಬ್ದಾರಿಯಿಂದ ರೂಢಿಸಿಕೊಂಡ. ಹೇಗೆ ಹೇಗೋ ಹೋಗಿದ್ದ ಉಪಾಖ್ಯಾನಗಳನ್ನು ಕಾರ್ಯಕಾರಣಸಂಬಂಧ ಕೆಡದಂಥ ವಿನ್ಯಾಸಕ್ಕೆ ಅಚ್ಚುಕಟ್ಟಾಗಿ ಹೊಂದಿಸಿ, ಕಟುಕ ಕೃತ್ಯಗಳ ರೌದ್ರತೆಯನ್ನು ಮುಸುಳಿಸಿ ಗಹನ ಗಂಭೀರ ವಿದ್ಯಮಾನಗಳ ಬಣ್ಣವನ್ನು ಅವಕ್ಕೆ ಲೇಪಿಸಿ, ದೇವತೆಗಳು ನಿಷ್ಕಳಂಕಿಗಳೆಂಬ ಮತವನ್ನು ಉಚ್ಚರಿಸುತ್ತ, ದುಗುಡ, ಹತಾಶೆಗಳ ಬದಲು ಹರ್ಷ, ಆಸಿಗಳನ್ನುಮನುಷ್ಯ ತಾಳುವಂತೆ ಹುರಿದುಂಬಿಸಿದ ದಾರಿ ತೋರಿಕೊಟ್ಟ..

ಜನಪದಕ್ಕೆ ಪರಿಚಿತವಾಗಿದ್ದ ಈ ಕಥಾವಳಿಯನ್ನು ಭಾವಿಸಿ, ದೇವತೆಗಳನ್ನು ಪರಿಕ್ಷಿಸುವ ದುರ್ಬಯಕೆಯಿಂದ ಟ್ಯಾಂಟಲಸ್ ಅವರನ್ನು ಊಟಕ್ಕೆ ಕರೆದು, ಮಗ ಪೀಲಾಪ್ಸನ ಮಾಂಸವನ್ನು ಬೇಯಿಸಿ ಅವರ ಮುಂದಿಟ್ಟ; ಪಾಪದ ಫಲವನ್ನು ನರಕದಲ್ಲಿ ಉಂಡ. ಪೀಲಾಪ್ಸ್ ತನ್ನ ಪ್ರತಿಸ್ಪರ್ಧಿಯ ಸಾರಥಿಯ ಸಹಾಯದಿಂದ ರಾಜಪುತ್ರಿಯನ್ನು ಮದುವೆಯಾಗಿ, ಆ ಸಾರಥಿಗೆ ವಾಗ್ದಾನವಿತ್ತಿದ್ದ ಅರ್ದ ರಾಜ್ಯವನ್ನು ಕೊಡದೆ, ಅವನನ್ನು ಸಮುದ್ರಕ್ಕೆ ತಳ್ಳಿ ಸಾಯಿಸಿದ; ತಾನೂ ಅಧೋಗತಿಯನ್ನು ಪಡೆದ. ಪೀಲಾಪ್ಸನೆಗೆ ಇಬ್ಬರು ಕುಮಾರರು: ಅಟ್ರಿಯಸ್, ಥಯೇಸ್ಟೀಸ್. ಆರ್ಗಾಸಿನ ಸಿಂಹಾಸನದ ವಿಚಾರವಾಗಿ ಅವರಿಬ್ಬರ ಮಧ್ಯೆ ಇದ್ದ ಘೋರಮನಸ್ತಾಪ ಉಲ್ಬಣವಾಯ್ತು. ಅತ್ತಿಗೆಯಾದ ಈರೋಪೆಯನ್ನು ಥಯೆಸ್ಟೀಸ್ ಕೆಡಿಸಿದ. ಆಟ್ರಿಯಸ್ ಅವನನ್ನು ದೇಶದಿಂದ ಹೊರಕ್ಕೋಡಿಸಿ ಈರೋಪೆಯನ್ನು ಕಡಲಿನಲ್ಲಿ ಮುಳುಗಿಸಿದ. ಕಣಿವಾಕ್ಯಕ್ಕೆ ತಲೆಬಾಗಿದಂತೆ ನಟಿಸುತ್ತ, ತಮ್ಮನನ್ನು ತನ್ನಲ್ಲಿಗೆ ಕರೆಸಿಕೊಂಡು, ಅವನ ಎರಡು ಕೂಸುಗಳನ್ನು ವಧಿಸಿ, ಆ ಮಾಂಸವನ್ನು ನಿರ್ಭಾಗ್ಯ ಥಯೆಸ್ಟೀಸನಿಗೆ

ತಿನ್ನಿಸಿದ. ಥಯೆಸ್ಟೀಸ್ ಪಲಾಯನ ಗೈದು, ಅಟ್ರಿಯಸ್ಸನ ಮಗ ಪ್ಲಿಸ್ತಿನೀಸನ್ನು ತಂದೆಯ ಮೇಲೆ ಎರಗುವಂತೆ ಪ್ರೇರೇಪಿಸಿದ; ಆದರೆ ಆಟ್ರಿಯಸ್ ವೇಷ ಬದಲಾಯಿಸಿ ಕೊಂಡಿದ್ದ ಪ್ಲೀಸ್ತಿನೀಸನ್ನು ಸುತನೆಂದು ತಿಳಿಯದೆ ಕತ್ತಿಗೆ ಅಹುತಿ ಮಾಡಿದ. ಪಾತಕಗಳನ್ನು ನೆನೆಯುತ್ತ, ಎಸಗುತ್ತ ಇಬ್ಬರೂ ಸತ್ತರು. ಆಟ್ರಿಯಸ್ಸನ ತನುಜರೇ ಆಗಮೆಮ್ನಾನ್ ಮತ್ತು ಮೆನಿಲಾಸ್. ಥಯೆಸ್ಟೀಸನ ತನುಜ ಈಜಿಸ್ತಸ್. ಪ್ರಪಂಚದಲ್ಲೆಲ್ಲ ಅತ್ಯಂತ ರೂಪವತಿಯಾಗಿದ್ದ ಹೆಲನ್ ಮಡನಿಲಾಸನ ಹೆಂಡತಿ ಯಾದಳು. ಅತಿಥಿಯಾಗಿ ಬಂದ ರಾಜಕುಮಾರ ಪ್ಯಾರಿಸ್ ಅವಳನ್ನು ಒಲಿಸಿಕೊಂಡು ಅವಳೊಡನೆ ತನ್ನ ತಂದೆಯ ರಾಜಧಾನಿ ಟ್ರಾಯ್‌ಗೆ ಹಿಂತಿರುಗಿದ. ಗ್ರೀಸಿನ ಯೋಧರು ಒಟ್ಟುಗೂಡಿ, ಟ್ರಾಯ್‌ಗೆ ಮುತ್ತಿಗೆ ಹಾಕಿ, ಹತ್ತು ವರ್ಷ ಒಂದೇಸಮನೆ ಕಾದಾಡಿ. ಕೊನೆಗೆ ಟ್ರೋಜನರನ್ನೂ ಅವರ ಚಕ್ರಾಧಿಪತ್ಯವನ್ನೂ ಹಾಳು ಮಾಡಿದರು. ಗ್ರೀಕರ ಮಹಾದಂಡ ನಾಯಕ ಅಗಮೆಮ್ನಾನ್, ಈ ಮಧ್ಯೆ ಈಜಿಸ್ತಸ್ ಸೇಡಿಗಾಗಿ ಸಮಯ ಹೊಂಚುತ್ತಿದ್ದು, ಆರ್ಗಾಸಿಗೆ ಬಂದು, ಅಗಮೆಮ್ನಾನನ ಪತ್ನಿ ಕ್ಲೈಟಮ್ನೆಸ್ಟ್ರಳಿಗೆ ಉಪಪತಿಯಾದ. ಗಂಡನ ಮೇಲೆ ಕ್ಲೈಟಮ್ನೆಸಟ್ರಳಿಗೂ ರೋಷವಿತ್ತು. ಅವಳಿಗೆ ಸುಳ್ಳು ಹೇಳಿ ಮಗಳಾದ ಇಫಿಜೀನಿಯಳನ್ನು ಬರಮಾಡಿಕೊಂಡು ದೇವತೆಯ ಸಿಟ್ಟನ್ನು ಶಮನಗೈಯಲೋಸುಗ ತಾಯ ಕಣ್ಣೆದುರಿಗೇ ಅವಳನ್ನು ಬಲಿಕೊಟ್ಟಿದ್ದ. ಜಗಜ್ಜೇತನಾಗಿ ಅಗಮೆಮ್ನಾನ್ ಹಿಂತಿರುಗಿದ ಕೋಡಲೇ ಅವನ ಭಾರ್ಯೆಯೂ ಅವಳ ನಲ್ಲನೂ ಅವನನ್ನೂ ಸ್ನಾನಗೃಹದಲ್ಲಿ ಉಡುಪಿನಾಕಾರದ ಬಲೆಯಲ್ಲಿ ಸಿಕ್ಕಿಸಿಕೊಂಡು, ಖಡ್ಗದಿಂದ ಇರಿದುಕೊಂದರು. ಅನೇಕ ಸಂವತ್ಸರಗಳ ತರುವಾಯ ಅಗಮೆಮ್ನಾನನ ಸುತನಾದ ಒರೆಸ್ಟೀಸ್ ಸ್ವದೇಶಕ್ಕೆ ಹಿಂತಿರುಗಿ, ಅಕ್ಕಳಾದ ಎಲೆಕ್ಟ್ರಳ ನೆರವಿನಿಂದ ತಾಯಿಯನ್ನೂ ಅವಳ ಜಾರನನ್ನೂ ಹತ್ಯೆಗೈದ. ಮಾತೃವಧೆಯ ದುಷ್ಕೃತ್ಯಕ್ಕಾಗಿ ಅವನು ಎಷ್ಟೋಕಾಲ ದೇಶಭ್ರಷ್ಟನಾಗಿ ಅಲೆದು, ನರಳಿ, ಕೊನೆಗೆ ಅಥೀನ ದೇವಿಯ ಕೃಪೆಯಿಂದ ಪಾಪಲೇಪನವನ್ನು ಕಳೆದುಕೊಂಡು, ಆರ್ಗಾಸಿಗೆ ಅರಸಾಗಿ ಬಹುಕಾಲ ಬಾಳಿದ.

ವಂಚನೆ, ವಚನಭಂಗ, ದೈವದ್ರೋಹ, ಮತ್ತಗರ್ವ, ವ್ಯಭಿಚಾರ, ಅಕ್ರಮಕೂಟ, ಕ್ರೌರ್ಯ, ಕಗ್ಗೊಲೆ – ಈ ಕುಲದವರಿಗೆ ಇದನ್ನು ಮಾಡಬೇಕು. ಇದನ್ನು ಮಾಡಕೂಡದು ಎಂಬ ಭೇಧವೇ ಇಲ್ಲ. ಇದೊಂದು ಪಾಪಿಷ್ಠ ವಂಶ: ಬಾನಿನವರ ಉಗ್ರಶಾಪ ಇವರ ಹೆಡತಲೆಯ ಮೇಲೆ ಕುಳಿತಿರುತ್ತಿತ್ತು. ಹೆಣ್ಣು ಗಂಡುಗಳೆಲ್ಲರೂ ದೌರ್ಜನ್ಯ ಎಸಗಲೇ ಬೇಕು, ದುರ್ಮರಣವನ್ನು ಉಣ್ಣಲೇ ಬೇಕು. ದುರ್ಗತಿಗೆ ಇಳಿಯಲೇ ಬೇಕು.

ಇಂಥ ಮೈನವಿರೇಳಿಸುವ ವೃತ್ತಾಂತವನ್ನು ತೆಗೆದುಕೊಂಡು ಈಸ್ಕಿಲಸ್ ಇಡೀ ಜಗತ್ತಿನ ರಸಜ್ಞರು ಮೆಚ್ಚಿ ತಲೆದೂಗುವಂಥ ರೂಪಕತ್ರಯವನ್ನು (ಟ್ರಿಲೊಜಿ) ನಿರ್ಮಿಸಿದ. ಅದೇ ಒರೆಸ್ಟಿಯ ಎಂಬ ಶಾಶ್ವತ ಸಾಹಿತ್ಯ. ಅಂದಚಂದದ ಮೂಲಕ

ಚತುರ ಕಥೆಯನ್ನು ಹೇಳಿ, ಚಿತ್ತಾಹ್ಲಾದ ಕೊಡುವುದೊಂದೇ ಆಗಿರಲಿಲ್ಲ, ಕವಿಯ ಅಭೀಷ್ಟ. ದೇವತೆಗಳಾರು, ಮಾನವನ ಕರ್ತವ್ಯವೇನು, ಕೇಡು ತಟ್ಟುವುದು ವ್ಯಕ್ತಿಯ ಕೆಟ್ಟ ನಡತೆಯಿಂದಲ್ಲವೆ, ಮಿತವನ್ನು ಅರಿತವ ಸುಖದಲ್ಲಿರಲಾರನೆ–ಇತ್ಯಾದಿ ಧಾರ್ಮಿಕ ಮತ್ತು ನೈತಿಕ ತತ್ತ್ವಗಳನ್ನು ಕಾವ್ಯಸಮ್ಮಿತಿಯಿಂದ ಘೋಷಿಸುವುದೇ ಅವನ ಗಾಢಾಪೇಕ್ಷೆ, ಪೀಲಾಪ್ಸರವರಗೆ ಹೋಗುವುದು ಬೇಕಾಗಲಿಲ್ಲ–ಈಸ್ಕಿಲಸ್ಸಿಗೆ. ಅಟ್ರಿಯಸ್ ಥಯೆಸ್ಟೀಸನಿಗೆ ಉಣ್ಣಿಸಿದ ಭಯಂಕರ ಭೋಜನದಿಂದಲೇ ಅವನ ನೋಟಕ್ಕೆ ರುಧಿರೇತಹಾಸದ ಪ್ರಾರಂಭ. ಅಟ್ರಿಯಸ್ಸನ ರಕ್ಕಸತನದ ಫಲವಾಗಿ ಅವನ ಔರಸಪುತ್ರ ಅಗಮೆಮ್ನಾನನ ಆಂತರ್ಯದಲ್ಲಿ ಅನುವಂಶಿಕವಾದ ಪಾಪಬೀಜ ನೆಟ್ಟಿತು, ನಿಜ. ಸಮರದಿಂದ ಹಿಂತಿರುಗಿದ ಕೂಡಲೆ ಓಡಿನಲ್ಲಿ ಹೆಂಡತಿಯ ಕೈಯಿಂದ ಅಸಹ್ಯ ಪೆಟ್ಟನ್ನು ಅವನು ಪಡೆಯುವುದೇತಕ್ಕೆ? ತಂದೆ ಹೊತ್ತ ಸಾಲವನ್ನು ಮಗ ತೀರಸಬೇಕಾದ್ದರಿಂದಲೇ ಈಸ್ಕಿಲಸ್ ಹಾಗಲ್ಲ ಎನ್ನುತ್ತಾನೆ, ಅವನ ಹೇಳಿಕೆ ಈ ರೀತಿ ತಂದೆ ತಾಯಿಗಳಿಂದ ಮಕ್ಕಳಿಗೆ ಇಳಿದು ಬರುವುದು ದುರಾಚಾರದ ಪ್ರಚೋದನೆ, ದುರಾಚಾರವಲ್ಲ. ಆ ಪ್ರಚೋದನೆಯನ್ನು ಅವರು ಬೆಳೆಸಿಕೊಂಡು ತಾವೂ ದುರಾಚಾರಿಗಳಾಗಬಹುದು ಅಥವಾ ಅದನ್ನು ವಿರೋಧಿಸಿ ಗೆದ್ದು ಸದಾಚಾರವನ್ನು ಹಿಡಿಯಬಹುದು. ಶಾಪವಿದೆ ನಿಶ್ಚಯ, ಆದರೆ ವ್ಯಕ್ತಿಯ ಸ್ವಂತಸಂಕಲ್ಪವೂ ಅನುಗೂಡದಿದ್ದರೆ ಶಾಪ ಏನನ್ನೂ ಮಾಡಲಾರದು. ಎಂಥ ಪಾತಕ ಕುಲದಲ್ಲಿ ಜನಿಸಿ ಬಂದಿರಲಿ ವ್ಯಕ್ತಿಮನಸ್ಸು ಮಾಡಿದರೆ ಪಾಪಾಚರಣೆಯ ಸರಪಣಿಯನ್ನು ತುಂಡರಿಸುವುದು ಸಾಧ್ಯ. ಆಗಮೆಮ್ನಾನ್ ಕೈ ಹಿಡಿದ ಹೆಂಡತಿಯೇ ಸಟೆ ಹೇಳಿದ, ಮೋಸ ಮಾಡಿದ, ಅಕಿಲೀಸನಿಗೆ ಪಾಣಿಗ್ರಹಣ ಮಾಡಿಸುತ್ತೇನೆಂದು ಭರವಸೆ ಕಳಿಸಿದ, ಸತಿಯೂ ಸುತೆಯೂ ಬಂದೊಡನೆ ಅರ್ಟೆಮಿಸ್ ದೇವತೆಗೆ ಕೊಡಗೂಸನ್ನು ಬಲೆಯಿತ್ತ. ಏತಕ್ಕೆ? ಟ್ರಾಯಿನ ಮೇಲೆ ಯುದ್ಧ ನಡೆಸಬೇಕು. ಮನೆ ಮಠಗಳನ್ನೂ ಮಗು ವೃದ್ಧ ಹೆಂಗಸು ಎನ್ನದೆ ಮಂದಿಯೆಲ್ಲರನ್ನೂ ನಾಶಮಾಡಬೇಕು. ರಿಪುಧ್ವಂಸಿಯೆಂಬ ಕೀರ್ತಿಯನ್ನು ಮರೆಯಬೇಕು–ಇದೇ ಅವನ ಹಂಬಲಿಕೆ. ಮಗಳ ರಕ್ತವನ್ನು ಚೆಲ್ಲಿದ ಮೇಲೆ ಅಗಮೆಮ್ನಾನನಿಗೆ ರಕ್ತದಾಹ ಉಂಟಾಯಿತು. ಮನುಷ್ಯನ ಶ್ರೇಷ್ಠಧರ್ಮವಾದ ಕನಿಕರವನ್ನು ಕಿತ್ತೊಗೆದ. ಟ್ರಾಯಿಗೆ ನಡೆದು ನೆತ್ತರಿನ ಕಾಲುವೆಗಳನ್ನು ಹರಿಯಿಸಿದ. ಗುಡಿಗೋಪುರಗಳನ್ನು ಈಡಾಡಿ, ವಿಗ್ರಹ ಬಲಿಪೀಠಗಳನ್ನು ನುಚ್ಚುನೂರಾಗಿಸಿ, ದೇವತೆಗಳ ಮುಡಿಪನ್ನು ದರೋಡೆಗೈದು ದೈವಭೀತಿಯೆಂಬುದನ್ನೇ ಕಾಣದಾದ. ಮನೆಗೆ ಹಿಂತಿರುಗಿದಾಗಲೂ ಕೇವಲ ದೇವತೆಗೆ ಮಾತ್ರ ಸಲ್ಲತಕ್ಕ ಊರು ಕಿಂಕಾಪು ಬಟ್ಟೆಯ ನಡೆಮುಡಿಯನ್ನು ಕಾಲಿನಿಂದ ತುಳಿಯುತ್ತ ವಿಜೃಂಭಿಸಿದ. ಮರಗಳಿಗೆಯಲ್ಲೆ ದುಡಿದು ಬಿದ್ದ. ಎಂದಮೇಲೆ, ಅಗಮೆಮ್ನಾನನ ಪತನಕ್ಕೆ ಅಪ್ಪನಿಂದ ಇಳಿದು ಬಂದ ಕೆಟ್ಟ ಚಟವಲ್ಲ. ಕಾರಣ,

ಅವನ ಸ್ವಕೀಯ ಮದಾಂಧತೆ. ಇದೇ ಈಸ್ಕಿಲಸ್ ಬಹುವಾಗಿ ಬಣ್ಣಿಸಿ ಹಳಿದು ಮುಂದೊಡ್ಡುವ ಗಂಡಗರ್ವ (ಹ್ಯೂಬ್ರಿಸ್). ಗರ್ವಿಷ್ಠ ತಾನು ಮಾಡಿದ್ದನ್ನು ತಾನೇ ಉಣ್ಣುತ್ತಾನೆ.

ಒರೆಸ್ಟಿಯದ ಎರಡನೆಯ ಭಾಗದಲ್ಲಿ ಕ್ಲೈಟಮ್ನೆಸ್ಟ್ರ ಈಜಿಸ್ತಸ್ಸರ ಸಂಹಾರ ಆಗುತ್ತದೆ. ಅಗಮೆಮ್ನಾನನ ಸಂಹಾರಕ್ಕೆ ಅದೊಂದು ಪ್ರತಿಕಾರ. ಹೌದು, ಆದರೆ ತಾತ್ಪರ್ಯ ಅಷ್ಟಕ್ಕೆ ಮುಗಿಯುವುದಿಲ್ಲ. ಕ್ಲೈಟಮ್ನೆಸ್ಟ್ರ ಈಜಿಸ್ತಸ್ ಇಬ್ಬರೂ ಕಾಮಲಂಪಟರು, ಮರುಕಹೀನರು, ಕಪಟಿಗಳು, ದೈವ ವಿರೋಧಿಗಳು, ಅವರನ್ನು ಕೊನೆಗಾಣಿಸಬೇಕೆಂದು ದೇವ ದೇವನಾದ ಜ್ಯೂಸನಿಂದ ಒರೆಸ್ಟೀಸನಿಗೆ ಅಪೊಲೊವಿನ ಮೂಲಕ ಸಂದೇಶ ಬರುತ್ತದೆ. ಆ ಕಾರ್ಯ ಕೊಲೆಯಲ್ಲ, ದೇವತೆಗಳನ್ನು ಮೆಚ್ಚಿಸುವ ಯಜ್ಞ ಎಂಬ ಅವರಣವನ್ನು ಈಸ್ಕಿಲಸ್ ಸೃಜಿಸಿದ್ದಾನೆ, ಎರಡನೆಯ ರೂಪಕದಲ್ಲಿ. ಹಾಗೂ, ಮನುಷ್ಯ ಸ್ವಭಾವವನ್ನೂ ಮನುಷ್ಯನ ಒಳಗಣ ಚಲನವಲನಗಳನ್ನೂ ಬಲ್ಲಾತನಿಗೆ ಸೂಕ್ಷ್ಮವಾದ ಅಂಶಗಳನ್ನು ಗ್ರಹಿಸುವುದು ಕಷ್ಟವಾಗಲಿಲ್ಲ. ಎಷ್ಟೇ ಆದರೂ ಕ್ಲೈಟಮ್ನೆಸ್ಟ್ರ ಒರೆಸ್ಟೀಸನನ್ನು ಹೆತ್ತವಳಲ್ಲವೆ? ಒರೆಸ್ಟೀಸ್ ಪಾಪಾತ್ಮರ ತನೂಭವವಾದರೂ ಹಿಂಸಪ್ರವೃತ್ತಿಯನ್ನು ಯೋಚಿಸಲಾರ, ಸಹಿಸಲಾರ. ದೈವನಿರ್ಬಂಧಕ್ಕೆ ಶಿರಬಾಗಿ ಮಾತೆಯ ಎದೆಯನ್ನು ಕಠಾರಿಯಿಂದ ಚುಚ್ಚಿದ್ದಾಯಿತು. ಆದರೆ ತನ್ನ ಹೃದಯದ ಕುದಿಯನ್ನು ತಪ್ಪಿಸುವುದೆಂತು? ತಳಮಳದಲ್ಲಿ ಬಿದ್ದು ಪ್ರಲಾಪಿಸುತ್ತ ಹೋಗುತ್ತಾನೆ, ನಾಟಕದ ಅಂತ್ಯದಲ್ಲಿ.

ಮೂರನೆಯ ಭಾಗವಾದ ಮಂಗಳದೇವಿಯರು ವಿಶೇಷ ಅರ್ಥವತ್ತಾದ ಮಹೋನ್ನತ ಸಾಹಿತ್ಯ. ಕಥಾವಸ್ತು ಒರೆಸ್ಟೀಸನ ಸಂಕಟ, ಅವನ ಕೃತ್ಯದ ತನಿಖೆ, ಅವನ ವಿಮೋಚನೆ, ಮೃತಳಾದ ಕ್ಲೈಟಮ್ನೆಸ್ಟ್ರಳ ಪ್ರಾರ್ಥನೆಯಂತೆ ಉಗ್ರಪೀಡೆಗಳು (ಫ್ಯೂರೀಸ್) ಎದ್ದು ಬಂದು, ಒರೆಸ್ಟೀಸನನ್ನು ದಿಗಿಲುಗೊಳಿಸಿ ಕಾಡುತ್ತವೆ. ತಾಯಿಯನ್ನು ಕೊಲ್ಲು ಎಂದು ತನಗೆ ನಿರೂಪವಿತ್ತ ಅಪೊಲೊ ದೇವನೇ ಅವನಿಗೀಗ ಶರಣು. ಹಂತಕ ಆದ್ದರಿಂದ ಅವನು ನಮ್ಮ ಪಶು ಎನ್ನುತ್ತವೆ, ಫ್ಯೂರಿಗಳು. ಆದದ್ದು ದೇವನಾಜ್ಞೆ; ಒರೆಸ್ಟೀಸ್ ನಿರಪರಾಧಿ–ಎನ್ನುತ್ತಾನೆ ಅಪೊಲೊ. ವ್ಯಾಜ್ಯವನ್ನು ಇತ್ಯರ್ಥಹೊಳಿಸುವುದಕ್ಕಾಗಿ ದೇವಿ ಅಥೀನ ಅಥೆನ್ಸಿನ ಹನ್ನೆರಡು ಮಂದಿ ಜ್ಞಾನವೃದ್ಧರನ್ನು ಜೊತೆಗೂಡಿಸಿ, ನ್ಯಾಯಾಸ್ಥಾನವನ್ನು ರಚಿಸುತ್ತಾಳೆ. ಆ ಸಮಿತಿಗೆ ಆಕೆಯೇ ಅಧ್ಯಕ್ಷಿಣಿ; ವಿಚಾರಣೆ ನಡೆಯುತ್ತದೆ. ಕಡೆಯಲ್ಲಿ ನ್ಯಾಯಮೂರ್ತಿಗಳು ತೀರ್ಪು ಕೊಡುತ್ತಾರೆ. ಅರ್ಧಮಂದಿ ಒರೆಸ್ಟೀಸ್ ಅಪರಾಧಿ ಎನ್ನುತ್ತಾರೆ. ಮಿಕ್ಕರ್ಧ ಅವನು ನಿರಪರಾಧಿ ಎನ್ನುತ್ತಾರೆ. ಅಥೀನ ಮೊದಲೇ ಅವನಲ್ಲಿ ಅಪರಾಧವಿಲ್ಲವೆಂದು ಘೋಷಿಸಿರುತ್ತಾಳೆ. ಆದ್ದರಿಂದ ಒರೆಸ್ಟೀಸನಿಗೆ ಬಿಡುಗಡೆ ಆಗುತ್ತದೆ. ಅಷ್ಟರಿಂದಲೇ ತೃಪ್ತನಾಗುವುದಿಲ್ಲ, ಕವಿ ಉಗ್ರಪೀಡೆಗಳೂ ದೇವತೆಗಳೇ. ಬುನಾದಿಪೃಥಿವಿಯ ಮೂಲಶಕ್ತಿಗಳು. ಅವುಗಳದ್ದು ಕಣ್ಣು ಕಿತ್ತವನ ಕಣ್ಣನ್ನು ಕೀಳು, ಹಲ್ಲು ಮುರಿದವನ

ಹಲ್ಲನ್ನು ಮುರಿ, ಎಂಬ ಹಳೆಯ ನ್ಯಾಯ. ಅಂಥ ಬೆದರಿಕೆ ಇಲ್ಲದಿದ್ದರೆ ಪ್ರಲೋಭನೆಗಳಿಗೆ ಈಡಾಗಿರುವ ಮನುಜಧರ್ಮ ನೀತಿ ಧರ್ಮವನ್ನು ಪರಿಪಾಲಿಸೀತೆ? ಆದರೆ ಹೊಸ ದೇವತೆಗಳಾದ ಒಲಿಂಪಿಯ ವರ್ಗ ಬರಿ ಕಾರ್ಯವನ್ನೇ ಬಗೆಯುವುದಿಲ್ಲ; ಕಾರ್ಯಕರ್ತನ ಮನೋಗತ ಸಮಯ ಸನ್ನಿವೇಶಗಳಿಗೂ ಗಮನವೀಯುತ್ತಾರೆ. ಆದ್ದರಿಂದಲೇ ಒರೆಸ್ಟೀಸ್ ವಧಕಾರಲ್ಲವೆಂದು ಅವರ ತೀರ್ಮಾನ. ಅಥೀನೆಗೆ ಶಾಂತಿ ಸ್ನೇಹಗಳು ಅಗತ್ಯ. ಉಗ್ರಪೀಡೆಗಳನ್ನು ಒಲಿಸಿಕೊಂಡು ಅಥೆನ್ಸಿನ ಪೌರರು ಅವನ್ನೂ ಪೂಜಿಸಿ ಹರಕೆಯೊಪ್ಪಿಸಿ ಕಂಡು ನಡೆದುಕೊಳ್ಳಬೇಕೆಂದು ಶಾಸನ ವಿಧಿಸುತ್ತಾಳೆ. ಕರಾಳಶಕ್ತಿಗಳು ಹೀಗೆ ಎರಿನೀಸ್ ಎಂಬ ಹೆಸರನ್ನು ಕಳೆದುಕೊಂಡು. ಯೂಮೆನೈಡೀಸ್ (ಮಂಗಳದೇವಿಯರು) ಆಗುತ್ತಾರೆ.

ಪ್ರಾಮಿತಿಯಸ್ ಎಂಬ ಅರ್ಧದೇವತೆಯ ದಾರುಣ ವೃತ್ತಾಂತವನ್ನು ಕುರಿತ ಇನ್ನೊಂದು ರೂಪಕತ್ರಯವನ್ನು ಈಸ್ಕಲಸ್ ರಚಿಸಿದ. ಅದರ ಮೊದಲನೆಯ ಭಾಗವಾದ ಪ್ರಾಮಿತಿಯಸ್ ಬೌಂಡ್ (ಸೆರೆ ಸಿಕ್ಕಿದ ಪ್ರಮಿತಿಯಸ್) ಮಾತ್ರ ಉಳಿದುಬಂದಿದೆ. ಪೌರಾಣಿಕ ಮೂಲಕಥೆಯಂತೆ, ಹೋರಿಯನ್ನು ಜ್ಯೂಸನಿಗೆ ಬಲಿ ಕೊಡಬೇಕಾದಾಗ ಮನುಷ್ಯರು ಪ್ರಾಮಿತಿಯಸ್ಸನ ಸಲಹೆಯನ್ನು ಪಡೆದು ದೇವ ದೇವನಿಗೆ ಮೋಸ ಮಾಡಿದರು. ಕೃದ್ಧನಾದ ಜ್ಯೂಸ್ ಮನುಜರಿಗೆ ಬೆಂಕಿ ಹೊತ್ತಿಸುವುದನ್ನು ಹೇಳಿಕೊಡದೆ, ಪಶುಗಳಂತೆ ಅವರು ಬಾಳುವುದಕ್ಕೆ ಬಿಟ್ಟುಬಿಟ್ಟ. ಅವರ ಸ್ಥಿತಿಯನ್ನು ಕಂಡು ಪ್ರಾಮಿತಿಯಸ್ಸಿಗೆ ಮರುಕ ಉಂಟಾಯಿತು. ಒಂದು ದಿವಸ ಗುಟ್ಟಾಗಿ ಕೆಂಡವನ್ನು ಕದ್ದು ಭೂಮಿಗೆ ತಂದುಕೊಟ್ಟು ನರರನ್ನು ಉದ್ಧಾರಮಾಡಿದ. ರೋಷಗೊಂಡ ಜ್ಯೂಸ್ ಪ್ರಮಿತಿಯಸ್ಸನ್ನು ಹೆಡಿಕರಿಸಿ, ಕೌಕಸಸ್ ಪರ್ವತದ ಮೇಲೆ ಬಂಧಿಸಿ, ಪ್ರತಿ ಹಗಲೂ ಅವನ ಯಕೃತ್ತನ್ನು ಒಂದು ರಣಹದ್ದು ಕಿತ್ತು ತಿನ್ನುವಂತೆಯೂ ರಾತ್ರಿ ಅದು ಪುನಃ ಬೆಳೆದು ಮಾರನೆಯ ದಿನದ ಭಕ್ಷಣೆಗೆ ಸಜ್ಜಾಗುವಂತೆಯೂ ವಿಧಾಯಕಮಾಡಿದ. ಶತಮಾನಗಳ ಆನಂತರ ವೀರವರ ಹೆರಾಕ್ಲೀಸ್ ಅಲ್ಲಿಗೆ ಬಂದು, ಅಂಬನ್ನು ಬಿಟ್ಟು ರಣಹದ್ದನ್ನು ಕೊಂದುಹಾಕಿ, ಪ್ರಾಮಿತಿಯಸ್ಸನ್ನು ಸಂರಕ್ಷಿಸಿದ. ಪ್ರಾಮಿತಿಯಸ್ ಜ್ಯೂಸರ ಕಲಹ ಅರ್ಧನಾಗರಿಕತೆಯ ಅವಧಿಯಲ್ಲಿ ದೇವತೆಯಾದವನಿಗೂ ದೇವತೆಯಾಗಲಿರುವವನಿಗೂ ನಡೆದಿರಬಹುದಾದ ಒರಟು ಮೇಲಾಟ. ಈಸ್ಕಿಲಸ್ಸನ ವಿರಚನೆಯಂತೆ ಅದು ಬಲದಲ್ಲಿ ಕಡಿಮೆಯಾದ ಮನುಜಪ್ರೇಮಿಗೂ ಬಲದಲ್ಲಿ ಅಧಿಕನಾದ ಮನುಜವಿರೋಧಿಗೂ ಆಗುವ ಜಗಳ. ಪ್ರಾಮಿತಿಯಸ್ಸನ ಸಂಕಟವನ್ನು ಹೃದಯವಿದ್ರಾವಕವಾಗುವಂತೆ ಕವಿ ವರ್ಣಿಸಿದ್ದಾನೆ. ಭೂಮಂಡಲದ ಮನುಷ್ಯರು ಹಾಗಿರಲಿ, ಸಾಗರ, ಬೆಟ್ಟ, ನೀಲಾಕಾಶ, ಎಲ್ಲವೂ ಅವನೊಡನೆ ಕೊರಗುತ್ತವೆ, ಕಂಬನಿ ಸುರಿಸುತ್ತವೆ. ವಿಶ್ವವೇ ಅಪಾರ ಸಹಯಾತನೆಯಿಂದ (ಸಿಂಪಥಿಯಾ) ನರಳುತ್ತದೆ. ಅದೊಂದು ಸಮಾಧಾನ, ಹತಭಾಗ್ಯ ಪ್ರಾಮಿತಿಯಸ್ಸಿಗೆ, ಇನ್ನೆರಡು

ಸಮಾಧಾನಗಳೂ ಅವನಲ್ಲಿದ್ದಕೊಂಡು ಸಹಿಷ್ಣುತೆಗೆ ಉಪಷ್ಟಂಭಕವಾಗುತ್ತವೆ. ಚಿರಂಜೀವಿಯಾದುದರಿಂದ ಪ್ರಾಮಿತಿಯಸ್ಸಿಗೆ ಸಾವಿಲ್ಲ. ಮತ್ತು ಜ್ಯೂಸನಿಗೆ ಸಂಬಂಧಿಸಿದ ರಹಸ್ಯವೊಂದು ಪ್ರಾಮಿತಿಯಸ್ಸಿಗೆ ಮಾತ್ರ ಗೊತ್ತು. ಜ್ಯೂಸ್ ಏನಾದರೂ ಥೆಟಿಸಳನ್ನು ಮದುವೆಯಾದರೆ ಆ ಜಲಕನ್ನಿಕೆಯ ಮಗ ಮುಂದೆ ಜ್ಯೂಸನಿಂದ ದೇವರಾಜತ್ವವನ್ನು ಕಿತ್ತುಕೊಳ್ಳುತ್ತಾನೆ. ವಜ್ರಮನಸ್ಸಿನಿಂದ ಪ್ರಾಮಿತಿಯಸ್ ನಿಲ್ಲುತ್ತಾನೆ. ಜ್ಯೂಸನ ದಬ್ಬಾಳಿಕೆಯನ್ನು ಕಣ್ಣಿಗೆ ಕಟ್ಟಿ ತೋರಿಸಲೋಸುಗ ಕವಿ ಅವನಿಂದ ಬಲು ತೊಂದರೆಗೆ ಸಿಕ್ಕಿ ಕಾಡು ಪಾಲಾಗಿ ಅಲೆಯುತ್ತಿರುವ ಇಯೊ ಎಂಬ ಹೆಂಗಸನ್ನೂ ತರುತ್ತಾನೆ. ದೇವಧೂತ ಹರ್ಮಿಸ್ ಬಂದು ಜ್ಯೂಸನಿಗೆ ವಿಧೇಯನಾಗು ಎಂದು ಬುದ್ಧಿವಾದ ಹೇಳುತ್ತಾನೆ. ಆಲಿಸದೆ ಪ್ರಾಮಿತಿಯಸ್ ಬರಲಿರುವ ವೇದನಿಗೆ ಸಿದ್ಧನಾಗುತ್ತಾನೆ.

ಮುಂದಣ ನಾಟಕಗಳೆರಡೂ ನಷ್ಟವಾಗಿವೆ. ಬಹುಶಃ ಜ್ಯೂಸನ ಅಜ್ಜಿಯ ಮಧ್ಯಸ್ತಿಕೆಯಿಂದ ಇಬ್ಬರಿಗೂ ಒಡಂಬಡಿಕೆ ಏರ್ಪಡುತ್ತದೆ. ಎರಡನೆಯ ನಾಟಕದಲ್ಲಿ. ರಣಹದ್ದಿನ ಹತ್ಯವಾಗಿ ಪ್ರಾಮಿತಿಯಸ್ಸನ ವಿಜಯೋತ್ಸವ ಮೂರನೆಯ ನಾಟಕದಲ್ಲಿ ನಡೆಯುತ್ತದೆ. ಈಸ್ಕಿಲಸ್ಸಿಗೆ ವೈರ ವೈಮನಸ್ಯಗಳು ಸೇರುತ್ತಿರಲಿಲ್ಲ. ಸ್ನೇಹ ಒಪ್ಪಂದಗಳ ಕಡೆಗೇ ಅವನ ಒಲವು. ಹಾಗೂ ಸಂಕಟ ಮನುಷ್ಯನಿಗೆ ಬುದ್ಧಿ ಕಲಿಸುತ್ತದೆ ಎಂಬುದನ್ನೂ ಆತ ಬಲ್ಲ. ಪ್ರಾಮಿತಿಯಸ್ ರೂಪಕದಲ್ಲಿ ಚಿತ್ರಿವಾಗಿರುವ ಜ್ಯೂಸ್ ಇನ್ನೂ ಯುವಕ, ಅನುಭವಸ್ಥನಲ್ಲ. ತನಗಾಗಿ ಬಂದ ಕಷ್ಟನಷ್ಟಗಳು ಅವನ ಚಿತ್ತವನ್ನು ಇನ್ನೂ ಪರಿವರ್ತನಗೊಳಿಸಿಲ್ಲ.

ಪರ್ಷಿಯನ್ನರು ಎಂಬ ನಾಟಕ ವಿಚಿತ್ರಬಗೆಯ ಕೃತಿ. ಅದರಲ್ಲಿ ಕಥೆ ಕಿರಿದು. ಪಾತ್ರಶಿಲ್ಪಕ್ಕೆ ಅವಕಾಶ ಕಡಿಮೆ. ಆದರೂ ಮಹತ್ವವನ್ನು ತಂದು ಕೂಡಿಸಿದ್ದಾನೆ. ಅದಕ್ಕೆ ಮೇಲಾಗಿ ಗೆದ್ದ ಗ್ರೀಕರ ಸಾಹಸವನ್ನು ಪ್ರಶಂಸಿಸುವ ಬದಲು ಕವಿ ಸೋತ ಪರ್ಷಿಯನ್ನರ ಸಂತಾಪವನ್ನು ಹೃದಯಂಗಮವಾಗಿ ವರ್ಣಿಸುತ್ತಾನೆ. ಎಂದರೆ, ತನ್ನ ಜನರಿಗೆ ಈ ಎಚ್ಚರಿಕೆ ಈಯುತ್ತಾನೆ: ಜೋಕೆ, ಅಹಂಕಾರದಿಂದ ಹಿಗ್ಗಬೇಡಿ; ನಮ್ರರಾಗಿರಿ. ಜಂಭ ಕೊಚ್ಚಿ ದೈವಾಪರಾಧಮಾಡಿದ ಪರ್ಷಿಯನ್ನರು ಈಗ ಏನಾಗಿದ್ದಾರೆ ನೋಡಿ!

ಥೀಬ್ಸ್‌ಗೆದುರಾಗಿ ಏಳು ಮಂದಿ (ಸೆವೆನ್ ಎಗೇನ್ಸ್ಟ್ ಥೀಬ್ಸ್) –ಎಂಬ ರೂಪಕದಲ್ಲಿ ಶತ್ರುಗಳಿಂದ ಥೀಬ್ಸ್ ನಗರದ ಚಿತ್ರಣ ಚೆಲುವಾಗಿದೆ. ಆದರೆ ದೊರೆ ಇಟಿಯೊಕ್ಲೀಸನ ಧೈರ್ಯ, ದೃಢಭಾವ, ಸ್ವಾರ್ಥತ್ಯಾಗಗಳು ಮನೋಹರವಾಗಿವೆ. ಆದರೇನು ? ಶಾಪಗ್ರಸ್ತ ವಂಶಕ್ಕೆ ಸೇರಿದವನಾದ್ದರಿಂದ ಆತ ಅಣ್ಣನೊಡನೆ ಕಾದಿ ಕದನ ರಂಗದಲ್ಲಿ ಮಡಿಯಬೇಕು. ಜೊತೆಗೆ ಎರಡು ನಾಟಕಗಳು ನಷ್ಟವಾಗಿರುವುದರಿಂದ ಈಸ್ಕಿಲಸ್ಸನ ಆಶಯವನ್ನು ಗುರುತಿಸುವುದು ಅಸಾಧ್ಯ. ಯಾವ ತಾತ್ಪರ್ಯವನ್ನು ಇಟ್ಟಿದ್ದನೊ ಹೇಳಲಾಗದು.

ಆಶ್ರಯ ಯಾಚಕಿಯರು ಈಸ್ಕಿಲಸ್ಸನ ಕಲಿಕೆಸಮಯದ ಕೃತಿ. ಅದರದ್ದೇ ಆದ ಸತ್ತ್ವ, ಸ್ವಾರಸ್ಯಗಳು ಅದರಲ್ಲಿ ಕಡಿಮೆ. ಈಸ್ಕಿಲಸ್ಸಿಗಿಂತ ಮುಂಚೆ ಗಂಭೀರ ನಾಟಕಕ್ಕೆ ಇದ್ದ ಸ್ವರೂಪವನ್ನು ಅರಿತುಕೊಳ್ಳುವುದಕ್ಕೆ ಅದರಿಂದ ಹೇರಳ ಸಹಾಯವುಂಟು.

ಮಹಾಘನತೆ: ವಿಭಾವನೆಯ ವೈಭವ. ಭಾವಗಳ ಗಂಭೀರತೆ, ಭಾಷೆಯ ವಿಜೃಂಭಣೆ, ಛಂದಸ್ಸಿನ ಘೋಷ–ಈ ಯಾವ ದೃಷ್ಟಿಯಿಂದ ಅವಲೋಕಿಸಿದರೂ ಈಸ್ಕಿಲಸ್ಸನ ಎತ್ತರ ದೊಡ್ಡದು. ಅವನು ರುದ್ರನಾಟಕಗಳು ಉದಾತ್ತಧ್ಯೇಯಗಳನ್ನು ಎತ್ತಿ ಹಿಡಿಯುತ್ತ. ಇಲ್ಲದ ಸಲ್ಲದ ಭಯಗಳನ್ನು ನಿವಾರಿಸುತ್ತ, 'ದುರ್ಜನರಿಗೆದಂಡನೆ. ಸಜ್ಜನರಿಗೆ ಸೌಖ್ಯ' ಎಂಬ ಸಿದ್ಧಾಂತವನ್ನು ಬೋಧಿಸುತ್ತ, ಸಮಾಜ ಪೋಷಣೆಗೆ ಉತ್ತಮ ಉಪಕರಣಗಳಾದವು. ನೈತಿಕಸೂತ್ರಗಳಿಗಾಗಿಯೂ ಜೀವನ ಯೋಜನೆಗಾಗಿಯೂ ಹಾತೊರೆಯುತ್ತಿತ್ತು. ಅಥೆನ್ಸಿನ ಪ್ರಜಾಪ್ರಭುತ್ವ, ದಾರ್ಶನಿಕರ ಕಾಲ ಇನ್ನೂ ಬಂದಿರಲಿಲ್ಲವಾದ್ದರಿಂದ ರುದ್ರನಾಟಕದ ಕವಿಗಳೇ ಉಪದೇಶಕರಾಗಬೇಕಾಯಿತು. ಈಸ್ಕಿಲಸ್ ತಕ್ಕವನಾಗಿದ್ದ, ಆ ಹೊಣೆಗಾರಿಕೆಯ ಗದ್ದುಗೆಗೆ, ಅವನು ಸಾರಿ ಹೇಳಿದ್ದು ಇಷ್ಟೆ. ಮನುಷ್ಯಜೀವನ ಅಸಡ್ಡೆಯಿಂದ ಕಳೆಯಬಹುದಾದ ಲಘುವಿಚಾರವಲ್ಲ. ಗಹನವೂ ಜಟಿಲವೂ ಆದ ಪ್ರಶ್ನೆ ಅದು. ಇದನ್ನು ಮನಗಾಣಬೇಕು, ಮೊದಲು. ಎರಡನೆಯದಾಗಿ, ಬಾಳಿನ ಒಳಗಡೆ ಇದ್ದುಕೊಂಡು ಕೆಲಸ ಮಾಡುತ್ತಿರುವ ಧಾರ್ಮಿಕ ತತ್ತ್ವಗಳನ್ನು ತಪ್ಪೆಸಗದೆ ಅರಿತುಕೊಳ್ಳಬೇಕು. ತನ್ನ ಮಿತಿಯನ್ನು ತಿಳಿದುಕೊಂಡು ಗರ್ವಪಡದೆ ಕರ್ತವ್ಯ ತತ್ಪರನಾಗಿದ್ದರೆ ಮನಿಷ್ಯನಿಗೆ ಕ್ಷೇಮ. ಅಂಥವನಿಗೆ ಜ್ಯೂಸನ ನ್ಯಾಯ ಹೂವಿನ ಹಾರದಂತೆ ಹಗುರವಾಗಿ ಸುವಾಸನೆ ಕೊಡುತ್ತ ಸಂತಸಕರವಾಗುತ್ತದೆ. ಮನುಷ್ಯನೇನಾದರೂ ಮನಸ್ವಿ ಬೀಗಿ ಪ್ರಬಲವಾದ ನೀತಿವ್ಯವಸ್ಥೆಯನ್ನು ಎದುರಿಸುವುದಕ್ಕೆ ಹೊರಟರೆ ಅಪಾಯ ಖಂಡಿತ.

ಈಸ್ಕಿಲಸ್ಸನ ಹಿರಿಮೆಯನ್ನು ಸಮರ್ಪಕವಾಗಿ ಬಣ್ಣಿಸುವ ವಾಣಿ ಇಲ್ಲವೆಂದು ಸ್ತುತಿಸಿದ್ದಾರೆ ವಿಮರ್ಶಕರೆಲ್ಲ. ಈಸ್ಕಿಲಸ್ ಸಾಮಾನ್ಯಾರ್ಥದ ಕವಿಯಲ್ಲ, ಲೇಖನಿ ಹಿಡಿದ ಅರ್ಥದೇವತೆ. ಪ್ರಾಮಿತಿಯಸ್ ರೂಪಕವನ್ನು ಪ್ರಾಮಿತಿಯಸ್ಸೇ ಬರೆದನೊ ಏನೊ!–ಇಂಥ ಪ್ರಶಂಸೆಯ ವಾಕ್ಯಗಳು ಹೇರಳವಾಗಿವೆ. ದಿಟವಾಗಿಯೂ ಕವಿಯ ವಿಭಾವನೆಗಳೂ ಕಲ್ಪನೆಗಳೂ ಪದಗುಚ್ಛಗಳೂ ಮನುಷ್ಯಮಾತ್ರನಾದವನಿಗೆ ಸಾಧ್ಯವೇ ಎಂಬ ಅಚ್ಚರಿಯನ್ನು ಕೆರಳಿಸುತ್ತವೆ. (ಎಸ್.ವಿ.ಆರ್.)

ಡಿಮೀಟ್ರಿಯಸ್

ಶೈಲಿಯನ್ನು ಕುರಿತ ಪ್ರಾಚೀನ ಗ್ರೀಕ್ ಗ್ರಂಥವೊಂದರ ಕರ್ತೃ. ಅದಕ್ಕೆ ಶೈಲಿಯನ್ನು ಕುರಿತು–ಎಂಬ ಹೆಸರನ್ನು ಇಟ್ಟಿದ್ದಾರೆ. ಗ್ರೀಕ್ ಅಂಕಿತದ ದಿಟವಾದ ಭಾಷಾಂತರ "ವ್ಯಾಖ್ಯಾನದ ವಿಚಾರ" ಎಂದು ಕೆಲವು ತಜ್ಞರ ಮತ. ಶೈಲಿಯ ಬದಲು ರೀತಿ ಹೆಚ್ಚು ಉಚಿತವೆಂದು ಇನ್ನು ಕೆಲವರ ಸೂಚನೆ. ಅಂತೂ

ಅಲಂಕಾರಶಾಸ್ತ್ರಕ್ಕೆ (ರ್‍ಹೆಟೊರಿಕ್) ಸೇರಿದ ಈ ಗ್ರಂಥ ಬಹಳ ಉಪಯುಕ್ತವಾದ್ದು. ಅದನ್ನು ಬರೆದವನಾರು, ಎಲ್ಲಿದ್ದ, ಯಾವ ಕಾಲದವ, ಅವನ ಜೀವಿತದ ವಿವರಗಳೇನು–ಇತ್ಯಾದಿ ಪ್ರಶ್ನೆಗೆ ಖಚಿತವಾದ ಉತ್ತರ ದೊರೆತಿಲ್ಲ. ಪ್ರಾಯಶಃ ದೊರೆಯಲಾರದು. ಅದರ ಕರ್ತೃವೆನ್ನಲಾದ ಡಿಮೀಟ್ರಿಯಸ್ಸನ ಕಾಲವನ್ನು ಪ್ರ.ಶ.ಪೂ ೪ನೆಯ ಶತಮಾನದಿಂದ ಪ್ರ.ಶ.ಪೂ. ೧ನೆಯ ಶತಮಾನದವರೆಗೂ ಎಳೆದು ತಂದಿದ್ದಾರೆ. ಬಹುಶಃ ಪ್ರ.ಶ.ಪೂ೩ನೆಯ ಶತಮಾನ ಸರಿಯೆಂದು ಒಪ್ಪಿದರೆ ತಪ್ಪಾಗಲಾರದು. ಅಷ್ಟೆ; ಮಿಕ್ಕ ಯಾವ ವಿಚಾರವೂ ಅವನ ಬಗೆಗೆ ತಿಳಿಯದು. ಪ್ರೊ. ಸೇಂಟ್ಸ್‌ಬೆರಿ ಅವನನ್ನು ಅನಿಶ್ಚಿತ ಡಿಮೀಟ್ರಿಯಸ್ ಎಂದು ಕರೆದಿದ್ದಾನೆ.

ಕ್ರಮಸಂಖ್ಯೆಯುಳ್ಳ ಕೇವಲ ೩೦೪ ಚಿಕ್ಕ ಪ್ಯಾರಾಗಳು ಈ ಗ್ರಂಥದ ವಿಸ್ತಾರ. ಪ್ಯಾರಗಳ ಯೋಜನೆ ಸ್ಪಷ್ಟವೂ ವಿವೇಚಿತವೂ ಆಗಿದೆ. ಪೀಠಿಕಾಭಾಗ (೧–೩೫) ನಾಲ್ಕು ರೀತಿಗಳ ವಿವರಣೆ : ಭವ್ಯತೆಯ ಅಥವಾ ಮಹತ್ತ್ವದ ರೀತಿ (೩೮–೧೧೩); ನಯನಾಜೂಕು ರೀತಿಯ ವಿವರಣೆ (೧೨೮–೧೮೫); ಸರಳರೀತಿಯ ವಿವರಣೆ (೧೯೦–೨೩೭); ಶಕ್ತರೀತಿಯ ವಿವರಣೆ (೨೪೧–೩೦೪). ವಿವರಣೆಯಲ್ಲಿ ವಿಷಯಕ್ಕೆ ಸಂಬಂಧಿಸಿದ ಅಂಶ ಬಲು ಕಡಿಮೆ, ಶಬ್ದಗಳಿಗೂ ಶಬ್ದಗಳ ಅಳವಡಿಕೆಗೂ ಹೆಚ್ಚು ಗಮನ ಕೊಡಲಾಗಿದೆ. ಪ್ರತಿಯೊಂದು ರೀತಿಯೂ ಹೇಗೆ ಗುಣವಾಗುತ್ತದೆ, ಹೇಗೆ ಅವಗುಣವಾಗುತ್ತದೆ ಎಂಬುದನ್ನು ನಿಷ್ಠೆಯಿಂದ ತೋರಿಸಿದೆ. ಮಹತ್ತ್ವ ಜಡತೆಗೆ ಇಳಿಯಬಹುದು, ನಯನಾಜೂಕು ಸೋಗಿನ ಒಯ್ಯಾರವಾಗಬಹುದು, ಸರಳತೆ ಒಣಕಲಾಗಬಹುದು, ಶಕ್ತಿ ಒರಟಿಗೆ ಇಳಿಯಬಹುದು. ಪ್ರತಿಯೊಂದು ರೀತಿಗೂ ಅದರ ಗುಣ ಅಪೇಕ್ಷ್ಯ, ಅವಗುಣ ಅಪಾಯಕಾರಿ. ಅವಗುಣಗಳ ವಿವರ ಸಂಕ್ಷಿಪ್ತವಾಗಿದೆ.

ಆರಿಸ್ಟಾಟಲನ ಅಲಂಕಾರಶಾಸ್ತ್ರವೇ ಡಿಮೀಟ್ರಿಯಸ್ಸಿಗೆ ಮೂಲ ಆಧಾರ. ಆದರೂ ಅದನ್ನು ತನ್ನ ಇಷ್ಟದಂತೆ ಉಪಯೋಗಿಸಿಕೊಳ್ಳುವ ಹಕ್ಕು ತನ್ನದೆಂದು ಅವನು ನಂಬಿದ್ದ. ಅಲ್ಲಲ್ಲಿ ನಿರ್ದೇಶ್ಯವಾಕ್ಯವನ್ನು ಬದಲಾಯಿಸುತ್ತಾನೆ; ಸ್ವಂತ ಅಭಿಪ್ರಾಯವನ್ನು ಸೂಚಿಸುತ್ತಾನೆ; ಹೆಸರುಗಳ ಮಾರ್ಪಾಟೂ ಉಂಟು. ವಾಕ್ಯದ ಉಪವಾಕ್ಯಗಳು ಭಾವ ಭಾವನೆಯನ್ನು ಅನುಸರಿಸತಕ್ಕದ್ದು: ಯಾವೊಂದು ಅತಿ ಉದ್ದವಾಗಬಾರದು. ಸಂಕ್ಷಿಪ್ತತೆ ಬಲಿಷ್ಠವಾಗಬಲ್ಲುದು. ವಾಕ್ಯ ಬಂಧ ಎರಡು ಬಗೆ: ಕೊಡುಬಗೆ, ಸಡಿಲಬಗೆ: ಉಪವಾಕ್ಯಗಳು ಒತ್ತೊತ್ತಾಗಿ ಕೂಡಿಕೊಂಡದ್ದು ಕೂಡುವಾಕ್ಯ (ಪೀರಿಯಡ್) ಉಪವಾಕ್ಯಗಳ ಸಂಖ್ಯೆ ನಾಲ್ಕನ್ನು ಮೀರಬಾರದು. ಕೂಡುವಾಕ್ಯ ಗಂಭೀರ ಸರಣಿಗೆ ಬದಲು ಸಂಭಾಷಣಾ ಸರಣಿಯನ್ನು ಹಿಡಿದರೆ ಅದರ ಬಂಧ ಸಡಿಲಬಂಧಕ್ಕೆ ಸಮೀಪವಾಗುತ್ತದೆ.

ಪೀಠಿಕೆಯಾದ ಮೇಲೆ ಮುಖ್ಯ ವಿಷಯವನ್ನು ಎತ್ತಿಕೊಳ್ಳಲಾಗಿದೆ. ಇಲ್ಲಿ ಕ್ಯಾರೆಕ್ಟರ್ ಎಂಬುದರ ಸಮಂಜಸ ಭಾಷಾಂತರ ಶೈಲಿ (ಸ್ಟೈಲ್) ಅಲ್ಲ. ಏತಕ್ಕೆಂದರೆ ಮುಂದೆ ವಿಮರ್ಶೆಯಲ್ಲಿ ಶೈಲಿ ಎಂಬುದು ಮೂರು ಶೈಲಿಯ ಸೂತ್ರ ಎಂಬುದಕ್ಕೆ

ಮಾತ್ರ ಹೊಂದಿಕೊಂಡಿತು. ಆದ್ದರಿಂದ ಇಲ್ಲಿ ಕ್ಯಾರೆಕ್ಟರ್ ಎಂದರೆ ವೈಲಕ್ಷಣ್ಯ ಅಥವಾ ಗುಣಲಕ್ಷಣ. ಪ್ಲೇಟೋವಿನ ಕಾಲದಿಂದ ಒಳವಸ್ತು (ಕಂಟೆಂಟ್) ಮತ್ತು ಆಕಾರಗಳ (ಫಾರಂ) ವಿಚಾರದಲ್ಲಿ ಮೊದಲನೆಯದು ಹೆಚ್ಚು ಜಿಜ್ಞಾಸೆಗೆ ಕಾರಣವಾಗಲಿಲ್ಲ; ಆದರೆ ಆಕಾರವನ್ನು ಕುರಿತು ಹಲವು ಅಭಿಪ್ರಾಯಗಳೂ ನಿರ್ದೇಶ್ಯಶಬ್ದಗಳೂ ಬಳಕೆಗೆ ಬಂದುವು. ಪ್ಲೇಟೋ ಸೂತ್ರಿಸಿದ ಶಬ್ದಗಳ ಆಯ್ಕೆ (ಲೆಕ್ಸಿಸ್) ಮತ್ತು ವಿನ್ಯಾಸ (ಸಿನ್ತೆಸಿಸ್) ಎರಡೂ ಬದಲಾಗಿ ನಿಂತುವು. ಡಿಮೀಟ್ರಿಯಸ್ ಅವುಗಳ ಅರ್ಥವನ್ನು ಹಿಗ್ಗಲಿಸಿದ. ಆಯ್ಕೆಯ ಕೆಳಗೆ ಚಾಲ್ತಿ ಶಬ್ದ, ಅಪೂರ್ವ ಶಬ್ದ, ನವೀನ ಶಬ್ದ, ಸಂಯುಕ್ತ ಪದ ಮುಂತಾದುವನ್ನೇ ಅಲ್ಲದೆ ಭಾವದ್ಯೋತಕ ಶಬ್ದ ಸ್ವಭಾವಸೂಚಕ ಶಬ್ದಗಳನ್ನೂ ಸೇರಿಸಿ, ಜೊತೆಗೆ ವಿಭಕ್ತಿ, ಕಾಲರೂಪ, ಭಾರಹೊತ್ತ ಶಬ್ದ, ಉಪಮಾನ ರೂಪಕಗಳನ್ನೂ ಪಟ್ಟಿ ಮಾಡಿದ; ಕೆಲವೇ ಪದ, ಅನೇಕ ಪದ ಎಂಬುದನ್ನೂ ಅಡಗಿಸಿದ. ವಿನ್ಯಾಸಕ್ಕೆ ಸಂಬಂಧಿಸಿದ ಅಂಶ ಮೂರು ಎಂದ : ಪದಗಳನ್ನು ಮಗ್ಗುಲುಮಗ್ಗುಲಲ್ಲಿ ಇಟ್ಟಾಗ ಎದ್ದು ಬರುವ ದನಿ, ವಾಕ್ಯ ಉಪವಾಕ್ಯಗಳ ರಚನೆ, ಮತ್ತು ಲಯ, ಅಲಂಕಾರಗಳೂ ವಿನ್ಯಾಸದ ಭಾಗ.

ಅಲಂಕಾರಗಳ ವಿಷಯದಲ್ಲಿ ಅವನ ಹೇಳಿಕೆ ಸೂಕ್ತವಾಗಿದೆ. ಒಂದೇ ಅಲಂಕಾರ ಹಲವು ರೀತಿಗಳಲ್ಲಿ ಬರಬಹುದು; ಒಂದು ಕಡೆ ಅದು ನಾಜೂಕಾದರೆ ಇನ್ನೊಂದು ಕಡೆ ಬಲಿಷ್ಠ, ಮತ್ತೊಂದು ಕಡೆ ಪರಿಣಾಮಕರ. ಕವಯಿತ್ರಿ ಸ್ಯಾಫೊ ಶಕ್ತ ಉಪಮೆಯನ್ನು ಚಿತ್ತರಂಜಕವಾಗಿಸಬಲ್ಲಳು; ಇತರರಿಗೆ ಅಸಾಧ್ಯವಾದ್ದನ್ನು ಅವಳು ಅಂದವಾಗಿ ಸಾಧಿಸುತ್ತಾಳೆ.

ರೂಪಕಾಲಂಕಾರದ ಚರ್ಚೆಗೆ ೧೩ ಪ್ಯಾರಾ ಕೊಡಲಾಗಿದೆ. ಸಾದೃಶ್ಯ ಅತಿ ದೂರದ್ದಾಗಿರಬಾರದು; ಚೈತನ್ಯಗೂಡಿರಬೇಕು, ಜಡವಾಗಿರಕೂಡದು, ರೂಪಕವನ್ನು ಅದಲುಬದಲಿಸುವುದು ಸಲ್ಲುವುದಿಲ್ಲ: ಬೆಟ್ಟದ ಪಾದ ಎನ್ನಬಹುದು, ಮನುಷ್ಯನ ಇಳಿಜಾರು ಎನ್ನಲಾಗುವುದು. ಆರಿಸ್ಟಾಟಲಿಗೆ ಉಪಮಾನ ರೂಪಕಕ್ಕಿಂತ ಹೆಚ್ಚು ಕಾವ್ಯವಿತ್ತೆಂದು ತೋರಿಬಂತು; ಡಿಮೀಟ್ರಿಯಸನ ಅಭಿಮತ ತದ್ವಿರುದ್ಧ, ಅನ್ಯಾರ್ಥ ಉತ್ಪ್ರೇಕ್ಷೆ ಇತ್ಯಾದಿ ಅಲಂಕಾರಗಳು ಭವ್ಯರೀತಿಗೆ ಹೊಂದುತ್ತವೆ ಎನ್ನುತ್ತಾನೆ.

ಭವ್ಯರೀತಿಗೆ ಭಂಗತರುವ ಜಡತೆ ಒಂದು ಬಗೆಯ ಅತಿರೇಕ; ವಿಶೇಷಣ ಬಾಹುಳ್ಯ, ಅತ್ಯಾವೇಶದ ಸಂಯುಕ್ತಪದ, ಅತ್ಯಂತ ಅಪರೂಪವಾದ ಶಬ್ದ, ನಿಸ್ಸತ್ತ್ವ ರೂಪಕ ಮತ್ತು ಛಂದೋವೈಪರೀತ್ಯಗಳಿಂದ ಅದು ಹುಟ್ಟುತ್ತದೆ. ಜಡತೆ ಬಡಾಯಿಯಂತೆ ಒನಕೆಯನ್ನು ಸಿಂಗರಿಸಿದಂತೆ.

ನಯ ನಾಜೂಕು ರೀತಿಯ ಪ್ರಸ್ತಾಪ ಕೊಂಚಮಟ್ಟಿಗೆ ಸಂದಿಗ್ಧ. ಅದರ ಬಗೆ ಎರಡು. ಒಂದು ಗಂಭೀರ ಮತ್ತು ಎತ್ತರ; ಇನ್ನೊಂದು ಹಗುರ ಮತ್ತು ಹಾಸ್ಯಮಯ. ನಗುಬರಿಸುವ ಉಕ್ತಿಯ ಲಕ್ಷಣ ಹೇಗೆ ನಯ ನಾಜೂಕಾದೀತು ಎಂಬುದು ಅಷ್ಟು ಸ್ಪಷ್ಟವಾಗಿಲ್ಲ. ಆದರೂ ಪ್ರಾಚೀನ ಗ್ರೀಕ್ ಲೇಖಕರು ಹಾಸ್ಯದ

ಮೇಲೆ ಬರೆದಿರುವುದು ಬಲು ಕಡಿಮೆಯಾಗಿರುವುದರಿಂದ ಡಿಮೀಟ್ರಿಯಸನ ಕೆಲವು ವಾಕ್ಯಗಳು ಆದರಣೀಯ: ೧ ಚತುರೋಕ್ತಿ ನೀಟಾಗಿರಬಹುದು, ನಿಷ್ಠುರವಾಗಿರಬಹುದು. ೨ ಚತುರೋಕ್ತಿ ಪ್ರಸಂಗದ ಕಹಿಕಟುತ್ವವನ್ನು ಹೆಚ್ಚಿಸಬಲ್ಲದು; ೩ ಹಾಗೆಯೇ ಅಸಹ್ಯ ಪ್ರಸಂಗವನ್ನು ಹಿತಗೊಳಿಸಬಲ್ಲುದು. ಸಿಟ್ಟುಬರಿಸುವ ಕಡೆ ನಗುಬರಿಸಿದರೆ ಅದು ಉತ್ಕೃಷ್ಟ ಚರುತೋಕ್ತಿ. ಶ್ಲೇಷೆ, ಅನ್ಯಾರ್ಥ, ನಾಣ್ಣುಡಿ, ಅತಿಶಯೋಕ್ತಿ ಮೊದಲಾದುವು ಸಹಾಯಕವಾಗುತ್ತವೆ. ಚತುರೋಕ್ತಿಯಿಂದ ಉಕ್ತಿಗಾರನ ಗುಣಶೀಲ ಪ್ರಕಟವಾಗುತ್ತದೆ.

ಗಂಭೀರವಾದ ನಯನಾಜೂಕು ಒಳವಿಷಯ, ಶಬ್ದದ ಆಯ್ಕೆ, ಶಬ್ದವಿನ್ಯಾಸ, ಲಯಗಳಿಂದ ಆಗುತ್ತದೆ. ಅದನ್ನು ವಿವರಿಸಲಾಗಿದೆ.

ನಯನಾಜೂಕಿನ ವೈರಿ ಸೋಗಿನ ಒಯ್ಯಾರ, ವಿಷಯದ ಲಕ್ಷಣವೇ ಡಬ್ಬಾಗಿರಬಹುದು; ಬಡ ಪದಗಳಿಂದಲೂ ಪದವಿನ್ಯಾಸದಿಂದಲೂ ಶಿಥಿಲ ಲಯದಿಂದಲೂ ಬರಿ ಒಲಪು ಏಳುತ್ತದೆ.

ಸರಳರೀತಿಯ ಚರ್ಚೆಗೆ ಡಿಮೀಟ್ರಿಯಸ್ ಬಳಸಿರುವ ಕ್ರಮ ಹೊಸದಾಗಿದೆ. ಸಾಧಾರಣ ವಿಷಯ, ಬಳಕೆಯ ಸಾಮಾನ್ಯ ಶಬ್ದಾವಳಿ ಉಪವಾಕ್ಯಗಳ ಹ್ರಸ್ವತೆ, ಸ್ವರವ್ಯಂಜನಗಳ ಸುಲಭ ಮೈತ್ರಿ, ಪರಿಚಿತ ಅಲಂಕಾರಗಳಿಂದ ಅದು ಉಂಟಾಗುತ್ತದೆಯೆಂದು ಕ್ಷಿಪ್ರವಾಗಿ ಹೇಳಿ ಅದರ ಮೂರು ಗುಣಗಳಿಗೆ ಗಮನ ಕೊಡುತ್ತಾನೆ; ತಿಳಿತನ, ಸ್ಫುಟತ್ವ, ಹರಡಿಕೆ, ೩೨ ಪ್ಯಾರಾಗಳಷ್ಟು ಈ ಭಾಗವಿದ್ದರೂ ವಿಶೇಷ ಬುದ್ಧಿವಂತಿಕೆಯೇನೂ ಅದರಲ್ಲಿ ತೋರಿಬರುವುದಿಲ್ಲ; ಅಲ್ಲದೆ ಹಲವು ಕಡೆ ಅಭಿಪ್ರಾಯ ಸ್ಪಷ್ಟವಾಗಿಲ್ಲ. ಮುಂದಣ ೧೩ ಪ್ಯಾರಾಗಳಲ್ಲಿ ವಿಶದೀಕರಿಸುವ ಕುಶಲಪತ್ರ ಲೇಖನದ ವಿಚಾರ ಉತ್ತಮವಾದದ್ದು. ವಿನೂತನವಾದದ್ದು, ಉಪಯುಕ್ತವಾದದ್ದು. ಪತ್ರಲೇಖನ ಪ್ರಶ.ಪೂ ೫ನೆಯ ಶತಮಾನದಿಂದ ಬಂದಿದ್ದರೂ ಅದರ ವಿಮರ್ಶೆ ಆಗಿರಲಿಲ್ಲ; ಡಿಮೀಟ್ರಿಯಸ್ ಮೊದಲಿಗ. ಅವನಾದ ಮೇಲೆ ಎಷ್ಟೋ ಶತಮಾನಗಳ ತರುವಾಯ ಆ ಪ್ರಸ್ತಾಪ ಬರೆಹಗಾರರ ಚಿತ್ತವನ್ನು ಸೆಳೆಯಿತು. ಅವರಾರ ಬರೆಹವೂ ಡಿಮೀಟ್ರಿಯಸ್ಸನ ಮಟ್ಟಕ್ಕೆ ಹತ್ತುವುದಿಲ್ಲ. ಆರ್ಟಿಮಾನ್ ಎಂಬ ಸಂಪಾದಕನ ಮತದಂತೆ ಕುಶಲಪ್ರತ್ರದ ಶೈಲಿ ಮಾತಾಡುವ ಶೈಲಿಯಾಗಿರತಕ್ಕದ್ದು. ಡಿಮೀಟ್ರಿಯಸ್ ಅದನ್ನು ಅಲ್ಲಗಳೆದು, ಇನ್ನೊಬ್ಬನಿಗೆ ಕೊಡುಗೆಯಂತೆ ಕಳಿಸುವ ಕುಶಲಪತ್ರ ಜಾಗರೂಕತೆಯಿಂದ ರಚಿಸಿದ್ದಾಗಿರಬೇಕು ಎನ್ನುತ್ತಾನೆ. ಕುಶಲಪತ್ರದಲ್ಲಿ ಲೇಖಕ ತನ್ನ ಶೀಲಗುಣ ರೀತಿನೀತಿಯನ್ನು ಹೊರಗೆಡಹುತ್ತಾನೆ; ಆದರೆ ಅದರ ತುಂಬ ಉದ್ದ, ತುಂಬ ಗಂಭೀರವಾದರೆ ಕುಶಲಪತ್ರವಾಗಿ ಉಳಿಯದೆ ಪ್ರಬಂಧವಾಗುತ್ತದೆ. ತರ್ಕ ವಿಜ್ಞಾನಾದಿಗಳ ಜಿಜ್ಞಾಸೆ ಅಲ್ಲಿ ಕೂಡದು; ಗಾದೆಗಳನ್ನು ಉಪಯೋಗಿಸಬಹುದು; ಪ್ರೀತಿ ವಿನಯಗಳಿಂದ

ಕೂಡಿದ್ದರೆ ಸೊಗಸು; ನಗರಕ್ಕೂ ನಾಡಪ್ರಭುವಿಗೂ ಬರೆಯುವ ಪತ್ರಕ್ಕೆ ಹೆಚ್ಚು ಘನತೆ ಅವಶ್ಯಕವಾದರೂ ಗ್ರಾಂಥಿಕತೆ ಬರಬಾರದು : ಸರಳರೀತಿ ನಾಜೂಕುರೀತಿಗಳ ಹಿತವಾದ ಮಿಶ್ರಣ ಕುಶಲಪತ್ರದ ಶೈಲಿ.

ಸರಳರೀತಿ ಕೆಟ್ಟುಹೋದರೆ ಶೈಲಿ ಒಣಕಲಾಗುತ್ತದೆ. ಅಂದಗೇಡು ಆಲೋಚನೆ, ನಿಸ್ಸತ್ತ್ವ ಪದ, ಚಿಕ್ಕ ಪದಗುಚ್ಛಗಳ ಬಾಹುಳ್ಯ. ಥಟ್ಟನೆ ಕೊನೆಗೊಳಿಸುವಿಕೆ–ಇವು ಬಡಕಲಿಗೆ ಕಾರಣ.

ಶಕ್ತರೀತಿಗೂ ಭವ್ಯರೀತಿಗೂ ಕೆಲವು ಅಂಶಗಳಲ್ಲಿ ಸಾಮ್ಯ. ಪದಗಳೂ ಅಲಂಕಾರಗಳ ಸಂಖ್ಯೆಯೂ ಉದಾಹರಣೆಗಳೂ ಸಮಾನವಾಗಿರುವುದು ಸಾಧ್ಯ; ಆದರೆ ಉದ್ದೇಶ ಬೇರೆ ಬೇರೆ. ಶಕ್ತರೀತಿಯಲ್ಲಿ ಆವೇಶವೂ ರಭಸವೂ ಅಧಿಕ; ಕ್ಷಿಪ್ರ ಮುಕ್ತಾಯವೂ ಉಂಟು. ಇದಕ್ಕೆ ಡೆಮಾಸ್ತನೀಸ್ ಒಳ್ಳೆಯ ನಿದರ್ಶನ. ಅಡಕವೂ ಬಿಗಿಯೂ ಅಗತ್ಯ; ಕೂಡುವಾಕ್ಯ ಹೆಚ್ಚಾಗಿರಕೂಡದು, ಉಪವಾಕ್ಯಗಳ ಸಂಖ್ಯೆ ಎರಡಕ್ಕಿಂತ ಹೆಚ್ಚಿರಬಾರದು. ವಿರೋಧ ಎದರುಬದುರು ಸಮತೋಲ ಇತ್ಯಾದಿ ಯತ್ನ ಸಾಧ್ಯ ಅಲಂಕಾರಗಳು ಹೊಲ್ಲ; ಕರ್ಕಶತೆ ಅಸಾಂಗತ್ಯ ವಿಸಂಧಿ ಅಕ್ರಮ ಅಭಿನಯ–ಇವುಗಳಿಂದ ಶಕ್ತರೀತಿಗೆ ನೆರವು. ಡಿಮೀಟ್ರಿಯಸ್ ಕೆಲವು ನವೀನ ಅಲಂಕಾರಗಳನ್ನೂ ಸೂಚಿಸುತ್ತಾನೆ.

ಒರಟುತನ ಶಕ್ತರೀತಿಯ ಆಭಾಸ. ಅವಾಚ್ಯ ಸಂಗತಿಯ ನಿರೂಪಣೆ, ಛಿದ್ರ ಛಿದ್ರ ಬಂಧ, ಅಶ್ಲೀಲ ಶಬ್ದ –ಮುಂತಾದವು ಒರಟಾಗುತ್ತವೆ. ಅಹಿತವಾಗುತ್ತವೆ.

ಡಿಮೀಟ್ರಿಯಸ್ ಪ್ರತಿಭಾವಂತನಲ್ಲದಿದ್ದರೂ ನಿರ್ದುಷ್ಟಪಂಡಿತ, ದಾರ್ಶನಿಕನಲ್ಲದಿದ್ದರೂ ಸಪ್ಪೆ ಅಲಂಕಾರಿಕನಲ್ಲ. ಅವನ ಪುಸ್ತಕ ಆಲಂಕಾರಶಾಸ್ತ್ರಕ್ಕೆ ಸೇರಿದ್ದಾದರೂ ಸಾಹಿತ್ಯ ವಿಮರ್ಶೆಯಿಂದ ನಿಬಿಡವಾಗಿದೆ. ಆಗಿನ ಅವಧಿಯ ವಿಮರ್ಶೆ ಏನನ್ನು ಸಾಧಿಸಬಲ್ಲುದಾಗಿತ್ತು ಎಂಬುದನ್ನು ಅದು ತೆರೆದು ತೋರಿಸುತ್ತದೆ. ಕೆಲವು ಕಡೆ ಪುನರಾವೃತ್ತಿಯಿದೆ; ಹಳೆಯ, ಬಹುಶಃ ಹಳಸು ಉದಾಹರಣೆಗಳನ್ನೇ ಅವನು ಹಿಂಜರಿಯದೆ ಬಳಸುತ್ತಾನೆ. ಪ್ರಾಯಶಃ ಅವನ ವಾದ ಇದು: ಪರಮೋತ್ಕೃಷ್ಟ ಉದಾಹರಣೆಯನ್ನು ಹಿಂದಿನವನೊಬ್ಬ ಕಂಡುಹಿಡಿದ ಮೇಲೆ ಅದನ್ನಿಟ್ಟುಕೊಳ್ಳದೆ ಹೊಸ ಅನ್ವೇಷಣೆಯ ಶ್ರಮವೇತಕ್ಕೆ? ಅರಿಸ್ಟಾಟಲನಿಂದ ಬೇರೆ ನಿಲ್ಲುವ ಧೈರ್ಯ ಅವನಿಗೆ ಉಂಟು. ಅತೀವ ಪ್ರಶಂಸೆಗೆ ಸ್ವಾಮಿಯಾಗಿದ್ದ ಡೆಮಾಸ್ತನೀಸನ ಪದಪದ್ಧತಿಯನ್ನು ಟೀಕಿಸುತ್ತಾನೆ. ಡಿಮೀಟ್ರಿಯಸನ ಗ್ರಂಥದಂಥ ಇನ್ನೊಂದು ಗ್ರಂಥ ಮುಂದೆ ಸುಮಾರು ಇನ್ನೂರೈವತ್ತು ವರ್ಷ ಕಾಣಬರಲಿಲ್ಲ.

ಅವನ ಹೇಳಿಕೆಗಳಲ್ಲಿ ಹಲವೂ ಸರ್ವಕಾಲದ ಗದ್ಯಕ್ಕೂ ಅನ್ವಯವಾಗಬಲ್ಲವು. ಪದಗಳಿಗೆ ತಮ್ಮದೇ ಆದ ಅಂದಚಂದವಿದೆ; ಮಿತತ್ವದ ಆವಶ್ಯಕತೆ ಅನೇಕ ಸಾರಿ ಪ್ರಬಲ; ಔಚಿತ್ಯ ಅತಿಮುಖ್ಯವಾದದ್ದು; ಎಲ್ಲೆಲ್ಲೂ ಜನಬಳಕೆಯೇ ನಮ್ಮ ಉಪಾಧ್ಯಾಯ–ಇಂಥ ವಾಕ್ಯಗಳು ಶಾಶ್ವತವಾಗಿ ಆದರಣೀಯ. (ಎಸ್.ವಿ.ಆರ್.)

ಯೂರಿಪಿಡಿಸ್ (ಪ್ರ.ಶ.ಪೂ.ಸು. ೪೮೦–೪೦೬)

ಮೂವರು ಗ್ರೀಕ್ ಮಹಾನಾಟಕಕಾರರಲ್ಲಿ ಒಬ್ಬ (ಉಳಿದಿಬ್ಬರು ಈಸ್ಕಿಲಸ್ ಮತ್ತು ಸಾಫೊಕ್ಲಿಸ್). ಇವನು ಹುಟ್ಟಿದ್ದು ಪ್ರ.ಶ.ಪೂ ೪೮೦ ಅಥವಾ ೪೮೫ರಲ್ಲಿ. ಇವನ ನಾಟಕಗಳು ಉಳಿದಿಬ್ಬರ ನಾಟಕಗಳಿಗಿಂತ ಇವನ ಮರಣಾನಂತರ ಹೆಚ್ಚು ಜನಪ್ರಿಯವಾದವು.

ಪ್ರ.ಶ.ಪೂ ೫ನೆಯ ಶತಮಾನದಲ್ಲಿ ಗ್ರೀಸ್‌ನಲ್ಲಿ 'ಯೂರಿಪಿಡಿಸ್' ಯುಗವೆಂದು ಗುರುತಿಸಲಾಗಿದೆ. ವಾಸ್ತವವಾಗಿ ಅದು ಜಗತ್ತಿನ ಇತಿಹಾಸದಲ್ಲೇ ಒಂದು ಮಹತ್ತ್ವದ ಕಾಲಾವಧಿ; ಆಧುನಿಕ ನಾಗರಿಕತೆಗೆ ಆಗ ತಳಹದಿ ಸಿದ್ಧವಾಯಿತು.

ಯೂರಿಪಿಡಿಸ್ ಪ್ರಾಚೀನ ಕಾಲದ 'ಆಧುನಿಕ ನಾಟಕಕಾರ' ಇವನನ್ನು 'ಆಧುನಿಕ ರಂಗಭೂಮಿಯ ಜನಕ' ಎಂದು ಕರೆಯಲಾಗಿದೆ. ಒಂದರ್ಥದಲ್ಲಿ ಯುರೋಪಿಯನ್ ಸಾಹಿತ್ಯದ ಪ್ರಪ್ರಥಮ 'ರೊಮ್ಯಾಂಟಿಕ್' ಲೇಖಕನೀತ. ವೈಚಾರಿಕತೆ ಮತ್ತು ವ್ಯಷ್ಟಿಯ ಮೇಲೆ ಒತ್ತು ಇವನ ನಾಟಕಗಳ ಪ್ರಮುಖ ವೈಶಿಷ್ಟ್ಯ. ಇವನು ಸಾಕ್ರೆಟೀಸನಂತೆ 'ವೈಜ್ಞಾನಿಕ' ಮನೋಧರ್ಮವುಳ್ಳವ; ಇವನದು ಕ್ರಾಂತೀಕಾರಿ ಧೋರಣೆ ಮತ್ತು ಎಲ್ಲವನ್ನೂ ಪ್ರಶ್ನಿಸುವ ಪ್ರವೃತ್ತಿ. ಈ ಬೌದ್ಧಿಕತೆಯೇ ಇವನನ್ನು ಸಾಫೊಕ್ಲಿಸನಿಂದ ಬೇರ್ಪಡಿಸುವ ಅಂಶ. 'ಸಾಫೊಕ್ಲಿಸ್ ಅನುಭವಿಸಿದರೆ ಯೂರಿಪಿಡಿಸ್ ಆಲೋಚಿಸುತ್ತಾನೆ'. ಪುರಾಣ ಕಥೆಗಳನ್ನೆ ಯೂರಿಪಿಡಿಸ್ ತನ್ನ ನಾಟಕಗಳ ವಸ್ತುವನ್ನಾಗಿ ಮಾಡಿಕೊಂಡರೂ ಅವುಗಳನ್ನು ಪುನರ್‌ವ್ಯಾಖ್ಯಾನಿಸುತ್ತಾನೆ (ಆದರೆ ಕೆಲವೊಮ್ಮೆ ಅದರ ಅಸಂಬದ್ಧತೆಯನ್ನು ಮನಗಾಣಿಸುವುದಕ್ಕಾಗಿ ಸಾಂಪ್ರದಾಯಿಕ ಅಂತ್ಯವನ್ನು ಉಳಿಸಿಕೊಳ್ಳುತ್ತಾನೆ). ಇವನ ಆಸಕ್ತಿ ಮಾನವರಲ್ಲಿ; ಮಾನವೀಯತೆಯಲ್ಲಿ, ಪೌರಾಣಿಕ ಪಾತ್ರಗಳು ಇವನಲ್ಲಿ ಸಮಕಾಲೀನ ಮಾನವ ವ್ಯಕ್ತಿಗಳಾಗಿ ಮರುಹುಟ್ಟು ಪಡೆಯುತ್ತವೆ.

ಯೂರಿಪಿಡಿಸ್ ನಾಸ್ತಿಕನಲ್ಲವಾದರೂ ಈಸ್ಕಿಲಸ್ ಮತ್ತು ಸಾಫೊಕ್ಲಿಸರ ದೈವಶ್ರದ್ಧೆ ಇವನಿಗಿರಲಿಲ್ಲ. ದೈವದ ಪ್ರಾಬಲ್ಯವನ್ನು ಇವನು ನಿರಾಕರಿಸಿ, ಮನುಷ್ಯನ ದುರಂತಕ್ಕೆ ಅವನ ದೌರ್ಬಲ್ಯವೇ ಕಾರಣವೆಂದು ಸಾರುತ್ತಾನೆ. ಈತ ವಾಸ್ತವವಾದಿ ನಾಟಕಕಾರನೂ ಹೌದು. ಮಾನವರು ಹೇಗಿರಬೇಕೋ ಹಾಗೆ ಸಾಫೊಕ್ಲಿಸ್ ಚಿತ್ರಿಸಿದರೆ, ಹೇಗಿದ್ದಾರೋ ಹಾಗೆ ಚಿತ್ರಿಸುತ್ತಾನೆ ಯೂರಿಪಿಡಿಸ್. ಇವನ ವಾಸ್ತವಿಕತೆ ಇಂದಿನ ಅರ್ಥದಲ್ಲಿ ವಾಸ್ತವಿಕತೆಯಿಲ್ಲದಿರಬಹುದು; ಆದರೆ ಈಸ್ಕಿಲಸ್, ಸಾಫೋಕ್ಲಿಸರ ಜಗತ್ತಿಗೆ ಹೋಲಿಸಿದರೆ ಇವನ ಜಗತ್ತು ಹೆಚ್ಚು ವಾಸ್ತವವಾಗಿ ತೋರುತ್ತದೆ.

ಯೂರಿಪಿಡಿಸನ ಮನೋವೈಜ್ಞಾನಿಕ ಒಳನೋಟ ಗಮನಾರ್ಹವಾದುದು. 'ಮೊತ್ತಮೊದಲ ಮನೋವಿಜ್ಞಾನಿ' ಎಂದು ಇವನನ್ನು ಕರೆಯಲಾಗಿದೆ. ಮಾನವ ಮನಸ್ಸಿನ ಆಳ ಎತ್ತರ ಬಿತ್ತರಗಳನ್ನು ಇವನಂತೆ ಅಭಿವ್ಯಕ್ತಿಸಿದವರು ವಿರಳ. ಕಾಮ, ಪ್ರೇಮಗಳ ಸಾಮರ್ಥ್ಯವನ್ನು ಇವನಂತೆ ಹಿಂದಿನವರು ನಿರೂಪಿಸಲಿಲ್ಲ. ಹಾಗೆಯೆ

'ಮನುಷ್ಯನಲ್ಲಿರುವ ತರ್ಕಾತೀತ ಶಕ್ತಿಗಳನ್ನು ಮೊದಲ ಬಾರಿಗೆ ದಾಖಲಿಸಿದವ ಯೂರಿಪಿಡಿಸ್'. ನಮಗೆ ಅಜ್ಞಾತವಾದ ಎಷ್ಟೋ ವಿಷಯಗಳಿವೆ ಎಂಬುದನ್ನು ಸಾಕ್ರಟೀಸನಂತೆ ಇವನೂ ಒಪ್ಪುತ್ತಾನೆ.

'ಸಾಂಸಾರಿಕ ನಾಟಕ'ವನ್ನು ಕಂಡುಹಿಡಿದವ ಯೂರಿಪಿಡಿಸ್ ಎನ್ನಲಾಗಿದೆ. ಇವನು 'ಕವಿಗಳಲ್ಲೆಲ್ಲ ರುದ್ರತಮ' ಎಂಬುದು ಅರಿಸ್ಟಾಟಲನ ಉಕ್ತಿ. ಯೂರಿಪಿಡಿಸ್‌ನ 'ಎಷ್ಟೊ ನಾಟಕಗಳು ದುರಂತನಾಟಕಗಳೇ ಅಲ್ಲ, ದುರಂತ ವೈನೋದಿಕಗಳು' ಎಂಬ ಹೇಳಿಕೆಯೂ ಉಂಟು. ತನ್ನದೇ ರೀತಿಯಲ್ಲಿ ಈತ ನೀತಿವಾದಿಯೂ ಹೌದು.

ಸಾಂಪ್ರದಾಯಿಕ ರಂಗತಂತ್ರಗಳನ್ನು ಈತ ಕೆಲವೊಮ್ಮೆ ಮೀರುತ್ತಾನೆ. ನಾಟಕದ ಸಮಸ್ಯೆಯ ಪರಿಹಾರಕ್ಕಾಗಿ 'ಯಂತ್ರೋತ್ಪನ್ನ ದೇವತೆ'ಯ ತಂತ್ರವನ್ನು ಇವನು ಬಳಕೆಗೆ ತಂದ. ಈತ ಸುಮಾರು ೯೨ ನಾಟಕಗಳನ್ನು ಬರೆದಿದ್ದಾನೆ. ಅವುಗಳಲ್ಲಿ ೧೮ ಮಾತ್ರ ಉಪಲಬ್ಧವಾಗಿವೆ. ಇವನ ಕೆಲವು ಮುಖ್ಯ ನಾಟಕಗಳು: ಮೀಡಿಯ, ದ ಬ್ಯಾಕೆ, ಹಿಪ್ಪೋಲಿಟಿಸ್, ಎಲೆಕ್ಟ್ರಾ, ಅಲ್‌ಸೆಸ್ಟಿಸ್, ಆಂಡ್ರೊಮೆಕೆ, ಹೆಕೂಟ, ಟ್ರೋಜನ್ ವಿಮನ್ ಮತ್ತು ಹೆಲೆನ್. (ಸಿ.ಪಿ.ಕೆ.)

'ದಿ ಬ್ಯಾಕೆ' ನಾಟಕವನ್ನು ಬರೆದಾಗ ಯೂರಿಪಿಡಿಸ್‌ಗೆ ಎಪ್ಪತ್ತು ವರ್ಷ ದಾಟಿತ್ತು. ಅವನು ತೀರಿಕೊಂಡ ಮೇಲೆ ಅವನ ಮಗ ಪ್ರದರ್ಶಿಸಿದ.

ಇನ್ನಿಬ್ಬರು ನಾಟಕಕಾರರ ನಾಟಕಗಳಲ್ಲಿ ದುಷ್ಟರಿಗೂ ಒಂದು ಘನತೆ ಇದೆ. ಹೋಮರನ ಮಹಾಕಾವ್ಯಗಳಲ್ಲಿ ಅತಿ ಮಾನವರಾಗಿದ್ದವರು ಹಲವರು ಯೂರಿಪಿಡೀಸ್‌ನ ನಾಟಕಗಳಲ್ಲಿ ಸಣ್ಣ ಮನುಷ್ಯರಾಗುತ್ತಾರೆ. ಕುಯುಕ್ತಿಗಿಳಿಯುತ್ತಾರೆ. ದೇವತೆಗಳ ವಿಷಯದಲ್ಲಿಯೂ ಇವನು ಅಂಥ ಗೌರವವೇನನ್ನೂ ತೋರಿಸಿಲ್ಲ. ಪೌರಾಣಿಕ ಸಾಮಗ್ರಿಯನ್ನು ಐರನಿಯೊಡನೆ ಬಳಸುವ ಮೊದಲನೆಯ ನಾಟಕಕಾರ ಯೂರಿಪಿಡಿಸ್. ದೇವತೆಗಳ ನಡತೆಯನ್ನು ಐರನಿಯ ಬೆಳಕಿನಲ್ಲಿ ವಿಶ್ಲೇಷಣೆ ಮಾಡುತ್ತಾನೆ. ಹಲವೊಮ್ಮೆ ಮೂಲಕಥೆಯ ಮುಕ್ತಾಯವನ್ನು ಉಳಿಸಿಕೊಳ್ಳುತ್ತಾನೆ. ಆದರೆ ಅದರ ಅಸಂಬದ್ಧತೆಯನ್ನು ತೋರಿಸುತ್ತಾನೆ. ಕಾಲಜ್ಞರು, ದೈವಜ್ಞರ ವಿಷಯದಲ್ಲಿ ಇವನದು ಸಂಪೂರ್ಣವಾಗಿ ವೈಚಾರಿಕ ನಿಲುವು.

ಮನುಷ್ಯ-ಅದೃಶ್ಯ ಶಕ್ತಿಗಳ ಸಂಬಂಧ ಯೂರಿಪಿಡೀಸನ್ ನಾಟಕದ ಒಂದು ಮುಖ್ಯ ವಸ್ತುವಾದರೆ ಮನುಷ್ಯನೊಳಗಿರುವ ರಾಗಗಳ ಶಕ್ತಿ ಇನ್ನೊಂದು ಮುಖ್ಯ ವಸ್ತು ಮನುಷ್ಯನ ರಾಗಗಳು ಎಷ್ಟು ಪ್ರಚಂಡವಾದವು. ಅವುಗಳಿಗೆ ವಿವೇಕ ಮತ್ತು ಸಂಯಮಗಳ ಕಡಿವಾಣ ಹಾಕದಿದ್ದರೆ ಅವು ಮನುಷ್ಯನ ಬಾಳನ್ನು ಹೇಗೆ ಬಂಡೆಗಪ್ಪಳಿಸಿ ನುಚ್ಚುನೂರು ಮಾಡುತ್ತವೆ ಎಂಬುದು ಅವನ ಮುಖ್ಯ ಕಾಳಜಿ. ಇವು ತರ್ಕಕ್ಕೆ ಸಿಕ್ಕುವುದಿಲ್ಲ ಎನ್ನುವುದನ್ನು ಗುರುತಿಸಿದ. ಈ ರಾಗಗಳಲ್ಲಿ ಕಾಮದ ಅದಮ್ಯ ಶಕ್ತಿಯನ್ನು ಚಿತ್ರಿಸಿದ. ಇವನು ಸ್ತ್ರೀದ್ವೇಷಿ ಎಂಬ ಮಾತು ಅವನ ಜೀವಮಾನದ ಕಾಲದಲ್ಲೇ ಕೇಳಿಬರುತ್ತಿತ್ತು. ಆದರೆ, ಮೀಡಿಯಳಂಥ ಭಯಂಕರ ಹೆಣ್ಣನ್ನು ಸೃಷ್ಟಿಸಿದ

ಈ ನಾಟಕಕಾರನೇ ಹೆಕೂಬ, ಆ್ಯಂಡ್ರೊ ಮೆರೆಯುವಂತೆ ಗಂಡಸಿನ ಕ್ರೌರ್ಯಕ್ಕೆ ತುತ್ತಾದ ಹೆಂಗಸರನ್ನು ಚಿತ್ರಿಸಿದ ನಾಗರಿಕತೆ ಯಾವುದು, ಅನಾಗರಿಕತೆ ಯಾವುದು ಎಂಬ ಪ್ರಶ್ನೆಯನ್ನೂ ಎತ್ತಿದ.

ಯೂರಿಪಿಡಿಸನ ನಾಟಕದಲ್ಲಿ ಮತ್ತೆ ಮತ್ತೆ 'ಮೆಲೊಡ್ರಾಮ' ಕಾಣುತ್ತದೆ. ಸಫೋಕ್ಲಿಸನ ನಾಟಕಗಳ ರಚನಾಕೌಶಲವೂ ಇವನಲ್ಲಿ ವಿರಳ. ಮೇಳದ ಪ್ರಾಧಾನ್ಯ ಇವನ ನಾಟಕಗಳಲ್ಲಿ ಬಹು ಕಡಿಮೆ. ಇನ್ನಿಬ್ಬರು ನಾಟಕಕಾರರಲ್ಲಿ ಕಾಣದ ಹಾಸ್ಯದ ಅಂಶ ಇವನ ನಾಟಕಗಳಲ್ಲಿ ಕಾಣುತ್ತದೆ. (ಎಲ್.ಎಸ್.ಎಸ್.)

ಸಾಫೋಕ್ಲೀಸ್ (ಪ್ರ.ಶ.ಪೂ. ೪೯೬–೪೦೬)

ಪ್ರಪಂಚಪ್ರಸಿದ್ಧ ಗ್ರೀಕ್ ರುದ್ರನಾಟಕಕಾರ. ಗ್ರೀಕ್ ನಾಟಕ ಚರಿತ್ರೆಯ ರತ್ನತ್ರಯರಲ್ಲಿ ಒಬ್ಬ. ಉಳಿದವರು ಈಸ್ಕಿಲಸ್ ಹಾಗೂ ಯೂರಿಪಿಡೀಸ್. ಅಥೆನ್ಸ್ ಪಟ್ಟಣದ ಒಂದು ಚಿಕ್ಕ ಗ್ರಾಮ ಕಲೋನಸ್ ಎಂಬಲ್ಲಿ ಪ್ರ.ಶ.ಪೂ. ೪೯೬ ರಲ್ಲಿ ಜನಿಸಿದ. ಶಾಂತ ಸ್ವಭಾವದ ಸ್ಫುರದ್ರೂಪಿ. ಇವನ ತಂದೆ ಸೊಫೀಲಸ್, ಆರ್ಥಿಕವಾಗಿ ಹೆಚ್ಚು ಶ್ರೀಮಂತನೂ ಸುಸಂಸ್ಕೃತನೂ ಆಗಿದ್ದ ಕೌಟುಂಬಿಕ ಹಿನ್ನೆಲೆ ಇವನದು. ತಂದೆಯಿಂದಲೇ ಸಂಗೀತ, ನೃತ್ಯ, ವ್ಯಾಯಾಮಗಳನ್ನು ಕಲಿತು ಪರಿಣತಿ ಸಾಧಿಸಿದ. ಇವನು ೧೬ ವರ್ಷದವನಿದ್ದಾಗ ಅಥೆನ್ಸ್‌ನಗರ ಸಲಾಮಿಸ್ ಕದನದ ವಿಜಯೋತ್ಸವವನ್ನು ಆಚರಿಸಿದ ಸಂದರ್ಭದಲ್ಲಿ ಲೈರ್ ವಾದ್ಯವನ್ನು ನುಡಿಸುತ್ತಾ ಮೇಳದ ನಾಯಕನಾಗಿ ತನ್ನ ಗಾನಪ್ರತಿಭೆಯನ್ನು ಸಾರ್ವ ಜನಿಕವಾಗಿ ಪ್ರದರ್ಶಿಸಿ ಪ್ರಸಿದ್ಧನಾಗತೊಡಗಿದ. ೨೭ನೆಯ ವರ್ಷದಿಂದ ಸು. ೫೦ ವರ್ಷಗಳವರೆಗೆ ಸತತ ವಾಗಿ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ವಯಸ್ಸಿನಿಂದಲೂ ನಾಟಕ ರಚನೆ ಯಿಂದಲೂ ಹಿರಿಯವನಾಗಿದ್ದ ಈಸ್ಕಿಲಸ್ ನನ್ನೇ ಹಲವು ಬಾರಿ ಸೋಲಿ ಸಿದ್ದ. ೨೪ ಬಾರಿ ಮೊದಲ ಬಹುಮಾನ ಪಡೆದ ಹೆಗ್ಗಳಿಕೆ ಇವನದು. ತಾರುಣ್ಯದಿಂದ ವೃದ್ಧಾಪ್ಯದವರೆಗೂ ನಾಟಕ ರಚನೆ, ಪ್ರದರ್ಶನಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡ.

ಇವನು ೧೨೩ ನಾಟಕಗಳನ್ನು ರಚಿಸಿದ್ದರೂ ಏಜಾಕ್ಸ್, ಅಂತಿಗೊನೆ, ಈಡಿಪಸ್ ಟಿರೇನಸ್, ದ ಟ್ರಾಕಿನಿಯೆ, ಎಲೆಕ್ಟ್ರ, ಫಿಲೋಕ್ಟೆಟಸ್, ಈಡಿಪಸ್ ಅಟ್‌ಕಲೋನಸ್ ಎಂಬ ೭ನಾಟಕಗಳು ಮಾತ್ರ ಲಭ್ಯವಾಗಿವೆ. ಇವುಗಳ ರಚನೆಯ ಕಾಲವೂ ತಿಳಿದು ಬಂದಿಲ್ಲ. ಆರಂಭದ ೨೦ ವರ್ಷಗಳಲ್ಲಿ ರಚಿಸಿದ ಯಾವ ನಾಟಕಗಳೂ ಲಭ್ಯವಾಗಿಲ್ಲ.

ಈಸ್ಕಿಲಸ್‌ನ ನಾಟಕಗಳಿಗಿಂತ ಈತನ ನಾಟಕಗಳು ಹೆಚ್ಚು ದೀರ್ಘವಾದವು. ಕ್ರಿಯೆಯೂ ಹೆಚ್ಚು. ಭಾವಗೀತೆಯ ಅಂಶಕ್ಕೆ ಪ್ರಾಧಾನ್ಯ ಕಡಿಮೆ. ಕ್ರಿಯೆ–ಪಾತ್ರಗಳ ನಿಕಟ ಸಂಬಂಧ, ಸನ್ನಿವೇಶ–ಪಾತ್ರಗಳ ಪರಸ್ಪರ ಪ್ರತಿಕ್ರಿಯೆಯಿಂದ ಕ್ರಿಯೆಯ ಮುಂದುವರಿಕೆ, ವ್ಯಕ್ತಿತ್ವ–ವ್ಯಕ್ತಿತ್ವಗಳ ಪ್ರಬಲ ಘರ್ಷಣೆ ಇವು ಇವನ ನಾಟಕಗಳ ಪ್ರಧಾನ ಲಕ್ಷಣಗಳು.

ಇವನಿಗೆ ಮನುಷ್ಯ ಸ್ವಭಾವದಲ್ಲಿ ಹೆಚ್ಚಿನ ಆಸಕ್ತಿ. ಬದುಕಿನಲ್ಲಿ, ಸಾವಿನಲ್ಲಿ ನಾಟಕದ ನಾಯಕನಿಗೆ ಒದಗಿದ ಭಾಗ್ಯ–ದುರದೃಷ್ಟಗಳನ್ನು 'ಏಜಾಕ್ಸ್' ನಾಟಕ ವಸ್ತುವಾಗಿ ಹೊಂದಿದೆ. ಬಾಳಿನ ಜಟಿಲತೆ, ಮಾನವ ಸ್ವಭಾವದ ಜಟಿಲತೆಗಳನ್ನು ಶಕ್ತವಾಗಿ ನಿರೂಪಿಸುವ ನಾಟಕ 'ಅಂತಿಗೊನೆ'. ತನಗೆ ಅರಿವಿಲ್ಲದೆ ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗಿ ಮಕ್ಕಳನ್ನು ಪಡೆಯುವ ಈಡಿಪಸ್‌ನನ್ನು ನಾಯಕನನ್ನಾಗಿ ಹೊಂದಿರುವುದು ಈಡಿಪಸ್ ಟಿರೇನಸ್ ನಾಟಕ. ಇದು ಪ್ರಪಂಚದ ಅತಿ ಶ್ರೇಷ್ಠ ನಾಟಕಗಳ ಪಂಕ್ತಿಗೆ ಸೇರಿದೆ. ಪ್ರಸಿದ್ಧ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ 'ಈಡಿಪಸ್ ಕಾಂಪ್ಲೆಕ್ಸ್' ಎಂಬ ಹೆಸರನ್ನು ಸೃಷ್ಟಿಸಿದ್ದು ಈ ಕಥೆಯ ಆಧಾರದಿಂದಲೇ ಎಂಬುದು ಗಮನಾರ್ಹ.

ರಂಗಸ್ಥಳಕ್ಕೆ ಮೂರನೆಯ ಪಾತ್ರವನ್ನು ತಂದದ್ದು; ಕಥಾವಸ್ತುವಿನ ವಿಶಿಷ್ಟ ಬೆಳೆವಣಿಗೆ, ಅಂದರೆ ಒಂದು ಎಪಿಸೋಡ್‌ನ ಅನಂತರ ಮತ್ತೊಂದು ಎಪಿಸೋಡ್, ಅದರಿಂದ ಮುಂದಿನದು. ಹೀಗೆ ಕ್ರಿಯೆಯ ಹಲವು ಭಾಗಗಳಲ್ಲಿ ಕಾಣುವ ನಿಕಟ ಸಂಬಂಧ; ಒಂದು ಉಗ್ರ ಪರೀಕ್ಷೆಯಗಳಿಗೆ ಮತ್ತು ಅದು ತರುವ ಸಾವು ; ಸಾವು ದೈಹಿಕವಾಗಿ ಯಾಗಲಿ, ಸಾಂಕೇತಿಕವಾಗಿಯಾಗಲಿ ಸತ್ಯದ ಅರಿವನ್ನು ಮೂಡಿಸುತ್ತದೆ; ಮನುಷ್ಯನ ಜ್ಞಾನ ಮಿತವಾದದ್ದು, ಮನುಷ್ಯ ಕಾಲದ ಮಿತಿಗೆ ಹಾಗೂ ಪ್ರಭುತ್ವಕ್ಕೆ ಒಳಗಾದವನು, ಸಾವು–ನೋವುಗಳ ಮೂಲಕ ಮನುಷ್ಯ ಹೊಸ ತಿಳಿವನ್ನು ಪಡೆಯುತ್ತಾನೆ ಎಂದು ಮೊದಲಾಗಿ ನಾಟಕಗಳಲ್ಲಿ ಮೂಡಿಸಿರುವ ತತ್ತ್ವಗಳು; ನಾಟಕಗಳಲ್ಲಿ ತರುವ 'ಐರನಿ', ಪಾತ್ರಗಳಿಗೆ ಹೊಂದಿಕೊಳ್ಳುವಂತಹ ಸರಳ ಭಾಷೆ, ತೀವ್ರವಾದ ಹಾಗೂ ತೀಕ್ಷ್ಣ ವೇಗದ ಸಂಭಾಷಣೆ ಇವುಗಳೆಲ್ಲವೂ ಇವನ ನಾಟಕಗಳ ವೈಶಿಷ್ಟ್ಯಗ ಳಾಗಿವೆ. ಇವನು ನಾಟಕಗಳಲ್ಲಿ ತರುವ 'ಐರನಿ' ನಾಟಕ ಸಾಹಿತ್ಯದಲ್ಲಿ 'ಸಾಫೋಕ್ಲಿಯನ್ ಐರನಿ' ಎಂದೇ ಪ್ರಸಿದ್ಧವಾಗಿದೆ. ಈತ ಪ್ರ.ಶ.ಪೂ ೪೦೬ ರಲ್ಲಿ ನಿಧನನಾದ. (ಜಿ.ಎನ್.ಎಸ್.)

ಹೋಮರ್

ಗ್ರೀಕ್ ಮಹಾಕಾವ್ಯಗಳಾದ ಇಲಿಯಡ್ ಮತ್ತು ಆಡಿಸಿಗಳನ್ನು ಸಂಯೋಜಿಸಿದವನೆಂದು ತಿಳಿಯಲಾದ ಮಹಾಕವಿ. ಈತನ ಬಗ್ಗೆ ವಿಶೇಷ ಮಾಹಿತಿಗಳು ಲಭ್ಯವಿಲ್ಲ. ಕೆಲವರು ಈತ ಏಜಿಯನ್ ಸಮುದ್ರದ ಪೂರ್ವ ತೀರದಲ್ಲಿ ಗ್ರೀಕ್ ಭಾಷೆಯನ್ನಾಡುವ ಪ್ರದೇಶದಲ್ಲಿದ್ದಿರಬೇಕೆಂದೂ ಅಥವಾ ಕಿಯೋಸ್ ದ್ವೀಪದಲ್ಲಿದ್ದಿರ ಬೇಕೆಂದೂ ಹೇಳಿದರೆ ಇನ್ನೂ ಕೆಲವರು ಈತ ಇದ್ದನೆಂಬುದನ್ನೇ ಒಪ್ಪುವುದಿಲ್ಲ. ಐತಿಹ್ಯಗಳ ಪ್ರಕಾರ ಈತ ಅಂಧನಾಗಿದ್ದ.

ಈತನದೆಂಬ ಮಹಾಕಾವ್ಯಗಳು ಟ್ರೋಜನ್ ಯುದ್ಧಾವಧಿ ಹಾಗೂ ಅನಂತರದ ಘಟನೆಗಳನ್ನು ಆಧರಿಸಿವೆ. ಪ್ರ.ಶ.ಪೂಸು. ೧೨೦೦ರಲ್ಲಿ ಗ್ರೀಸ್ ಮತ್ತು ಟ್ರಾಯ್ ನಗರಗಳ ನಡುವೆ ನಡೆದ ಯುದ್ಧ ಸಂಗತಿಗಳನ್ನು ಇವು ಪ್ರಾಯಃ

ಆಧರಿಸಿವೆ. ಈ ಕಾವ್ಯಗಳೂ ಪ್ರ.ಶ.ಪೂ ೮೦೦-೭೦೦ರ ಅವಧಿಯ ಸಾಮಾಜಿಕ ಪರಿಸ್ಥಿತಿಗಳನ್ನು ಹೇಳುವುದರಿಂದ ಈ ಅವಧಿಯಲ್ಲಿ ಇವು ಸಂಯೋಜನೆಗೊಂಡಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ಈ ಕಾವ್ಯಗಳಲ್ಲಿ ವರ್ಣಿಸಲಾದ ಕೆಲವು ಸಂಗತಿಗಳಿಗೆ ಚಾರಿತ್ರಿಕ ಆಧಾರ ಒದಗಿಸುವಂಥ ಪುರಾವೆಗಳನ್ನು ಟ್ರಾಯ್ ಮತ್ತು ಗ್ರೀಸ್ ಅವಶೇಷಗಳಲ್ಲಿ ಪುರಾತತ್ತ್ವಜ್ಞರು ಪತ್ತೆಹಚ್ಚಿದ್ದಾರೆ. ಕಾವ್ಯಗಳಲ್ಲಿ ಚಿತ್ರಿತವಾಗಿರುವ ಪಾತ್ರ ಮತ್ತು ಘಟನೆಗಳು ಭಾಗಶಃ ನಿಜವಾದ ವ್ಯಕ್ತಿ ಮತ್ತು ಚಾರಿತ್ರಿಕ ಸಂಗತಿಗಳನ್ನಾಧರಿಸಿದ್ದರೂ ಜನಪದ ಗಾಯಕರಿಂದಲೂ ಕಥೆಗಳಿಂದಲೂ ಶತಮಾನಗಳಿಂದ ಪರಿಷ್ಕರಣೆಗೆ ಒಳಗಾಗಿವೆ. ಜನಪದ ಗಾಯಕರು (ಬಾರ್ಡ್ಸ್) ಟ್ರೋಜನ್ ಯುದ್ಧ ವಿವರಗಳನ್ನು ಸರಣಿ ಯೋಪಾದಿ ಸೃಷ್ಟಿಸಿ ಹಾಡುತ್ತಿದ್ದರು. ಇವುಗಳಲ್ಲಿ ಇವೆರಡು ಕಾವ್ಯಗಳು ಮಾತ್ರ ಉಳಿದು ಬಂದಿವೆ ಎನ್ನಲಾಗಿದೆ.

ಈತನ ಕಾಲಾನಂತರ ಗ್ರೀಸಿನ ಧಾರ್ಮಿಕ ಮಹೋತ್ಸವಗಳಲ್ಲಿ ಈ ಕಾವ್ಯಗಳ ಪಠಣಮಾಡಲಾಗುತ್ತಿತ್ತು. ಪ್ರಾಚೀನ ಗ್ರೀಸಿನ ಐತಿಹ್ಯ ಹಾಗೂ ಪುರಾಣಗಳನ್ನು ಅಭ್ಯಸಿಸಲು ಮತ್ತು ಓದು ಕಲಿಯಲು ಈ ಕಾವ್ಯಗಳು ಗ್ರೀಕ್ ಮಕ್ಕಳ ಆಧಾರ ಪಠ್ಯಗಳಾಗಿದ್ದುವು. ಇದರ ಪರಿಣಾಮವಾಗಿ ಹೋಮರ್‌ನ ದೇವಾನುದೇವತೆಗಳ ಚಿತ್ರಣದ ರೀತಿಯಲ್ಲಿ ಗ್ರೀಕರು ತಮ್ಮ ಧಾರ್ಮಿಕ ರೀತಿನೀತಿಗಳನ್ನು ರೂಪಿಸಿಕೊಳ್ಳುವಂತಾಯಿತು. ಈತನ ಕಾವ್ಯಗಳು ಮಹಾನ್ ದುರಂತ ನಾಟಕಗಳನ್ನು ರಚಿಸಿದ ಪ್ರ.ಶ.ಪೂ ಸು. ೪೦೦ರ ಈಸ್ಕಿಲಸ್, ಯೂರಿಪಿಡೀಸ್ ಮತ್ತು ಸಾಫೋಕ್ಲೀಸರ ಮೇಲೆ ಅಗಾಧ ಪರಿಣಾಮ ಬೀರಿದುವು.

ಈ ಕಾವ್ಯಗಳ ಶ್ರವಣ ಹಾಗೂ ಲಿಖಿತ ಪ್ರತಿಗಳ ಪಠಣಗಳಿಂದ ಗ್ರೀಕರು ಹೋಮರ್‌ನ ಬಗ್ಗೆ ಅರಿಯಲಾರಂಭಿಸಿದರು. ಪ್ರತಿಗಳನ್ನು ತಯಾರಿಸುವಾಗ ತಪ್ಪುಗಳನ್ನೂ ಉದ್ದೇಶಪೂರ್ವಕ ಬದಲಾವಣೆಗಳನ್ನೂ ಬರೆಹಗಾರರು ಮಾಡುತ್ತಿದ್ದರು. ಪ್ರ.ಶ.ಪೂ ೩೦೦ರ ವೇಳೆಗೆ ಗ್ರೀಸ್‌ನಲ್ಲಿ ಇಲಿಯಡ್ ಮತ್ತು ಒಡಿಸಿಗಳ ಭಿನ್ನ ಪಾಠಗಳು ಲಭ್ಯವಿದ್ದುವು. ಪ್ರ.ಶ.ಪೂಸು. ೩೦೦-೧೦೦ರ ಅವಧಿಯಲ್ಲಿ ಈಜಿಪ್ಟ್‌ನ ಗ್ರೇಟ್ ಅಲೆಕ್ಸಾಂಡ್ರಿಯನ್ ಗ್ರಂಥಾಲಯದ ವಿದ್ವಾಂಸರು ಎರಡೂ ಮಹಾಕಾವ್ಯಗಳ ಬದಲಾವಣೆಗಳನ್ನು ಸರಿಪಡಿಸಲು ಹಾಗೂ ಅವುಗಳ ಮೂಲ ರೂಪವನ್ನು ಕಾಯ್ದಿಡಲು ಪ್ರಯತ್ನಿಸಿದರು. ಕೆಲವು ವಿದ್ವಾಂಸರು ಈ ಕಾವ್ಯಗಳು ಇಬ್ಬರು ಬೇರೆ ಬೇರೆ ಕವಿಗಳಿಂದ ರಚಿತವಾದುವೆಂದು ನಂಬಿದರು. ಈ ವಿದ್ವಾಂಸರನ್ನು ಭಿನ್ನಮಾರ್ಗಿಗಳೆಂದು ಕರೆಯಲಾಯಿತು (ಸಪರೇಟಿಸ್ಟ್ಸ್). ಭಾಷೆ, ದೃಷ್ಟಿಕೋನ ಹಾಗೂ ವಸ್ತುಗಳ ವಿಷಯದಲ್ಲಿ ಇವೆರಡೂ ಕಾವ್ಯಗಳು ಒಬ್ಬನಿಂದಲೇ ರಚಿತವಾಗಿದ್ದರೆ ಇಷ್ಟೊಂದು ವ್ಯತ್ಯಾಸಗಳಿ ರುತ್ತಿರಲಿಲ್ಲ ಎಂದು ಇವರು ವಾದಿಸುತ್ತಾರೆ.

ಕೆಲವು ಶತಮಾನಗಳ ಕಾಲ ಇವೆರಡೂ ಕಾವ್ಯಗಳ ಸಂಯೋಜಕನ ಪ್ರಶ್ನೆ ಮರೆತೇ ಹೋಗಿತ್ತು. ಅನಂತರ ೧೭೯೫ರಲ್ಲಿ ಜರ್ಮನಿಯ ವಿದ್ವಾಂಸ ಫ್ರೆಡ್ರಿಚ್ ಆಗಸ್ಟ್ ವೂಲ್ಫ್ ಈ ಚರ್ಚೆಯನ್ನು ಪುನಃ ಆರಂಭಿಸಿದ. ಹೋಮರ್ ಬದುಕಿದ್ದನೆಂಬ ಕಾಲದಲ್ಲಿ ಗ್ರೀಕರಿಗೆ ಬರೆವಣಿಗೆ ತಿಳಿದಿತ್ತೆಂಬ ಬಗ್ಗೆ ಪುರಾತತ್ತ್ವಜ್ಞರಲ್ಲಿ ಯಾವ ಸಾಕ್ಷ್ಯವೂ ಇಲ್ಲವೆಂದು ಈತ ವಾದಿಸಿದನಲ್ಲದೆ ಹೋಮರ್ ಎಂಬಾತ ಇರಲೇ ಇಲ್ಲವೆಂಬ ವಿಶ್ಲೇಷಕ ಪಂಥದ ನಾಯಕನೂ ಆದ. ಈ ಪಂಥದವರು ಈ ಕಾವ್ಯಗಳು ಅನೇಕ ಕವಿಗಳ ಕವಿತಾ ಸಂಕಲನಗಳೆಂದು ವಾದಿಸಿದರು. ಕಥೆಗಳಲ್ಲಿರುವ ಅನಿಶ್ಚಿತ ಗುಣ, ಭಾಷಾ ವ್ಯತ್ಯಾಸಗಳು ಹಲವು ಲೇಖಕರು ಇದರಲ್ಲಿ ಪಾಲ್ಗೊಂಡಿದ್ದಾರೆಂಬುದಕ್ಕೆ ಆಧಾರವೆನ್ನುವುದು ಇವರ ವಾದ.

ಏಕಕರ್ತೃತ್ವದ ಪ್ರತಿಪಾದಕರು ವಿಶ್ಲೇಷಕ ಪಂಥದವರನ್ನು ವಿರೋಧಿಸಿ ಈ ಕಾವ್ಯಗಳು ಪ್ರತಿಭಾವಂತ ಏಕ ಕವಿಯ ಸೃಷ್ಟಿಗಳೇ ಆಗಿವೆ; ಹೆಚ್ಚೆಂದರೆ ಇಬ್ಬರಿರಬಹುದು ಎಂದು ಹೇಳುತ್ತಾರೆ. ಇವರು ಕಥೆಯ ಏಕ ಸೂತ್ರತೆಯನ್ನೂ ನಿಶ್ಚಿತ ಪಾತ್ರ ಚಿತ್ರಣವನ್ನೂ ತಮ್ಮ ವಾದಕ್ಕೆ ಸಮರ್ಥನೆಯಾಗಿ ನೀಡುತ್ತಾರೆ. ಈ ಎರಡು ಪಂಥದವರ ವಾದ ವಿವಾದಗಳು 'ಹೋಮರಿಕ್ ಸಮಸ್ಯೆ' ಎಂದೇ ಪ್ರಸಿದ್ಧವಾಗಿವೆ.

ಮೌಖಿಕ ಸಾಹಿತ್ಯ ರಚನಾ ಸ್ವರೂಪ ಸ್ಪಷ್ಟವಾಗಿರುವ ಇಂದಿನ ಸಂದರ್ಭದಲ್ಲಿ 'ಹೋಮರಿಕ್ ಸಮಸ್ಯೆ'ಯನ್ನು ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ೧೯೩೦ರ ದಶಕದಲ್ಲಿ ಅಮೆರಿಕದ ವಿದ್ವಾಂಸ ಮಿಲ್ಮನ್ ಪ್ಯಾರಿ ಯುಗೋಸ್ಲಾವಿಯದ ಬಾರ್ಡ್‌ರ ಅಧ್ಯಯನಕ್ಕೆ ತೊಡಗಿದ. ಇವರು ಅನಕ್ಷರಸ್ಥರಾಗಿದ್ದರೂ ದೀರ್ಘ ಕಾವ್ಯಗಳನ್ನು ಮೌಖಿಕವಾಗಿಯೇ ಸಂಯೋಜಿಸುತ್ತಿದ್ದರು. ಇವರು ತಾವು ಹಾಡಿದ ಕಾವ್ಯಗಳನ್ನು ಹಾಗೆಯೇ ಸ್ಮರಿಸಿಕೊಳ್ಳದೇ ಮತ್ತೆ ಮತ್ತೆ ಪುನಾರಚಿಸುತ್ತಿದ್ದರು.

ಕಾವ್ಯ ಭಾಗದ ಸೃಷ್ಟಿಯಲ್ಲಿ ಇವರು ಸಾಂಪ್ರದಾಯಿಕ ಉಕ್ತಿ, ಸಾಲು ಹಾಗೂ ದೃಶ್ಯಗಳನ್ನು ಮತ್ತೆ ಮತ್ತೆ ಬಳಸಿಕೊಳ್ಳುತ್ತಿದ್ದರು. ಇದರ ಆಧಾರದಲ್ಲಿ ಮಿಲ್ಮನ್ ಪ್ಯಾರಿ, ಇಲಿಯಡ್ ಮತ್ತು ಆಡಿಸಿ ಕಾವ್ಯಗಳು ಇದೇ ತಂತ್ರವನ್ನು ಬೃಹತ್ಪ್ರಮಾಣದಲ್ಲಿ ಬಳಸಿಕೊಂಡಿವೆ ಎಂದು ವಾದಿಸಿದ. ಈತನ ಅಧ್ಯಯನಾಧಾರದ ಮೇಲೆ ಅನೇಕ ವಿದ್ವಾಂಸರು ಹೋಮರ್ ಒಬ್ಬ ಅನಕ್ಷರಸ್ಥ, ಅಸಾಧಾರಣ ಸಾಮರ್ಥ್ಯವಿದ್ದ ಬಾರ್ಡ್‌ನಾಗಿದ್ದ ಎಂದು ಪ್ರತಿಪಾದಿಸಿದ್ದಾರೆ. ಇವರ ವಾದದ ಪ್ರಕಾರ ಹಲವು ಸಂದರ್ಭಗಳಲ್ಲಿ ಹೋಮರ್ ಈ ಕಾವ್ಯಗಳನ್ನು ಹಾಡುತ್ತಿದ್ದ. ಅವನ ಜೀವಿತದ ಕಡೆಗಾಲದಲ್ಲಿ ಬರೆವಣಿಗೆಯನ್ನು ತಿಳಿದ ಗ್ರೀಕರು ಇವುಗಳಿಗೆ ಲಿಪಿ ರೂಪ ನೀಡಿದರು. ಈ ಕಾವ್ಯಗಳು ಗ್ರೀಕ್‌ನಲ್ಲಿದ್ದು ಒಂದು ನಿರ್ದಿಷ್ಟ ನಗರ ಅಥವಾ ಚಾರಿತ್ರಿಕ ಅವಧಿಗೆ ಸೀಮಿತವಾಗಿಲ್ಲದಿರುವುದು ಹೋಮರನ ಬಗ್ಗೆ ತಿಳಿಯುವ ವಿದ್ವಾಂಸರ ಯತ್ನವನ್ನು ಸಂಕೀರ್ಣಗೊಳಿಸಿವೆ.

ಈ ಕಾವ್ಯಗಳು ಮೌಖಿಕ ಪರಂಪರೆಯನ್ನು ಪ್ರತಿನಿಧಿಸುತ್ತವೆಂಬುದನ್ನು ಬಹಳಷ್ಟು ವಿದ್ವಾಂಸರು ಒಪ್ಪುತ್ತಾರಾದರೂ ಈ ಕಾವ್ಯಗಳು ಹೇಗೆ ಸಂಯೋಜನೆಗೊಂಡವು ಅಥವಾ ಸುರಕ್ಷಿತವಾಗಿ ಉಳಿದವೆಂಬ ವಿವರಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. *

II ರೋಮನ್ ಸಾಹಿತ್ಯ ಅಥವಾ ಲ್ಯಾಟಿನ್ ಸಾಹಿತ್ಯ

ರೋಮನ್ ಸಾಹಿತ್ಯ

ಪ್ರಾಚೀನ ಲ್ಯಾಟಿನ್ ಸಾಹಿತ್ಯವೇ ರೋಮನ್ ಸಾಹಿತ್ಯ. ರೋಮನರ ಕಲಾತ್ಮಕ ಸಾಹಿತ್ಯ ಪ್ರ.ಶ.ಪೂ ೨೪೦ರಂದು ಲಿವಿಯಸ್ ಆಂಡ್ರಾನಿಕಸ್ಸನಿಂದ ಪ್ರಾರಂಭಗೊಂಡಿತೆಂದು ನಿರ್ಧರಿಸಲಾಗಿದೆ. ಇದಕ್ಕೆ ಮುನ್ನ ಸಾಹಿತ್ಯವೇ ಇರಲಿಲ್ಲ ಎನ್ನಲಾಗದು. ಬರೆವಣಿಗೆಯ ಮೊಟ್ಟಮೊದಲಣ ಬಳಕೆ ಸಂವತ್ಸರದಲ್ಲಿ ನಡೆದ ಮುಖ್ಯ ಘಟನೆಗಳನ್ನೂ ವೈಚಿತ್ರ್ಯಗಳನ್ನೂ ವರದಿಮಾಡಿಡುವ ಆನಲೆಸ್ ಮ್ಯಾಕ್ಸಿಮಸ್ ಎಂಬ ಬಖೈರು ಬಹಳ ಮುಖ್ಯವಾದುದು. ಇಂಥ ಬಖೈರುಗಳಲ್ಲಿ ಸಾಹಿತ್ಯಾಂಶ ಬಲು ಕಡಿಮೆ ಯಾಗಿದ್ದರೂ ದೇಶಭಕ್ತಿಯನ್ನು ಕುದುರಿಸುವ ನೆನಪನ್ನು ಒದಗಿಸಿ ಅವು ಮುಂದೆ ಬಂದ ಕಥನಕಾವ್ಯ ಚರಿತ್ರೆಗಳಿಗೆ ಮುನ್ಸೂಚನೆಯಾದವು. ಪ್ರ.ಶ.ಪೂ ೩೧೨ರಿಂದ ೩೦೮ರ ತನಕ ಪರಾಮರ್ಶಕನಾಗಿದ್ದ ಅಪ್ಪಿಯಸ್ ಕ್ಲಾಡಿಯಸ್ ಕೀಕಸ್ ಶಕ್ತ ವಾಗ್ಮಿಯಾಗಿದ್ದ; ಸ್ಯಟರ್ನಿಯನ್ ಛಂದಸ್ಸಿನ ಕೆಲವು ಪದ್ಯಗಳನ್ನು ನೀತಿಬೊಧಗೆ ಈತ ಉಪಯೋಗಿಸಿದನೆಂದು ತಿಳಿದುಬರುತ್ತದೆ. ಚಟುಲರೂ ಕ್ಷಿಪ್ರಮತಿಗಳೂ ಆದ ಪ್ರಾಚೀನ ರೋಮನರಿಗೆ ತೀವ್ರಗತಿಯ ಉತ್ಸಾಹಪೂರಿತ ಸ್ಯಟರ್ನಿಯನ್ ತಕ್ಕುದಾದ ಛಂದಸ್ಸಾಗಿತ್ತು. ಆದ್ಯ ಅರ್ಚಕವರ್ಗ ತಮ್ಮ ಮತಾಚರಣೆಯ ಪ್ರಾಕೃತ ನೃತ್ಯಗಳಲ್ಲಿ ಎಬ್ಬಿಸುತ್ತಿದ್ದ ಉದ್ಗಾರಗಳೇ ಆ ಛಂದಸ್ಸಿಗೆ ಮೂಲ; ವೇಟೀಸ್ ಎಂಬ ಸಂಚಾರಿ ಕಣಿಗಾರರೂ (ಚಾರಣರು) ಅದನ್ನು ಬಳಸುತ್ತಿದ್ದರು; ಬೆಳೆಯ ಸುಗ್ಗಿ ಮತ್ತು ದ್ರಾಕ್ಷಿಹಣ್ಣಿನ ಸುಗ್ಗಿಗಳ ಸಮಯದಲ್ಲಿ ಜನ ಕುಣಿಯುತ್ತ ಹಾಡುತ್ತ ವಿನೋದಕ್ಕಾಗಿ ಪರಸ್ಪರ ಲೇವಡಿ ನಡೆಸುವಾಗ ಈ ಛಂದಸ್ಸಿನ ಫೆಸೆನ್ನೈನ್ ಶ್ಲೋಕಗಳು ಕೇಳಬರುತ್ತಿದ್ದುವು. ಅಷ್ಟೇ ಅಲ್ಲದೆ ವೀರರ ಸಮಾಧಿ ಸಂಸ್ಕಾರದ ಅಂಗವಾಗಿ ನೆರವೇರುತ್ತಿದ್ದ ಪ್ರಶಂಸಾಗೀತದ ಹಾಡುಗಾರಿಕೆಗೂ ಈ ಛಂದಸ್ಸು ವಾಹಕವಾಗುತ್ತಿತ್ತು. ಎಲ್ಲಕ್ಕೂ ಮಿಗಿಲಾಗಿ ಒಂದು ಬಗೆಯ ನಾಟಕೀಯ ಮಿಶ್ರಣ ಸ್ಯಾಟ್ಯುರ ಎಂಬ ಹೆಸರಿನಲ್ಲಿ ಸಂಗೀತದೊಂದಿಗೆ ಅಭಿನಯಗೊಳ್ಳುತ್ತಿತ್ತು; ಅದಕ್ಕೆ ಕ್ಲುಪ್ತ ಸಂವಿಧಾನವಾಗಲಿ ಪಾತ್ರ ಪೋಷಣೆಯಾಗಲಿ ಇರುತ್ತಿರಲಿಲ್ಲ. ನಟರು ತಮ್ಮ ಬುದ್ಧಿಶಕ್ತಿ ಯಿಂದಲೂ ಚಾಕಚಕ್ಯತೆಯಿಂದಲೂ ಮಾತುಕತೆ ಟೀಕೆ ವಿಡಂಬನೆಗಳಿಂದಲೂ ಪ್ರೇಕ್ಷಕರಿಗೆ ಹರ್ಷ ವೀಯುತ್ತಿದ್ದರು. ರೋಮನ್ ಸಾಹಿತ್ಯದ ವಿಕಾಸಕ್ಕೆ ಸ್ಯಾಟ್ಯುರ ಛಂದಸ್ಸು ಮೂಲಸೆಲೆಯಾಯಿತು. ಹೀಗೆ ವಿಕಾಸಗೊಂಡ ರೋಮನ್ ಸಾಹಿತ್ಯವನ್ನು ಐದು ಮುಖ್ಯ ಕಾಲಘಟ್ಟಗಳಾಗಿ ವಿಭಾಗಿಸಿ ವಿವೇಚಿಸಲಾಗಿದೆ.

ಮೊದಲನೆಯ ಅವಧಿ (ಪ್ರ.ಶ.ಪೂ. ೨೪೦–೮೦): ರೋಮನ್ ಗಣರಾಜ್ಯ ಯುದ್ಧಮಾಡಿ ಬಲು ಫಲವತ್ತಾದ ಟಾರೆಂಟಮ್ ಪ್ರದೇಶವನ್ನು ಪ್ರ.ಶ.ಪೂ ೨೭೨ರಲ್ಲಿ ಗೆದ್ದು ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಂಡಿತು. ಆಗ ಅನೇಕ ಗ್ರೀಕರು ಗುಲಾಮರಾಗಿ ರೋಮಿಗೆ ಬಂದರು. ಅವರಲ್ಲಿ ಲಿವಿಯಸ್ ಆಂಡ್ರಾನಿಕಸ್ (ಪ್ರ.ಶ.ಪೂ. ೨೮೪–೨೦೪) ಒಬ್ಬ ಯಜಮಾನನ ಮನೆಯಲ್ಲಿ ಗ್ರೀಕ್ ಭಾಷೆ ಸಾಹಿತ್ಯಗಳನ್ನು ಕಲಿಸುವುದು ಇವನ ಮುಖ್ಯ ಕೆಲಸವಾಗಿತ್ತು. ವಿದ್ಯಾವಂತರೆನ್ನಿಸಿಕೊಳ್ಳಲು ಬಯಸಿದ ರೋಮನ್ ಶ್ರೀಮಂತ ತರುಣರಲ್ಲರಿಗೂ ಗ್ರೀಕ್ ಪ್ರಿಯವೆನಿಸಿತು. ದಕ್ಷಿಣ ಇಟಲಿಯನ್ನು ಪೂರ್ತಿ ಸ್ವಾಧೀನಪಡಿಸಿಕೊಂಡ ರೋಮಿಗೆ ಸಿಸಿಲಿ ದ್ವೀಪದ ಮೇಲೆ ಕಣ್ಣುಬಿತ್ತು. ಕಾರ್ತೇಜಿನ ಮೇಲೆ ಯುದ್ಧ ಹೂಡಿ ಪ್ರ.ಶ.ಪೂ. ೨೪೨ರಲ್ಲಿ ಅದನ್ನು ತನ್ನ ಪ್ರಾಂತವನ್ನಾಗಿಸಿಕೊಂಡಿತು. ಪ್ರ.ಶ.ಪೂ. ೨೩೭ರಲ್ಲಿ ಸಾರ್ಡಿನಿಯಾ ಮತ್ತು ಕಾರ್ಸಿಕ ರೋಮಿಗೆ ಅಧೀನವಾದುವು. ಸಿಸಿಲಿಯಲ್ಲಿ ಗ್ರೀಕ್ ನಾಟಕಪ್ರದರ್ಶನವನ್ನು ಅವಲೋಕಿಸಿದ ರೋಮನರಿಗೆ ಉತ್ಕೃಷ್ಟ ಕಲೆಯ ಪರಿಚಯ ಲಭಿಸಿತಾಗಿ ರೋಮಿನಲ್ಲೂ ಅಂಥ ಕಲೋತ್ಸವ ನಡೆಸಬೇಕೆಂಬ ಹುರುಡು ಉಂಟಾಯಿತು. ಪ್ರ.ಶ.ಪೂ ೨೪೦ರಲ್ಲಿ ಅಂಡ್ರಾನಿಕಸ್ ಧೈರ್ಯದಿಂದ ಒಂದು ಪ್ರಯೋಗ ಮಾಡಿದ. ಸಾರ್ವಜನಿಕ ಉತ್ಸವದ ಅಂಗವಾಗಿ ಗೀತಾತ್ಮಕ ಕಲಸುಮೇಲಸಿನ ಮೇಳದ ಬದಲು ಗ್ರೀಕಿನಿಂದ ಅನುವಾದ ಮಾಡಿದ ಒಂದು ಅಧಿಕೃತ ನಾಟಕವನ್ನು ಆಡಿಸಿದ. ಅಲ್ಲಿಂದ ಮುಂದೆ ನಾಟಕವೆಂದರೆ ಜನರಲ್ಲಿ ಅಪೇಕ್ಷೆ ಬೆಳೆಯಿತು. ಗ್ರೀಕ್ ಸಾಹಿತ್ಯ ಆಶ್ರಯಿಸಿದರೇ ಲ್ಯಾಟಿನ್ ಸಾಹಿತ್ಯಕ್ಕೆ ಶ್ರೇಯಸ್ಸು ಎಂಬುದನ್ನು ಆಂಡ್ರಾನಿಕಸ್ ಸಾರಿದ; ಹಾಗೂ ಅನುಸರಿಸುವ ವಿಧಾನವನ್ನು ತೋರಿಸಿಕೊಟ್ಟ; ಹೋಮರನ ಆಡಿಸ್ಸಿಯನ್ನು (ಒಡಿಸ್ಸಿ) ಲ್ಯಾಟಿನ್ನಿಗೆ ತರ್ಜುಮೆ ಮಾಡಿದ. ಅನಂತರ ಪ್ರ.ಶ.ಪೂ ೨೩೫ರಲ್ಲಿ ಆಗಮಿಸಿದ ನೀವಿಯಸ್ (ಪ್ರ.ಶ.ಪೂ. ೨೭೦–೨೦೧) ಅದೇ ಕೆಲಸವನ್ನು ಮುಂದುವರಿಸಿದ. ವಿನೋದ ನಾಟಕ, ಗಂಭೀರ ನಾಟಕ ಎರಡನ್ನೂ ಗ್ರೀಕಿನಿಂದ ಎರವಲು ತೆಗೆದುಕೊಂಡು ಲ್ಯಾಟಿನ್ನಿಗೆ ಹೊಂದಿಸಿಕೊಟ್ಟ. ಆದರೆ ಇವನ ಜಾಯಮಾನ, ನೋಟಕರ ಪ್ರಬಲೇಚ್ಛೆ, ಭಾಷೆಯ ಸ್ಥಿತಿಗತಿ ಮೂರೂ ಒಟ್ಟಾಗಿ ಇವನನ್ನು ವಿನೋದ ನಾಟಕದ ಕಡೆಗೇ ಎಳೆದುವು. ವಿನೋದ ನಾಟಕದ ಮೂಲಕ, ಗ್ರೀಕರ ಹಳೆಯ ವಿನೋದ ನಾಟಕಗಳಂತೆ, ರಾಜಕೀಯ ವಿಂಡಬನೆಯನ್ನು ಸಾಧಿಸುವ ಹಂಬಲ ನೀವಿಯಸ್ಸನಿಗಿತ್ತು. ನೀವಿಯಸ್ ದೊಡ್ಡ ಕವಿ. ೨೨೫ರಲ್ಲಿ ಮಾರ್ಸೆಲಸ್ಸನ ವಿಜಯವನ್ನು ಕುರಿತು ನಾಟಕವೊಂದರಲ್ಲಿ ಪ್ರಶಂಸೆಗೈದ. ಅಲ್ಲದೆ ರೋಮ್ಯುಲಸ್ ರೀಮಸ್ಸರ ಕಥೆಯನ್ನು ವಿಷಯವನ್ನಾಗಿಸಿ ಕೊಂಡು ನಾಟಕ ಕಟ್ಟಿ, ದೇಶೀಯ ವಿಚಾರಗಳನ್ನು ಮಾತ್ರ ಪ್ರತಿಪಾದಿಸುವ ಫ್ಯಾಬ್ಯುಲ ಪ್ರಿಟೆಕಸ್ಟಾ ಎಂಬ ರೂಪಕ ಪ್ರಭೇದಕ್ಕೆ ಮೊಟ್ಟಮೊದಲಿಗನಾದ. ಒಂದನೆಯ ಪ್ಯೂನಿಕ್ ಯುದ್ಧ ಕುರಿತು ಇವನು ಬರೆದ ಕಥನಕಾವ್ಯ ಮುಂದೆ ವರ್ಜಿಲನ ಭವ್ಯಕಾವ್ಯಕ್ಕೆ ಆಕರವಾಯ್ತು. ರೋಮನ್

ಸಾಹಿತ್ಯದ ಜನಕನೆಂದು ನೀವಿಯಸ್ಸನನ್ನು ಪರಿಗಣಿಸಲಾಗುತ್ತದೆ. ಮುಂದೆ ಬಂದ ಕವಿಗಳು ಲೇಖಕರು ಇವನನ್ನು ಆದರ್ಶವಾಗಿಟ್ಟುಕೊಂಡರು. ಕ್ವಿಂಟಸ್ ಎನ್ನಿಯಸ್, ಕೇಟೊ–ಇವರಿಬ್ಬರೂ ರೋಮನ್ ಸಾಹಿತ್ಯವನ್ನು ಎತ್ತರಕ್ಕೆ ಕೊಂಡೊಯ್ದರು. ಕ್ವಿಂಟಸ್ ಎನ್ನಿಯಸ್ (ಪ್ರ.ಶ.ಪೂ ೨೩೯–೧೬೯) ವಿಭಾವನಾಶೀಲ, ರಾಗಾನ್ವಿತ, ಧ್ಯೇಯಾಸಕ್ತ ಕವಿಯಾಗಿದ್ದ. ರೋಮನ್ ಗಾಂಭೀರ್ಯಕ್ಕೆ ಗ್ರೀಕ್ ಗಾಂಭೀರ್ಯವನ್ನು ಸಮಂಜಸವಾಗಿ ಕೂಡಿಸ ಬೇಕೆಂಬುದೇ ಇವನ ಆಶಯವಾಗಿತ್ತು. ಜ್ಞಾನ ತಿಳಿವಳಿಕೆ, ಸೂಕ್ಷ್ಮ ವಿಚಕ್ಷಣೆ ಎಲ್ಲದರಲ್ಲೂ ಶ್ರೇಷ್ಠನಾಗಿದ್ದ ಈತ ಟ್ರ್ಯಾಜಿಡಿಯನ್ನು ಪುನರುತ್ಥಾನಗೊಳಿಸಿದ. ತನ್ಮೂಲಕ ಎತ್ತರದ ಮನೋಭಾವಕ್ಕೂ ಶೀಲಶ್ರದ್ಧೆಗೂ ಪ್ರೇರೇಪಕನಾದ. ಬಿಡುವಾದಾಗ ಹಗುರ ಕಾವ್ಯ ಹಿಡಿಯಲೋಸುಗ ನಾನಾ ಛಂದಸ್ಸಿನಲ್ಲೂ ಸುಲಭ ಮಾತಿನಲ್ಲೂ ಅನೇಕ ಸಣ್ಣಪುಟ್ಟ ಸ್ಯಾಟ್ಯುರಗಳನ್ನು ಬಾಳಿನ ಅನೇಕ ವ್ಯವಹಾರಗಳ ಮೆಲೆ ರಚಿಸಿದ; ಜನರ ಜ್ಞಾನಾರ್ಜನೆಗೆ ಸಹಾಯಕನಾದ. ೧೮ ಸಂಪುಟಗಳ ಕಥನ ಕಾವ್ಯ 'ಆನಲೆಸ್' ಈತನ ಮೇರುಕೃತಿ. ರೋಮಿನ ಚರಿತ್ರೆಯನ್ನು ವಾಸ್ತವಿಕ ವಿವರಗಳಿಂದಲೂ ಆದರ್ಶದ ಆಕಾಂಕ್ಷೆಯಿಂದಲೂ ಪ್ರಭಾವಯುಕ್ತವಾಗಿ ಇದರಲ್ಲಿ ವರ್ಣಿಸಿದ್ದಾನೆ. ಇವನು ಬಳಸಿದ ಪದ್ಯಪಂಕ್ತಿ (ಡ್ಯಾಕ್ಟಿಲಿಕ್ ಹೆಕ್ಸಾಮೀಟರ್) ಮುಂದೆ ರೂಢಿಸಲ್ಪಟ್ಟು ಲ್ಯಾಟಿನ್ನಿನ ಮುಖ್ಯ ಪದ್ಯಪಂಕ್ತಿಯಾಯ್ತು. ವ್ಯಾಕರಣದ ಮೇಲೂ ಛಂದಶ್ಯಾಸ್ತ್ರದ ಮೇಲೂ ಈತ ಕೈಪಿಡಿ ಬರೆದು ಮುಂದಿನ ಪೀಳಿಗೆಗೆ ಮಹದುಪಕಾರಮಾಡಿದ. ನೀವಿಯಸ್ ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ಪ್ಲಾಟಸ್ (ಪ್ರ.ಶ.ಪೂ ೨೫೪–೧೮೪) ವಿನೋದಕರ ನಾಟಕಗಳನ್ನು ರಚಿಸಿದ. ಇವನ ಇಪ್ಪತ್ತು ಕಾಮಿಡಿಗಳು ಲಭ್ಯವಾಗಿದ್ದು ಇವು ಆರಂಭದ ಲ್ಯಾಟಿನ್ ಕಾಮಿಡಿಯನ್ನು ಕುರಿತು ಅರ್ಥಮಾಡಿಕೊಳ್ಳಲು ಸಹಾಯಕ ವಾಗಿವೆ. ಗ್ರೀಕ್ ಕಾಮಿಡಿಗಳನ್ನು ಅನುಸರಿಸಿ ಇವು ರಚಿತವಾಗಿದ್ದರೂ ಇವುಗಳಲ್ಲಿ ಇಟಾಲಿಯನ್ ಅಭಿರುಚಿಯನ್ನು ಗುರುತಿಸಬಹುದಾಗಿದೆ. ಪೋರ್ಸಿಯಸ್ ಕೇಟೊ (ಪ್ರ.ಶ.ಪೂ ೨೩೪–೧೪೯) ರೋಮನ್ ಸಾಹಿತ್ಯದ ನಿರ್ಮಾಪಕರಲ್ಲಿ ಮುಖ್ಯನಾದವ. ನೀವಿಯಸ್, ಪ್ಲಾಟಸರಿಗಿಂತಲೂ ಹೆಚ್ಚಾಗಿ ಈತ ಸ್ವದೇಶೀಯತೆಯ ಪ್ರೇಮಿ. ಲ್ಯಾಟಿಯಮ್ಮಿನ ಸ್ವಂತ ಸ್ವಭಾವ ಗುಣಶೀಲಗಳನ್ನು ಎತ್ತಿಹಿಡಿಯು ವುದೇ ಇವನ ಉದ್ದೇಶ ವಾಗಿತ್ತು. ತಾನು ಸಾಮಾನ್ಯ ಜನರ ಪ್ರತಿನಿಧಿ ಎಂದು ತಿಳಿದುಕೊಂಡಿದ್ದ ಇವನಿಗೆ ಸಾಹಿತ್ಯ ಕಲಾಬದ್ಧವಾಗಿರಬೇಕು, ರಸಾತ್ಮಕವಾಗಿರಬೇಕು, ಆನಂದದಾಯಕ ವಾಗಿರಬೇಕು ಎಂಬ ಅಭಿಪ್ರಾಯ ಹಿಡಿಸಲಿಲ್ಲ. ಸಾಹಿತ್ಯ ರಾಜಕೀಯದ ಅಡಿಯಾಳಾಗಿರತಕ್ಕದ್ದು, ಬಾಳಿಗೆ ಉಪಯುಕ್ತವಾಗಿರ ತಕ್ಕದ್ದು ಎಂಬ ಪ್ರಮಾಣವನ್ನು ಇಟ್ಟುಕೊಂಡು ಈತ ಗದ್ಯ ಮಾರ್ಗವನ್ನೇ ಹಿಂಬಾಲಿಸಿದ. ಭಾಷಣಗಳನ್ನು ಪ್ರಕಟಿಸುವ ಪದ್ಧತಿಗೆ ಮೇಲ್ಪಂಕ್ತಿ ಹಾಕಿದ. ಸಿಸಿರೊನ ಕಾಲದಲ್ಲೂ ಇವನ ೧೫೦ ಭಾಷಣಗಳು ಪ್ರಚಾರದಲ್ಲಿದ್ದುವಂತೆ. ಚುರುಕು ಬುದ್ಧಿ, ಮೊನಚು, ಸಂಕ್ಷಿಪ್ತತೆ ಇವನ ಲೇಖನದ

ಲಕ್ಷಣ; ಮುಪ್ಪಿನಲ್ಲಿ ಇವನು ಬರೆದ "ಮೂಲಗಳು"ಎಂಬ ಕೃತಿ ಚರಿತ್ರೆಯ ವಿಷಯವಾಗಿ ರೋಮನರಿಗಿದ್ದ ಖುದ್ದಾಗಿ ಪ್ರಕಾಶ ಪಡಿಸುತ್ತದೆ. ಘಟನೆ ಘಟನಾವಳಿಗಳು ಇರುವುದು ಕಾರಣಗಳ ಪ್ರಕಟನೆಗಲ್ಲ, ಮಾನವ ಸ್ವಭಾವದ ತೋರ್ಕೆಗಲ್ಲ, ರಾಷ್ಟ್ರದ ಮುನ್ನಡೆ ಪ್ರಗತಿಗಳ ಸಲುವಾಗಿ ಎಂದು ಈತ ಅಭಿಪ್ರಾಯಪಟ್ಟ. ಮುಂದೆ ಬಂದ ಲಿವಿಟ್ಯಾಸಿಟಸ್ಸರ ಅಭಿಪ್ರಾಯವೂ ಇದೇ ಆಗಿದೆ. ರೋಮನ್ನರ ವೈಭವದ ಆಖ್ಯಾನದಲ್ಲಿ ಇಟಲಿಯ ಸಮಸ್ತ ಬುಡಕಟ್ಟುಗಳಿಗೂ ಸ್ಥಾನ ಮರ್ಯಾದೆ ಇರಬೇಕೆಂಬುದು ಇವನ ಸೂತ್ರವಾಗಿತ್ತು. ಇಲ್ಲದಿದ್ದರೆ ಆ ವೈಭವ ಅಪೂರ್ಣವಾದುದು ಎಂಬುದು ಇವನ ಅಭಿಪ್ರಾಯವಾಗಿತ್ತು. ಇದೇ ಅಭಿಮತದಿಂದ ವರ್ಜಿಲ್ ತನ್ನ ಕಾವ್ಯವನ್ನು ಭವ್ಯಗೊಳಿಸಿದ ಇಟಲಿಯ ಗ್ರಾಮಾಂತರ ಜೀವನದ ಬಗೆಗೆ ಇಬ್ಬರಿಗೂ ಕುತೂಹಲವಿತ್ತು. ಆ ಜೀವನದ ಸರಳ ಸುಂದರ ಮೋಹಕತೆ ವರ್ಜಿಲನ ಜಾರ್ಜಿಕ್ಸ್‌ನಲ್ಲಿ ಮೂಡಿಬಂದಿದ್ದರೆ ಕೇಟೋವಿನ ಡರಿರಸ್ಟಿಕದಲ್ಲಿ ಅದರ ವ್ಯಾವಹಾರಿಕತೆ, ಕರ್ಮತ್ವ, ಗದ್ಯತನ ಕಾಣಬರುತ್ತದೆ. ಅನಂತರ ಸಿಸಿಲಿಯಸ್ ಸ್ಟ್ಯಾಟಿಯಸ್, ಪಾಕೂವಿಯಸ್ ಆಕ್ಸಿಯಸ್, ಗಾಲಸ್ ಮೊದಲಾದವರಿಂದ ಕಾವ್ಯ ನಿರ್ಮಾಣಕಾರ್ಯ ಮುಂದುವರಿಯಿತು. ಈ ಕಾಲದಲ್ಲಿ ಪ್ರಖ್ಯಾತಿ ಪಡೆದ ಇಬ್ಬರು ಲೇಖಕರೆಂದರೆ ಟೆರೆನ್ಸ್ ಮತ್ತು ಲ್ಯೂಸಿಲಿಯಟೆರೆನ್ಸ್ (ಪ್ರ.ಶ.ಪೂ. ೧೯೫–೧೫೯?) ವಿನೋದ ನಾಟಕವನ್ನು ಭಾಷೆ ಶೈಲಿಗಳ ವಿಚಾರದಲ್ಲಿ ಬಹಳ ಮೇಲಕ್ಕೆ ಎತ್ತಿದ; ಆದರೆ ಭಾವ ಭಾವನೆಗಳ ವಿಚಾರದಲ್ಲಿ ದಿಟವಾಗಿ ಕೆಳಕ್ಕಿಳಿಸಿದ. ಸಿಪಿಯೋ ಕೇಂದ್ರವಾಗಿದ್ದ ಸಾಂಸ್ಕೃತಿಕ ಗುಂಪೊಂದು ಆಗ ಆಕರ್ಷಕವಾಗಿತ್ತು; ಟೆರೆನ್ಸ್ ಆ ಗುಂಪಿಗೆ ಸೇರಿದವನಾಗಿದ್ದ. ಹಿಂದಣ ತೀಕ್ಷ್ಣ ದೇಶೀಯತೆಯೂ ಸ್ವಲ್ಪ ಒಡ್ಡೊಡ್ಡಾದ ನೇರತನವೂ ಬದಿಗೆ ತಳ್ಳಲ್ಪಟ್ಟು ನಯ ವಿನಯ ಸಂಸ್ಕೃತಿಯಪೇಕ್ಷೆ ಘನ ಧ್ಯೇಯಗಳಿಂದ ಉಂಟಾದ ಸಭ್ಯತೆ ಸಜ್ಜನಿಕೆಯ ಪ್ರಧಾನ ಲಾಂಛನವೆಂದೆನಿಸಿತು. ಲ್ಯಾಟಿನ್ನನ್ನು ಶುದ್ಧವಾಗಿ ಇಡುವ ಕೆಲಸ ಆತ್ಮಗೌರವೊಂದೇ ಅಲ್ಲದೆ ದೇಶಪ್ರೇಮವೂ ಆಗಿ ತೋರಿತು. ಸಾಹಿತ್ಯ ಜನತೆಯ ಸಂಪರ್ಕದಿಂದ ದೂರ ದೂರ ಸರಿಯುತ್ತ ಹೋಯ್ತು. ಸೆನೆಟ್ ಮಂಡಲಿಯ ಪ್ರಾಧಾನ್ಯವೂ ಕುಲೀನ ಶ್ರೀಮಂತರ ಅಹಂಕಾರವೂ ಜನಸಾಮಾನ್ಯರ ಕಷ್ಟ ನಿಷ್ಠೂರವೂ ಹೆಚ್ಚುತ್ತ ಬಂದು ಪ್ರತಿಭಟನೆಯೇ ಅಲ್ಲದೆ ದಂಗೆಯೇಳುವ ಚಿತ್ತ ಹಲವರಲ್ಲಿ ಮಿಡುಕಾಡಲಾರಂಭಿಸಿತು. ಕಕ್ಷಿ ಪ್ರತಿಕಕ್ಷಿಗಳ ಹೋರಾಟದಿಂದ ಪರಿಸ್ಥಿತಿ ರಾಡಿಯಾಗಿ ರಾದ್ಧಾಂತಗೊಂಡಿತು. ಹಿಂದೆಯೂ ಆಗಾಗ ತಲೆದೋರುತ್ತಿದ್ದ ವಿಡಂಬನೆಗೆ ಈಗ ಹೇರಳ ಸಾಮಗ್ರಿ ದೊರಕಿತು; ಅವಕಾಶ ಕಲ್ಪಿತವಾಯ್ತು. ಇಂಥ ಹೊತ್ತಿನಲ್ಲಿ ಲ್ಯೂಸಿಲಿಯಸ್ (ಪ್ರ.ಶ.ಪೂ ೧೮೦–೧೦೨) ಉದಯಿಸಿದ. ಸರ್ಮನ್ಸ್ ಎಂಬ ತನ್ನ ಅನಿರ್ಬಂಧ ಪ್ರವಚನಗಳಲ್ಲಿ ತನ್ನ ಮತ್ತು ತನ್ನ ಮಿತ್ರರ ಬದುಕಿನ ಘಟನೆಗಳನ್ನೂ ಪ್ರಯಾಣ ಔತಣ ಸಾಹಿತ್ಯ ಚರ್ಚೆ ಮುಂತಾದವನ್ನೂ ಆಧಾರ ವಾಗಿರಿಸಿಕೊಂಡು, ಲೇಖಕರ ಮತ್ತು ದೊಡ್ಡ ವ್ಯಕ್ತಿಗಳ

ಲೋಪದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ವಿಡಂಬನವೆಂಬ ಸಾಹಿತ್ಯ ಪ್ರಕಾರವನ್ನು ನಿರ್ಮಿಸಿದ. ವಿಡಂಬನ ಸಾಹಿತ್ಯದ ಜನಕನೆಂದು ಖ್ಯಾತಿಗಳಿಸಿದ ಇವನು ಮೂವತ್ತು ಪುಸ್ತಕಗಳನ್ನು ರಚಿಸಿದ್ದಾನೆ.

ಪ್ರ.ಶ.ಪೂ ೧೬೭ರಲ್ಲಿ ೧೦೦೦ ಗ್ರೀಕ್ ಪ್ರಜೆಗಳನ್ನು ಇಟಲಿಗೆ ರವಾನಿಸಲಾಯ್ತು. ಅವರಲ್ಲಿ ಶ್ರೇಷ್ಠ ಚರಿತ್ರಕಾರ ಪಾಲಿಬಿಯಸ್ಸನೂ ಒಬ್ಬ. ಪ್ರ.ಶ.ಪೂ ೧೫೫ರಲ್ಲಿ ಅಥೆನ್ಸಿನಿಂದ ಒಂದು ನಿಯೋಗ ರೋಮಿಗೆ ಬಂತು; ಅದರ ಮುಖಂಡರಾಗಿದ್ದವರು ದಾರ್ಶನಿಕ ರಾದ ಕಾರ್ಮಿಯಾಡಿಸ್, ಡಯೊಜಿನೀಸ್ ಮತ್ತು ಕ್ರಿಟೋಲಾಸ್. ಇವರ ಮೂಲಕ ಗ್ರೀಸಿನ ನಾನಾ ತತ್ತ್ವಶಾಸ್ತ್ರ ಪಂಥಗಳ ಅಧ್ಯಯನ ರೋಮನರಲ್ಲಿ ಮೊದಲಾಯ್ತು. ಹೀಗೆ ಪ್ರ.ಶ.ಪೂ ೨ನೆಯ ಶತಮಾನದಲ್ಲಿ ರೋಮ್ ಅನೇಕ ರಾಷ್ಟ್ರಗಳ ಯಾಜಮಾನ್ಯವನ್ನುಗಳಿಸಿಕೊಂಡಿತು; ಪ್ರ.ಶ.ಪೂ ೧೩೩ರ ಹೊತ್ತಿಗೆ ಸ್ಪೇನ್ ಅದಕ್ಕೆ ಅಧಿನವಾಯ್ತು. ಪ್ರ.ಶ.ಪೂ ೧೨೦ರಲ್ಲಿ ಗಾಲಿಯಾ ಕೈವಶವಾದಾಗ ರೋಮಿನ ರಾಜ್ಯವಿಸ್ತರಣ ಒಂದು ಮಹಾ ವೈಶಾಲ್ಯದಿಂದ ಶೋಭಿಸಲಾರಂಭಿಸಿತು.

ಆ ಕಾಲದಲ್ಲಿ ವಾಗ್‌ವಿದ್ಯೆಗೆ (ರೆಟೊರಿಕ್ಸ್) ತುಂಬ ಪುರಸ್ಕಾರ ಇದ್ದಿತಾಗಿ ಕೇಟೋವಿನ ತರುವಾಯ ಬಂದ ಸಿಪಿಯೊ, ಲೀಲಿಯಸ್, ಗ್ರಾಕೈಸೋದರರು, ಕ್ರಾಸಸ್, ಆಂಟೋನಿಯಸ್ ಮೊದಲಾದವರು ಹೆಸರು ಸಂಪಾದಿಸಿದರು.

ಎರಡನೆಯ ಅವಧಿ (ಪ್ರ.ಶ.ಪೂ ಸು ೮೦–೩೦): ಗಣರಾಜ್ಯದ ಕಡೆಯ ಭಾಗವೂ ರೋಮನ್ ಸಾಹಿತ್ಯದ ಸುವರ್ಣಯುಗದ ಮೊದಲರ್ಧವೂ ಒಂದೇ ಆಗಿದೆ. ಇದಕ್ಕೆ ಸಿಸಿರೊ ಕಾಲ ಎಂಬ ಪರ್ಯಾಯನಾಮವೂ ಉಂಟು. ಗದ್ಯದ ಪರಿಶುದ್ಧ ಪರಮೋನ್ನತಿ, ಪದ್ಯದ ಹೊಸತನ ಎರಡೂ ಈ ಕಾಲದ ಮುಖ್ಯಸಾಧನೆ. ಸಿಸಿರೊ, ಸೀಸರ್, ಸ್ಯಾಲಸ್ಟ್, ಲ್ಯುಕ್ರೀಷಿಯಸ್ ಮತ್ತು ಕ್ಯಾಟಲಸ್–ಈ ಐವರು ಲ್ಯಾಟಿನ್ ಕ್ಲ್ಯಾಸಿಕಲ್ ಸಾಹಿತ್ಯದ ಪಂಚರತ್ನಗಳೆಂದು ಪ್ರಸಿದ್ಧರಾಗಿದ್ದಾರೆ. ಇತರ ಗದ್ಯಲೇಖಕರಾದ ವ್ಯಾರೊ, ಕಾರ್ನೀಲಿಯಸ್, ನೇಪಾಸ್ ಮೊದಲಾದವರ ಬರೆಹವು ಗಮರ್ನಾಹ ವಾಗಿದೆ. ಈ ಕಾಲದಲ್ಲಿ ವಿದ್ಯಾವಂತ ಓದುಗರ ಸಂಖ್ಯೆ ಬೆಳೆಯುತ್ತಾ ಬಂತು. ಆದ್ದರಿಂದ ಭಾಷಣಗಳು ಕೇಳುಗರಿಗೋಸ್ಕರವೇ ಅಲ್ಲದೆ ಓದಗರಿಗೋಸ್ಕರವೂ ರಚನೆಗೊಂಡುವು.

ಗದ್ಯಲೇಖಕರಲ್ಲಿ ಸಿಸಿರೊನ (ಪ್ರ.ಶ.ಪೂ ೧೦೬–೪೩) ಸ್ಥಾನ ಅದ್ವಿತೀಯವಾದದ್ದು. ರೋಮಿನ ನ್ಯಾಯಾಲಯಗಳು ಆಸ್ತಿಪಾಸ್ತಿ ಮೋಸ ದರೋಡೆ ಇತ್ಯಾದಿ ತಕ್ಸೀರುಗಳನಲ್ಲದೆ ಪ್ರಾಂತಗಳ ಯೋಗಕ್ಷೇಮ ರಾಷ್ಟ್ರದ ಗೌರವ ಮತ್ತು ರಕ್ಷಣೆ ಇತ್ಯಾದಿ ಭಾರಿ ಸಮಸ್ಯೆಗಳನ್ನು ವಿಚಾರಿಸಿಕೊಳ್ಳ ಬೇಕಾಗಿತ್ತು. ವಾದ ವಿವಾದ ಮಾಡುವವರು ದೇಶಭಕ್ತರಾಗಿ ವ್ಯವಹಾರ ಬಲ್ಲವರಾಗಿ ಭೂತದಯೆಯಿಂದ ಕೂಡಿದವರಾಗಿ ಪಾಂಡಿತ್ಯವುಳ್ಳವರೂ ತತ್ತ್ವಜ್ಞರೂ ಆಗಿರಬೇಕಾಗಿತ್ತು. ಆ ಗುಣಗಳಲ್ಲಿ ಸಿಸಿರೊವನ್ನು ಮೀರಿಸ ಬಲ್ಲವರು ಯಾರೂ ಇರಲಿಲ್ಲ. ನೀತಿಧರ್ಮ ಇವನಿಗೆ

ಬಲುಮುಖ್ಯವಾದ ವಿಷಯ. ದುಷ್ಟರ ಖಂಡನದಲ್ಲೂ ಶಿಷ್ಟರ ಮಂಡನದಲ್ಲೂ ಇವನು ನಿಸ್ಸೀಮ. ಕವಿಯ ವಿಭಾವನಾಶಕ್ತಿ ನಾಟಕಕಾರನ ವ್ಯಕ್ತಿಕಲ್ಪನೆ ಭಾಷಾ ಸಮೃದ್ಧಿ ಎಲ್ಲದರಲ್ಲೂ ಇವನು ಅತ್ಯಂತ ಸುಪುಷ್ಟ. ಇವನ ಭಾಷಣಗಳು ರೂಪಿಸಿ ನಿಲ್ಲಿಸಿರುವ ವೆರ್‍ರೀಸ್, ಕ್ಯಾಟಿಲೀನ್ ಆಂಟೊನಿ ಎಲ್ಲರೂ ಪ್ರಾಚೀನ ರೋಮಿನ ಮಾದರಿ ಮಾನವರು, ಚಿರಂಜೀವಿಗಳು. ಲ್ಯಾಟಿನ್ ಶೈಲಿಗೆ ಇವನೇ ಸ್ವಾಮಿ. ಸಿಸಿರೊವಿನ ಬರೆಹ ಲ್ಯಾಟಿನ್ ಅಲ್ಲ; ರೋಮನ್ ಎಂಬ ಹೊಗಳಿಕೆಗೆ ಈತ ಪಾತ್ರನಾದ. ತತ್ತ್ವಪ್ರತಿಪಾದನೆಯಲ್ಲೂ ಇವನು ನಿಪುಣ; ವಿಮರ್ಶೆಯಲ್ಲೂ ದೊಡ್ಡವ. ಇವನ ಕುಶಲಪತ್ರಗಳು ಸಹಜ ಪ್ರಾಮಾಣಿಕ ಸಮಂಜಸ ಅಭಿವ್ಯಕ್ತಿಯಿಂದ ಉತ್ತಮ ಸಾಹಿತ್ಯವಾಗಿವೆ.

ಸಿಸಿರೊವಿನೊಡನೆ ಪೈಪೋಟಿ ಮಾಡುತ್ತಿದ್ದ ಅನೇಕ ವಾಗ್ಮಿಗಳಲ್ಲಿ ಹಾರ್ಟೆನ್ಸಿಯಸ್ ಮತ್ತು ಜೂಲಿಯಸ್ ಸೀಸರ್ ಮುಖ್ಯಸ್ಥರು. ಹಾರ್ಟೆನ್ಸಿಯಸ್ ಸಾಹಿತ್ಯದ ಹವ್ಯಾಸಿಯಾಗಿದ್ದ. ಖುಷಿಗಾಗಿ ಇವನ ಬರೆವಣಿಗೆ. ಸೀಸರ್ (ಪ್ರ.ಶ.ಪೂ. ೧೦೦–೪೪) ಋಜು ಮನುಷ್ಯ, ಋಜು ಲೇಖಕ. ವ್ಯಾಖ್ಯಾನಗಳು ಎಂಬುದರಲ್ಲಿ ವಾಗಲಂಕಾರಗಳನ್ನು ಪೂರ್ತಿ ಪರಿತ್ಯಜಿಸಿ, ನೇರವೂ ಸ್ಪಷ್ಟವೂ ಆದ ಕಥನಶೈಲಿಯನ್ನು ರೂಢಿಗೆ ತಂದ. ಅನವಶ್ಯಕವಾದ ಒಂದು ಶಬ್ದವೂ ಇವನಲ್ಲಿ ಇಲ್ಲ. ರಾಗಾತಿರೇಕ ಕ್ಕಾಗಲಿ ವರ್ಣನಾವೈಖರಿಗಾಗಲಿ ಎಡೆಗೊಡದಿದ್ದರೂ ಸರಳ ವಾಕ್ಯಸರಣಿ ಯಿಂದ ಓದುಗರ ಮನವೊಪ್ಪಿಸುತ್ತಾನೆ. ಸೀಸರನ ರೀತಿಗೆ ವಿರುದ್ಧವಾದ ಸಾಲಂಕೃತ ರೀತಿ ಸ್ಯಾಲಸ್ಟ್ (ಪ್ರ.ಶ.ಪೂ ೮೬–೩೪) ಎಂಬ ಚರಿತ್ರಕಾರನದು. ಚರಿತ್ರೆಯನ್ನು ಕಲಾತ್ಮಕವಾಗಿ ಮಾಡಿದವರಲ್ಲಿ ಇವನು ಮೊದಲನೆಯಾತ; ಆದ್ದರಿಂದ ಇವನ ವರದಿಯೆಲ್ಲವೂ ನಿಷ್ಪಕ್ಷಪಾತ ಎನ್ನಲಾಗುವುದಿಲ್ಲ. ಹೇಳಿಕೆ ಸತ್ಯಾಂಶಕ್ಕಿಂತ ಹೇಳುವ ಬಗೆಯ ಸೊಗಸು ಇವನಿಗೆ ಪ್ರಿಯವಾಗಿತ್ತು. ಅರ್ಥಗರ್ಭಿತವೂ ಸಾರೋಕ್ತಿಪೂರ್ಣವೂ ಪ್ರಾಚೀನ ಪ್ರಯೋಗ ನಿಬಿಡವೂ ಆದದ್ದು ಇವನ ಶೈಲಿ ಆದರೂ ಇವನು ಚಿತ್ರಿಸಿರುವ ವ್ಯಕ್ತಿಗಳು ಮನನಯೋಗ್ಯ.

ರೋಮನರ ಮನಸ್ಸು ಸದಾ ಕಾಳಗ, ರಾಜಕೀಯ ಹೋರಾಟಗಳ ಕಡೆಗೆ ಹೆಚ್ಚು ವಾಲಿದ್ದಿತಾಗಿ ಗದ್ಯಕಾವ್ಯ ಅವರಿಗೆ ಅತ್ಯಗತ್ಯವಾಗಿತ್ತು. ಆದರೂ ಪದ್ಯಕಾವ್ಯಕ್ಕೆ ಮಿಸಲಾದವರು ಇರಲಿಲ್ಲವೆನ್ನಲಾಗದು. ಲ್ಯುಕ್ರೀಷಿಯಸ್ (ಪ್ರ.ಶ.ಪೂ ೯೪–೫೫?) ಸಾರ್ವಜನಿಕ ವ್ಯಾಪಾರಗಳಿಂದ ಬಾಹಿರನಾಗಿ ಅಂತರ್ಮುಖಿಯಾಗಿ ಗಾಢ ವಿಷಯಗಳ ಧ್ಯಾನ ಮನನ ಚಿಂತನದಲ್ಲಿ ಮಗ್ನನಾಗಿದ್ದ; ಪ್ರಕೃತಿಯನ್ನು ನೋಡಿ ಅನುಭವಿಸಿ ಅವುಗಳ ಹಿಂದಿರುವ ನಿಯಮಗಳನ್ನು ವಿಚಾರಿಸಿ ಅರಿತುಕೊಳ್ಳುವುದೂ ಮನುಷ್ಯ ಜೀವನದ ಪ್ರಶ್ನೆಗಳನ್ನು ಕುರಿತು ವಿಭಾವನಾಪೂರ್ವಕ ಲೋಚಿಸುವುದೂ ಇವನ ಕೆಲಸವಾಗಿತ್ತು. ಇವನಲ್ಲಿ ಗ್ರೀಕ್ ದರ್ಶನ ವಿಜ್ಞಾನಗಳ ಪರಿಚಯ ಯಥೇಚ್ಛವಾಗಿತ್ತು. ಗ್ರೀಕ್ ಗ್ರಂಥದ ಮಾದರಿಯಲ್ಲೇ "ದ್ರವ್ಯಗಳ ಲಕ್ಷಣ" ಎಂಬ

ತನ್ನ ಮೇರುಕೃತಿಯನ್ನು ವಿರಚನೆ ಮಾಡಿದ. ಅನೇಕ ವಿಷಯ ಗ್ರೀಕರಿಂದ ಎರವಲು ತಂದದ್ದಾದರೂ ಅವುಗಳನ್ನು ಮಾನವೀಯ ವಾಗಿಯೂ ಕಾವ್ಯಮಯವಾಗಿಯೂ ಪರಿವರ್ತನಗೊಳಿಸಿದ್ದು ಇವನ ಹೆಗ್ಗಳಿಕೆ. ಭಾಷೆಯ ಸೌಂದರ್ಯವೇನೆಂಬುದನ್ನು ಹೋಮರ್, ಯೂರಿಪಿಡೀಸರಿಂದ ಇವನು ಕಲಿತಿದ್ದರೂ ಭಾಷೆಯ ಶಕ್ತಿ ಸಾಮರ್ಥ್ಯದ ಕಡೆಗೇ ಇವನ ಮನಸ್ಸು ಸರಿಯುತ್ತಿತ್ತು. ಅರ್ಥಗರ್ಭಿತವಾದ ಅಂಥ ಪ್ರೌಢಕಾವ್ಯ ಪ್ರಪಂಚದ ಸಾಹಿತ್ಯದಲ್ಲಿಯೇ ಅಪರೂಪವೆನ್ನಬಹುದು. ಇವನ ಶಬ್ದಜಾಲಕ್ಕೆ ಹೊಸಸೃಷ್ಟಿಯ ತೇಜಸ್ಸಿದೆ; ವಾಕ್ಯವೃಂದಕ್ಕೆ ಮೋಹಕ ಲಯಬದ್ಧತೆಯಿದೆ.

ಆ ಕಾಲದ ಯುವ ಕವಿಗಳ ಪಂಗಡದಲ್ಲಿ ಉಳಿದು ಬಂದಿರುವ ಇನ್ನೊಂದು ಹೆಸರು. ವ್ಯಾಲೆರಿಯಸ್ ಕ್ಯಾಟಲಸ್ (ಪ್ರ.ಶ.ಪೂ ೮೪–೫೪). ಪ್ರಚಂಡ ಬಿರುಗಾಳಿಯ ಹಾಗೆ ಇವನು ಸಮಕಾಲೀನ ರೋಮನರ ಮೇಲೆ ಬೀಸಿಬಂದ. ಅಷ್ಟೇನೂ ಗರತಿಯಲ್ಲದ ಕ್ಲೋಡಿಯಾ ಎಂಬ ಸಮಾಜಸುಂದರಿಯ ಮೋಹಕ್ಕೆ ಸಿಕಿಬಿದ್ದು, ಅವಳಿಗೆ ಲೆಸ್ಬಿಯಾ ಎಂಬ ಕಾವ್ಯನಾಮವನ್ನಿಟ್ಟು, ಅತ್ಯಂತ ರಮಣೀಯವಾದ ಪ್ರಣಯಗೀತಗಳನ್ನು ಈತ ಕಟ್ಟಿದ. ಅವುಗಳಿಗೆ ಸಮವಾದ ಕವಿತೆಯನ್ನು ನಾವು ನೋಡಬೇಕಾದ ರೆ ಪ್ರಾಚೀನ ಆಲ್ಕಿಯಸ್ ಸ್ಯಾಫೊ ಬಳಿಗೆ ಅಥವಾ ಅರ್ವಾಚೀನ ಬರ್ನ್ಸನ ಬಳಿಗೆ ಹೋಗಬೇಕು. ಸ್ವವಿಷಯವೇ ಕ್ಯಾಟಲಸ್ಸನ ಪದ್ಯಗಳ ಸಾಮಗ್ರಿ. ತನ್ನ ಸ್ವಂತ ಆಗುಹೋಗುಗಳನ್ನು, ಪ್ರಣಯ ಪ್ರಯಾಣ ಒಲವು ದ್ವೇಷಗಳನ್ನು ಹೊರಗೆಡಹುವುದೇ ಇವನ ಏಕೈಕ ಉದ್ದೇಶ. ನಿಲ್ಲದೆ ಸರಿದೋಡುವ ಕಾಲದ ಆ ಕ್ಷಣದ ನಲಿವು ನೋವುಗಳನ್ನು ಯಥಾವತ್ತಾಗಿಯೂ ಜೀವಂತವಾಗಿಯೂ ರೂಪಿಸುವ ಕಲಾಮರ್ಮ ಇವನಿಗೆ ತಿಳಿದಿತ್ತು. ಈತ ಗ್ರೀಕ್ ಪುರಾಣ ಕಥಾವಳಿಗೆ ನೂತನ ಚೈತನ್ಯ ತುಂಬಿದ; ನಾನಾ ಛಂದೋಜಾತಿಗಳನ್ನು ನಿರ್ಮಿಸಿದ, ಉಜ್ಜಿ ಬೆಳಗಿದ; ಆಡುನುಡಿಗೆ ಅಪೂರ್ವ ಕಾವ್ಯತ್ವವನ್ನು ಹೊಂದಿಸಿದ; ಮೇಲಾಗಿ ವೈಯಕ್ತಿಕ ವಿಡಂಬನೆಗೆ ಮಾರ್ಗದರ್ಶಿಯಾದ. ಸ್ವತಂತ್ರ ಗಣರಾಜ್ಯದ ಕೊನೆಯ ಸ್ವಚ್ಛಂದ ಕವಿಯಾಗಿ ಕ್ಯಾಟಲಸ್ ಖ್ಯಾತನಾಗಿದ್ದಾನೆ.

ಮೂರನೆಯ ಅವಧಿ (ಪ್ರ.ಶ.ಪೂ ೪೩– ಪ್ರ.ಶ.ಪೂ. ೧೭): ಈ ಅವಧಿಗೆ ಅಗಸ್ಟಸ್ ಅವಧಿ ಎಂಬ ನಾಮಾಂಕಿತವೂ ಉಂಟು. ಕ್ಯಾಟಲಿಸ್ ವೃತ್ತದ ಒಬ್ಬ ಬ್ಬರು ಮುಂದಣ ಅವಧಿಯಲ್ಲಿಯೂ ಬದುಕಿದ್ದುದೇನೊ ದಿಟ; ಆದರೆ ರೋಮನ್ ಸಾಹಿತ್ಯದ ಸ್ವರೂಪವೇ ಇಡಿಯಾಗಿ ಬದಲಾಯಿಸಿದು ದರಿಂದ ಹೊಸ ಭಾವ ಭಾವನೆಗಳ ಹೊಸ ಕವಿಗಳು ಬರಬೇಕಾಯ್ತು. ಆಕ್ಟೇವಿಯನ್ ಸೀಸರ್ ಚಕ್ರವರ್ತಿ ಅಗಸ್ಟಸ್ ಆದಂದಿನಿಂದ ರೋಮ್ ಸಾಮ್ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ, ರಾಷ್ಟ್ರೀಯ ವೈಭವ ಬೇರೂರಿ ಬೆಳೆಯಲಾರಂಭಿಸಿದುವು. ಎಲ್ಲರಲ್ಲೂ ಆಶಾಭಾವ ಸಂತೃಪ್ತಿ ಉತ್ಸಾಹ ತುಂಬಿಕೊಂಡವು. ರಾಜಕೀಯದ ಗೊಂದಲ ಕೊನೆಗೊಂಡದ್ದರಿಂದ ಭಾಷಣ ಚರಿತ್ರೆಗಳ ಸಾಹಿತ್ಯೋದ್ಯಮ ಕುಸಿದು ಬಿತ್ತು. ವಿಡಂಬನ ಸಾಹಿತ್ಯ

ವೈಯಕ್ತಿಕವಾಗಿ ಸಂಕುಚಿತವಾಯ್ತು. ರಾಷ್ಟ್ರದ ಚೈತನ್ಯಶಕ್ತಿ ಪದ್ಯಕಾವ್ಯದ ಮೂಲಕ ಪ್ರವಹಿಸಬೇಕಾಯ್ತು. ಆಶ್ರಯದಾತರು ಎಂಬ ಶ್ರೀಮಂತವರ್ಗದಿಂದ ಕವಿಗಳಿಗೆ, ಲೇಖಕರಿಗೆ ಸೌಖ್ಯ ಸವಲತ್ತು ಸಿಕ್ಕುವಂತಾಯ್ತು; ಸಾಹಿತ್ಯವನ್ನೇ ಬದುಕಾಗಿ ಮಾಡಿಕೊಂಡವರ ಸಂಖ್ಯೆ ಬೆಳೆಯುತ್ತ ಬಂತು. ಸ್ವತಃ ಅಗಸ್ಟಸ್ಸನೇ ಸಾಹಿತ್ಯಕ್ಕೆ ಪ್ರಮುಖ ಆಶ್ರಯದಾತ ನಾದ. ಹಾಗಾಗಿ ಸಮಯ ಸನ್ನಿವೇಶ ವಾತಾವರಣಗಳೂ ಲವಲವಿಕೆ ಸೂಸುತ್ತ ಪ್ರೋತ್ಸಾಹಕರವಾದುವು.

ಈ ಕಾಲದಲ್ಲಿ ಬಂದ ಮಹಾಕವಿಗಳಲ್ಲಿ ವರ್ಜಿಲ್ (ಪ್ರ.ಶ.ಪೂ ೭೦–೧೯) ಬಹುಮುಖ್ಯನಾದವ. ಕಾವ್ಯಪ್ರಭೇದ ಸಂವಿಧಾನ ಅಂಗ ಉಪಾಂಗ ನಿಷ್ಕರ್ಷೆ ಭಾವ ಭಾವನೆ ಲಯ ಗತಿ ಪದಪುಂಜ–ಹೀಗೆ ಕಾವ್ಯಕ್ಕೆ ಸಂಬಂಧಿಸಿದ ಹೆಚ್ಚು ಕಡಿಮೆ ಎಲ್ಲಾ ವಿಚಾರದಲ್ಲೂ ಇವನು ಗ್ರೀಕ್ ಮಾದರಿಯನ್ನು ಹೆಜ್ಜೆ ಹೆಜ್ಜೆಗೆ ಅನುಸರಿಸಿದ. ಆದರೂ ಅದರಲ್ಲಿ ಸ್ವಂತಿಕೆ ಇದೆ. ಥಿಯಾಕ್ರಿಟಸ್‌ನನ್ನು ಅನುಸರಿಸಿ ಈತ ಗ್ರಾಮೀಣ ಕವನಗಳು ಎಂಬ ಪದ್ಯಗಳನ್ನು ರಚಿಸಿದ. ಇಟಲಿಯ ಹಳ್ಳಿಗರ ಕೃಷಿ ಸುಖ ಪ್ರೀತಿ ಪ್ರೇಮಗಳನ್ನು ಉತ್ತಮ ಪದ್ಯ ಪಂಕ್ತಿಗಳಲ್ಲಿ ಸ್ತುತಿಸಿದ. ಆಮೇಲೆ ಬರೆದ ಜಾರ್ಜಿಕ್ಸ್ ಎಂಬ ಕಾವ್ಯ ಇವನ ಆತ್ಮಪ್ರತ್ಯಯವೂ ತನ್ನತನವೂ ಎಷ್ಟು ಬೇಗ ಹೇಗೆ ಕುದುರಿದುವೆಂಬುದಕ್ಕೆ ಸಾಕ್ಷಿಯಾಗಿದೆ. ರೈತಬಾಳಿನ ಸಾಮಾನ್ಯ ವಿವರಗಳಿಗೆ ನಿಸರ್ಗದೇವಿಯ ಕಾರ್ಯಾ ಲಾಪವನ್ನು ಹಿನ್ನೆಲೆಯಾಗಿಸಿ, ಪುರಾಣಕಥೆ ಐತಿಹ್ಯಗಳ ಬೆರಕೆಯಿಂದ ಪುಷ್ಟಿ ತಂದುಕೊಟ್ಟು, ಮಾನವೀಯ ಭಾವಗಳ ಪಾವಿತ್ರ್ಯತೆಯನ್ನು ಎರೆದು ಸುರಮ್ಯ ಕಾವ್ಯವನ್ನಾಗಿಸಿದ. ಇನಿಯಡ್ ಈತನ ಮಹಾಕಾವ್ಯ. ಈ ಭವ್ಯಕಾವ್ಯದಲ್ಲಿ ರಾಷ್ಟ್ರ ವೈಭವವನ್ನು ಆದರ್ಶ ಪ್ರಮಾಣಕ್ಕೆ ಏರಿಸಿ, ಇಟಲಿಯ ಮಹೋನ್ನತಿಗೆ ಕನ್ನಡಿ ಹಿಡಿದು ಪ್ರಥಮ ದರ್ಜೆಯ ಕವಿಗಳಲ್ಲಿ ಒಬ್ಬನಾದ; ಹೋಮರನಿಗೆ ಮಾತ್ರ ಎರಡನೆಯವನು ಎನ್ನಿಸಿಕೊಂಡ ಇವನ ನುಡಿಗಟ್ಟು ಪರಿಪೂರ್ಣತೆಯಿಂದ ಕೂಡಿ ಅಸ್ವಾದ್ಯದೃಶವಾಗಿದೆ; ಲ್ಯಾಟಿನ್ ನುಡಿಯ ಸಕಲ ಸೌಂದರ್ಯವೂ ಅದರಲ್ಲಿ ಉಜ್ವಲವಾಗಿ ಕಂಗೊಳಿಸುತ್ತಿದೆ.

ಘನತೆಯಲ್ಲಿ ವರ್ಜಿಲನಿಗಿಂತ ಕಡಿಮೆಯವನಾದರೂ ಅವನಿಗಿಂತ ಹೆಚ್ಚಾಗಿ ವಿದ್ವಜ್ಜನರಿಗೆ ಅಚ್ಚುಮೆಚ್ಚಾದ ಕವಿಯೆಂದರೆ ಹೊರೇಸ್ (ಪ್ರ.ಶ.ಪೂ೬೫–೮). ಆದರ್ಶ ವಾಸ್ತವಿಕತೆ ಎರಡರಲ್ಲೂ ಇವನು ಗಟ್ಟಿಗ. ಆ ಕಾಲದ ರೋಮನರ ಮನಸ್ಸು ವಚನ ಕಾರ್ಯಾವಳಿಯನ್ನು ಯಥಾವತ್ತಾಗಿ ವೀಕ್ಷಿಸಬೇಕಾದರೆ ಇವನ ವಿಡಂಬನೆಗಳು ಮತ್ತು ಕುಶಲಪತ್ರಗಳು ನಮಗೆ ಉತ್ಕೃಷ್ಟ ಸಹಾಯ ನೀಡಬಲ್ಲವು. ರೋಮನರಲ್ಲಿ ಯೋಚನಾಪರ ರಾದವರಿಗೆ ಯಾವ ಮಹದಾಲೋಚನೆ, ತೀಕ್ಷ್ಣರಾಗ, ಕಮನೀಯತೆಗಳೂ ಆಕರ್ಷಕವಾಗಿದ್ದುವೆಂಬುದನ್ನು ಅರಿತುಕೊಳ್ಳಬೇಕಾದರೆ ಹೊರೇಸನ ಗೀತಕಾವ್ಯಗಳ ಪರಿಶ್ರಮ ಅಗತ್ಯ. ಪ್ರ.ಶ.ಪೂ ಸು. ೩೮ರಲ್ಲಿ ವರ್ಜಿಲ್ ಮತ್ತು ರೂಫಸರ ನೆರವಿನಿಂದ ಇವನಿಗೆ ಮೀಕಿನಾಸನ ಪರಿಚಯ, ಸ್ನೇಹ

ಉಂಟಾಯ್ತು. ಐದು ವರ್ಷದ ಅನಂತರ ಮೀಕಿನಾಸನ ಅನುಗ್ರಹದಿಂದ ಟೈಬರ್ ದಂಡೆಯಲ್ಲಿದ್ದ ಒಂದು ಜಮೀನು ಮನೆ ದೊರೆಕಿತು; ಇವನ ಜೀವನ ಸುಗಮವಾಗಿ ನಡೆಯುವುದಕ್ಕೆ ಸಾಧ್ಯವಾಯಿತು. ಉತ್ಕೃಷ್ಟ ಪ್ರಗಾಥಗಳನ್ನು ಬರೆದ. ಕುಶಲಪತ್ರದ ರೂಪದಲ್ಲಿ ಒಳ್ಳೆಯ ಸಾಹಿತ್ಯ ವಿಮರ್ಶೆಯನ್ನೂ ಒದಗಿಸಿದ. ವಿಪರೀತಕ್ಕೆ ಹೋಗದ ಮಧ್ಯಮತೆಯೂ ನಯನಾಜೂಕು ಶೈಲಿಯೂ ಇವನ ಬರೆವಣಿಗೆಯ ಮುಖ್ಯಲಕ್ಷಣ. ಇವನ ಅನೇಕ ಪದಪುಂಜಗಳು ಬಳಕೆಯ ಮಾತುಗಳಾಗಿಬಿಟ್ಟಿವೆ; ಅವುಗಳನ್ನು ಬದಲಾಯಿಸಲಾಗುವುದಿಲ್ಲ, ಮರೆಯಲಾಗುವುದಿಲ್ಲ. ಇವನು ಬರೆದ ಕಾವ್ಯಕಲೆ (ಆರ್ಟ್ ಆಫ್ ಪೊಯಿಟ್ರಿ) ಎಂಬ ಗ್ರಂಥ ಅನಂತರ ಕಾಲದ ಕಾವ್ಯಮೀಮಾಂಸೆಯ ಮೇಲೆ ಗಾಢವಾದ ಪ್ರಭಾವ ಬೀರಿದ ಮುಖ್ಯ ಕೃತಿಯಾಗಿದೆ.

ಕೆಲವು ಕವಿಗಳಿಗೆ ಗ್ರೀಕರ ಎಲಿಜಿ ಎಂಬ ಪದ್ಯಕಾವ್ಯ ತಕ್ಕುದಾಗಿ ಕಂಡುಬಂತು. ಎಲಿಜಿ ಮೊದಲು ಶೋಕಗೀತವಾಗಿದ್ದು, ಆಮೇಲೆ ೬ ಗಣದ ಒಂದು ಸಾಲೂ ೫ ಗಣದ ಒಂದು ಸಾಲೂ ಜೊತೆಯಾಗಿ ಉಂಟಾದ ದ್ವಿಪದಿಯಾಯ್ತು. ಅದನ್ನು ಎಲ್ಲ ವಿಧದ ಸ್ವಂತ ಭಾವ ಭಾವನೆಯ ಅಭಿವ್ಯಕ್ತಿಗೂ ಉಪಯೋಗಿಸಬಹುದಾಗಿತ್ತು. ಉಪದೇಶ ಪ್ರೇಮಾಲಾಪ ಚಿಂತನೆ ಚಿಂತೆ ಯಾವುದಾದರೂ ಅದಕ್ಕೆ ವಿಷಯ ಸಾಮಗ್ರಿಯಾಗಬಹುದಿತ್ತು. ಎಲಿಜಿಗಳನ್ನು ಬರೆದವರಲ್ಲಿ ಮೂವರನ್ನು ಹೆಸರಿಸಬಹುದು. ಟೈಬ್ಯುಲಸ್ (ಪ್ರ.ಶ.ಪೂ೪೮–೧೯) ಪ್ರೇಮವನ್ನು ವಸ್ತುವಾಗಿ ಇರಿಸಿಕೊಂಡ; ಸಂತೋಷಗಳಿಗಿಂತ ಹೆಚ್ಚಾಗಿ ಆಲೋಚನಾ ಯುಕ್ತ ದುಗುಡವನ್ನು ಈತ ಬಣ್ಣಿಸಿದ. ಜೀವನದ ಒರಟುತನದಿಂದ ತಪ್ಪಿಸಿಕೊಳ್ಳುವುದೇ ಇವನ ಸತತ ಪ್ರಯತ್ನವಾಗಿತ್ತು. ಪ್ರಾಪರ್ಟಿಯಸ್ (ಪ್ರ.ಶ.ಪೂ.ಸು. ೫೦–೧೫) ಹೋರಾಟದ ಬದುಕಿನವ. ಸಿನ್ತಿಯಾ ಇವನ ಪ್ರೇಯಸಿ; ಇವಳನ್ನು ಕುರಿತೇ ಇವನ ಪ್ರಣಯ ಗೀತಗಳು ರಚಿತವಾಗಿವೆ. ಟ್ರಾಜಿಕ್ ಪ್ರಕರಣವನ್ನು ನಿರೂಪಿಸುವುದರಲ್ಲಿ ಇವನ ಕೌಶಲ್ಯ ಎದ್ದು ತೋರುತ್ತದೆ. ಎಲಿಜಿಯ ಕವಿಗಳಲ್ಲಿ ಶ್ರೇಷ್ಠನೆಂದು ಖ್ಯಾತಿಗಳಿಸಿದವನು ಓವಿಡ್ (ಪ್ರ.ಶ.ಪೂ. ೪೩–ಪ್ರ.ಶ.ಪೂ. ೧೭?). ಪ್ರೇಮದ ಕವಿಯೆಂದು ಇವನಿಗೆ ಅಪರಿಮಿತ ಕೀರ್ತಿ ಸಂದಿವೆ. ಈತ ಪ್ರಣಯದ ಹೊಂಚು ಸಂಚು ಸಮ್ಮೋದಗಳ ಕವಿ. ಪ್ರೇಮದ ಸೂಕ್ಷ್ಮ ವಿನಯವನ್ನಾಗಲಿ ಭಾರಿ ಆವೇಶವನ್ನಾಗಲಿ ಇವನು ಊಹಿಸಿಕೊಳ್ಳಲಾರ, ವರ್ಣಿಸಲಾರ. ತನಗೇ ಅನ್ವಯಿಸುವಂತೆ ಕಟಕಿಯ ಮೂಲಕವೂ ಹಗುರವಾಗಿಯೂ ಕಥನ ಗೈಯುತ್ತಾನೆ. ನಿರೂಪಣಾ ಕೌಶಲ್ಯ ಇವನ ವಿಶಿಷ್ಟ ಸೊತ್ತು; ನಾಟಕೀಯತೆ ಇವನಿಗೆ ಒಗ್ಗಿ ಬಂದದ್ದು. ಇವನ 'ರೂಪಾಂತರ' (ಮೆಟಮಾರ್ಫಸಿಸ್) ರೊಮ್ಯಾಂಟಿಕ್ ಪ್ರಣಯ ಕಥೆಗಳ ಖಜಾನೆಯಾಗಿದೆ. ೬ ಗಣದ ಪದ್ಯಪಂಕ್ತಿಗೆ ಇವನಿಂದ ತ್ವರಿತ ಗತಿಯೂ ಬಳುಕಾಟವೂ ಒದಗಿತು. ೧೦ ದೊಡ್ಡ ಕೃತಿಗಳನ್ನು ಇವನು ರಚಿಸಿದ. ಆದರೆ ಶಬ್ದಾಡಂಬರವನ್ನು ಇವನೆಂದೂ ಗೆಲ್ಲದೇ ಹೋದ. ಕಥೆಗಾರನಾಗಿಯೂ ಗ್ರೀಕ್ ಪುರಾಣಕಥೆ ರೋಮನ್ ಐತಿಹ್ಯಗಳಿಗೆ

ವಿವರಣಶೀಲನಾಗಿಯೂ ಇವನು ತನ್ನ ಕಾಲದವರಿಗೆ ಮತ್ತು ಅನಂತರದವರಿಗೆ ಸ್ವೀಕರಿಸಲರ್ಹನಾದ ಇವನ ಪ್ರಭಾವ ಮುಂದಿನ ಸಾಹಿತಿಗಳ ಮೇಲೆ ಅಪಾರವಾಗಿ ಆಗಿದೆ.

ಅಗಸ್ಟಸ್ಸನ ಅವಧಿಯಲ್ಲಿ ಸಾಮಾಜಿಕ ಬಾಳು, ವೈಯಕ್ತಿಕ ಬಾಳು ಎರಡಕ್ಕೂ ನವೋದಯ ಒದಿಗಿಬಂತು. ಜೊತೆಗೆ ಸಾರ್ವಭೌಮತ್ವಕ್ಕೆ ತಿರುಗಿದ ನಾಡಿನ ಪೂರ್ವೋಪಾಖ್ಯಾನ ಮೇಧಾವಿಗಳಿಗೆ ರುಚಿವತ್ತಾದ ಐತಿಹ್ಯ ಮಾಲೆಯಂತೆ ಉಲ್ಲಾಸ ಕೊಟ್ಟಿತು. ಹಿಂದಣ ಅಚ್ಚರಿ ಕಥೆಯನ್ನು ವರ್ಜಿಲ್, ಹೊರೇಸ್, ಓವಿಡ್ಡರು ತಮ್ಮ ತಮ್ಮ ಬಗೆಯಲ್ಲಿ ಹಾಡಿ ಹೊಗಳಿದರು. ಅಧಿಕೃತವಾದ ಚರಿತ್ರೆಗೆ ಸಮಯ ಸಜ್ಜಾಗಿತ್ತು. ಲಿವಿ (ಪ್ರ.ಶ.ಪೂ೫೯–ಕ್ರಿ.ಶ೧೭?) ಅದನ್ನು ಕೈಗೊಂಡು ಮುಗಿಸಿದ. ಅವನು ಬರೆದ ಚರಿತ್ರೆ ೧೪೨ ಸಂಪುಟಗಳ ಬೃಹದ್ಗ್ರಂಥ (ಈಗ ೩೫ ಮಾತ್ರ ಉಪಲಬ್ಧವಾಗಿವೆ). ನೀತಿಬೋಧೆಯೇ ತನ್ನ ಹೆಗ್ಗುರಿಯೆಂದು ಈತ ಹೇಳಿಕೊಂಡಿದ್ದಾನೆ. ಐತಿಹ್ಯಗಳನ್ನು ಅಕ್ಕರೆಯಿಂದ ವಿವರಿಸುವಾಗ ಅವು ನಿಜವೇ ಸುಳ್ಳೇ ಎಂಬ ಪ್ರಶ್ನೆ ಇವನನ್ನು ಕಾಡಲಿಲ್ಲ. ಪ್ರಾಚೀನ ಮಹಾಪುರಷರ ಗುಣಧರ್ಮ ಅವುಗಳಿಂದ ಸುವ್ಯಕ್ತಗೊಳ್ಳುತ್ತದೆ. ವಿಷಯವನ್ನು ಕುರಿತು ಶ್ರದ್ಧೆ, ದೇಶಭಕ್ತಿ, ವರ್ಣನಾ ನೈಪುಣ್ಯ, ನಾಟಕೀಯತೆಗಳ ಜೊತೆ ತಿಳಿಯೂ ಕ್ರಮಬದ್ಧವೂ ಆದ ವಾಗ್ಸರಿಯಿಂದ ಕೂಡಿ ಇವನ ಶೈಲಿ ಚೇತೋಹಾರಿಯಾಗಿದೆ. ಅನೇಕ ಉತ್ಕೃಷ್ಟ ಕಥನಭಾಗಗಳಿಂದಲೂ ಸಾರೋಕ್ತಿಗಳಿಂದಲೂ ಚರಿತ್ರೆ ತುಂಬಿಕೊಂಡಿದೆ. ವಿಶಾಲ ಯೋಜನೆಯನ್ನು ಮನಸ್ಸಿನಲ್ಲಿ ಸಿದ್ಧಪಡಿಸಿ ಅದನ್ನು ಸಂಪೂರ್ಣವಾಗಿ ಸಾಹಿತ್ಯರೀತ್ಯಾ ನೆರವೇರಿಸುವ ಜಾಣ್ಮೆ ರೋಮನರ ಹಿರಿಮೆ. ಲಿವಿ ಅದಕ್ಕೆ ಉತ್ತಮ ನಿದರ್ಶನ. ಮಹಾವ್ಯಕ್ತಿಗಳ ನಿಸ್ವಾರ್ಥ ಸೇವೆ ಹೇಗೆ ರೋಮಿನೊಳಗೆ ಹುದುಗಿದ್ದ ಪ್ರಭುಶಕ್ತಿಯನ್ನು ಹೊರಕ್ಕೆಳೆಯಿತು, ಅವರ ಮತ್ತು ಎಲ್ಲ ರೋಮನರ ವೀರಯೋಧರಿಗೆ ಸಮವಾದ ಕೆಚ್ಚು ಶ್ರಮ ಸಹಿಷ್ಣುತೆ ಚಾಕಚಕ್ಯ ಔದಾರ್ಯಗಳು ಹೇಗೆ ರೋಮಿಗೆ ನ್ಯಾಯವಾಗಿ ಸಲ್ಲತಕ್ಕ ಸಾರ್ವಭೌಮತ್ವವನ್ನು ತಂದುಕೊಟ್ಟುವು ಎಂಬುದನ್ನು ಲಿವಿಯ ಚರಿತ್ರೆಯ ಪುಟಗಳನ್ನು ಪಠಿಸಿ ಮನದಟ್ಟು ಮಾಡಿಕೊಳ್ಳಬಹುದು.

ನಾಲ್ಕನೆಯ ಅವಧಿ (ಪ್ರ.ಶ.ಪೂ ೧೭–೧೩೦): ಅಗಸ್ಟಸ್ ಚಕ್ರವರ್ತಿಯ ಮರಣಾನಂತರ ಸುಮಾರು ಒಂದು ತಲೆಮಾರಿನ ತನಕ ಯಾವ ಹೊಸಬಗೆಯ ದಕ್ಷಕವಿಯೂ ಉದಯಿಸಲಿಲ್ಲ. ಫೀಡ್ರಸನ ಪ್ರಾಣಿಕಥೆಗಳೇ (ಫೇಬಲ್) ಈ ಕಾಲದ ಮುಖ್ಯಸಾಹಿತ್ಯವೆನ್ನಬಹುದು. ವಿನೋದವುಂಟು ಮಾಡುವುದೂ ನೀತಿಹೇಳುವುದೂ ಇವನ ಉದ್ದೇಶ. ತೋಳ, ಕುರಿಮರಿ, ನರಿಯೂ ದ್ರಾಕ್ಷಿಯೂ, ಮರದ ದಿಮ್ಮಿ ಮತ್ತು ದೊರೆ, ನೀರುಹಾವು ಮುಂತಾದವು ಪ್ರಪಂಚ ಪ್ರಸಿದ್ಧವಾಗಿವೆ. ಇಂಥ ಕೆಲವು ಕಥೆಗಳಲ್ಲಿ ರಾಜಕೀಯ ವ್ಯಂಗ್ಯಾರ್ಥವನ್ನು ಕಂಡುಕೊಂಡ ಅಧಿಕಾರಿಗಳು ಫೀಡ್ರಸನನ್ನು ಸೆರೆಗೆ ತಳ್ಳಿದ್ದೂ ಉಂಟು. ಫೀಡ್ರಸನ ವಿಭಾವನಾಶಕ್ತಿ ಸಾಧಾರಣ

ಮಟ್ಟದ್ದಾದರೂ ಒಳ್ಳೆಯ ಪದಪುಂಜವನ್ನು ಈತ ನೇಯಬಲ್ಲ. 'ನೋವು ಕೊಟ್ಟು, ಅದಕ್ಕೆ ಅಪಮಾನ ಸೇರಿಸು' ಎಂಬುದು ಇವನ ಪ್ರಸಿದ್ಧ ಸೂಕ್ತಿಗಳಲ್ಲೊಂದು. ನೀರೊ ಪಟ್ಟಕ್ಕೆ ಬಂದ ಕೂಡಲೆ ಕಲೆಗಳಿಗೆ ಪ್ರೋತ್ಸಾಹ ಅಧಿಕವಾಯ್ತು. ಈತ ಸ್ವತಃ ಸಂಗೀತಜ್ಞನೂ ನಟನೂ ಆಗಿದ್ದ. ಇವನ ಕಾಲದ ಲೇಖಕರಲ್ಲಿ ಪರ್ಷಿಯಸ್, ಪೆಟ್ರೋನಿಯಸ್, ಸೆನೆಕ, ಲ್ಯೂಕನ್–ಈ ನಾಲ್ವರು ಪ್ರಸಿದ್ಧರಾಗಿದ್ದಾರೆ.

ಸೆನೆಕ (ಪ್ರ.ಶ.ಪೂ. ೪–ಪ್ರ.ಶ.ಪೂ. ೬೫) ವಿರೋಧಾಭಾಸಗಳಿಂದ ಕೂಡಿದ ವಿಚಿತ್ರ ವ್ಯಕ್ತಿ; ದಾರ್ಶನಿಕ ಹಾಗೂ ರಾಜಕೀಯ ಪಿತೂರಿಗಾರ; ದೊಡ್ಡ ಧ್ಯೇಯಗಳನ್ನು ಉಪದೇಶಿಸುವ ತತ್ತ್ವಜ್ಞ, ಹಾಗೂ ಅಪರಿಮಿತ ವಿತ್ತಸಂಗ್ರಹಿ; ಆಲೋಚನಾಪ್ರಮುಖ ಬುದ್ಧಿವಂತ ಹಾಗೂ ಆಡಂಬರದ ಶೈಲಿಯವ; ನೀತಿಬೋಧಕ. ಈತ ಹೇರಳ ಬರೆಹಗಳನ್ನು ಬಿಟ್ಟು ಹೋಗಿದ್ದಾನೆ. ೧೨ ಸಂವಾದಗಳು, ೨ ನೈತಿಕ ಗ್ರಂಥಗಳು, ೧೨೪ ಕುಶಲ ಪತ್ರಗಳು ಇತ್ಯಾದಿ. ಕುಶಲಪತ್ರಗಳೆಲ್ಲ ಜೀವನದ ನಾನಾ ವಿಚಾರಗಳನ್ನು ಕುರಿತ ಲಘು ಪ್ರಬಂಧಗಳಾಗಿವೆ.; ನಿಸರ್ಗದ ಘಟನೆಗಳನ್ನು ಸ್ಟೋಇಕ್ ದೃಷ್ಟಿಯಿಂದ ವಿಶ್ಲೇಷಿಸುವ ೭ ಪ್ರಬಂಧಗಳನ್ನೂ ಸಾಫೊಕ್ಲೀಸ್ ಯೂರಿಪೀಡೀಸ್ ಮಾದರಿಯ ೯ ಟ್ರಾಜಿಡಿಗಳನ್ನೂ ಈತ ರಚಿಸಿದ. ಇವನ ಟ್ರ್ಯಾಜಿಡಿಗಳಲ್ಲಿ ಭೀಷಣತೆಯೂ ಅಬ್ಬರವೂ ಜಾಸ್ತಿ; ಇವು ಓದುನಾಟಕಗಳಾಗಿದ್ದುವು. ಅನಂತರ ೧೬ನೆಯ ಶತಮಾನದಲ್ಲಿ ಟ್ರ್ಯಾಜಿಡಿ ಪುನರುತ್ಥಾನಗೊಂಡಾಗ ಸೆನೆಕನೇ ಪ್ರೇರೇಪಕನೂ ಮಾರ್ಗದರ್ಶಿಯೂ ಆದ.

ಲ್ಯೂಕನ್ (೩೯–೬೫) ಫಾರ್ಸೇಲಿಯಾ ಎಂಬ ಮಹಾಕಾವ್ಯವನ್ನು ಬರೆದಿದ್ದಾನೆ. ಸೀಸರ್ ಹಾಗೂ ಪಾಂಪೆ ನಡುವೆ ಜರುಗಿದ ಅಂತರ್ಯುದ್ಧ ವನ್ನು ಈ ಕಾವ್ಯದಲ್ಲಿ ನಿರೂಪಿಸಲಾಗಿದೆ. ಕೇಟೊ ಈ ಕಾವ್ಯದ ನಾಯಕ. ಇನಿಯಡ್ ತರುವಾಯ ಬಂದ ಭವ್ಯಕಾವ್ಯ ಇದೊಂದೇ. ತಾರುಣ್ಯದ ಜೋರೂ ಭರಾಟೆಯೂ ಆಟಾಟೋಪದ ಭಾಷೆಯೂ ಈ ಕಾವ್ಯದಲ್ಲಿ ಎದ್ದುಕಾಣುತ್ತದೆ. ಆದರೂ ಹಲವರ ಮೆಚ್ಚಿಕೆಗೆ ಇದು ಪಾತ್ರವಾಗಿದೆ.

ಪರ್ಷಿಯಸ್ (೩೪–೬೨) ಲ್ಯೂಕನ್ನನ ಸಹವಿದ್ಯಾರ್ಥಿಯಾಗಿ ಸ್ಟೋಇಕ್ ಉಪಾಧ್ಯಾಯ ಕಾರ್ನೂಟಸ್ಸನ ಬಳಿ ವ್ಯಾಸಂಗ ಮಾಡಿದ. ಲ್ಯೂಸಿಲಿಯಸ್ಸಿನ ವಿಡಂಬನೆಗಳಿಂದ ಪ್ರೇರೇಪಿತನಾಗಿ ೬ ವಿಂಡಂಬನೆಗಳನ್ನು ರಚಿಸಿದ. ಆದರೆ ಅವೆಲ್ಲ ಧರ್ಮೋಪದೇಶದ ಪ್ರಬಂಧಗಳು. ಹೊರೇಸ ನನ್ನು ಅನುಕರಿಸಹೋಗಿ ವಿಫಲನಾದ. ಅಲ್ಲಲ್ಲಿ ಕಾವ್ಯಲಕ್ಷಣವನ್ನು ಇವನು ಮೆರೆದರೂ ಒಟ್ಟಿನಲ್ಲಿ ಇವನ ಶೈಲಿ ಕ್ಲಿಷ್ಟವೂ ಮಬ್ಬುಮಸುಕೂ ಆದದ್ದು. ಇತರರ ವಾಗತಿರೇಕಗಳನ್ನು ಅವಹೇಳನ ಮಾಡುವ ಭರದಲ್ಲಿ ಈತ ತಾನೇ ವಾಗ್‌ವೈಪರೀತ್ಯಗಳಿಗೆ ಬಲಿಯಾದ.

ಪೆಟ್ರೋನಿಯಸ್(?–೬೬) ಬರೆದದ್ದೆಂದು ನಂಬಿರುವ ಕಾದಂಬರಿ "ಸ್ಯಟಿರಿಕಾನ್"ನಲ್ಲಿ ಕೊಂಡ ಭಾಗ ಮಾತ್ರ ಈಗ ಉಳಿದು ಬಂದಿದೆ. ಇದು ಆ ಕಾಲದ ಕೆಳವರ್ಗದ ಜನಜೀವನದ ಪ್ರಾಮಾಣಿಕ ಪ್ರತಿಚಿತ್ರವನ್ನು ನೀಡುವ ವಾಸ್ತವಿಕ

ಕಾದಂಬರಿಯೆಂದೂ ಪಾಶ್ಚಾತ್ಯ ಸಾಹಿತ್ಯದ ಮೊಟ್ಟಮೊದಲ ಕಾದಂಬರಿಯೆಂದೂ ಹೆಸರಾಗಿದೆ. ಇದು ಎನ್ಕೋಲ್ಪಿ ಯಸ್, ಅಸ್ಕಿಲ್ಟಸ್ ಎಂಬ ಇಬ್ಬರು ಪುಂಡ ಅಲೆಮಾರಿಗಳ ಸಾಹಸಗಳ ಕಥೆ. ಗೀಟಾನ್ ಎಂಬ ತುಂಟ ಬಾಲಕ ಅವರಿಗೆ ಸೇವಕ. ದಕ್ಷಿಣ ಇಟಲಿಯ ಅರೆ ಗ್ರೀಕ್ ನಗರಗಳೇ ಅವರ ಕಾರ್ಯಕ್ಷೇತ್ರ. ಒಮ್ಮೆ ಅವರಿಗೆ ಟ್ರೈಮಾಲ್ಕಿಯೊ ಎಂಬ ಧನಿಕ, ಅಸಂಸ್ಕೃತ, ನಿನ್ನೆಮೊನ್ನೆಯ ದೊಡ್ಡಮನುಷ್ಯನ ಮಹಲಿನಲ್ಲಿ ಭೋಜನಕೂಟಕ್ಕೆ ಆಹ್ವಾನ ದೊರಕುತ್ತದೆ. ಮಹಲಿನ ಶೃಂಗಾರ ಒಂದೊಂದರಲ್ಲೂ ಕಣ್ಣುಕುಕ್ಕುವ ಡಾಂಭಿಕತೆ, ಹೇರಳ ಭಕ್ಷ್ಯ ಭೋಜ್ಯವೆಲ್ಲ ಚಿತ್ರವಿಚಿತ್ರ, ವಿಕಟಾಟ್ಟಹಾಸಾಲಂ ಕೃತ ಅತಿ ವಿಕಾರ, ಅತಿಥಿಗಳ ವರ್ತನೆ ನಗೆಪಾಟಲು, ಮಾತುಕಥೆ ಹುಚ್ಚುಹುಚ್ಚು; ಅಶ್ಲೀಲ. ಟ್ರೈಮಾಲ್ಕಿಯೊ ಎಲ್ಲರನ್ನೂ ಮೀರಿಸಿದ ಮಡ್ಡಿ. ಕುಡಿತದ ಅಮಲಿನಲ್ಲಿ ತನ್ನ ಮರಣಪತ್ರವನ್ನು ವಿವರಿಸುತ್ತಾನೆ. ತನಗಾಗಿ ಕಟ್ಟಿ ನಿಲ್ಲಿಸುವ ಗೋರಿಯನ್ನು ಬಣ್ಣಿಸುತ್ತಾನೆ. ವಿದ್ಯಾವಂತನಂತೆ ತೋರಿಸಿಕೊಳ್ಳುವ ಹೆಬ್ಬಯಕೆಯಿಂದ "ಟ್ರಾಯ್ ನಗರದ ಮುತ್ತಿಗೆಯಲ್ಲಿ ಹ್ಯಾನಿಭಾಲನೂ ಇದ್ದ, ಡೆಡಲಸ್ ನಯೋಬಿಯನ್ನು ಟ್ರೋಜನ್ ಕುದುರೆಯ ಹೊಟ್ಟೆಯೊಳಗೆ ಕೂಡಿಟ್ಟ, ಕ್ಯಸಾಂಡ್ರಾ ತನ್ನ ಮಕ್ಕಳನ್ನು ಕೊಂದು ಹಾಕಿದಳು" ಮುಂತಾದ ಸಾಹಿತ್ಯಕ ಅಪಭ್ರಂಶಗಳನ್ನು ಸುರಿಸುತ್ತಾನೆ. ಮೃಚ್ಛಕಟಿಕದ ಶಕಾರನನ್ನು ಜ್ಞಾಪಕಕ್ಕೆ ತರುವ ಪಾತ್ರವಿದು. ಜೋಡಿ ಭಂಡರಿಗೆ ಆಮೇಲೆ ಯೂಮೋಲ್ಪಸ್ ಎಂಬ ವೃದ್ಧನೂ ವಿಷಯ ಲಂಪಟನೂ ಆದ ಕವಿಯೊಬ್ಬನ ಸಹವಾಸ ಸಿಕ್ಕುತ್ತದೆ; ಅವನೊಂದಿಗೆ ಸಮುದ್ರಯಾನ ಕೈಗೊಳ್ಳುತ್ತಾರೆ. ಅವನು ಕಾವ್ಯಲಕ್ಷಣವನ್ನು ವಿವರಿಸುತ್ತಾನೆ; ಪದ್ಯಪಂಕ್ತಿಗಳನ್ನು ಕಟ್ಟಿ ವಾಚಿಸುತ್ತಾನೆ; ಸಮಕಾಲೀನ ಕವಿಗಳನ್ನು ಹಳಿಯುತ್ತಾನೆ. ಇಲ್ಲೆಲ್ಲ ಉತ್ತಮ ವಿಮರ್ಶೆಯ ಅಂಶವನ್ನು ಗುರುತಿಸಬಹುದಾಗಿದೆ.

ಅನಂತರ ಬಂದ ಸಾಹಿತಿಗಳಲ್ಲಿ ಹಿರಿಯ ಪ್ಲೀನಿ (೨೩–೭೯) ವೈಶಿಷ್ಟ್ಯ ದಿಂದ ಕೂಡಿದವ. ಇವನಿಗೆ ತೀರದ ಜ್ಞಾನದಾಹ. ಇವನ ದುಡಿಮೆ ಅದ್ಭುತವಾದದ್ದು; ಅಲ್ಪಸ್ವಲ್ಪ ನಿದ್ರೆಯನ್ನುಳಿದು ಮಿಕ್ಕೆಲ್ಲ ಸಮಯ ದಲ್ಲಿಯೂ ಈತ ಪುಸ್ತಕಾವಲೋಕನ ಗೈಯುತ್ತಿದ್ದ. ಸಾವಿರಾರು ಟಿಪ್ಪಣಿಗಳನ್ನು ಗುರುತು ಹಾಕಿಕೊಳ್ಳುತ್ತಿದ್ದ. ನೌಕಾಧಿಪತಿಯಾಗಿ ಕಾಳಗದಲ್ಲಿದ್ದಾಗ ಯಾರೋ ಹತ್ತಿರದ ಗುಡ್ಡಗಳಿಂದ ಹೊಗೆ ಬರುತ್ತಿದ್ದುದನ್ನು ಇವನಿಗೆ ತೋರಿಸಿದರಂತೆ. ಪ್ಲೀನಿ ತಕ್ಷಣ ಚಿಕ್ಕ ನೌಕೆಯೊಂದರಲ್ಲಿ ತನಿಖೆ ಮಾಡಲು ಹೊರಟು ಹಲವು ಸಂಗತಿಗಳನ್ನು ಪರಿಶೋಧಿಸಿ ಹೇಳಿ ಬರೆಯಿಸಿದನಂತೆ. ಆಗ ಒಂದೇ ಸಮನೆ ಜ್ವಾಲಾಮುಖಿ ಇವನ ಮೇಲೆ ಕಲ್ಲುಮಳೆ ಕರೆಯುತ್ತಿತ್ತಂತೆ. ಮೂರನೆಯ ದಿನ ಒಂದು ದಿಂಬನ್ನು ಮೈರಕ್ಷಣೆಗಾಗಿ ಇಟ್ಟುಕೊಂಡು ಬೀಳುವ ಕಲ್ಲುಗಳನ್ನೂ ಉಸಿರುಕಟ್ಟಿಸುವ ಧೂಮರಾಶಿಯನ್ನೂ ಲೆಕ್ಕಿಸದೇ ಸಮುದ್ರತೀರದಲ್ಲಿ ವಿಷಯಸಂಗ್ರಹಣೆಗೋಸ್ಕರ ಸುತ್ತಾಡಿದನಂತೆ ನಾನಾ ವಿಷಯಗಳ ಮೇಲೆ ಇವನು ಉದ್ಗ್ರಂಥಗಳನ್ನು ಬರೆದಿದ್ದಾನೆ. ಆದರೆ ಬಲುಪಾಲು ಉಪಲಬ್ಧವಿಲ್ಲ.

ಉಳಿದುನಿಂತಿರುವ ಇವನ ಮಹಾಕೃತಿ ೩೭ ಸಂಪುಟಗಳ 'ನಿಸರ್ಗದಚರಿತ್ರೆ'. ಭೌತವಿಜ್ಞಾನ, ಭೂಗೋಳ, ಪ್ರಾಣಿವಿಜ್ಞಾನ, ಅಂಗರಚನೆ, ಔಷಧಿಗೆ ಬರುವ ಸಸ್ಯ, ಮಾನವ ಬುಡಕಟ್ಟುಗಳು–ಮೊದಲಾದ ಹಲವು ವಿಚಾರಗಳನ್ನು ಅದರಲ್ಲಿ ಪ್ರತಿಪಾದಿಸಿದ್ದಾನೆ. ಶಿಲ್ಪ ಚಿತ್ರಣ ಕಲೆಗಳ ಇತಿಹಾಸವೂ ಉಲ್ಲೇಖವಾಗಿದೆ. ಅನೇಕ ತಪ್ಪುಗಳಿಂದ ಕೂಡಿದ್ದರೂ ಈ ಗ್ರಂಥದಲ್ಲಿ ನೂರಾರೂ ಕುತೂಹಲಜನಕ ಸಂಗತಿಗಳು ವಿವರಿಸಲ್ಪಟ್ಟಿವೆ. ಆನೆಗಳು ಕಲಿತ ಚಾತುರ್ಯಗಳು, ಇಟಲಿಗೆ ಕ್ಷೌರಿಕರು ಮೊದಲು ಬಂದದ್ದು, ಯೋಧರ ಸೀಸಕಕ್ಕೆ ಉಷ್ಟ್ರಪಕ್ಷಿಯ ಗರಿಗಳ ಅಲಂಕಾರ, ಮುಖದ ಸುಕ್ಕನ್ನು ಕತ್ತೆಯ ಹಾಲು ಹಚ್ಚಿ ತೆಗೆಯುವಿಕೆ–ಇಂಥ ರೋಚಕ ವಿಷಯಗಳು ಕೂಡ ಈ ಗ್ರಂಥದಲ್ಲಿ ಕಂಡುಬರುತ್ತವೆ.

ಚಕ್ರವರ್ತಿ ಡಾಮಿಷಿಯನ್ನನ ಕಾಲದಲ್ಲಿ ಸೀಲಿಯಸ್ ಇಟಾಲಿಕಸ್ಸನ (೨೬–೧೦೧?) ಪ್ಯೂನಿಕ್ ಯುದ್ಧ, ಸ್ಟಾಟಿಯಸ್ಸನ (೪೫–೯೬) ತೀಬೈಡ್ ಎಂಬ ಕಥನ ಕಾವ್ಯಗಳು ಹೊರಬಂದುವು. ಉತ್ತಮ ವಿಮರ್ಶಕ ಕ್ವಿಂಟಿಲಿಯನ್ (ಪ್ರ.ಶ.ಪೂ.ಸು. ೪೦–೯೫) ಯುವಕರ ವಿದ್ಯಾಭ್ಯಾಸದಲ್ಲಿ ಪ್ರಭಾವ ಯುಕ್ತ ಪಾತ್ರವಹಿಸಿದ. ಉಪಾಧ್ಯಾಯರಾಗಿ ಆಡಳಿತದವರಿಂದ ಸಂಬಳ ಪಡೆದವರಲ್ಲಿ ಇವನೇ ಮೊದಲಿಗ, ೨೦ ವರ್ಷ ಪಾಠ ಹೇಳಿ ನಿವೃತ್ತಿ ಹೊಂದಿದ. ಇವನು ಬರೆದ ವಾಗ್ಮಿತೆಯ ವ್ಯವಸ್ಥೆ ಎಂಬ ಕೃತಿ ವಿದ್ಯಾಭ್ಯಾಸ, ಸಾಹಿತ್ಯವಿಮರ್ಶೆ ಎರಡಕ್ಕೂ ಒಂದು ಪ್ರಮಾಣ ಗ್ರಂಥವಾಗಿದೆ.

ಇವರೆಲ್ಲರಿಗಿಂತಲೂ ಹೆಚ್ಚು ಸಮಗ್ರವಾಗಿಯೂ ರಸವತ್ತಾಗಿಯೂ ಜನಜೀವನವನ್ನು ಮಾರ್ಷಲ್ (ಪ್ರ.ಶ.ಪೂ.ಸು. ೪೦–೧೦೪) ನಿರೂಪಿಸಿದ. ಈತ ೬೪ರಲ್ಲಿ ರೋಮಿಗೆ ಬಂದು ಸೆನೆಕ ಮತ್ತು ಲ್ಯೂಕನರ ಆಶ್ರಯ ಪಡೆದು ಕ್ರಮೇಣ ಶ್ರೀಮಂತರ ಕೃಪೆಗೆ ಪಾತ್ರನಾದ; ತನ್ನ ಪುಸ್ತಕಗಳನ್ನು ಬೆಲೆಗೆ ಮಾರಿಯೂ ಹಣ ಸಂಪಾದಿಸಿದ. ಕಲೋಸಿಯಮ್ ಎಂಬ ಪ್ರದರ್ಶನಶಾಲೆ ಉದ್ಘಾಟನೆಗೊಂಡದ್ದನ್ನು ಪ್ರಶಂಸಿಸುವ ಕವನಗಳೇ ಇವನ ಮೊದಲನೆಯ ಹೊತ್ತಗೆ; ಈಗ ೩೩ ಕವನಗಳು ಉಳಿದುಬಂದಿವೆ. ಸ್ಯಾಟರ್ನಾಲಿಯ ಎಂಬ ಮಹೋತ್ಸವ ಸಂದರ್ಭದಲ್ಲಿ ಗೆಳೆಯರು ಕೊಡುತ್ತಿದ್ದ ಮತ್ತು ಸ್ವೀಕರಿಸುತ್ತಿದ್ದ ಉಡುಗೊರೆಗಳಿಗೆ ಒಪ್ಪುವ ಸೂಕ್ತಿಗಳನ್ನು ಎಲಿಜಿಯಾಕ್ ಶ್ಲೋಕಗಳಾಗಿ ಬರೆದಿದ್ದಾನೆ. ಹೀಗೆ ನಾಟುನುಡಿ (ಎಪಿಗ್ರಾಮ್) ಇವನ ಅನುರೂಪ ಕಾವ್ಯಮಾರ್ಗವಾಯ್ತು, ಶಕ್ತ ಸಾಧನವಾಯ್ತು, ದ್ರವ್ಯ ಮತ್ತು ಕೀರ್ತಿ ಎರಡನ್ನೂ ಒಟ್ಟಿಗೇ ಒದಗಿಸುವ ಮೂಲವಾಯ್ತು. ನಾಟುನುಡಿಗಳನ್ನು ನೂರರ ಕಂತೆಗಳಾಗಿ ವಿಂಗಡಿಸಿ ಒಟ್ಟು ಹನ್ನೆರಡು ಕಂತೆಗಳನ್ನು ಪ್ರಕಟಿಸಿದ. ನಾಟುನುಡಿ ಎಂಬ ಬಗೆಯೊಂದನ್ನು ಸ್ಥಾಪಿಸಿ ಕಲಾವತ್ತಾಗಿ ಮಾಡಿದ. ಕವನದ ಮೊದಲಣ ಪಂಕ್ತಿಗಳಲ್ಲಿ ಅರ್ಥಕ್ಕೆ ಒಂದು ಕ್ರಮವನ್ನಿತ್ತು ಕೊನೆಯಲ್ಲಿ ಹಠಾತ್ತಾಗಿ ಕ್ರಮ ಬದಲಾಯಿಸಿ ಬೇರೆ ಅರ್ಥ ಮೂಡಿಬರುವಂತೆ ತಂತ್ರಹೂಡುತ್ತಾನೆ. ಒಂದೆರಡು

ಉದಾಹರಣೆಗಳನ್ನು ಹೆಸರಿಸಬಹುದು; "ನನ್ನ ವರಿಸಲು ಪಾಲಳಿಗೆ ಅಪೇಕ್ಷೆ. ಅವಳ ಕಂಡೆನಗೆ ಉಪೇಕ್ಷೆ; ಕಾರಣ ಅವಳು ವೃದ್ಧೆ. ನಾನವಳ ಕೈಹಿಡಿಯುತ್ತಿದ್ದೆ ಅವಳಾಗಿದ್ದಲ್ಲಿ ಇನ್ನೂ ಹೆಚ್ಚು ವೃದ್ಧೆ.; "ಎಲವೊ ನೀ ವಾಚಿಸುತ್ತಿರುವುದು ನನ್ನ ಕವನ. ನನ್ನ ಕವನ ಎಂದೆನೆ ? ಅಲ್ಲ ಅಲ್ಲ. ನಿನ್ನ ವಾಚನ ವೈಖರಿಯಿಂದ ಅದೀಗ ನಿನ್ನ ಕವನ. ಹೊಟ್ಟೆಬಾಕರು, ಕುಡುಕರು, ಪರಾನ್ನಜೀವಿಗಳು, ಬೂಟಾಟಿಗರು, ಗ್ರಂಥಚೋರರು, ವಕ್ರತೆಯವರು, ಲುಬ್ಧರು ಮುಂತಾದವರೆಲ್ಲ ಇವನ ಗೇಲಿಗೆ ತುತ್ತಾಗಿದ್ದಾರೆ. ಒಳ್ಳೆಯ ಗೆಳೆಯರನ್ನು ಪತಿವ್ರತೆಯರನ್ನು ನೈಜಕವಿಗಳನ್ನು ಈತ ಮುಕ್ತಕಂಠದಿಂದ ಹೊಗಳಿದ್ದಾನೆ. ತನ್ನ ಕಾವ್ಯ ಉತ್ತಮ ಸಾಹಿತ್ಯವೆಂಬ ಭ್ರಮೆ ಮಾರ್ಷಲ್‌ಗೆ ಇರಲಿಲ್ಲ; ತನ್ನ ಕಾವ್ಯವನ್ನು ಎಲ್ಲರೂ ಎಲ್ಲೆಂದರಲ್ಲಿ ಆಸಕ್ತಿಯಿಂದ ಓದುತ್ತಾರೆಂಬ ವಾಸ್ತವಿಕತೆಯ ಬಗ್ಗೆ ಇವನಿಗೆ ಹೆಮ್ಮೆಯಿತ್ತು.

ಇದೇ ಅವಧಿಯ ಅಂತ್ಯದಲ್ಲಿ ಬಂದ ಇನ್ನಿಬ್ಬರು ಲೇಖಕರನ್ನು ಇಲ್ಲಿ ಹೆಸರಿಸಬಹುದು. ಇವರಲ್ಲಿ ಮೊದಲನೆಯವನು ಟ್ಯಾಸಿಟಸ್ (ಪ್ರ.ಶ.ಪೂ.ಸು. ೫೫–೧೨೦?). ಈತ ಉಚ್ಚ ರೋಮನ್ ವಂಶಸ್ಥ. ರಾಜ್ಯಾಡಳಿತದಲ್ಲಿ ಕೆಲಕಾಲ ಅಧಿಕಾರಿಯಾಗಿದ್ದ. ಈತ ಚರಿತ್ರೆಗಳು, ಬಖೈರುಗಳು ಎಂಬ ಎರಡು ಗ್ರಂಥಗಳನ್ನು ರಚಿಸಿದ್ದಾನೆ. ಟೈಬೀರಿಯಸ್ಸನಿಂದ ಹಿಡಿದು ಡಾಮಿಷಿಯನ್ ತನಕ ಎಲ್ಲ ಚಕ್ರವರ್ತಿಗಳ ಕಾಲದ ಚರಿತ್ರೆಯನ್ನೂ ಇದರಲ್ಲಿ ಕಥನಗೈದಿದ್ದಾನೆ. ಶ್ರೇಷ್ಠ ಚರಿತ್ರಕಾರನ ಸಕಲ ಗುಣಗಳೂ ಇವನಲ್ಲಿ ಮನೆಮಾಡಿದ್ದುವು. ವ್ಯಕ್ತಿಯ ಅಂತರಾಳಕ್ಕೆ ನುಗ್ಗಿ ಗುಣಾವಗುಣಗಳ ತಾಯಿಬೇರನ್ನು ಗ್ರಹಿಸುವ ತೀಕ್ಷ್ಣ ದೃಷ್ಟಿ, ಘಟನಾವಳಿಯ ಸ್ವರೂಪದ ಯಥಾವತ್ ತಿಳಿವಳಿಕೆ, ಅವುಗಳ ಹಿಂದಿದ್ದು ಅವುಗಳನ್ನು ನಡೆಸುವ ಚಾಲಕಶಕ್ತಿಗಳ ಅರಿವು, ವಿಶದವೂ ಸ್ಫುಟವೂ ಹರಿತವೂ ಆದ ನಿರೂಪಣಾ ಸಾಮರ್ಥ್ಯ–ಎಲ್ಲದರಲ್ಲೂ ಇವನು ಬಲ್ಲಿದನಾಗಿದ್ದ. ಸಾರ್ವಭೌಮತ್ವದ ದಬ್ಬಾಳಿಕೆ ಕ್ರೌರ್ಯ ಕೇಡಿಗತನದಿಂದ ಇವನ ಹೃದಯ ನೊಂದು ಹೋಗಿತ್ತು. ಅದರ ದುಷ್ಟತೆಯ ಮೇಲೆ ಅವಧಾರಣೆಯನ್ನಿಟ್ಟು ಸೌಮ್ಯತೆಯನ್ನು ತೇಲಿಸಿದ. ಇವನ ಗ್ರಂಥಗಳು ಇತಿಹಾಸಕಾರರಿಗೂ ರಾಜಕಾರಣಿಗಳಿಗೂ ಅಮೂಲ್ಯ ಕೈಪಿಡಿಯಂತಿವೆ.

ಎರಡನೆಯವನು ಜುವೆನಲ್ (ಪ್ರ.ಶ.ಪೂ.ಸು. ೬೦–೧೩೦?). ಈತ ಬಲಿಷ್ಠನೂ ಉಗ್ರನೂ ಆದ ವಿಡಂಬನ ಪಟು. ಚಕ್ರವರ್ತಿಯ ಒಲುಮೆಯ ವನಾದ ನಟನೊಬ್ಬನನ್ನು ಪರಿಹಾಸಮಾಡಿದ ಕಾರಣಕ್ಕಾಗಿ ಇವನು ಡಾಮಿಷಿಯನ್ನನ ಕೋಪಕ್ಕೆ ತುತ್ತಾಗಿ ದೇಶಭ್ರಷ್ಟತೆಯನ್ನು ಅನುಭವಿಸಿದ. ಬಡತನದ ಕಷ್ಟ ಕಾರ್ಪಣ್ಯ ಕೊಂಚ ಕಾಲ ಇವನನ್ನು ಹಿಂಸಿಸಿತು. ಈತ ತೀವ್ರ ಭಾವೋದ್ರೇಕದ ಕವಿಯಾಗಿದ್ದ. ಈತ ೧೬ ವಿಡಂಬನೆಗಳನ್ನು ರಚಿಸಿದ್ದಾನೆ. ರೋಮನರ ಜೀವನದಲ್ಲಿ ತುಂಬಿ ತುಳುಕಾಡುತ್ತಿದ್ದ ಕೆಟ್ಟತನ ಅಪಚಾರ ಮೂರ್ಖತನ ಮಾಲಿನ್ಯಗಳೇ ಇವನ ವಿಷಯ ಸಾಮಗ್ರಿ. ನಿಂದೆ ಖಂಡನೆ ಅಣಕ ಕೊರಚಾಟ ಕಹಿವಾಕ್ಕು ಎಲ್ಲದರಲ್ಲೂ ಇವನು

ಪ್ರವೀಣ. ಇವನ ಹಾಸ್ಯ ಕೂಡ ಸಿಡುಕುಮೋರೆಯ ಗಹಗಹಿಕೆ. ಐಶ್ವರ್ಯವಂತರ ಮೇಲೂ ಇಡೀ ಮಹಿಳಾವರ್ಗದ ಮೇಲೂ ಇವನು ಕೆಂಡಕಾರಿದ್ದಾನೆ. ಒಂದೆರಡು ರೇಖೆಗಳನ್ನೆಳೆದು ರೂಪವೊಂದನ್ನು ನಿರ್ಮಿಸುವ ಬಲ್ಮೆ ಇವನಲ್ಲಿ ಕಂಡುಬರುತ್ತದೆ. ಇವನ ಕವಿತ್ವ ಕಲಾದೃಷ್ಟಿಯಿಂದಲೂ ಉತ್ತಮಮಟ್ಟದ್ದಾಗಿದೆ.

ಟ್ಯಾಸಿಟಸ್, ಜುವೆನಲ್– ಇವರ ಕರಾಳ ವರ್ಣನೆಯ ಸತ್ಯಾಂಶವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೂ ರೋಮನರ ಬಾಳು ಸಂಪೂರ್ಣವಾಗಿ ಕೊಳೆತುಹೋಗಿರಲಿಲ್ಲವೆಂಬುದಕ್ಕೆ ಕಿರಿಯ ಪ್ಲೀನಿ (ಪ್ರ.ಶ.ಪೂ.ಸು. ೬೧–೧೧೩?) ಸಾಕ್ಷ್ಯ ನೀಡಿದ್ದಾನೆ. ಇವನೊಬ್ಬ ಭಾಷಣಕಾರ, ರಾಜಕಾರಣಿ, ತನ್ನ ಕುಶಲಪತ್ರಗಳನ್ನು ೯ ಸಂಪುಟಗಳಲ್ಲಿ ಪ್ರಕಟಿಸಿದ. ಹತ್ತನೆಯದು ಇವನ ಮರಣಾನಂತರ ಹೊರಬಂತು. ಈತನ ಬರೆವಣಿಗೆಯ ವಿಷಯದ ಆಯ್ಕೆ ವೈವಿಧ್ಯಮಯವಾದುದು. ನಿಸರ್ಗ ದೃಶ್ಯ, ಕಾಡುಹಂದಿಯ ಬೇಟೆ, ಪ್ರತಿಮೆಯೊಂದರ ಕೊಳ್ಳಾಟ, ಕನಸೊಂದಕ್ಕೆ ವ್ಯಾಖ್ಯಾನ, ಊಟಕ್ಕೆ ಬಾರದೇ ಹೋದ ಗೆಳೆಯನ ಮೇಲೆ ಆಕ್ಷೇಪ, ಅಲಂಕಾರಶಾಸ್ತ್ರದ ಒಂದು ಸಮಸ್ಯೆ–ಹೀಗೆ ಸಮಯ ಸಂದರ್ಭ ಯಾವ ಸಾಮಗ್ರಿಯನ್ನಾದರೂ ಪ್ಲೀನಿ ಮಥಿಸದೆ ಬಿಟ್ಟಿಲ್ಲ. ಆದರೆ ಇವನ ಬರೆವಣಿಗೆಯಲ್ಲಿ ಹೆಚ್ಚಾಗಿ ಕೃತಕತೆ ಕಂಡುಬರುತ್ತದೆ ಎಂಬ ಅಭಿಪ್ರಾಯವಿದೆ.

೧೩೦ರ ತರುವಾಯ: ಜುವೆನಲ್‌ನ ಅನಂತರ ರೋಮನ್ ಸಾಹಿತ್ಯ ರಾಷ್ಟ್ರೀಯತೆಯನ್ನೂ ಸ್ವಂತಿಕೆಯನ್ನೂ ಘನ ಪ್ರಭಾವವನ್ನೂ ಕಳೆದುಕೊಂಡಿತು. ಲೇಖನ ಚಟುವಟಿಕೆಯೇನೂ ಕಡಿಮೆಯಾಗದೆ ಸುಟಿಯಾಗಿಯೇ ಇತ್ತು. ಆದರೆ ಸೃಜನ ಕಾವ್ಯ ಅಪರೂಪವಾಗುತ್ತ ಬಂತು. ಹಿಂದಿನ ಸಾಹಿತ್ಯದ ಶೇಖರಣೆ, ವ್ಯಾಖ್ಯೆ ವ್ಯಾಖ್ಯಾನ ತಯಾರಿಕೆ ಇತ್ಯಾದಿ ಪರಾವಲಂಬನ ಕಾರ್ಯ ಮಾತ್ರ ಈ ಕಾಲದ ಸಾಹಿತಿಗಳಿಗೆ ಸಾಧ್ಯವಾಯ್ತು. ಈ ನಡುವೆ ಒಬ್ಬಿಬ್ಬರು ಹೆಸರಾಂತ ಸಾಹಿತಿಗಳೂ ಹುಟ್ಟಿಕೊಂಡರು. ಸ್ಯೂಟೋನಿಯಸ್ (೭೦–೧೬೦) ಎಂಬಾತ ಟ್ರೇಜನ್ ಚಕ್ರವರ್ತಿಯ ಕಾರ್ಯದರ್ಶಿಗಳಲ್ಲಿ ಒಬ್ಬನಾಗಿ ಹಳೆಯ ದಾಖಲೆಗಳನ್ನು ನೋಡುವ ಸೌಲಭ್ಯ ಪಡೆದುಕೊಂಡ. ತನ್ನ ಬಿಡುವಿನ ವೇಳೆಯನ್ನೆಲ್ಲ ಪ್ರಾಚ್ಯ ಸಂಶೋಧನೆಗೂ ಜೀವನಚರಿತ್ರೆ ಬರೆಯುವುದಕ್ಕೂ ವಿನಿಯೋಗಿಸಿದ. ಇವನ ಪುಸ್ತಕಗಳಲ್ಲಿ ಬಹುಭಾಗ ನಷ್ಟವಾಗಿದೆ. ಸೀಸರ್ ದೊರೆಗಳ ಜೀವನಚರಿತ್ರೆ ಇವನ ಪ್ರಧಾನ ಕೃತಿ. ಇದರಲ್ಲಿ ಜೂಲಿಯಸ್ ಸೀಸರ್ ಮತ್ತು ಅಗಸ್ಟಸ್‌ನಿಂದ ಡಾಮಿಷಿಯನ್ ತನಕದ ೧೧ ಚಕ್ರವರ್ತಿಗಳ ಜೀವನಚರಿತ್ರೆ ಬಂದಿದೆ. ಪ್ರತಿಯೊಬ್ಬನ ವಂಶ ಜನನ ವೃತ್ತಿಗತಿಗಳನ್ನು ಇಲ್ಲಿ ವಿವರಿಸಿದ್ದಾನೆ. ಆದರೆ ಈ ನಿರೂಪಣೆಯಲ್ಲಿ ಚಾರಿತ್ರಿಕ ದೃಷ್ಟಿಯಾಗಲಿ ಆಳದ ತತ್ತ್ವಗಳ ಗ್ರಹಿಕೆಯಾಗಲಿ ಕಾಣಬರುವುದಿಲ್ಲ. ವಾಸ್ತವಿಕ ಸಂಗತಿಗಳಂತೆಯೇ ದಂತಕಥೆಗಳೂ ಇವನ ಬರೆಹದಲ್ಲಿ ಸ್ಥಾನಪಡೆದುಕೊಂಡಿವೆ. ಸೀಸರನ ಕಣ್ಣಾಲಿಗಳು ಕಪ್ಪಾಗಿ ಮರ್ಮಭೇಧಕವಾಗಿದ್ದವಂತೆ; ಕ್ಲಾಡಿಯಸ್ ಹಿಂದು

ಮುಂದು ನೋಡುತ್ತ ವಕ್ರವಕ್ರವಾಗಿ ಹೆಜ್ಜೆಯಿಡುತ್ತಿದ್ದನಂತೆ; ಅವನ ನಗು ಕತ್ತೆ ಕೆನೆತದಂತಿತ್ತಂತೆ; ನೀರೋವಿಗೆ ಕುದುರೆಗಳೆಂದರೆ ಪ್ರಾಣವಂತೆ; ದೊಡ್ಡವನಾದಮೇಲೂ ದಂತದ ಕುದುರೆ ರಥಗಳೊಂದಿಗೆ ಆತ ಆಟವಾಡುತ್ತಿದ್ದನಂತೆ; ಟೈಟಸ್ ಒಂದು ದಿವಸ ಯಾರಿಗೂ ಏನೂ ಉಪಕಾರಮಾಡಲಿಲ್ಲ. ಆ ರಾತ್ರಿ ಆತ ನಿಟ್ಟುಸಿರುಬಿಟ್ಟು "ಒಂದು ದಿನವನ್ನು ನಾನು ಹಾಳುಮಾಡಿದೆ" ಎಂದನಂತೆ ಇತ್ಯಾದಿ. ಇವನ ಇನ್ನೊಂದು ಪುಸ್ತಕ ಮಹಿಮಾಸ್ಪದರ ಜೀವನಚರಿತ್ರೆ, ಭಾಗಶಃ ಉಪಲಬ್ಧವಾಗಿದೆ. ಅದರ ಒಂದು ಅಧ್ಯಾಯ ವೈಯಾಕರಣಿಗಳನ್ನು ಕುರಿತದ್ದು. ಇದರಲ್ಲಿ ೨೦ ಜನರ ಉಲ್ಲೇಖವಿದೆ. ವ್ಯಾಕರಣವೆಂದರೆ ವಿಶಾಲಾರ್ಥದಲ್ಲಿ ಸಾಹಿತ್ಯದ ಅಧ್ಯಯನವೇ. ಇದರಲ್ಲಿ ಒಂದು ಅಧ್ಯಾಯ ಅಲಂಕಾರಶಾಸ್ತ್ರಕ್ಕೆ ಮೀಸಲಾಗಿದ್ದು ಅದರಲ್ಲಿ ಅಲಂಕಾರಶಾಸ್ತ್ರದ ಬೆಳೆವಣಿಗೆಯನ್ನು ಐದು ಮಂದಿ ಲಾಕ್ಷಣಿಕರ ಕೊಡುಗೆಯನ್ನೂ ವಿವರಿಸಲಾಗಿದೆ. ಆದರೆ ಕವಿಗಳ ಜೀವನಚರಿತ್ರೆಯ ಅಧ್ಯಾಯ ಇವನು ಬರೆದದ್ದಲ್ಲ ಎಂಬ ಅಭಿಪ್ರಾಯವೂ ಇದೆ. ಅಲಸ್ ಜೆಲ್ಲಿಯಸ್ (೧೨೩–೧೬೫) ಎಂಬವನು ತನ್ನ ಮಕ್ಕಳಿಗೋಸ್ಕರ ಚಿಕ್ಕ ಚಿಕ್ಕ ಪ್ರಬಂಧಗಳನ್ನು ಬರೆದು ಅವುಗಳ ಸಂಕಲನಕ್ಕೆ "ಅಟ್ಟಿಕ್ ರಾತ್ರಿಗಳು" ಎಂಬ ಹೆಸರನ್ನು ಕೊಟ್ಟ. ಇದು ಇಪ್ಪತ್ತು ಸಂಪುಟಗಳಲ್ಲಿದ್ದು ಎಂಟನೆಯದೊಂದು ಮಾತ್ರ ಉಪಲಬ್ಧವಿಲ್ಲ.

ಈ ಅವಧಿಯಲ್ಲಿ ವ್ಯಾಕರಣದ ಅಧ್ಯಯನ ವ್ಯಾಖ್ಯಾನ ಕಾರ್ಯಚಟುವಟಿಕೆ ಎಡೆಬಿಡದೆ ನಡೆಯುತ್ತ ಹೋಯ್ತು. ೪ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಈಲಿಯಸ್ ಡೊನೇಟಸ್ ವ್ಯಾಕರಣ ವಿದ್ಯೆಯೆಂಬ ಪುಸ್ತಕವನ್ನು ಬರೆದ. ಅದು ಮಧ್ಯಯುಗದ ಪೂರ್ತಿ ಉಪಯೋಗದಲ್ಲಿತ್ತು. ಪಠ್ಯಪುಸ್ತಕಕ್ಕೆ ಡೊನಾಟ್ ಎಂಬ ಪದ ಪರ್ಯಾಯವಾಯ್ತು. ಕೆಲವು ವ್ಯಾಖ್ಯಾನಗಳನ್ನೂ ಡೊನೇಟಸ್ ರಚಿಸಿದ. ೪ನೆಯ ಶತಮಾನದ ಉತ್ತರಾರ್ಧದಲ್ಲಿದ್ದ ಸರ್ವಿಯಸ್ ಇನ್ನೊಬ್ಬ ಪ್ರಸಿದ್ಧ ವೈಯಾಕರಣಿ ಮತ್ತು ವ್ಯಾಖ್ಯಾನಕಾರ. ಪ್ರ.ಶ.ಪೂ.ಸು. ೪೦೦ರಲ್ಲಿದ್ದ ಮ್ಯಾಕ್ರೋಬಿಯಸ್ ದಾರ್ಶನಿಕ ಲೇಖಕ. ಈತ ಸ್ಯಾಟರ್ನಾಲಿಯ ಎಂಬ ಕೃತಿಯನ್ನು ಬರೆದಿದ್ದಾನೆ. ಇದರಲ್ಲಿ ಏಳು ಅಧ್ಯಾಯಗಳಿವೆ. ಪ್ಲೇಟೊ ಮಾದರಿಯ ಸಂವಾದವಿದು. ತನ್ನ ಇನ್ನೊಂದು ಪುಸ್ತಕದಲ್ಲಿ ಈತ ಸಿಸಿರೊವಿನ ವಾಕ್ಯಗುಚ್ಛಗಳನ್ನು ಉದ್ಧರಿಸಿ, ಆತ್ಮವನ್ನು ಕುರಿತ ಸಮಸ್ಯೆಗಳನ್ನು ದಾರ್ಶನಿಕರ ಮತದಂತೆಯೂ ಗಣಿತ, ಖಗೋಳವಿಜ್ಞಾನಗಳ ವಿವರಣೆಯಂತೆಯೂ ಬಿಡಿಸಿಹೇಳುವ ಪ್ರಯತ್ನವನ್ನು ಕೈಗೊಂಡಿದ್ದಾನೆ. ಆತ್ಮದ ದೈವಿಕತೆಯನ್ನೂ ಅಮರತ್ವ ವನ್ನೂ ಸ್ಥಾಪಿಸುವುದು ಇವನ ಮುಖ್ಯ ಆಕಾಂಕ್ಷೆಯಾಗಿತ್ತು.

ಇದೇ ಕಾಲವಾವಧಿಯ ಇನ್ನೊಬ್ಬ ಪ್ರಸಿದ್ಧ ಲೇಖಕ ಲ್ಯೂಸಿಯಸ್ ಅಪೂಲಿಯಸ್ ಯೌವನದಲ್ಲಿ ಇವನು ಅಲೆಕ್ಸಾಂಡ್ರಿಯಕ್ಕೆ ಹೋಗಿ ವ್ಯಾಧಿಗ್ರಸ್ತನಾದ. ಎಮಿಲಿಯ ಪ್ಯೂಡೆಂಟಿಲ ಎಂಬ ಧನಿಕ ವಿಧವೆ ಇವನನ್ನು ಉಪಚರಿಸಿ, ಮೋಹಗೊಂಡು ಮದುವೆಯಾದಳು. ಅವಳ ಸಂಬಂಧಿಗಳು ಮಾಟಮಂತ್ರದಿಂದ

ಅವಳನ್ನು ಒಲಿಸಿಕೊಂಡನೆಂದು ಇವನ ಮೇಲೆ ವ್ಯಾಜ್ಯ ಹೂಡಿದರು. ಸೂಕ್ತ ಸಮರ್ಥನೆಗಳ ಮೂಲಕ ಅಪೂಲಿಯಸ್ ಗೆದ್ದ. ಇವನಿಗೆ ವಿಜ್ಞಾನ ಮಾಂತ್ರಿಕತೆಗಳಲ್ಲಿ ವಿಶೇಷ ಕುತೂಹಲವಿದ್ದುದೇನೊ ದಿಟ. ನಾನಾ ನಗರಗಳಿಗೆ ಹೋಗಿ ತತ್ತ್ವಶಾಸ್ತ್ರದ ಮೇಲೆ ಲ್ಯಾಟಿನ್‌ನಲ್ಲಿ ಉಪನ್ಯಾಸ ಕೊಡುತ್ತ ಕಾಲತಳ್ಳಿದ. ಹಲವು ಪ್ರಬಂಧಗಳನ್ನು ಬರೆದ. ಅವಾವುದರಿಂದಲೂ ಇವನಿಗೆ ಹೆಸರು ಬರಲಿಲ್ಲ. ಇವನ ಹೆಸರನ್ನು ಸಾಹಿತ್ಯರಂಗದಲ್ಲಿ ಚಿರಸ್ಥಾಯಿಗೊಳಿಸಿದ ಕೃತಿ ರೂಪಾಂತರ ಅಥವಾ ಚಿನ್ನದ ಕತ್ತೆ (ದಿ ಗೋಲ್ಡನ್ ಆ್ಯಸ್). ೧೧ ಅಧ್ಯಾಯಗಳ ರುಚಿರ ಕಾದಂಬರಿಯಿದು. ಒಂದು ಗ್ರೀಕ್ ಪುಸ್ತಕ ಇದಕ್ಕೆ ಆಧಾರ. ಆಖ್ಯಾನದ ನಾಯಕ ಲ್ಯೂಸಿಯಸ್ ಎಂಬ ಗ್ರೀಕ್ ತರುಣ. ದೇಶಾಟನ ಮಾಡುತ್ತ ಮಾಟಶೂನ್ಯಗಳಿಗೆ ಪ್ರಸಿದ್ಧವಾಗಿದ್ದ ಥೆಸ್ಸಲಿಯನ್ನು ಹೊಕ್ಕು, ಮಿಲೊ ಎಂಬಾತನ ಮನೆಯಲ್ಲಿ ತಂಗಿದ. ಅಲ್ಲಿ ಮಿಲೊನ ಪತ್ನಿ ಒಂದು ಮುಲಾಮು ಹಚ್ಚಿಕೊಂಡು ಗೂಬೆಯಾದದ್ದನ್ನು ಕಂಡ. ಚಕಿತನಾಗಿ ತಾನೂ ಅಂಥ ರೂಪಾಂತರ ಕೈಗೊಳ್ಳುವ ಬಯಕೆಯಿಂದ ಗೃಹಸೇವಕಿಯ ಕೈಬೆಚ್ಚಗೆ ಮಾಡಿ ಸ್ವಲ್ಪ ಮುಲಾಮು ತರಿಸಿಕೊಂಡ. ಆದರೆ ಅದು ಬೇರೊಂದು ಮುಲಾಮು; ಹಚ್ಚಿಸಿಕೊಂಡ ಕೂಡಲೆ ಲ್ಯೂಸಿಯಸ್ ಕತ್ತೆಯಾಗಿಬಿಟ್ಟ. ಅಲ್ಲಲ್ಲಿ ಸುತ್ತಾಡಿ ದಾರಿಗಳ್ಳರ ಕೈಗೆ ಸಿಕ್ಕಿದ. ಭಾರ ಹೊತ್ತು ಪೆಟ್ಟು ತಿಂದು ಕುಗ್ರಾಸದಿಂದ ನರಳಿದ. ಅವರಿಂದ ತಪ್ಪಿಸಿಕೊಂಡು ನಡೆದು ಸಿಬೀಲಿ ದೇವತೆಯ ಪೂಜಾರಿಗಳ ಗುಂಪಿಗೆ ಸೇರಿ ಮನುಷ್ಯರಂತೆ ಬುದ್ಧಿಕಾರ್ಯಗಳನ್ನು ಮಾಡಿ ತೋರಿಸುವ ಸರ್ಕಸ್ ಪ್ರಾಣಿಯಾದ. ಪ್ರದರ್ಶನ ಜಂತುವಿನ ಬಾಳಿಗೆ ಬೇಸತ್ತು ಪುನಃ ತಪ್ಪಿಸಿಕೊಂಡು ಓಡಿಹೋಗಿ, ಕೊನೆಗೆ ಐಸಿಸ್ ದೇವತೆಯ ಕರುಣೆಯಿಂದ ಗಾರ್ದಭರೂಪವನ್ನು ಕಳೆದುಕೊಂಡು ಮಾನವನಾಗಿ, ಐಸಿಸ್–ಆಸಿರಸ್ ಪಂಥದ ಭಕ್ತನಾದ ಮನುಷ್ಯನ ಆತ್ಮ ಇಂದ್ರಿಯ ಚಾಪಲ್ಯಕ್ಕೆ ಒಳಗಾಗಿ ತ್ರಾಸಪಟ್ಟು ಕೊನೆಗೆ ಗೆಲ್ಲುವ ತತ್ತ್ವ ಅನ್ಯಾರ್ಥವಾಗಿ ಈ ಕಥೆಯಲ್ಲಿ ನಿರೂಪಿತವಾಗಿದೆ. ನಾಜೂಕಿನದೂ ಚಿತ್ರಮಯವೂ ಆದ ಇವನ ಕಥನಶೈಲಿ ಆಕರ್ಷಕವಾಗಿದೆ. ಮುಖ್ಯಕತೆಯಂತೆಯೇ ಕಳ್ಳರಿಂದ ಹೇಳಿಸಿರುವ ಉಪಕಥೆಗಳು ಕೂಡ ಸ್ವಾರಸ್ಯವಾಗಿವೆ.

ರೋಮಿನ ಕಟ್ಟಕಡೆಯ ಕವಿಯೆಂಬ ಹೆಸರು ಕ್ಲಾಡಿಯಸ್‌ಗೆ ಸಲ್ಲುತ್ತದೆ. ಇವನೊಬ್ಬ ಗ್ರೀಕ್ ಪ್ರಜೆ. ಬಾಲ್ಯವನ್ನು ಅಲೆಕ್ಸಾಂಡ್ರಿಯದಲ್ಲಿ ಕಳೆದು, ರೋಮಿನಲ್ಲಿ ೩೯೫ರಿಂದ ೪೦೪ರ ತನಕ ತಂಗಿದ್ದ. ಚಕ್ರವರ್ತಿಯನ್ನೂ ಅವನ ಸಲಹೆಗಾರರನ್ನೂ ಹೊಗಳುವ ಅಧಿಕೃತ ಪದ್ಯಗಳನ್ನು ಈತ ಬರೆದಿದ್ದಾನೆ. ಮುಖ್ಯವಾಗಿ ಸೈನ್ಯಾಧಿಪತಿ ಸ್ಟಿಲಿಕೊವಿನ ಪ್ರಶಂಸೆ ಮಾಡಿದ್ದಾನೆ. ಗಾತ್ ಬುಡಕಟ್ಟುಗಳ ಮೇಲಣ ಯುದ್ಧಗಳನ್ನು ಕುರಿತು ಆಫ್ರಿಕದಲ್ಲಿ ರಾಷ್ಟ್ರದುರಾಕ್ರಮಣಿಯಾಗಿದ್ದ ಗಿಲ್ಡೊವಿನ ಮೇಲೂ ಕಥನಕಾವ್ಯಗಳನ್ನು ಈತ ಕಟ್ಟಿದ. ಕಲಾತಂತ್ರವೂ ಶಬ್ದಕೋಶವೂ ವಾಗ್ಲಹರಿಯೂ ಇವನ ವಶದಲ್ಲಿದ್ದವು. ಈತ ಅನೇಕ ಚಿಕ್ಕ ದೊಡ್ಡ ಕವನಗಳನ್ನು ರಚಿಸಿದ್ದು 'ವೆರೋನಾದ ಮುದುಕ' ಎಂಬ ಗ್ರಾಮೀಣ ಪದ್ಯ ಪ್ರಖ್ಯಾತಿ ಪಡೆದಿದೆ.

ಮುಂದೆ ೪-೫ನೆಯ ಶತಮಾನಗಳಲ್ಲಿ ಲ್ಯಾಟಿನ್ ಸಾಹಿತ್ಯ ಇಳಿಮುಖ ಗೊಂಡು ದಾರಿದ್ರ್ಯಾವಸ್ಥೆಗೆ ಬಿತ್ತು. ೪ನೆಯ ಶತಮಾನದ ಪ್ರಾರಂಭದಲ್ಲಿ ಕಾನ್‌ಸ್ಟೆಂಟೈನ್ ಚಕ್ರವರ್ತಿ ರೋಮಿನ ಅಧಿಕೃತ ಮತಧರ್ಮವನ್ನು ಕ್ರಿಶ್ಚಿಯನ್ ಪಂಥಕ್ಕೆ ತಿರುಗಿಸಿದ್ದು, ಅಂದಿನ ಸಾಹಿತಿಗಳು ಲೌಕಿಕ ಬರವಣಿಗೆಗೆ ಲ್ಯಾಟಿನ್ ಭಾಷೆಯನ್ನು ಬಿಟ್ಟು ಹೆಚ್ಚುಹೆಚ್ಚಾಗಿ ಗ್ರೀಕನ್ನು ಬಳಸತೊಡಗಿದ್ದು ಲ್ಯಾಟಿನ್ ಸಾಹಿತ್ಯದ ಅವನತಿಗೆ ಕಾರಣವಾದ ಎರಡು ಮುಖ್ಯ ಸಂಗತಿಗಳೆನ್ನಬಹುದು. ಅನಂತರ ಕ್ರಿಶ್ಚಿಯನ್ ಲ್ಯಾಟಿನ್ ಸಾಹಿತ್ಯ ಪ್ರವರ್ಧಮಾನಕ್ಕೆ ಬಂತು. ಈ ಸಾಹಿತ್ಯ ಬೆಳೆವಣಿಗೆಗೆ ಆಗಸ್ಟಿನ್ (೩೫೪-೪೩೦), ಜೆರೋಮ್ (೩೪೦-೪೨೦), ಆಂಬ್ರೋಸ್ (೩೪೦-೩೯೭), ಪ್ರುಡೆಂಟಿಯಸ್ ಮೊದಲಾದವರು ಅಸ್ತಿಭಾರಹಾಕಿದರು. (ಎಸ್.ವಿ.ಆರ್.)

ವರ್ಜಿಲ್ (ಪ್ರ.ಶ.ಪೂ. ೭೦-೧೯)

ಪ್ರಾಚೀನ ರೋಮ್‌ನ ಮಹಾಕವಿ. ಇವನ ಈನಿಯಡ್ ಮಹಾಕಾವ್ಯವನ್ನು ರೋಮ್‌ನ ರಾಷ್ಟ್ರೀಯ ಕಾವ್ಯವೆಂದು ಪರಿಗಣಿಸಲಾಗಿದೆ.

ಉತ್ತರ ಇಟಲಿಯ ಆಂಡೀಸ್ ಎಂಬ ಗ್ರಾಮದಲ್ಲಿ ಪ್ರ.ಶ.ಪೂ. ೭೦ರಲ್ಲಿ ಜನಿಸಿದ. ಪಬ್ಲಿಯಸ್ ವರ್ಜಿಲಿಯಸ್ ಮ್ಯಾರೋ ಇವನ ಪೂರ್ಣ ಹೆಸರು. ಇವನ ಪ್ರಾಥಮಿಕ ಶಿಕ್ಷಣ ಕ್ರೆಮೊನಾ ಹಾಗೂ ಮಿಲಾನ್ ನಗರಗಳಲ್ಲಿ ನಡೆಯಿತು. ಅನಂತರ ತತ್ತ್ವ ಶಾಸ್ತ್ರವನ್ನು ನೇಪಲ್ಸ್‌ನಲ್ಲಿಯೂ ಅಲಂಕಾರ ಶಾಸ್ತ್ರವನ್ನು ರೋಮ್‌ನಲ್ಲೂ ಅಭ್ಯಸಿಸಿದ. ನ್ಯಾಯವಾದಿ ಯಾಗಿರಬೇಕಾದವನು ನ್ಯಾಯಾಲಯದಲ್ಲಿ ನಿಂತು ಮಾತನಾಡಲು ಅತ್ಯಂತ ಹಿಂದೆಗೆಯುತ್ತಿದ್ದ ಕಾರಣ, ಕಾವ್ಯಮಾರ್ಗವನ್ನು ಆರಿಸಿಕೊಂಡ. ಇವನ ಆರಂಭಿಕ ಕವಿತೆಗಳು ಇವನನ್ನು ಖ್ಯಾತನನ್ನಾಗಿಸಿದರೂ ಇವನಿಗೆ ಕಲೆಯಲ್ಲಿದ್ದ ತೀವ್ರ ಆಸಕ್ತಿ ಮುಂದೆ ಈತ ಚಕ್ರವರ್ತಿ ಅಗಸ್ಟಸ್‌ನ ಆಂತರಿಕ ಸಲಹೆಗಾರನಾಗಿ ನೇಮಕಗೊಳ್ಳಲು ಕಾರಣವಾಯಿತು; ಅಲ್ಲದೆ ಇಟಲಿ ಹಾಗೂ ಅದರ ಇತಿಹಾಸವನ್ನು ಬರೆಯುವ ಅವಕಾಶವೂ ಲಭಿಸಿತು.

ಈನಿಯಡ್ ಕಾವ್ಯವನ್ನು ಬರೆದು ಮುಗಿಸುವುದಕ್ಕೆ ಮುಂಚೆಯೇ ಈತ ನಿಧನನಾದ (ಪ್ರ.ಶ.ಪೂ. ೧೯). ದುರದೃಷ್ಟ ಸಂಗತಿಯೆಂದರೆ ತನ್ನ ಕಾವ್ಯದ ಮಹತ್ತ್ವ ಕುರಿತು ಸಂಪೂರ್ಣ ನಂಬಿಕೆಯಿಲ್ಲದ ಈತ ಇದನ್ನು ನಾಶಗೊಳಿಸಬೇಕೆಂಬ ಸೂಚನೆ ಕೊಟ್ಟಿದ್ದ. ಆದರೆ ಚಕ್ರವರ್ತಿ ಅಗಸ್ಟಸ್ ಇದಕ್ಕೆ ಅವಕಾಶವೀಯದೆ ವರ್ಜಿಲನ ಇಬ್ಬರು ಸ್ನೇಹಿತರಿಗೆ ಈ ಮಹಾಕಾವ್ಯವನ್ನು ಪ್ರಕಟಣೆಗೆ ಸಿದ್ಧಗೊಳಿಸಲು ಆದೇಶಿಸಿದ.

ಈತನ ಕವಿತ್ವದ ಮಹತ್ತ್ವವನ್ನು ಸಾಹಿತ್ಯ ಕ್ಷೇತ್ರಕ್ಕೆ ಮೊದಲು ಪರಿಚಯಿಸಿದ್ದು ಇವನ ಎಕಲೋಗಸ್ ಹಾಗೂ ಬ್ಯುಕಲಿಕ್ಸ್ ಕೃತಿಗಳು. ಪ್ರ.ಶ.ಪೂ.ಸು. ೪೨-೩೫ರ ನಡುವೆ ಇವು ರಚಿತವಾದಂಥವು. ಇಲ್ಲಿನ ಮಹತ್ತ್ವದ ೧೦ ಕವಿತೆಗಳು ಕುರಿ ಕಾಯುವವರ ಜೀವನಚಿತ್ರವನ್ನು ಕೊಡುವಂಥವು. ಇವು 'ಪ್ಯಾಸ್ಟೋರಲ್ಸ್' ಎಂದು

ಖ್ಯಾತವಾಗಿವೆ. ಎಕಲೋಗಸ್‌ನಲ್ಲಿ ಈತ ಥಿಯೋಕ್ರಿಟಸ್‌ನ ಗ್ರೀಕ್ ಪ್ಯಾಸ್ಟೋರಲ್ ಕವಿತೆಗಳನ್ನು ಅನುಸರಿಸಿದ್ದಾನೆ. ಆದರೆ ಇವನ ಕೃತಿಯಲ್ಲಿ ಇವು ಇಟಾಲಿಯನ್ ಜೀವನಶೈಲಿಯನ್ನು ಪ್ರಕಟಿಸುತ್ತವೆ.

ಇವನು ತನ್ನ 'ಜಾರ್ಜಿಕಸ್' ಕೃತಿಯ ಕವಿತೆಗಳನ್ನು ಬರೆಯಲು ಏಳು ವರ್ಷ ತೆಗೆದುಕೊಂಡ. ಇದು ಪ್ರ.ಶ.ಪೂ. ೨೯ರಲ್ಲಿ ಪ್ರಕಟವಾಯಿತು. ಈ ಕವಿತೆಗಳು ರೈತರನ್ನುದ್ದೇಶಿಸುವಂಥವು. ಬೆಳೆ, ಪೈನ್, ಆಲಿವ್ ಮರಗಳು, ಪಶು ಹಾಗೂ ಕುದುರೆ ಸಾಕಣಿಕೆ, ಜೇನು ಕೃಷಿ ಮುಂತಾದುವನ್ನು ಕುರಿತ ಮಾಹಿತಿ ಇಲ್ಲಿದೆ. ಆದರೆ ಇವು ಕೇವಲ ಮಾಹಿತಿ ಸಂಗ್ರಹವಾಗದೆ ಇಟಲಿಯ ಗ್ರಾಮೀಣ ಬದುಕಿನ ಸುಂದರ ಚಿತ್ರಣಗಳಾಗಿವೆ. ಮಾನವನ ಬದುಕಿನ ವಿಭಿನ್ನ ಮುಖಗಳನ್ನೂ ಇವು ಪರಿಚಯಿಸುತ್ತವೆ.

ಇವನ ಈನಿಯಡ್ ಮಹಾಕಾವ್ಯ ರೋಮ್‌ನ ಹಲವು ಹತ್ತು ಕೋನಗಳನ್ನು ನೀಡುತ್ತದೆ. ಅದರ ಮೊದಲ ಆರು ಅಧ್ಯಾಯಗಳು ಹೋಮರ್‌ನ ಮಹಾಕಾವ್ಯಗಳಾದ ಆಡಸ್ಸಿಯಿಂದಲೂ ಅನಂತರದ ಆರು ಅಧ್ಯಾಯಗಳು ಇಲಿಯಡ್‌ನಿಂದಲೂ ನೇರ ಪ್ರಭಾವಕ್ಕೆ ಒಳಗಾಗಿವೆ. ಪ್ರಾಚೀನ ರೋಮ್‌ನ ಆರಂಭ ಕಾಲದಿಂದ ಈತನ ಕಾಲದವರೆಗಿನ ಬದುಕಿನ ಚಿತ್ರಣ ಇಲ್ಲಿ ದೊರೆಯುತ್ತದೆ. ಗ್ರೀಕರ ಆಕ್ರಮಣದಿಂದ ರೋಮ್ ನಗರವನ್ನು ರಕ್ಷಿಸಿದ ವೀರ ಟ್ರೋಜನ್ ಅಥವಾ ಈನಿಯಸ್‌ನ ವರ್ಣನೆಯನ್ನು ಈ ಮಹಾಕಾವ್ಯ ನೀಡುತ್ತದೆ. ರೋಮನ್ನರ ದೃಷ್ಟಿಯಲ್ಲಿ ದೈವಿಕ ಶಕ್ತಿಗಳುಳ್ಳ ವೀರ ಅಗಸ್ಟಸ್ ಪ್ರ.ಶ.ಪೂ. ೪೦–೩೦ ರವರೆಗಿನ ಅಂತರ್ಯುದ್ಧದಿಂದ ರೋಮನ್ನು ಉಳಿಸಿದ ಕಾರಣ ಅಗಸ್ಟಸ್‌ನಿಗೆ ವಿಶೇಷ ಸ್ಥಾನಮಾನವಿದೆ. ಈನಿಯಸ್ ಅಗಸ್ಟಸ್‌ನ ಕುಲಬಾಂಧವನಾದ ಕಾರಣ ಪರಂಪರಾನುಗತವಾದ ದೈವಿಕ ಶಕ್ತಿ ಅವನಲ್ಲಿದೆಯೆಂದು ಈ ಕಾವ್ಯ ನಂಬುತ್ತದೆ.

ರೋಮನ್ ಶಾಲೆಗಳಲ್ಲಿ ಇವನ ಕೃತಿಗಳನ್ನು ಪಠ್ಯಗಳನ್ನಾಗಿಸಲಾಗಿದೆ. ಈನಿಯಡ್ ಮಹಾಕಾವ್ಯವನ್ನು ರೋಮನ್ ದೇವಾಲಯಗಳಲ್ಲಿ ಪವಿತ್ರ ಕೃತಿಯೆಂದು ಆರಾಧನೆಗಿಡಲಾಗಿದೆ. ಅನಂತರದ ಕಾಲದಲ್ಲಿ ಕ್ರೈಸ್ತ ಕವಿಗಳು ಕ್ರೈಸ್ತ ನಂಬಿಕೆಗಳನ್ನು ಪ್ರಚಾರ ಮಾಡಲು ಇವನ ಕವಿತೆಗಳನ್ನು ಉಲ್ಲೇಖಿಸುವ ಅಭ್ಯಾಸ ಮಾಡಿಕೊಂಡರು. ಮಧ್ಯಯುಗದಲ್ಲಿ ಇವನನ್ನು ಸಂತಕವಿಯೆಂದೂ ಆರಾಧಿಸಲಾಗಿದೆ. ಮುಂದೆ ಕ್ರಿಸ್ತ ಹುಟ್ಟುವುದನ್ನು ಈತ ಮೊದಲೇ ಕಂಡಿದ್ದ ಹಾಗೂ ಅವನೊಬ್ಬ ಭವಿಷ್ಯ ಬಲ್ಲ ಗಾರುಡಿಗನಾಗಿದ್ದ ಎಂದೂ ನಂಬಲಾಗಿದೆ.

ಪ್ರಪಂಚದ ಮತ್ತೊಬ್ಬ ಮಹಾನ್ ಕವಿಯಾದ ಡಾಂಟೆ ತನ್ನ 'ದ ಡಿವೈನ್ ಕಾಮಿಡಿ' (೧೩೨೧)ಯಲ್ಲಿ ಈನಿಯುಡ್‌ನ ೬ನೆಯ ಅಧ್ಯಾಯವನ್ನು ಬಳಸಿಕೊಂಡಿದ್ದಾನೆ. ಪುನರುತ್ಥಾನ ಕಾಲದಲ್ಲಿ ಇಂಗ್ಲೆಂಡ್, ಇಟಲಿ ಹಾಗೂ ಫ್ರಾನ್ಸ್ ಸಾಹಿತ್ಯ ಕ್ಷೇತ್ರದಲ್ಲಿ ಇವನ ಎಕಲೋಗಸ್ ಕೃತಿ ಅಲ್ಲಿನ ಪ್ಯಾಸ್ಟೋರಲ್ ಕವಿತೆಗಳನ್ನು

ಪ್ರಭಾವಿಸಿದೆ. ಆಂಗ್ಲ ಕವಿಗಳಿಗೆ ಆ ಕಾಲಕ್ಕೆ ಈತ ಒಬ್ಬ ಆದರ್ಶ ಕವಿ. ಜಾನ್ ಮಿಲ್ಟನ್ ತನ್ನ 'ಪ್ಯಾರಡೈಸ್ ಲಾಸ್ಟ್' (೧೬೬೭)ನಲ್ಲಿ ಈತನನ್ನು ಅನುಕರಿಸಿದ್ದಾನೆ. ೧೬೬೦ರಲ್ಲಿ ಜಾನ್ ಡ್ರೈಡನ್ ಈನಿಯಡ್ ಕಾವ್ಯವನ್ನು ಇಂಗ್ಲಿಷ್‌ಗೆ ಅನುವಾದಿಸಿದ. ೧೮೦೦ರ ಅನಂತರದ ಕವಿಗಳಾದ ವರ್ಡ್ಸ್‌ವರ್ತ್, ಲಾರ್ಡ್‌ಟೆನಿಸನ್ ಹಾಗೂ ೧೯೦೦ರ ಅನಂತರದ ಮಹಾನ್ ವಿಮರ್ಶಕ ಟಿ.ಎಸ್. ಎಲಿಯಟ್‌ನಂಥವರೂ ಇವನ ಕಾವ್ಯದ ಪ್ರಭಾವಕ್ಕೊಳಗಾಗಿದ್ದಾರೆ.

ಈನಿಯಡ್

ಲ್ಯಾಟಿನ್ ಭಷೆಯ ಮಹಾಕಾವ್ಯ. ವರ್ಜಿಲ್ ಕವಿ ಅದರ ಕರ್ತೃ. ಪರಾತನ ಭಾರತಕ್ಕೆ ರಾಮಾಯಣ ಮಹಾಭಾರತಗಳು, ಗ್ರೀಸಿಗೆ ಹೋಮರನ ಇಲಿಯಡ್ ಮತ್ತು ಒಡೆಸ್ಸಿ, ಮಧ್ಯಯುಗದ ಇಟಲಿಗೆ ಡಾಂಟೆಯ ಡಿವೈನ್ ಕಾಮೆಡಿ, ಪ್ಯೂರಿಟನ್ ಯುಗದ ಇಂಗ್ಲೆಂಡಿನ ಮಿಲ್ಟನ್ನನ ಪ್ಯಾರಡೈಸ್‌ಲಾಸ್ಟ್ ಇದ್ದಂತೆ ಪ್ರಾಚೀನ ರೋಮಿನ ಸಾಮ್ರಾಜ್ಯವೈಭವದ ಯುಗಕ್ಕೆ ಈ ಕೃತಿ ಕನ್ನಡಿ. ವರ್ಜಿಲನ ಕಾಲ ಪ್ರ.ಶ.ಪೂ. ೭೦-೧೯. ಅಂದಿನ ರೋಮನ್ ಚಕ್ರವರ್ತಿ ಆಗಸ್ಟಸ್ ಸೀಸ್ಸರ್. ಅಗಸ್ಟಸ್ ಮತ್ತು ಅವನ ಹಿರಿಯ ಬಂಧು ಜ್ಯೂಲಿಯಸ್ ಸೀಸರರು ರೋಮಿನ ಸಂಸ್ಥಾಪಕನೆಂದು ಪ್ರತೀತಿಯಿದ್ದ ಈನಿಯಸನ ವಂಶದವರೆಂದು ನಂಬಿಕೆ ವರ್ಜಿಲ್ ಹುಟ್ಟುವುದಕ್ಕೆ ಎಷ್ಟೋ ತಲೆಮಾರುಗಳ ಹಿಂದಿನಿಂದಲೂ ಇತ್ತು. ಈನಿಯಸ್ ಹೋಮರನ ಟ್ರಾಮರನ ಟ್ರಾಯ್ ನಗರದ ವೀರರಲ್ಲೊಬ್ಬ. ಅವನ ತಂದೆ ಅಂಖೈಸೀಸ್; ತಾಯಿ ಗ್ರೀಕರ ಪ್ರಮುಖದೇವತೆಗಳಲ್ಲಿ ಒಬ್ಬಳಾದ ವೀನಸ್. ಈನಿಯಸ್ ಮಗ ಆಸ್ಕೇನಿಯಸ್ ಅಥವಾ ಜ್ಯೋಲಸ್. ಈ ಜ್ಯೂಲಿಯಸ್ ಮತ್ತು ಅಗಸ್ಟರ ಮನೆತನ ಒಗೆದು ಬಂದಿದ್ದುದೆಂಬ ಐತಿಹ್ಯವಿದ್ದಿತಾದ್ದರಿಂದ ವರ್ಜಿಲ್ ಆ ಕಥೆಯನ್ನು ನಿರೂಪಿಸಿದ. ಅಗಸ್ಟಸನ ರಾಜ್ಯವನ್ನೂ ರಾಜ್ಯಾಡಳಿತವನ್ನು ಸಮರ್ಥಿಸುವುದೇ ಅವನ ಉದ್ದೇಶವಾಗಿತ್ತು. ತನ್ನನ್ನು ಮತ್ತು ತನ್ನ ಕುಲದವರನ್ನು ಕುರಿತು ಕಾವ್ಯ ಲೇಖನಮಾಡಬೇಕೆಂಬ ಅಗಸ್ಟಸನೇ ವರ್ಜಿಲನಿಗೆ ಸಲಹೆ ಮಾಡಿದನೆಂಬ ನಂಬಿಕೆಯೂ ಉಂಟು. ವರ್ಜಿಲ್ ಗತಿಸಿದಾಗ ಕಾವ್ಯವನ್ನುಇನ್ನೂ ಪೂರ್ತಿಗೊಳಿಸಿ ರಲಿಲ್ಲ. ಅದನ್ನು ನಾಶಪಡಿಸಬೇಕೆಂಬ ಅಪೇಕ್ಷೆಯನ್ನು ತನ್ನ ಮರಣಕಾಲದಲ್ಲಿ ವ್ಯಕ್ತಪಡಿಸಿದ. ಆದರೆ ಅಗಸ್ಟಸ್ ಅದಕ್ಕೆ ಅವಕಾಶಕೊಡದೆ ಅದನ್ನು ಪ್ರಕಟಿಸಿದ. ಅಪೂರ್ಣಕೃತಿಯಾದರೂ ಅದಕ್ಕೆ ಪ್ರೇರಕವಾಗಿದ್ದ ದೇಶಭಕ್ತಿ ರಾಜಭಕ್ತಿಗಳ ಕಾರಣ ಅದಕ್ಕೆ ವಿದ್ಯಾವಂತರಾದ ಸಮಕಾಲೀನ ರೋಮನರಲ್ಲರಿಂದಲೂ ಮೆಚ್ಚಿಗೆ ದೊರೆಯಿತು. ಬಹು ಬೇಗ ಅದು ಪ್ರಖ್ಯಾತ ಕೃತಿಯಾಯಿತು. ಚರಿತ್ರೆಯ ಪುಟಗಳಲ್ಲಿ ಹುದುಗಿ ಹೋಗಿದ್ದ ರೋಮನ್ ಸಮ್ರಾಜ್ಯದ ವೈಭವವನ್ನು ಎತ್ತಿತೋರಿ, ವರ್ಣಿಸಿ ಜಗತ್ತಿಗೆ ಸಾರಿದ ಈ ಕಲಾಕೃತಿ ರೋಮಿನ ರಾಷ್ಟ್ರಕಾವ್ಯವಾದುದಲ್ಲದೆ ಪ್ರಪಂಚದ ಅತ್ಯಂತ ಪ್ರಸಿದ್ಧವೂ ಪ್ರಭಾವಶಲಿಯೂ ಆದ ರಚನೆಗಳಲ್ಲಿ ಒಂದೆಂದು ಪರಿಗಣಿತವಾಗಿ ಕೀರ್ತಿಪಡೆದಿದೆ.

ಈನಿಯಡ್ ಹನ್ನೆರಡು ಖಂಡಗಳ ಕಾವ್ಯ. ಮೊದಲನೆಯ ಖಂಡದಲ್ಲಿ ಈನಿಯಸ್ ಮತ್ತು ಅವನ ಟ್ರೋಜನ್ (ಟ್ರಾಮ್ ನಗರದ) ಅನುಚರರು ಬಿರುಗಾಳಿಯ ಆಘಾತಕ್ಕೆ ಸಿಕ್ಕು ಆಫ್ರಿಕದ ಆರ್ಥೇಜಿನ ಕಡೆಗೆ ಹೋಗುತ್ತಾರೆ. ಆಗ ಅಲ್ಲಿದ್ದ ರಾಣಿ ಡೀಢೊ ವಿಧವೆ. ಅವಳು ಅವರನ್ನು ಆದರದಿಂದ ಬರಮಾಡಿಕೊಂಡು ಸತ್ಕರಿಸುತ್ತಾಳೆ. ಎರಡನೆಯ ಖಂಡದಲ್ಲಿ ಈನಿಯಸ್ ಅವಳಿಗೆ ಟ್ರೋಜನ್ ಯುದ್ಧದ ಸಂಗತಿಗಳನ್ನೂ ಅಲ್ಲಿ ನಡೆದ ಮರದ ಕುದುರೆಯ ಪ್ರಸಂಗವನ್ನೂ ಶತ್ರುಗಳು ಊರಿಗೆ ಬೆಂಕಿಯಿಟ್ಟು ನಾಶಪಡಿಸಿದ್ದನ್ನೂ ತಾನು ವೃದ್ಧ ತಂದೆ ಅಂಖೈಸೀಸನನ್ನು ಹೊತ್ತುಕೊಂಡು ಮಗನೊಡನೆ ಇತರ ಅನುಚರರನೇಕರೊಡನೆಯೂ ಉರಿಯುತ್ತಿದ್ದ ನಗರದಿಂದ ಹೊರಬಿದ್ದುದನ್ನು ವರ್ಣಿಸುತ್ತಾನೆ. ಅವರು ಬೆಂಕಿಬಿದ್ದಿದ್ದ ಪಟ್ಟಣದಿಂದ ತಪ್ಪಿಸಿಕೊಳ್ಳವ ಸಂದರ್ಭದಲ್ಲಿ ಅವನ ಹೆಂಡತಿ ಅಗ್ನಿಜ್ವಾಲೆಗೆ ಆಹುತಿಯಾದಳೆಂದು ತಿಳಿದುಬರುತ್ತದೆ. ಮೂರನೆಯ ಖಂಡದಲ್ಲಿ ಈನಿಯಸ್ ತಾನು ಮೆಡಿಟರೇನಿಯನ್ ಸಮುದ್ರದ ಮೇಲೆ ಪಶ್ಚಿಮಾಭಿಮುಖಿಯಾಗಿ ನೌಕಾಯಾನ ಮಾಡುತ್ತಿರುವಾಗ ನಡೆದ ಘಟನೆಗಳನ್ನು ಒಂದೊಂದಾಗಿ ವಿವರಿಸುತ್ತಾನೆ. ಅವುಗಳಲ್ಲಿ ಮುಖ್ಯವಾದುದು ಅವನ ತಂದೆ ಆಂಖೈಸೀಸನ ಮರಣ. ನಾಲ್ಕನೆಯ ಮತ್ತು ಐದನೆಯ ಖಂಡದಲ್ಲಿ ಡೀಡೊ ಈನಿಯಸ್ಸಿನಲ್ಲಿ ಅನುರಕ್ತಳಾಗಿ ಅವನನ್ನು ತನ್ನ ಬಳಿಯೇ ಉಳಿಸಿಕೊಳ್ಳಲು ಮಾಡುವ ವಿಫಲಪ್ರಯತ್ನದ ಕರುಣಜನಕವಾದ ಕಥೆ ನಿರೂಪಿತವಾಗಿದೆ. ದೇವತೆಗಳ ಪ್ರೀತಿಗೂ ಅನುಗ್ರಹಕ್ಕೂ ಪಾತ್ರನಾದ ಈನಿಯಸ್ ಶಾಶ್ವತ ಕೀರ್ತಿಶಾಲಿಯಾಗಬೇಕಾದರೆ ಕಾಥೇಜನ್ನು ಬಿಟ್ಟು ಇಟಲಿಗೆ ಬರಬೇಕು. ಆದಕಾರಣ ಅವರು ಅವನಲ್ಲಿ ಕರ್ತವ್ಯದ ಅರಿವನ್ನು ಎಚ್ಚರಿಸಿ ಅವನ್ನು ಅಲ್ಲಿಂದ ಹೊರಡಿಸುತ್ತಾರೆ. ಈನಿಯಸ್ ಕಾರ್ಥೇಜನ್ನು ಬಿಟ್ಟು ಹೊರಡುತ್ತಾನೆ. ಈ ಸಂಗತಿ ತಿಳಿದಾಗ ಡೀಡೊ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಮುದ್ರದ ದಂಡೆಯಲ್ಲೇ ನಿರ್ಮಿತವಾದ ಚಿತೆಯ ಮೇಲೆ ಅವಳ ದೇಹ ದಹನವಾಗುತ್ತದೆ. ಸಾಯುವ ಮೊದಲು ಡೀಡೊ ತನ್ನ ದೇಶದವನೊಬ್ಬನ ಮುಂದೆ ರೋಮಿನ ಮೇಲೆ ಸೇಡು ತೀರಿಸಿಕೊಳ್ಳುವುದಾಗಿ ಹೇಳುತ್ತಾಳೆ. ರೋಮಿನ ಚರಿತ್ರೆಯಲ್ಲಿ ಕಾರ್ಥೇಜಿನ ಹ್ಯಾನಿಬಾಲನೊಡನೆ ನಡೆದ ಹೋರಾಟಗಳಿಗೆ ವರ್ಜಿಲ್ ಇಲ್ಲಿ ಚಮತ್ಕಾರವಾಗಿ ತಳಹದಿ ಹಾಕಿದ್ದಾನೆ. ಪುರಾಣದ ಪ್ರಸಂಗಗಳಿಗೂ ಚಾರಿತ್ರಿಕ ಘಟನೆಗಳಿಗೂ ಹೀಗೆ ಸಂಬಂಧವನ್ನು ಕಲ್ಪಿಸಿ ತನ್ಮೂಲಕ ಕವಿ ತನ್ನ ಕಾವ್ಯದ ಅರ್ಥವನ್ನೂ ಬೆಲೆಯನ್ನೂ ಹೆಚ್ಚಿಸಿದ್ದಾನೆ. ವರ್ಜಿಲ್ ನಿರೂಪಿಸಿರುವ ಈನಿಯಸ್ ಮತ್ತು ಡೀಡೊರ ಪ್ರಣಯ ಕಥೆ ಯುರೋಪಿನ ರಮ್ಯಸಾಹಿತ್ಯದ ಅತ್ಯಂತ ಪ್ರಸಿದ್ಧ ಕಥೆಗಳಲ್ಲಿ ಒಂದು.

ಕಡಲಯಾನ ಮಾಡುತ್ತಿದ್ದಾಗ ಗತಿಸಿದ ತಂದೆಯ ಅಂತಿಮ ಸಂಸ್ಕಾರಗಳನ್ನು ನಡೆಸಲು ಈನಿಯಸ್ ಇಟಲಿಯನ್ನು ಸೇರುವವರಗೂ ಕಾಯಬೇಕಾಗುತ್ತದೆ. ಅಲ್ಲಿ ಅವನು ಅವನ್ನೆಲ್ಲಾ ಮುಗಿಸಿದ ಮೇಲೆ ತಂದೆಯನ್ನು ಕಂಡು ಬರಲು ಅಧೋಲೋಕಕ್ಕೆ

ತೆರಳುತ್ತಾನೆ. ಅಲ್ಲಿ ಅವನಿಗೆ ಮುಂದೆ ಬರಲಿರುವ ರೋಮಿನ ವೀರರ ಮುಂಗಾಣ್ಕೆ ಲಭಿಸುತ್ತದೆ. ಅವರು ಸಾಧಿಸಲಿರುವ ಮಹತ್ಕಾರ್ಯಗಳ ಮುನ್ನರಿವೂ ಅವನಿಗುಂಟಾಗುತ್ತದೆ. ಆಂಖೈಸೀಸನ ಬಾಯಿಂದ ಬರುವ ಮಾತುಗಳು ಪ್ರಸಿದ್ಧವಾಗಿವೆ: ರೋಮನರೇ, ಇದನ್ನು ನೆನಪಿನಲ್ಲಿಟ್ಟುಕೊಳ್ಳಿ. ನೀವು ಇತರ ರಾಷ್ಟ್ರಗಳ ಮೇಲೆ ಅಧಿಕಾರ ನಡೆಸುವಿರಿ. ಶಾಂತಿಸ್ಥಾಪನೆಯೇ ನಿಮಗೆ ವಾಡಿಕೆಯಾಗುವ ಕೆಲಸ. ನೀವು ನಿಮ್ಮನ್ನೆದುರಿಸಲು ಸೋತವರನ್ನು ಕಾಪಾಡುವಿರಿ. ದುರಹಂಕಾರಿಗಳನ್ನು ಬಗ್ಗಿಸಿ ಸದೆಬಡಿವಿರಿ.

ಏಳನೆಯ ಖಂಡದಲ್ಲಿ ಲ್ಯಾಟಿನಿ ಪ್ರದೇಶದ ದೊರೆ ಲ್ಯಾಟಿನಸ್ ಈನಿಯಸ್ಸನನ್ನು ಕರೆಸಿಕೊಂಡು ಸತ್ಕರಿಸಿ ಅವನಿಗೆ ತನ್ನ ಮಗಳನ್ನು ಕೊಟ್ಟು ಮದುವೆಮಾಡುವುದಾಗಿ ಹೇಳುತ್ತಾನೆ. ಆದರೆ ಹುಡುಗಿಯ ತಾಯಿ ಅವಳನ್ನು ಟರ್ನಸ್ ಎಂಬುವನಿಗೆ ಕೊಡುವುದಾಗಿ ವಾಗ್ದಾನ ಮಾಡಿದ್ದಾಳೆ. ಟರ್ನಸ್ ದೊಡ್ಡದೊಂದು ಸೇನೆಯನ್ನು ಕಟ್ಟಿ ಈನಿಯಸ್ಸನನ್ನು ವಿರೋಧಿಸುತ್ತಾನೆ. ಇರ್ಕಡೆಯವರೋ ಮಾಡುವ ಸಿದ್ದತೆ ಎಂಟನೆಯ ಖಂಡದ ವಸ್ತು. ಸನ್ನಿವೇಶ ಹೀಗಿರುವಾಗ ಈನಿಯಸ್ ಬರುತ್ತಾನೆ. ಈನಿಯಸ್ ಇಲ್ಲದಿರುವ ಸಮಯವನ್ನೇ ಕಾಯುತ್ತಿರುವ ಟರ್ನಸ್ ಟ್ರೋಜನರ ಶಿಬಿರಕ್ಕೆ ದಾಳಿಯಿಟ್ಟು ಬೆಂಕಿ ಹಚ್ಚುತ್ತಾನೆ. ಇದು ನಡೆವುದು ಒಂಬತ್ತನೆಯ ಖಂಡದಲ್ಲಿ ಹತ್ತು–ಹನ್ನೊಂದನೆಯ ಖಂಡಗಳಲ್ಲಿ ಟರ್ನಸ್ಸನ ಸೇನೆಗೂ ಈನಿಯಸ್ಸನ ಕಡೆಯುವರೆಗೂ ನಡೆಯುವ ಯುದ್ದದ ವರ್ಣನೆ ಬರುತ್ತದೆ. ಹನ್ನೆರಡನೆಯ ಖಂಡ ಈನಿಯಸ್ಸಗೂ ಟರ್ನಸ್ಸಿಗೂ ನಡೆಯುವ ದ್ವಂದ್ವಯುದ್ಧದ ವರ್ಣನೆ. ಆ ಯುದ್ದದಲ್ಲಿ ಟರ್ನಸ್ ಮೃತನಾಗುತ್ತಾನೆ. ರೋಮ್ ರಾಜ್ಯದ ಸ್ಥಾಪನೆಗೂ ರೋಮಿನ ಹಿರಿತನಕ್ಕೂ ಹಾದಿ ಸುಗುಮವಾಗುತ್ತದೆ.

ಇದು ಈನಿಯಡಿನ ಕಥಾವಸ್ತು. ಅದರ ಮೊದಲ ಆರು ಖಂಡಗಳು ಹೋಮರನ ಆಡಿಸ್ಸಿಯ ಮೊದಲ ಭಾಗದ ಅನುಕರಣೆ. ಅಲ್ಲಿರುವಂತೆಯೇ ಇಲ್ಲೂ ಕಥಾನಾಯಕ ಅನೇಕ ಅಡಚಣೆಗಳನ್ನು ಎದುರಿಸಿ ಗೆದ್ದು ಏಳು ವರ್ಷಗಳ ಅಲೆದಾಟದ ಆನಂತರ ಹತ್ತು ವರ್ಷಗಳಾದ ಮೇಲೆ ಆಡಿಸ್ಸಿಯಸ್ ತನ್ನ ತೌರನಾಡು ಇಥಾಕಕ್ಕೆ ಹಿಂತಿರುಗಿ ಬರುಮಂತೆ – ಇಟಲಿಗೆ ಬರುತ್ತಾನೆ. ಕೊನೆಯ ಆರು ಖಂಡಗಳಲ್ಲಿ ಹೋಮರನ ಇಲಿಯಡ್ ಕಾವ್ಯದ ಯುದ್ಧ ಟ್ರೋಜನರನ್ನು ಸೋಲಿಸಿದ್ದಂತೆ ಲೇಷಿಯಂ ಕದನದಲ್ಲಿ ಟ್ರೋಜನರು ಇಟಲಿಯವರನ್ನು ಸೋಲಿಸುತ್ತಾರೆ. ಹೀಗೆ ಗ್ರೀಕ್ ಕೃತಿಗಳೆರಡರ ಭಾಗಗಳನ್ನು ತೆಗೆದುಕೊಂಡು ಅವುಗಳ ಮಾದರಿಯ ಮೇಲೆ ತನ್ನದೇ ಆದ ವಾಕ್ಯವಿರುವ ನೂತನ ಕೃತಿಯೊಂದನ್ನು ರಚಿಸುವ ಪದ್ಧತಿ ಲ್ಯಾಟಿನ್ ಭಾಷೆಯಲ್ಲಿ ವರ್ಜಿಲನಿಗೆ ಮುನ್ನವೇ ಬೆಳೆದಿತ್ತು. ಆದರೆ ಈನಿಯಡ್ ಕೇವಲ ತೇಪೆಯ ಕಲಸವೇನೂ ಅಲ್ಲ. ಎಲ್ಲೆಲ್ಲೂ ದೊರೆತ ಮನ್ನಣೆಯೇ ಇದಕ್ಕೆ ಸಾಕ್ಷಿ. ರಚಿತವಾದಂದಿನಿಂದಲೂ ಅದು ಎಲ್ಲ ವರ್ಗದ ಜನರ ಗಮನವನ್ನೂ ಸೆಳೆದು

ಎಲ್ಲರ ಮೆಚ್ಚಿಗೆಗೂ ಪಾತ್ರವಾಯಿತು. ಇತರ ರೋಮನ್ ಕವಿಗಳಿಗೆ ಮಾತ್ರವಲ್ಲದೆ ಡಾಂಟೆ, ಸ್ಪೆನ್ಸರ್, ಮಿಲ್ಟನ್ ಮೊದಲಾದ ಬೇರೆಯ ದೇಶಗಳ ಕವಿಗಳಿಗೂ ಮಾದರಿಯಾಯಿತು. ಒಂದು ಕೃತಿ ಪಂಡಿತಪಾಮಾಮರರೆಲ್ಲರಿಗೂ ಪ್ರಿಯವಾಗಬೇಕಾದರೆ ಅದರಲ್ಲಿ ನಿಜವಾದ ಸತ್ತ್ವವಿರಲೇಬೇಕು. ಈನಿಯಡಿನಲ್ಲಿ ಹಲವು ದೋಷಗಳನ್ನು ಕೆದಕಿತೋರಿಸಲು ಸಾಧ್ಯ. ಆದರೂ ಅದು ಜಗತ್ತಿನ ಅತ್ಯುತ್ತಮ ಮಹಾಕಾವ್ಯಗಳಲ್ಲಿ ಒಂದೆಂಬುದು ನಿಸ್ಸಂದೇಹ.

ಮಹಾಕಾವ್ಯಗಳಲ್ಲಿ ಎರಡು ಬಗೆಯುಂಟು. ಆನತೆಯಿಂದ ಮೂಡಿಬಂದ ಕಾವ್ಯ ಒಂದು, ಕವಿಯೊಬ್ಬನು ಸೃಷ್ಟಿಸಿದ ಕಾವ್ಯ ಇನ್ನೊಂದು. ಸಾಮಾನ್ಯವಾಗಿ ಮೊದಲನೆಯ ವರ್ಗದ ಕಾವ್ಯ ಇಂಥದೇ ನಿಷ್ಕೃಷ್ಟವಾಗಿ ಹೇಳುವುದು ಕಷ್ಟ ಎರಡನೆಯ ಜಾತಿಯ ಕಾವ್ಯ ಚಾರಿತ್ರಿಕ ಕವಿಯೊಬ್ಬನಿಂದ ಯಾವುದೋ ಒಂದು ಯುಗದಲ್ಲಿ ಯಾವುದೋ ಒಂದು ಉದ್ದೇಶದಿಂದ ರಚಿತವಾಗಿರುತ್ತದೆ. ಮೊದಲನೆಯ ತರದ ಕಾವ್ಯದಲ್ಲಿರುವಂತೆ ಇದರಲ್ಲಿ ಒಂದು ಯುದ್ಧದ ಮತ್ತು ಆ ಯುದ್ಧದಲ್ಲಿ ಪ್ರಸಿದ್ಧರಾದ ವೀರರ ವರ್ಣನೆಯಷ್ಟೇ ಇರುವುದಿಲ್ಲ. ಕವಿಯ ಮನೋಧರ್ಮ, ಆಲೋಚನೆಗಳು ಇದರಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿರುತ್ತದೆ. ಈನಿಯಡ್ ಈ ಎರಡನೆಯ ವರ್ಗಕ್ಕೆ ಸೇರಿದ ಮಹಾಕಾವ್ಯ. ಇದರ ರಚನೆಯಲ್ಲಿ ಉದ್ದೇಶ ರೋಮಿನ ಹಿರಿಮೆಯನ್ನು ಎತ್ತಿ ಹಿಡಿಯುವುದಾಗಿತ್ತು. ಹಿಂದಿನಿಂದಲೂ ದೇವಾದಿ ದೇವತೆಗಳು ರೋಮಿನ ಔನ್ನತ್ಯ ಸಾಧನೆಯಲ್ಲಿ ಆಸಕ್ತರಾಗಿದ್ದರೆಂಬುದನ್ನೂ ರೋಮನ್ ಸಮ್ರಾಜ್ಯದ ಹೆಮ್ಮರ ಬಹುಕಾಲದ ಬೆಳೆವಣಿಗೆಯ ಫಲವೆಂಬುದನ್ನೂ ತೋರಿಸುವುದಾಗಿತ್ತು. ಅದನ್ನು ಬರೆಯುವಾಗ ಅವನು ಹೋಮರನ ಮಹಾಕಾವ್ಯದ ಸಂಗತಿಗಳನ್ನೂ ಲಕ್ಷಣಗಳನ್ನೂ ಬಳಸಿಕೊಂಡದ್ದಲ್ಲದೆ ಜನರಲ್ಲಿ ಪ್ರಚಾರದಲ್ಲಿದ್ದ ಎಷ್ಟೋ ಕಥೆಗಳನ್ನೂ ಐತಿಹ್ಯಗಳನ್ನೂ ವಾಸ್ತವವಾಗಿ ನಡೆದಿದ್ದ ಚಾರಿತ್ರಿಕ ಘಟನೆಗಳನ್ನೂ ಉಪಯೋಗಿಸಿಕೊಂಡಿದ್ದಾನೆ. ಹಿಂದೆ ನಡೆದಿದ್ದುದನ್ನೂ ನಡೆದಿದ್ದಿತೆಂದು ಹೇಳಲಾಗುತ್ತಿದ್ದುದನ್ನೂ ವರ್ಣಿಸಿರುವುದಲ್ಲದೆ ಮುಂದೆ ನಡೆಯಬಹುದಾದುದನ್ನೂ ತನ್ನ ಪಾತ್ರಗಳ ಬಾಯಲ್ಲಿ ಹೇಳಿಸಿದ್ದಾನೆ. ಗ್ರೀಸಿನ ಚರಿತ್ರೆ ಮತ್ತು ಐತಿಹ್ಯಗಳ ಜೊತೆಗೆ ರೋಮಿನ ಜನತೆಯ ಸ್ಮೃತಿ ಭಂಡಾರದಲ್ಲಿದ್ದ ಕಥೆಗಳನ್ನೂ ನಂಬಿಕೆಗಳನ್ನೂ ಸೇರಿಸಿ ಹೆಣೆದಿದ್ದಾನೆ. ಸಂಪ್ರದಾಯದ ನಂಬಿಕೆಗಳು ನೂತನ ಆಲೋಚನೆಗಳು; ತಲೆತಲಾಂತರವಾಗಿ ಬಂದಿದ್ದ ಮತಧರ್ಮ. ಹೊಸ ತತ್ತ್ವದೃಷ್ಟಿ, ಪ್ರಾಚೀನತೆ, ನವ್ಯತೆ, ರಾಷ್ಟ್ರಚರಿತೆಯ ವೈಭವದ ವರ್ಣನೆ, ವೈಯಕ್ತಿಕ ರಾಗಭಾವಗಳ ನಿರೂಪಣೆ – ಇವೆಲ್ಲವೂ ಅವನ ಕಾವ್ಯದಲ್ಲಿ ಹಾಸುಹೊಕ್ಕಾಗಿ ಬೆರೆತಿವೆ. ಇದರ ಪರಿಣಮವಾಗಿ ಅದು ಬಣ್ಣಬಣ್ಣದ ಚಿತ್ರಬಾಹುಳ್ಯದಿಂದ ಶೋಭಿಸುವ ಸುಂದರ ಕೃತಿಯಾಗಿದೆ; ಭಿನ್ನ ಆಸಕ್ತಿಗಳ, ಭಿನ್ನ ದೃಷ್ಟಿಗಳ ಓದುಗರೆಲ್ಲರಿಗೂ ಆಕರ್ಷಕವಾಗಿದೆ. ಅದರ ಕಥನ ಕಲಾವ್ಯಖರಿ, ಚಿತ್ರಣಕೌಶಲ, ವರ್ಣನಾನೈಪುಣ್ಯ, ನಾದಮಾಧುರ್ಯ – ಈ ಆಕರ್ಷಣೆಗೆ ಮುಖ್ಯ ಕಾರಣಗಳು.

ಸೆನೆಕ (ಪ್ರಶ.ಪೂ. ಸು. ೪ – ಪ್ರಶ.ಪೂ. ೬೫)

ರೋಮ್ ದೇಶದ ಸ್ಟೋಯಿಕ್ ತತ್ತ್ವಜ್ಞಾನಿ, ರಾಜಕೀಯ ಧುರೀಣ, ಕವಿ ಹಾಗೂ ನಾಟಕಕಾರ. ಸ್ಪೇನಿನ ಕಾರ್ಡೋವ ಎಂಬಲ್ಲಿ ಜನಿಸಿದ. ರೋಮನ್ ಸಾಮ್ರಾಟರಲ್ಲಿ ಅತ್ಯಂತ ಕ್ರೂರಿಯೆಂದು ಪ್ರಸಿದ್ಧನಾದ ನೀರೋಗೆ ಈತ ಕೆಲಕಾಲ ಬೋಧಕನೂ ಮಂತ್ರಿಯೂ ಆಗಿದ್ದ. ಸಮಕಾಲೀನ ವಿಚಾರಶೀಲರಲ್ಲಿ ಈತ ಗುಣವಂತನೆಂದೂ ಪ್ರಾಜ್ಞನೆಂದೂ ಹೆಸರುಗಳಿಸಿದ್ದ. ಈತನ ಕಡೆಯ ದಿನಗಳು ಸುಖಮಯವಾಗಿರಲಿಲ್ಲ. ನೀರೋ ರಾಜನನ್ನು ಕೊಲ್ಲಿಸಲು ಸಂಚು ಹೂಡಿದ ಎಂಬ ಅಪವಾದಕ್ಕೆ ಗುರಿಯಾಗಿ ಈತ ಆತ್ಮಹತ್ಯೆ ಮಾಡಿಕೊಂಡ.

ಈತ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಇವನ ಬರೆಹಗಳಲ್ಲಿ ೧೨ ತತ್ತ್ವಶಾಸ್ತ್ರ ಪ್ರಬಂಧಗಳು, ೧೨೪ ಪತ್ರಗಳು, ಪವನಶಾಸ್ತ್ರ ಕುರಿತ ಒಂದು ಪ್ರಬಂಧ, ಒಂದು ವಿಡಂಬನಕೃತಿ, ೯ ದುರಂತ ನಾಟಕಗಳು ಈಗ ಲಭ್ಯವಿವೆ. ದುರಂತ ನಾಟಕಗಳಲ್ಲಿ ಈಡಿಪಸ್, ಮೀಡಿಯ ನಾಟಕಗಳು ಪ್ರಸಿದ್ಧವಾಗಿವೆ. ಇವನ ನಾಟಕಗಳಲ್ಲಿ ಸ್ಟೋಯಿಕ್ (ನಿರಾಶಾವಾದಿ) ತತ್ತ್ವಜ್ಞಾನವೇ ಪ್ರಧಾನವಾಗಿದೆ. ಉದ್ರೇಕದಿಂದ ವಿಚಾರ ನಾಶವಾಗಿ ಇದೇ ದುರಂತಕ್ಕೆ ಕಾರಣವಾಗುತ್ತದೆ ಎಂಬುದು ಇವನ ಸಿದ್ಧಾಂತ. ಇವನ ನಾಟಕಗಳು ಇಟಲಿ, ಫ್ರಾನ್ಸ್, ಇಂಗ್ಲೆಂಡಿನ ದುರಂತ ನಾಟಕಗಳ ಮೇಲೆ ಬಹಳಷ್ಟು ಪ್ರಭಾವ ಬೀರಿವೆ. (ಎಚ್.ಎಸ್.ಎಸ್.ಎ.)

ಹೊರೇಸ್ (ಪ್ರಶ.ಪೂ. ೬೫–೮)

ಪ್ರಸಿದ್ಧ ರೋಮನ್ ಕಾವ್ಯ ಮೀಮಾಂಸಕ, ಕವಿ ಹಾಗೂ ವಿಮರ್ಶಕ. ಕ್ವಿಂತುಸ್ ಹೊರಾಷಿಯುಸ್ ಫ್ಲಕುಸ್ ಎಂಬುದು ಈತನ ಪೂರ್ಣ ಹೆಸರು. ಅಪುಲಿಯ ಮತ್ತು ಲುಕನಿಯದ ಸರಹದ್ದಿನಲ್ಲಿರುವ ವೆನುಸಿಯದಲ್ಲಿ ಪ್ರ.ಶ.ಪೂ. ೬೫ ಡಿಸೆಂಬರ್ ೮ರಂದು ಜನಿಸಿದ. ಈತನ ತಂದೆ ದಾಸ್ಯವರ್ಗದಿಂದ ಬಿಡುಗಡೆ ಹೊಂದಿ ತೆರಿಗೆ ವಸೂಲಿಯ ವೃತ್ತಿಯನ್ನು ಹಿಡಿದಿದ್ದ. ಮಗನಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವ ಸಲುವಾಗಿ ರೋಮಿಗೆ ಬಂದು ನೆಲಸಿದ. ಅರ್ಬಿಲಿಯಸ್ ಎಂಬವನ ಬಳಿ ಹೊರೇಸ್ ವಿದ್ಯಾಭ್ಯಾಸ ಆರಂಭಿಸಿ ಅನಂತರ ಅಥೆನ್ಸಿಗೆ ಹೋಗಿ (ಪ್ರ.ಶ.ಪೂ. ೪೫) ತತ್ತ್ವಶಾಸ್ತ್ರದ ಅಧ್ಯಯನ ಕೈಗೊಂಡ. ಜೂಲಿಯಸ್ ಸೀಸರನ ಕೊಲೆಯ ಅನಂತರ ಬ್ರೂಟಸ್ ಅಥೆನ್ಸಿಗೆ ಭೇಟಿ ನೀಡಿದಾಗ ಇತರ ವಿದ್ಯಾರ್ಥಿಗಳಂತೆ ಹೊರೇಸನೂ ಅವನ ಪಕ್ಷ ಸೇರಿ ಪ್ರ.ಶ.ಪೂ. ೪೨ರಲ್ಲಿ ನಡೆದ ಒಂದು ಕದನದಲ್ಲಿ ಸೈನ್ಯದ ಒಂದು ತಂಡದ ನಾಯಕನಾಗಿ ಹೋರಾಡಿದ. ಆ ಕದನದಲ್ಲಿ ಸೋಲುಂಟಾಗಿ ಇಟಲಿಗೆ ನಡೆದ; ಜೀವನೋಪಾಯಕ್ಕಾಗಿ ಗುಮಾಸ್ತೆಯ ಕೆಲಸವೊಂದನ್ನು ಹಿಡಿದ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಕೃಷಿಯನ್ನು ಇವನು ಆರಂಭಿಸಿದ.

ವಿಡಂಬನೆಗಳು ಹಾಗೂ ಅಯಾಂಬಿಕ್ ಕವನಗಳು ಇವನ ಕಾವ್ಯಜೀವನದ ಮೊದಲ ಹೆಜ್ಜೆಗಳು. ಪ್ರಖ್ಯಾತ ಕವಿಗಳೆನಿಸಿದ್ದ ವರ್ಜಿಲ್ ಹಾಗೂ ವಿನಿಯಸ್‌ರ ಸ್ನೇಹದಿಂದ ಇವನು ಅಗಸ್ಟಸ್ ಚಕ್ರವರ್ತಿಯ ಆಪ್ತಮಂತ್ರಾಲೋಚಕನಾಗಿದ್ದ. ಮೆಕೆನಸ್

ನನ್ನು ಪರಿಚಯಿಸಿಕೊಂಡು (ಪ್ರ.ಶ.ಪೂ. ೩೮). ಅತ್ಯಂತ ಆಪ್ತನಾ ಇವನು ಪ್ರ.ಶ.ಪೂ ೩೫ರಲ್ಲಿ ತನ್ನ ವಿಡಂಬನೆಗಳ ಮೊದಲ ಸಂಪುಟವನ್ನು ಅವನಿಗೆ ಅರ್ಪಿಸಿದ್ದಾನೆ. ಪ್ರ.ಶ.ಪೂ ೩೩ರಲ್ಲಿ ಮೆಕೆನಸ್‌ನಿಂದ ಇವನಿಗೆ ಟೈಬರಿನ ಈಶಾನ್ಯಕ್ಕೆ ಇರುವ ಸಾಬೈನ್ ಪ್ರದೇಶದಲ್ಲಿ ಒಂದು ಜಹಗೀರು ಬಳುವಳಿಯಾಗಿ ದೊರೆಯಿತು. ಇವನು ತನ್ನ ಇಡೀ ಬದುಕನ್ನು ಸಾಹಿತ್ಯ ರಚನೆಗಳಿಗೆ ಮೀಸಲಿಟ್ಟು ಅಲ್ಲಿಯೇ ನೆಲಸಿದ.

ಪ್ರ.ಶ.ಪೂ. ೩೦–೨೯ರ ಅವಧಿಯಲ್ಲಿ ಇವನು ಹಲವಾರು ಗೀತೆಗಳನ್ನೂ ವಿಡಂಬನೆಯ ಎರಡನೆಯ ಸಂಪುಟವನ್ನೂ ಪ್ರಕಟಿಸಿದ. ಅದೇ ಕಾಲದಲ್ಲಿ ಅಯಾಂಬಿಕ್ ಪದ್ಯ ಸಂಗ್ರಹವೊಂದನ್ನು ಬರೆದ. ಗ್ರೀಕ್ ಕವಿಗಳ ಮಾದರಿಯಲ್ಲಿ ಕಾವ್ಯ ಸಂಪ್ರದಾಯವನ್ನು ರೋಮಿನಲ್ಲಿ ಸ್ಥಾಪಿಸಿದವರಲ್ಲಿ ಇವನೇ ಮೊದಲಿಗ. ಸಂವಾದ ಶೈಲಿಯಲ್ಲಿ ಹೊಸ ಕಾವ್ಯಪ್ರಕಾರವನ್ನು ಹುಟ್ಟುಹಾಕಿದ. ಇಂಥ ಪದ್ಯಗಳ ಮೊದಲ ಸಂಕಲನ ಪ್ರ.ಶ.ಪೂ ೨೯–೧೯ರಲ್ಲಿ ಪ್ರಕಟವಾಯಿತು. ಇವನ ಪತ್ರಕಾವ್ಯಗಳಲ್ಲಿ ಪೀಸೋಲಿಗೆ ಬರೆದ ಪತ್ರ ಬಹಳ ಪ್ರಸಿದ್ಧವಾದದ್ದು (ಪ್ರ.ಶ.ಪೂ. ೧೦–೮). ಇದು ಕಾವ್ಯಕಲೆ (ಆರ್ಸ್ ಪೊಯೆಟಿಕಾ) ಎಂಬ ಹೆಸರಿನಿಂದ ಪ್ರಖ್ಯಾತವಾಗಿದೆ. ಈ ಹೆಸರನ್ನು ನೀಡಿದವನು ರೋಮ್‌ನ ಪ್ರಖ್ಯಾತ ವಿಮರ್ಶಕ ಕ್ವಿಂಟಿಲಿಯನ್ (೩೫–೧೦೦). ಹೊರೇಸ್ ಇದನ್ನು 'ಪೀಸೋವಿಗೆ ಪತ್ರ' ಎಂದೇ ಕರೆದಿದ್ದ. ಇದು ಅರಿಸ್ಟಾಟಲನ ಕಾವ್ಯಮೀಮಾಂಸೆಯನ್ನು ಹೋಲುತ್ತದೆ. ಸಾಹಿತ್ಯ ಅನುಕರಣ ಮಾತ್ರವಲ್ಲ ಸೃಷ್ಟಿಯೂ ಹೌದು; ವಾಚಕನನ್ನು ಹರ್ಷಚಿತ್ತನನ್ನಾಗಿಯೂ ಸದ್ಗುಣಿಯನ್ನಾಗಿಯೂ ಮಾಡುವ ದ್ವಿಮುಖ ಕಾರ್ಯ ಸಾಹಿತ್ಯದ್ದು; ಕಾವ್ಯ ಉದಾತ್ತವಾಗಿರಬೇಕು; ಕಾವ್ಯಸೃಷ್ಟಿಯಲ್ಲಿ ಸ್ಫೂರ್ತಿ, ಅಭ್ಯಾಸ ಎರಡೂ ಮುಖ್ಯ; ಪರಂಪರೆಗೆ ಕಾವ್ಯ ಬದ್ಧವಾಗಿರಬೇಕು ಇತ್ಯಾದಿಯಾಗಿ ಕಾವ್ಯಕಲಾ ಮೀಮಾಂಸೆಯ ಬಗೆಗೆ ಬಹಳಷ್ಟು ಜಿಜ್ಞಾಸೆ ನಡೆಸಿದ್ದಾನೆ. ಇವನ ವಿಡಂಬನೆಗಳಲ್ಲಿಯೂ ಕಾವ್ಯಮೀ ಮಾಂಸೆ ಮತ್ತು ವಿಮರ್ಶೆಯ ತಾತ್ತ್ವಿಕ ವಿಚಾರಗಳನ್ನು ಕಾಣಬಹುದು. ಅನೇಕ ಪ್ರಪಂಚ ಪ್ರಸಿದ್ಧ ಇಂಗ್ಲಿಷ್ ವಿಡಂಬನಕಾರರು ಇವನಿಂದ ಸ್ಫೂರ್ತಿ ಪಡೆದಿದ್ದಾರೆ. ಡ್ರೈಡನ್, ಅಗಸ್ಟಸ್ ಮೊದಲಾದವರ ಪ್ರಗಾಥ ಹಾಗೂ ವಿಮರ್ಶೆಯ ವಿಧಾನಗಳ ಮೇಲೂ ಇವನ ಪ್ರಭಾವವನ್ನು ಕಾಣಬಹುದು. ಒಂದರ್ಥದಲ್ಲಿ ಇವನ ಕಾವ್ಯಕಲೆ ಪಾಶ್ಚಾತ್ಯರ ಔಚಿತ್ಯ ವಿಚಾರ ಚರ್ಚೆಯಾಗಿದೆ. ೧೭–೧೮ನೆಯ ಶತಮಾನಗಳ ಸಂಪ್ರದಾಯವಾದಿಗಳು ಆರಿಸ್ಟಾಟಲ್ ಮತ್ತು ಹೊರೇಸ್‌ನ ಗ್ರಂಥಗಳನ್ನು ಪ್ರಸ್ಥಾನ ಗ್ರಂಥಗಳೆಂದು ಗೌರವಿಸಿದರು. ಆಂಗ್ಲ ಸಂಸ್ಕೃತಿಯ ಒಂದು ಬಹುಮುಖ್ಯ ಭಾಗವಾಗಿ ಇವನ ಕಾವ್ಯವನ್ನು ಪ್ರತಿಯೊಂದು ಶಾಲೆಯಲ್ಲಿಯೂ ಬೋಧಿಸಿ, ಕಲಿಸಲಾಗುತ್ತಿತ್ತು. ಇವನು ಕಾವ್ಯದ ಎರಡು ಪ್ರಧಾನ ಕಾರ್ಯಗಳೆಂದು ಗುರುತಿಸಿದ ಮನರಂಜನೆ ಮತ್ತು ನೀತಿಬೋಧೆ ಎಂಬ ತತ್ತ್ವಗಳು ಕಾವ್ಯಮೀಮಾಂಸೆ ಯ ಕ್ಷೇತ್ರದಲ್ಲಿ ತನ್ನದೇ ಮಹತ್ತ್ವವನ್ನು ಸ್ಥಾಪಿಸಿಕೊಂಡಿದೆ. *

III ಪೋಲಿಷ್ ಸಾಹಿತ್ಯ

ಪ್ರಾರಂಭದ ಪೋಲಿಷ್ ಸಾಹಿತ್ಯದ ಹೆಚ್ಚು ಭಾಗ ಲ್ಯಾಟಿನ್ನಿನಲ್ಲಿದೆ. ಮಾತೃಭಾಷೆಯಲ್ಲಿ (ಪೋಲಿಷ್) ಬರೆಯಲು ತೊಡಗಿದವರಲ್ಲಿ ಒಬ್ಬನಾದ ಮಿಕೊಲಾಜ್‌ರೇ (೧೫೦೧-೧೫೬೯) ಪೋಲಿಷ್ ಸಾಹಿತ್ಯದ ಜನಕ. ೧೬ನೆಯ ಶತಮಾನದ ಉತ್ತರಾರ್ಧ ಪೋಲಿಷ್ ಸಾಹಿತ್ಯದ ಸ್ವರ್ಣಯುಗ. ರೇಯ ಈ ಕಾಲದ ಗದ್ಯ ಕೃತಿಗಳು. (ಪ್ರಾಮಾಣಿಕ ಮನುಷ್ಯನೊಬ್ಬನ ಜೀವನ ಈತನ ಮುಖ್ಯ ಕೃತಿ) ಜಾನ್ ಕಾಚಾನೌಸ್ಕಿಯು (೧೫೩೦-೧೫೮೪) ಭಾವಗೀತೆಗಳು ಗಣನೀಯವಾಗಿವೆ, ಕಾಚಾನೌಸ್ಕಿ ತನ್ನ ಕಾಲದ ಅತಿ ಪ್ರಸಿದ್ಧ ಕವಿ. ಹದಿನೇಳನೆಯ ಶತಮಾನದ ಟ್ವಾರ್ಡೌಸ್ಕಿ (೧೬೦೦-೧೬೬೦) ಮತ್ತು ವಾಕ್ಲಾ (೧೬೨೫-೧೬೯೬) ಅವರ ಐತಿಹಾಸಿಕ ಮಹಾ ಕಾವ್ಯಗಳು ಮತ್ತು ಆಂಡ್ರ್‌ಜೆಜ್ ಮಾರ್ಸ್‌ಟಿನ್ನನ (೧೬೧೩-೧೬೯೩) ಭಾಷಾಂತರ ಪದ್ಯ ಕೃತಿಗಳು ಮತ್ತು ಭಾವಗೀತೆಗಳು ಸ್ಮರಣಾರ್ಹ. ೧೮ನೆಯ ಶತಮಾನ ಜ್ಞಾನೋದಯದ ಕಾಲ. ವಿಡಂಬನ ಪದ್ಯಗಳು ಮತ್ತು ಪ್ರಥಮ ಆಧುನಿಕ ಪೋಲಿಷ್ ಕಾದಂಬರಿ ದಿ ಅಡ್ವೆಂಚರ್ಸ್ ಆಫ್ ನಿಕಲಸ್ ಡಾಸ್ವಿಯಾ ಧಾಜಿನ್ಸ್ಕಿಯನ್ನು ಇಗ್ನೇಸಿ ಕ್ರಾಸಿಕ್ಕಿ ಈ ಕಾಲದ ಪ್ರಸಿದ್ಧ ಲೇಖಕ. ಇದೇ ಕಾಲದಲ್ಲಿ ಪೋಲಿಷ್ ನಾಟಕದ ಉದಯವೂ ಆಯಿತು. ರಾಜಕೀಯ ಸ್ವಾತಂತ್ರ್ಯವನ್ನು ಕಳೆದುಕೊಂಡ ೧೮೨೦ರ ದಶಕದಲ್ಲಿ ಪೋಲೆಂಡಿನಲ್ಲಿ ರೊಮ್ಯಾಂಟಿಕ್ ಚಳವಳಿಯ ಉದಯವಾಯಿತು. ಅಂತರ ರಾಷ್ಟ್ರೀಯ ಖ್ಯಾತಿ ಪಡೆದ ಪೋಲಿಷ್ ಮಹಾಕವಿ ಆ್ಯಡಮ್ ಮಿಕಿವಿಜ್ (೧೭೯೮-೧೮೫೫) ರೊಮ್ಯಾಂಟಿಕ್ ಸಂಪ್ರದಾಯದ ಪ್ರಮುಖ ಲೇಖಕ. ರಂಜನಕಾವ್ಯ, ಸಾನೆಟ್ ಭಾವಗೀತೆ ಕಾವ್ಯಕತೆಗಳನ್ನೂ ದಿ ಫೋರ್ ಫಾದರ್ಸ್ ಎಂಬ ರಂಜಕ ನಾಟಕವನ್ನೂ ಬರೆದ. ಈತನ ಪಾನ್ ತಾಡ್ಯಜ ಎಂಬ ಕೃತಿಯನ್ನು ಐರೋಪ್ಯ ಸಾಹಿತ್ಯದಲ್ಲಿನ ಒಂದೇ ಒಂದು ವೀರಮಹಾಕಾವ್ಯ ವೆಂದು ಅನೇಕ ವಿದೇಶಿ ವಿಮರ್ಶಕರು ಶ್ಲ್ಯಾಘಿಸಿದ್ದಾರೆ. ಅವನು ಪ್ರಪಂಚ ಸಾಹಿತ್ಯದಲ್ಲಿ ಪೋಲೆಂಡಿಗೆ ಗಮನೀಯ ಸ್ಥಾನವನ್ನು ಒದಗಿಸಿಕೊಟ್ಟ, ಅವನ ಅನಂತರ ಬರುವ ಪ್ರಸಿದ್ಧ ಲೇಖಕ ಭಾವಗೀತೆ ಮತ್ತು ಕಾವ್ಯ ನಾಟಕಗಳನ್ನು ರಚಿಸಿದ ಜ್ಯೂಲಿಯಸ್ ಸ್ಲೊವಾಕಿ (೧೮೦೯-೧೮೪೯). ಅವನು ಆಧುನಿಕ ಪೋಲಿಷ್ ನಾಟಕದ ಆರಂಭಕಾರ. ಅವನ ಹಾರ್ಟ್ಸ್‌ಟೆನ್ಸ್ಕಿ ಮತ್ತು ಫ್ಯಾಂಟಸಿ ಎಂಬ ನಾಟಕಗಳು, ಬೆನ್ನಿಯೌಸ್ಕಿ ಎಂಬ ಕಥಾಕಾವ್ಯ ಮತ್ತು ಕಿಂಗ್ ಸ್ಪಿರಿಟ್ ಎಂಬ ಮಹಾಕಾವ್ಯ ಸ್ಮರಣೀಯವಾಗಿವೆ. ಮೂರನೆಯ ಪ್ರಸಿದ್ಧ ರೊಮ್ಯಾಂಟಿಕ್ ಲೇಖಕ ತಾತ್ತ್ವಿಕಕವಿ ಸಿಗ್ಮಂಟ್ ಕ್ರಾಸಿನ್ಸ್ಕಿ (೧೮೧೨-೫೯) ತನ್ನ ರಂಜಕ ಸಾಮಾಜಿಕ ನಾಟಕ ದಿ ಅನ್ ಡಿವೈನ್ ಕಾಮಿಡಿಯಲ್ಲಿ ಆಧುನಿಕ ಸಮಸ್ಯೆಯಾದ ವರ್ಗೀಯ ಹೋರಾಟ ಮತ್ತು ಕ್ರಾಂತಿಗಳನ್ನು ಚಿತ್ರಿಸಿದ್ದಾನೆ. ಅವನ ಇಂಡಿಯನ್ ಎಂಬುದು ರೋಮನ್ನರ ವಿರುದ್ಧ ಗ್ರೀಕರ ವಿಫಲ ಹೋರಾಟವನ್ನು ಚಿತ್ರಿಸುವ ಗದ್ಯ ದುರಂತ. ೧೯ನೆಯ ಶತಮಾನದ

ಪೂರ್ವಾರ್ಧ ಲೇಖಕರಲ್ಲಿ ನಾಟಕಕಾರ ಫ್ರೆಡ್ರೋ (೧೭೯೩–೧೮೭೬) ಕಾಲ್ಲೋಕೇಷನ್ ಎಂಬ ಸ್ಮರಣೀಯ ಕಾದಂಬರಿಯನ್ನು ರಚಿಸಿದ ಕಾದಂಬರಿಗಳ ಲೇಖಕ ಜೋಸೆಫ್ ಕಾಸೆನಿಯೌಸ್ಕಿ (೧೭೯೭–೧೮೬೩) ಸೇರುತ್ತಾರೆ. ೧೮೬೩ರ ದಂಗೆಯ ವಿಫಲತೆಯೊಡನೆ ರೊಮ್ಯಾಂಟಿಕ್ ಸಂಪ್ರದಾಯ ಕೊನೆಗೊಂಡಿತು. ಅಂದಿನಿಂದ ದೃಷ್ಟಪ್ರಮಾಣವಾದಿ (ಪಾಸಿಟೀವಿಸಮ್) ಸಂಪ್ರದಾಯ ಮೊದಲಾಯಿತು. ಈ ಸಂಪ್ರದಾಯದ ಲೇಖಕರು ತಮ್ಮ ಕೃತಿಗಳಲ್ಲಿ ಸಾಮಾಜಿಕ ಮತ್ತು ನೈತಿಕ ಸಮಸ್ಯೆಗಳನ್ನು ಯಥಾರ್ಥ ರೀತಿಯಲ್ಲಿ ಚಿತ್ರಿಸತೊಡಗಿದರು. ಬೋಲೆಸ್ಲಾಪ್ರಸ್ ಎಂಬ ಗುಪ್ತನಾಮದಿಂದ ಬರೆಯುತ್ತಿದ್ದ ಅಲೆಕ್ಸಾಂಡರ್ ಗ್ಲೋವಾಕಿ (೧೮೪೫–೧೯೧೨) ಕಾದಂಬರಿಯಲ್ಲಿ ಯಥಾರ್ಥತೆ ಮತ್ತು ದೃಷ್ಟಪ್ರಮಾಣವಾದಿ ಸಂಪ್ರದಾಯಗಳ ಪ್ರಮುಖ ಪ್ರತಿಪಾದಕ. ಅವನು ಪೋಲಿಷ್ ಸಾಹಿತ್ಯಕ್ಕೆ ಅನೇಕ ಉತ್ತಮ ಸಣ್ಣ ಕತೆಗಳನ್ನೂ ದಿ ಡಾಲ್ ಎಂಬ ಶ್ರೇಷ್ಠ ಆಧುನಿಕ ಕಾದಂಬರಿಯನ್ನೂ ಕೊಟ್ಟ. ದಿ ಡಾಲ್ ೧೯ನೆಯ ಶತಮಾನದ ಪೂರ್ವಾರ್ಧದ ಪೋಲಿಷ್ ಸಮಾಜವನ್ನು ಚಿತ್ರಿಸುವ ಕಾದಂಬರಿ. ಯೂರೋಪಿನ ಪ್ರಖ್ಯಾತ ಲೇಖಕ ಮತ್ತು ನೋಬೆಲ್ ಪ್ರಶಸ್ತಿ ವಿಜೇತ ಹೆನ್ರಿಕ್ ಸಿಯೆನ್ಕಿವಿಜ್ (೧೮೪೬–೧೯೧೬) ಎಂಬಾತ ವಿತ್ ಫೈರ್ ಅಂಡ್ ಸ್ವೋರ್ಡ್, ದಿ ಡೆಲ್ಯೂಜ್ ಕೋ ವಾಡೀಸ್ ಮತ್ತು ದಿ ಟ್ಯೂಟಾನಿಕ್ ನೈಟ್ಸ್ ಎಂಬ ಐತಿಹಾಸಿಕ ಕಾದಂಬರಿಗಳನ್ನು ಬರೆದ.

ಆ್ಯಡಮ್ ಆಸ್ನಿಕ್ (೧೮೩೮–೧೮೯೭) ಮತ್ತು ಮಾರ್ಜಾ ಕಾನಪ್ನಿಕಾ (೧೮೪೨–೧೯೧೦) ಈ ಕಾಲದ ಹೆಸರಾಂತ ಕವಿಗಳು. ಎಲಿಜಾ ಆರ್ಜೆಸ್‌ಕೊವಾ (೧೮೪೧–೧೮೯೦). ಇದೇ ಕಾಲದ ಲೇಖಕಿ. ಸಣ್ಣ ಕತೆ ಮತ್ತು ಕಾದಂಬರಿಗಳ ಈ ಲೇಖಕಿಯ ಗಮನಾರ್ಹ ಕೃತಿ ಆನ್ ದಿ ಬ್ಯಾಂಕ್ ಆಫ್ ನೈಮೆನ್ ಲಿತೂನಿಯಾದ ಗ್ರಾಮೀನ ಜೀವನವನ್ನು ಚಿತ್ರಿಸುತ್ತದೆ. ೧೯ನೆಯ ಶತಮಾನದ ಅಂತ್ಯದಲ್ಲಿ ದೃಷ್ಟ ಪ್ರಮಾಣವಾದ ಮತ್ತು ಯಥಾರ್ಥತೆಗಳ ವಿರುದ್ಧ ಪ್ರತಿಕ್ರಿಯೆ ಪ್ರಾರಂಭವಾಯಿತು. ೧೮೯೦ರಿಂದ ೧೯೧೪ರವರೆಗಿನ ಕಾಲವನ್ನು ತರುಣ ಪೋಲೆಂಡ್ ಎಂದು ಕರೆಯಲಾಗುತ್ತದೆ. ಈ ಕಾಲದಲ್ಲಿ ಲೇಖಕರು ಸಂಕೇತ ವಿಧಾನವನ್ನು ಅನುಸರಿಸಿದರು. ಕವಿಗಳಾದ ಜಾನ್ ಕಾಸ್ಟ್ರೋವಿಜ್ (೧೮೬೦–೧೯೨೬) ಲಿಯೊಪಾಲ್ಡ್ ಸ್ಟಾಫ್. ಕಾದಂಬರಿಕಾರರಾದ ಸ್ಟೆಫಾನ್ ಜೆರೊವಿಸ್ಕಿ (೧೮೬೪–೧೯೨೫) ವಾಡಿಸ್ಲಾವ್ ರೇಮಾಂಟ್ (೧೮೬೭–೧೯೨೫) ಈ ಕಾಲದ ಲೇಖಕರು. ವರ್ಣಚಿತ್ರಕಾರ ಮತ್ತು ಕವಿ ಸ್ಟಾನಿಸ್ಲಾವ್ ವಿಸ್ಪಿಯಾನ್ಸ್ಕಿ (೧೮೬೯–೧೯೦೭) ನಾಟಕಗಳಲ್ಲಿ ನವಚೈತನ್ಯಕ್ಕೆ ಕಾರಣನಾದ. ಆತ ತನ್ನ ಕೃತಿಗಳಲ್ಲಿ ಗ್ರೀಕ್ ದುರಂತ ನಾಟಕ, ಶೇಕ್ಸ್‌ಪಿಯರ್, ರೊಮ್ಯಾಂಟಿಕ್ ಸಂಪ್ರದಾಯದ ನಾಟಕ ಮತ್ತು ಪೋಲಿಷ್ ಜಾನಪದ ನಾಟಕಗಳ ಮೂಲಾಂಶಗಳನ್ನು ಒಂದುಗೂಡಿಸಿದ. ೧೯೧೮ರ ಅನಂತರ ಮರುಜನ್ಮ ತಾಳಿದ ಪೋಲೆಂಡಿನ ಸಾಹಿತ್ಯದಲ್ಲಿ ಹೊಸತನ ಕಂಡುಬಂತು.

ಸ್ಕಾಮಾಂಡ್ರೈಟ್ಸ್ ಎಂದು ಕರೆಯಲಾಗುವ ಹೊಸ ಪೀಳಿಗೆಯ ಭಾವಗೀತಕಾರರು ರಾಜಕೀಯ ಉಪಾಧಿಗಳಿಂದ ಪೋಲಿಷ್ ಸಾಹಿತ್ಯದ ಮೇಲೆ ಬಲವಂತವಾಗಿ ಹೇರಲಾಗಿದ್ದ ದೇಶಪ್ರೇಮ ಮತ್ತು ಸಮಾಜಸೇವೆಯನ್ನು ನಿರಾಕರಿಸಿದರು. ಅವರು ಒಳ್ಳೆಯ ಕವಿತೆಗಳನ್ನು ರಚಿಸುವುದೇ ತಮ್ಮ ಗುರಿ ಎಂದರು. ಕಾವ್ಯ ಭಾಷೆ, ಪದ್ಯ ರಚನೆ ಮತ್ತು ಸ್ವರೂಪಗಳ ನವ್ಯತೆಯ ಮೂಲಕ ಅವರು ಪೋಲಿಷ್ ಕಾವ್ಯವನ್ನು ಅಭಿವೃದ್ಧಿಗೊಳಿಸಿದರು. ಜ್ಯೂಲಿಯನ್ ತುವಿಮ್ (೧೮೯೪-೧೯೫೩) ಆ್ಯಂಟನಿ ಸ್ಲೋನಿಮ್ಸ್ಕಿ, ಜಾನ್ ಲೆಚಾನ್, ಕಾಜಿಮಿರ್ಜ್ ವಿರ್ಜಿನ್ಸ್ಕಿ-ಈ ನವಕವಿಗಳ ಈ ಕಾಲದ ನಾಟಕಗಳಲ್ಲಿ ಯಥಾರ್ಥವಾದ ತಿರುಗಿ ತಲೆಯೆತ್ತಿತು. ಐತಿಹಾಸಿಕ ಕಾದಂಬರಿಗಳು ಹೊರಬಂದವು. ೧೯೩೯ರಲ್ಲಿ ಜರ್ಮನ್ನರಿಂದ ಪೋಲೆಂಡಿನ ಆಕ್ರಮಣವಾದ ಅನಂತರ ಎಲ್ಲ ಸಾಂಸ್ಕೃತಿಕ ಮತ್ತು ಸಾಹಿತ್ಯ ಜೀವನ ಅಂತ್ಯಗೊಂಡಂತೆ ಕಂಡಿತಾದರೂ ಪೋಲಿಷ್ ಲೇಖಕರು ದೇಶದ ಒಳಗೂ ಹೊರಗೂ ಕ್ರಿಯಾಶೀಲರಾಗಿಯೇ ಇದ್ದರು. ಪ್ರಮುಖ ಸಾಹಿತಿಗಳು ದೇಶದಿಂದ ಹೊರಬಿದ್ದು ವಿಶೇಷವಾಗಿ ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲಿದ್ದುಕೊಂಡು ಅನೇಕ ಕೃತಿಗಳನ್ನು ಪ್ರಕಟಿಸಿದರು. ದೇಶದಿಂದ ಜರ್ಮನ್ನರ ಉಚ್ಚಾಟನೆಯಾದ ಬಳಿಕ ಸಾಹಿತ್ಯ ರಂಗದಲ್ಲಿ ಚಟುವಟಿಕೆ ಹೆಚ್ಚಿತು. ವರ್ತಮಾನ ಕಾಲದ ಅನೇಕ ತರುಣ ಲೇಖಕರು ಸಾಹಿತ್ಯ ರಚನೆಯಲ್ಲಿ ತೊಡಗಿದರು. (ಜಿ.ಕೆ.ಯು.)

ಪ್ರ.ಶ. ೯೬೬ರಲ್ಲಿ ಪೋಲೆಂಡ್ ಕ್ರೈಸ್ತ ಸಂಸ್ಕೃತಿಯ ವಲಯಕ್ಕೆ ಸೇರಿತು, ಇದರಿಂದ ಲ್ಯಾಟಿನ್ ಅದರ ಸಾಹಿತ್ಯದ ಭಾಷೆಯಾಯಿತು. ಪೋಲರ ಸಂಸ್ಕೃತಿ ಮೂಲೆ ಪಾಲಾಯಿತು. ಪೋಲೆಂಡಿನ ಎಲ್ಲ ಶಾಲೆಗಳಲ್ಲಿ ಲ್ಯಾಟಿನ್ ಭಾಷೆ, ಆ ಭಾಷೆಯಲ್ಲಿನ ಸಾಹಿತ್ಯ ಇವನ್ನು ಹೇಳಿಕೊಡುತ್ತಿದ್ದರು.

ಪೋಲೆಂಡಿನವರು ಲ್ಯಾಟಿನ್ ಭಾಷೆಯಲ್ಲಿ ಬರೆದ ಸಾಹಿತ್ಯವಿದೆ. ಜನರು ಗ್ಯಾಲಸ್ ಎಂದು ಕರೆದ ಅನಾಮಧೇಯ ಬರೆಹಗಾರನು ೧೨ನೇ ಶತಮಾನದಲ್ಲಿ ಬರೆದ ಕ್ರಾನಿಕ್ರಾನ್ ಒಂದು ಜೀವನ ಚರಿತ್ರೆ.

೧೬ನೇ ಶತಮಾನದಲ್ಲಿ ಸಾಹಿತ್ಯದಲ್ಲಿ ತೇಜಸ್ವೀ ಯುಗ ಪ್ರಾರಂಭವಾಯಿತು. ಇದು ಇಡೀ ೧೬ನೇ ಶತಮಾನದಲ್ಲಿ ನಡೆದ ನವೋದಯ. ಲ್ಯಾಟಿನ್‌ನಲ್ಲಿ ಮಿಯೊಚೊವ್‌ನ ಮಸಿವಿಜ್ ಚಾರಿತ್ರಿಕ ವೃತ್ತಾಂತಗಳನ್ನು ಬರೆದ. ಈ ಸಂಪ್ರದಾಯವನ್ನು ಹಲವರು ಮುಂದುವರಿಸಿದರು. ಆಂದ್ರೆಜ಼್ ಮಾಡ್ರ್‌ಜೆವ್‌ಸ್ಕಿ ಲ್ಯಾಟಿನಿನಲ್ಲಿ ಬರೆದ 'ದಿ ರಿಪಬ್ಲಿಕ ಎಮೆಂಡೆಂಡ' (೧೫೫೧-೫೪) ಕೃತಿಯಲ್ಲಿ ಆ ಕಾಲದ ಸಾಮಾಜಿಕ ಮತ್ತು ರಾಜಕೀಯ ಚಿಂತನೆ ಪ್ರಕಟವಾಗಿದೆ. ಈ ಕಾಲದಲ್ಲಿ ನೀತಿ ಉಪದೇಶ ಭಾಷಣಗಳ ಮತ್ತು ಸಂತರ ಜೀವನ ಚರಿತ್ರೆಗಳ ರಚನೆ ಮುಂದುವರಿಯಿತು. ಈ ಕಾಲದಲ್ಲಿ ಕಾವ್ಯ ರಚನೆಯೂ ಸಮೃದ್ಧವಾಯಿತು.

೧೬ನೇ ಶತಮಾನದ ಮಧ್ಯಭಾಗದಲ್ಲಿ ಸಾಹಿತಿಗಳು ಲ್ಯಾಟಿನ್ ಭಾಷೆಯನ್ನು ಬಿಟ್ಟು ಪೋಲಿಷ್ ಭಾಷೆಯಲ್ಲಿ ಬರೆಯಲು ಪ್ರಾರಂಭಿಸಿದರು. ಮಿಕೊಲಾಜ್ ಕೇ ಪದ್ಯಗಳನ್ನು ನಾಟಕೀಯ ಸಂಭಾಷಣೆಗಳನ್ನು ನೀತಿ ಉಪದೇಶದ ಕೃತಿಗಳನ್ನು ರಚಿಸಿದ. ಈ ಕಾಲದ ಬಹು ಮುಖ್ಯ ಕವಿ ಜಾನ್ ಕಾಚಾನೊವ್‌ಸ್ಕಿ. ಇವನು ತನ್ನ ಮಗಳ ನೆನಪಿನಲ್ಲಿ ಬರೆದ ಕವನ ಮಾಲೆ 'ಲ್ಯಾಮೆಂಟ್ಸ್', ಪ್ರಸಿದ್ಧವಾಗಿದೆ. ಇವನು 'ದಿ ಡಿಸ್‌ಮಸಲ್ ಆಫ್ ದಿ ಗ್ರೀಷನ್ ಎನ್‌ವಾಯ್ಸ್' ಎನ್ನುವ ಟ್ರಾಜೆಡಿಯನ್ನು ಬರೆದ.

ಹದಿನೇಳನೆಯ ಶತಮಾನ ರಾಜಕೀಯ ಪ್ರಕ್ಷುಬ್ಧತೆಯ ಕಾಲ. ಹಲವರು ಬರೆದ ದಿನಚರಿಗಳು ಸ್ವಾರಸ್ಯವಾಗಿವೆ. ಹಲವು ಕವನಗಳು ಚಾರಿತ್ರಿಕ ವಸ್ತುಗಳನ್ನು ಕುರಿತವು ಉದಾರಹರಣೆಗೆ, ವೆಸ್ ಪಾಜೈನ್ ಕಾಚವಸ್ಕಿಯ ಕವನಗಳು ವಾಚ್ಲಾ ಪಟೊಸಿ ಬರೆದ ಮಹಾಕಾವ್ಯ 'ಖೊಟಿನ್ ಸಮರ' (೧೬೭೦) ಪೋಲೆಂಡ್ ತುರ್ಕಿಯವರನ್ನು ಸೋಲಿಸಿದುದನ್ನು ಸಂಭ್ರಮದಿಂದ ಬಿತ್ತರಿಸುತ್ತದೆ. ಈ ಕಾಲದಲ್ಲಿ ಭಾವಗೀತೆಗಳು ರಚಿತವಾದವು. ವಿನೋದ ನಾಟಕಗಳೂ ಕಾಣಿಸಿಕೊಂಡವು.

೧೭೬೫ರಿಂದ ೧೮೩೧ರವರೆಗಿನ ಅವಧಿಯ ಪೋಲಿಷ್ ಸಾಹಿತ್ಯದಲ್ಲಿ ಸಮೃದ್ಧಿಯ ಯುಗ ಅಭಿಜಾತ ಸಾಹಿತ್ಯದ ಮನೋಧರ್ಮ ಮತ್ತು ರೊಮ್ಯಾಂಟಿಸಿಸಂ ಎರಡೂ ಈ ಅವಧಿಯಲ್ಲಿ ಅಭಿವ್ಯಕ್ತವಾದವು. ರೊಮಾಂಟಿಕ್ ಸಾಹಿತ್ಯದ ಮೇಲೆ ಜರ್ಮನ್ ಕವಿಗಳೂ ಇಂಗ್ಲಿಷ್ ಕವಿ ಲಾರ್ಡ್ ಬೈರನನೂ ಪ್ರಭಾವ ಬೀರಿದರು. ೧೮೩೧–೬೪ರ ಅವಧಿಯಲ್ಲಿ ಪೋಲಿಷ್ ರೊಮಾಂಟಿಕ್ ಸಾಹಿತ್ಯವು ಶ್ರೀಮಂತ ವಾಯಿತು. ಆ್ಯಡಂ ಮಿಕಿವಿಜ್ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿದ. 'ಬ್ಯಾಲಡ್ಸ್ ಅಂಡ್ ರೊಮಾನ್‌ಸಸ್ (೧೮೨೨) ಸಂಗ್ರಹದಲ್ಲಿ ಇವನು ಜಾನಪದ ಮೂಲ ಉದ್ದೇಶ (ಪೋಲಿಷ್)ಗಳನ್ನು ಬಳಸಿಕೊಂಡ ಈ ಅವಧಿಯಲ್ಲೇ ಐತಿಹಾಸಿಕ ಕಾದಂಬರಿಗಳೂ ರಚಿತವಾದವು.

'ತರುಣ ಪೋಲೆಂಡ್' ಯುಗಕ್ಕೆ ಸೇರಿದ ಸ್ಟಾನಿಸಾ ರೇಮಂಟ್‌ನ 'ದಿ ಪೆಸೆಂಟ್ಸ್' (೧೯೪೩) ಒಂದು ಸುದೀರ್ಘ ಮಹಾಕಾವ್ಯ. ಪೋಲೆಂಡಿನ ಒಂದು ಹಳ್ಳಿಯ ಒಂದು ವರ್ಷದ ಬದುಕನ್ನು ಚಿತ್ರಿಸುತ್ತದೆ. (ಈತನಿಗೆ ೧೯೨೪ರಲ್ಲಿ ನೊಬೆಲ್ ಪ್ರಶಸ್ತಿ ಬಂದಿತು).

೧೮ನೆಯ ಶತಮಾನದಿಂದ ಹೋಳುಗಳಾಗಿದ್ದ ಪೋಲೆಂಡ್ ಮೊದಲನೆಯ ಮಹಾಯುದ್ಧದ ನಂತರ ಸ್ವತಂತ್ರ ದೇಶವಾಯಿತು. ಈ ಕಾಲದ ಸಾಹಿತ್ಯ ಶ್ರೀಮಂತ ವಾದದ್ದು ವೈವಿಧ್ಯ ಪೂರ್ಣವಾದದ್ದು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಸಾಹಿತ್ಯ ರಚನೆ ಕುಂಠಿತವಾಯಿತು, ಆದರೆ ಅನಂತರ ಮತ್ತೆ ಶ್ರೀಮಂತವಾಯಿತು.

ಇಪ್ಪತ್ತನೆಯ ಶತಮಾನವು ಹಲವರು ಶ್ರೇಷ್ಠ ಸಾಹಿತಿಗಳನ್ನು ಕಂಡಿತು. ಲಿಯೊಸಲ್ಡ್ ಸ್ಟಾಫ್, ಜೂಲಿಯನ್ ಟುನಿಮ್, ಜಾನ್ ಲೆಚರ್ (ಕಾವ್ಯನಾಮ ಲೆಚೆಕ್ ಸೆರಫಿನೊವಿಜ್) ಇವರೆಲ್ಲ ಗಮನಾರ್ಹ ಕವಿಗಳು ಪ್ರಸಿದ್ಧ ಕವಿ ಚೆಸ್‌ಯಾನ್

ಮಿಯೊಶ್ ಅಮೆರಿಕದಲ್ಲಿ ನಟಿಸಿದ, ಇವನಿಗೆ ೧೯೮೦ರಲ್ಲಿ ನೊಬೆಲ್ ಪ್ರಶಸ್ತಿ ಸಂದಿತು. ನಾಜಿಗಳು ಪೋಲೆಂಡನ್ನು ಆಕ್ರಮಿಸಿದ್ದು, ಅವರ ಭಯಂಕರ ಆಡಳಿತ ಇವು ಹಲವು ಕಾದಂಬರಿಗಳಲ್ಲಿ ನಿರೂಪಿತವಾದವು. ಈಗ ಪೋಲೆಂಡಿನಲ್ಲಿ ವೈಜ್ಞಾನಿಕ ಕಲ್ಪನಾ ಸಾಹಿತ್ಯ (ಸೈನ್ಸ್ ಫಿಕ್‌ಷನ್) ಜನಪ್ರಿಯವಾಗಿದೆ.

(ಪ್ರೊ.ಎಲ್.ಎಸ್.ಎಸ್.)

IV ಇಟಲಿ ಸಾಹಿತ್ಯ

೧೩ನೆಯ ಶತಮಾನದಲ್ಲಿ ಲ್ಯಾಟೀನ್ ಭಾಷೆಗೆ ಹತ್ತಿರವಾದ ತುಷ್ಕನಿ ಉಪಭಾಷೆಯು ವಿಶಿಷ್ಟವಾಗಿ ಬೆಳವಣಿಗೆ ಹೊಂದಿ ಬೇರೆ ಭಾಷೆಗಳಿಗಿಂತ ವೇಗವಾಗಿ ಬೆಳೆಯಿತು. ಅಂತೋನಿಯೋ, ಡಿ ತೆಂಪು ೧೨೭೫ ಪಡುವಾದಲ್ಲಿ ಜನಿಸಿದ ಈತ ಮೊದಲ ಬರಹಾಗಾರನೆಂದು ಪರಿಗಣಿಸಲಾಗಿದೆ. ತುಷ್ಕನಿಯಲ್ಲಿ ಬಂದ ಮೊದಲ ಪದ್ಯ ಡಾಂಡೆ, ಡೆ ಮುಜುನ್ನೊನದಾಗಿತ್ತು. ೧೩ನೆಯ ಶತಮಾನದಲ್ಲಿ ಮೊದಲಬಾರಿಗೆ ಗದ್ಯವು ಇಟಲಿಭಾಷೆಯಾದ ತುಷ್ಕನಿಯಲ್ಲಿ ರಚಿಸಲ್ಪಟ್ಟಿತು ಮತ್ತು ಮತ್ನಾಲ, ಡಿ. ಸ್ಪಿನೆಲೋ ಡೆ ಲಂಬಾರ್ಧಿನಿ ಗದ್ಯ ಬರೆವಣಿಗೆ ಆರಂಭಿಸಿದ.

೧೨೮೭ರಲ್ಲಿ ಪುನರುತ್ಥಾನದೊಂದಿಗೆ ಹೊಸ ಸಾಹಿತ್ಯ ಆರಂಭವಾಯಿತು. ಲಾಪೋ ಗಿಯಾನಿ, ಗೈಡೊಕಾಲ್ಕಂಟಿ, ಸಿನೊಡೆ ಪಿಸ್ಟೋಲಗೂ ಮತ್ತು ಡಾಂಡೆ ಅಲಿಗೆಹರಿ ಇವರ ಭಾವಗೀತೆಗಳು ಸಂಪೂರ್ಣವಾಗಿ ತುಷ್ಕನಿಯಾ ಭಾಷೆಯಲ್ಲಿ ಬರೆದಂತಹವುಗಳು ಹೀಗೆ ಇಟಲಿ ಸಾಹಿತ್ಯ ತನ್ನ ಬೆಳವಣಿಗೆ ಹೊಂದಿತು.

ಡಾಂಟೆ (೧೨೬೫–೧೩೨೧)

ಇಟಲಿಯ ಮಹಾಕವಿ. ಡಿವೈನ್ ಕಾಮಿಡಿ (ದಿವ್ಯಲೀಲೆ) ಎಂಬ ಮಹಾಕಾವ್ಯದ ಕರ್ತೃ. ಹುಟ್ಟಿದ್ದು ಫ್ಲಾರೆನ್ಸ್ ನಗರದಲ್ಲಿ, ಈತನ ಮನೆತನ ನಗರದ ಪ್ರಮುಖ ಮನೆತನಗಳಲ್ಲಿ ಒಂದಲ್ಲದಿದ್ದರೂ ಅದಕ್ಕೆ ಹಿರಿಯತನವೂ ಕುಲೀನತೆಯೂ ಯಶಸ್ಸೂ ಸಾಕಷ್ಟಿದ್ದುವು. ಇವನ ಅಜ್ಜನ ಅಜ್ಜನಾದ ಕ್ಯಾಕ್ಸಿಯಗೈಡ ಎಂಬಾತ ಚಕ್ರವರ್ತಿಯಿಂದ ನೈಟ್ ಪ್ರಶಸ್ತಿ ಗಳಿಸಿ, ಯೋಧನಾಗಿ ಧಾರ್ಮಿಕ ಯುದ್ಧವೊಂದರಲ್ಲಿ ಮಡಿದ. ಅವನ ಹೆಂಡತ ಆಲ್ಫಿಯೆರೊ ಬಣಕ್ಕೆ ಸೇರಿದವಳು. ಅವರಿಬ್ಬರ ಮಗ ಮೊಟ್ಟಮೊದಲಾಗಿ ಆಲ್ಫಿಯೇರಿ ಎಂಬ ಅಂಕಿತವನ್ನು ಬಳಸಿಕೊಂಡವನಾಗಿ ಮುಂದಣ ಸಂತತಿಗೂ ಅದೇ ರೂಢಿಯಾಯಿತು. ಡಾಂಟೆ ಎಂಬುದು ಬಹುಶಃ ಡುರಾಂಟೆ ಎಂಬುದರ ಸಂಕ್ಷಿಪ್ತ ರೂಪ. ತರುವಾಯ ಬಂದವರು ಅಷ್ಟೇನೂ ಹೆಸರಾಂತವರಲ್ಲ; ಮನೆ ಜಮೀನಿಗೆ ಒಡೆಯರು ಅಷ್ಟೆ ಡಾಂಟೆಯ ತಂದೆ ಕರಾರು ಬರೆಯುವ ಒಬ್ಬ ಅಧಿಕಾರಿ ಎಂದು ಮಾತ್ರ ಗೊತ್ತು. ಅವನ ತಾಯಿಯ ಹೆಸರು ಬೆಲ್ಲಾ ಎಂದು ಮಾತ್ರ ಗೊತ್ತು. ಬಾಲಕನಾಗಿರುವಾಗಲೇ ಡಾಂಟೆ ತಾಯಿ, ತಂದೆ ಇಬ್ಬರನ್ನೂ ಕಳೆದುಕೊಂಡ.

೧೨೭೪ರಲ್ಲಿ ಜರುಗಿದ ಒಂದು ಘಟನೆ ಡಾಂಟೆಯ ಮೇಲೆ ಬಲವಾದ ಪ್ರಭಾವ ಬೀರಿ ದೊಡ್ಡ ಪ್ರಮಾಣದ ಘಟನೆಯಾಯಿತು. ಇವನಿಗೆ ಆಗ ಒಂಬತ್ತು ವರ್ಷವಾಗಿತ್ತು; ಒಂಬತ್ತನೆಯ ವರ್ಷದ ಆರಂಭದಲ್ಲಿದ್ದ ಬಿಯಟ್ರಿಸ್ ಎಂಬ ಮುಗ್ಧ ಬಾಲೆ ಇವನ ಕಣ್ಣಿಗೆ ಬಿದ್ದಳು. ಅವಳುಟ್ಟಿದ್ದ ಉದಾತ್ತ ಕಡುಗೆಂಪು ಲಂಗವೂ ತೊಟ್ಟಿದ್ದ ಅಚ್ಚುಕಟ್ಟಾದ ಒಡ್ಯಾಣವೂ ಅವಳ ದೇಹಕೃತಿಯ ಸೊಬಗನ್ನು ಇಮ್ಮಡಿಸಿದ್ದುವು; ಸಂದರ್ಶನವಾದ ಕೂಡಲೇ ಡಾಂಟೆಯ ಹೃದಯದೊಳಕ್ಕೆ ಅತಿ ಶಕ್ತ ದೇವತೆಯೊಂದು ಹೊಕ್ಕಂತಾಯಿತು. ಬಿಯಟ್ರಿಸ್ ಅಲ್ಲಿ ನೆಲಸಿಬಿಟ್ಟಳು. ಫೋಲ್ಕೊ ಪೋಟಿನರಿ ಎಂಬ ಶ್ರೀಮಂತನ ಕುಮಾರಿ ಅವಳೆಂದು ಸಂಶೋಧಕರು ಕಂಡುಹಿಡಿದಿದ್ದಾರೆ; ಮುಂದೆ ಅವಳು ಒಬ್ಬ ಬ್ಯಾಂಕ್ ಮಾಲಿಕನನ್ನು ಮದುವೆಯಾಗಿ ೧೨೯೦ರಲ್ಲಿ ಅಸು ನೀಗಿದಳು.

ವಯಸ್ಸು ಹದಿನೆಂಟು ಆದಾಗ ಡಾಂಟೆ ಕವನ ಬರೆಯಲು ಪ್ರಾರಂಭಿಸಿದ, ಪ್ರೇಮಗೀತೆ ಬರೆದು ಅದನ್ನು ಪ್ರಸಿದ್ಧ ಗೀತಕವಿಯಾದ ಗೈಡೊ ಕ್ಯಾವಲ್ ಕ್ಯಾಂಟಿಗೆ ಕಳಿಸಿ, ಆತನ ಮೆಚ್ಚಿಕೆಯನ್ನೂ ಸ್ನೇಹವನ್ನೂ ಗಳಿಸಕೊಂಡ. ಜೊತೆಗೆ ಗಣರಾಜ್ಯದ ಕಾರ್ಯದರ್ಶಿಯಾದ ತತ್ತ್ವಜ್ಞ ಬ್ರೂನೆಟೊ ಲ್ಯಾಟೀನಿ ಎಂಬ ವಿದ್ವಾಂಸನ ಬೋಧನೆಯಿಂದ ಪಾಠ ಪ್ರವಚನದಲ್ಲಿ ಆಸಕ್ತಿ ವಹಿಸಿದ. ತರುಣರಿಗೆ ಸಹಜವಾದ ಇತರ ಹವ್ಯಾಸಗಳಲ್ಲೂ ಇವನಿಗೆ ಶ್ರದ್ಧೆಯಿತ್ತು. ಸಂಗೀತ ಚಿತ್ರಕಲೆ ಕುದುರೆಸವಾರಿ ಗೆಳೆಯರ ಗೋಷ್ಠಿ ಮುಂತಾದವುಗಳ ಆಕರ್ಷಣೆಗೆ ಪಕ್ಕಾಗಿದ್ದ. ೧೨೮೮ರಲ್ಲೇ ಅಶ್ವದಳದ ದಾಳಿಗಳಲ್ಲಿ ತಾನೂ ಒಬ್ಬನಾಗಲು ಉತ್ಸಾಹ ತೋರಿಸಿದ. ೧೨೮೯ರ ಜೂನ್ ೧೧ರಂದು ಫ್ಲಾರೆನ್ಸ್ ಕಾದಿ ಗೆದ್ದ ಕ್ಯಾಂಪಾಲ್ಡಿನೊ ಕಾಳಗದಲ್ಲಿ ಅಗ್ರಪಂಕ್ತಿಯ ರಾವುತರ ಸಂಗಡಿಗನಾಗಿ ಧೈರ್ಯ ನೈಪುಣ್ಯ ಮೆರೆದ. ಡಾಂಟೆಯ ಅಭಿಮತದಂತೆ ಕಾವ್ಯಕ್ಕೆ ವಸ್ತುವಾಗುವ ವಿಷಯ ಮೂರೇ: ಪ್ರೇಮ, ಯುದ್ಧ, ಶೀಲಧರ್ಮ, ಮೂರರ ಸ್ವಂತ ಅನುಭವ ಇವನಿಗೆ ಲಭಿಸಿತ್ತು.

ಡಾಂಟೆಯ ಆಯುಷ್ಯದಲ್ಲಿ ೧೨೯೦ ಒಂದು ಪರ್ವ ಸಂವತ್ಸರ; ಇತ್ತ ಪಟ್ಟಣದಲ್ಲೆಲ್ಲ ವಿಜಯೋತ್ಸವದ ಮಹಾ ಸಂಭ್ರಮ, ಅತ್ತ ಮಾನಸಿಕ ಪ್ರೇಯಸಿ ಬಿಯಟ್ರಿಸಳ ಅಕಾಲ ಮರಣ. ಅಳಲಿನಿಂದಲೂ ಯಾತನೆಯಿಂದಲೂ ಪರತಪಿಸುತ್ತ ಸಮಾಧಾನಕ್ಕಾಗಿ ತತ್ತ್ವಶಾಸ್ತ್ರವನ್ನು ಮರೆಹೊಕ್ಕ. ಬೊಎತಿಯಸ್ ಸಿಸಿರೊಗಳ ಪ್ರಬಂಧಗಳನ್ನು ಓದಿದ. ಮತಧರ್ಮ ದೇವತಾಶಾಸ್ತ್ರಗಳ ವ್ಯಾಖ್ಯಾನವನ್ನು ಕುಳಿತು ಆಲಿಸಿದ. ಹಾಗು ಬಿಯಟ್ರಸಳ ನೈತಿಕ ಆಧ್ಯಾತ್ಮಿಕ ಹತೋಟಿಯಿಂದ ಸಡಿಲನಾಗಿ ನಶ್ವರ ಪ್ರಾಪಂಚಿಕತೆಗೆ ಬಿದ್ದ, ಸಲ್ಲದ ಆಚಾರ ವ್ಯವಹಾರಕ್ಕೆ ಮನತೆತ್ತ. ಆ ದಿವಸಗಳ ಬದುಕನ್ನು ಕುರಿತು ಮುಂದೆ ತನಗೇ ವಿಶೇಷ ಪಶ್ಚಾತ್ತಾಪ ಉಂಟಾಯಿತು. ತನ್ನ ಮಹಾಕಾವ್ಯದ ಎರಡನೆಯ ಭಾಗವಾದ ಪ್ರಾಯಶ್ಚಿತ್ತ ಲೋಕದ (ಪರ್ಗಟೋರಿಯೊ) ಅಂತ್ಯದಲ್ಲಿ ಆತ್ಮರೂಪದ ಬಿಯಟ್ರಿಸ್ ನಿಜರೂಪದ ಇವನನ್ನು ಮುಚ್ಚುಮರೆ

ಯಿಲ್ಲದ ಕಟುವಚನದಿಂದ ದಂಡಿಸುತ್ತಾಳೆ. ಇವನಿಗೆ ವಿಷಯ ಲೋಲುಪ ಶ್ರೀಮಂತ ಫೋರೆಸಿ ಡೊನಾಟಿಯೊಂದಿಗೆ ಗೆಳೆತನ ಉಂಟಾಯಿತು. ಸದ್ಗುಣಿ ಗೈಡೊ ಕ್ಯಾವಲ್‌ಕ್ಯಾಂಟಿಗೂ ಇವನಿಗೂ ವೈಮನಸ್ಯ ತಲೆದೋರಿತು. ಹಲವು ಪ್ರಮದೆಯರು ಇವನ ಪಥದಲ್ಲಿ ಸುಳಿದಂತೆ ಕಾಣಿಸುತ್ತದೆ; ಹಲವು ಪ್ರಣಯ ಗೀತಗಳು ಇವನಿಂದ ರಚಿತವಾದುವು. ಫೋರೆಸಿಗೆ ದೂರದ ಸಂಬಂಧಿಯಾಗಿದ್ದ ಜೆಮ್ಮಡಿ ಮನೆಟ್ಟೊ ಡೊನಾಟಿ ಎಂಬ ಯುವತಿಯ ಕೈಹಿಡಿದ. ನಾಲ್ಕು ಮಕ್ಕಳನ್ನು ಹೆತ್ತುಕೊಟ್ಟರೂ ಜೆಮ್ಮಳದು ಕಠಿಣ ಸ್ವಭಾವ, ಅವಳೊಬ್ಬ ಸಿಡುಕಿ. ಮನೆಯ ನೆಮ್ಮದಿ ಡಾಂಟೆಗೆ ಗಿಟ್ಟಿದ್ದು ಬಲು ಕಡಿಮೆ. ಗಂಡ ದೇಶಭ್ರಷ್ಟನಾಗಿ ಹೋದಾಗ ಹೆಂಡತಿಗೆ ಫ್ಲಾರೆನ್ಸಿನ ವಾಸವೇ ಪ್ರಿಯವಾಯಿತು. ಸಾಲಸೋಲದ ಹೊರೆಯೂ ಡಾಂಟೆಯ ಮೇಲೆ ಭಾರವಾಗಿ ಬಿತ್ತು. ಏಳೆಂಟು ವರ್ಷದಲ್ಲಿ, ಎಂದರೆ ೧೩೦೦ರ ಮುನ್ನ, ಈತ ಮಾಡಿದ ಸಾಲವನ್ನು ಈತ ಸಾವಿನ ಅನಂತರ ಆಸ್ತಿಪಾಸ್ತಿ ಮಾರಿ ತೀರಸಬೇಕಾಯಿತು.

ಅಷ್ಟೇ ಅಲ್ಲದೆ ರಾಜಕೀಯದ ಗುಯೆಲ್ಫ್, ಗಿಬೆಲೀನ್ ಎಂಬ ಕಕ್ಷಿ ಪ್ರತಿಕಕ್ಷಿಗಳ ಮಾರಕ ಗೊಂದಲದ ನಡುವೆ ಸಿಕ್ಕಿಕೊಂಡು ನರಳುವ ದುರ್ವಿಧಿಯೂ ಡಾಂಟೆಯ ಪಾಲಿಗೆ ಬಂತು. ಫ್ಲಾರೆನ್ಸಿನ ರಾಜ್ಯಾಡಳಿತ ವೃತ್ತಿಸಂಘಗಳ ಕೈಯಲ್ಲಿತ್ತು. ಕಸಬುದಾರರು ಮಾತ್ರ ಆ ಸಂಘಗಳ ಸದಸ್ಯರಾಗಿರುತ್ತಿದ್ದರು. ೧೨೯೫ರಲ್ಲಿ ಜಾರಿಗೆ ಬಂದ ಶಾಸನದಂತೆ ಕಸಬುದಾರರಲ್ಲದವರೂ ವೃತ್ತಿಸಂಘಗಳನ್ನು ಪ್ರವೇಶಿಸುವ ಹಕ್ಕನ್ನು ಪಡೆದರು. ಡಾಂಟೆ ವೈದ್ಯರ ಸಂಘವನ್ನು ಸೇರಿ, ಬೇಗ ಬೇಗ ಅಭ್ಯುದಯ ಹೊಂದಿ ದಂಡಾಧಿಕಾರಿ (ಪ್ರಯರ್) ಮಂಡಲಿಯಲ್ಲಿ ಒಬ್ಬನಾದ. ಆದರೆ ಅವನಿದ್ದ ಕಕ್ಷಿಗೆ ಪ್ರತಿಕಕ್ಷಿಯ ಮಸಲತ್ತಿನಿಂದಲೂ ಚರ್ಚಿನ ಅಧಿಪತಿ ಪೋಪ್ ಗುರುವಿನ ಆಗ್ರದಿಂದಲೂ ೧೩೦೧ರ ನವೆಂಬರಿನಲ್ಲಿ ಸೋಲುಂಟಾಯಿತು. ಗೆದ್ದವರು ೧೩೦೨ ರ ಜನವರಿಯಲ್ಲಿ ಡಾಂಟೆ ಮತ್ತು ಇತರ ನಾಲ್ಕು ಮಂದಿಯ ಮೇಲೆ ದಸ್ತು ಇತ್ಯಾದಿ ಆಪಾದನೆ ಹೊರಿಸಿ, ಭಾರಿ ಜುಲ್ಮಾನೆ ಹಾಕಿ, ಎರಡು ವರ್ಷ ಫ್ಲಾರೆನ್ಸಿನಿಂದ ಹೊರಗೆ ಇರಬೇಕೆಂದು ಹುಕುಂ ಮಾಡಿದರು. ಅದೇ ಮಾರ್ಚಿ ತಿಂಗಳಲ್ಲಿ ಇನ್ನೊಂದು ಆಜ್ಞೆಯನ್ನೂ ಹೊರಡಿಸಿದರು–ಡಾಂಟೆ ಮತ್ತು ಇತರ ಹದಿನಾಲ್ಕು ಮಂದಿ ಫ್ಲಾರೆನ್ಸಿನೊಳಕ್ಕೆ ಬಂದರೆ ಅವರನ್ನು ದಸ್ತಗಿರಿಮಾಡಿ, ಸುಟ್ಟುಬಿಡತಕ್ಕದ್ದು ಎಂದು. ದೇಶಬಾಹಿರನಾಗಿ ಡಾಂಟೆ ಹೊರಟಾಗ ತನ್ನ ವೈಯಕ್ತಿಕ ನಷ್ಟಕ್ಕಿಂತಲೂ ಹೆಚ್ಚಾಗಿ ತನ್ನ ಧ್ಯೇಯಕ್ಕೆ ತಗಲಿದ ದಕ್ಕೆ ಅವನನ್ನು ಹಿಂಸಿಸಿತೆಂದು ಹೇಳಬಹುದು.

ಮುಂದಿನ ಹದಿನೈದು ವರ್ಷ ಆಶ್ರಯದಾತನನ್ನು ಅರಸುತ್ತ. ಒಂದೆಡೆ ಹೆಚ್ಚು ಕಾಲ ತಂದುವುದಕ್ಕೆ ಅವಕಾಶವಿಲ್ಲದೆ, ಇಟಲಿಯ ಸುತ್ತ, ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಪಯಣಿಸುವ ಅಲೆಮಾರು ಬಾಳು ಡಾಂಟೆಗೆ ಪ್ರಾಪ್ತಿಸಿತು. ವೆರೋನ ಬೊಲೋನ ಪಾದುವ ಮುಂತಾದ ಪ್ರದೇಶಗಳಲ್ಲಿ ಸುತ್ತಾಡಿದ. ಇಟಲಿಯ ಹೊರಗಡೆಗೂ ಹೋಗಿ ಪ್ರೊವೆನ್ಸ್ ಮುಖಾಂತರ ಪ್ಯಾರಿಸ್ ನಗರವನ್ನೂ ಮುಟ್ಟಿದ್ದ

ಎಂದು ಪ್ರತೀತಿ. ಎಲ್ಲೆಲ್ಲಿ ಸಂಚರಿಸುತ್ತಿದ್ದರೂ ಎಷ್ಟೇ ರಿಕ್ತಾವಸ್ಥೆಯಲ್ಲಿದ್ದರೂ ಎದೆಗೇಡಾಗಲಿ ಹತಾಶೆಯಾಗಲಿ ಅತಿದುಃಖವಾಗಲಿ ಅವನ ಹತ್ತಿರ ಸುಳಿಯಲಿಲ್ಲ. ಧೈರ್ಯದಿಂದ, ಪ್ರಬಲ ಆತ್ಮವಿಶ್ವಾಸದಿಂದ, ಮಹಾಕಾವ್ಯವೊಂದನ್ನು ರಚಿಸುವ ಹುರುಪಿನಿಂದ ಕಾಲತಳ್ಳಿದ. ೧೩೧೫ರಲ್ಲಿ ಅವನಿಗೊಂದು ಸಂದೇಶ ಬಂತು. ನಮೂದಿಸಿದ ಮೊಬಲಗನ್ನು ದಂಡವಾಗಿ ತೆತ್ತು, ಬಿಡುಗಡೆ ಪಡೆದ ಬಂದಿಯ ರೀತಿ ದೇವಪೀಠದ ಮುಂದೆ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಒಪ್ಪಿದರೆ ಫ್ಲಾರೆನ್ಸಿಗೆ ಹಿಮ್ಮರಳಲು ಅನುಮತಿ ಸಿಕ್ಕುತ್ತದೆ ಎಂದು ತಿಳಿದಾಗಲೂ ಡಾಂಟೆ ಅವಮಾನಕರವಾದ ಆ ಕರಾರಿಗೆ ಒಪ್ಪಲಿಲ್ಲ.

ಒಟ್ಟಿನಲ್ಲಿ ಕೊನೆಯ ನಾಲ್ಕು ವರ್ಷ ಡಾಂಟೆ ಹರ್ಷ ಉಲ್ಲಾಸದಿಂದ ಇರುವಂತಾದುದು ಅವನ ಪುಣ್ಯ. ರ್‍ಯಾವೆನ್ನದ ಅಧಿಪತಿ ಆಹ್ವಾನವಿತ್ತು ಅವನನ್ನು ಬರಮಾಡಿಕೊಂಡ. ಡಾಂಟೆಯ ಗಂಡು ಮಕ್ಕಳಲ್ಲಿ ಇಬ್ಬರೂ ಮಗಳಾದ ಬಿಯಟ್ರಿಸಳೂ ಅವನೊಂದಿಗಿದ್ದರು. ಕೆಲವು ಒಳ್ಳೆಯ ಸಂಗಾತಿಗಳು ಸಿಕ್ಕಿದರು. ಪಂಡಿತರೂ ಶಿಷ್ಯರೂ ಅವನ ಅಡಿಯಲ್ಲಿ ಕುಳಿತು ಪಾಠ ಕಲಿಯಲು ನಾ ಮುಂದು ತಾಮುಂದು ಎನ್ನುತ್ತ ಬರುತ್ತಿದ್ದರು. ಅವರಲ್ಲಿ ರಾಷ್ಟ್ರದ ಅಧಿಪತಿ ಒಬ್ಬ, ಉಚ್ಚ ಮಠಾಧೀಶ ಇನ್ನೊಬ್ಬ, ಬೋಲೋನದಿಂದ ನಾಯಕ ಕವಿಯೆಂಬ ಕಿರೀಟ ಬಂತು. ಇದ್ದಕ್ಕಿಂದ್ದಂತೆ ೧೩೨೧ರ ಜುಲೈ ತಿಂಗಳಿನಲ್ಲಿ ರ್‍ಯಾವೆನ್ನಕ್ಕೂ ವೆನಿಸ್ ನಗರಕ್ಕೂ ಮನಸ್ತಾಪ ಉಕ್ಕಿಬಂತು. ಸಂಧಾನಕ್ಕಾಗಿ ರ್‍ಯಾವೆನ್ನ ಕಳಿಸಿದ ನಿಯೋಗಿಗಳಲ್ಲಿ ಡಾಂಟೆಯೂ ಒಬ್ಬ; ಜ್ವರದೊಂದಿಗೆ ಹಿಂದಿರುಗಿ ಹಾಸಿಗೆ ಹಿಡಿದ ಡಾಂಟೆ ಸೆಪ್ಟೆಂಬರ್ ೧೪ನೆಯ ತಾರೀಖು ಅಸುನೀಗಿದ.

ಡಾಂಟೆಯ ಭೌತ ಅವಶೇಷವನ್ನು ತರಿಸಿಕೊಂಡು ಸಮಾಧಿ ಕಟ್ಟಲು ಫ್ಲಾರೆನ್ಸ್ ಹಲವೊಮ್ಮೆ ಪ್ರಯತ್ನ ನಡೆಸಿತು; ಆದರೆ ರ್‍ಯಾವೆನ್ನ ಅದಕ್ಕೆ ಒಪ್ಪಲಿಲ್ಲ.

ಡಾಂಟೆಯ ಕೃತಿಚಕ್ರ: ಬಗೆಬಗೆ ಛಂದಸ್ಸಿನ ಭಾವಗೀತೆಗಳು, ಎರಡು ಗೀತಾ ಸಂಕಲನ, ಗಂಭೀರ ವಿಚಾರಗಳ ಮೇಲಣ ಎರಡು ಗದ್ಯ ಪ್ರಬಂಧ, ಒಂದು ಭವ್ಯ ಕಾವ್ಯ, ಹಲವು ದೀರ್ಘ ಕುಶಲ ಪತ್ರಗಳು, ಎರಡು ಗೊಲ್ಲಗೀತೆ–ಇಷ್ಟೂ ಡಾಂಟೆಯ ಕೃತಿಸಂತಾನ, ದಿವ್ಯ ಲೀಲೆಯನ್ನುಳಿದು ಮಿಕ್ಕ ಕೃತಿಗಳು ಚಿಕ್ಕವಾದರೂ ಅಪ್ರಧಾನವಲ್ಲ, ಸಾಧಾರಣವಲ್ಲ. ಅವುಗಳಿಗೆ ತಮ್ಮತಮ್ಮದೇ ಆದ ಗಣ್ಯತೆಯಿದೆ. ಕವಿಯ ಬೆಳೆವಣಿಗೆಗೆ ಬೆಳಕು ಹಿಡಿಯುವ ಕಾಂತಿಯಿದೆ. ಒಂದೊಂದರ ಮೇಲು ಅನೂನ ಮಹಾಕವಿಯ ನಿಸ್ಸಂದಿಗ್ಧ ಮುದ್ರೆಯಿದೆ.

ಡಾಂಟೆಯ ಆಂತರ್ಯದಲ್ಲಿ ಕವಿಶಕ್ತಿ ಉದಯಿಸಿದಾಗ ಅವನಿಗೆ ತಕ್ಷಣ ಸೂಕ್ತ ವಿಷಯವಾಗಿ ಬಿಯಟ್ರಿಸ್ ಮೇಲಣ ಪ್ರೇಮ ಮುಂದೆ ಬಂತು; ಅರ್ಥಾತ್ ಭಾವಗೀತೆ ಪ್ರೇಮಗೀತೆಯಾಯಿತು. ಆ ಸಮಯದಲ್ಲಿ ಇಟಲಿಯ ಕವಿಗಳಿಗೆ ಪ್ರವೆನ್ಸ್ ಪ್ರಾಂತದ ಕವಿಗಾಯಕರ ಗುಂಪಿನ ಕವಿತಾಪದ್ಧತಿ ಮಾರ್ಗದರ್ಶನಕ್ಕೆ

ಇದ್ದಿತೇ ಶಿವಯ್ ದೇಶೀಯ ಕ್ರಮವಾವುದೂ ಇರಲಿಲ್ಲ. ಗೈಡೊಗುಇನಿಚೆಲ್ಲಿ (ಸುಮಾರು ೧೨೩೦–೧೩೦೦) ಎಂಬ ಏಕೈಕ ಇಟಲಿಯ ಕವಿ ದಿ ಜಂಟಲ್ ಹಾರ್ಟ್ (ಶಿಷ್ಟೋಚಿತ ಹೃದಯ) ಎಂಬ ಲಘು ಗೀತವನ್ನು ಬರೆದಿದ; ಅದರಲ್ಲಿ ಅವನು ಒತ್ತಿ ಹೇಳಿದ ಅಭಿಪ್ರಾಯ ಇದು; ಪ್ರೇಮವೆಂಬುದು ಸ್ವರ್ಗೀಯ ಭಾವ; ಮರ್ತ್ಯನೊಳಕ್ಕೆ ಅದು ಇಳಿಯಬೇಕಾದರೆ ಮರ್ತ್ಯಹೃದಯ ಪ್ರಾಮಾಣಿಕವೂ ಪರಿಶುದ್ಧವೂ ಉದಾತ್ತವೂ ಆಗಿರಬೇಕು. ಕವಿಗಾಯಕರು ಆಗಲೇ ಪ್ರೇಮ ವ್ಯಾಪಾರವನ್ನು ಪ್ರೇಯಸಿಯ ಸೇವೆಯೆಂಬಷ್ಟಕ್ಕೇ ನಿಲ್ಲಿಸದೆ ಮಂತ್ರಗಿಂತ್ರವಿಲ್ಲದ ಒಂದು ಬಗೆಯ ಆರಾಧನೆಯ ಮಟ್ಟಕ್ಕೆ ಏರಿಸಿದ್ದರು. ಗುಇನಿಚೆಲ್ಲಿ ಮಧ್ಯಯುಗದಲ್ಲಿ ರೂಢಿಗೆ ಬಂದು ಅತಿಸೂಕ್ಷ್ಮ ಪಾಂಡಿತ್ಯವನ್ನು (ಸ್ಕೂಲ್ಯಾಸ್ಟಿಸಿಸಂ) ಬಲ್ಲವನಾದ್ದರಿಂದ ಅದರ ಒಂದು ಸಂಗತಿಯಾದ ದೇವರಿಂದ ಭಕ್ತನಿಗೆ ಪರಮಸುಖ ಅನುಗ್ರಹವಾಗು ವುದನ್ನು ಪ್ರೇಮ ತತ್ತ್ವಕ್ಕೆ ಸಾದೃಶ್ಯವಾಗಿಯೂ ಸಮರ್ಥನೆಯಾಗಿಯೂ ಬಳಸಿದ; ಮತ್ತು ಪಾರಿಭಾಷಿಕ ಪದಗಳಿಂದ ಪದ್ಯವನ್ನು ಸ್ವಲ್ಪ ಮಟ್ಟಿಗೆ ಕ್ಲಿಷ್ಟಗೊಳಿಸಿದ. ಅವನಿಂದ ಪ್ರೇರಿತನಾದ ಡಾಂಟೆ ಉತ್ಕೃಷ್ಟ ಸುಧಾರಣೆಗಳಿಂದ ಪ್ರೇಮಗೀತೆಯನ್ನು ಕಲಾಪೂರ್ಣ ಕವಿತ್ವವನ್ನಾಗಿಸಿದ. ಪಾಂಡಿತ್ಯದ ಕಷ್ಟಶಬ್ದಗಳನ್ನೂ ನಿಗೂಢ ಚಿಂತನೆಗಳನ್ನೂ ಬಿಟ್ಟುಕೊಟ್ಟು ಸರ್ವಸಾಮಾನ್ಯವೂ ಸುಲಭ ಗ್ರಾಹ್ಯವೂ ಆದ ಆರಿಸಿದ ಪದಕೋಶದ ಮೂಲಕ ಮಾನವೀಯ ಭಾವ ಭಾವನೆಗಳನ್ನು ವಿವರಿಸಿದ. ಕವಿ ಬರೆಯುವುದು ವಿಶಿಷ್ಟ ವಿದ್ವಾಂಸರಿಗೇ ಅಲ್ಲ. ಕುತೂಹಲವುಳ್ಳ ಜನಸಾಮಾನ್ಯರಿಗೂ ಸತ್ಯಾಂಶವನ್ನು ಸಾರಿದ. ಸಾಂಪ್ರದಾಯಿಕತೆ. ಔಪಚಾರಿತ ಹೇಳಿಕೆ, ಅತಿಶಯೋಕ್ತಿ, ನಿಮಾಧಿಪತ್ಯ. ಶಬ್ದಕ್ರೀಡೆ, ಛಂದಸ್ಸಿನ ಚಮತ್ಕಾರ, ಹಳಸಲು ಮುಂತಾದವುಗಳಿಂದ ಕೃತಕ ನಿರ್ಮಿತಿಯಾಗಿದ್ದ ಕವಿತೆಯ ಸವರೂಪವನ್ನು ಕೊಂಚಮಟ್ಟಿಗೆ ಬದಲಾಯಿಸಿದ. ಹೃದಯದಿಂದ ಹೊರಹೊಮ್ಮುವ ಋಜುರಾಜಭಾವನೆಯ ಅಭಿವ್ಯಕ್ತಿಯನ್ನು ಮುಖ್ಯ ವಾಗಿಟ್ಟು ಕೊಂಡು ಭಾಷೆ ಅಲಂಕಾರ ಎರಡನ್ನೂ ಹರಿತಗೊಳಿಸಿ ನೈಜತೆಯನ್ನೂ ಮನವೊಪ್ಪಿಸುವಿಕೆಯನ್ನೂ ಸಾಧಿಸಲು ಯತ್ನಿಸಿದ. ಹೊಸತನ, ಹೊಸ ರೀತಿ, ಹೊಸ ಶೈಲಿ ತನ್ನವೆಂದು ಘೋಷಿಸಿದ್ದನ್ನು ಸ್ವಲ್ಪಮಟ್ಟಿಗೆ ರುಜುವಾತು ಮಾಡಿದ. ಆದರೆ ಅವನೂ ಒಬ್ಬ ಮಧ್ಯಯುಗದ ಕವಿ; ನಿಜವಾದ ನೂತನತೆ ಬರುವುದಕ್ಕೆ ಬಹಳ ಹಿಂದಿನವ.

(ಅ) ವಿಟನೋವ (ಹೊಸ ಬಾಳು) ಎಂಬ ಸಂಕಲನದಲ್ಲಿ ೩ ಕ್ಯಾನ್ಜನಿ, ೨ ಲಘುಗೀತ, ೧ ಬ್ಯಾಲಟ, ೨೫ ಸಾನೆಟ್ ಇವೆ. ಅವೆಲ್ಲವನ್ನೂ ಪೋಣಿಸಿ ಮಾಲೆ ಕಟ್ಟುವ ದಾರದಂತೆ ಒಂದು ಗದ್ಯ ಕಥನವುಂಟು. ೧೭೯೦ರಲ್ಲಿ ಸತ್ತ ಬಿಯಟ್ರಿಸ್ ಬಿಳಿ ಉಡುಪಿನ ಸ್ವಪ್ನದರ್ಶನವಾಗಿ ಡಾಂಟೆಗೆ ಕಾಣಬಂದಳಂತೆ. ಪ್ರೇಮಚೋದಿತನಾದ ಕವಿ ಅವಳನ್ನು ಕುರಿತು ತಾನು ಆಗಾಗ ರಚಿಸಿದ್ದ ಕವನಗಳನ್ನು ಒಟ್ಟುಗೂಡಿಸಿ ವ್ಯಾಖ್ಯಾನರೂಪದ ಗದ್ಯವನ್ನು ಯುಕ್ತ ಸರಣಿಯಲ್ಲಿ ಸೇರಿಸಿ, ಹೊಸ ಬಾಳು

ಎಂಬ ಅಂಕಿತದಿಂದ ಪ್ರಕಟಿಸಿದ (೧೭೯೧). ಪೀಠಿಕೆಯ ತರುವಾಯ ಮೂರು ಭಾಗಗಳು ಬರುತ್ತವೆ; ಮೊದಲಿನದರಲ್ಲಿ ಬಿಯಟ್ರಿಸ್ಸಳ ದೈಹಿಕ ಲಾವಣ್ಯವೂ ಕವಿಯ ಮೇಲೆ ಅದರ ಸೆಳೆತವೂ ವರ್ಣಿತವಾಗಿವೆ; ಎರಡನೆಯದರಲ್ಲಿ ಅವಳ ಆತ್ಮದ ಘನತೆಯೂ ಅದರ ಪ್ರಭಾವವೂ ಸುತ್ತಿಗೊಂಡಿವೆ; ಮೂರನೆಯದರ ತುಂಬ ಸ್ವರ್ಗದಲ್ಲಿರುವ ಅವಳನ್ನು ಕಂಡ ದೇವದೂತರ ಆಶ್ಚರ್ಯ ಸಂತೋಷವೂ ಭೂಮಿಯ ಮೇಲೆ ಕವಿ ಅವಳನ್ನು ನೆನೆದು ಅರ್ಪಿಸುವ ಅರ್ಚನೆಯೂ ವಿವರಿಸಲ್ಪಟ್ಟಿವೆ. ಉಪಸಂಹಾರದಲ್ಲಿ ಯಾವುದೆಲ್ಲಾ ದಿವ್ಯಶಕ್ತಿ ತನ್ನನ್ನು ಎತ್ತಿಕೊಂಡು ಮೇಲಣಾಕಾಶಕ್ಕೆ ಕೊಂಡೊಯ್ದು ಬಿಯಟ್ರಿಸ್ ಪರಮಸೌಖ್ಯದಲ್ಲಿ ಮಂಡಿತಳಾಗಿರುವುದನ್ನು ತೋರಿಸಿದಂತೆ ತನಗಾದ ಅನುಭವವನ್ನು ವರದಿ ಮಾಡಿ, ಡಾಂಟೆ ಇನ್ನು ಮುಂದೆ ಅವಳ ವಿಚಾರವಾಗಿ ಘನವೂ ಪವಿತ್ರವೂ ಆದದ್ದಲ್ಲದೆ ಮತ್ತೇನನ್ನೂ ನುಡಿಯುವುದಿಲ್ಲವೆಂದು ಶಪಥ ಮಾಡುತ್ತಾನೆ. ಹೊಸಬಾಳಿನ ಉದ್ದಕ್ಕೂ ಬಿಯಟ್ರಿಸ್ಸಳೇ ನಾಯಕಿಯೂ ಚಾಲಕ ಚೈತನ್ಯವೂ ಆಗಿದ್ದರೂ ಇತರ ಕೆಲವು ಮಹಿಳೆಯರು ಉಪಪಾತ್ರಗಳಾಗಿ ಬರುತ್ತಾರೆ. ಬಿಯಟ್ರಿಸ್ಸಳ ಮರಣಾನಂತರ ಡಾಂಟೆ ಬಹುಶಃ ಅವರತ್ತ ತನ್ನ ಕಣ್ಣನ್ನೂ ಚಿತ್ತವನ್ನೂ ಹರಿಯಿಸದ್ದುದು ಅಸಂಭವವಲ್ಲ.

(ಆ) ಬಿಡಿ ಪದ್ಯಗಳಾದ ಇನೂ ೨೦ ಕ್ಯಾನ್ಜನಿ, ೯ ಬ್ಯಾಲಟ, ೨೬ ಸಾನೆಟ್ಟು ಡಾಂಟೆ ಬರೆದವೆಂದು ಪ್ರಕಟಗೊಂಡಿವೆ. ಅವುಗಳಲ್ಲಿ ಬಹು ಸಾನೆಟ್ಟುಗಳೂ ೭ ಬ್ಯಾಲಟಗಳೂ ಪ್ರಕ್ಷಿಪ್ತವೆಂದು ಹಲವು ಪಂಡಿತರ ಅಭಿಮತ. ಕ್ಯಾನ್ಜನಿಗಳಲ್ಲಿ ೧೫ ಡಾಂಟೆಯ ಕೃತಿಯೆಂಬುದೂ ಅವು ಅತ್ಯುತ್ತಮ ಕಾವ್ಯವೆಂಬುದೂ ನಿಸ್ಸಂದೇಹ. ಅದೇನೇ ಇರಲಿ, ಈ ಗೀತಗಳನ್ನು ನಾಲ್ಕು ಗುಂಪಾಗಿ ವಿಂಗಡಿಸಬಹುದು: ಹೊಸಬಾಳು ಮತ್ತು ಬಿಯಟ್ಟರಿಸ್ ಸಂಬಂಧವುಳ್ಳವು; ಡಾಂಟೆಯ ದ್ವಿತೀಯ ಪ್ರೇಯಸಿಯನ್ನು ಕುರಿತವು; ರಾಗಾವೇಶದ ಕವನ; ನೀತಿಬೋಧೆ. ರಾಗಾವೇಶದ ಪದ್ಯಗಳಲ್ಲಿ ಸೂಚಿತರಾಗಿರುವ ರಮಣಿಯರು ವಾಸ್ತವಿಕ ವ್ಯಕ್ತಿಗಳೆಂದು ಹೆಚ್ಚು ಕಡಿಮೆ ಒಮ್ಮತದ ಅಭಿಪ್ರಾಯವಿದೆ. ಕಟೆದ ಶಿಲೆಯಂತೆ ಚೆಲುವಿದ್ದರೂ ಪರುಷಳಾದ ಯುವತಿ (ಪ್ರಾಯಶಃ ಅವಳ ಹೆಸರು ಪಿಯೆಟ್ರ=ಕಲ್ಲು); ಹಸುರುಡೆಯ ಹೊಂಗೂದಲಿನ ವಿಸ್ಮಯ ವನಿತೆ; ಇತ್ಯಾದಿ. ತನ್ನ ಆಂತರ್ಯ ಪ್ರೇಮದ ಬೆಂಕಿಯಲ್ಲಿ ದಹನಗೊಳ್ಳುತ್ತಿದೆ, ತಾನು ಆ ಹುತಾತ್ಮ ಎಂದು ಡಾಂಟೆ ಚಿತ್ರಿಸಿಕೊಂಡಿದ್ದಾನೆ.

(ಇ) ಎರಡನೆಯ ಸಂಕಲನದ ಹೆಸರು ಕಾನ್ವಿವಿಯೊ (ರಸಭೋಜನ). ದೇಶ ಬಾಹಿರನಾದ ಮೇಲೆ ಡಾಂಟೆಗೆ ಆಧ್ಯಾತ್ಮಿಕತೆಯ ಬಗೆಗೆ ಪ್ರಬಲೇಚ್ಛೆ ಹುಟ್ಟಿತು. ತತ್ತ್ವಶಾಸ್ತ್ರದ ಅಧ್ಯಯನವನ್ನು ತೀವ್ರವಾಗಿಯೂ ಗಾಢವಾಗಿಯೂ ಕೈಗೊಂಡ, ಹಾಗೂ ಜನಗಳಿಗೆ ಬೋಧೆ ಮಾಡಬೇಕೆಂಬ ಬಯಕೆಯೂ ಅವನಿಗೆ ಉಂಟಾಯಿತು. ಹಿರಿಯ ಪುರೋಹಿತರ ಭಾಷಣ ಬರೆವಣಿಗೆ ಕಬ್ಬಿಣದ ಕಡಲೆಯಾಗಿದ್ದುದರಿಂದ ಸುಲಭವಾದ ಕಿರುಕವನಗಳ ಮೂಲಕ ಘನಾಭಿಪ್ರಾಯವನ್ನು ತಿಳಿಸಲು ಮನಸ್ಸು

ಮಾಡಿದ. ಫಲವಾಗಿ ರಸಭೋಜನ ಹೊರಬಂತು. ಅದಕ್ಕೆ ಅಂಗವಾಗಿ, ತನ್ನ ಹಿಂದಣ ಲೇಖನವಾದ ೧೪ ಗೀತೆಗಳನ್ನು ಆಯ್ಕೆ ಮಾಡಿ, ಅವಕ್ಕೆ ಬೇರೆ ಬೇರೆ ಭಾಷ್ಯ ಬರೆದು, ದೊಡ್ಡ ಪ್ರಬಂಧವೊಂದರ ಮುನ್ನುಡಿಯೊಡನೆ ಓದುಗರ ಮಿದುಳಿಗೆ ರುಚಿಯೌತಣ ಬಡಿಸಬೇಕೆಂಬುದು ಅವನ ಹಂಬಲ. ಆದರೆ ಮುನ್ನುಡಿ, ಮೂರು ಭಾಷ್ಯ ಮಾತ್ರ ತಯಾರಾಯಿತು. ಪುಸ್ತಕ ಅಸಮಗ್ರವಾಗಿಯೇ ಉಳಿಯಿತು. ವೈಯಕ್ತಿಕವಾದ ಇನ್ನೊಂದು ಅಪೇಕ್ಷೆಯೂ ಅವನಲ್ಲಿ ಮೂಡಿಬಂತು. ಹೊಸಬಾಳು ಪ್ರಚುರಪಡಿಸಿದ ತನ್ನ ಲೌಕಿಕತೆ ಶಾರೀರಿಕ ತುಯ್ಯಲು ಮುಂತಾದವುಗಳಿಂದ ಅವನಿಗೆ ಅಸಮಾಧಾನವೂ ಕುಖ್ಯಾತಿಯ ಅಂಜಿಕೆಯೂ ಕುದಿದೆದ್ದವು. ತಾನು ಸದಭಿಪ್ರಾಯದವ ಸದಾಚಾರಸಂಪನ್ನ ಎಂದು ಸ್ಥಿರಪಡಿಸುವುದು ಹೇಗೆ? ಲಿಖಿತವಾದ ವಾಕ್ಯಗಳನ್ನು ಬದಲಾಯಿಸುವಂತಿಲ್ಲ. ಆದ್ದರಿಂದ ಅವುಗಳ ಬಾಹ್ಯಾರ್ಥ ಮುಖ್ಯವಲ್ಲ, ಅನ್ಯಾರ್ಥ (ಆ್ಯಲಿಗೊರಿ) ಮುಖ್ಯ ಎಂದು ಪ್ರತಿಪಾದಿಸಲೋಸ್ಕರ ಮುನ್ನುಡಿಯಲ್ಲಿ ಯುಕ್ತಿಯುಕ್ತ ವಾದವೊಂದನ್ನು ಹೂಡಿದ. ತನ್ನ ಭಾವೋದ್ರೇಕ ಎಂದಿಗೂ ಕಾಮೋದ್ರೇಕವಲ್ಲ, ಶೀಲಧರ್ಮದ ವಾಂಛಲ್ಯ; ತಾನು ಹೊಗಳಿ ಹಿಂಬಾಲಿಸಿದ ಹೆಣ್ಣು ಮನುಷ್ಯೆಯಲ್ಲ, ಹೆಚ್ಚಾಗಿ ಕಲ್ಪಿಸಿಕೊಂಡ ತತ್ತ್ವಶಾಸ್ತ್ರ; ತಾನು ಬಳಸಿದ ಸೌಂದರ್ಯ ಅನುಗ್ರಹ ಅನುಭೋಗ ಸಂತೋಷ ಮುಂತಾದುವನ್ನು ಆಮುಷ್ಮಿಕ ದೃಷ್ಟಿಯಿಂದ ಪರಿಭಾವಿಸತಕ್ಕದ್ದು ಎಂದು ತಿಳಿಸಿದ.

(ಈ) ಡಾಂಟೆಯ ಪ್ರಬಂಧಗಳೆರಡೂ ಲ್ಯಾಟಿನ್ ಗದ್ಯದಲ್ಲಿ ಬರೆದವು. ಮೊದಲನೆಯದು ದಿ ಮಾನಾರ್ಕಿಯ (ಅರಸೊತ್ತಿಗೆಯ ವಿಚಾರ). ಚರ್ಚಿಗೂ ಚಕ್ರಾಧಿಪತ್ಯಕ್ಕೂ ಅಥವಾ ಪೋಪ್ ಗುರುವಿಗೂ ಸಾರ್ವಭೌಮನಿಗೂ ನಡುವೆ ಅಧಿಕಾರ ವ್ಯಾಪ್ತಿಯ ವಿವಾದದಿಂದ ಮಧ್ಯಯುಗದ ರಾಜಕೀಯ ವಿಪರೀತ ಗಲಭೆಯ ಅನಿಶ್ಚಿತ ಸಂಗತಿಯಾಯಿತು. ಡಾಂಟೆಯ ಮನಸ್ಸಿಗೆ ಜಗಳ ಅತಾರ್ಕಿಕವೂ ಅನ್ಯಾಯವೂ ಆಗಿ ತೋರಿ ಬಂತು. ಪೋಪನದು ಧಾರ್ಮಿಕ ಕ್ಷೇತ್ರದ ಆಡಳಿತ; ಸಾರ್ವಭೌಮನದು ಲೌಕಿಕ ಕ್ಷೇತ್ರದ ಆಡಳಿತ; ಅದಕ್ಕೂ ಇದಕ್ಕೂ ಘರ್ಷಣೆಗೆ ಆಸ್ಪದವೆಲ್ಲಿ? ಪ್ರಬಂಧಕ್ಕೆ ಮೂರು ಪರಿಚ್ಛೇದ; ರಾಜತ್ವಕ್ಕೆ ಸಂಬಂಧಿಸಿದ ಮೂರು ಪ್ರಶ್ನೆಗಳಿಗೂ ಜವಾಬು ಉಂಟು. ೧. ನರಸಮೂಹಕ್ಕೆ ರಾಜತ್ವ ಆವಶ್ಯಕವೇ? ಆವಶ್ಯಕ, ಹೇಗೆಂದರೆ; ವಿಶ್ವಮಾನವ ಜಾತಿಯನ್ನು ದೇವರು ತನ್ನ ಕಲೆಯಾದ ಪ್ರಕೃತಿಯ ಮೂಲಕ ಸೃಷ್ಟಿಸಿರುವುದರ ಉದ್ದೇಶ ಮಾನವ ತನ್ನ ಪೂರ್ತಿ ಬುದ್ಧಿ ಶಕ್ತಿಯನ್ನು ಆಲೋಚನೆಗೂ ಕಾರ್ಯಾವಳಿಗೂ ಉಪಯೋಗಿಸಬೇಕೆಂಬುದು. ದೈವ ವಿಧಾಯಕವಾದ ಈ ಕೆಲಸಕ್ಕೆ ವಿಶ್ವಶಾಂತಿಯೇ ಮಾರ್ಗ. ಶಾಂತಿಯನ್ನು ಪಾಲಿಸುವುದಕ್ಕೆ ಎಲ್ಲರನ್ನೂ ಹತೋಟಿಯಲ್ಲಿ ಇಟ್ಟುಕೊಳ್ಳಬಲ್ಲ ಒಬ್ಬನೇ ಪ್ರಭು ಅತ್ಯಗತ್ಯ. ಪ್ರಪಂಚದ ಸುವ್ಯವಸ್ಥೆ ನ್ಯಾಯದ ಮೇಲೆ ನಿಂತಿರುತ್ತದೆ; ನ್ಯಾಯ ಪರಿಪಾಲನೆಯೂ ಎಲ್ಲರ ಮೇಲೂ ಅಧಿಕಾರವುಳ್ಳ ಅರಸನಿಂದಲೇ ಆಗಬೇಕು; ಅರಸನ ಹಿಡಿತಕ್ಕೆ ಒಳಪಟ್ಟಿರುವುದೇ

ನೈಜ ಸ್ವಾತಂತ್ರ್ಯ. ೨. ರೋಮನರಿಗೆ ಸಾರ್ವಭೌಮತ್ವದ ಹೆಗ್ಗೌರವನ್ನು ಪಡೆಯುವುದಕ್ಕೆ ಹಕ್ಕು ಇದ್ದಿತೆ? ಇತ್ತು; ಹಕ್ಕು ಎಂದರೆ ದೇವರ ಇಚ್ಛೆ; ಅದು ಕಣ್ಣಿಗೆ ಕಾಣಿಸದಿದ್ದರೂ ಅದಕ್ಕೆ ಉತ್ತಮ ಕಾರ್ಯಕಾರಿತ್ವ ಉಂಟು. ರೋಮಿನ ಚರಿತ್ರೆಯನ್ನು ನೋಡಿ. ಪುರಾಣ ಯುಗದಲ್ಲಿ ಉದಾತ್ತ ಪುರುಷ ಇನಿಯಸ್‌ನನ್ನು ಕಳಿಸಿದ್ದು; ಅವನ ಸಂತತಿಯ ಮೇಲ್ಮೆ, ರೋಮನರ ವೃದ್ಧಿಗಾಗಿ ನಡೆಸಿದ ಪವಾಡಗಳು. ಸಿನ್ಸಿನಾಟಸ್‌ನಿಂದ ಕೇಟೋವರೆಗೂ ರೋಮನ್ ಜನತೆ ಗಣರಾಜ್ಯದ ಧ್ಯೇಯಕ್ಕೆ ತನು ಮನ ಧನ ತೆತ್ತದ್ದು; ಅಸ್ಸೀರಿಯನರು ಈಜಿಪ್ಟಿನವರು ಪರ್ಷಿಯನರು ಕೊನೆಗೆ ಅಲೆಗ್ಸಾಂಡರ್ ಎಲ್ಲರನ್ನೂ ತ್ಯಜಿಸಿ ರೋಮನರನ್ನು ಜಾಗತಿಕ ಪ್ರಭುತ್ವಕ್ಕೆ ಚುನಾಯಿಸಿದ್ದು–ಇವೆಲ್ಲ ದೈವ ನಿಯಾಮಕದ ಸಾಕ್ಷ್ಯವಲ್ಲವೇ? ಚಕ್ರವರ್ತಿ ಅಗಸ್ಟಸ್ಸನ ಆಳಿಕೆಯಲ್ಲಿ ಏಸು ಕ್ರಿಸ್ತ ಜನಿಸಿ, ಚಕ್ರವರ್ತಿ ಟೈಬೀರಿಯಸ್ಸನ ಪ್ರಾಂತೀಯ ಪ್ರತಿನಿಧಿಯ ಆಜ್ಞೆಯಿಂದ ಸಿಲುಬೆಗೇರಿ, ರೋಮನ್ ಚಕ್ರಾಧಿಪತ್ಯಕ್ಕೆ ಮಣಿದು ಒಪ್ಪಿಗೆ ಕೊಟ್ಟನಲ್ಲವೇ? ಕ್ರಿಸ್ತನ ಚರ್ಚಿನವರಾರೂ ರೋಮನ್ ಚಕ್ರಾಧಿಪತ್ಯವನ್ನು ಪ್ರಶ್ನಿಸುವಂತಿಲ್ಲ. ೩. ರೋಮನ್ ಸಾರ್ವಭೌಮನ ಶ್ರೇಷ್ಠಾಧಿಕಾರ ನೇರವಾಗಿ ದೇವರಿಂದ ದತ್ತವಾದದ್ದೆ ಅಥವಾ ದೇವರ ಪ್ರತಿನಿಧಿಯೆಂಬ ಪೋಪ್ ಗುರುವಿನಿಂದ ಬಂದದ್ದೆ– ಇದೆ ಅತಿಮುಖ್ಯ ಪ್ರಶ್ನೆ. ಡಾಂಟೆಯ ಸ್ಪಷ್ಟ ಉತ್ತರ, ಮೊದಲನೆಯದು. ಚರ್ಚು ಉದಯಿಸುವುದಕ್ಕೆ ಮುಂಚೆ ಚಕ್ರಾಧಿಪತ್ಯ ಇತ್ತು; ಚರ್ಚಿಗೆ ಅದರಿಂದಲೇ ಸಮ್ಮತಿ ಬಂತು. ಯಾವ ಅಧೀಶ್ವರನಿಂದಾಗಲಿ, ಪ್ರಜಾವರ್ಗದಿಂದಾಗಲಿ ಚಕ್ರಾಧಿಪತ್ಯದ ಮೇಲೆ ಅಧಿಕಾರ ಚಲಾಯಿಸುವ ಪ್ರಭಾವ ಚರ್ಚಿಗೆ ಕೊಡುಗೆಯಾದದಲ್ಲ. ಇನ್ನೊಂದು ಸಂಗಂತಿ, ಮನುಷ್ಯ ಪ್ರಾಣಿಯೊಬ್ಬನೆ ಪಾಪಸಹಿತನಾಗಬಲ್ಲ, ಪಾಪರಹಿತನೂ ಆಗಬಲ್ಲ ಅವನಿಗೋಸ್ಕರ ದೇವರು ಎದುರಿಗಿಟ್ಟಿರುವ ಗುರಿ ಎರಡು: ಇಹದ ಪರಮ ಸೌಖ್ಯ, ಪರದ ದಿವ್ಯಾನಂದ. ಎರಡನ್ನೂ ಸಿದ್ಧಿಸಿಕೊಳ್ಳಬೇಕಾದದ್ದು ಅವನ ಕರ್ತವ್ಯ, ಎಂದಮೇಲೆ ಆತ ಇತ್ತ ಚಕ್ರಾಧೀಶನಿಗೂ ಅತ್ತ ಪೋಪ್ ಗುರುವಿಗೂ ವಿನಯಗೂಡಿ ವಿಧೇಯನಾಗಿದ್ದರೆ ಲೇಸು.

ಅರಸೊತ್ತಿಗೆಯ ವಿಚಾರ ಚರ್ಚಿನ ಕಡೆಯವರೆಗೆ ತಲೆ ನೋವನ್ನೂ ಕ್ರೋಧವನ್ನೂ ತರುತ್ತದೆಂದು ಡಾಂಟೆಬಲ್ಲ; ಆದರೂ ಕೆಚ್ಚೆದೆಯಿಂದ ಅದನ್ನು ಪ್ರಕಟಿಸಿದ. ಹೀನ ಪಕ್ಷಪಾತದ ಗುಲಾಮ ಜನ ಏನು ಬೇಕಾದರೂ ಆಡಲಿ, ಮಾಡಲಿ ಅವನಿಗೇನು!

(ಉ) ಮೂರ್ತಿ ಚಿಕ್ಕದು ಕೀರ್ತಿ ದೊಡ್ಡದು ಎಂಬ ನಾಣ್ಣುಡಿಗೆ ಡಾಂಟೆಯ ಎರಡನೆಯ ಲ್ಯಾಟಿನ್ ಪ್ರಬಂಧ ವೋಲ್ಗಾಲ್ ಎಲೋಕ್ವೆಂಞ (ಜನರ ಆಡುನುಡಿ) ಒಂದು ಉತ್ಕೃಷ್ಟ ನಿದರ್ಶನ. ಭಾಷಾ ವಿಷಯವಾದರೂ ಅದರಲ್ಲಿ ಒಳ್ಳೆಯ ಸಾಹಿತ್ಯ ವಿಮರ್ಶೆ ಅಡಗಿದೆಯಾಗಿ ಅದರ ಪ್ರಸ್ತಾಪವನ್ನು ಲೇಖನದ ಕೊನೆಗೆ ಕಾಣಬಹುದು.

(ಊ) ಆಪ್ತಮಿತ್ರರಿಗೂ ಆಡಳಿತಗಾರರಿಗೂ ಸುದ್ದಿ ಸಲಹೆ ತಿಳಿಸಲೋಸುಗ ಡಾಂಟೆ ಆಗಾಗ ಕುಶಲಪತ್ರಗಳನ್ನು ಬರೆಯುತ್ತಲಿದ್ದ. ಬಳಸಿಕೊಂಡ ಭಾಷೆ ಲ್ಯಾಟಿನ್. ಅವುಗಳಲ್ಲಿ ಹತ್ತು ಮಾತ್ರ ಉಪಲಭ್ಯವಾಗಿವೆ. ಐದೊ ಆರೋ ಅವನ ಬರೆಹ ಆಗಿರಬಹುದೆಂದೂ ಉಳಿದವು ಸಂಶಯಾಸ್ಪದವೆಂದೂ ಬಲ್ಲವರ ಅಭಿಮತ. ಆ ಕಾಲದ ಆಗುಹೋಗುಗಳಿಂದ ತನಗುಂಟಾದ ವೇದನೆ ಹರ್ಷ ಆಶೆ ನಿರಾಶೆ ಮೊದಲಾದುವನ್ನು ಮುಚ್ಚುಮರೆಯಿಲ್ಲದೆ ಜೋರಾದ ಪದಗುಚ್ಛಗಳಿಂದ ಕವಿ ವಿವರಿಸಿದ್ದಾನೆ. ಕ್ಯಾನ್ ಗ್ರಾಂಡೆ ಎಂಬ ಆಶ್ರಯದಾತನಿಗೆ ಕಳಿಸಿದ ಕುಶಲಪತ್ರದಲ್ಲಿ ಹೆಚ್ಚಿನ ಸ್ವಾರಸ್ಯವುಂಟು. ಅದರಲ್ಲಿ ದಿವ್ಯ ಲೀಲೆಯ ವಾಚ್ಯಾರ್ಥ ಅನ್ಯಾರ್ಥಗಳ ವಿವರಣೆಯೂ ಟ್ರ್ಯಾಜಡಿ ಕಾಮಿಡಿ ಶಬ್ದಗಳ ತಾತ್ಪರ್ಯವೂ ಕವಿಯಿಂದಲೇ ವರ್ಣಿತವಾಗಿವೆ. ನೋವಿನಿಂದ ಪ್ರಾರಂಭವಾಗಿ ಸಂತಸದಲ್ಲಿ ಮುಕ್ತಾಯವಾಗುವ ಕಥೆ ಕಾಮಿಡಿ; ನರಕದಲ್ಲಿ ಮೊದಲಾಗಿ ಸ್ವರ್ಗದಲ್ಲಿ ಕೊನೆಗೊಳ್ಳುವ ಯಾತ್ರೆಯ ಕಥೆಯಾದ್ದರಿಂದ ದಿವ್ಯಲೀಲೆಗೆ ಡಿವೈನ್ ಕಾಮಿಡಿ ಎಂಬ ಹೆಸರು ಸರಿಯಾದದ್ದು.

(ಋ) ಎರಡು ಗೊಲ್ಲಗೀತೆಗಳು: ಕ್ಯಾನ್ ಗ್ರಾಂಡೆಗೆ ಕಳಿಸಿದ ಕುಶಲಪತ್ರದಂತೆ ಜೀವನದ ಕೊನೆಯ ದಿವಸಗಳಲ್ಲಿ ಡಾಂಟೆ ಬರೆದ ಎರಡು ಹಳ್ಳಿಗಾಡು ಪದಗಳೂ (ಎಕ್‌ಲಾಗ್ಸ್) ಸುರಮ್ಯವಾಗಿವೆ. ಜಿಯೊವಾನ್ನಿ ಡೆಲ್ ವರ್ಜಿಲಿಯೊ ಎಂಬ ಯುವಕ ಮಾಪ್ಸಸ್ ಎಂಬ ಹೆಸರನ್ನಿಟ್ಟುಕೊಂಡು ಬೋಲೋನಾದಿಂದ ಡಾಂಟೆಗೆ ಲ್ಯಾಟಿನ್ ಪದ್ಯದ ಒಂದು ಗೊಲ್ಲಗೀತೆ ಕಳಿಸಿದ: ಅದರಲ್ಲಿ ದಿವ್ಯಲೀಲೆಯನ್ನು ಮುಕ್ತಕಂಠದಿಂದ ಹೊಗಳಿ, ಅದನ್ನು ಇಟಾಲಿಯನ್ ನುಡಿಯಲ್ಲಿ ಬರೆದಿದ್ದನ್ನು ತೆಗಳಿ, ಡಾಂಟೆ ಬೋಲೋನಾಕ್ಕೆ ಬಂದು ಕವಿಶ್ರೇಷ್ಠನ ಲಾರೆಲ್ ಕಿರೀಟವನ್ನು ಪಡೆಯಬೇಕೆಂದು ಆಹ್ವಾನವಿತ್ತ. ರಾವೆನ್ನಾದಲ್ಲಿದ್ದ ಡಾಂಟೆ ಅದೇ ಶೈಲಿಯಲ್ಲಿ ತನ್ನನ್ನು ಟೈಟಿರಸ್ ಎಂದೂ ತನ್ನ ಗೆಳೆಯನನ್ನು ಮೆಲಿಬಿಯಸ್ ಎಂದೂ ಕರೆದುಕೊಂಡು ಮಾಪ್ಸಸ್ಸಿಗೆ ರವಾನಿಸಿದ ಉತ್ತರ ಇದು: 'ಬೊಲಾನಾಕ್ಕೆ ದೇವರು ದಿಂಡರಿಲ್ಲ. ಅಲ್ಲಿಗೆ ನಾನು ಬರಲೊಲ್ಲೆ. ಲಾರೆಲ್ ಕಿರೀಟದ ಅಪೇಕ್ಷೆಗೆ ಇನ್ನೂ ದಿವ್ಯಲೀಲೆಯ ಮೂರನೆಯ ಭಾಗ ಮುಗಿದಿಲ್ಲ. ಮಾತೃಭಾಷೆಯನ್ನು ಮರ್ಯಾದಿಸಬೇಕೆಂದು ನಿನಗೆ ನನ್ನ ಮನವಿಯನ್ನು ನನ್ನ ಬಳಿಯ ಅತ್ಯಂತ ಅಂದವಾದ ಹೆಣ್ಣುಮೇಕೆಯ ಹಾಲಿನಲ್ಲಿ ಹತ್ತು ಸೇರನ್ನು ಕಳಿಸುವ ರೂಪದಲ್ಲಿ ಮಾಡುತ್ತಿದ್ದೇನೆ.' ಈ ಪತ್ರದ ಜೊತೆಗೆ ಪ್ಯಾರಡೈಸೊ ಕಾವ್ಯದಿಂದ ಹತ್ತು ಅಧ್ಯಾಯಗಳನ್ನು ಕಳಿಸಿಕೊಟ್ಟ. ಅವುಗಳನ್ನು ಓದಿ ಡೆಲ್ ವರ್ಜಿಲಿಯೊ ಇನ್ನೊಂದು ಪದ್ಯದೂತನನ್ನು ಅಟ್ಟಿದ: "ಅನ್ಯಾಯವಾಗಿ ನಿನಗೊದಗಿರುವ ಬಹಿಷ್ಕಾರ ಬೇಗ ಅಂತ್ಯಗೊಳ್ಳುವ ಸೂಚನೆಯಿದೆ. ಬೇಗ ಹಿಮ್ಮರಳಿ ಫ್ಲಾರೆನ್ಸಿನಲ್ಲಿ ನಿನ್ನ ಫಿಲ್ಲಿಸಳನ್ನು ಕೂಡಿಕೊಳ್ಳುವೆ. ದಣಿ ಇಯೊಲಾಸ್ ನಿನ್ನನ್ನು ಬಿಟ್ಟುಕೊಡುವುದಾದರೆ ತ್ವರೆಯಿಂದ ಬೋಲೋನಾಕ್ಕೆ ಬಾ. ಉತ್ಸಾಹದ ಸ್ವಾಗತವೂ ಗ್ರಾಮೀಣ ಉಲ್ಲಾಸದ ಹಬ್ಬಗಳೂ ನಿನಗಾಗಿ ಕಾಯುತ್ತಿವೆ." ಜವಾಬು ಕಳಿಸಲು

ಏತಕ್ಕೋ ಡಾಂಟೆ ತಿಂಗಳುಗಟ್ಟಲೆ ತಡಮಾಡಿದ. ಇಲ್ಲಿ ಒಳ್ಳೆಯ ಹಸಿರು ಹುಲ್ಲುಗಾವಲು ಇದೆ. ಬೋಲೋನಾದಲ್ಲಿ ಸೈಕಾಪ್ಸಿನ ಗುಹೆಯಿದೆ; ಪಾಲಿಫೀಮಸನೆಂದರೆ ನನಗೆ ಭೀತಿ. ಇನ್ನು ನನಗೆ ಯಾವ ಪಟ್ಟಣವೂ ಮುಕುಟ ವಿಡಲಾರದು. ಪೈರು ಕೊಯ್ಯುವಾತ ನನಗೊಂದು ಅಮರ ಹಾರವನ್ನು ಆಯುತ್ತಿದ್ದಾನೆ. ಈ ಪತ್ರ ಡಾಂಟೆ ಸತ್ತಮೇಲೆ ಮಾಪ್ಸಸ್ಸನ ಕೈಸೇರಿತು. ಗಂಭೀರ ಡಾಂಟೆಯೂ ಸರಸವಾಡಬಲ್ಲವನಾಗಿದ್ದ.

(ಋ) ಡಿವೈನ್ ಕಾಮಿಡಿ (ದಿವ್ಯಲೀಲೆ): ಹೊಸ ಬಾಳು ಸಂಕಲನದ ಸಮಾಪ್ತಿ ವಾಕ್ಯವಾಗಿ ಡಾಂಟೆ ಹೀಗೆ ಬರೆದಿದ್ದ: ನಾನೊಂದು ದೈವಿಕ ಕಾಣ್ಕೆಯನ್ನು ಕಂಡೆ. ಬಿಯಟ್ರಿಸ್ಸಳ ಮಹಾಮೇಲ್ಮೆಗೆ ತಕ್ಕಂತೆ ಮಾತನಾಡುವ ಅರ್ಹ ನನಗೆ ಲಭಿಸುವ ವರೆಗೂ ಅವಳ ವಿಷಯವಾಗಿ ತುಟಿಪಿಟಿಕ್ಕೆನ್ನುವುದಿಲ್ಲ. ಅತಿಶ್ರದ್ಧೆಯಿಂದ ವ್ಯಾಸಂಗ ಗೈಯುತ್ತಿದ್ದೇನೆ. ದೇವರು ನನಗೆ ಆಯುಷ್ಯ ಕೊಟ್ಟರೆ ಇನ್ನಾವ ಹೆಂಗಸನ್ನು ಕುರಿತು ಯಾರೂ ಹೇಳಿಲ್ಲದ್ದನ್ನು ಅವಳ ಬಗೆಗೆ ಹೇಳಬೇಕೆಂಬುದು ನನ್ನ ಆಕಾಂಕ್ಷೆ. ಕವಿಗೆ ಆ ಅಪೂರ್ವ ದರ್ಶನ ದೊರಕಿದ್ದು ೧೩೦೦ರಂದು ಎಂದು ನಿರ್ಧರಿಸಿದ್ದಾರೆ. ಅವನಿಗೆ ಆಗ ೩೫ ವರ್ಷ; ಮನುಷ್ಯನ ಆಯುಃಪ್ರಮಾಣ ಮೂರು ಇಪ್ಪತ್ತು ಮತ್ತು ಹತ್ತು ಎಂಬುದು ಸತ್ಯವಾದರೆ ಡಾಂಟೆ ಆಗ ಬಾಳಿನ ನಟ್ಟನಡುವನ್ನು ತಲಪಿದ್ದ. ಆದರೆ ತತ್‌ಕ್ಷಣ ಅವನು ಭವ್ಯಕಾವ್ಯ ರಚನೆಗೆ ಕೈಯಿಡಲಿಲ್ಲ. ಅದನ್ನು ಯಾವಾಗ ಪ್ರಾರಂಭಿಸಿದನೊ ಗೊತ್ತಿಲ್ಲ. ಒಂದು ವಿಧದಲ್ಲಿ ಆ ವಿಳಂಬದಿಂದ ಒಳ್ಳೆಯದೇ ಆಯಿತು. ನಾನಾ ದೇಶಗಳ ಪರ್ಯಟನ, ಹಲವಾರು ವ್ಯಕ್ತಿಗಳ ಸಹವಾಸ, ಚಿಂತೆ ಆತಂಕಗಳ ನೂರಾರು ಅನುಭವ, ಗ್ರಂಥಜ್ಞಾನ, ಪ್ರಪಂಚಾವಲೋಕನ–ಮುಂತಾದವುಗಳಿಂದ ಅವನ ಮನಸ್ಸು ಸುಪುಷ್ಟವಾಯಿತು. ಪ್ರಭಾವಯುಕ್ತವಾಯಿತು. ವಿಕಾಸಗೊಂಡಿತು. ಬುದ್ಧಿ ಹರಿತವಾಯಿತು. ಹೃದಯ ತೀಕ್ಷ್ಣವಾಯಿತು. ಭೂಮಿ ನರಕ ಸ್ವರ್ಗಗಳ ಅನ್ವೇಷಣ ಯಾತ್ರೆಗೆ ಅನುರೂಪವಾದ ಸಾಮರ್ಥ್ಯ ಸಾಹಸ ನಿಷ್ಠೆಗಳನ್ನು ಅರ್ಜಿಸಿಕೊಂಡು ಆತ್ಮಪ್ರತ್ಯಯದಲ್ಲಿ ವೆಗ್ಗಳನಾದ. ಮೊದಲನೆಯ ಭಾಗವಾದ ಇನ್‌ಫರ್ನೊ (ಪಾಪಿಗಳ ಲೋಕ) ಎರಡನೆಯದಾದ ಪರ್ಗಟೋರಿಯೊ (ಪ್ರಾಯಶ್ಚಿತ್ತಲೋಕ) ಎರಡೂ ಸುಮಾರು ೧೩೧೪ ರಿಂದ ೧೩೧೮ ರೊಳಗೆ ರಚಿತ ವಾಗಿರಬೇಕು; ಮೂರನೆಯದಾದ ಪ್ಯಾರಡೈಸ್ಲೊ (ಪರಮಾನಂದ ಲೋಕ) ಸುಮಾರು ೧೩೧೬ರಿಂದ ೧೩೨೧ ಸೆಪ್ಟೆಂಬರಿನೊಳಗೆ ಪೂರ್ತಿಗೊಂಡಿರಬೇಕು. ಅದರ ಕೊನೆಯ ೧೩ ಅಧ್ಯಾಯ ಡಾಂಟೆ ಬಿಟ್ಟು ಹೋದ ಕಾಗದ ಕಟ್ಟುಗಳಲ್ಲಿ ಕಾಣಬರಲಿಲ್ಲವಂತೆ; ಹುಡುಕಿ ಹುಡುಕಿ ಸಾಕಾಯಿತು. ಇನ್ನೇನು ಮಗ ಜಾಕೋಪೊ ಅವನ್ನು ಬರೆದು ಕಾವ್ಯವನ್ನು ಮುಗಿಸಬೇಕೆಂದು ಪ್ರಯತ್ನಿಸುತ್ತಿದ್ದಾಗ ಡಾಂಟೆಯ ಪ್ರೇತ ಬಿಳಿವಸನದಲ್ಲಿ ಕಾಣಿಸಿಕೊಂಡು ಹಸ್ತಪ್ರತಿ ಹುದುಗಿದ್ದ ಗೂಡನ್ನು ಗುರುತಿಸಿಕೊಟ್ಟಿತಂತೆ. ಡಾಂಟೆಯ ವಿಷಯದಲ್ಲಿರುವ ಹಲವಾರು ದಂತಕಥೆಗಳಲ್ಲಿ ಇದೊಂದು.

ಪಾಪಿಗಳ ಲೋಕ ೩೪ ಅಧ್ಯಾಯ. ಪ್ರಾಯಶ್ಚಿತ್ತ ಲೋಕ ೩೩ ಅಧ್ಯಾಯ, ಪರಮಾನಂದ ಲೋಕ ೩೩ ಅಧ್ಯಾಯ– ಒಟ್ಟು ಸರಿಯಾಗಿ ೧೦೦. ಯಾವ ಅಧ್ಯಾಯವೂ ಸುಮಾರು ೧೧೪ ಪಂಕ್ತಿಗೆ ಕಡಿಮೆಯಾಗಿಲ್ಲ. ೧೫೯ ಪಂಕ್ತಿಗೆ ಹೆಚ್ಚಾಗಿಲ್ಲ. ಡಾಂಟೆ ಬಹು ಜಾಗರೂಕ ಕವಿ. ಛಂದಸ್ಸಿನ ಹೆಸರು ಟೆರ್ಝಾ ರೀಮಾ. ಹನ್ನೊಂದು ಉಚ್ಚಾರಾಂಶಗಳ ಸಾಲುಳ್ಳ ಪದ್ಯ, ಒಂದನೆಯ ಸಾಲಿಗೂ ಮೂರನೆಯ ಸಾಲಿಗೂ ಅಂತ್ಯಪ್ರಾಸ; ಎರಡನೆಯ ಸಾಲಿಗೂ ಮುಂದಣ ಪದ್ಯದ ಒಂದನೆಯ ಮೂರನೆಯ ಸಾಲುಗಳಿಗೂ ಅಂತ್ಯ ಪ್ರಾಸ; ಅ ಆ ಅ। ಆ ಇ ಆ। ಇ ಈ ಇ। ಈ ಉ ಈ। ಉ ಊ ಉ – ಹೀಗೆ ವಿರಚನೆ ಮುಂದುವರಿಯುತ್ತದೆ. ಈ ಪದ್ಯಜಾತಿಯನ್ನು ಹಿಂದಿನವರು ಉಪಯೋಗಿಸಿದ್ದರೂ ಯಾರೂ ದೊಡ್ಡ ಕಾವ್ಯಕ್ಕೆ ಆಲಂಬನ ಮಾಡಿಕೊಂಡಿರಲಿಲ್ಲ. ಡಾಂಟೆಯ ಛಂದೋ ನೈಪುಣ್ಯವಂತೂ ಅನ್ಯಾದೃಶವಾದದ್ದು.

ಕಾವ್ಯಕ್ಕೆ ಕವಿ ಕೊಟ್ಟ ಹೆಸರು 'ಡಾಂಟೆಯ ಆಲ್ಫಿಯೇರಿಯ ಇನ್‌ಫರ್ನೊ ಪರ್ಗೆಟರಿ ಪ್ಯಾರಡೈಸುಗಳ ದರ್ಶನ'. ಸ್ವಪ್ನಸದೃಶವಾದ ಕಾಣ್ಕೆಯಾದ್ದರಿಂದ ಅದು ಅಕ್ಷರಶಃ ಮಿಥ್ಯೆ, ಕವಿ ವಿಭಾವನೆಯ ಕಲ್ಪನೆ. ಅನ್ಯಾರ್ಥದ ಮೂಲಕ ಮಿಥ್ಯೆ ಸತ್ಯವಾಗುವಂತೆ ಎಸಗಿರುವುದೇ ಡಾಂಟೆಯ ಕೈವಾಡ. ಅವನ ಅನ್ಯಾರ್ಥ ಹಲವು ಹುರಿಗಳಿಂದ ಹೊಸೆದ ಹಗ್ಗದಂತೆ ಜಟಿಲವೂ ಸಾರವತ್ತೂ ಆದದ್ದು. ಅಥವಾ ಹಲವು ಮುಖಗಳಿಂದ ಕಾಂತಿ ಚೆಲ್ಲುವ ಕಮಲ ಬಿಡಿಸಿದ ವಜ್ರದಂತೆ ಬಹ್ವರ್ಥಪೂರ್ಣವಾದದ್ದು. ಒಂದೊಂದು ಹುರಿಯನ್ನೂ ಒಂದೊಂದು ಮುಖವನ್ನೂ ಎಚ್ಚರಿಕೆಯಿಂದ ಬೇರೆ ಬೇರೆ ಪರಿಶೀಲಿಸಬೇಕು.

೧. ಕನಸೊ ನನಸೊ ಅಂತು ತನಗೆ ದೃಗ್ಗೋಚರವಾಯ್ತೆಂದು ಡಾಂಟೆ ಹೇಳಿದ ಅನುಭವ ವರದಿಯೆಂದು ಭಾವಿಸಿ ಮೋಸ ಹೋಗುವುದು ಸುಲಭ. ಸಮಕಾಲೀನರಲ್ಲಿ ಅನೇಕರು ಅವನನ್ನು ಹಾದಿಯಲ್ಲಿ ಕಂಡಾಗ ನರಕಕ್ಕೆ ಹೋಗಿ ಮತ್ತೆ ಎದ್ದು ಬರುವಾತ ಈತ, ಎಂದು ಬೆಚ್ಚಿ ಬೆದರುತ್ತಿದ್ದರಂತೆ.

ಡಾಂಟೆಯ ಶಬ್ದಚಿತ್ರಣ ಅಷ್ಟೊಂದು ಸ್ಫುಟವಾಗಿ ಮೂರ್ತಿಮತ್ತಾಗಿ ಇರುವುದರಿಂದ ಎಲ್ಲವೂ ನಿಜವಾಗಿ ನಡೆದ ಹಗರಣವೊ ಏನೊ ಎಂಬ ಭ್ರಾಂತಿ ಏಳುವುದು ಸಹಜ. ಹಾಗೆ ತೆಗೆದುಕೊಂಡರೂ ಮನುಷ್ಯ ಹೇಗಿದ್ದರೆ ಹೇಗೆ ನಡೆದುಕೊಂಡರೆ ಒಳ್ಳೆಯದು ಎಂಬ ಉಪದೇಶ ಅದರಿಂದ ಲಭಿಸುತ್ತದೆ.

೨. ಇಹಲೋಕದಲ್ಲೇ ಮೂರು ಪರಲೋಕಗಳನ್ನೂ ಪ್ರತಿಬಿಂಬಿಸುವುದು ಕವಿಯ ಉದ್ದೇಶ, ಕಾವ್ಯದ ಗೂಢಾರ್ಥ. ಮನುಷ್ಯನ ಆತ್ಮ ದೇಹದಿಂದ ಬೇರೆಯಾದಾಗಿನ ಯಥಾರ್ಥ ಸ್ಥಿತಿ ಯಾವುದೆಂಬುದು ಮಿಥ್ಯೆಯ ರೂಪದಲ್ಲಿ ವರ್ಣಿತವಾಗಿದೆ; ಆ ಮಿಥ್ಯೆ ಆತ್ಮ ದೇಹದೊಳಗೆ ಇರುವಾಗ ಅದರ ಯಥಾರ್ಥ ಸ್ಥಿತಿ ಏನೆಂಬುದನ್ನೂ ಸೂಚಿಸುತ್ತದೆ. ದೇಹದೊಳಗಿರಲಿ ದೇಹವನ್ನು ಬಿಟ್ಟಿರಲಿ ಆತ್ಮದ ಸ್ಥಿತಿ ಮೂರು. ಮೊದಲನೆಯದಾಗಿ ಪಾಪದಲ್ಲಿ ಬಿದ್ದಿರುವುದು: ಮನುಷ್ಯ

ಪಾತಕಿಯಾಗಿ ಬದುಕಿರುವಾಗ ಅವನ ಸ್ಥಿತಿ ನೈತಿಕ ನರಕವಾಸ, ಸತ್ತ ಮೇಲೂ ಅವನ ಆತ್ಮ ಪಾತಕಕ್ಕೆ ಕಟ್ಟುಬಿದ್ದಿದ್ದರೆ ಆ ಸ್ಥಿತಿ ಮೂಲಭೂತ ನರಕವಾಸ. ಎರಡನೆಯದಾಗಿ, ಪಾಪವನ್ನು ಕಳೆದುಕೊಳ್ಳುವ ಪ್ರಯತ್ನ. ಜೀವಂತ ಮನುಷ್ಯ ಪರಿತಾಪಪಟ್ಟು ಪ್ರಾಯಶ್ಚಿತ್ತ ಮಾಡಿಕೊಂಡರೆ ಆ ಸ್ಥಿತಿ ನೈತಿಕವಾಗಿ ಪ್ರಾಯಶ್ಚಿತ್ತ ಲೋಕದ (ಪರ್ಗೆಟರಿ) ವಾಸ. ಸತ್ತಮೇಲೂ ಅದೇ ಪ್ರಯತ್ನ ಮುಂದುವರಿದರೆ ಆ ಆತ್ಮದ ಸ್ಥಿತಿ ಮೂಲಭೂತ ಪ್ರಾಯಶ್ಚಿತ್ತ ಲೋಕವಾಸ. ಮೂರನೆಯದಾಗಿ, ಸದ್ಗುಣಪೂರ್ಣ ಬಾಳು. ಪಾಪಲೇಪವಿಲ್ಲದೆ ಬಾಳುವ ಮನುಷ್ಯ ಭೂಮಿಯ ಮೇಲಿದ್ದರೂ ನೈತಿಕ ಸ್ವರ್ಗದಲ್ಲಿ ಇದ್ದಂತೆ; ಸತ್ತಮೇಲೆ ಅವನ ಆತ್ಮಕ್ಕೆ ಮೂಲಭೂತ ಸ್ವರ್ಗವಾಸ ಲಭಿಸುತ್ತದೆ, ಅರ್ಥಾತ್ ಸತ್ಯ ಶುದ್ಧ ಪರಿಪೂರ್ಣ ಆನಂದಮಯವಾದ ದೇವರ ಸಂದರ್ಶನ ಸಿಗುತ್ತದೆ. ಹೀಗೆ ದಿವ್ಯಲೀಲೆ ವಾಚ್ಯಾರ್ಥದಲ್ಲಿ ಹುಸಿ, ವ್ಯಂಗ್ಯಾರ್ಥದಲ್ಲಿ ದಿಟ; ಪಾಪಪುಣ್ಯದಲ್ಲಿ ನಂಬಿಕೆಯಿರುವ ಸಮಸ್ತರಿಗೂ ಸಕಲ ಕಾಲದಲ್ಲೂ ಅದು ಸತ್ಕಾರ ಯೋಗ್ಯ.

೩. ಇಡೀ ಮನುಜಕುಲಕ್ಕೆ ಅನ್ವಯಿಸುವ ಅರ್ಥದೊಂದಿಗೆ ಬಿಡಿ ವ್ಯಕ್ತಿಯಾದ ಡಾಂಟೆಗೆ ಅನ್ವಯಿಸುವ ಅರ್ಥವೂ ಸಂಗತಿಗಳೂ ಪುಷ್ಕಳವಾಗಿವೆ. ಅವನ ಜೀವನದ ಆಗುಹೋಗುಗಳು ಮುಸುಕಿಲ್ಲದೆ ನಿರೂಪಣೆಗೊಂಡಿವೆ. ಅಲ್ಲಲ್ಲಿ, ಅವನ ಶತ್ರುಗಳೂ ಮಿತ್ರರೂ ಅವನೊಡನೆ ಸಂವಾದ ನಡೆಸುತ್ತಾರೆ ನೇರವಾಗಿ. ಪೌರಾಣಿಕ ಚಾರಿತ್ರಿಕ ಹಿಂದಿನ ಅಂದಿನ ಜನರನ್ನು ಅಳೆದು ತೂಕಮಾಡಿ ಅವರವರಿಗೆ ತಕ್ಕುದೆಂದು ತನಗೆ ತೋರಿಬಂದ ದಂಡನೆ ಮಂಡನೆ ಮೊದಲಾದುವನ್ನು ವಿಧಾಯಕ ಮಾಡಿ ನರಕದಲ್ಲೊ ಇತರ ಸ್ಥಳದಲ್ಲೊ ಇರಿಸುವ ಕ್ಲಿಷ್ಟ ಕಾರ್ಯವನ್ನು ಒಟ್ಟಿನಲ್ಲಿ ನ್ಯಾಯ ಕೆಡದಂತೆ ನೆರವೇರಿಸಿದರೂ ಆಗಾಗ ಸ್ವಂತ ಒಲವು ವಿರೋಧಗಳಿಗೆ ಆಸ್ಪದ ಕೊಟ್ಟಿದ್ದಾನೆ, ಸೀಸರನನ್ನು ಕೊಂದರೆಂಬ ಕಾರಣಕ್ಕಾಗಿ ದೇಶಭಕ್ತರಾದ ಬ್ರೂಟಸ್ ಕ್ಯಾಸಿಯಸ್ಸರನ್ನು ಪರಮ ದ್ರೋಹಿಗಳೆಂದು ತುಚ್ಛೀಕರಿಸಿ ಸೈತಾನನ ದವಡೆಯಲ್ಲಿ ನಿತ್ಯಯಾತನೆಗೆ ಗುರಿ ಮಾಡಿರುವುದನ್ನು ಯಾರು ಮೆಚ್ಚಿಯಾರು? ತನ್ನನ್ನು ಹೊರದೂಡಿದ ಫ್ಲಾರೆನ್ಸನ್ನೂ ಹಲವು ಫ್ಲಾರೆನ್ಸಿಗರನ್ನೂ ಖಂಡಿಸುವಾಗ ತಾನು ಬರೆಯುತ್ತಿರುವುದು ಭವ್ಯಕಾವ್ಯ ಎಂಬುದನ್ನು ಮರೆತುಬಿಡುತ್ತಾನೆ. ೧೪ನೆಯ ಶತಮಾನದ ಸಂಕುಚಿತತ್ವ ಕುರುಡು ನಂಬಿಕೆಯಿಂದ ದೂರವಾಗಿರುವ ಔದಾರ್ಯವೂ ಮನೋವೈಶಾಲ್ಯವೂ ಅವನಂಗಡಿಯ ಸರಕಲ್ಲ. ವರ್ಜಿಲನನ್ನು ಕಂಡರೆ ಅವನಿಗೆ ಗಾಢ ವಿಶ್ವಾಸವೂ ಗೌರವವೂ ಇರುವುದು ನಿಶ್ಚಯ; ಆದರೆ ಯೇಸುಕ್ರಿಸ್ತ ಹುಟ್ಟುವುದಕ್ಕೆ ಮುಂಚೆ ಆತ ಬಂದ. ಅವನಿಗೆ ತೀರ್ಥಸ್ನಾನ ಆಗಿರಲಿಲ್ಲ ಎಂಬ ಕಾರಣದಿಂದ ಅವನು ಈಡನ್ ತೋಟದೊಳಕ್ಕೆ ಕಾಲಿಡದಂತೆ ಮಾಡಿರುವುದು ಮತಧರ್ಮದ ಮೌಢ್ಯ ಎಷ್ಟು ಅತಿರೇಕ ಎಸಗಬಹುದೆಂಬುದಕ್ಕೆ ಉದಾಹರಣೆ. ಯಾವಳೋ ಪ್ರಭುವಿ ಮ್ಯಾಟೆಲ್ಡ ಕ್ರೈಸ್ತವಳಾದ್ದರಿಂದ ಬಿಯಟ್ರಿಸ್ ಬರುವ ತನಕ ಡಾಂಟೆಗೆ ದಾರಿ

ತೋರುಗಿತ್ತಿ ಆಗಬಹುದಾಯಿತು. ಬಿಯಟ್ರಿಸ್ ವಿಷಯದಲ್ಲೂ ಡಾಂಟೆಯ ಶ್ಲಾಘನೆ ವಿಪರೀತವಲ್ಲವೆಂದು ಸ್ಥಾಪಿಸಿಹೋಗಲಾರದು. ಪ್ರೇಮಿಯ ನೋಟಕ್ಕೆ ಪ್ರೇಯಸಿ ಅನುಪಮ ಲಾವಣ್ಯವತಿಯಾಗಿಯೂ ಭಾವನೆಗೆ ದೇವತೆಯಾಗಿಯೂ ಕಾಣಿಸಬಹುದು; ಆದರೆ ಬ್ರಿಯಟ್ರಿಸಳನ್ನು ಸುಜ್ಞಾನ ಅಥವಾ ದಿವ್ಯಜ್ಞಾನದ ಸಂಕೇತವನ್ನಾಗಿಸಿ ಕನ್ಯೆಮೇರಿಯ ಸಿಂಹಾಸನದ ಕೆಳಗೆ ಪೀಠ ಕೊಟ್ಟಿರುವುದು ಪೂರ್ತಿ ಉಚಿತವೆ?

೪. ಕೇವಲ ಮನುಷ್ಯರನ್ನೇ ಅಲ್ಲದೆ ಪಶು ಪಕ್ಷಿ ಪದಾರ್ಥಗಳನ್ನು ಭಾವ ಭಾವನೆ ತತ್ತ್ವಗಳಿಗೆ ಸಂಕೇತವನ್ನಾಗಿಸುವ ಕಾವ್ಯ ಪದ್ಧತಿ ಮಧ್ಯಯುಗದ ವಿಶಿಷ್ಟ ಲಕ್ಷಣ. ಡಾಂಟೆಗೆ ಅಡ್ಡಬರುವ ಸಿಂಹ (ಗರ್ವ), ಚಿರತೆ (ಕಾಮ), ತೋಳ (ಅತ್ಯಾಶೆ) – ಇವುಗಳೇ ಅಲ್ಲದೆ ಅರಣ್ಯ ಪ್ರವಾಹ ಬೆಟ್ಟ ಕೊರಕಲು ಮುಂತಾದವೂ ಧ್ವನಿಪೂರಿತವಾಗಿ ಬರುತ್ತವೆ, ಕಾವ್ಯದುದ್ದಕ್ಕೂ.

೫. ರಾಜಕೀಯ ಸಾಮಾಜಿಕ ಪರಿಸ್ಥಿತಿ ಸಂಸ್ಕೃತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಅನ್ಯಾರ್ಥದಿಂದ ದಿವ್ಯಲೀಲೆ ನಿಬಿಡವಾಗಿದೆ. ಅನ್ಯಾರ್ಥರಹಿತವಾದ ಅಧ್ಯಾಯ ಅದರಲ್ಲಿ ಉಂಟೆ, ಕೊನೆಗೆ ಒಂದು ವಾಕ್ಯಪುಂಜವಾದರೂ ಉಂಟೆ– ಎಂದು ಕೇಳಿದರೆ ಖಂಡಿತವಾಗಿ ಉಂಟು ಎನ್ನುವುದು ಅಷ್ಟೇನೂ ಸುಲಭವಲ್ಲ. ಆದ್ದರಿಂದಲೇ ಟೀಕೆ ಟಿಪ್ಪಣಿ ವಿವರಣೆಗಳ ಸಹಾಯವಿಲ್ಲದೆ ದಿವ್ಯಲೀಲೆಯನ್ನು ಓದಿ ಅರ್ಥ ಮಾಡುವುದು ಬಹುಶಃ ಅಸಾಧ್ಯ.

೬. ಮಧ್ಯಯುಗದ ದೃಷ್ಟಿಕೋನ ಅಭಿಪ್ರಾಯಮಾಲೆ ನಂಬಿಕೆಗಳ ಮೇಲೆ ಸ್ಥಿರವಾಗಿ ಕುಳಿತವನಾದರೂ ಡಾಂಟೆ ಕೆಲವು ಅಂಶಗಳಲ್ಲಿ ಸ್ವಂತ ಚಿಂತನೆ ತನ್ನತನ ನವೀನತೆಗಳನ್ನು ಪ್ರಕಟಿಸಿ ಸ್ತುತ್ಯನಾಗಿದ್ದಾನೆ. (ಅ) ನರಕ ಮಧ್ಯಲೋಕ ಸ್ವರ್ಗಗಳ, ತಾತ್ಪರ್ಯಗಳನ್ನು ಹಿಗ್ಗಲಿಸಿ ಉದಾತ್ತಗೊಳಿಸಿದ್ದಾನೆ. ಬಿಡಿ ತತ್ತ್ವಗಳಲ್ಲೂ ಹೊಸ ಹೊಸ ವಿವರ ಮೂಡಿಸಿ ಜಯಶೀಲನಾಗಿದ್ದಾನೆ. ಇವನ್ನು ಮನನ ಮಾಡಿಕೊಳ್ಳಿ: ಪಾಪಿಲೋಕದಲ್ಲಿ ಪಶ್ಚಾತ್ತಾಪ ಸುಳಿಯದು. ಸಪ್ತವ್ಯಸನಗಳಲ್ಲಿ ತಮ್ಮತಮ್ಮದನ್ನು ಅಭ್ಯಸಿಸುವುದೇ ಪಾಪಿಷ್ಠರ ಸತತ ಹವ್ಯಾಸ. ಪಾತಕಿಗಳಿಗೆ ಏನಾದರೂ ಹಂಬಲಿಕೆಯಿದ್ದರೆ ಪಾಪಕೂಪವಾದ ಪೃಥ್ವಿಗೆ ಹಿಮ್ಮರಳುವ ಗೀಳು; ಅನಂತತೆಗೆ ಕಾಲದ ಅವಧಿಯೂ ಇಲ್ಲ, ಸ್ಥಳದ ಎಲ್ಲೆಯೂ ಇಲ್ಲ; ಅಭೀಷ್ಟ ಸಿದ್ಧಿಯೆಂದರೆ ದೇವರೊಡನೆ ಸಂಸರ್ಗ, ದೇವರನ್ನು ನೋಡುವುದು ಎಂದರೆ ದೇವರಂತೆ ನೋಡುವಿಕೆ; ದೇವರ ಇಚ್ಛೆ ನಮ್ಮೊಳಕ್ಕೆ ಬಂದರೆ ಅದೇ ನಮ್ಮ ಶಾಂತಿ. ಹೀಗೆ ಧ್ವನಿಗರ್ಭಿತ ಸುಂದರ ಸೂಕ್ತಿಗಳ ಉಗ್ರಾಣ, ದಿವ್ಯಲೀಲೆ. (ಆ) ವಿಶ್ವದ ರಚನೆಯ ವಿಚಾರದಲ್ಲಿ ಡಾಂಟೆ ತನ್ನ ಕಾಲದವರಂತೆ ಪ್ರಾಚೀನ ವಿಜ್ಞಾನಿ ಟಾಲಿಮಿಯ ಅನುಯಾಯಿ: ಭೂಮಿಯೇ ಕೇಂದ್ರವಾಗಿ ಒಂಬತ್ತು ಗೋಳಗಳ ವರ್ತುಲ ಚಲನ; ಅವುಗಳಿಂದಾಚೆ ದೇವರ ಬೀಡಾದ ಉಚ್ಚತಮ ಸ್ವರ್ಗ. ಆದರೆ ನರಕ ಪ್ರಾಯಶ್ಚಿತ್ತ

ಲೋಕಗಳ ವಿಚಾರದಲ್ಲಿ ತನ್ನದಾದ ಕಲ್ಪನೆಯನ್ನೇ ಆತ ಅನುಸರಿಸಿದ. ಬಂಡಾಯ ಎಬ್ಬಿಸಿದ ಲ್ಯೂಸಿಫರನ್ನೂ ಅವನ ಹಿಂಬಾಲಕರನ್ನೂ ಹೂಳಿಡುವುದಕ್ಕೆ ದೇವರು ಭೂಮಿಯಲ್ಲಿ ಮೇಲಿನಿಂದ ನಾಭಿಯವರೆಗೂ ಒಂದು ಲಾಳಿಕೆಯ ಆಕಾರದ ದೈತ್ಯ ಕುಳಿಯನ್ನು ತೋಡಿ ಮಧ್ಯದಲ್ಲಿ ಸೈತಾನನನ್ನು (ಪತನಗೊಂಡ ಲ್ಯೂಸಿಫರನ ನೂತನ ಅಂಕಿತ) ತಲೆಕೆಳಗಾಗಿ ಬಂಧಿಸಿಟ್ಟ. ಹೊರಬಿದ್ದ ಭಾರಿ ಮಣ್ಣಿನಿಂದ ಹಂತ ಹಂತವಾಗಿ ಭೂಮಿಯ ಮೇಲೆ ಕೋಟೆ ಕಟ್ಟಿ ಪಶ್ಚಾತ್ತಾಪ ಲೋಕವನ್ನಾಗಿಸಿದ. ಅದರ ನೆತ್ತಿಯಲ್ಲಿ ಈಡನ್ ತೋಟ ಅಥವಾ ಭೂಸ್ವರ್ಗವನ್ನು (ಅರ್ದ್ಲಿಪ್ಯಾರಡೈಸ್) ಸ್ಥಾಪಿಸಿದ.

೭. ಡಾಂಟೆಯ ಶೈಲಿಯನ್ನು ಸರಳ ಭವ್ಯವೆಂದು ಬಣ್ಣಿಸಿದ್ದಾರೆ. ಆಗ ದೇಶೀಯ ನುಡಿಯೆಂದೂ ತತ್ತ್ವ ತೇಜಸ್ಸುಗಳಲ್ಲಿ ಕಡಿಮೆಯೆಂದೂ ಯಾವ ಭಾಷೆಯನ್ನು ಲ್ಯಾಟಿನ್ ಪ್ರಮತ್ತರು ಹಳಿಯುತ್ತಿದ್ದರೊ ಅದನ್ನೇ ಆಸಕ್ತಿಯಿಂದ ಹಿಡಿದು, ಭವ್ಯ ಭಾವ ಭಾವನೆಗಳ ಕಲಾಯುಕ್ತ ನಿರೂಪಣೆಗೆ ಅದು ಕೊರೆಯಿಲ್ಲದ ವಾಹಕವಾಗುವಂತೆ ಮಾಡಿ, ಛಲ ಸಾದಿಸಿ ಗೆದ್ದ ಡಾಂಟೆಗೆ ಇಟಲಿ ಚಿರಋಣಿ. ಇಟಾಲಿಯನ್ ನುಡಿಗಟ್ಟೇ ಮಾಧುರ್ಯಕ್ಕೆ ಹೆಸರಾದದ್ದು. ದೊಡ್ಡ ಕವಿಯಾದ ಡಾಂಟೆಯ ಕೈಯಲ್ಲಿ ಅದು ಲಾಸ್ಯವಾಡುತ್ತದೆ, ಧ್ವನಿ ಪರಂಪರೆ ಹರಡುತ್ತದೆ. ರಸಿಕ ಹೃದಯವನ್ನು ತುಂಬುತ್ತದೆ, ಆಂತರ್ಯವನ್ನು ಎತ್ತರಿಸುತ್ತದೆ.

ಈ ವಿವರಗಳತ್ತ ಸುಮ್ಮನೆ ಕಣ್ಣು ಹಾಯಿಸಿದರೆ ಸಾಕು ಡಾಂಟೆಯ ವಿಸ್ತಾರವೂ ಆಳವೂ ಆದ ಖಚಿತ ಜ್ಞಾನ ಮತ್ತು ಅವನ ಜ್ಞಾಪಕಶಕ್ತಿಯ ಆರ್ಪು ನಮ್ಮನ್ನು ವಿಸ್ಮಯದಲ್ಲಿ ಮುಳುಗಿಸುತ್ತವೆ. ಏನಿಲ್ಲ ಏನುಂಟು ಎಂದು ಕೇಳಬಯಸಿದರೆ ತಪ್ಪಲ್ಲ. ಪುರಾಣ ಕಥಾವಳಿ ಚರಿತ್ರೆ ಭೂಗೋಳ ಖಗೋಲ ಲೌಕಿಕಸಾಹಿತ್ಯ ಧಾರ್ಮಿಕಸಾಹಿತ್ಯ ಮೊದಲಾದ ಆಕರಗಳನ್ನು ಮನಬಂದಂತೆ ದರೋಡೆಗೈದಿದ್ದಾನೆ. ನಿಜ, ವ್ಯಕ್ತಿ ವಸ್ತು ಆಲೋಚನೆ ಕ್ರಿಯೆ ಎಲ್ಲವನ್ನೂ ಕಲಸುಮೇಲೋಗರ ಮಾಡಿದ್ದಾನೆ; ಆದರೆ ಕಲಸಿಕೆಯ ಜಾಣ್ಮೆಯಿಂದ ಓಗರ ರಸವತ್ತಾಗಿದೆ, ರುಚಿಯಾಗಿದೆ. ತೀರ ತಾತ್ಕಾಲಿಕವೂ ಕೊಯ್ಮೂಲೆಯದು ಆದ ಸಂಗತಿಗಳನ್ನು ಅಲಕ್ಷಿಸಿದರೂ ಲಕ್ಷಿಸಿ ಮನನ ಮಾಡತಕ್ಕದ್ದು ಹೇರಳವಾಗಿದೆ. ದಿವ್ಯಲೀಲೆ ತನ್ನದೇ ಆದ ರೂಪು ಲಕ್ಷಣದ ಭವ್ಯಕಾವ್ಯ; ಮಧ್ಯಯುಗದ ಮುಖ್ಯಾಂಶಗಳ ಸಂಪೂರ್ಣ ಪ್ರತಿಚಿತ್ರ. (ಎಸ್.ವಿ.ಆರ್.)

ಫ್ರಾನ್ಸೆಸ್ಕೊ ಪೆಟ್ರಾರ್ಕ್ (೧೩೦೪–೧೩೭೪)

ಇಟಲಿಯ ಪ್ರಖ್ಯಾತ ಕವಿ. ಮಾನವತಾವಾದದ ಪ್ರವರ್ತಕ. ಆಧುನಿಕ ಭಾವಗೀತೆಗಳ ಪ್ರಥಮ ಹಾಗೂ ಶ್ರೇಷ್ಠ ಕವಿ.

೧೩೦೪ರ ಜುಲೈ ೨೦ರಂದು ಅರೆಜೊ ಎಂಬಲ್ಲಿ ಹುಟ್ಟಿದ. ತಂದೆ ಸೆರ್‌ಪಿಯೋ ಟ್ರೊ ಡಿ ಸೆರೆ ಪರೆಂಜೊ (ಸೆರ್ ಪೆಟ್ರಾಕ್ಕೊ) ಸಾರ್ವಜನಿಕ ಕರಾರು ಪತ್ರಗಳನ್ನು ಪ್ರಮಾಣೀಕರಿಸುವ ಅಧಿಕಾರಿ. ತಾಯಿ ಎಲೆಟ್ಟಾಕ್ಯಾನಿ ಗಿಯಾನಿ. ಪೆಟ್ರಾರ್ಕ್

ಎಂಬುದು ಮನೆತನದ ಹೆಸರು. ಈ ಕುಟುಂಬ ಫ್ಲಾರೆನ್ಸ್‌ನ್ನು ಬಿಟ್ಟು ಅವಿಗ್ನಾನ್‌ನಲ್ಲಿ ನೆಲೆಸಿದಾಗ ಅಲ್ಲಿನ ಸ್ವರ್ಗಸದೃಶವಾದ ನಿಸರ್ಗ ಸೌಂದರ್ಯ ಫ್ರಾನ್ಸಿಸ್ಕೊನ ಅರಳಲಿದ್ದ ಕವಿ ಹೃದಯದ ಮೇಲೆ ಅಗಾಧ ಪ್ರಭಾವವನ್ನು ಬೀರಿತು. ಕಾನ್ವಿನೆವೋಲ್ ಡಾ ಪ್ರ್ಯಾಟೊ ಎಂಬವರ ಬಳಿ ಆರಂಭವಾದ ಈತನ ವಿದ್ಯಾಭ್ಯಾಸ ಮಾಂಟ್‌ಪೆಲ್ಲಿಯರ್ ಮತ್ತು ಬೋಲೋನಾದ ಕಾಲೇಜಿನಲ್ಲಿ ಮುಂದುವರಿಯಿತು. ತನಗಿಷ್ಟವಿಲ್ಲದಿದ್ದರೂ ತಂದೆಯ ಬಲವಂತಕ್ಕಾಗಿ ಲಾ ಕಾಲೇಜು ಸೇರಿದ. ಈತನಿಗೆ ಆಸಕ್ತಿ ಇದ್ದುದು ಸಾಹಿತ್ಯ ಮತ್ತು ಪ್ರಾಚ್ಯ ವಿಷಯಗಳ ಮೇಲೆ. ಆಗಲೆ ಕವಿತೆಗಳನ್ನೂರಚಿಸತೊಡಗಿದ್ದ. ಕಾನೂನು ಗ್ರಂಥಗಳಿಗಿಂತ ವರ್ಜಿಲ್, ಸಿಸಿರೊ, ಸೆನೆಕಾ ಹೆಚ್ಚು ಆಕರ್ಷಿಸಿದರು. ಗ್ರೀಕ್ ಕ್ಲಾಸಿಕ್ಸ್‌ನ ಜ್ಞಾನವನ್ನು ಸಾಕಷ್ಟು ಸಂಪಾದಿಸಿದ. ಸಾಹಿತ್ಯ, ಕಲೆ, ತತ್ವಶಾಸ್ತ್ರಗಳ ಗ್ರಂಥಗಳು ಹೊಸದೊಂದು ಲೋಕವನ್ನೇ ತೆರೆದವು. ೧೩೨೬ರಲ್ಲಿ ತಂದೆ ತೀರಿಹೋದಾಗ ವಿದ್ಯಾಭ್ಯಾಸವನ್ನು ನಿಲ್ಲಿಸಿ ಅವಿಗ್ನಾನ್ ಚರ್ಚಿನಲ್ಲಿ ಸಣ್ಣದೊಂದು ಕೆಲಸಕ್ಕೆ ಸೇರಿದ. ೧೩೨೭ರಲ್ಲಿ ಲಾರಾ (ಫ್ರೆಂಚ್ ಶ್ರೀಮಂತ ಕೆಂಟ್ ಹ್ಯೂಗೊ ಡಿ ಸಾಡೆಯ ಪತ್ನಿ ಎಂದು ಊಹಿಸಲಾಗಿದೆ) ಎಂಬ ಯುವತಿಯನ್ನು ಕಂಡು ಪ್ರೇಮವಶನಾದ. ಆಕೆ ಈತನ ಕನಸಿನ ರಾಣಿ, ಕಾವ್ಯದ ಸ್ಫೂರ್ತಿ ಆದಳು. ಆಕೆಗಾಗಲೇ ಮದುವೆ ಆಗಿದ್ದುದರಿಂದ ಭಗ್ನಪ್ರೇಮಿಯಾದ ಕವಿ ಕೋಪ, ನಿರಾಶೆಗಳನ್ನು ಅಭಿವ್ಯಕ್ತಿಸುವ ಪ್ರೇಮಗೀತೆಗಳನ್ನೇ ಮೊದಲು ಬರೆದರೂ ತನ್ನ ಅನುರಾಗವನ್ನು ಪರಿಶುದ್ಧವಾದ ಆದರ್ಶಪ್ರೇಮವಾಗಿ ತಿರುಗಿಸಿ ಅನೇಕ ಅಮೂಲ್ಯವಾದ ಅಮರವಾದ ಪ್ರೇಮಗೀತೆಗಳನ್ನು ಬರೆದ. ಅವುಗಳ ಸೂಕ್ಷ್ಮ, ಕೋಮಲ ಭಾವನೆಗಳು, ನಾದ ಮಾಧುರ್ಯ ಅಸದೃಶವಾಗಿದೆ. ಪ್ರಾವೆನ್ಸ್‌ವಲ್ಲಿದ್ದಾಗ ಕವಿ ಟ್ರೊಬೆಡೊರ್ಸ್ (ಚಾರಣ ಗಾಯಕರು) ತೌರಾದ ಆ ಸ್ಥಳದಲ್ಲಿ ತಾನೂ ಚಾರಣ ಕವಿಗಾಯಕನಾಗಿ ಸೊಗಸಾದ ಹಾಡುಗಳನ್ನುರಚಿಸಿದ. ನಾನಾ ಛಂದೋಪ್ರಯೋಗಗಳನ್ನು ಮಾಡುತ್ತ ತನ್ನದೇ ಆದ ಸಾನೆಟ್‌ರೂಪವನ್ನು ನಿರ್ಮಾಣ ಮಾಡಿದ. ಹಲವಾರು ಮಾದರಿಯ ಕವನಗಳನ್ನು ಲ್ಯಾಟಿನ್‌ನಲ್ಲಿ ಅಲ್ಲದೆ ದೇಶೀ ಭಾಷೆಯ ಬಳಕೆಯ ಮಾತಿನಲ್ಲೇ ಬರೆದು ಆಧುನಿಕ ಕವನಗಳ ಮೊದಲಿಗನಾದ. ಪ್ರಭಾವಶಾಲಿ ಕವಿಯಾಗಿ ಬೆಳೆದ. ಈತನ ಲೆ ರೈಮ್ (೧೩೨೭) ಆ ಕಾಲದ ಎಲ್ಲರನ್ನು ಸಮ್ಮೋಹಗೊಳಿಸಿತು. ಈತನ ಭಾಷೆಯ ಸೊಗಸು, ನಾದಮಾಧುರ್ಯ ಅಪ್ರತಿಮವಾಗಿವೆ.

ಪೆಟ್ರಾರ್ಕ್‌ನಿಗೆ ಪ್ರಾಚೀನ ಸಂಸ್ಕೃತಿಯಲ್ಲಿ ಅತೀವ ಅಭಿಮಾನ. ಕ್ರೈಸ್ತ ಸಂದೇಶದಲ್ಲೂ ಅಪಾರ ಶ್ರದ್ಧೆ. ಇವೆರಡೂ (ಅನೇಕ ಮಡಿವಂತ ಕ್ರೈಸ್ತರೂ ಆಧುನಿಕ ವಿಚಾರವಂತರೂ ತಿಳಿದಂತೆ) ಪರಸ್ಪರ ವಿರೋಧವಲ್ಲ; ಒಂದೇ ಅಖಂಡ ಪರಂಪರೆಯ ವಿಕಸಿತ ಹಂತಗಳು; ಕ್ಲಾಸಿಕಲ್ ಸಂಸ್ಕೃತಿ ಭರವಸೆ ಆದರೆ ಕ್ರೈಸ್ತ ಧರ್ಮ ಅದರ ಈಡೇರಿಕೆ ಎಂಬುದು ಪೆಟ್ರಾರ್ಕ್‌ನ ಜೀವನ ಸಿದ್ಧಾಂತ. ತನ್ನ ಗ್ರಂಥಗಳಲ್ಲಿ, ಅದರಲ್ಲೂ ಡಿ ವೈರಿಸ್ ಮತ್ತು ಆಫ್ರಿಕದಲ್ಲಿ ಇದನ್ನೇ ಪ್ರತಿಪಾದಿಸಿದ್ದಾನೆ.

ಈತನಿಗೆ ಪ್ರಾಚೀನ ಗ್ರೀಕ್ ಮತ್ತು ಲ್ಯಾಟಿನ್ ಗ್ರಂಥಗಳ (ಕ್ಲಾಸಿಕ್ಸ್) ಹಸ್ತಪ್ರತಿಗಳನ್ನೂ ಪ್ರಾಚೀನ ಕಾಲದ ನಾಣ್ಯ, ಶಾಸನ, ತಾಮ್ರಪಟ ಕಲಾಕೃತಿಗಳನ್ನೂ ಸಂಗ್ರಹಿಸುವ ಗೀಳು ಎಂಬಂಥ ಹವ್ಯಾಸವಿತ್ತು. ಈ ಸಂಗ್ರಹ ಕಾರ್ಯಕ್ಕೆ ಯುವಕರನ್ನೂ ಪ್ರೋತ್ಸಾಹಿಸುತ್ತಿದ್ದ. ಕೇಳಿದಷ್ಟು ಹಣ ಕೊಟ್ಟು ಇಂತಹ ಅಪೂರ್ವ ವಸ್ತುಗಳನ್ನು ಕೊಳ್ಳುತ್ತಿದ್ದ. ೧೩೩೩ರಲ್ಲಿ ಫ್ರಾನ್ಸ್, ಫ್ಲಾಂಡರ್ಸ, ಬ್ರೆಬಾಂಟ್, ರ್ಹೈನ್‌ಲ್ಯಾಂಡ್‌ಗಳಲ್ಲಿ ಇವನ್ನು ಹುಡುಕಿಕೊಂಡು ಅಲೆದಾಡಿದ. ಕಳೆದೋ ಹಾಳಾಗಿಯೋ ಹೋಗಬಹುದಾಗಿದ್ದ ಇಂತಹ ಹಲವು ಅಮೂಲ್ಯ ಗ್ರಂಥಗಳ ಮತ್ತು ವಸ್ತುಗಳ ಸಂರಕ್ಷಣೆಯ ಶ್ರೇಯಸ್ಸು ಪೆಟ್ರಾರ್ಕ್‌ನಿಗೆ ಸಲ್ಲುತ್ತದೆ. ಈತನಿಗಿದ್ದ ಇನ್ನೊಂದು ಹವ್ಯಾಸ ಪತ್ರಲೇಖನ. ಬಂಧುಮಿತ್ರರಿಗೆ, ದೊರೆಗಳಿಗೆ, ಧಾರ್ಮಿಕ ಗುರುಗಳಿಗೆ ಪರಿಚಿತ–ಅಪರಿಚಿತ ಗಣ್ಯರಿಗೆ ಮಾತ್ರವಲ್ಲ ಹೋಮರ್, ವರ್ಜಿಲ್, ಸಿಸಿರೊ, ಲಿಪಿ ಮುಂತಾದ ಪ್ರಾಚೀನ ಕಾಲದ ಮಹನೀಯರಿಗೂ ಸಮಕಾಲೀನ ಸ್ನೇಹಿತರೆಂಬಂತೆ ಪತ್ರಗಳನ್ನು ಬರೆದು ಇಡುತ್ತಿದ್ದ. ಹಾಗೆಯೇ ಇನ್ನೂ ಹುಟ್ಟದ ಭವಿಷ್ಯತ್ಕಾಲದ ಮಕ್ಕಳಿಗೂ ಬರೆಯುವ ವಿಚಿತ್ರ ಹವ್ಯಾಸ ಇವನದಾಗಿತ್ತು.

ಪೆಟ್ರಾರ್ಕ್‌ನ ಪ್ರಣಯದ ಸಹಜ ಸಂಜಾತರಾಗಿ ೧೩೩೩ರಲ್ಲಿ ಗಿಯೊವನ್ನಿ ಎಂಬ ಮಗನೂ ೧೩೪೩ರಲ್ಲಿ ಫ್ರಾನ್ಸಿಸ್ಕಾ ಎಂಬ ಮಗಳೂ ಹುಟ್ಟಿದರು. ಮುಂದೆ ಇವರನ್ನು ಸಮಾಜ ಧಾರ್ಮಿಕವಾಗಿ ಸ್ವೀಕರಿಸಿತು.

ಬೋಲೋನಾದಲ್ಲಿ ಗಿಯಾಕೋವೊ ಕೊಲೋನ್ನಾ ಎಂಬಾತನ ಸ್ನೇಹವಾದುದು, ಕವಿಯ ಜೀವನದಲ್ಲಿ ಒಂದು ಮಹತ್ತರ ಸಂಗತಿ. ಗಿಯಾಕೋವೊ ಮಾತ್ರವಲ್ಲ ಆತನ ಅಣ್ಣ ಕಾರ್ಡಿನಲ್ ಗಿಯೊವನ್ನಿ. ಮುಂದೆ ಮಗ ಫ್ರಾನ್ಸಿಸ್ಕೊ ಡಾ ಕ್ಯಾರರ, ಹೀಗೆ ಇಡೀ ಕುಟುಂಬ ಆಪ್ತಬಂಧುಗಳಂತೆ ಕವಿಗೆ ಪ್ರೀತಿ, ಧೈರ್ಯ, ಬೆಂಬಲ, ಜೀವನ ಸೌಕರ್ಯಗಳನ್ನು ಕೊಟ್ಟರು. ಕವಿ ತನ್ನ ಕೊನೆಗಾಲವನ್ನು ಕಳೆದ ಆರ್ಕ್ವಾದ ಕುಟೀರ ಈ ಕುಟುಂಬದ ಕೊಡುಗೆ. ಪೆಟ್ರಾರ್ಕ್‌ನ ಜೀವನದಲ್ಲಿ ಸುಖ–ಸೌಕರ್ಯಗಳಿಗೆ ಎಂದೂ ಕೊರತೆಯಾಗಿರಲಿಲ್ಲ. ಮಿತ್ರರ, ಅಭಿಮಾನಿಗಳ, ಶ್ರೀಮಂತರ, ರಾಯಭಾರಗಳಿಗೆ ಕರೆಯುತ್ತಿದ್ದ ದೊರೆಗಳ ಮತ್ತು ಮಠಾಧಿಪತಿಗಳ ಪ್ರೋತ್ಸಾಹ, ಮನ್ನಣೆ ಉದ್ದಕ್ಕೂ ದೊರೆತವು. ಅಧ್ಯಯನ, ಸಾಹಿತ್ಯರಚನೆ, ಧ್ಯಾನ, ಚಿಂತನ ರಾಯಭಾರಗಳಲ್ಲೇ ಇಡೀ ಜೀವನ ಕಳೆಯಿತು. ಚಿಕ್ಕಂದಿನಿಂದಲೂ ಧರ್ಮಶ್ರದ್ಧೆ, ದೈವಭಕ್ತಿ ಬೆರೆತ ಆಧ್ಯಾತ್ಮಿಕ ತುಡಿತವಿತ್ತು. ಜೀವನದ ನಶ್ವರತೆಯ ಅರಿವು ದುಃಖಾನುಭವಗಳಿಂದ ಸ್ಥಿರಗೊಳ್ಳುತ್ತ ಕವಿಯನ್ನು ಚಿಂತನಶೀಲನನ್ನಾಗಿ ಮಾಡಿದವು. ಭೋಗಜೀವನದ ಆಕರ್ಷಣೆಗೂ ಆಧ್ಯಾತ್ಮದೊಲವಿಗೂ ನಿರಂತರ ಘರ್ಷಣೆಯಾಗುತ್ತ ಈ ಒಳತೋಟಿಯಲ್ಲಿ ಕವಿ ಜೀವನದುದ್ದಕ್ಕೂ ಒದ್ದಾಡಿದ. ಅವಿಗ್ನಾನ್‌ಗೆ ೨೪ ಕಿ. ಮೀ. ದೂರದ ವ್ಯಾಕ್ಲೂಸ್ ಎಂಬ ಒಂದು ಪ್ರಶಾಂತವಾದ

ಏಕಾಂತ ಸ್ಥಳದಲ್ಲಿ ಕುಟೀರವನ್ನು ಕೊಂಡು ಆಗಾಗ ಆಶ್ರಮವಾಸಿಯಂತೆ ಅಲ್ಲಿ ಇರುತ್ತಿದ್ದ. ಆಗ ಅಲ್ಲಿ ಯಥೇಚ್ಛವಾಗಿ ಧ್ಯಾನ, ಚಿಂತನೆ, ಸಾಹಿತ್ಯರಚನೆಗಳು ನಡೆಯುತ್ತಿದ್ದವು.

೧೩೪೧ರಲ್ಲಿ ರೋಮ್‌ನಲ್ಲಿ ಕವಿಗೆ ವೈಭವೋಪೇತವಾದ ಸನ್ಮಾನ ದೊರೆಯಿತು. ಕವಿ ಸಾಮ್ರಾಟನೆಂದು ಶ್ರೇಷ್ಠಕವಿ ಪ್ರಶಸ್ತಿಯ ಲತಾಕಿರೀಟವನ್ನು ತಲೆಯ ಮೇಲಿರಿಸಿ ಜನತೆ ಗೌರವಿಸಿತು. ಸಾವಿರ ವರ್ಷಗಳಾದ ಮೇಲೆ ಕಾವ್ಯಕ್ಕೆ ದೊರೆತ ಪ್ರಥಮ ಮನ್ನಣೆ ಅದು. ಕವಿ ಅತ್ಯಂತ ವಿನಯದಿಂದ ತನ್ನ ಲತಾಕಿರೀಟವನ್ನು ಸಂತ ಪೀಟರ್ ಸಮಾಧಿಯ ಮೇಲೆ ಇರಿಸಿದ.

೧೩೪೫ರ ಅನಂತರ ರಾಯಭಾರಿಯಾಗಿ ಅನೇಕ ರಾಜರ ಆಸ್ಥಾನಗಳಿಗೆ, ಧಾರ್ಮಿಕ ಮಠಗಳಿಗೆ ಹೋಗಿ ಬರಬೇಕಾಯಿತು. ೧೩೪೮ರಲ್ಲಿ ಪೆಡುವಾದ ಕೆತೆಡ್ರಲ್‌ನ ಮುಖ್ಯವಾಗಿ (ಆರ್ಚ್ ಡಿಯಾಕನ್) ನೇಮಿತನಾದ. ಫ್ಲಾರೆನ್ಸ್‌ನಲ್ಲಿ ಪರಿಚಯವಾದ ಖ್ಯಾತ ಸಾಹಿತಿ ಬೊಕ್ಯಾಶಿಯೊ ಕವಿಯ ಪರಮ ಮಿತ್ರನಾದ. ಆತ ಪೆಟ್ರಾರ್ಕ್‌ನ ಜೀವನ ಧ್ಯೇಯವನ್ನು ಎಚ್ಚರಿಸಿದ. ೧೩೪೮ರಲ್ಲಿ ಬಂದ ಪ್ಲೇಗಿನಲ್ಲಿ ಲಾರಾ ಮತ್ತು ಅನೇಕ ಆಪ್ತಮಿತ್ರರು ಸತ್ತು, ೧೩೫೦ರಲ್ಲಿ ಆಪ್ತಮಿತ್ರ ಗಿಯಾಕೋಮೊ ಕೊಲೆಯಾಗಿ ಕವಿಯಲ್ಲಿ ಜೀವನದ ನಶ್ವರತೆಯ ಅರಿವು ಗಾಢವಾಯಿತು. ವ್ಯಾಕ್ಲೂಸಿನ ಶಾಂತಿಧಾಮಕ್ಕೆ ಓಡಿಹೋದ. ಕಾವ್ಯರಚನೆಯ ಸಮೃದ್ಧ ಕಾಲವಾಯಿತು, ಅಲ್ಲಿನ ವಾಸ ೧೩೬೨ರಿಂದ ೧೩೬೮ರವರೆಗೆ ವೆನಿಸ್‌ನಲ್ಲಿದ್ದುದು ಅತ್ಯಂತ ಸುಖಮಯವಾದ ಕಾಲ. ಮಗಳು ಮೊಮ್ಮಗಳು ಇವನನ್ನು ಕೂಡಿಕೊಂಡರು. ಕೌಟುಂಬಿಕ ನೆಮ್ಮದಿ, ಸುಖ, ಇಷ್ಟಮಿತ್ರರ ಭೇಟಿ ಎಲ್ಲ ದೊರೆತವು. ವೆನಿಸ್ ತುಂಬಾ ಪ್ರಿಯವಾಯಿತು. ಸ್ವಾತಂತ್ರ್ಯ, ನ್ಯಾಯ, ಧರ್ಮ ಶಾಂತಿಗಳ ನೆಲವೀಡು ಅದು ಎಂದು ಕವಿ ಮೆಚ್ಚಿ ತನ್ನೆಲ್ಲ ಕೃತಿಗಳನ್ನೂ ಅಲ್ಲಿನ ಪೌರಸಮಿತಿಗೆ ಕೊಡುವುದಾಗಿ ವಚನವಿತ್ತ. ಅಲ್ಲಿನ ನಗರ ಸಮಿತಿಯ ಪ್ರಮುಖ ಸಲಹೆಗಾರನಾದ.

೧೩೬೮ರಿಂದ ೧೩೭೪ರವರೆಗೆ ಪೆಡುವಾದ ಹತ್ತಿರ ಯೂಜಿನಿಯನ್ ಗಿರಿಗಳ ಆರ್ಕ್ವಾ ಎಂಬ ಸ್ಥಳದಲ್ಲಿ ಒಂದು ಏಕಾಂತಕುಟೀರದಲ್ಲಿ ಕೊನೆಗಾಲವನ್ನು ಕಳೆದ. ೧೩೭೦ರಲ್ಲಿ ರೋಮ್‌ಗೆ ಹೋಗುತ್ತ ದಾರಿಯಲ್ಲಿ ಪಾರ್ಶ್ವವಾಯುಪೀಡಿತನಾಗಿ ಮಲಗಿದ. ಚೇತರಿಸಿಕೊಳ್ಳುವಾಗಲೂ ಸಾಹಿತ್ಯದ ಕೆಲಸ ನಡೆದೇ ಇತ್ತು. ಡಿ ಗೆಸ್ಟಿಸ್ ಸೀಸರಿಸ್ ಎಂಬ ವಿಡಂಬನೆಯೇ ಈತನ ಕೊನೆಯರಚನೆ. ೧೩೭೪ರ ಜುಲೈ ೮ರಂದು ತನ್ನ ಅಧ್ಯಯನ ಕೊಠಡಿಯಲ್ಲಿ ತನಗೆ ತುಂಬಾ ಪ್ರಿಯವಾಗಿದ್ದ ವರ್ಜಿಲ್ ಎಂಬ ಹಸ್ತಪ್ರತಿಯ ಮೇಲೆ ತಲೆಯಿರಿಸಿಕೊಂಡು ಹಾಗೆಯೆ ಪ್ರಾಣಬಿಟ್ಟ.

ಶ್ರೇಷ್ಠಕವಿಯಾಗಿ, ನೀತಿಜ್ಞನಾಗಿ, ನವಸಂಸ್ಕೃತಿಯ ಪ್ರಮುಖ ಪ್ರತಿನಿಧಿಯಾಗಿ ಪೆಟ್ರಾರ್ಕ್ ಚಿರಸ್ಮರಣೀಯನಾಗಿದ್ದಾನೆ. ಆತ ಅಸಾಧಾರಣ ವ್ಯಕ್ತಿ. ಇಟಲಿಯ ನವೋದಯದ (ರಿನೇಸಾನ್ಸ್‌ನ) ಜನಕ. ರೆನಾನ್ ಆತನನ್ನು ಆಧುನಿಕರಲ್ಲಿ

ಮೊದಲಿಗನೆಂದು ಕರೆದಿದ್ದಾನೆ. ಈತನ ಕೃತಿಗಳು: ಎಪಿಸಲ್ಸ್ (೧೩೨೬–೭೪), ಲೇ ರೈಮ್ (೧೩೨೭), ಆಫ್ರಿಕ (೧೩೩೮–೪೨), ಇಟ್ರಿಯೋನ್‌ಫಿ (ಗೆಲುವುಗಳು) (೧೩೫೨–೭೪), ದಿ ವಿರಿಬಸ್ ಇಲ್‌ಸ್ಟ್ರಿಬಸ್ (ಮಹಾಪುರುಷರ ಜೀವನ೧೩೩೮), ಸೀಕ್ರೆಟಮ್ (ಅಂತರಂಗ) (೧೩೪೩), ದಿ ವಿಟಾ ಸಾಲಿಟೇರಿಯಾ (ಏಕಾಂತ ಜೀವನ ಕುರಿತು), (೧೩೪೬–೫೬), ದಿ ಒಟಿಯಾ ರಿಲಿಜಿಯಾ ಸೋರಮ್ (ಚಿಂತಾ ಮುಕ್ತಿಕಾರಕ ಧರ್ಮ ಕುರಿತು) (೧೩೪೭–೫೬), ದಿ ರೆಮೆಡೀಸ್ ಉಟ್ರಿಯಸ್ಕ್ ಫಾರ್ಚುನೆ (ಭಾಗ್ಯ ದೌರ್ಭಾಗ್ಯಗಳ ಪರಿಹಾರ ಕುರಿತು (೧೩೫೦–೭೪), ಫೆಮಿಲಿಯಾರಿ (ಲೇಖನಗಳ ಸಂಕಲನ ೧೩೫೦), ಮೆಟಿಖೆ (ಲೇಖನಗಳ ಸಂಕಲನ ೧೩೫೦), ಇನ್ವೆಕ್ಟಿವಾ, ಇಟಿನೆರೇರಿಯಮ್, ದಿ ಗೆಸ್ಟಿಸ್ ಸೀಸರಿಸ್. (ಕೆ.ಬಿ.ಎ.)

ಲೂಯಿಜಿ ಪಿರಾಂಡೆಲೊ (೧೮೬೭–೧೯೩೬)

ಇಟಲಿಯ ನಾಟಕಕಾರ, ಸಣ್ಣ ಕತೆಗಾರ ಮತ್ತು ಕಾದಂಬರಿಕಾರ. ಹುಟ್ಟಿದ್ದು ಸಿಸಿಲಿ ದ್ವೀಪದ ಇತಿಹಾಸ ಪ್ರಸಿದ್ಧವಾದ ಗಿರ್ಜೆಂಟಿ ಎಂಬ ಸುಂದರ ಊರಿನಲ್ಲಿ. ತಂದೆ ಸ್ಟಿಫ್ಯಾನೊ. ಗಣಿ ಮಾಲಿಕ. ಶ್ರೀಮಂತ. ಇನ್ನೂ ಮಧ್ಯ ಯುಗದ ಅನಾಗರಿಕ ಪುಂಡಾಟಿಕೆಯ ರೀತಿನೀತಿಗಳನ್ನೇ ಅನುಸರಿಸುತ್ತಿದ್ದ. ಆ ಪ್ರದೇಶದ ಮಾಫಿಯಾ ಗುಪ್ತ ಡಕಾಯಿತರ ಗುಂಪಿನ ಬೆದರಿಕೆಗಳಿಗೆ ತನ್ನ ತೋಳು ಬಲದಿಂದಲೇ (ಅದೊಂದೇ ಅವರಿಗೆ ಅರ್ಥವಾಗುತ್ತಿದ್ದುದು) ಉತ್ತರಿಸುತ್ತಿದ್ದ ಆಜಾನುಬಾಹು, ಧೈರ್ಯಶಾಲಿ. ತಾಯಿ ಕ್ಯಾತರಿನಾ ಬಹು ಮೆದುವಾದ ಮತ್ತು ಪುಕ್ಕಲು ಸ್ವಭಾವದವಳು. ಒಳ್ಳೆಯ ಗೃಹಿಣಿ. ನಿಷ್ಕಪಟತೆ, ಸೂಕ್ಷ್ಮವಾದ ಮನಸ್ಸು, ಔದಾರ್ಯ ಮುಂತಾದವು ತಾಯಿಯಿಂದ ಲೂಯಿಜಿಗೆ ಬಂದ ಗುಣಗಳು.

ಲೂಯಿಜಿ ೧೬ ನೆಯ ವಯಸ್ಸಿಗೆ ಸರಳವಾದ ನೇರವಾದ ಭಾಷೆಯಲ್ಲಿ ಕವನ ರಚಿಸತೊಡಗಿದ. ರೋಮ್ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿ ಹಳೆಯ ಕಂದಾಚಾರ, ಕಟ್ಟುಪಾಡುಗಳ ಅಧ್ಯಾಪಕರ ವಿರುದ್ಧ ಬಂಡೆದ್ದ. ಭಾಷಾಶಾಸ್ತ್ರದ ಪ್ರಾಧ್ಯಾಪಕ ಎಮಿಲಿಯೊ ಲೂಯಿಜಿಗೆ ಅಚ್ಚುಮೆಚ್ಚೆನ್ನಿಸಿ ಅವರ ಪ್ರಭಾವ–ಪ್ರೇರಣೆಗಳಿಂದಾಗಿ ಸಿಸಿಲಿಯ ಜನಪದ ಸಾಹಿತ್ಯ ಸಂಪದ ಮತ್ತು ಐತಿಹಾಸಿಕ ಘನತೆಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದ. ಜರ್ಮನಿಯ ಬಾನ್ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರದ ವಿಶೇಷ ವ್ಯಾಸಂಗ ಮಾಡಿ ೧೮೯೧ರಲ್ಲಿ ಗಿರ್ಜೆಂಟಿಯ ಪ್ರಾದೇಶಿಕ ಭಾಷೆ–ಒಂದು ಅಧ್ಯಯನ ಎಂಬ ವಿದ್ವತ್ ಪ್ರಬಂಧ ಬರೆದು ಡಾಕ್ಟರೇಟ್ ಪ್ರಶಸ್ತಿಯನ್ನು ಪಡೆದ. ಅದೇ ವಿಶ್ವವಿದ್ಯಾಲಯದಲ್ಲಿ ಕೆಲಕಾಲ ಭಾಷಾಶಾಸ್ತ್ರದ ಉಪ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ. ಆ ವೇಳೆಗೆ ಮಾಲ್‌ಜಿಯೊ ಕೊಂಡೊ ಮತ್ತು ಪಾಸ್ಕ್ ಡಿ ಜೆಯ ಎಂಬೆರಡು ಕವನ ಸಂಕಲನಗಳನ್ನು ಪ್ರಕಟಿಸಿದ್ದ. ಅವಕ್ಕಿಂತ ಮುಖ್ಯವಾಗಿ ಅತ್ಯಂತ ಕಠಿಣ ಕಾರ್ಯವೆನ್ನಬಹುದಾದ ಗಯಟೆ ಕವಿಯ ರೋಮನ್ ಎಲಿಜೀಸ್ ಎಂಬ ಕೃತಿಯ ಭಾಷಾಂತರವನ್ನು ಬಹು ಸಮರ್ಥವಾಗಿ ಪ್ರತಿಭಾಪೂರ್ಣವಾಗಿ ಮಾಡಿದ.

೧೮೯೩ರ ಅನಂತರ ಸಾಹಿತ್ಯ ವಿಮರ್ಶಕ ಯುಗೊಮ್ ಒಜೆಟ್ಟಿ, ಕಾದಂಬರಿಕಾರ ಲೂಯಿಜಿ ಕ್ಯಾಪುವಾನ್ ಈ ಇಬ್ಬರ ಸ್ನೇಹ ಲೂಯಿಜಿಯ ಜೀವನಕ್ಕೆ ಹೊಸ ತಿರುವು ಕೊಟ್ಟಿತು. ಕಾವ್ಯ ಮಾಧ್ಯಮ ಬಿಟ್ಟು ಗದ್ಯ ಮಾಧ್ಯಮಕ್ಕೆ ತನ್ನ ಒಲವನ್ನು ಬದಲಾಯಿಸಿದ. ಅದರ ಫಲ ಸಣ್ಣ ಕತೆಗಳ ಪ್ರಥಮ ಸಂಕಲನ ಅಮೋರಿ ಸೆಂಜಾ ಆಮೋರಿ (ಲವ್ ವಿದೌಟ್ ಲವ್ ೧೮೯೩), ಈತನ ಶ್ರೇಷ್ಠ ಕೃತಿಗಳಲ್ಲಿ ಒಂದು ಎಂದು ಪರಿಗಣಿತವಾಗಿರುವ ದಿ ಔಟ್‌ಕಾಸ್ಟ್ ಎಂಬ ಕಾದಂಬರಿ ಮತ್ತು ಇಲ್-ಟರ್ನೋ ಎಂಬ ಇನ್ನೊಂದು ಕಾದಂಬರಿ. ಸಿಸಿಲಿಯ ಬದುಕನ್ನು ಸಾಹಿತ್ಯದಲ್ಲಿ ಹಿಡಿದಿಟ್ಟ ಕ್ಯಾಪುವಾನ (ಲೂಯಿಜಿಯ ಮಿತ್ರ) ಮತ್ತು ಜಗದ್ವಿಖ್ಯಾತ ಕಾದಂಬರಿಕಾರ ಗಿವೋನಿ ವೆರ್ಗಾ ಇವರ ಗಾಢವಾದ ಪ್ರಭಾವಕ್ಕೆ ಲೇಖಕ ಒಳಗಾಗಿರುವುದು ಈ ಕಾದಂಬರಿಗಳಲ್ಲಿ ಸ್ಪಷ್ಟವಾಗಿದೆ. ತಾನು ಕಂಡುಂಡ ಬದುಕಿನ ನೈಜ ಹಾಗೂ ಪ್ರಾಮಾಣಿಕ ನಿರೂಪಣೆ, ಅಂತರಂಗಾವಲೋಕನ, ಮನೋವಿಶ್ಲೇಷಣೆ ಮತ್ತು ಪ್ರಾದೇಶಿಕತೆ ಲೂಯಿಜಿಯ ಸಾಹಿತ್ಯ ಕೃತಿಗಳ ಗುಣ ವಿಶೇಷಗಳು. ಕೇವಲ ಕಟುವಾದ ಅನುಭವಗಳೇ ಹೆಚ್ಚಾಗಿದ್ದುದರಿಂದ ಈತನ ಜೀವನ ದೃಷ್ಟಿಯಲ್ಲಿ ಒಂದು ಬಗೆಯ ನಿರಾಶೆ, ಸಿನಿಕತನ ಬೆರೆತುಕೊಂಡಿವೆ.

ಲೂಯಿಜಿ ೧೮೯೪ರಲ್ಲಿ ಆಂಟೋನಿಯೆಟ್ಟಾ ಎಂಬಾಕೆಯುನ್ನು ಮದುವೆಯಾದ. ಮುಂದಿನ ಹತ್ತು ವರ್ಷ ಅತ್ಯಂತ ಸುಖಮಯವಾಗಿ ಕಳೆಯಿತು. ಮೂವರು ಮಕ್ಕಳಾದರು. ೧೯೦೪ರಲ್ಲಿ ತಂದೆಯ ಉದ್ಯಮದಲ್ಲಿ ಅಪಾರ ನಷ್ಟವಾಗಿ ಇಡೀ ಸಂಸಾರ ದುರ್ಗತಿಗೊಳಗಾಯಿತು. ಲೂಯಿಜಿ ರೋಮ್ ನಗರದ ಮಹಿಳಾ ಟ್ರೇನಿಂಗ್ ಕಾಲೇಜಿನಲ್ಲಿ ಸಾಹಿತ್ಯದ ಅಧ್ಯಾಪಕನಾಗಿದ್ದ. ಇದ್ದಕ್ಕಿದ್ದಂತೆ ಬಂದೆರಗಿದ ಕಷ್ಟ ತಾಳಲಾರದೆ ಹೆಂಡತಿ ಉನ್ಮಾದ ರೋಗಕ್ಕೆ ಒಳಗಾಗಿ ೧೯೧೮ರಲ್ಲಿ ಮೃತಳಾದಳು.

ಇಟಲಿಯ ಓದುಗರು ಲೂಯಿಜಿಯ ಪ್ರತಿಭೇಯನ್ನು ಗುರುತಿಸದೆ ಅವನ ಬರೆವಣಿಗೆಯ ಬಗ್ಗೆ ಉದಾಸೀನರಾಗಿಯೇ ಇದ್ದರು. ೧೯೧೮ರ ವೇಳೆಗೆ ವಿದೇಶದ ಜನ ಈತನ ಬರೆಹವನ್ನು ಮೆಚ್ಚಿ ಹೊಗಳತೊಡಗಿದ ಮೇಲೆ ದೇಶೀಯರ ಕಣ್ತೆರೆಯಿತು. ಆ ವೇಳೆಗೆ ಲೂಯಿಜಿ ತನ್ನ ಅತ್ಯುತ್ಕೃಷ್ಟ ಕಾದಂಬರಿಗಳನ್ನು ಬರೆದು ಮುಗಿಸಿದ್ದ. ಅವನ ನೂರಾರು ಸಣ್ಣ ಕತೆಗಳು ಮೂರು ಸಂಪುಟಗಳಲ್ಲಿ ಪ್ರಕಟವಾಗಿದ್ದವು. ನಾಟಕ ರಚನೆಯ ಭವ್ಯವಾದ ಕಾಲ ಮೊದಲಾಗಿ ಅದೇ ಎರಡು ವರ್ಷಗಳಾಗಿದ್ದುವು. ಮೊಟ್ಟಮೊದಲ ನಾಟಕ ರೈಟ್ ಯೂ ಆರ್ ಇಫ್ ಯು ತಿಂಕ್ ಯೂ ಆರ್, ೧೯೪೬ ರಲ್ಲಿ ಮೊದಲ ಪ್ರದರ್ಶನದಲ್ಲೇ ಯಶಸ್ವಿಯಾಗಿ ಯೂರೋಪಿನಲ್ಲೆಲ್ಲ ಪ್ರದರ್ಶನಗಳೇರ್ಪಟ್ಟು ಜಯಭೇರಿ ಬಾರಿಸಿತು.

ಲೂಯಿಜಿ ತನ್ನ ಬಾಳಿನ ಕಹಿ ಅನುಭವಗಳಿಂದಲೇ ಎತ್ತಿಕೊಂಡ ಅಸೂಯೆ, ವೃದ್ಧಾಪ್ಯ, ಹುಚ್ಚು, ಸಾವು ಮುಂತಾದ ಸಮಸ್ಯೆಗಳನ್ನೇ ನಾಟಕಗಳಲ್ಲಿ ಚರ್ಚಿಸುತ್ತಿದ್ದ. ಆತನ ನಗೆ ಮಾತುಗಳಲ್ಲಿನ ಮಾರ್ಮಿಕತೆ, ವಿಷಾದ, ಅಂತರಾರ್ಥ ಹಾಗೆಯೇ

ಕೆಲವು ವಿಕೃತ ಸನ್ನಿವೇಶಗಳು ಜನರ ಮನಸ್ಸನ್ನು ಆಳವಾಗಿ ಕಲಕಿದವು. ನಾಟಕದಿಂದ ನಾಟಕಕ್ಕೆ ವಿಚಾರಗಳು ಪರಿಪಕ್ವವಾಗುತ್ತ ಘನೀಭವಿಸಿದ ಸಿದ್ಧಾಂತಗಳಾದವು. ನಾಟಕಗಳೆಲ್ಲವೂ ತುಂಬಾ ಜನಪ್ರಿಯವಾದವು. ಇರುವಿಕೆಗೂ ತೋರಿಕೆಗೂ ಇರುವ ಘರ್ಷಣೆ ಈ ನಾಟಕಗಳ ಸಾಮಾನ್ಯ ವಸ್ತು. ವ್ಯಕ್ತಿಯ ಹಲವು ಮುಖ (ವಾಡ) ಗಳ ಹಿಂದೆ ಎಲ್ಲೂ ಕಾಣದಾಗಿರುವ ಸತ್ಯ ಮುಖದ ಪೇಚಾಟವನ್ನು ಈ ನಾಟಕಗಳು ಚೆನ್ನಾಗಿ ಅಭಿವ್ಯಕ್ತಿಸಿದವು. ೧೯೨೧ ರಲ್ಲಿ ಲೂಯಿಜಿಯ ಕಲಾಸಿದ್ಧಿ ಶಿಖರ ಮುಟ್ಟಿತು. ನಾಲ್ಕನೇ ಹೆನ್ರಿ, ಸಿಕ್ಸ್ ಕ್ಯಾರೆಕ್ಟರಸ್ಸ್ ಇನ್ ಸರ್ಚ್ ಆಫ್ ಎನ್ ಆತರ್. ಎಂಬೆರಡು ಉತ್ಕೃಷ್ಟ ನಾಟಕಗಳು ರಚಿತವಾದ್ದು ಈ ಕಾಲದಲ್ಲಿ ಈತನ ಹೆಸರು ಲೋಕಖ್ಯಾತವಾಯಿತು. ೧೯೨೫ ರಲ್ಲಿ ರಾಷ್ಟ್ರೀಯ ರಂಗಭೂಮಿಯನ್ನು ಸ್ಥಾಪಿಸುವ ಪ್ರಯತ್ನ. ಅದ್ದೂರಿಯ ಆರಂಭೋತ್ಸವದಲ್ಲೇ ಕೊನೆಗೊಂಡಿತು. ಫ್ರೆಂಚ್ ಮತ್ತು ಇಟಲಿ ಸರ್ಕಾರಗಳು ಲೀಜನ್ ಆಫ್ ಆನರ್‌ನ ಸದಸ್ಯತ್ವ, ಕಮ್ಯಾಂಡರ್ ಆಫ್ ದಿ ಕ್ರೌನ್ ಎಂಬ ಪ್ರಶಸ್ತಿಗಳನ್ನಿತ್ತು ಸನ್ಮಾನಿಸಿದವು. ಸರ್ವಾಧಿಕಾರಿ ಮುಸೊಲೀನಿ ಈತನನ್ನು ಹೈ ಕಮ್ಯಾಂಡರ್ ಆಫ್ ಸೇಂಟ್ ಮಾರಿಸ್ ಆಗಿ ನೇಮಕ ಮಾಡಿದ. ೧೯೩೫ ರಲ್ಲಿ ಲೂಯಿಜಿಗೆ ಸಾಹಿತ್ಯದ ನೊಬೆಲ್ ಪಾರಿತೋಷಕ ಬಂತು.

ತನ್ನ ಆಸ್ತಿ ಪಾಸ್ತಿಗಳನ್ನು ಮೂವರು ಮಕ್ಕಳಲ್ಲಿ ಹಂಚಿ, ಸಂಸಾರದ ಎಲ್ಲ ಮೋಹ, ಬಂಧನಗಳನ್ನೂ ಕಳಚಿಹಾಕಿ ನಿರಂತರ ಪ್ರವಾಸದಲ್ಲಿ ಕಾಲ ಕಳೆಯುತ್ತ, ಬದುಕು ಮರೀಚಿಕೆ ಸಾವೊಂದೇ ಸತ್ಯ ಎಂಬ ನಿಲುವನ್ನು ತಳೆದಿದ್ದ ಲೂಯಿಜಿ ಎದುರು ನೋಡುತ್ತಿದ್ದ ಸಾವು ೧೯೩೬ರ ಡಿಸೆಂಬರ್‌ನಲ್ಲಿ ಬಂತು. ಆಗ ಈತನಿಗೆ ಎಪ್ಪತ್ತು ವರ್ಷ ವಯಸ್ಸು. ಬದುಕಿನಲ್ಲಿ ಹೇಗೋ ಹಾಗೆ ಸಾವಿನಲ್ಲೂ ನಿರಾಡಂಬರವನ್ನೇ ಬಯಸಿದ ಈತನ ಕೊನೆಯ ಇಚ್ಛೆಯಂತೆ ಅಂತ್ಯಕ್ರಿಯೆ ಅತ್ಯಂತ ಸರಳವಾಗಿ ನೆರವೇರಿತು.

ಕೆಲವು ಕವನ ಸಂಕಲನಗಳು, ಮುನ್ನೂರು ಕಿರು ಕಾದಂಬರಿಗಳು, ಏಳು ಕಾದಂಬರಿಗಳು, ನಲವತ್ತಕ್ಕೂ ಹೆಚ್ಚು ನಾಟಕಗಳು, ವಿಮರ್ಶಾತ್ಮಕ ಗ್ರಂಥಗಳು ಎಂದು ಈತನ ಕೃತಿಗಳನ್ನು ಪಟ್ಟಿ ಮಾಡಿದ್ದಾರೆ. ಈ ಕೃತಿಗಳ ಬಗ್ಗೆ ಮುಖ್ಯವಾಗಿ ಈತನ ವಿಶಿಷ್ಟ ಕಾಣಿಕೆಗಳೆಂದೆನಿಸಿರುವ ನಾಟಕಗಳ ಬಗ್ಗೆ ವಿಮರ್ಶಕರ ಅಭಿಪ್ರಾಯಗಳು ಭಿನ್ನವಾಗಿವೆ. ಈತನ ನಾಟಕಗಳು ವಾಸ್ತವ ಬದುಕಿಗೆ ದೂರ, ಕೇವಲ ಮನೋತುಮುಲ ಭಾವನಾತರಂಗಗಳಿಗೆ ಸೀಮಿತವಾದವು ಎಂದೂ ನಿರಾಶಾವಾದದ ಹೆಬ್ಬಂಡೆಯನ್ನಪ್ಪಳಿಸಿ ಒಡೆದು ಹೋದ ಆದರ್ಶದ ದೋಣಿ ಎಂದೂ ಕೆಲವು ವಿಮರ್ಶಕರು ಹೇಳಿದರೆ ಮತ್ತೆ ಕೆಲವರು ನೀರಸವಾದ, ಶೋಕಮಯವಾದ ಈ ಲೋಕದ ಬದುಕಿಗೂ, ಪರಿಪೂರ್ಣವಾದ ಬದುಕಿನ ಹೊಂಗನಸಿಗೂ ಇರುವ ಅಂತರವನ್ನು ಹೃದಯಂಗಮವಾಗಿ ಇವನ ನಾಟಕಗಳು ಚಿತ್ರಿಸುತ್ತವೆ ಎನ್ನುತ್ತಾರೆ. ಸತ್ಯಕ್ಕೂ, ಭ್ರಮೆಗೂ ಇರುವ ವ್ಯತ್ಯಾಸವನ್ನು ಗುರುತಿಸುವ ಸಾಮರ್ಥ್ಯ ಯಾರಿಗೂ

ಇಲ್ಲ. ಅಲ್ಲದೆ, ಪ್ರತಿಯೊಬ್ಬ ಮಾನವನಿಗೂ ಭ್ರಮೆ ಒಂದು ಅನಿವಾರ್ಯವಾದ ಅಗತ್ಯ. ಸತ್ಯಾನ್ವೇಷಣೇ ದುರಂತದಲ್ಲಿ ಪರ್ಯವಸಾನವಾಗುತ್ತದೆ–ಇವು ಲೂಯಿಜಿಯ ನಾಟಕಗಳ ಒಟ್ಟು ಸಂದೇಶ. ಈತನ ನಾಲ್ಕನೇ ಹೆನ್ರಿ ನಾಟಕವನ್ನು ಶೇಕ್ಸ್‌ಪಿಯರನ ಹ್ಯಾಮ್ಲೆಟ್ ನಾಟಕಕ್ಕೆ ಹೋಲಿಸುವುದುಂಟು.

ಈತನ ಕೆಲವು ನಾಟಕಗಳು ಮುವತ್ತುಮೂರು ಭಾಷೆಗಳಿಗೆ ಅನುವಾದವಾಗಿವೆ.

ಲೂಯಿಜಿ ನಾಟಕ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳನ್ನು ತಂದ. ವಿರೂಪ ನಾಟಕಗಳ ಮೊದಲಿಗನಾಗಿ ಆಧುನಿಕ ಅಸಂಬದ್ಧ ನಾಟಕದ ಬೀಜ ಬಿತ್ತಿದ. ಮಾನವನ ಬದುಕಿನ ಬಗ್ಗೆ ಮಾಡಿದ ಈತನ ಚಿಂತನ, ವಿಚಾರಮಂಥನ ಅಪೂರ್ವವಾದವು. **(ಕೆ.ಬಿ.ಪಿ.)**

ವಾಸ್ತವತೆಯನ್ನು ಕಡೆಗಣಿಸಿ ಪಿರಾಂಡಲೊ 'ಫ್ಯಾಂಟಸಿ'ಯನ್ನು ಬಳಸಿದ. ಇದರ ಮೂಲಕ ಮನುಷ್ಯನ ಸ್ಥಿತಿಯನ್ನು ಅನಾವರಣ ಮಾಡಿದ ಬದುಕಿನ ಅಸಾಂಗತ್ಯ ಮತ್ತು ವಾಸ್ತವ ಹೊರ ತೋರಿಕೆಗಳ ಘರ್ಷಣೆ ಇವನ ನಾಟಕಗಳ ವಸ್ತು ಸಾಮಾನ್ಯವಾಗಿ ಇವನ ಪಾತ್ರಗಳು ಕೆಳಗಿನ ಮಧ್ಯಮ ವರ್ಗಕ್ಕೆ ಸೇರಿದವು–ಉಪಾಧ್ಯಾಯರು, ವಸತಿ ಗೃಹಗಳನ್ನು ನಡೆಸುವವರು, ಗುಮಾಸ್ತರು ಇಂಥವರು. ಸಹಜ ಪ್ರವೃತ್ತಿ, ವಿಚಾರ ಶಕ್ಲತಿ ಇವು ಇವರ ಬದುಕಿನಲ್ಲಿ ಘರ್ಷಿಸುತ್ತವೆ, ಇದರಿಂದ ಇವರ ಬದುಕು ಗೊಂದಲಮಯವಾಗುತ್ತದೆ. ಮನುಷ್ಯನ ವ್ಯಕ್ತಿತ್ವವೆಂದರೆ ಏನು ಎನ್ನುವ ಪ್ರಶ್ನೆ ಏಳುತ್ತದೆ. ಪಾತ್ರಗಳು ತಮ್ಮನ್ನು ಕಾಣುವ ರೀತಿ, ಇತರರು ಅವರನ್ನು ಕಾಣುವ ರೀತಿ, ಇವುಗಳಲ್ಲಿನ ವ್ಯತ್ಯಾಸ, ವಿರೋಧಗಳು ಇವುಗಳಿಂದ ಅವರು ಇನ್ನೂ ಗೊಂದಲದಲ್ಲಿ ಬೀಳುತ್ತಾರೆ. ಈ ಗೊಂದಲದಿಂದ ಒಂದಿಷ್ಟು ಹಾಸ್ಯ ಮೂಡಿದರೂ, ಈ ಹಾಸ್ಯವು ಪಾತ್ರಗಳ ವಿಷಯದಲ್ಲಿ ನಮ್ಮ ಮರಾಕವನ್ನು ಆಳಗೊಳಿಸಿಸುತ್ತವೆ.

ಪಿರಾಂಡೆಲೊ ಮುಂದೆ ಬಂದ ಅನುಹಿಲ್, ಸಾಫ್ಟ್ ಅಂಥ ನಾಟಕಕಾರರಿಗೆ ಮುನ್ಸೂಚನೆಯಾದ. **(ಎಲ್.ಎಸ್.ಎಸ್.)**

ಗಾಬ್ರೀಯೇಲ್ ದಾನೂನ್ ಟ್ಸ್ಯೊ (೧೮೬೩–೧೯೩೮)

ಹತ್ತೊಂಬತ್ತನೆಯ ಶತಮಾನದ ಇಟಲಿಯ ಸಾಹಿತ್ಯದ ಮೇಲೆ ಅತ್ಯಂತ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದ ಕವಿ, ನಾಟಕಕಾರ, ಕಥೆಗಾರ, ಹಾಗೂ ಸಾಹಸಿ. ಏಡ್ರಿಯಾಟಿಕ್ ಕಡಲುತೀರದ ಅಬ್ರೂಸಿ ಪ್ರಾಂತದ ಪೆಸ್ಕಾರಾದಲ್ಲಿ ಹುಟ್ಟಿ ೧೮೮೧–೧೯೧೫ರವರೆಗೆ ರೋಮ್, ನೇಪಲ್ಸ್ ಅಬ್ರೂಸಿಗಳಲ್ಲಿ ತಿರುಗುತ್ತ ಅಸಾಧಾರಣ ಪ್ರತಿಭೆಯನ್ನು ಈತ, ತನ್ನ ವಿವಿಧ ಕೃತಿಗಳಲ್ಲಿ ಪ್ರದರ್ಶಿಸಿದ.

ಕ್ಯಾಂಟೋನೋ (ನ್ಯೂ ಸಾಂಗ್) ಎಂಬ ಕೃತಿ ಇವನಿಗೆ ಅಪಾರ ಕೀರ್ತಿಯನು ಗಳಿಸಿಕೊಟ್ಟಿತು. ಆಮೇಲೆ ಪ್ರಕಟಿಸಿದ ಇಂಟರ್‌ಮೆಸ್ಸೊ ಡಿ ರೈಂ ಮುಂತಾದ ಕಾವ್ಯಗಳಲ್ಲಿ ಇವನ ಕಾವ್ಯಭಾಷೆ ಹುಚ್ಚು ಹೊಳೆಯಂತೆ ಹರಿದು

ಇಳಿಗತಿಯತ್ತ ಸಾಗುವುದನ್ನು ಗಮನಿಸಬಹುದು. ಓಡಿ ನವಲಿ ಎಂಬ ಕೃತಿಯಲ್ಲಿ ಕಡಲು ಹಾಗೂ ನೌಕಾ ಜೀವನಗಳ ವರ್ಣನೆಯಿದೆ. ಇಟಲಿ ತನ್ನ ನೌಕಾಪಡೆಯನ್ನು ಬಲಪಡಿಸಿಕೊಳ್ಳಬೇಕೆಂದು ಸಾರುವ ಪ್ರಚಾರ ಗೀತೆಗಳೂ ಇದರಲ್ಲಿ ಸೇರಿವೆ. ೧೮೯೩-೧೯೦೦ರ ಸುಮಾರಿನಲ್ಲಿ ಈತ ಆಕಾಶ, ಸಮುದ್ರ, ಭೂಮಿ ಮತ್ತು ವೀರರನ್ನು ಕುರಿತ ಪ್ರಸಂಸೆ ಎಂಬ ನೀಳ್ಗವನವನ್ನು ಬರೆದ. ಇದರಲ್ಲಿ ಜೀವನ ಕಲೆ ಕಾವ್ಯ ಮತ್ತು ಪುರಾಣ ಕಥೆಗಳಲ್ಲಿನ ರಸನಿಮಿಷಗಳನ್ನು ವರ್ಣಿಸಲಾಗಿದೆ. ಆದರೆ ಈ ವರ್ಣನೆಗಳು ಸ್ವಾರ್ಥಿ, ಸ್ವೇಚ್ಛಾಚಾರಿ ವ್ಯಕ್ತಿಯೊಬ್ಬನ ಮನೋವಿಕಾರಗಳ ರಾಶಿಗಳಂತೆ ಕಾಣುತ್ತವೆ.

ಅನಂತರ ಪೆಸ್ಕಾರಾದ ಕಥೆಗಳು ಎಂಬ ಕಥಾಸಂಗ್ರಹ ಹೊರಬಂತು (೧೮೮೨). ಇದರಲ್ಲಿ ತನ್ನ ಊರಾದ ಅಬ್ರೂಸಿ ಪ್ರಾಂತದ ರೈತರ ವಾಸ್ತವಿಕ ಜೀವನವನ್ನು ಕವಿ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಆದರೆ ಈ ಚಿತ್ರಣ ಯಾವ ವ್ಯಕ್ತಿತ್ವವೂ ಇಲ್ಲದೆ ಸ್ವಾರಸ್ಯರಹಿತವಾಗಿದೆ. ಅಂತಃಕರಣವನ್ನು ಅರಳಿಸಿ ಅನುಕಂಪೆಯನ್ನು ಪ್ರಚೋದಿಸುವ, ಜೀವನದ ಯಾವ ಮೌಲ್ಯವನ್ನೂ ಇಲ್ಲಿ ನಾವು ಕಾಣಲಾರೆವು. ೧೮೮೯ರಲ್ಲಿ ಈತ ಇಲ್ ಪಿಯಾಸೆರೊ (ಭೋಗಗಳು) ಫಾರ್ಸೆ ಚಿ ಸಿ, ಪಾರ್ಸೆ ಚಿ ನೊ (ಇದ್ದರೂ ಇರಬಹುದು, ಇಲ್ಲದಿರಬಹುದು) ಮುಂತಾದ ಏಳು ಕಾದಂಬರಿಗಳನ್ನು ಬರೆದ. ನೀಚೆಯ ತತ್ತ್ವಗಳಿಂದ ಪ್ರಭಾವಿತನಾಗಿ ಈತ ಟ್ರಿಯಾನ್ಫೊ ಡೆಲ ಮಾರ್ಟೆ ಎಂಬ ಸತ್ತ್ವಶಾಲಿ ಕಾದಂಬರಿಯನ್ನು ಬರೆದ. ಮನಃಕ್ಲೇಶ, ಸ್ವಾರ್ಥ, ನಿಷ್ಕಾರುಣ್ಯ, ಕ್ರೌರ್ಯ, ಭ್ರಷ್ಟಾಚಾರ, ವಿಷಯಲೋಲುಪತೆ-ಇಂಥ ಮಾನವ ವಿಕಾರಗಳನ್ನು ವರ್ಣಿಸುವುದರಲ್ಲಿ ಈತನಿಗೆ ಆಸಕ್ತಿ ಹೆಚ್ಚು. ಈ ಎಲ್ಲ ಕಾದಂಬರಿಗಳಲ್ಲಿನ ಪಾತ್ರಗಳು-ನಿರುತ್ಸಾಹಿಗಳು, ಧರ್ಮಬಾಹಿರರು. ಉಲ್ಲಾಸವನ್ನರಿಯದ ಅಂಥ ಜೀವಿಗಳು.

೧೮೯೮ರಲ್ಲಿ ಇವನಿಗೆ ನಾಟಕದಲ್ಲಿ ಅಭಿರುಚಿ ಹುಟ್ಟಿ, ಸಿಟ್ಟ ಮಾರ್ಟ (ಮೃತನಗರ) ಎಂಬ ನಾಟಕ ಬರೆದ. ಆಮೇಲೆ ವರ್ಷಕ್ಕೊಂದರಂತೆ ಇಟಾಲಿಯನ್ ಅಥವಾ ಫ್ರೆಂಚ್‌ನಲ್ಲಿ ಹಲವು ನಾಟಕಗಳನ್ನು ಪ್ರಕಟಿಸಿದ. ಲ ಫಿಗ್ಲಿಯ ಡಿ ಲಾರಿಯೊ ಎಂಬ ನಾಟಕ ಹಿರಿಯಸ್ಥಾನ ಗಳಿಸಿತು.

ಒಂದನೆಯ ಮಹಾಯುದ್ಧ ಪ್ರಾರಂಭವಾದಾಗ ಇಟಲಿ ಮಿತ್ರರಾಷ್ಟ್ರಗಳೊಡನೆ ಸೇರಬೇಕೆಂದು ಈತ ಪದೇ ಪದೇ ಒತ್ತಾಯಮಾಡಿ ಪ್ರಚಾರಲೇಖನಗಳನ್ನು ಬರೆದ. ಯುದ್ಧಕ್ಕೆ ತನ್ನ ದೇಶವೂ ಕಾಲಿಟ್ಟಾಗ ನೌಕಾ ಇಲಾಖೆಯಲ್ಲಿ ಲೆಫ್ಟಿನೆಂಟ್ ಆಗಿ ಕೆಲಸಮಾಡಿದ. ಏಡ್ರಿಯಾಟಿಕ್ ತೀರದ ವಿಮಾನ, ಕಡಲು, ಭೂ ಸೈನ್ಯಗಳ ಕಾರ್ಯಾಚರಣೆಯ ನಾನಾ ರಂಗಗಳಲ್ಲಿ ಕಾದಾಡಿ ಶತ್ರು ಶಿಬಿರಗಳ ಜೊತೆ ಹೋರಾಡಿ, ತನ್ನ ಅಸಾಧಾರಣ ಶೌರ್ಯವನ್ನು ಪ್ರದರ್ಶಿಸಿದ. ೧೯೧೦ರಲ್ಲಿ ಫ್ಯೂಮೆ ಪಟ್ಟಣ ಇಟಲಿಗೆ ದಕ್ಕಲಾರದೆಂದು ಖಚಿತವಾದಾಗ ಮೇಲಧಿಕಾರಿಗಳ ಆಜ್ಞೆಯನ್ನು

ಉಲ್ಲಂಘಿಸಿ ಸುಮಾರು ೩೦೦ ಜನ ಅನುಯಾಯಿಗಳೊಡನೆ ಮುನ್ನುಗ್ಗಿ ಆಪಟ್ಟಣವನ್ನು ಹಿಡಿದು ಎರಡು ವರ್ಷಗಳ ಕಾಲ ಅಲ್ಲಿ ಸರ್ವಾಧಿಕಾರಿಯಾಗಿ ಅಧಿಕಾರ ನಡೆಸಿದ. ಆಗ ಈತ ತನ್ನ ಉಜ್ವಲಶೈಲಿಯಲ್ಲಿ ಹಲವಾರು ಭಾಷಣಗಳನ್ನು ಮಾಡಿದ. ಯುದ್ಧಕ್ಕೆ ಸಂಬಂಧಿಸಿದ ಮತ್ತು ರಾಜಕೀಯ ವಿಷಯಗಳನ್ನು ಕುರಿತ ಕಥೆ, ಕವನ, ಪ್ರಚಾರ ಲೇಖನಗಳನ್ನೂ ಬರೆದು ನಿರಂಕುಶ ಪ್ರಭುತ್ವದ ತತ್ತ್ವವನ್ನು ಸಾರಿದ. ೧೯೨೧ರಲ್ಲಿ ಇಟಲಿಯ ಸೈನ್ಯ ಫ್ಯೂಮೆ ಪಟ್ಟಣವನ್ನು ಮುತ್ತಲು ಬಂದಾಗ ಈತ ಅಧಿಕಾರವನ್ನು ತ್ಯಜಿಸಿ, ನಿವೃತ್ತನಾದ. ಗರ್ದ ಸರೋವರ ತೀರದ ಭವ್ಯ ಸೌಧವೊಂದರಲ್ಲಿ ವಾಸಿಸುತ್ತಿದ್ದು ೧೯೩೮ರಲ್ಲಿ ಕಾಲವಾದ.

ಕೇವಲ ಬುದ್ಧಿ ಪ್ರಧಾನವಾಗಿದ್ದು, ಶುಷ್ಕ ಪಾಂಡಿತ್ಯದ ಅಸಹಜತೆಯಿಂದ ಕೂಡಿದ ಅಂದಿನ ಇಟಲಿಯ ಕಾವ್ಯ ಶೈಲಿಯನ್ನು ಬದಲಾಯಿಸಿ ಈತ ಭಾವ ಪ್ರಧಾನವಾಗುವಂತೆ ಮಾಡಿದ. ಅದು ಮಾನವ ವಿಕಾರಗಳನ್ನೂ ಸಂವೇದನೆಗಳನ್ನೂ ರಾಗೋದ್ವೇಗಗಳನ್ನೂ ಅಭಿವ್ಯಕ್ತಗೊಳಿಸುವಂತೆ ಮಾಡಿ ಇಟಾಲಿಯನ್ ಭಾಷೆಯ ಸಂಪತ್ತನ್ನು ಹೆಚ್ಚಿಸಿದ. **(ಎಚ್.ಕೆ.ಆರ್.)**

ಕಾರ್ಲೋ ಗಾಲ್ಡೋನಿ (೧೭೦೭–೧೭೯೩)

ಇಟಲಿಯ ಸಾಂಪ್ರದಾಯಿಕ ನಾಟಕವನ್ನು ಸುಧಾರಿಸಿದ ನಾಟಕಕಾರ. ಇಟಾಲಿಯನ್ ಹರ್ಷನಾಟಕದ ಜನಕನೆಂದು ಪ್ರಸಿದ್ಧನಾಗಿದ್ದಾನೆ. ಈತ ಹುಟ್ಟಿದ್ದು ವೆನಿಸ್ಸಿನಲ್ಲಿ. ಸ್ವಲ್ಪಕಾಲ ವಕೀಲಿ ವೃತ್ತಿಯಲ್ಲಿದ್ದು ಅನಂತರ ನಾಟಕರಂಗಕ್ಕೆ ಇಳಿದ.

ನಾಟಕಗಳನ್ನು ಬರೆಯುವ ಆಸೆ ಗಾಲ್ಡೋನಿಗೆ ಬಾಲ್ಯದಿಂದಲೂ ಇತ್ತು. ಎಂಟನೆಯ ವಯಸಿನಲ್ಲೆ ಈತ ತನ್ನ ಮೊದಲನೆಯ ನಾಟಕ ಬರೆದನೆನ್ನಲಾಗಿದೆ. ೧೭೩೪ರಲ್ಲಿ ಈತ ಬರೆದ ಬೆಲಸಾರಿಯೊ ಎಂಬ ದುರಂತನಾಟಕವನ್ನು ಜನತೆ ಮೆಚ್ಚಿದರೂ ದುರಂತನಾಟಕ ತನ್ನ ಕ್ಷೇತ್ರವಲ್ಲವೆಂದು ಈತ ಬಹುಬೇಗ ಆರಿತುಕೊಂಡ. ಅನಂತರ ಚತುರೋಕ್ತಿಯ ಹರ್ಷನಾಟಕಗಳನ್ನು ಬರೆಯತೊಡಗಿದ; ಆಡು ಮಾತಿನಲ್ಲಿ ಇಟಲಿಯ ಸಾಮಾನ್ಯ ಜನಜೀವನವನ್ನು ಚಿತ್ರಿಸುವ ನಾಟಕಗಳನ್ನು ಬರೆದು ಅವನ್ನು ನೆಲೆಗೊಳಿಸಲು ಶ್ರಮಿಸಿದ.

ನಾಟಕಕಾರನೂ ವಿಮರ್ಶಕನೂ ಆದ ಗಾಟ್‌ಸಿಯಂತೆ ಗಾಲ್ಡೋನಿ ತನ್ನ ನಾಟಕವೃತ್ತಿಯನ್ನು ಕಮೆದಿಯ ದೆಲ್ ಆರ್ತ್‌ನ ನಟರಿಗಾಗಿ ನಾಟಕಗಳನ್ನು ರಚಿಸುವುದರ ಮೂಲಕ ಪ್ರಾರಂಭಿಸಿದ. ಆದರೆ ಗಾಟ್‌ಸಿ ಬಳಸುತ್ತಿದ್ದ ನಕಲಿ ಮತ್ತು ಯಕ್ಷಿಣಿ ಕಥೆಯ ಚಮತ್ಕಾರಗಳನ್ನು ಈತ ಅಷ್ಟಾಗಿ ಬಳಸಲಿಲ್ಲ. ಗಾಲ್ಡೋನಿಯ ಒಲವು ಯಥಾರ್ಥ ನಿರೂಪಣ ಪದ್ಧತಿಯ ರಂಗಭೂಮಿಯ ಕಡೆಗಿತ್ತು. ಫ್ರೆಂಚ್ ನಾಟಕಕಾರ ಮಾಲ್ಯೆರ್‌ನನ್ನು ಅನುಸರಿಸಿ ನೈಜರೀತಿಯಲ್ಲಿ ಸಾಮಾಜಿಕ ಜೀವನದ ಸತ್ಯಗಳನ್ನು ಚಿತ್ರಿಸುವುದು ಇವನ ಆಸೆ. ಈ ದಿಕ್ಕಿನಲ್ಲಿ ಇವನ ಪ್ರಥಮ ಪ್ರಯತ್ನ, ಮೋಮೆಲೊ ದಿ ಕೋರ್ಟಿಯರ್ (೧೭೩೮)– ಇದರಲ್ಲಿ ವೆನಿಷಿಯನ್ ಪ್ರಾಂತ್ಯ

ಭಾಷೆಯನ್ನು ಬಳಸಿದ್ದಾನೆ. ಇದೇ ಶೈಲಿಯಲ್ಲಿ ಬರೆದ ಇನ್ನೊಂದು ನಾಟಕ, ದಿ ವರ್ದಿ ವುಮನ್ (೧೭೪೩). ಈ ನಾಟಕಗಳಲ್ಲಿ ರಂಗದ ಮೇಲೆ ಮೊಗವಾಡಗಳನ್ನು ಧರಿಸುವ ಸಾಂಪ್ರದಾಯಿಕ ಪದ್ಧತಿಯಿಂದ ನಟರನ್ನು ಗಾಲ್ಡೋನಿ ಮುಕ್ತಗೊಳಿಸಿದ. ಒಳ್ಳೆಯ ಹರ್ಷನಾಟಕ ಜನತೆಯ ಗುಣ ದೋಷಗಳನ್ನು ಸರಿಪಡಿಸುತ್ತದೆ ಎನ್ನುವುದು ಈತನ ನಿಲುವು. ಗಾಲ್ಡೋನಿ ಶಿಷ್ಟ ಇಟಾಲಿಯನ್ ಭಾಷೆಯಲ್ಲಿ ನಾಟಕಗಳನ್ನು ರಚಿಸಿದ್ದಾನಾದರೂ ಅವು ಅಷ್ಟಾಗಿ ಪ್ರಸಿದ್ಧಿ ಪಡೆಯಲಿಲ್ಲ. ವೆನಿಷಿಯನ್ ಪ್ರಾಂತೀಯ ಭಾಷೆಯಲ್ಲಿ ಈತ ಬರೆದ ನಾಟಕಗಳಲ್ಲೇ ಸಾಮಾಜಿಕ ಜೀವನದ ಉತ್ತಮ ಪಾತ್ರಗಳು ರೂಪುಗೊಂಡಿವೆ ಎಂದು ವಿಮರ್ಶಕರ ಅಭಿಪ್ರಾಯ.

ಗಾಲ್ಡೋನಿ ೨೬೦ಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದಾನೆ. ೧೭೫೦–೫೧ರ ಒಂದು ವರ್ಷದ ಅವಧಿಯಲ್ಲೇ ೧೬ ನಾಟಕಗಳನ್ನು ಈತ ಬರೆದನೆನ್ನಲಾಗಿದೆ. ಗಾಟ್‌ಸಿಯ ಪ್ರತಿಸ್ಪರ್ಧೆ ಮತ್ತು ವಿರೋಧದಿಂದಾಗಿ ಗಾಲ್ಡೋನಿ ೧೭೬೧ರಲ್ಲಿ ವೆನಿಸ್ಸನ್ನು ಬಿಟ್ಟು ಪ್ಯಾರಿಸ್ಸಿಗೆ ಹೋದ. ಅಲ್ಲಿ ಇಟಾಲಿಯನ್ ರಂಗಭೂಮಿಯ ವ್ಯವಸ್ಥಾಪಕನ ಹುದ್ದೆಯನ್ನು ಒಪ್ಪಿಕೊಂಡ. ತರುವಾಯ ಫ್ರಾನ್ಸಿನ ರಾಜಕುಮಾರಿಯವರಿಗೆ ಇಟಾಲಿಯನ್ ಭಾಷೆಯನ್ನು ಕಲಿಸಿದ. ೧೬ನೆಯ ಲೂಯಿಯ ಮದುವೆಗೆಂದು ಫ್ರೆಂಚ್ ಭಾಷೆಯಲ್ಲಿ ದಿ ಕೈಂಡ್ಲಿ ಬೂಅರ್ (೧೭೭೧) ಎಂಬ ನಾಟಕವನ್ನು ಬರೆದ. ೧೭೮೩–೮೭ರ ನಡುವೆ ತನ್ನ ಆತ್ಮಕಥೆಯನ್ನು ಪ್ರೆಂಚ್ ಭಾಷೆಯಲ್ಲಿ ಸಿದ್ಧಪಡಿಸಿದ. ತನ್ನ ಕೊನೆಗಾಲದಲ್ಲಿ ವರ್ಸೇಲ್ಸಿಗೆ ತೆರಳಿದ. ೧೬ನೆಯ ಲೂಯಿಯಿಂದಾಗಿ ಈತನಿಗೆ ಬರುತ್ತಿದ್ದ ವಿಶ್ರಾಂತಿವೇತನ ಫ್ರಾನ್ಸಿನ ಮಹಾಕ್ರಾಂತಿಯ ಅನಂತರ ನಿಂತುಹೋಯಿತು. ಗಾಲ್ಡೋನಿ ತುಂಬ ಬಡತನದಲ್ಲಿ ನರಳಿ ೧೭೯೩ರ ಫೆಬ್ರವರಿ ೬ರಂದು ಅಸುನೀಗಿದ.

ಇಟಾಲಿಯನ್ ನಾಟಕದ ಚರಿತ್ರೆಯಲ್ಲಿ ಗಾಲ್ಡೋನಿಗೆ ವಿಶಿಷ್ಟಸ್ಥಾನ ಸಂದಿದೆ. ಈತ ಬಳಕೆಗೆ ತಂದ ಅನೇಕ ಸುಧಾರಣೆಗಳಿಂದ ರಂಗಭೂಮಿಯ ವಿನ್ಯಾಸವೇ ಬದಲಾಯಿತು. ಈತನನ್ನು ಇಟಾಲಿಯನ್ ಹರ್ಷನಾಟಕಗಳ ಜನಕನೆಂದಿರುವುದರ ಜೊತೆಗೆ ಅನೇಕ ಮಿಮರ್ಶಕರು ಇಟಲಿಯ ಮಾಲ್ಯೆರ್ ಎಂದು ಹೊಗಳಿದ್ದಾರೆ.

(ಎಸ್.ವಿ.ಎಸ್.ಯು.)

ಜೋವಾನಿ ಬರ್ಷೆ (೧೭೮೩–೧೮೫೧)

ಇಟಲಿಯ ಸಾಹಿತ್ಯದಲ್ಲಿ ರೊಮಾಂಟಿಕ್ ಚಳವಳಿ ಯನ್ನೂ ಆರಂಭಿಸಿದ ಕವಿ; ದೇಶಭಕ್ತ. ಇಟಲಿಯ ಸಾಹಿತ್ಯ ಮದಾಂದ ಸ್ತೆಲ್ ಎಂಬ ಫ್ರೆಂಚ್ ಲೇಖಕಿಯಿಂದ ಸ್ಫೂರ್ತಿ ಪಡೆಯಬೇಕು. ಜರ್ಮನಿಯ ರೊಮಾಂಟಿಕ್ ಚಳುವಳಿಯ ದಾರಿಯಲ್ಲಿ ನಡೆಯಬೇಕು ಎಂಬುದೇ ಇವನ ವಾದ. ಹುಟ್ಟಿದ್ದು ಮಿಲಾನಿನಲ್ಲಿ ರಾಜಕೀಯ ಕಾರಣಗಳಿಂದ ದೇಶಭ್ರಷ್ಟನಾಗಿ ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿದ್ದ (೧೮೨೧–

೪೭). ಮ್ಯಾನಿಫೆಸ್ಟೊ ಆಫ್ ದಿ ರೊಮಾಂಟಿಕ್ ಪೊಯೆಟ್ರಿ ಇನ್ ಇಟಲಿ (೧೮೧೬) ಎಂಬುದು ಇವನ ಮುಖ್ಯ ಕೃತಿ ಇದಲ್ಲದೆ ಈತ ರಾಜಕೀಯ ಹಾಗೂ ರಾಷ್ಟ್ರಪ್ರೇಮ ವಸ್ತುಗಳನ್ನುಳ್ಳ ಕವಿತೆಗಳನ್ನೂ ಕಥನ ಕವನಗಳನ್ನೂ ಬರೆದಿದ್ದಾನೆ. (ಎಸ್.ಕೆ.ಆರ್.)

ಜಿಯಾವಾನೀ ಬೋಕಾಚೀಯೋ (೧೩೧೩–೭೫)

ಇಟಲಿಯ ಪ್ರತಿಭಾವಂತ ಕವಿ, ಗದ್ಯಲೇಖಕ, ಕಥೆಗಾರ. ಪ್ಯಾರಿಸಿನಲ್ಲಿ ಜನನ. ಯೌವನದ ಹೆಚ್ಚಿನ ಕಾಲವನ್ನು ನೇಪಲ್ಸ್‌ನಲ್ಲಿ ಕಳೆದು ಲೋಕಾನುಭವ ಪಡೆದು ಅಂಜೂವಿನ ರಾಜರ್ಟ್ಸ್ ದೊರೆಯ ಆಸ್ಥಾನ ಸೇರಿದ. ಅಲ್ಲಿದ್ದ ಮಾನವತಾದಿಗಳ ಗೋಷ್ಠಿಯಿಂದ ಉತ್ತೇಜಿತನಾಗಿ ವರ್ಜಿಲ್, ಸ್ಟೇಷಿಯಸ್, ಓವಿಡ್ ಕವಿಗಳ ಕೃತಿಗಳನ್ನೂ ಫ್ರೆಂಚ್ ಅದ್ಭುತ ಕತೆಗಳನ್ನೂ ಆಳವಾಗಿ ವ್ಯಾಸಂಗ ಮಾಡಿದ. ರಾಜಕುಮಾರಿ ಮರೆಯಾದ ಆಕ್ವಿನೋ ಎಂಬವಳಲ್ಲಿ ಅನುರಕ್ತನಾಗಿ ಅನಂತರ ಕಾವ್ಯರಚನೆಯಲ್ಲಿ ನಿರತನಾದ. ಇವನನ್ನು ಹಲವುಬಾರಿ ರಾಯಭಾರಿಯಾಗಿ ಪೆಟ್ರಾರ್ಕ್, ಆರನೆಯ ಇನ್ನೊಸೆಂಟ್. ಐದನೆಯ ಅರ್ಬನ್ ಮುಂತಾದ ಮಹಾವ್ಯಕ್ತಿಗಳ ಬಳಿಗೆ ಕಳುಹಿಸಲಾಯಿತು. ೧೩೬೨ರಲ್ಲಿ ಇವನು ಅನಿರೀಕ್ಷಿತ ಮಾನಸಿಕ ಘರ್ಷಣೆಗೆ ಗುರಿಯಾದಾಗ, ಇವನ ಆಂತರಿಕ ಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳುಂಟಾದವು. ಅಲ್ಲಿಯತನಕ ವಿಷಯಾಸಕ್ತ ಭೋಗಜೀವನ ನಡೆಸುತ್ತಿದ್ದ ಇವನು ಐಹಿಕ ಸುಖಲಾಲಸೆ ತ್ಯಜಿಸಿ ವಿರಕ್ತನಾದ. ಮೂರು ತಿಂಗಳಕಾಲ ವೆನಿಸ್ ನಗರದಲ್ಲಿ ಪೆಟ್ರಾರ್ಕ್ ಕವಿಯ ಅತಿಥಿಯಾಗಿ ಕಳೆದ. ೧೩೭೩ರಲ್ಲಿ ಫ್ಲಾರೆನ್ಸ್‌ನ ಸಾರ್ವಜನಿಕ ಸಭೆಯಲ್ಲಿ ಡಾಂಟೆ ಕವಿಯ ಡಿವೈನ್ ಕಾಮಿಡಿ (ಡಿವಿನ ಕಾಮೆಡಿಯ) ಎಂಬ ಮಹಾಕಾವ್ಯ ಕುರಿತು ವ್ಯಾಖ್ಯಾನ ನಡೆಸಿದ. ಹಲವಾರು ಅಷ್ಟಪಟ್ಪದಿ, ಸಣ್ಣ ಕಥೆಗಳು, ವಿಡಂಬನ ಲೇಖನಗಳು, ವಿಮರ್ಶಾಗ್ರಂಥಗಳನ್ನು ಬರೆದಿದ್ದಾನೆ. ಇವನ ಮುಖ್ಯ ಕೃತಿಗಳ ವಿವರಗಳು ಹೀಗಿವೆ.

ಡಯಾನಾ ದೇವತೆಯ ಬೇಟೆ (ಕಾಚಿಯ ದ ಡಯಾನ): ಇದು ಇಟಾಲಿಯನ್ ಭಾಷೆಯಲ್ಲಿ ಬೇಟೆಯನ್ನು ಕುರಿತು ಬರೆದ ಮೊತ್ತಮೊದಲನೆಯ ಕಾವ್ಯ. ಇದರ ರಚನೆಯ ಕಾಲ ೧೩೩೬–೩೮. ಡಯಾನಾ ದೇವತೆಯ ನೇತೃತ್ವದಲ್ಲಿ ಬೇಟೆಗಾಗಿ ಹೊರಟ ಅರವತ್ತು ಜನ ನೆಯೋಪಾಲಿಟನ್ ಸ್ತ್ರೀಯರು ತಮ್ಮ ತಮ್ಮ ಪೌರುಷವನ್ನು ಹಲವಾರು ಕವನಗಳಲ್ಲಿ ಪ್ರದರ್ಶಿಸುತ್ತಾರೆ. ಇದರಲ್ಲಿ ಮೆಚ್ಚತಕ್ಕ ಕಾವ್ಯಾಂಶಗಳಾವುವೂ ಇಲ್ಲ.

ಫಿಲೊಕೊಲೊ (ಪ್ರೇಮದ ದುಡಿಮೆ): ಇದು ಗದ್ಯದಲ್ಲಿ ಬರೆದ ಮೊತ್ತ ಮೊದಲನೆಯ ಅದ್ಭುತ ಕಥೆ. ಇದರ ರಚನೆಯ ಕಾಲ ೧೩೩೭–೩೯. ಇದರಲ್ಲಿ ಬೋಕಾಚೀಯೋವಿನ ಅತ್ಯದ್ಭುತ ಕಥನಕಲೆ ಪ್ರಕಟವಾಗಿದೆ. ಸಾಮಾನ್ಯ ಲಾವಣಿಯ ಸರಳ ಸಂಕ್ಷಿಪ್ತತೆ ಮತ್ತು ಏಕಾಗ್ರತೆ ಸಾಧಿಸಿಕೊಂಡ ಇವನ ಕಥನ ಶೈಲಿ ಭವ್ಯಕಾವ್ಯದ ಮಹೋನ್ನತಿಯನ್ನೂ ನಿಲುಕಬಲ್ಲದು. ಹಾವಿನಂತೆ ಸುತ್ತಿ ಸುತ್ತಿ ಹರಿಯುವ ಈ

ಕಥೆಯಲ್ಲಿ ಮಿಂಚಿಮಾಯವಾಗುವ ನೂರಾರು ಘಟನೆಗಳಿವೆ. ಭೂಗೋಳ, ಖಗೋಳವಿಜ್ಞಾನ, ವಾಸ್ತುಶಿಲ್ಪ, ಕನಸುಗಳು, ಪುರಾಣದೇವತೆಗಳು, ಯಕ್ಷಿಣಿ, ಮಂತ್ರ ಮಾಟ, ಕದನಗಳು, ನರಕದ ಸಭೆ, ನೀತಿಶಾಸ್ತ್ರ, ಬೈಬಲ್‌ಕಥೆ ಎಲ್ಲವೂ ಒಂದರಲ್ಲೊಂದು ಹಾಸುಹೊಕ್ಕಾಗಿ ಬೆರೆತಿವೆ. ಪ್ರೇಮವನ್ನು ಕುರಿತ ಹದಿಮೂರು ಪ್ರಶ್ನೆ ಎಂಬ ಭಾಗ ಅತ್ಯಂತ ಸ್ವಾರಸ್ಯವಾಗಿದೆ. ಕಥಾನಾಯಕ ಫಲೊಕೊಲಾ ಮತ್ತು ಅವನ ಸಂಗಡಿಗರು ಬಿರುಗಾಳಿಗೆ ಸಿಕ್ಕಿ ಮುರಿದು ಚೂರಾದ ಹಡಗಿನಿಂದ ಪಾರಾಗಿ ನೇಪಲ್ಸ್ ನಗರದ ಸುಂದರ ಉದ್ಯಾನವನದ ಕಾರಂಜಿಯ ಬಳಿ, ಪ್ರೇಮದ ಸ್ವರೂಪ ಚರ್ಚಿಸಲು ಸಭೆ ಸೇರುತ್ತಾರೆ. ಫಿಯಾಮೆಟಾ ಎಂಬ ಸುಂದರಿ ಈ ಚರ್ಚೆಯ ಅಧ್ಯಕ್ಷತೆವಹಿಸಿ ವಾದ ವಿವಾದಗಳನ್ನು ಅವಲೋಕಿಸಿ ತೀರ್ಪುಕೊಡುತ್ತಾಳೆ. ಇವಳ ತೀರ್ಪನ್ನು ಎಲ್ಲರೂ ಚರ್ಚಿಸಿ ಕಡೆಗೆ ಒಪ್ಪಿಕೊಳ್ಳುತ್ತಾರೆ. ಈ ವಾದ ವಿವಾದಗಳೆಲ್ಲವೂ ಬೇರೆ ಬೇರೆ ಆಖ್ಯಾನ ಉಪಾಖ್ಯಾನಗಳ ರೂಪದಲ್ಲಿವೆ. ಕಥೆಯೊಂದಿಗೆ ಸೇರಿ ಇದೊಂದು ಕಥಾಸಾಗರವಾಗಿದೆ. ಬೋಕಾಚೀಯೋ ಆನಂತರ ರಚಿಸಿದ ತನ್ನ ಮೇರುಕೃತಿಯಾದ ಡಕ್ಯಾಮರನ್‌ನಲ್ಲಿ (ಹತ್ತು ದಿನದ ಕಥೆ). ಈ ಗ್ರಂಥದಲ್ಲಿ ಅನುಸರಿಸಿದ ರಚನಾಕ್ರಮ ಮತ್ತಷ್ಟು ಸೊಗಸಾಗಿ ತಿದ್ದಿರುವುದು ಸುಸ್ಪಷ್ಟವಾಗಿದೆ. ಕಥೆಯ ಈ ಚೆಲುವಾದ ಚೌಕಟ್ಟನ್ನು ಟೌಸ್ಸೋ, ಚಾಸರ್, ಮಿಲ್ಟನ್, ಕೀಟ್ಸ್ ಮುಂತಾದ ಉದ್ದಾಮ ಕವಿಗಳು ಅನುಕರಣೆ ಮಾಡಿರುವುದು ಬೋಕಾಚೀಯೋವಿನ ಅನ್ಯಾದೃಶ ಕಲಾಪ್ರತಿಭೆಗೆ ಸಾಕ್ಷಿಯಾಗಿದೆ.

ಫಿಲೊಸ್ಟ್ರಾಟ್ಸ್ (ಪ್ರೇಮಕ್ಕೆ ಸೋತವನ ಕಥೆ): ಇದು ಇಟಾಲಿಯನ್ ಭಾಷೆಯಲ್ಲಿ, ಲಾವಣಿಕಾರನಲ್ಲದವ ರಚಿಸಿದ, ಕಾವ್ಯರೂಪದ ಮೊತ್ತಮೊದಲನೆಯ ಅದ್ಭುತ ಕಥೆ. ಇದರ ರಚನೆಯ ಕಾಲ ೧೩೩೯–೪೦, ರೊಮಾನ್ಸ್ ಆಫ್ ಟ್ರಾಯ್ ಎಂಬ ಜನಪ್ರಿಯ ಕಥೆ ಇದರ ಮೂಲವಸ್ತು. ಇದು ಟ್ರಾಯಲಸ್ ಗ್ರೀಕ್ ವೀರನಿಗೆ ಕ್ರೆಸೀಡ್ ಎಂಬ ಟ್ರಾಯ್‌ಕನ್ಯೆ ಎಸಗುವ ದ್ರೋಹದ ಕಥೆ. ಇದು ಬೋಕಾಚೀಯೋವಿನ ಕೈಯಲ್ಲಿ ಶೃಂಗಾರಾದ್ಭುತ ರಸಗಳಿಂದ ತುಂಬಿದ ಸುಂದರ ಕಥೆಯಾಗಿದೆ. ಟ್ರಾಯಲಸ್ ಮತ್ತು ಕ್ರೆಸೀಡಳ ನಿರ್ವ್ಯಾಜ ಪ್ರೇಮ, ಪಾಂಡರೋವಿನ ಗಾಢಸ್ನೇಹ ಇವೇ ಈ ಕಾವ್ಯದ ತಿರುಳು. ಶೈಲಿ, ವಸ್ತು ಮತ್ತು ಕಥನಕಲೆ ಎಲ್ಲ ದೃಷ್ಟಿಯಿಂದಲೂ ಇದು ಪ್ರೌಢಕಾವ್ಯ. ಈ ಕಥೆಯಲ್ಲಿ ಜೀವಾಳವಿದ್ದುದರಿಂದಲೇ ಇದು ಚಾಸರ್. ಷೇಕ್ಸ್‌ಪಿಯರ್ ಮುಂತಾದ ಮುಂದಿನ ಕವಿಗಳ ಗಮನ ಸೆಳೆಯಿತು.

ಟೆಸೀಡ: ಟಸ್ಕನ್ ಭಾಷೆಯ ಮೊತ್ತಮೊದಲನೆಯ ಭವ್ಯಕಾವ್ಯ, ವೀರರಸದಿಂದ ಕೂಡಿದ ಭವ್ಯ ಶೃಂಗಾರ ಕಥೆ. ಆರ್ಕಿಟೆ ಮತ್ತು ಪಾಲೆಮಾನ್ ಎಂಬ ಗ್ರೀಕ್ ವೀರರ ಅನನ್ಯ ಸ್ನೇಹದ ಕಥೆ. ಚಾಸರನ ಕ್ಯಾಂಟರ್ ಬೆರಿ ಕಥೆಗಳಲ್ಲೊಂದಾದ ಯೋಧನಕಥೆಗೂ (ದಿ ನೈಟ್ಸ್‌ಟೇಲ್) ಷೇಕ್ಸ್‌ಪಿಯರ್ ಕಾಲದ ನಾಟಕಕಾರನಾದ ಫ್ಲೆಚರ್ ಬರೆದ ಇಬ್ಬರು ಶ್ರೀಮಂತ ಬಂಧುಗಳು (ಟೂ ನೋಬಲ್ ಕಿನ್ಸ್‌ಮನ್) ಎಂಬ ನಾಟಕಕ್ಕೂ ಇದೇ ಮೂಲವಸ್ತು.

ಅಮೆತೋ: ಗ್ರಾಮಜೀವನದ ಸರಳ ಆದರ್ಶ ಸುಖ ಸಂತೋಷ ಸೂಚಿಸುವ ಪಾಸ್ಟೊರಲ್ ಅಂಶಗಳುಳ್ಳ ಅದ್ಭುತ ಕಥನಕಾವ್ಯ. ಇದರ ರಚನೆಯ ಕಾಲ ೧೩೪೧–೪೨. ಬೇಟೆಗಾರ ಅಮೆತೋ ಮತ್ತು ಅಪ್ಸರೆ ಲಿಯಾ ವನದಲ್ಲಿ ವಿಹರಿಸುತ್ತಿದ್ದಾಗ ಅವರೊಡನೆ ಬೇರೆ ಆರು ಜನ ಅಪ್ಸರೆಯರು ಬಂದು ಸೇರುತ್ತಾರೆ. ಅವರೆಲ್ಲರೂ ತಮ್ಮ ತಮ್ಮ ಜೀವನದಲ್ಲಿ ಸಾಧಿಸಿದ ಪ್ರಣಯ ಸಾಹಸಗಳನ್ನು ಹೇಳಿ ಹಾಡೊಂದನ್ನು ಹಾಡುತ್ತಾರೆ. ಈ ಕಥೆಗಳಲ್ಲಿ ಅನ್ಯಾರ್ಥವೂ ಸೇರಿಕೊಂಡಿದೆ. ಮಾನವನ ಸಹಜ ಪ್ರವೃತ್ತಿಗಳು ಪ್ರೇಮದೊಡನೆ ಸೇರಿ ಪರಿಶುದ್ಧವಾಗುವುದೇ ಈ ಕಥೆಯ ಸಂಕೇತ. ಇಲ್ಲಿ ವರ್ಣಿತವಾಗುವ ಏಳುಜನ ಅಪ್ಸರ ಸ್ತ್ರೀಯರು ಕವಿಗೆ ಚಿರಪರಿಚಿತರಾದ ವಾಸ್ತವಿಕ ವ್ಯಕ್ತಿಗಳ ನೈಜ ಚಿತ್ರಗಳೂ ಹೌದು. ಈ ಕಾವ್ಯದಲ್ಲಿ ಕವಿಯ ವಿಷಯಲೋಲು ಪತೆಯೂ ಶೃಂಗಾರವೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಇದಕ್ಕೆ ಮೂಲಸ್ಫೂರ್ತಿ ದೊರೆತುದು ವರ್ಜಿಲ್ ಕವಿಯಿಂದ.

ಅಮೊರೊಸೊ ವಿಸಿಯೋನೆ (ಪ್ರೇಮದರ್ಶನ): ಇದೊಂದು ದಟ್ಟವಾಗಿ ಬೆಳೆದು ತೊಡಕಾಗಿರುವ ಅನ್ಯಾರ್ಥ ಕಾವ್ಯ. ಇದರ ರಚನೆಯ ಕಾಲ ೧೩೪೨. ವಿಷಯಲಂಪಟತೆಯಿಂದ ಕೂಡಿದ ಜೀವನ ಹೇಗೆ ವಿರಕ್ತಿಯನ್ನು ತಳೆಯುವುದೆ ನ್ನುವುದೇ ಈ ಕಾವ್ಯದ ಅರ್ಥ. ಘನಗಾಂಭೀರ್ಯವುಳ್ಳ ಸುಂದರಿ ಒಬ್ಬ ಮಾರ್ಗದರ್ಶಕ ಳಾಗಿ ಕವಿಯನ್ನು ಗೋಡೆಯ ಬಳಿ ಕರೆದೊಯ್ಯುತ್ತಾಳೆ. ಗೋಡೆಯಲ್ಲಿ ಕಾಣುವ ಸಣ್ಣ ಬಾಗಿಲು ಶಾಶ್ವತ ಶಾಂತಿಯೆಡೆಗೆ ಕರೆದೊಯ್ಯುತ್ತದೆ. ಕವಿ ದೊಡ್ಡಬಾಗಿಲನ್ನೂ ದಾಟಿ ಅದರಾಚೆ ಇರುವ ಲೌಕಿಕ ಸುಳಿವನ್ನರಸಲು ತವಕಿಸುತ್ತಾನೆ. ಚಚ್ಚೌಕವಾದ ವಿಶಾಲಭವನದ ಗೋಡೆಗಳ ಮೇಲೆ ದರ್ಶನ, ಕಾವ್ಯ, ಐಹಿಕ ವೈಭವ, ಐಶ್ವರ್ಯ, ಪ್ರೇಮಗಳ ಪ್ರತೀಕವಾದ ನೂರಾರು ವ್ಯಕ್ತಿಗಳನ್ನು ಸೂಚಿಸುವ ಭಿತ್ತಿಚಿತ್ರಗಳು, ಬೈಬಲ್, ಪುರಾಣಕಥೆಗಳು, ಮಧ್ಯಯುಗದ ವೀರರು, ಆರ್ಥರ್ ಕಥೆಗಳು, ಪ್ರೇಮಾರಾಧಕರು ಮುಂತಾದವನ್ನು ಬಣ್ಣಿಸುವ ಚಿತ್ರಗಳಿವೆ. ನೃತ್ಯಗಾನಗಳಲ್ಲಿ ತೊಡಗಿದ ಸ್ತ್ರೀಯರಿಂದ ತುಂಬಿದ ಇನ್ನೊಂದು ಕೋಣೆಯೊಳಕ್ಕೆ ಹೋಗಿ ಅನಂತರ ಹಿಂತಿರುಗಿ ಒಂದು ಸಣ್ಣ ಬಾಗಿಲಿನಿಂದಾಚೆಗೆ ತೆರಳಲು ಇಚ್ಛಿಸುತ್ತಾನೆ. ಅಲ್ಲಿಗೆ ಕಾವ್ಯ ಇದ್ದಕ್ಕಿಂದಂತೆ ಮುಕ್ತಾಯವಾಗುತ್ತದೆ. ಕವಿಗೆ ತನ್ನ ಉದ್ದೇಶದಂತೆ ಈ ಕಾವ್ಯವನ್ನು ಸಂಪೂರ್ಣಗೊಳಿಸಲು ಸಾಧ್ಯವಾಗದೆ ಹೋಗಿರಬಹುದು.

ಫಿಯಾಮ್ಮೆಟ್ಟಾ: ಇದು ಇಟಾಲಿಯನ್ ಭಾಷೆಯಲ್ಲಿ ರಚಿತವಾದ ಪ್ರಥಮ ಮನೋವಿಶ್ಲೇಷಣ ಪ್ರಣಯ ಕಥೆ. ಇದರ ರಚನೆಯ ಕಾಲ ೧೩೪೪–೪೬. ಕಥೆಯಲ್ಲಿ ತಿರುಳು ಕಡಿಮೆ, ಫಿಯಾಮ್ಮೆಟ್ಟಾ ಎಂಬ ಸ್ತ್ರೀ ಪ್ಯಾನಿನ್‌ಫಿಲೋ ಎಂಬ ಪ್ರಿಯನಿಂದ ದೂರವಾಗಿ ವಿರಹ ವ್ಯಥೆಯಲ್ಲಿ ಆತ್ಮಹತ್ಯೆಗೆ ಯತ್ನಿಸಿದಾಗ ಅವಳ ದಾದಿ ಅವಳನ್ನು ರಕ್ಷಿಸುತ್ತಾಳೆ. ಕಥೆಯನ್ನು ಹೇಳುವವಳೂ ಕಥಾನಾಯಕಿಯೇ. ಅವಳ ಮನಸ್ಸಿನ ವಿವಿಧ ಭಂಗಿಗಳನ್ನೂ ಭಾವಗಳನ್ನೂ ಕವಿ ಸುಂದರವಾಗಿ ಚಿತ್ರಿಸಿದ್ದಾನೆ.

ನಿನ್‌ಫಲೆ ಫೈಸೋಲಿನೊ (ಯಮಳನದಿಗಳಕಥೆ): ಇದು ಮೊತ್ತಮೊದಲನೆಯ ವರ್ಣನಾತ್ಮಕ ಇಟಾಲಿಯನ್ ಜನಪದ ಗೀತೆ. ಫೈಸೋಲ್ ಬಳಿಯ ಪರ್ವತದಿಂದ ಹರಿದು ಬರುವ ಎರಡು ನದಿಗಳು ಭಗ್ನಪ್ರೇಮಿಗಳಿಬ್ಬರ ಕಥೆಯ ಪ್ರತೀಕವಾಗಿರುತ್ತವೆ. ಅದು ಬೋಕಾಚೀಯೋವಿನ ಕಾವ್ಯಗಳಲ್ಲಿ ಅತ್ಯಂತ ಸರಳವೂ ಸುಂದರವೂ ಆದ ಕಾವ್ಯ. ಡಯಾನಾ ದೇವತೆಯ ಪರಿವಾರದಲ್ಲಿ ಶೋಭಿಸುವ ಮೆನ್‌ನೋಲ ಎಂಬ ಅಪ್ಸರೆಯನ್ನು ಕಂಡು ಆಫ್ರಿಕೋ ಎಂಬ ಯುವಕ ಅವಳ ಪ್ರೇಮವನ್ನು ಯಾಚಿಸಿ ನಿರಾಶನಾಗುತ್ತಾನೆ. ವೀನಸ್ ದೇವತೆಯ ವರದಿಂದ ಅವಳನ್ನು ಕಂಡು ಒಲಿಸಿಕೊಳ್ಳು ತ್ತಾನೆ. ಪಶ್ಚಾತ್ತಾಪದಿಂದ ಕರಗಿ ಅವಳು ಹಿಂದಿರುಗಿ ಬರುವುದಿಲ್ಲ. ಪ್ರೇಮದಿಂದ ಉನ್ಮಾದಿತನಾದ ಆಫ್ರಿಕೋ ನದಿಯ ತೀರದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅನಂತರ ಆ ನದಿಗೆ ಅವನ ಹೆಸರು ನಿಲ್ಲುತ್ತದೆ. ಮೆನಸೋಲಳನ್ನು ಡಯಾನ ದೇವತೆ ಇನ್ನೊಂದು ನದಿಯಾಗಿ ಪರಿವರ್ತಿಸುತ್ತಾಳೆ. ನದಿಯ ಸ್ಫಟಿಕದ ನೀರಿನಂತೆ ತಿಳಿಯಾದ, ಭಾವಗೀತೆಯ ಸುಕುಮಾರತೆಯನ್ನು ಈ ಕಾವ್ಯದಲ್ಲಿ ಕಾಣಬಹುದು. ಕೆಲವು ಪದ್ಯಗಳಲ್ಲಿ ಕಾಣುವ ಅಶ್ಲೀಲತೆ ಬಿಟ್ಟರೆ ಇದೊಂದು ಸುಂದರ ಕಾವ್ಯ.

ಡೆಕ್ಯಾಮರನ್ (ಹತ್ತುದಿನಗಳ ಕಥೆ): ಬೋಕಾಚೀಯೋನ ಉದ್ದಾಮ ಕೃತಿ. ಈ ಕಥಾಸಂಗ್ರಹದಲ್ಲಿ ನೂರು ಮನಮೋಹಕ ಸಣ್ಣ ಕಥೆಗಳಿವೆ. ಇವು ೧೩೪೮–೫೩ರ ಅವಧಿಯಲ್ಲಿ ಬರೆದವು. ಫ್ಲಾರೆನ್ಸ್ ನಗರದಲ್ಲಿ ೧೩೪೮ರ ಸಮಯದಲ್ಲಿ ಪ್ಲೇಗ್ ಸಾಂಕ್ರಾಮಿಕ ರೋಗ ಆವರಿಸಿದಾಗ ಏಳುಜನ ತರುಣಿಯರು ಹಾಗೂ ಮೂರು ಜನ ತರುಣರು ಫ್ಲಾರೆನ್ಸ್ ನಗರವನ್ನು ತೊರೆದು ಹತ್ತಿರದ ಊರಿಗೆ ಹೋಗುತ್ತಾರೆ. ಆ ಊರಿನ ಸೌಂದರ್ಯ ಸವಿದ ಆ ಹತ್ತು ಮಂದಿಯೂ ಅಲ್ಲಿ ಹತ್ತುದಿನ ಇರುತ್ತಾರೆ. ಆ ಹತ್ತು ದಿನವೂ ಒಬ್ಬೊಬ್ಬರು ದಿನಕ್ಕೆ ಒಂದೊಂದು ಕಥೆಯಂತೆ ಹೇಳುತ್ತಾರೆ. ಅವೇ ಈ ನೂರು ಕಥೆಗಳು. ಶೃಂಗಾರಮಯವಾದ ಈ ಕಥೆಗಳು ಇಂಗ್ಲಿಷ್ ಸಾಹಿತ್ಯದ ಮೇಲೆ ತುಂಬ ಪ್ರಭಾವ ಬೀರಿವೆ. ಚಾಸರ್ ಕವಿ (೧೩೪೦–೧೪೦೦) ಈ ಕಥೆಗಳಿಂದ ತುಂಬ ಪ್ರಭಾವಿತನಾಗಿದ್ದಾನೆ. ಪೆಯಿಂಟರ್ ವಿಲಿಯಮ್‌ನ (೧೫೪೦–೯೪) ಪ್ಯಾಲೇಸ್ ಆಫ್ ಪ್ಲೆಷರ್ (೧೫೬೬) ಎಂಬ ಪುಸ್ತಕದಲ್ಲಿ ಡೆಕ್ಯಾಮರನ್‌ನ ಬಹಳಷ್ಟು ಕಥೆಗಳು ಸೇರಿವೆ. ಈ ಮಹಾಗ್ರಂಥ ಪಾಶ್ಚಾತ್ಯ ಪ್ರಪಂಚದ ನಾನಾ ಭಾಷೆಯ ಕವಿಗಳಿಗೆ ಸ್ಫೂರ್ತಿಯ ಸೆಲೆಯಾಗಿದೆ. 'ಡೆಕ್ಯಾಮರನ್' ಕಥೆಗಳು ಮೌಖಿಕವಾಗಿ ಹಲವು ದೇಶಗಳಿಗೆ ಸಾಗಿ ಹೋಗಿವೆ. ಹಲವಾರು ವ್ಯಕ್ತಿಗಳು ಯಾವುದೋ ಸಂದರ್ಭದಲ್ಲಿ ಒಂದೆಡೆ ಸೇರಿದಾಗ ಒಬ್ಬೊಬ್ಬರು ಒಂದೊಂದು ದಿನ ಒಂದೊಂದು ಕಥೆ ಹೇಳುವ ಚೌಕಟ್ಟನ್ನು ಛಾಸರ್ ಬಳಸಿಕೊಂಡ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು 'ನವರಾತ್ರಿ' ಕವನದಲ್ಲಿ ಬಳಸಿದ್ದಾರೆ. ಬೋಕಾಚೀಯೋನ ಕಥೆಗಳಲ್ಲಿ ಅಲ್ಲಲ್ಲಿ ಶೃಂಗಾರ ಸಭ್ಯತೆಯ ಗೆರೆಯನ್ನು

ದಾಟಬಹುದು. ಆದರೆ ಈ ಕಥೆಗಳಲ್ಲಿ ಲವಲವಿಕೆ ತುಂಬಿದೆ, ಗಂಡು-ಹೆಣ್ಣಿನ ಸಂಬಂಧವನ್ನು ಹಲವು ದೃಷ್ಟಿಗಳಿಂದ ಕಾಣಲಾಗಿದೆ. ಇದು ಜಗತ್ತಿನ ಶ್ರೇಷ್ಠ ಸಾಹಿತ್ಯ ಕೃತಿಗಳಲ್ಲಿ ಒಂದೆಂದು ಪರಿಗಣಿತವಾಗಿದೆ.

ಈ ಗ್ರಂಥಗಳಲ್ಲದೆ ಬೋಕಾಚೀಯೋ ತನ್ನ ಅಪ್ರತಿಮ ಪಾಂಡಿತ್ಯದ ಕುರುಹಾಗಿ ಪೌರಾಣಿಕ ವಿಶ್ವಕೋಶವೊಂದನ್ನು ರಚಿಸಿದ್ದಾನೆ. ಈತ ಟ್ಪಾಲ್ಡೋ ಎಂಬಲ್ಲಿ ೧೩೭೫ ಡಿಸೆಂಬರ್ ೨೧ರಂದು ನಿಧನ ಹೊಂದಿದ. (ಎಚ್.ಕೆ.ಆರ್.)

ಪರಿಷ್ಕರಣೆ ಎಲ್.ಎಸ್.ಶೇಷಗಿರಿರಾವ್

V ಫ್ರೆಂಚ್ ಸಾಹಿತ್ಯ

ಫ್ರೆಂಚ್ ಸಾಹಿತ್ಯ ಆರಂಭವಾದುದು ೧೦ನೆಯ ಶತಮಾನದಲ್ಲಿ. ೧೦ ಮತ್ತು ೧೧ನೆಯ ಶತಮಾನಗಳಲ್ಲಿ ರಚಿತವಾಗಿರಬಹುದೆಂದು ಸ್ಮರಣೀಯ ಕೃತಿಗಳು ಇವು: ಸೇಂಟ್ ಯೂಲೇಲಿಯಾ ಕುರಿತ ನಾಡಾಡಿ ಹಾಡುಗಳು (ಕ್ಯಾಂಟಿಲೇನೆ); ಸೇಂಟ್ ಲಿಗೆರನ ಜೀವನಚರಿತ್ರೆ; ಸೇಂಟ್ ಅಲೆಕ್ಸಿಸ್ಸನ ಜೀವನ ಚರಿತ್ರೆ (೧೦೫೦). ಫ್ರೆಂಚ್ ಸಾಹಿತ್ಯದ ಮೊಟ್ಟಮೊದಲ ಮಹತ್ತರ ಕೃತಿ ಚಾನ್ಸನ್ಸ್ ಡಿ ಗೆಸ್ಟೆ. ಇದೊಂದು ಮಹಾಕಾವ್ಯಗಳ ಸರಣಿ. ಈ ಸರಣಿಯ ಸುಮಾರು ನೂರು ಮಾದರಿಗಳು ಮಾತ್ರ ಈಗ ದೊರೆತಿವೆ. ಈ ಎಲ್ಲ ಕಾವ್ಯಗಳ ವಸ್ತು ಪರಂಪರಾಗತ ಫ್ರೆಂಚ್ ಇತಿಹಾಸದ ಮಹಾಪುರುಷರ ವೀರಸಾಧನೆಗಳು. ಷಾರ್ಲೆಮೇನ್ ಮತ್ತು ಅವನ ಸಂತತಿಗೆ ಸೇರಿದ್ದು ಒಂದು ಗುಂಪು. ಮೆಯೆನ್ಸಿಯ ಡೂನನ ವೀರಗತೆಗಳದು ಇನ್ನೊಂದು ಗುಂಪು. ಗ್ಯಾರಿನ್ ಡಿ ಮ್ಯೊಂಗ್ಲೆನನ ವೀರಗತೆಗಳದು ಮತ್ತೊಂದು. ಹೀಗೆ ಮೂರು ಮುಖ್ಯ ಗುಂಪುಗಳಿವೆ. ಧಾರ್ಮಿಕ ಯುದ್ಧಗಳದ್ದು, (ಕ್ರೂಸೇಡ್ಸ್) ಲೊರೇನರ್ಸ್ ಕುರಿತದ್ದು ಈ ಗುಂಪುಗಳೂ ಇವೆ. ಇವುಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದ ಕಾವ್ಯ ಚಾನ್ಸನ್ ಡಿ ರೊಲ್ಯಾಂಡ್. ಕಣ್ಣಿಗೆ ಕಟ್ಟುವಂಥ ವರ್ಣನೆ. ಮರೆಯಲಾಗದ ಪಾತ್ರಗಳ ಚಿತ್ರಣ ಈ ಕಾವ್ಯದ ವಿಶೇಷ ಗುಣ. ಭೀಕರ ಕಾಳಗಗಳು, ಮಂತ್ರಾಲೋಚನೆ, ಧಾರ್ಮಿಕ ಶ್ರದ್ಧೆಯ ಅಭಿವ್ಯಕ್ತಿ ಇವೇ ಈ ಕಾವ್ಯಗಳಲ್ಲಿ ಪ್ರಧಾನ. ಶೃಂಗಾರ ಅಲ್ಲಲ್ಲಿ ಗೌಣವಾಗಿ ಕಾಣಿಸಿಕೊಳ್ಳುತ್ತವೆ.

೧೨ನೆಯ ಶತಕದ ವೇಳೆಗೆ ಐತಿಹಾಸಿಕ ವ್ಯಕ್ತಿಗಳ ಬದಲು ಹಿಂದೆ ನಿಜವಾಗಿಯೂ ಆಗಿ ಹೋದವರು ಎಂಬಷ್ಟು ಮಟ್ಟಿಗೆ ಜನಪದದಲ್ಲಿ ನೆಲೆನಿಂತಿದ್ದ ಕಾಲ್ಪನಿಕ ವ್ಯಕ್ತಿಗಳ ವೀರಸಾಹಸಗಳನ್ನು ಕುರಿತ ರಮ್ಯ ಕಥನಕಾವ್ಯಗಳು ರಚಿತವಾದುವು. ಇವುಗಳಲ್ಲಿ ಟ್ರೋಜನ್ ವೀರರ ಮತ್ತು ಇತರ ಗ್ರೀಕ್ ಪೌರಾಣಿಕ ಕತೆಗಳನ್ನು ಕುರಿತ ಕಾವ್ಯಗಳು, ಆರ್ಥರ್ ದೊರೆ ಮತ್ತು ಅವನ ದುಂಡು ಮೇಜು, ಅವನ ನೂರು ಜನ ವೀರಯೋಧರುಗಳನ್ನು ಕುರಿತ ಕಾವ್ಯಗಳು ಎಂದು ಎರಡು ಬಗೆ. ವೀರ ಯೋಧರ ಸಾಹಸ, ಪ್ರಣಯಗಳ ರಮ್ಯಕಥನಗಳು ಜನಪ್ರಿಯವಾದುವು. ಗೆಸ್ಟೆ ಕಾವ್ಯಗಳ ಸರಳತೆ ಮಾಯವಾಗಿ ಆಡಂಬರದ ಶೈಲಿ, ಆಲಂಕಾರಿಕ ಭಾಷೆ

ಈ ರಮ್ಯ ಕಥಾನಕಗಳಲ್ಲಿ ತಲೆದೋರಿದವು. ಈ ಬಗೆಯ ಕಾವ್ಯಗಳನ್ನು ರಚಿಸಿದವರಲ್ಲಿ ಕ್ರಿಷಿಯನ್ ಡಿ ಟ್ರೋಯ್ ಸುಪ್ರಸಿದ್ಧನಾದವ. ಇಂಗ್ಲಿಷ್ ಸಾಹಿತ್ಯದ ಸರ್ ತಾಮಸ್ ಮೆಲೊರಿಯ ಪುಸ್ತಕಕ್ಕೆ ಸಾಮಗ್ರಿಯೊದಗಿಸಿದವ ಈತನೇ. ಯೂರೋಪಿನ ಎಲ್ಲ ಭಾಷೆಗಳ ಮೇಲೂ ಈತನ ಕೃತಿಗಳ ಪ್ರಭಾವ, ಎಲ್ಲ ಕಡೆ ಈತನ ಅನುಕರುಣೆ ಆ ಕಾಲದ ಸಾಮಾನ್ಯ ಲಕ್ಷಣವಾಯಿತು. ಕಾಲ್ಪನಿಕ ರಮ್ಯಕಥನಗಳು ಕ್ರಮೇಣ ಧರ್ಮ ಮತ್ತು ನೀತಿಪ್ರಸಾರಕ ರೂಪಕ ಕಥೆಗಳ ಸೃಷ್ಟಿಗೆ ದಾರಿ ಮಾಡಿದುವು.

ಈ ಎಲ್ಲ ಸಾಹಿತ್ಯಕೃತಿಗಳಿಗಿಂತ ಬೇರೆಯಾಗಿ ನಿಲ್ಲುವ, ವಿಶಿಷ್ಟವಾದ ಕೆಲವು ಲಕ್ಷಣಗಳುಳ್ಳ ಕೃತಿ ರೊಮಾನ್ ಡಿ ಲಾ ರೋಸ್. ಇದರ ಪೂರ್ವಾರ್ಧವನ್ನು ಗಿಲ್ಲಾಮೆ ಡಿ ಲೋರಿಸ್ ೧೨೩೦ರ ಸುಮಾರಿನಲ್ಲಿ ಬರೆದ. ಉತ್ತರಾರ್ಧವನ್ನು ಈ ಶತಕದ ಕಡೆಯ ವರ್ಷಗಳಲ್ಲಿ ಜೀನ್ ಡಿ ಮೋಂಗ್ ಬರೆದು ಮುಗಿಸಿದ. ಮೊದಲ ಭಾಗದ ರೀತಿಯೆ ಬೇರೆ. ಎರಡನೆಯ ಭಾಗದ ಗತ್ತುಗುರಿಗಳೆ ಬೇರೆ. ಆದರೂ ಒಟ್ಟು ಕಾವ್ಯದ ಸಾವಯವ ಸಂಪೂರ್ಣತೆಗೆ, ಐಕ್ಯತೆಗೆ ಭಂಗ ಬಂದಿಲ್ಲ. ಮೋಂಗ್ ಅದೇ ಕಥನದ ಚೌಕಟ್ಟನ್ನು ಉಳಿಸಿಕೊಂಡರೂ ಹಲವಾರು ಘಟನೆಗಳನ್ನು ಸಂದರ್ಭಗಳನ್ನು ಸಮಕಾಲೀನ ಸಮಾಜದ ಲೋಪದೋಷಗಳನ್ನು ವಿಡಂಬಿಸಲು ಬಳಸಿಕೊಂಡ. ಸರಳ, ಸುಂದರ ಹಾಗೂ ಸತ್ತ್ವ ಶಾಲಿಯಾದ ಭಾಷೆ, ಹೃದಯಸ್ಪಂದಿಯಾದ ಪ್ರೇಮಕಥೆ ಈ ಕೃತಿಯ ಜನಪ್ರಿಯತೆಗೆ ಕಾರಣ. ನವೋದಯ ಕಾಲದವರೆಗೆ ರೂಪಕ ಕಥೆಗಳ ಮಹತ್ತರ ಸಾಹಿತ್ಯಕ್ಕೆ ನಿದರ್ಶನವಾಗಿರುವ ಇಂಥ ಕೃತಿ ಮತ್ತೊಂದು ಬರಲಿಲ್ಲ.

ಫ್ರೆಂಚಿನ ವಿಶಿಷ್ಟ ಸಾಹಿತ್ಯ ಪ್ರಕಾರವೆನ್ನಿಸಿದ ಫೇಬ್ಲಿಯಾ(ಜ್) ೧೩ನೆಯ ಶತಮಾನದಲ್ಲಿ ತುಂಬ ಜನಪ್ರಿಯವಾಯಿತು. ರೂಪದಲ್ಲಿ ಕವನ, ವಸ್ತುಸ್ವಾರಸ್ಯವಾದ ಒಂದು ಸಣ್ಣಕಥೆ ಅಥವಾ ಪ್ರಸಂಗ, ಕಥೆ ಪ್ರಧಾನ. ನೀತಿಗೆ ಎರಡನೆಯ ಸ್ಥಾನ. ಕಥೆಯ ಸ್ವಾರಸ್ಯ, ನೀತಿಯ ಬೋಧನೆ ಪರಸ್ಪರ ಮಾರಕವಾಗದಂಥ ರಚನೆ, ಅಂದಿನ ಸಮಾಜದ, ಜನಜೀವನದ ಸ್ಥಿತಿಗತಿಗಳನ್ನು ಕುರಿತ ಚಿಂತನೆ, ನಿರೂಪಣೆಯ ಕೌಶಲ, ಹಾಸ್ಯ, ಬುದ್ಧಿ ಚತುರತೆ, ವಿಡಂಬನೆಯ ಮೊನಚು ಎಲ್ಲ ಹದವಾಗಿ ಬೆರೆತು ಬಂದುದರಿಂದ ಕಥನಕ್ಕೆ ವಿಶೇಷ ಮೆರಗು. ನಿತ್ಯಜೀವನದಲ್ಲಿ ನಡೆದ ಇಲ್ಲವೆ ನಡೆಯಬಹುದಾದ ನೂರಾರು ಘಟನೆಗಳು ಜೀವಂತಿಕೆಯಿಂದ ಲವಲವಿಕೆಯಿಂದ ಈ ಕಥನ ಕವನಗಳಲ್ಲಿ ಮೂಡಿವೆ. ಫ್ರೆಂಚ್ ಭಾಷೆ ತಿಳಿಯದ ಇಬ್ಬರು ಇಂಗ್ಲಿಷರು ಅನೇಕ ಬಗೆಯ ತಪ್ಪು ಗೊಂದಲಗಳನ್ನುಂಟು ಮಾಡಿ ಹಾಸ್ಯಕ್ಕೆ ಪಕ್ಕಾಗುವ ಪ್ರಸಂಗ; ಅತಿ ಮೂರ್ಖನಾದವನೊಬ್ಬ ವೀರಯೋಧ ಒಳ್ಳೆಯವಳೂ ಚತುರಮತಿಯೂ ಆದ ಅತ್ತೆಯಿಂದ ಭಾಗ್ಯಶಾಲಿಯಾಗುವುದು; ಪಾದ್ರಿಯೊಬ್ಬ ತನ್ನ ಲೋಭ, ದುರಾಸೆ, ಕೀಳು ನಡತೆಗಳ ಫಲವನ್ನನುಭವಿಸುವುದು–

ಹೀಗೆ ಈ ಕಥೆಗಳು ವಿವಿಧ ಬಗೆಯವು. ಒಂದು ಬಗೆಯ ಲಘು ವಿನೋದ, ಕುಹಕ, ಕುಚೋದ್ಯ, ಬೈಯುವ ಕಲೆ–ಎಲ್ಲ ಫ್ರೆಂಚ್ ಸಾಹಿತ್ಯದ ವಿಶಿಷ್ಟ ಲಕ್ಷಣವಾಗಿ ಬೆಳೆಯಲು ಇಲ್ಲಿಂದ ಆರಂಭವಾಯಿತು. ಲೇವಿಲೇನ್ ಮೈರ್, ಎಸ್ತೂಲ ಲೆ ಪೆರ್ಡ್ರಿಕ್ಸ್–ಇವು ಕೆಲವು ಹೆಸರಾಂತ ಕೃತಿಗಳು. ಇದೇ ಕಾಲದಲ್ಲಿ ಈಸೋಪ್, ಫೀಡ್ರಸ್, ಬ್ಯಾಬ್ರಿಯಸ್ಸರ ಕತೆಗಳು ಭಾಷಾಂತರಗಳೂ ಫ್ರೆಂಚ್ ಭಾಷೆಯಲ್ಲಿ ಬಂದುವು.

ಇದೇ ಬಗೆಯದಾದರೂ ನೇರವಾದ ವಿಡಂಬನೆಯಾಗಿ ತಾನೇ ತಾನಾಗಿ ನಿಲ್ಲುವ ರೋಮನ್ ಡಿ ರೆನಾರ್ಟ್ (ರೆನಾರ್ಡ್ ದಿ ಫಾಕ್ಸ್) ಎಂಬ ಪ್ರಾಣಿಕಥೆ ಸುಪ್ರಸಿದ್ಧವಾದುದು. ೧೨ರಿಂದ ೧೪ನೆಯ ಶತಕದವರೆಗೂ ಈ ಕಥೆ ಬಹುಜನ ಕವಿಗಳ ಮೆಚ್ಚಾಗಿ ಬೇರೆ ಬೇರೆ ಭಾಷೆಗಳಲ್ಲೂ ಕಥಾವಸ್ತುವಾಗಿ ಅನೇಕ ಮಾರ್ಪಾಡುಗಳನ್ನೂ ಪಡೆದು ಜನಪ್ರಿಯ ಕಥನಕವನವಾಯಿತು. ಇದರಲ್ಲಿ ಬರುವ ನರಿ, ತೋಳ ಕರಡಿ, ಸಿಂಹರಾಜ ಮರೆಯಲಾಗದ ಪಾತ್ರಗಳ ಪ್ರತೀಕವಾದುವು.

ಆತ್ಮೀಯ ಶೈಲಿಯ ಪ್ರಸಿದ್ಧ ಕವಿ ರೂಟ್‌ಬೊ, ಭಾವನಾತ್ಮಕ ಕವಿ ಆಡಂ ಡಿ ಲಾ ಹೇಲ್ ೧೩ನೆಯ ಶತಕದ ಮಧ್ಯಭಾಗದಲ್ಲಿ ರಾಜಿಸುವ ದೊಡ್ಡ ಕವಿಗಳು. ರೂಟ್‌ಬೊ ಹಲವಾರು ಸೊಗಸಾದ ವಿಡಂಬನಾತ್ಮಕ ಫೇಬ್ಲಿಯಾಗಳನ್ನು ಬರೆದ.

೧೧ರಿಂದ ೧೩ನೆಯ ಶತಕದವರೆಗಿನ ಕಾಲವನ್ನು ಟ್ರುಬೆಡೂರ್ಸ್ ಮತ್ತು ಟ್ರೂವರ್ಸರ ಯುಗವೆಂದು ಕರೆಯಬಹುದು. ದಕ್ಷಿಣ ಫ್ರಾನ್ಸಿನಲ್ಲಿ ದೇಶಿಯ ಭಾಷೆಯಲ್ಲಿ ಹೊಸಬಗೆಯ ಹಾಡುಗಬ್ಬಗಳನ್ನು ರಚಿಸಿದ ಕವಿಗಾಯಕರನ್ನು ಟ್ರೋಬೆ ಡೋರ್ಸ್ (ಚಾರಣರು) ಎಂದು ಕರೆದರು. ಇವರ ಹಾಡುಗಳಿಂದ ಪ್ರಭಾವಿತರಾಗಿ ಉತ್ತರ ಫ್ರಾನ್ಸಿನ ಪ್ರಾದೇಶಿಕ ಭಾಷೆಯಲ್ಲಿ ಅಂಥದೇ ಬಗೆಯ ಹಾಡುಗಳನ್ನು ರಚಿಸಿ ಹಾಡಿದವರಿಗೆ ಟ್ರೂವೆರ್ಸ್ ಎಂಬ ಹೆಸರು ಬಂತು. ಟ್ರೂಬಿಡೂರ್ ಅಥವಾ ಟ್ರೂವೆರ್ ಎಂದರೆ ಹೊಸದನ್ನು ಹುಡುಕುವ, ಸೃಜಿಸುವವ ಎಂದು ಅರ್ಥ. ಈ ಹಾಡುಗಳ ವಸ್ತು ಸಾಮಾನ್ಯವಾಗಿ ಪ್ರಣಯ ಇಲ್ಲವೆ ಶೌರ್ಯಸಾಹಸ. ಈ ಪಂಥದ ಗಾಯಕರು ಅಥವಾ ಚಾರಣರಂದರೆ ಊರಿಂದೂರಿಗೆ ಅಲೆಯುವ ಭಿಕ್ಷುಕರಲ್ಲ. ರಾಜಕುಮಾರರೂ ಶ್ರೀಮಂತರೂ ಈ ಹಾಡುಗಳನ್ನು ರಚಿಸುತ್ತಿದ್ದರು. ಈ ಕವಿಗಾಯಕರಲ್ಲಿ ಅಂತಸ್ತಿನ ಭೇದವಿರಲಿಲ್ಲ. ತಾವೇ ಹಾಡಲಾಗದ ಕವಿಗಳು ಜೋಗ್ಲಾರ್ ಎಂಬ ಗಾಯನ ಪಟುಗಳನ್ನು ಜೊತೆಗಿರಿಸಿಕೊಳ್ಳುತ್ತಿದ್ದರು.

ಈ ಎರಡು ಶತಕಗಳ ಅವಧಿಯಲ್ಲಿ ಸುಮಾರು ನಾಲ್ಕು ನೂರು ಕವಿಗಾಯಕರು ಆಗಿ ಹೋದರೆಂದು ತಿಳಿದುಬಂದಿದೆ. ಚಾನ್ಸನಿಯರ್ಸ್ (ಹಾಡುಗಳ ಪುಸ್ತಕ) ಎನ್ನುವ ಹಸ್ತಪ್ರತಿಗಳಲ್ಲಿ ಈ ಹಾಡುಗಬ್ಬಗಳ ಹಲವಾರು ಮಾದರಿಗಳಿವೆ. ಯೂರೋಪಿನ ಹೊಸ ಭಾವಗೀತೆಗಳಿಗೆ ಸ್ಫೂರ್ತಿ ಮೂಲವಾಗಿದ್ದ ಈ ಕಾವ್ಯಪ್ರವಾಹ ಎಷ್ಟು ಆಕಸ್ಮಿಕವಾಗಿ ಉಕ್ಕಿಬಂದಿತೊ ಅಷ್ಟೆ ಆಕಸ್ಮಿಕವಾಗಿ ಇಳಿದು ಮರೆಯಾಯಿತು. ಅದರೇನು ಈ ಹಾಡುಗಳಿಂದಲೆ ಫ್ರಾನ್ಸ್ ಮಧುರವಾದ ಹಾಡುಗಳ ತೌರು

ಎನಿಸಿತು. ಸಮೃದ್ಧವಾದ ವೈವಿಧ್ಯಮಯವಾದ ಭಾವಗೀತಾ ಪರಂಪರೆಗೆ ಇವು ಕಾರಣವಾದುವು. ವಿವಿಧ ಛಂದೋಮಾದರಿಗಳನ್ನು ಸಿದ್ಧಪಡಿಸಿ ಇಟ್ಟುವು. ಮೊದಲು ಕವಿಗಾಯಕ ಏಳನೆಯ ಗಿಲ್ಹೆಮ್‌ನಿಂದ (೧೦೭೧–೧೧೨೭) ಹಿಡಿದು ಕೊನೆಯ ಕವಿಗಾಯಕ ಗಿರಾಟ್ ರಿಕ್ವಿಯರ್ (೧೨೩೦–೯೪) ವರೆಗೆ ಪ್ರಯೋಗಶೀಲ ಗ್ಯಾಸ್ಕೊನ್ ಮಾರ್ಕಾಬ್ರನ್ ಕೀರ್ತಿಶಿಖರವನ್ನೇರಿದ ಬೆರ್ನಾರ್ಟ್ ಡಿ ವೆಂಟಾಡೊರ್, ಪಿಯರೆ ವಿಡಲ್, ಪಿಯರೆ, ಬೆರ್ಟ್ರಾನ್ ಡಿ ಬೋರ್ನ್, ಆರ್ನಾಟ್ ಡೇನಿಯಲ್, ಗಿರಾಟ್ ಡಿ ಬೋರ್ನೆಲ್ಹ್, ಸೋರ್ಡೆಲ್ಲೊ, ಗಿಲ್ಹೆಮ್ ಫಿಗ್ಯುಯಿರಾ ಎಂಬ ಕವಿಗಾಯಕರು ಚರಿತ್ರಾರ್ಹರಾಗಿದ್ದಾರೆ. ಟ್ರೋಬಿಡೂರ್ಸ್ ರಚಿಸಿದ ಹಾಡುಗಳ ಸೊಗಸು ನಯ ನವುರು ನಾವಿನ್ಯತೆ ವೈವಿಧ್ಯ ಟ್ರೂವೆರ್ಸರ ಹಾಡುಗಳಲ್ಲಿ ಕಾಣದಿದ್ದರೂ ಅನುಕರಣೆಯಾಗಿದೆ. ಸ್ವಂತಿಕೆಯನ್ನೂ ಪ್ರತಿಭೆಯನ್ನೂ ತೋರಿಸಿದ ಅನೇಕ ಹಾಡುಗಳನ್ನು ನೋಡಬಹುದು. ೧೩ನೆಯ ಶತಕದ ಪೂರ್ವಾರ್ಧ ಈ ಹಾಡುಗಳ ಸುವರ್ಣಕಾಲ. ಅರ್‍ರಾಸ್ ಈ ಹಾಡುಗಳ ಕೇಂದ್ರ. ಜಾಕ್ವೆಸ್ ಬ್ರಾಟೆಲ್, ಅಡಂ ಡಿ ಲಾ ಹೇಲ್ ಈ ಪರಂಪರೆಯ ಹೆಸರಾದ ಕವಿಗಾಯಕರು.

೧೪ನೆಯ ಶತಮಾನದಲ್ಲಿ ಪ್ರತಿಭಾಪೂರ್ಣವಾದ ಯಾವ ಕಾವ್ಯವೂ ಬರಲಿಲ್ಲ. ಬ್ಯಾಲಡ್, ರೋಂಡೆಲ್, ಟ್ರಿಯೊಲೆಟ್, ಚಾಂಟ್ ರಾಯಲ್ ಮೊದಲಾದ ಛಂದೋ ರೂಪಗಳ ನಿಯಮಗಳನ್ನು ಈ ಸುಮಾರಿನಲ್ಲಿ ಕಟ್ಟುನಿಟ್ಟು ಮಾಡಲಾಯಿತು.

ಈ ಕಾಲದಲ್ಲಿ ಇತಿಹಾಸವನ್ನು ಸಹ ಪದ್ಯರೂಪದಲ್ಲಿ ಬರೆಯುವುದು ಪದ್ಧತಿಯಾಗಿತ್ತು. ವಿಲೆ ಹಾರ್ಡೂನ್ ೧೩ನೆಯ ಶತಕದಲ್ಲೆ ೪ನೆಯ ಕ್ರೂಸೇಡ್ ಯುದ್ಧವನ್ನು ನಿರೂಪಿಸುವ ಚರಿತ್ರೆಯನ್ನು ಗದ್ಯದಲ್ಲಿ ಬರೆದು ಮೊದಲಿಗನಾಗಿದ್ದ, ಅದರೆ ನೂರು ವರ್ಷ ಕಾಲದ ಅನಂತರವೆ ಚರಿತ್ರೆಯನ್ನು ಮತ್ತೆ ಗದ್ಯದಲ್ಲಿ ಬರೆಯುವ ಸಂದರ್ಭ ಬಂದುದು, ಜೀನ್ ಡಿ ಚೋಯಿನ್ ವಿಲೆ ೬ನೆಯ ಕ್ರೂಸೇಡ್ ಯುದ್ಧದ ಇತಿಹಾಸವನ್ನು ಬರೆದ. ಈ ಶತಕದ ಕಡೆಯ ಭಾಗದಲ್ಲಿ ಬಂದ ಸರ್ ಜಾನ್ ಫ್ರಾಯ್‌ಸಾರ್ಟನ ಇಂಗ್ಲೆಂಡ್, ಫ್ರಾನ್ಸ್, ಫ್ಲಾಂಡರ್ಸ್ ಇತಿಹಾಸ ವೃತ್ತಾಂತ ಹೆಸರಿಗೆ ಇತಿಹಾಸವಾದರೂ ರಮ್ಯಕ ಕಥೆಗಿಂತಲೂ ಸ್ವಾರಸ್ಯವಾಗಿ, ಅತ್ಯಂತ ವಾಸ್ತವ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸುತ್ತ ತನ್ನ ಮನೋಹರವಾದ ಗದ್ಯಶೈಲಿಯಿಂದ ಉತ್ಕೃಷ್ಟ ಸಾಹಿತ್ಯಕೃತಿ ಎನಿಸಿದೆ.

೧೫ನೆಯ ಶತಮಾನ ಅನೇಕ ಪ್ರತಿಭಾವಂತ ಕವಿಗಳನ್ನು ಕಂಡಿತು. ಚಾರ್ಲ್ಸ್ ಡಿ ಆರ್ಲಿಯನ್ಸ್, ಫ್ರಾಂಕೊ ವಿಲ್ಲೋನ್ ಅವರಲ್ಲಿ ಮುಖ್ಯರು. ಆರ್ಲಿಯನ್ಸನ ಕವಿತೆಗಳಲ್ಲಿ ನೈಜಸೌಂದರ್ಯವಿದೆ. ಕಳ್ಳ ಕೊಲೆಗಡುಕ ಎಂದು ಕುಖ್ಯಾತನಾದರೂ ವಿಲ್ಲೋನನ ಹೃದಯಸ್ಪರ್ಶಿ ಭಾವಗೀತೆಗಳು ಶ್ರೇಷ್ಠವಾದ, ಪ್ರತಿಭಾವಪೂರ್ಣವಾದ ಸೃಷ್ಟಿ. ಮಾನವಾಂತಃಕರಣವನ್ನು ಅವು ಮಿಡಿಯುತ್ತವೆ.

ಕ್ರಿಸ್ಟೇನ್ ಡಿ ಪಿಸಾನ್, ಅಲೇನ್ ಚಾರ್ಟಿಯರ್ ಒಳ್ಳೆಯ ಕವಿಗಳಾಗಿದ್ದಂತೆ ಶ್ರೇಷ್ಠ ಗದ್ಯಲೇಖಕರೂ ಆಗಿದ್ದರು. ಗದ್ಯಲೇಖಕರಲ್ಲಿ ಫಿಲಿಪ್ ಡಿ ಕೊಮಿನ್ಸ್‌ನನ್ನು ಮೀರಿಸುವವರು ಬೇರೆ ಇರಲಿಲ್ಲ. ಕಲೆ ವಿಜ್ಞಾನ ನೀತಿಗಳನ್ನು ಕುರಿತ ಪಾಂಡಿತ್ಯ ಪೂರ್ಣವಾದ ಶಾಸ್ತ್ರಗ್ರಂಥಗಳು ಪ್ರವಾಸ ಕಥನಗಳು ಖಾಸಗಿ ಪತ್ರಗಳು ಈ ಕಾಲದ ಗದ್ಯಸಾಹಿತ್ಯದಲ್ಲಿ ಗಮನಾರ್ಹವಾಗಿವೆ. ಫ್ರಾಯ್‌ಸಾರ್ಟಿನ ನೆನಪು ತರುವ ಇತಿಹಾಸ ವೃತ್ತಾಂತಕಾರ ಎಂಗ್ಯು ರ‍್ರಾಂಡ್ ಡಿ ಮಾನಸ್ಟ್ರೆಲೆಟ್ (೧೪೦೦-೫೩), ಕಿರು ಕಾದಂಬರಿಗಳನ್ನು ಬರೆದ ಅಂಟೋಯಿನ್ ಡಿ ಲಾ ಸಲ್ಲೆ (೧೩೮೮-೧೪೬೨) ಗದ್ಯಸಾಹಿತ್ಯದಲ್ಲಿ ಪ್ರಸಿದ್ಧರು. ಈ ನಾವೆಲ್ ಎಂಬುದು ಫೇಬ್ಲಿಯಾದ ಬೆಳದ ರೂಪವೇ ಆದರೂ ಅದರಂತೆ ಪದ್ಯರೂಪಿಯಾಗಿರದೆ ಗದ್ಯದಲ್ಲಿರುವುದೇ ವಿಶೇಷ.

ಮಾಧ್ಯಮ ಯುಗದ ಫ್ರೆಂಚ್ ನಾಟಕ ರೂಪುಗೊಂಡುದು ಮೂಲತಃ ಚರ್ಚುಗಳ ಆವರಣದಲ್ಲಿ. ಕ್ರೈಸ್ತಧರ್ಮವನ್ನು ಎತ್ತಿ ಹಿಡಿಯುವ ನೀತಿಬೋಧಕ ಪ್ರಸಂಗಗಳನ್ನು ಹಬ್ಬ ಹರಿದಿನಗಳಲ್ಲಿ ನಾಟಕರೂಪವಾಗಿ ಪ್ರದರ್ಶಿಸುತ್ತಿದ್ದರು. ಮೊದಲಿಗೆ ಈ ನಾಟಕಗಳಲ್ಲಿ ಕಂಡು ಬರುತ್ತಿದ್ದ ಲ್ಯಾಟಿನ್ನಿನ ಪ್ರಭಾವ ಕ್ರಮೇಣ ಕಡಿಮೆಯಾಯಿತಾಗಿ ನಾಟಕದ ಭಾಷೆ ಜನಸಾಮಾನ್ಯರಿಗೂ ಹಿಡಿಸುವಂತಾಯಿತು. ಹೆಚ್ಚು ಹೆಚ್ಚು ದೇಶೀಯ ಭಾಷೆಯ ನಾಟಕಗಳು ರಚಿತವಾದವು.

೧೨ನೆಯ ಶತಕದಲ್ಲಿ ಚರ್ಚಿನ ಹೊರಗೆ ಪ್ರದರ್ಶಿತವಾದ ಮೊಟ್ಟಮೊದಲ ನಾಟಕ ಜೊ ಡಿ ಆ್ಯಡಂ ಎಂದು ತಿಳಿದುಬಂದಿದೆ. ಇಂಥ ಪ್ರದರ್ಶನಗಳು ಬಹು ವಿರಳ, ೧೩, ೧೪ ಮತ್ತು ೧೫ನೆಯ ಶತಮಾನಗಳಲ್ಲಿ ನಾಟಕರಂಗದಲ್ಲಿ ಮಿರೆಕಲ್ ನಾಟಕಗಳು ಮಿಸ್ಟರಿ ನಾಟಕಗಳು ಮತ್ತು ಮೊರ‍್ಯಾಲಿಟಿ ನಾಟಕಗಳು ಎಂದು ಮೂರು ಬಗೆಯವು ಪ್ರಚಲಿತವಾಗಿದ್ದವು. ಭಕ್ತಿ ಧರ್ಮಗಳನ್ನು ಪ್ರಸಾರ ಮಾಡುವ ಉದ್ದೇಶದಿಂದ ಸಂತರ ದೇವರ ಮಹಿಮೆಗಳ (ಪವಾಡ) ಕತೆಗಳು ಮಿರೆಕಲ್ ನಾಟಕಗಳ ವಸ್ತು, ಮಾಯ, ಮಂತ್ರ, ಇಂದ್ರಜಾಲ, ಸಾತ್ವಿಕ ಸಿದ್ಧಿಗಳಿಂದ ಪಡೆದ ಅತೀಂದ್ರಿಯ ಅತಿಮಾನುಷ ಶಕ್ತಿಗಳಿಗೂ ದುಷ್ಟಶಕ್ತಿಗಳಿಗೂ ಸೆಣಸಾಟ ಇದು ಮಿಸ್ಟರಿ ನಾಟಕಗಳ ವಸ್ತು. ಇವುಗಳನ್ನು ಸಹ ಧರ್ಮಗ್ರಂಥಗಳಿಂದ ಆರಿಸಿ ಬೇಕಾದ ರೀತಿ ಅದ್ಭುತ ಸಂಗತಿಗಳನ್ನು ತುಂಬಿ ರಚನೆ ಮಾಡುತ್ತಿದ್ದರು. ಇವು ತುಂಬ ದೀರ್ಘವಾಗಿರುತ್ತಿದ್ದುವು. ನೂರಾರು ಪಾತ್ರಗಳೂ ಪ್ರದರ್ಶನಕ್ಕೆ ಹಲವಾರು ದಿನಗಳೂ ಬೇಕಾಗುವ ದೀರ್ಘನಾಟಕಗಳೂ ಇದ್ದವೂ. ಮಿಸ್ಟೆರಿ ಡಿ ಲಾ ಪ್ಯಾಷನ್ ಎಂಬ ನಾಟಕ ಇದಕ್ಕೊಂದು ನಿದರ್ಶನ. ಈ ನಾಟಕಗಳ ಕರ್ತೃಗಳು ಬಹುಮಟ್ಟಿಗೆ ಯಾರೆಂದು ತಿಳಿಯದಿದ್ದರೂ ಆರ್ನೌಲ್ ಮತ್ತು ಸೈಮನ್ ಗ್ರೇಬನ್ (೧೪೫೦). ಜೇನ್ ಮೈಖೆಲ್ (೧೪೯೩) ಎಂಬ ಕೆಲವು ಪ್ರಸಿದ್ಧ ನಾಟಕಕಾರರನ್ನು ಹೆಸರಿಸಬಹುದು. ಕೇವಲ ನೀತಿಬೋಧನೆ ಮೊರ‍್ಯಾಲಿಟಿ ನಾಟಕಗಳ ಗುರಿ. ವಸ್ತು

ಕಾಲ್ಪನಿಕವಾದ ಪ್ರಸಂಗಗಳೇ. ಸದ್ಗುಣಗಳ ಪ್ರತಿಪಾದನೆ ದುರ್ಗುಣಗಳ ಖಂಡನೆ ಇರುವ ಈ ನಾಟಕಗಳಲ್ಲಿ ಪಾತ್ರಗಳಿಗೆ ಆಯಾ ಸುಗುಣಗಳ ದುರ್ಗುಣಗಳ ಹೆಸರನ್ನೆ ಇಡುವುದು ವಾಡಿಕೆ. ಬೋಧನಾ ದೃಶ್ಯಗಳು ಉದ್ದವಾಗಿದ್ದು ಬೇಸರ ತರುವ ಸಂಭವ ಇದ್ದುದರಿಂದ ಮೊರ್‍ಯಾಲಿಟಿ ನಾಟಕಗಳಲ್ಲಿ ನಡುನಡುವೆ ಹಾಸ್ಯದ ಕಿರುದೃಶ್ಯಗಳನ್ನು ಮಧ್ಯಂತರ ಮನೋರಂಜನೆಗಳಾಗಿ ಸೇರಿಸುತ್ತಿದ್ದರು. ಮೇಯ್ತ್ರೆಪಾತೆಲಿನ್ ಎಂಬುದು ಇಂಥ ಮಧ್ಯಂತರ ಪ್ರಹಸನಗಳಲ್ಲಿ ಪ್ರಸಿದ್ಧವಾದುದು.

೧೧, ೧೨ನೆಯ ಶತಮಾನಗಳಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ನಾಟಕಗಳ ಭಾಷಾಂತರಗಳೇ ಹೆಚ್ಚು.

ಫ್ರೆಂಚ್ ಹರ್ಷಕದ ಉಗಮದ ಕಾಲ ನಿರ್ದಿಷ್ಟವಾಗಿ ತಿಳಿದಿಲ್ಲ. ಅಡಂಡಿ ಲಾ ಹಾಲ್ಲೆ ರಚಿಸಿ ೧೨೬೨ರಲ್ಲಿ ಪ್ರದರ್ಶಿದ ಜುಡಿ ಲಾ ಫ್ಯೂಯಿಲ್ಲೀ ಎಂಬುದೆ ಪ್ರಥಮ ಸುಖಾಂತ ನಾಟಕ. ಇದೇ ನಾಟಕಕಾರನ ರಾಬಿನ್ ಎಟ್ ಮ್ಯಾರಿಯೋನ್ ಎಂಬ ಸಂಗೀತ ನಾಟಕವನ್ನು ೧೨೮೫ರಲ್ಲಿ ನೇಪಲ್ಸಿನಲ್ಲಿ ಪ್ರದರ್ಶಿಸಲಾಯಿತು.

೧೬ನೆಯ ಶತಮಾನದಲ್ಲಿ ನವೋದಯದ (ರಿನೇಸಾನ್ಸ್) ಗಾಳಿ ಫ್ರೆಂಚ್ ಸಾಹಿತ್ಯದ ಮೇಲೆ ಬೀಸಿತು. ಇದರ ಪ್ರಭಾವದಿಂದ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಚೈತನ್ಯ ಮೂಡಿತು. ಹೊಸ ಯುಗದ ಸುಪ್ರಭಾತವನ್ನು ಹಾಡಿದವ ಕವಿ ಕ್ಲೆಮೆಂಟ್ ಮ್ಯಾರಟ್. ಸರಳವಾದ ನಿತ್ಯ ಬಳಕೆಯ ಮಾತು. ಸ್ವಚ್ಛಂದವಾದ ಛಂದ ಇವನ ಮುದ್ದಾದ ಕವಿತೆಗಳ ವೈಶಿಷ್ಟ್ಯ. ಈತನ ಎಪಿಸಲ್ (೧೫೩೫) ಭಾವಗೀತೆಗಳ ಅತ್ಯುತ್ತಮ ಸಂಕಲನ. ನಾವೀನ್ಯ ಲವಲವಿಕೆ ಚತುರೋಕ್ತಿ ಈ ಕವಿತೆಗಳಲ್ಲಿ ಕಾಣುತ್ತವೆ.

ಈ ಕಾವ್ಯಶೈಲಿಯನ್ನು ಖಂಡಿಸಿ ಡಿಫೆನ್ಸ್ ಅಂಡ್ ಇಲಸ್ಟ್ರೇಷನ್ಸ್ ಆಫ್ ಫ್ರೆಂಚ್ ಲ್ಯಾಂಗ್ವೇಜಸ್ ಎಂಬ ಪುಸ್ತಕವನ್ನು ಬರೆದು ಜೋಖಿಮ್ ಡು ಬೆಲ್ಲೆ (೧೫೨೨-೬೦) ಭಾವಗೀತೆಯ ಹೊಸ ದಾರಿಯನ್ನು ತೆರೆದ. ಜೋಖಿಮ್ ಮತ್ತು ಪಿಯರೆ ಡಿ ರೊನ್ಸಾರ್ಡ (೧೫೨೪-೮೫) ನವೋದಯದ ಪ್ರಭಾವಶಾಲಿ ಕವಿಗಳು. ಡು ಬೆಲ್ಲೆಯ ಎಪಿಟಾಪ್ ಆನ್ ಎ ಲಿಟ್ಲ್‌ಡಾಗ್ ಸುಪ್ರಸಿದ್ಧವಾದ್ದು. ಫ್ರೆಂಚ್ ಕಾವ್ಯದಲ್ಲಿ ಭಾವದ ಕಾವೇ ಇರುವುದಿಲ್ಲ ಎಂಬ ಅಪವಾದವನ್ನು ಇದು ತೊಡೆದು ಹಾಕಿತು. ಡು ಬೆಲ್ಲೆ ನಿಜಕ್ಕೂ ದೊಡ್ಡ ಕವಿ. ಆಲಿವ್. ದಿ ರಿಗ್ರೆಟ್ಸ್. ದಿ ಆಂಟಿಕ್ವಿಟೀಸ್ ಆಫ್ ರೋಮ್‌ರಸ್ಟಿಕ್ ಗೇಮ್ ಎಂಬುವು ಅವನ ಕೆಲವು ಮುಖ್ಯ ಕೃತಿಗಳು. ಸಾನೆಟ್ಟು ಪ್ರಗಾಥಗಳು ಅವನ ಅಚ್ಚುಮೆಚ್ಚು. ಅನೇಕ ಹಿರಿಯ ಕವಿಗಳಿಗೆ ಆತ ಸ್ಫೂರ್ತಿಯೂ ಮೇಲ್ಪಂಕ್ತಿಯೂ ಆಗಿದ್ದ. ರೋನ್ಸಾರ್ಡ ಎಲ್ಲ, ಛಂದೋ ರೂಪಗಳಲ್ಲೂ ಕವಿತೆ ಬರೆದರೂ ಸಾನೆಟ್ಟಿನಲ್ಲಿ ಮಾತ್ರ ಪರಿಣತ.

ನವೋದಯದಿಂದ ಪ್ರಭಾವಿತರಾಗಿ ಪ್ರಾಚೀನ ಗ್ರೀಕ್ ಮಾದರಿಯನ್ನೇ ಅನುಸರಿಸಿ ಫ್ರೆಂಚ್ ಭಾಷೆಯ ಮತ್ತು ಸಾಹಿತ್ಯದ ಪರಿಷ್ಕರಣಕ್ಕೆ ಹೊರಟ ಪ್ಲೀಯೆದ್ ಎಂಬ ಪಂಥದ ಕವಿಗಳು ದೊಡ್ಡ ಕೋಲಾಹಲವನ್ನೇ ಎಬ್ಬಿಸಿದರಲ್ಲದೆ ತಮ್ಮ

ಉದ್ದೇಶ ಸಾಧನೆಯಲ್ಲಿ ಕೊಂಚ ಯಶಸ್ಸನ್ನೂ ಪಡೆದರು. ಪ್ರೌಢ ಶೈಲಿಯ ಕಟ್ಟುನಿಟ್ಟಾದ ಬಿಗಿಯಾದ ಕಾವ್ಯಬಂಧ ಇವರ ನಿರ್ಮಾಣ. ೧೯ನೆಯ ಶತಕದಲ್ಲಿ ಮುಕ್ತ ಛಂದಸ್ಸು ಪ್ರಾಧಾನ್ಯಕ್ಕೆ ಬರುವವರೆಗೂ ಈ ಪಂಥದ ಸಂಪ್ರದಾಯವೇ ಮುಂದುವರಿಯಿತು.

ನವೋದಯ ಕಾಲದ ಮೂವರು ಪ್ರಸಿದ್ಧ ಗದ್ಯ ಸಾಹಿತ್ಯಗಳು ರ್‍ಯಾಬಲೆ, ಕ್ಯಾಲ್ವಿನ್ ಮತ್ತು ಮಾಂಟೇನ್, ಮೂವರೂ ಚಿಂತನಶೀಲರು. ಎಲ್ಲ ಕಾಲ ದೇಶಗಳಲ್ಲೂ ಶ್ರೇಷ್ಠನಾಗಿ ನಿಲ್ಲಬಲ್ಲವ ರ್‍ಯಾಬೆಲೆ (೧೪೯೦–೧೫೫೩). ಇಂಗ್ಲೆಂಡಿಗೆ ಷೇಕ್ಸ್‌ಪಿಯರ್ ಸ್ಪೇನಿಗೆ ಸರ್ವಾಂಟಿಸ್ ಇದ್ದಂತೆ ಫ್ರಾನ್ಸಿಗೆ ಈತ ಪ್ರಾಚೀನ ಶ್ರೇಷ್ಠಗ್ರಂಥಗಳಲ್ಲಿ ಆಸಕ್ತಿ, ಆಶಾವಾದ, ಜೀವನೋತ್ಸಾಹ. ಧೈರ್ಯ ಸಾಹಸ ಮುಂತಾದ ನವೋದಯದ ಎಲ್ಲ ಲಕ್ಷಣಗಳೂ ರ್‍ಯಾಬೆಲೆಯ ಗಾರ್ಗಾಂಟುವಾ ಮತ್ತು ಪೆಂಟಾಗ್ರುಯೆಲ್ ಎಂಬ ಎರಡು ಮೇರುಕೃತಿಗಳಲ್ಲಿ ಇವೆ. ರ್‍ಯಾಬೆಲೆಯ ಹಾಸ್ಯದಲ್ಲಿ ಕಟು, ಚುಚ್ಚು ಇಲ್ಲ. ಮಾನವಾಂತಃಕರಣ ಸಹಾನುಭೂತಿಗಳಿವೆ. ಒಂದು ಪೀಳಿಗೆಯ ಅನಂತರ ಬಂದ ಮಾಂಟೇನ್ ಲಲಿತಪ್ರಬಂಧ ಪ್ರಕಾರದ ಜನಕ. ಶ್ರೇಷ್ಠ ಮಾನವತಾವಾದಿ. ಬರೆಹಕ್ಕಿಂತ ಬದುಕು ದೊಡ್ಡದು ಎಂದು ತಿಳಿದವ. ತನಗೆ ಗೊತ್ತಿರುವುದಷ್ಟೆ ಪೂರ್ಣಸತ್ಯ ಮತ್ತು ಸರಿ ಎಂಬ ಭ್ರಾಂತಿಗೊಳಗಾಗದ ವಿನಯಶಾಲಿ. ಪ್ರಾಟೆಸ್ಟಂಟ್ ಪಂಥದ ಹಿರಿಯ ವ್ಯಕ್ತಿ. ಕ್ಯಾಲ್ವಿನ್ ಇನ್ನೊಬ್ಬ ಮಾನವತಾವಾದಿ, ಮಹಾಸಾಹಿತಿ. ಸೊಗಸಾದ ಗದ್ಯಶೈಲಿಯ ಈತನ ಇನ್ಸ್‌ಟಿಟ್ಯೂಷನ್ ಆಫ್ ಕ್ರಿಶ್ಚಿಯನ್ (೧೫೪೧) ಒಂದು ದೊಡ್ಡ ಕೃತಿ. ಈತನದು ಅಡಕವಾದ ಬಿಗಿಯಾದ ಶೈಲಿ.

ಕ್ವೀನ್ ಮಾರ್ಗರೇಟ್ ಡಿ ನವರ್‍ರೆ ೧೬ನೆಯ ಶತಕದ ಶ್ರೇಷ್ಠ ಕತೆಗಾರ್ತಿ. ಬೊಕ್ಯಾಚಿಯೋನ ಡಿ ಕ್ಯಾಮರಾನ್ ಮಾದರಿಯ ಹೆಪ್ತಾಮೆರಾನ್ (ಪ್ರ.ಶ.ಪೂ. ೧೫೫೮) ಈಕೆಯ ಕಥಾಗುಚ್ಛ. ಅದೇ ಲವಲವಿಕೆ. ಅದೇ ಸ್ವಚ್ಛಂದತೆ ಇದ್ದರೂ ಬೊಕ್ಯಾಚಿಯೋ ಸಾಧಿಸಿದ ಎಲ್ಲ ಶ್ರೇಷ್ಠ ಅಂಶಗಳ ಕಲಾತ್ಮಕ ಸಮನ್ವಯ ಮಾತ್ರ ಇಲ್ಲಿ ಕಾಣುವುದಿಲ್ಲ. ೧೬ನೆಯ ಶತಕ ಭಾಷಾಂತರದ ಯುಗ ಎಂಬಷ್ಟರ ಮಟ್ಟಿಗೆ ಆ ಕಾಲದಲ್ಲಿ ಶ್ರೇಷ್ಠವಾದ ಭಾಷಾಂತರಗಳು ಬಂದುವು. ಅವುಗಳಲ್ಲಿ ಅಮ್ಯೊಟ್ ಮಾಡಿರುವ ಪ್ಲುಟಾರ್ಕನ ಪ್ಯಾರೆಲಲ್ ಲೈವ್ಸ್‌ನ ಭಾಷಾಂತರ ಶಿಖರಪ್ರಾಯವಾಗಿದೆ. ಅಮ್ಯೊಟ್ ಫ್ರೆಂಚ್ ಗದ್ಯಕ್ಕೆ ಇಂಪು, ಲಾಲಿತ್ಯಗಳನ್ನು ಕೊಟ್ಟ.

ನವೋದಯ ತಂದ ಇನ್ನೊಂದು ಮಹತ್ತರ ಬದಲಾವಣೆ ಎಂದರೆ ನಾಟಕ ಧಾರ್ಮಿಕ ವಲಯದಿಂದೀಚೆಗೆ ಬಂದು ಲೌಕಿಕ ಮನೋರಂಜನೆಗೆ ತೊಡಗಿದ್ದು. ೧೬ನೆಯ ಶತಕದ ಫ್ರೆಂಚ್ ನಾಟಕಕ್ಕೆ ತನ್ನದೇ ಆದ ಮಹತ್ತ್ವದ ಸಾಧನೆಯಾಗಲಿ ವೈಶಿಷ್ಟ್ಯವಾಗಲಿ ಇಲ್ಲ. ಹಲವಾರು ಗ್ರೀಕ್ ಮತ್ತು ಲ್ಯಾಟಿನ್ ನಾಟಕಗಳು ಭಾಷಾಂತರಗಳೆ ರಂಗವನ್ನು ತುಂಬಿದ್ದವು. ಸ್ವತಂತ್ರವಾದ ನಾಟಕಗಳಲ್ಲಿ ಜೊಡೆಲ್ಲೆ ಬರೆದು ಪ್ರದರ್ಶಿಸಿದ ಕ್ಲಿಯೋಪಾತ್ರ ಎಂಬ ದುರಂತನಾಟಕ. ಲ್ಯಾರಿವೆಯ ಹರ್ಷಕಗಳು ಪ್ರಹಸನಗಳು. ಫ್ರೆಂಚ್ ಜನರ ವಿಶಿಷ್ಟ ಮನೋಧರ್ಮವನ್ನು (೧೫೫೦–೧೬೧೨)

ಪ್ರತಿಬಿಂಬಿಸುತ್ತವೆ. ಲ್ಯಾರಿವೆಯ ಲಘು ವೈನೋದಿಕಗಳು ಮೊಲ್ಯೇರನ ನಾಟಕಗಳ ಮುಂಗೋಳಿಗಳಾಗಿವೆ. ಈ ಶತಕದ ಪೂರ್ವಾರ್ಧದಲ್ಲೆ ಮಧ್ಯಮಯುಗದ ಮಿಸ್ಟರಿ ಮತ್ತು ಮೊರ್‍ಯಾಲಿಟಿ ಧಾರ್ಮಿಕ ನಾಟಕಗಳ ಕಾಲ ಮುಗಿದುಹೋಯಿತು. ಪಿಯರ್ರೆ ಗ್ರಿಂಗೋಯರನ (೧೪೮೦–೧೫೪೭) ಪ್ರಿನ್ಸ್ ಡೆ ಸಾಟ್ಸ್ ಮತ್ತು ಮಿಸ್ಟರಿ ಡಿ ಸೇಂಟ್ ಲೂಯಿ ಹಳೆಯ ಧಾರ್ಮಿಕ ಸಂಪ್ರದಾಯದ ನಾಟಕಗಳಲ್ಲಿ ಅತ್ಯುತ್ತಮವಾದುವು.

ವಿಲೆ ಹಾರ್ಡೊಯಿನ್, ಜೊಯಿನ್ ವಿಲ್ಲೆ, ಫ್ರಾಯ್‌ಸಾರ್ಟ ಮತ್ತು ಕೊಮೈನ್ಸ್‌ರಂಥ ಇತಿಹಾಸಕಾರರನ್ನು ಕೊಟ್ಟಿದ್ದ ಫ್ರಾನ್ಸ್‌ದೇಶದಲ್ಲಿ ಈ ಶತಕದಲ್ಲಿ ಆ ಮಟ್ಟದ ಇತಿಹಾಸಕಾರರು ಕಾಣದಿದ್ದರೂ ಇತಿಹಾಸ ಕ್ಷೇತ್ರದಲ್ಲಿ ಶುದ್ಧ ಇತಿಹಾಸ ಮತ್ತು ಜೀವನಚರಿತ್ರೆ. ನಡೆದ ಘಟನೆಗಳ ವೃತ್ತಾಂತ, ಸ್ಮೃತಿಗಳು ಎಂಬ ಬೇರೆ ಬೇರೆ ಬಗೆಯ ಗ್ರಂಥಗಳ ವಿಂಗಡನೆಯಾಯಿತು. ವಿಶ್ವ ಸಾಹಿತ್ಯದಲ್ಲೆ ಮೇಲ್ಪಂಕ್ತಿಯಾಗಿ ನಿಲ್ಲುವ ಸ್ಮೃತಿಗಳು ಮತ್ತು ಸಾಹಿತ್ಯಕ ಪತ್ರಮಾಲೆಗಳು ಈ ಶತಮಾನದ ವಿಶೇಷವಾದ ಫ್ರೆಂಚ್ ಕಾಣಿಕೆ. ಸ್ಮೃತಿಗಳಲ್ಲಿ ಫ್ರ್ಯಾಂಕೊ ಡಿ ಲ್ಯಾನೊ (೧೫೩೧–೯೧). ಬ್ಲೇಸ್ ಡಿ ಮಾಂಟ್ಲುಕ್ (೧೫೦೨–೭೭) ತೀಯೊಡೋರ್ ಅಗ್ರಿಪ್ಪಾಡಿ ಆಬಿಗ್ನೆ ಮತ್ತು ಪಿಯರೆ ಡಿ ಬೊರ್ಡಿಲ್ಲೆ, ಸೀನ್ಯೊರ್ ಡಿ ಬ್ರಾಂಟೋಮ್ ಇವರ ನಾಲ್ಕು ಸಂಗ್ರಹಗಳು ಶ್ರೇಷ್ಠ ಸಾಹಿತ್ಯಕ ಗುಣಗಳಿಂದ ಕೂಡಿ ಅಮೂಲ್ಯ ಕೃತಿಗಳಾಗಿವೆ. ಈ ಸ್ಮೃತಿಗಳಲ್ಲಿ ಅಂದಿನ ಫ್ರೆಂಚ್ ಸಾಮಾಜಿಕ ಹಾಗು ರಾಜಕೀಯ ಸ್ಥಿತಿಗತಿಗಳ ನೈಜ ಚಿತ್ರಣವಿದೆ. ಈ ನಾಲ್ವರಲ್ಲಿ ಬ್ರಾಟೋಮ್ ಹೊರ ದೇಶಗಳಲ್ಲೂ ಚಿರಪರಿಚಿತನಾಗುವಷ್ಟು ಪ್ರಸಿದ್ಧನಾದ. ಉಳಿದ ಮೂವರು ಗುಣದಲ್ಲಿ ಈತನಿಗೇನು ಕಡಿಮೆಯವರೇ, ಆದರೂ ಬ್ರಾಂಟೋಮ್ ಕೃತಿಯಲ್ಲಿರುವ ವಿಶ್ವ ಸಾಮಾನ್ಯವಾದ ಆಕರ್ಷಣೆ ಇವರ ಕೃತಿಗಳಲ್ಲಿಲ್ಲ.

ಇವಲ್ಲದೆ ಅನೇಕ ವೈಜ್ಞಾನಿಕ, ತತ್ತ್ವ ಶಾಸ್ತ್ರೀಯ ಗ್ರಂಥಗಳು ಈ ಕಾಲದಲ್ಲಿ ಹೊರಬಂದುವು.

೧೭ನೆಯ ಶತಕದಲ್ಲಿ ಫ್ರೆಂಚ್ ಸಾಹಿತ್ಯ ಕಾವ್ಯಕ್ಷೇತ್ರವೊಂದುಳಿದು ಮಿಕ್ಕೆಲ್ಲ ಪ್ರಕಾರಗಳಲ್ಲೂ ಅಭ್ಯುದಯದ ಶಿಖರಕ್ಕೇರಿತು. ಕಾವ್ಯ ಕ್ಷೇತ್ರದಲ್ಲಿ ಗಮನಿಸಬಹುದಾದ ಒಬ್ಬನೇ ಕವಿ ಮ್ಯಾಲ್‌ಹರ್ಬ (೧೫೫೫–೧೬೨೮). ಶುದ್ಧಾಂಗ ಫ್ರೆಂಚ್ ಪದಗಳನ್ನೇ ಬಳಸುವ ಮತ್ತು ಬಿಗಿಯಾದ ಛಂದಸ್ಸಿನಲ್ಲೇ ಬರೆಯುವ ಛಲ ಈತನದು. ಕ್ಲ್ಯಾಸಿಕಲ್ ಕಾವ್ಯಪದ್ಧತಿಯ ಪ್ರವರ್ತಕನಾಗಿ ಈತ ಪ್ರಸಿದ್ಧನಾದ. ಸಾಹಿತ್ಯದ ಮೇಲೆ ತುಂಬ ಪ್ರಭಾವವನ್ನು ಬೀರಿದ ಡೆಕಾರ್ಟನ ಡಿಸ್ಕೊರ್ಸ ಡಿ ಲಾ ಮೆತೆಡ್ ಎಂಬ ತತ್ತ್ವಶಾಸ್ತ್ರಗ್ರಂಥ ಕ್ಲ್ಯಾಸಿಕಲ್ ಪದ್ಧತಿಗೆ ಸ್ಫೂರ್ತಿಯೂ ಪ್ರೇರಣೆಯೂ ಆಯಿತು. ೧೬೩೫ರಲ್ಲಿ ರಿಷ್ಲೂನಿಂದ ಸ್ಥಾಪಿತವಾದ ಫ್ರೆಂಚ್ ಅಕಾಡೆಮಿ ಭಾಷೆಯ ಐಕ್ಯತೆಗೆ

ಬಹುವಾಗಿ ಶ್ರಮಿಸಿತು. ಫ್ರೆಂಚ್ ಭಾಷಾಶಾಸ್ತ್ರವನ್ನು ಬರೆದ ವಾಗೆಲಾಸ್ (೧೫೮೫–೧೬೫೦) ಭಾಷೆಯ ಪರಿಷ್ಕರಣ ಮತ್ತು ಬೆಳವಣಿಗೆಗೂ ತನ್ನ ಸೊಗಸಾದ ಪತ್ರಮಾಲೆಯಿಂದ ಬಾಲ್ಜಾಕ್ ಗದ್ಯ ಶೈಲಿಯ ಶ್ರೇಷ್ಠ ಮಾದರಿಗೂ ಕಾರಣರಾದರು.

ಕಾರ್ನೀಲ್, ರಾಸೀನ್ ಮತ್ತು ಮೋಲ್ಯೇರ್ ೧೭ನೆಯ ಶತಕದ ಶ್ರೇಷ್ಠ ನಾಟಕಕಾರರು. ಈ ಕಾಲದ ನಾಟಕಗಳ ಆದ್ಯಪುರುಷ ಅಲೆಕ್ಸಾಂಡರ್ ಹಾರ್ಡಿ (೧೫೬೯–೧೬೩೦) ಸುಮಾರು ಎಂಟುನೂರು ನಾಟಕಗಳನ್ನು ಬರೆದ. ಆದರೆ ಅವುಗಳಲ್ಲಿ ಈಗ ಲಭ್ಯವಿರುವುದು ಕೇವಲ ನಲವತ್ತು. ಜೀನ್ ಟಿ ಮೈರಟ್ (೧೬೦೪–೮೬) ಕ್ಲ್ಯಾಸಿಕಲ್ ಮಾದರಿಯ ಮೊದಲ ಗಂಭೀರ ನಾಟಕವನ್ನು ಬರೆದ. ಕಾರ್ನಿಲ್‌ನ ನೀತಿ ಆದರ್ಶಗಳ ನಾಟಕಗಳು. ರಾಸೀನನ ವಾಸ್ತವ ಭಾವ-ಸಂವೇದನೆಗಳು. ಜನರನ್ನಾಕರ್ಷಿಸಿದವಾದರೂ ಮೊಲ್ಯೇರ್‌ನ (೧೬೨೨–೭೩) ಹರ್ಷಕಗಳು (ವೈನೋದಿಕ) ಪಡೆದ ಅತ್ಯಂತ ವ್ಯಾಪಕವಾದ ಜನಪ್ರಿಯತೆಯ ಮುಂದೆ ಮರೆಯಾಗಿ ಹೋದುವು. ಮೋಲ್ಯೇರ್‌ನ ಇನ್ನೊಂದು ಹೆಸರು ಜೀನ್ ಬ್ಯಾಪ್ಟಿಸ್ಟ್ ಪೊಕೆಲಿನ್. ಈತನ ಹಲವಾರು ಶ್ರೇಷ್ಠ ನಾಟಕಗಳಲ್ಲಿ ತಾರ್ತೂಫ್ ರತ್ನಪ್ರಾಯವಾದ್ದು. ಜಗತ್ಪ್ರಸಿದ್ಧವಾದ್ದು. ಈತನ ಪ್ರಭಾವ ಯೂರೋಪಿನ ಎಲ್ಲ ನಾಟಕಕಾರರ ಮೇಲೂ ಬಿತ್ತು.

ಆಧುನಿಕ ಫ್ರೆಂಚ್ ಭಾಷೆಯ ನಿರ್ಮಾಪಕನೆನಿಸಿರುವ ಬ್ಲೇಸ್ ಪಾಸ್ಕಲ್ (೧೬೨೩–೬೨) ಈ ಕಾಲದ ಶ್ರೇಷ್ಠ ಗದ್ಯಶಿಲ್ಪಿ. ಪತ್ರಲೇಖನವೆ ಒಂದು ವಿಶೇಷ-ಸ್ವತಂತ್ರ ಸಾಹಿತ್ಯ ಪ್ರಕಾರವಾಗಿ ಬೆಳೆದದ್ದು ಈ ಶತಕದಲ್ಲೇ. ಹೇಳಿಕೊಳ್ಳುವಂಥ ಉತ್ತಮ ಕಾದಂಬರಿಗಳಾವೂ ಈ ಕಾಲದಲ್ಲಿ ಬರಲಿಲ್ಲ. ಜೀನ್ ಡಿ ಲಾಫಾಂಟೇನನ ಆರು ಸಂಪುಟಗಳ ಫೇಬಲ್ಸ್ (೧೬೬೮) ಹೆಸರಿಸಬಹುದಾದ ಒಳ್ಳೆಯ ಕೃತಿ. ನಿಕೊಲಾಸ್ ಬೋಯ್ಲೊ (೧೬೩೬–೧೭೧೧) ಕ್ಲ್ಯಾಸಿಸಿಜಮ್ಮಿನ ಬೆಂಬಲಿಗ. ಈತನ ಕಾವ್ಯಮೀಮಾಂಸೆ ಲಾ ಆರ್ಟ್ ಪೊಯೆಟಿಕ್ ಸುಮಾರು ಒಂದು ನೂರು ವರ್ಷ ಕಾಲ ಕಾವ್ಯ ವಿಮರ್ಶೆಯ ಅಧಿಕೃತವಾಣಿಯಾಗಿ ಮೆರೆಯಿತು. ಪ್ರಾಚೀನ ಕವಿಗಳ ಅನುಕರಣೆಯೇ ಸರಿ ಎಂಬ ಈತನ ಸಿದ್ಧಾಂತವನ್ನು ಮುಂದೆ ಆಧುನಿಕತೆಯ ಪ್ರತಿಪಾದಕ ಚಾರ್ಲ್ಸ್‌ಪೆರ್ರಾಲ್ಟ್ ಖಂಡಿಸಿದ. ಈ ಇಬ್ಬರ ವಾದಗಳಲ್ಲೂ ನಿಷ್ಪಕ್ಷಪಾತವಾದ ನ್ಯಾಯನಿಷ್ಕರ್ಷೆ ಕಾಣುವುದಿಲ್ಲವಾದರೂ ಆಧುನಿಕರ ಕೈಯೆ ಮೇಲಾಗಿ ಕ್ರಮೇಣ ಪ್ರಾಚೀನರ ಪ್ರಭಾವ ತಗ್ಗಿತು.

ರಾಜಾಶ್ರಯದ ಸಂಕೋಲೆಯನ್ನು ಕಡಿದೊಗೆದುದೇ ೧೮ನೆಯ ಶತಕದ ಫ್ರೆಂಚ್ ಸಾಹಿತ್ಯದ ಬಹು ದೊಡ್ಡ ಸಾಧನೆ. ದೊರೆ ೧೪ನೆಯ ಲೂಯಿಯ ಸಾವಿನೊಂದಿಗೆ ಬಹುಕಾಲದ ಒಂದು ಪರಂಪರೆಯ ಯುಗ ಮುಗಿಯಿತು. ಸಾಹಿತ್ಯದಲ್ಲಿ ಮಹತ್ತರವಾದ ಪ್ರಗತಿಯೇನೂ ಕಂಡುಬರದಿದ್ದರೂ ಸ್ವೋಪಜ್ಞ ಚೇತನ, ವೈಜ್ಞಾನಿಕ, ವೈಚಾರಿಕ ಸಂಶೋಧನೆ. ಗ್ರಂಥರಚನೆಗಳಲ್ಲಿ ಹರಿಯತೊಡಗಿದುವು.

ಸಾಮಾಜಿಕ ಮತ್ತು ಐತಿಹಾಸಿಕ ಬದಲಾವಣೆಗಳಿಗೆ ದಾರಿಕಂಡಿತು. ಫ್ರಾಂಕೊ ವಾಲ್ಟೇರ್ (೧೬೨೪-೧೭೭೮) ಮತ್ತು ಜೀನ್ ಜಾಕ್ವೆಸ್ ರೂಸೊ (೧೭೧೨-೭೮) ಇವರ ಕೃತಿಗಳು ಫ್ರಾನ್ಸಿನ ಅಂದಿನ ಸಾಮಾಜಿಕ ರಾಜಕೀಯ ದುಸ್ಥಿತಿಯನ್ನು ವಿಡಂಬಿಸಿ, ಜನತೆಯನ್ನು ಮಹಾಕ್ರಾಂತಿಗೆ ಪ್ರಚೋದಿಸಿದುವು, ಹೊಸ ಸಮಾಜದ ನಿರ್ಮಾಣದ ರೂಪ-ರೇಖೆಗಳನ್ನು ಸೂಚಿಸಿದುವು. ಲಿಸ್ಫೆಜ್, ಮಾರಿವ್ಯಾ ಮತ್ತು ಪ್ರೆವೋಸ್ಟ್ ಕಾದಂಬರಿ ಜಗತ್ತಿನಲ್ಲೂ ರೂಸೊ, ಲೆಬ್ರುನ್ ಪಿಂಡಾರೆ ಕಾವ್ಯಕ್ಷೇತ್ರದಲ್ಲೂ ಆ ಕಾಲಕ್ಕೆ ಹೆಸರಾದವರು. ಆಂದ್ರೆ ಚೆನಿಯರ್ (೧೭೬೨-೯೪) ಭಾವಗೀತೆಗಳಲ್ಲಿ ಗ್ರೀಕ್ ಕ್ಲ್ಯಾಸಿಕಲ್ ಮಾದರಿಗಳ ಸೊಗಸನ್ನು ಹೊರಹೊಮ್ಮಿಸಿದ.

೧೯ನೆಯ ಶತಕದಲ್ಲಿ ಹಲವಾರು ನೂತನ ಸಾಹಿತ್ಯ ಪಂಥಗಳು ಆರಂಭವಾದುವು. ಅವುಗಳಲ್ಲಿ ಮೊದಲನೆಯದು ರೊಮ್ಯಾಂಟಿಕ್ ಕಾವ್ಯಮಾರ್ಗ. ವ್ಯಕ್ತಿ ವಿಶಿಷ್ಟತೆಗೆ ಮನ್ನಣೆ ಕೊಡುವುದೆ ಈ ಪಂಥದ ಮುಖ್ಯ ಧ್ಯೇಯ. ಫ್ರಾಂಕೊ ಡಿ ಷಾಟುಬ್ರಿಯಾಂಡ್ (೧೭೬೮-೧೮೪೮) ಈ ಪಂಥದ ಪ್ರವರ್ತಕ. ಆಲ್ಫಾನ್ಸ್ ಡಿ ಲಾಮಾರ್ಟಿನ್ ಇದನ್ನು ಬೆಳೆಸಿದ. ವಿಕ್ಟರ್ ಹ್ಯೂಗೊ ರೊಮ್ಯಾಂಟಿಕ್ ಸಾಹಿತಿಗಳಲ್ಲಿ ಅದ್ವಿತೀಯ. ಈತನ ಕವನಗಳಲ್ಲಿನ ಶಬ್ದಸಂಪತ್ತಿನ. ವಿವಿಧ ಛಂದೋ ಪ್ರಯೋಗಗಳು ಗಣನೀಯವಾಗಿವೆ. ನಾಟಕದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲೆತ್ನಿಸಿ ವಿಫಲನಾದ. ಈತನ ಲೆಮಿಸೆರಬಲೆ, ಹಂಚ್ ಬ್ಯಾಕ್ ಆಫ್ ನಾತರ್‌ದಾಮ್ ಸುಪ್ರಸಿದ್ಧ ಕಾದಂಬರಿಗಳು.

ಸೊಗಸಾದ ಭಾವಗೀತೆಗಳನ್ನೂ ಬರೆದು ಉತ್ಕೃಷ್ಟ ನಾಟಕಗಳನ್ನು ಬರೆದು ಜನಮನದಲ್ಲಿ ನಿಂತ ಆಲ್ಫ್ರೆಡ್ ಡಿ ಮಸ್ಸೆಟ್ಸ್ (೧೮೧೦-೫೭). ಈ ಶತಕದ ಮಧ್ಯ ಭಾಗದಲ್ಲಿ ತಿಯೊ ಫಿಲೆ ಗಾಟಿಯರ ಎಂಬ ಕವಿಯ ನೇತೃತ್ವದಲ್ಲಿ ಪಾರ್ನಾಸಿಯನ್ ಕಾವ್ಯಪಂಥ ಆರಂಭವಾಯಿತು. ಈ ಕವಿಯ ಪ್ರಾತಿನಿಧಿಕ ಕಾವ್ಯಸಂಕಲನ ಇಮಾ ಎಟ್ ಕ್ಯಾಮಿ (೧೮೫೨). ಲೆಕಾಂಟೆ ಡಿ ಲಿಸ್ಲೆ, ಜೋಸ್ ಡಿ ಹೆರೆಡಿಯಾ ಮತ್ತು ಚಾರ್ಲ್ಸ್ ಬೊದಿಲೇರ್ ಈತನ ಪ್ರಮುಖ ಅನುಯಾಯಿಗಳು. ಸಲ್ಲಿ ಪ್ರುದೋಮೆ ತಾತ್ತಿಕ-ಚಿಂತನಶೀಲ ಕವಿ. ಸ್ಪಷ್ಟವಾದ ಲಲಿತವಾದ ಶೈಲಿ ಈತನದು. ಫ್ರಾಂಕೊ ಕಾಪ್ಪಿ ದಲಿತ ಜನರ ನೋವು-ನಲಿವುಗಳನ್ನು ಚಿತ್ರಿಸಿದ ಕವಿ. ಪಾರ್ಲ ವರ್ಲೇನ್ (೧೮೪೪-೯೬). ಅರ್ಥರ್ ರಿಂಬಾಡ್ (೧೮೫೪-೯೧) ಮತ್ತು ಸ್ಟೀಪೆನ್ ಮಲಾರ್ಮೆ ಸಿಂಬಾಲಿಸಮ್ ತತ್ತ್ವದ. ನವ್ಯಕಾವ್ಯದ ಪ್ರವರ್ತಕರು. ಸಾಂಕೇತಿಕತೆ, ಅಸ್ಪಷ್ಟತೆ ಇವರ ಕಾವ್ಯದ ವಿಶಿಷ್ಟ ಲಕ್ಷಣಗಳು.

ಐತಿಹಾಸಿಕ ಮತ್ತು ತೌಲನಿಕ ವಿಮರ್ಶೆಯನ್ನಾರಂಭಿಸಿದ ಅಬೆಲ್ ವಿಲ್ಲೆಮೇನ್ (೧೭೯೦-೧೮೭೦), ಅಗಸ್ಟೀನ್ ಸೇಂಟ್ ಬವ್ (೧೮೦೪-೬೯) (ಪೋರ್ಟ ರಾಯಲ್ ಪೋಸ್ಟೈರ್ಟ್ರೆಯ್ಸ್ಸಲಿಟರೇರಿಸ್ ಮತ್ತು ಲೆ ಲುಂಡಿ ಕೃತಿಗಳ ಕರ್ತೃ) ಮತ್ತು ಹಿಪ್ಪೋಲಿಟ್ ಟೇನ್ ಸಾಹಿತ್ಯ ವಿಮರ್ಶೆಯನ್ನು ಬಲಗೊಳಿಸಿದವರು.

ಫ್ರಾಂಕೊ ಗಿಜೋಟ್, ಅಡಾಲ್ಫ್ ತಿಯೆರ್ಸ್. ಜೂಲ್ಸ್ ಮಿಚ್ಲೆಟ್. ಫಸ್ಟಲ್ ಡಿ ಕೌಲಾಂಜಿ ಸುಪ್ರಸಿದ್ಧ ಇತಿಹಾಸಕಾರರು. ಇವರಲ್ಲಿ ಒಬ್ಬೊಬ್ಬರದು ಒಂದೊಂದು ಮಾದರಿಯ ದೃಷ್ಟಿ.

ಕಲಾತ್ಮಕ ರಚನೆಗೆ ಹೆಸರಾದ ಅಗಸ್ಟೀನ್‌ಸ್ಕ್ರೈಬ್ (೧೭೯೧–೧೮೬೧) ನೈತಿಕ ಹಾಗೂ ಕೌಟುಂಬಿಕ ನಾಟಕಗಳ ಕಿಮಿಲ್ ಆಜಿಯರ್. ವಿಕ್ಟೋರಿಯನ್ ಸಾರ್ಡು. ಅಲೆಕ್ಸಾಂಡರ್ ಡ್ಯೂಮಾ–ಇವರು ಪ್ರಹಸನ ಪ್ರಪಂಚದಲ್ಲಿ ಪ್ರಸಿದ್ಧರು. ಸ್ಕ್ರೈಬ್‌ನಾಲ್ಕು ನೂರಕ್ಕೂ ಮಿಕ್ಕು ನಾಟಕಗಳನ್ನು ಬರೆದ.

ಕಾದಂಬರಿ ಕ್ಷೇತ್ರ ಮಾತ್ರ ಈ ಕಾಲದಲ್ಲಿ ಅತ್ಯಂತ ಸಮೃದ್ಧವೂ ಶ್ರೀಮಂತವೂ ಆಗಿರುವುದು ಸುಸ್ಪಷ್ಟವಾಗಿದೆ. ಜಾರ್ಜ ಸ್ಯಾಂಡ್ ಎಂಬಾಕೆ ಬರೆದ ಸಾಮಾಜಿಕ ಗ್ರಾಮಜೀವನದ ರಮ್ಯ ಕಾದಂಬರಿಗಳು ಹೇರಳವಾಗಿವೆ.' ಸ್ಟಂಡಾಲ್ ಮನೋವೈಜ್ಞಾನಿಕ ಮತ್ತು ವಾಸ್ತವಿಕ ಕಾದಂಬರಿಗಳನ್ನು ಬರೆದು ಹೆಸರಾದ. ಬಾಲ್ಜಾಕ್ ಈ ಕಾಲದ ಶ್ರೇಷ್ಠ ಕಾದಂಬರಿಕಾರ. ಗಸ್ಟಾವ್ ಫ್ಲೂಬೆರ್‌ನ ಸುಪ್ರಸಿದ್ಧ ಕಾದಂಬರಿ ಮದಾಂಬಾವರಿ (೧೮೫೭) ವಾಸ್ತವಿಕತೆಯ ನಾಂದಿಯನ್ನು ಹಾಡಿತು. ಸಹಜ ನೈಸರ್ಗಿಕತೆಯ ಹೊಸಪಂಥದ ಮೊದಲಿಗ ಎಮಿಲಿ ಝೋಲಾ (೧೮೪೦–೧೯೦೨). ಈತನದು ಸತ್ತ್ವಶಾಲಿ ಬರೆಹ. ಸಣ್ಣಕಥೆಗಳಲ್ಲಿ ಗಾಯ್‌ಡಿಮೋಪಸಾ (೧೮೫೦–೯೩). ಐತಿಹಾಸಿಕ ರಮ್ಯ ಕಾದಂಬರಿಗಳಲ್ಲಿ ಅಲೆಕ್ಸಾಂಡರ್ ಡ್ಯೂಮಾ (೧೮೩೦–೭೦) ಸುವಿಖ್ಯಾತರಾಗಿದ್ದಾರೆ. ಡ್ಯೂಮಾನ ಕೌಂಟ್ ಆಫ್ ಮಾಂಟೆಕ್ರಿಸ್ಟೋ ಮತ್ತು ದಿತ್ರೀ ಮಸ್ಕಟೀರ್ಸ್ ಚಿರಕಾಲಿಕ ಕೃತಿಗಳು. ಪ್ರಾಸ್ಪರ್‌ಮೆರಿಮೀಯ (ಕೊಲಂಬಾ ಎಂಬ ಕಾದಂಬರಿ ಕಾರ್ಸಿಕಾದ ಕತೆ) ಕಾದಂಬರಿಗಳಲ್ಲಿ ಲೌಕಿಕ ತಿಳಿವಳಿಕೆ. ಸಂಕ್ಷಿಪ್ತತೆ; ಜೂಲ್ಸ್ ಮತ್ತು ಎಡ್ಮಂಡ್ ಗೊನ್ಕೋರ್ಟ ಸೇರಿ ಬರೆದ ಕಾದಂಬರಿಗಳಲ್ಲಿ ಅತ್ಯಂತ ಸೂಕ್ಷ್ಮವಾದ ಅವಲೋಕನ. ತದ್ವತ್ ಚಿತ್ರಣ ವಿಶೇಷ ಗುಣಗಳು. ಆಲ್ಫೋನ್ಸ್ ಡಾಡೆಟ್ ಉತ್ತಮ ಹಾಸ್ಯಸಾಹಿತಿ. ಆತ ಸೃಷ್ಟಿಸಿದ ತಾರಸ್ಕೋನಿನ ಟಾರ್ಟರಿನ್ ಚಿರಸ್ಮರಣೀಯ ಹಾಸ್ಯ ಪಾತ್ರ. ಡಾಡೆಟ್ಟನನ್ನು ಫ್ರಾನ್ಸಿನ ಡಿಕನ್ಸ್ ಎಂದು ಕರೆದಿದ್ದಾರೆ. ಹೀಗೆ ಹೆನ್ರಿ ಬೇಲ್ (ಸ್ಟಂಡಾಲ್.) ಪ್ರಾಸ್ಪರ್ ಮೆವಿವೀ, ಡಾಡೆಟ್, ಜೋಲಾ, ಫ್ಲೂಬೆರ್, ಗೊನ್‌ಕೋರ್ಟ, ಜೂಲ್ಸ್, ಜಿ.ಕೆ.ಹೈಸ್‌ಮನ್, ಪಿಯರೆಲೋಟಿ (ಇಂಪ್ರೆಷನಿಸ್ಟ್), ಪಾಲ್ ಬೋರ್ಗೆಟ್, ರೊಮೇನ್ ರೋಲಾ, ಮಾರ್ಸೆಲ್‌ಪ್ರೂಸ್ಟ್–ಇವರೆಲ್ಲ ಪ್ರಥಮ ಪಂಕ್ತಿಯಲ್ಲಿ ನಿಲ್ಲಬಲ್ಲ ಶ್ರೇಷ್ಠ ಕಾದಂಬರಿಕಾರರು. ವೈಜ್ಞಾನಿಕ. ಮನೋವೈಜ್ಞಾನಿಕ ಮತ್ತು ವಿಮರ್ಶಾತ್ಮಕ ವಿಶ್ಲೇಷಣೆ ಈ ಕಾದಂಬರಿಗಳಲ್ಲಿ ಪ್ರಧಾನ. ಆಧುನಿಕ ಜೀವನದ ಸಂಕೀರ್ಣತೆಯನ್ನು ಅಭಿವ್ಯಕ್ತಿಸುವ ವಿವಿಧ ತಂತ್ರಗಳ ಪ್ರಯೋಗಗಳನ್ನು ಈ ಕೃತಿಗಳಲ್ಲಿ ಕಾಣಬಹುದು. ೧೯ನೆಯ ಶತಮಾನದ ಕಡೆಯ ವರ್ಷಗಳಲ್ಲಂತೂ ಕಾದಂಬರಿ ರಚನೆ ಒಂದು ವ್ಯಾಪಾರೋದ್ಯಮವೇ ಆಯಿತು. ಅಗ್ಗದ ಜನಪ್ರಿಯತೆ, ಹಣಸಂಪಾದನೆ ಕಾದಂಬರಿಕಾರರ ಗುರಿಯಾದುವು. ರೆನೆ

ಬಾಘಿನ್‌ಪಾಲ್ ಬೋರ್ಗೆಟ್, ಅಬೆಲ್ ಹರ್ಮೈಂಟ್, ಮಾರ್ಸೆಲ್ ಪ್ರೂಸ್ಟ್ ಇವರ ಕೃತಿಗಳು ಅಸಂಖ್ಯಾತವಾಗಿ ಖರ್ಚಾದುವು. ಆದರೆ ಅವರ ಒಂದು ಕೃತಿಯೂ ವಸ್ತುನಿಷ್ಠವಾದ, ಪ್ರತಿಭಾವಪೂರ್ಣವಾದ ಸಾಹಿತ್ಯಕೃತಿ ಎನಿಸಿಕೊಳ್ಳಲಿಲ್ಲ. ಪಿಯರ್ ಲೋಟಿ (೧೮೫೦-೧೯೨೭). ಅನಾಟೋಲ್ ಫ್ರಾನ್ಸ್ (೧೮೪೪-೧೯೨೪) ರೊಮೇನ್ ರೋಲಾ (೧೮೬೬-೧೯೪೪) ೧೯ನೆಯ ಶತಕದ ಕಡೆಯ ಭಾಗದಲ್ಲಿ ಬಂದ ಶ್ರೇಷ್ಠ ಕಾದಂಬರಿಕಾರರು. ೨೦ನೆಯ ಶತಮಾನದ ಮೊದಲ ಭಾಗದಲ್ಲೂ ಇವರ ಬರೆವಣಿಗೆ ತನ್ನ ಯಶಸ್ಸನ್ನು ಉಳಿಸಿಕೊಂಡಿತ್ತು. ಲೋಟಿ ಪ್ರತಿಭಾವಂತ. ವಸ್ತುನಿಷ್ಠವಾದ ಮನೋಧರ್ಮವುಳ್ಳ ಶ್ರೇಷ್ಠ ಕಲಾವಿದ. ಆನಟೋಲ್ ಫ್ರಾನ್ಸ್ ವಿಲಕ್ಷಣ ಸ್ವಭಾವದ ದೊಡ್ಡ ಸಾಹಿತಿ. ಸ್ವೋಪಜ್ಞತೆ, ಸ್ವತಂತ್ರವಾದ ವಿಚಾರಧಾರೆ ಮುಂತಾದ ಫ್ರೆಂಚ್ ಪರಂಪರೆಯ ಶ್ರೇಷ್ಠಾಂಶಗಳು ಈತನ ಮನೋಧರ್ಮದಲ್ಲಿ ಬೆರೆತು ಹೋಗಿದ್ದುವು. ಈತನ ಪುಸ್ತಕಗಳಷ್ಟನ್ನು ಮಾತ್ರ ಓದಿದರೆ ಸಾಕು ಈತನ ನಾಡಿನ, ಈತನ ಕಾಲದ ಎಲ್ಲವನ್ನೂ ತಿಳಿದಂತಾಗುತ್ತದೆ. ಈತನ ಮಹತ್ತರ ಕೃತಿ, ಪೆಂಗ್ವಿನ್ ಐಲೆಂಡ್ ನಾಗರಿಕತೆಯ ಚರಿತ್ರೆಯ ವಿಡಂಬನೆ. ಸ್ವಿಫ್ಟ್, ವಾಲ್ಟೇರ್ ಮುಂತಾದ ಹಿರಿಯ ವಿಡಂಬನಕಾರರೂ ಮೆಚ್ಚಿ ನಮಿಸಿರುವ ಕೃತಿ. ಕಾಂಟೆಂಪೊರೆರಿ ಹಿಸ್ಟರಿ ಎಂಬ ಹೆಸರಿನ ಕಾದಂಬರಿ ಚತುಷ್ಟಯ. ದಿ ಕ್ರೈಮ್ ಆಫ್ ಸಿಲ್ವೆಸ್ಟರ್ ಬೊನಾರ್ಡ ಎಂಬುವು ಈತನ ಇತರ ಶ್ರೇಷ್ಠ ಕೃತಿಗಳು. ಫ್ರಾನ್ಸ್‌ನದು ಸರಳವಾದ, ಶುದ್ಧವಾದ ಶೈಲಿ. ವಿಚಾರಗಳು ಕ್ರಾಂತಿಕಾರಕ ಸೋಗು. ಆಷಾಡಭೂತಿತನಗಳನ್ನು ಕಂಡರೆ ಬೆಂಕಿಯಾಗುವ ಈತನ ಕೋಪ ಸಾತ್ತ್ವಿಕವಾದ್ದು. ಅದರಲ್ಲಿ ಆಕ್ರೋಶದ ಕಡುತಾಪವಿಲ್ಲ. ತಾತ್ತ್ವಿಕ ಸಮಚಿತ್ತ. ವ್ಯಂಗ್ಯ ಮತ್ತು ಆರೋಗ್ಯಕರ ಸೂಕ್ಷ್ಮ ವಿಮರ್ಶನ ದೃಷ್ಟಿ ಇವನಲ್ಲಿವೆ.

ರೊಮೆನ್ ರೋಲಾನ ಜೀನ್ ಕ್ರಿಸ್ಟೋಫೆ (ಹತ್ತು ಸಂಪುಟಗಳ ಸುದೀರ್ಘ ಕಾದಂಬರಿ) ಒಂದು ಅಮರ ಕೃತಿ.

ವಿಮರ್ಶಾ ಕ್ಷೇತ್ರದಲ್ಲಂತೂ ಫ್ರಾನ್ಸನ್ನು ಮೀರಿಸುವ ದೇಶ ಈ ಶತಕದಲ್ಲಿ ಮತ್ತೊಂದಿರಲಿಲ್ಲ. ಬಾಯ್ಲೋನಿಂದ ರೆಮಿ ಡಿ ಗೌರ್ಮಾಂಟ್‌ವರೆಗೆ ಬಂದ ಎಲ್ಲ ವಿಮರ್ಶಕರೂ ಈಚಿನ ಕಿರಿಯ ತರುಣ ವಿಮರ್ಶಕರೂ ವಿರ್ಮಶೆಯ ಸರ್ವಾಂಗೀಣ ಬೆಳವಣಿಗೆಯನ್ನು ಹಂತ ಹಂತವಾಗಿ ಸಾಧಿಸುತ್ತ ಬಂದಿದ್ದಾರೆ. ಅತ್ಯುತ್ಕೃಷ್ಟವೂ ಸೃಜನಾತ್ಮಕವೂ ಆದ ಫ್ರೆಂಚ್ ವಿಮರ್ಶೆಯ ಪ್ರಭಾವದಿಂದ ಸಾಹಿತ್ಯದ ಎಲ್ಲ ಪ್ರಕಾರಗಳೂ ಸರಿಯಾದ ರೀತಿಯಲ್ಲಿ ಬೆಳೆದುವು. ಸೇಂಟ್ ಬವ್, ರೆನಾನ್, ಟೇಯ್ನ್, ಷೆರರ್, ಸಾರ್ಸಿ-ಈ ಶ್ರೇಷ್ಠ ವಿಮರ್ಶಕರ ಪರಂಪರೆಗೆ ಈಗಲೂ ಚ್ಯುತಿ ಇಲ್ಲ. ಎಮಿಲ್ ಫಾಗ್ವೆಟ್, ಫರ್ಡಿನೆಂಡ್ ಬ್ರನೆಟಿಯೆರ್, ಜೂಲ್ಸ್‌ಲ್ಸ್ ಮೇಯ್ಟರ್, ರೆಮಿ ಡಿ ಗೌರ್ಮಾಂಟ್, ಚಾರ್ಲ್ಸ ಪೆಗ್ಯೆ, ಲಿಯೋನ್ ಡಾಡೆಟ್, ಚಾರ್ಲ್ಸ ಮೌರ್‍ರಾಸ್ ವಿಮರ್ಶಾ ಸಾಹಿತ್ಯದ ಅಧ್ವರ್ಯುರುಗಳು. ಎಮಿಲ್ ಛ್ಪರ್ಟಿಯರ್, ಅಲೇನ್,

ಹೆನ್ರಿ ಬ್ರಿಮಂಡ್, ಜೂಲಿಯನ್ ಬೆಂಡಾ ಪ್ರಸಿದ್ಧ ಸಾಹಿತ್ಯ ಪ್ರಬಂಧಕಾರರು. ಬ್ರನೆಟಿಯೆರ್, ಫಾಗ್ವೆಟ್, ಅನಾತೋಲ್ ಫ್ರಾನ್ಸ್, ಕಿರಿಯ ಪ್ರಾಯದಲ್ಲೇ ಗತಿಸಿದ ಮಾರ್ಸೆಲ್ ಷ್ವೋಬ್, ಎಮಿಲ್ ಹೆನೆಕ್ವಿನ್ ವಿಮರ್ಶಾಸಾಹಿತ್ಯವನ್ನು ಹೊಸ ಹೊಸ ದೃಷ್ಟಿಕೋನಗಳ ವಿಚಾರಧಾರೆಗಳಿಂದ ಶ್ರೀಮಂತಗೊಳಿಸಿದುದು ಮಾತ್ರವಲ್ಲ ಫ್ರೆಂಚ್ ಮತ್ತು ಇತರ ಸಮಕಾಲೀನ ಐರೋಪ್ಯ ಸಾಹಿತ್ಯಗಳ ಸಾಧನೆ. ಸಿದ್ಧಿಗಳ ಮೌಲ್ಯ ನಿರ್ಣಯವನ್ನೂ ಸಮರ್ಪಕವಾಗಿ ಮಾಡಿದರು. ಹೀಗಾಗಿ ವಿಮರ್ಶೆಯಲ್ಲಿ ಇಡೀ ವಿಶ್ವ ಸಾಹಿತ್ಯವೇ ಫ್ರೆಂಚ್ ವಿಮರ್ಶಾತತ್ವಗಳಿಗೆ ಋಣಿ.

೧೮೭೦ರಿಂದೀಚೆಗೆ ಫ್ರೆಂಚ್ ಸಾಹಿತ್ಯ ಮೊದಲಿಗಿಂತ ಹೆಚ್ಚು ಸಂಕೀರ್ಣವಾಗಿ ವಿಪುಲವಾಗಿ ಬೆಳೆದಿದೆ. ಕಾದಂಬರಿಗಳ ವೈವಿಧ್ಯ ಹಾಗೂ ಶಾಖೋಪಶಾಖೆಗಳಾಗಿ ಬೆಳೆದು ಬಂದ ಪ್ರಯೋಗಗಳಂತೂ ಯಾವ ವರ್ಗೀಕರಣಕ್ಕೂ ಸಿಕ್ಕುವುದಿಲ್ಲ. ಕವಿಯೂ ಆಗಿದ್ದ ಜೂಲ್ಸ್ ರೊಮೇನನ ಲೆ ಹೋಮೆ ಡಿ ಬಾನ್ ವೊಲೊಂಟೆ ೨೭ ಸಂಪುಟಗಳ ಬೃಹತ್ ಕಾದಂಬರಿ. ಈತನ ನಾಕ್ (೧೯೨೩) ಎಂಬ ಹೆಸರಿನ ವೈದ್ಯವೃತ್ತಿಯನ್ನು ವಿಡಂಬಿಸುವ ಸಾಮಾಜಿಕ ಕಾದಂಬರಿ ಬಹು ಯಶಸ್ವಿಯಾಯಿತು. ಆಂದ್ರೆ ಷೀಡ್ ಪ್ರಭಾವ ೨೦ನೆಯ ಶತಕದ ಪೂರ್ವಾರ್ಧವನ್ನೆಲ್ಲ ವ್ಯಾಪಿಸಿತು. ಪಿಯರೆ ಹಂಪ್ ಎಂಬ ಕಾದಂಬರಿಕಾರ ನಾಯಕ ಅಥವಾ ಕೇಂದ್ರ ವ್ಯಕ್ತಿಯೇ ಇಲ್ಲದ ಕಾದಂಬರಿಯ ಪ್ರಯೋಗ ಮಾಡಿದೆ. ಇಲ್ಲಿ ಕೈಗಾರಿಕಾ ಕ್ಷೇತ್ರ ಹಿನ್ನೆಲೆ, ಮಾನವೀಯ ಮೌಲ್ಯಗಳಿಗೆ ಮಾತ್ರ ಪ್ರಾಮುಖ್ಯತೆ. ಜೀನ್ ರಿಚರ್ಡ ಬ್ಲೋಷ್, ಯೂಜಿನ್ ಮಾಂಟ್‌ಪೋರ್ಟ, ಜೋಲಾನ ಮಾದರಿಯನ್ನೇ ಅನುಸರಿಸಿದರು. ಜೀನ್ ಷ್ಲೂಂಬರ್ಗರ್‌ನ (೧೮೭೭) ಸೇಂಟ್ ಸ್ಯಾಟರ್ನಿನ್ ಈ ಕಾಲದ ಶ್ರೇಷ್ಠ ಕಾದಂಬರಿಗಳಲ್ಲೊಂದು.

ಕೊಲೆಟ್ಟೆ ೨೦ನೆಯ ಶತಕದ ಪೂರ್ವಾರ್ಧದ ಅತ್ಯಂತ ಜನಪ್ರಿಯ ಕಾದಂಬರಿಕಾರ. ಆಲ್ಬರ್ಟ ಕಾಮು ಒಬ್ಬ ಪ್ರಭಾವಶಾಲಿ ಬರೆಹಗಾರ. ಈತನ ಎಲ್ಲ ಕಾದಂಬರಿಗಳ ಪಲ್ಲವಿ. ವ್ಯಕ್ತಿಯ ಸಮಸ್ಯೆ ಮತ್ತು ಆಗುಹೋಗುಗಳೆಲ್ಲ ಹೇಗೆ ಸಮಾಜ ವ್ಯವಸ್ಥೆಯ ಒಂದು ಅವಿಭಾಜ್ಯ ಭಾಗವಾಗಿರುತ್ತವೆ ಎಂಬುದನ್ನು ತೋರಿಸುವುದೇ. ಈತನ ಕಾಲಿಗುಲ ಹಾಗೂ ಇತರ ಕೃತಿಗಳು ೧೯೬೫ರ ಈಚಿನ ಕನ್ನಡ ಲೇಖಕರ ಮೇಲೂ ಹೆಚ್ಚಿನ ಪರಿಣಾಮ ಬೀರಿವೆ. ೧೯೫೬ರಲ್ಲಿ ಪ್ರಕಟವಾದ ಲಾ ಷೂಟ್ ಮಾನವನ ಕೋಟಲೆ-ಸಂಕಷ್ಟಗಳನ್ನು ಕುರಿತ ಕಾದಂಬರಿ. ಆಂದ್ರೆ ಷೀಡ್ ಇನ್ನೊಬ್ಬ ಅತ್ಯಂತ ಪ್ರಭಾವಶಾಲಿ ಕಾದಂಬರಿಕಾರ. ಈತನ ಮನೋವೈಜ್ಞಾನಿಕ ಕಾದಂಬರಿಗಳು ಮತ್ತು ಈ ಕಾಲದ ವಿಮರ್ಶಾ ಮಾನದಂಡವನ್ನೇ ನಿರ್ಮಿಸಿದ ಸಾಹಿತ್ಯ ವಿಮರ್ಶಾ ಲೇಖನಗಳು ಫ್ರೆಂಚ್ ಸಾಹಿತ್ಯಕ್ಕೆ ಬಹುದೊಡ್ಡ ಕಾಣಿಕೆಗಳು. ಈತ ಮೊದಲು ಮಲ್ಲಾರ್ಮೆ. ವೇಲರಿ. ಮೆಟರ್‌ಲಿಂಕ್‌ರಿಂದ ಪ್ರಭಾವಿತನಾಗಿ ಸಂಕೇತ ವಿಧಾನದ ಕೃತಿಕಾರನಾಗಿದ್ದ.

ಜಾರ್ಜಸ್ ದುಹಾಮೆಲ್ (ಮೊದಲ ಮಹಾಯುದ್ಧರಂಗದ ವೈದ್ಯಶಿಬಿರದಲ್ಲಿ ೨.೩೦೦ ಶಸ್ತ್ರಚಿಕಿತ್ಸೆಗಳನ್ನು ಮಾಡಿದ ಮಹಾ ಶಸ್ತ್ರವೈದ್ಯ). ಒಂದು ಕಾದಂಬರಿ ಸರಣಿಯನ್ನೇ ಬರೆದ. ರೋಜರ್ ಮಾರ್ಟಿನ್ ಡು ಗಾರ್ಡನ ಹತ್ತು ಸಂಪುಟಗಳ ಕಾದಂಬರಿ ದಿ ತಿಬಾಲ್ಟ್ಸ್ ೧೯೩೭ರ ನೊಬಲ್ ಪಾರಿತೋಷಕ ಗಳಿಸಿತು. ಈ ಇಬ್ಬರೂ ಬದಲಾಗುತ್ತಿರುವ ಸಮಾಜ ಜೀವನವನ್ನೂ ಹಳೆಯ ಕುಟುಂಬಗಳು ನಶಿಸಿ ಹೋಗಿ ಹೊಸ ಬಗೆಯ ಜೀವನ ಬರುತ್ತಿರುವುದನ್ನೂ ಚಿತ್ರಿಸಿದ್ದಾರೆ. ಆಂದ್ರೆ ಮೋರ್ವಾ. ಜೀನ್‌ಗಿಯೊನೊ (೧೮೯೫) ಜೂಲಿಯನ್ ಗ್ರೀನ್, ರೇಮುಜ಼್, ಹಾಸ್ಯ ಕಾದಂಬರಿ, ನಾಟಕಗಳನ್ನು ಬರೆದು ಕೀರ್ತಿ ಪಡೆದ ಮಾರ್ಸೆಲ್ ಎಯ್ಮಿ (೧೯೦೨), ಮಾರ್ಸೆಲ್ ಪ್ಯಾಗ್ನೊಲ್ ಇತರ ಹೆಸರಾಂತಕಾರರು. ಕಿರಿಯ ಪೀಳಿಗೆಯವರಲ್ಲಿ ಫ್ರಾಂಕೊಸೇಗಾನ್ (೧೯೩೫) ಗಮನ ಸೆಳೆವ ಕಾದಂಬರಿಕಾರ.

(ಕೆ.ಬಿ.ಪಿ.)

೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಬಲವಾದ 'ಸಿಂಬಲಿಸ್ಟ್' ಸಿದ್ಧಾಂತವು ಸಾಂಪ್ರದಾಯಿಕ ಪದ್ಯರೂಪಗಳಿಂದ ಬಿಡುಗಡೆಯನ್ನು ತಂದಿತು. ಕವಿಯ ದರ್ಶನಕ್ಕೆ ಪ್ರಾಧಾನ್ಯ ನೀಡಿತು. ೨೦ನೆಯ ಶತಮಾನದ ಪ್ರಾರಂಭದಲ್ಲಿ ಎಮಿಲಿ ವರ್‌ಹಂಟ್, ಷೀನ್ ವ್ರೆರಿಯಾಸ್, ಹೆನ್ರಿಡಿ ಕೇನ್ಯೆ ಎಲ್ಲರೂ 'ಸಿಂಬಲಿಸ್ಟ್' ಪಂಥದಲ್ಲಿಯೇ ಪ್ರಾರಂಭಿಸಿ ಅನಂತರ ಬೇರೆ ಸಿದ್ಧಾಂತಗಳಿಗೆ ತಿರುಗಿದರು.

೧೮೯೦ರ ವರೆಗೆ ಅಂದ್ರೆ ಆಂತಾಯಿನ್‌ನ 'ಥಿಯೇಟರ್ ಲಿಬ್ರೆ' 'ನ್ಯಾಚುರಲಿಸ್ಟ್' ನಾಟಕಕ್ಕೆ ಪ್ರೋತ್ಸಾಹ ನೀಡಿತ್ತು. ಅನಂತರ ಇದು ವಾಸ್ತವಿಕ (ರಿಯಲಿಸ್ಟ್) ನಾಟಕಕಾರರಿಗೆ ಪ್ರೋತ್ಸಾಹ ನೀಡಿತು. ಜಾರ್ಜ್‌ಸ್ ಪೋರ್ಪೋರಿಷೆ, ಹೆನ್ರಿ ಬಟೇಟಿ, ಹೆನ್ರಿ ಬರ್ನ್ಸ್‌ಟೇನ್ ಮೊದಲಾದವರು ಈ ಪಂಥದವರು. ಅರೋಲೀನ್‌ಲುನೆಪೊ ತನ್ನ ನಾಟಕಮಂದಿರದಲ್ಲಿ ಮಾರಿಸ್ ಮೆಟರ್‌ಲಿಂಕ ಬರೆದಂಥ 'ಸಿಂಬಲಿಸ್ಟ್'ರ ನಾಟಕಗಳಿಗೆ ಪ್ರೋತ್ಸಾಹ ನೀಡುತ್ತಿದ್ದ. ಈ ದಿನಗಳ ನಂತರ ಸಮರ್ಥ ನಾಟಕಕಾರರು ಕಾಣಿಸಿಕೊಂಡರು. ಪ್ರಸಿದ್ಧ ನಾಟಕಕಾರ ಷೀನ್ ಅಸೌಲಿಯ ನಾಟಕಗಳ ವಸ್ತು, ಭ್ರಷ್ಟ ಜಗತ್ತಿನಲ್ಲಿ ಮನುಷ್ಯನ ಮುಗ್ಧತೆಯ ನಾಶ. ಇವನೂ ಇವನ ಕಾಲದ ಇತರ ನಾಟಕಕಾರರೂ ಪ್ರಾಚೀನ ಪೌರಾಣಿಕ ಕಥೆಗಳನ್ನು ಆಧುನಿಕ ರೂಪದಲ್ಲಿ ಬಳಸಿಕೊಂಡರು. ಪಾಲ್ ಕೇನೇಲ್ ವಾಸ್ತವಿಕ ನಾಟಕಗಳಲ್ಲಿ ಸಮಕಾಲೀನ ಸಮಸ್ಯೆಗಳನ್ನು ವಿಶ್ಲೇಷಿಸಿದ. ಹೆನ್ರಿ ದ ಮಾಸಕೇ ಐತಿಹಾಸಿಕ ನಾಟಕಗಳನ್ನು ಬರೆದ. ಆಧುನಿಕ ಜಗತ್ತಿನಲ್ಲಿ ಧರ್ಮವು ಸೃಷ್ಟಿಸುವ ಬಿಕ್ಕಟ್ಟುಗಳನ್ನು ವಿಶ್ಲೇಷಿಸಿದ.

ಆಲ್ಬರ್ಟ್ ಕಾಮು ಅಸಂಗತ ಜಗತ್ತಿನಲ್ಲಿ ಮನುಷ್ಯನ ಸ್ಥಿತಿಯನ್ನು ಶೋಧಿಸಿದ. ಷೀನ್‌ಪಾಲ್ ಸಾರ್ತ್ರ್ ಅಸ್ಮಿತೆ ಸ್ವಾತಂತ್ರ್ಯ, ಮನುಷ್ಯನ ಹೊಣೆಗಾರಿಕೆ–ಇಂಥ ವಸ್ತುಗಳನ್ನು ಆರಿಸಿಕೊಂಡ. ಆನ್‌ತನಿಸ್ ಆರ್‌ಟೋ 'ಥಿಯೇಟರ್ ಆಫ್ ಕ್ರೂಯೆಲ್ಟಿ' ಯನ್ನು ಪ್ರಾರಂಭಿಸಿದ. ಇವನ ನಾಟಕಗಳು ಮೂಲಭೂತವಾಗಿ ಮನುಷ್ಯನಲ್ಲಿರುವ

ಕ್ರೌರ್ಯವನ್ನು ಬಯಲಿಗೆಳೆಯುತ್ತವೆ. ಷೀನ್ ಜೆನ್ನೆ ಇವನ ಮೇಲ್ಪಂಕ್ತಿಯನ್ನನುಸರಿಸಿ 'ದ ಮೆಯ್ಡ್‌ನ್' (೧೯೪೭) ಮತ್ತು 'ದ ಬಾಲ್ಕನಿ' (೧೯೫೭)ಗಳಂಥ ನಾಟಕಗಳನ್ನು ಬರೆದ. (ಇಲ್ಲಿ ಕೊಟ್ಟಿರುವುದು ಫ್ರೆಂಚ್ ನಾಟಕಗಳ ಹೆಸರುಗಳ ಇಂಗ್ಲಿಷ್ ಅನುವಾದಗಳನ್ನು). ಯಜೀನ್ ಆಯೊನೆಸ್ಕೆನ ಪ್ರಥಮ ನಾಟಕ (ದ ಬಾಲ್ಡ್ ಪ್ರೈಮ ಡೊನ, ೧೯೫೦) ಸಂಭಾಷಣೆ, ಕಥಾವಸ್ತು, ಪಾತ್ರಸೃಷ್ಟಿ ಎಲ್ಲ ಅಂಶಗಳಲ್ಲಿ ಎಲ್ಲ ನಿರೀಕ್ಷೆಗಳನ್ನು ಹುಸಿಗೊಳಿಸಿತು. ಐರ್ಲೆಂಡಿನ ಸಾಹಿತಿ ಸ್ಯಾಮ್ಯುಎಟ್ ಟಕೆಟ್‌ನ 'ಎನ್ ಅಟೆಂಡೆಂಟ್ ಮೂಡೆಯು' ೧೯೫೩ರಲ್ಲಿ ಪ್ರದರ್ಶನವಾಯಿತು. ಇವುಗಳೊಂದಿಗೆ 'ಅಸಂಗತ ನಾಟಕ ಮಂದಿರ' (ಅಬ್‌ಸರ್ಡ್ ಥಿಯೇಟರ್) ಪ್ರಾರಂಭವಾಯಿತು.

ಕಾದಂಬರಿ ಕ್ಷೇತ್ರದಲ್ಲಿ, ಪ್ರೊಸ್ಟನ 'ರಿಮೆಂಬ್ರೆನ್ಸ್ ಆಫ್ ಥಿಂಗ್ಸ್ ಪಾಸ್ಟ್' (೧೯೧೩-೨೭) ವಿಶಿಷ್ಟ ಸಾಧನೆ, ಕಾಲ, ನೆನಪು, ವಾಸ್ತವತೆ ಮತ್ತು ಸೃಜನ ಪ್ರಕ್ರಿಯೆ ಇವೆಲ್ಲವುಗಳ ಶೋಧನೆ ಈ ಬೃಹತ್ ಕಾದಂಬರಿ. ಆಂದ್ರ ಜ಼ೇಡ್, ಸಾರ್ತ್ರ್ ಮೊದಲಾದ ಕಾದಂಬರಿಕಾರರ ಮೇಲೆ ಇದು ಪ್ರಭಾವ ಬೀರಿತು. ಜ಼ೇಡನ 'ದ ಕೌಂಟರ್-ಫಿಲರ್ಸ್ (೧೯೨೬)ನಲ್ಲಿ ಕಾದಂಬರಿಯೊಳಗೊಂದು ಕಾದಂಬರಿ ಇದೆ, ಈ ಕಾದಂಬರಿಯು ಇನ್ನೂ ಬರೆಯಬೇಕಾಗಿರುವ ಕಥೆಯನ್ನು ಹೇಳುತ್ತದೆ. ಸಾರ್ತ್ರ್‌ನ 'ನಾಸಿಯಾ' (೧೯೩೮' ಸತ್ಯ ಮತ್ತು ಅಸ್ತಿತ್ವದ ಸಮಸ್ಯೆಯನ್ನು ವಿಶ್ಲೇಷಿಸುತ್ತದೆ.

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಕಾದಂಬರಿಯು ಹಲವಾರು ಆಸಕ್ತಿಗಳ ಶೋಧನೆಯ ಸಾಧನವಾಯಿತು. ಕಾಮುನ ಬರೆದ 'ದ ಔಟ್‌ಸೈಡರ್' (೧೯೪೨), ಮತ್ತು ಸಾರ್ತ್ರ್ ಬರೆದ 'ದ ಪಾತ್ಸ್ ಆಫ್ ಫ್ರೀಡಂ' (೧೯೪೫-೪೯) ಕಾದಂಬರಿ ಪ್ರಿಯ ವಿಶ್ವದಲ್ಲಿ ಮನುಷ್ಯನ ಸ್ಥಿತಿಯನ್ನು ಪೃಥಕ್ಕರಿಸಿದವು. ಜಾರ್ಜಸ್ ಬರ್ನಾನೊ, ಆಂದ್ರೆ ಜ಼ೇಡ್ ಇವರ ಕಾದಂಬರಿಗಳು ಮಾನಸಿಕ ಅಥವಾ ಆಧ್ಯಾತ್ಮಿಕ ಒಳತೋಟಿಗಳನ್ನು ವಿಶ್ಲೇಷಿಸಿದವು. ಸಿಮೊನ್ ದಿ ಬ್ಯುನೋನ 'ದ ವುಮನ್ ಡಿಸ್ಟ್ರಾಯ್ಡ್' ಮಹಿಳೆಯ ಸ್ಥಿತಿಯನ್ನು ವಿಶ್ಲೇಷಿಸಿತು.

ಮೈಕೆಲ್ ಬುತ; ಮಾರ್ಗರೈಟ್ ಡ್ಯೂರಾಸ್, ಆಲೇನ್ ರೋಬ್-ಗಿಫೆ ನಕಾಲೆ ಸಕಾ 'ಹೊಸ ಕಾದಂಬರಿ'ಯ ಪ್ರವರ್ತಕರು. ಇವರ ಕಾದಂಬರಿಗಳಲ್ಲಿ ಸಂಪ್ರದಾಯಿಕ ಕಾದಂಬರಿಗಳಲ್ಲಿನಂತೆ ಕಾದಂಬರಿಕಾರನೇ ಕಥೆ ಹೇಳಿ, ಪಾತ್ರಗಳನ್ನು ಚಿತ್ರಿಸಿ, ಘಟನೆಗಳನ್ನು ನಿರೂಪಿಸಿ ಓದುಗನಿಗೆ ಸಿದ್ಧತೆ ಮಾಡಿಕೊಡುವುದಿಲ್ಲ. ಓದುಗನೂ ಶ್ರಮಪಡಬೇಕು. 'ಟೆಲ್ ಕೈಲ್' ಎನ್ನುವ ಸಾಹಿತ್ಯದ ಪತ್ರಿಕೆಯ ಸ್ಥಾಪಕ ಫಿಲಿಸೆ ಸೋಟಸ್, ಕಾದಂಬರಿಯ ಪಠ್ಯ ಕಾದಂಬರಿಕಾರನ ಅಭಿವ್ಯಕ್ತಿಯಲ್ಲ, ಅದೊಂದು ಭಾಷೆಯ ಸ್ವತಂತ್ರ ಸಾಹಸ, ನುರಿತ ಓದುಗನು ಅದನ್ನೇ ಅನುಭವಿಸಬೇಕು ಎನ್ನುತ್ತಾನೆ.

೧೯೫೦ರಿಂದೀಚೆಗೆ ಅನೇಕ ಮಹಿಳೆಯರು ಕಾದಂಬರಿ ಪ್ರಕಾರದಲ್ಲಿ ವಿಶೇಷ ಯಶಸ್ಸನ್ನು ಗಳಿಸಿದ್ದಾರೆ. 'ಹೆಡ್ರಿಂಗನ ನೆನಪುಗಳು' (೧೯೫೧) ಎನ್ನುವ ಐತಿಹಾಸಿಕ ಕಾದಂಬರಿಯನ್ನು ಬರೆದ ಮಾರ್ಗರೈಟ್ ಯೋಸೆನ್ನೊ (ಫ್ರೆಂಚ್ ಅಕಾಡೆಮಿಗೆ ಆಯ್ಕೆಯಾದ ಮೊದಲನೆಯ ಮಹಿಳೆ ಇವಳು), 'ಗುಡ್ ಮಾರ್ನಿಂಗ್ ಸ್ಯಾಡ್‌ನೆಸ್' (೧೯೫೪) ಬರೆದ ಫ್ರಾನ್‌ಸೋ ಸಗಾನ್ ಮೊದಲಾದವರು ತಮ್ಮ ಕಾಲದ ಕಾದಂಬರಿಕಾರರ ಪ್ರಥಮ ಪಂಕ್ತಿಯಲ್ಲಿದ್ದವರು. (ಎಲ್.ಎಸ್.ಎಸ್.)

ಕಾವ್ಯದಲ್ಲಿ ಪಾಲ್ ವೇಲರಿ (೧೮೭೧–೧೯೪೫) ಹಾಗೂ ಅಪಾಲಿನೇರ್ ಅವರ ಅನಂತರ ಜೂಲ್ಸ್ ಸೂಪರ್‌ವಿಯೆಲ್ಲೆ (೧೮೮೪) ಶ್ರೇಷ್ಠ ಕವಿಗಳು ಎನಿಸಿದ್ದಾರೆ. ಈ ಕಾಲದಲ್ಲಿ ಕವಯಿತ್ರಿಯರು ಹಲವರಿದ್ದರೂ ಒಬ್ಬರಾದರೂ ಪ್ರಥಮ ದರ್ಜೆಯ ಕವಯಿತ್ರಿ ಎನಿಸಲಿಲ್ಲ. ಸಿಡೋನಿ ಗೇಬ್ರಿಯಲ್ ಕೋಲೆಟ್ಟೆ (೧೮೭೩–೧೯೫೪) ಬಹುಜನರ ಮೆಚ್ಚುಗೆ ಪಡೆದ ಕವಯಿತ್ರಿ. ಕಾದಂಬರಿಕಾರ್ತಿಯಾಗಿ ಇನ್ನೂ ಹೆಚ್ಚು ಗಣ್ಯಳು. ಕೌಂಟೆಸ್ ಅನ್ನಾ ಎಲಿಸಬೆತ್ ಡಿ ನೊವಾಯಿಲ್ಲೆ (೧೮೭೬–೧೯೩೩) ಸುಪ್ರಸಿದ್ಧಳಾದ ಕವಯಿತ್ರಿ.

ಅತಿವಾಸ್ತವಿಕತಾವಾದ (ಸರ್ರಿಯಲಿಸಮ್) ಮತ್ತು ಆದರ್ಶರೂಪದ ಕಮ್ಯೂನಿಸಮ್ ಫ್ರೆಂಚ್ ಕಾವ್ಯದ ಪ್ರಧಾನಶಕ್ತಿಗಳಾಗಿ ತಲೆದೋರಿದುವು. ಆಂದ್ರೆ ಬ್ರಿಟೋನ್ (೧೮೯೬–) ಈ ಪಂಥದ ನಾಯಕ. ೧೯೪೦ರಲ್ಲಿ ನವ ಅತಿವಾಸ್ತವಿಕತಾವಾದ (ನಿಯೊಸರ್ರಿಯಲಿಸಮ್) ಆರಂಭವಾಯಿತು. ವೇಲರಿಯ ಅನಂತರ ಅಂಥ ದೊಡ್ಡ ಕವಿಯಾರೂ ಬರಲಿಲ್ಲ. ಪಂಥಕ್ಕಿಂತ ತಮ್ಮದೇ ಆದ ವ್ಯಕ್ತಿ ವೈಶಿಷ್ಟ್ಯವನ್ನು ಮೆರೆದ ಕವಿಗಳೇ ಹೆಚ್ಚು ಗಮನಾರ್ಹರಾಗಿದ್ದಾರೆ.

ಅಸ್ತಿತ್ವವಾದದಲ್ಲೆ (ಎಕ್ಸಿಸ್ಟೆಂಷಿಯಲಿಸಮ್) ಕ್ರೈಸ್ತ (ಆಸ್ತಿಕ) ಮತ್ತು ನಾಸ್ತಿಕ ಎಂದು ಎರಡು ಪಂಥಗಳಾದವು. ಗೇಬ್ರಿಯಲ್ ಮಾರ್ಸೆಲ್ (೧೮೮೯–) ಮೊದಲನೆಯ ವರ್ಗಕ್ಕೆ ಸೇರಿದ ಗಣ್ಯನಾದರೆ ಎರಡನೆಯ ಗುಂಪಿಗೆ ಜೀನ್ ಪಾಲ್ ಸಾರ್ತ್ರ್ (೧೯೦೫–) ಸೇರುತ್ತಾನೆ. ಆತನ ಸಿದ್ಧಾಂತ ಹೊಸಮಾರ್ಗವನ್ನೇ ತೆರೆಯಿತು. ಕಾವ್ಯ, ಕಾದಂಬರಿ, ಪ್ರಬಂಧ, ಉಪನ್ಯಾಸ–ಈ ಎಲ್ಲ ಪ್ರಕಾರಗಳಲ್ಲೂ ಈತ ತನ್ನ ಜೀವನ ತತ್ತ್ವಗಳನ್ನು ನೂತನ ದೃಷ್ಟಿಕೋನವನ್ನು ಅಭಿವ್ಯಕ್ತಿಸಿದ್ದಾನೆ. ಮೂಲತಃ ಈತ ಮಾನವತಾವಾದಿ. ಮಾರಿಸ್ ಮೆರ್ಲೊ ಪೋಂಟಿ (೧೯೦೮–), ಸೈಮೋನ್ ಡಿಬೋವಾಯ್ (೧೯೦೮–). ವಿ–ನಾಟಕಕಾರ ಜೀನ್ ಗೆನೆಟ್ ಸಾರ್ತ್ರ್ ತತ್ತ್ವಗಳ ಪ್ರತಿಪಾದಕರಾಗಿ ಯಶಸ್ವಿ ಕಾದಂಬರಿಗಳನ್ನು ಬರೆದರು.

ಕ್ರೈಸ್ತ ಕ್ಯಾಥೋಲಿಕ್ ಧರ್ಮದ ಪುನರುಜ್ಜೀವನ ಈ ಶತಕದ ಮಹತ್ತರ ಘಟನೆ. ಇದರ ಪ್ರಭಾವ ಸಾಹಿತ್ಯದ ಎಲ್ಲ ಪ್ರಕಾರಗಳ ಮೇಲೂ ಪ್ರಬಲವಾಗಿ ಬಿದ್ದರೂ ನಿರೀಕ್ಷಿಸಿದ ಮಹತ್ತರ ಫಲಕೊಡಲಿಲ್ಲವೆಂದು ಸಮರ್ಥ ವಿಮರ್ಶಕರ

ಅಭಿಪ್ರಾಯ. ಜೂಲ್ಸ್ ಲೇಮೇಯ್ಟರ್, ಮಾರಿಸ್ ಬ್ಯಾರೆಸ್ ಹೆಸರಿಗೆ ಕ್ಯಾಥೋಲಿಕರಾದರೂ ನಿಜದಲ್ಲಿ ಸಂದೇಹವಾದಿಗಳಾಗಿದ್ದರು. ಆಗಿನ ಹಲವಾರು ಸಾಹಿತಿಗಳು ಇದೆ ಸ್ವಭಾವದವರು.

ಎರಡನೆಯ ಮಹಾಯುದ್ಧದ ಅನಂತರ ಅನೇಕ ಸಾಹಿತಿಗಳು ರಾಜಕಾರಣಕ್ಕೆ ತಿರುಗಿದರು. ಸಾರ್ತ್ರ್, ಆರಾಗಾನ್, ಎಲ್ಯೂಯರ್ಡ್ ಲೆ-ಫೆವೆಬ್ರೆ, ಟ್ರೆಸ್ಟಾನ್ ಜಾರಾ, ಏಯ್ಮಿಸಿಜೇರ್-ಮುಂತಾದವರು ಈ ರೀತಿ ರಾಜಕೀಯ ಪ್ರಜ್ಞೆಯಲ್ಲಿ ಆಸಕ್ತರಾಗಿ ಮಾರ್ಕ್ಸ್ ತತ್ತ್ವಗಳನ್ನು ಬೆಂಬಲಿಸಿದರು. ಐರಿಷ್ ಮೂಲದ ಸ್ಯಾಮ್ಯುಯೆಲ್ ಬೆಕಟ್ಟನ ನಾಟಕಗಳು ದೊಡ್ಡ ವಿವಾದವನ್ನೇ ಎಬ್ಬಿಸಿದುವು. ಈತನದು ಒಂದು ರೀತಿಯಲ್ಲಿ ನೀತಿವಾದ. ಫ್ಯಾಸಿಸ್ಟ್ ವಿರೋಧಿ ಮಾರ್ಕ್ಸಿಸ್ಟ್ ಸಾಹಿತಿಗಳು ಹೆಚ್ಚುತ್ತಿರುವುದು ಒಂದು ಲಕ್ಷಣವಾದರೆ, ಆಂದ್ರೆ ಮಾಲ್‌ರಾನಂಥ ಕಾದಂಬರಿಕಾರರು ಕಮ್ಯೂನಿಸಮ್ ತತ್ತ್ವಗಳಲ್ಲಿ ಭ್ರಮನಿರಸನ ಹೊಂದಿ ಮತ್ತೆ ಪ್ರಜಾಸತ್ತೆಯ ಕಡೆ ವಾಲುವುದು ಇನ್ನೊಂದು ಲಕ್ಷಣ. ಮಾಲ್‌ರಾನ ಮ್ಯಾನ್ಸ್‌ಫೇಟ್ ಎಂಬ ಕೃತಿ ಚೀನಿ ಅಂತಃಕಲಹವನ್ನು ಕುರಿತ, ಸತ್ಯ, ಸತ್ತ್ವರಡೂ ಹುರಿಗೊಂಡು ಮೂಡಿದ ಕಾದಂಬರಿ.

೨೦ನೆಯ ಶತಕದ ಫ್ರೆಂಚ್ ನಾಟಕರಂಗದಲ್ಲಿ ಸಾಕಷ್ಟು ರಭಸದ ಚಟುವಟಿಕೆಗಳು ಕಂಡು ಬಂದರೂ ಗುಣಮಟ್ಟದಲ್ಲಿ ಕಾವ್ಯದಲ್ಲಿ ಅದಕ್ಕಿಂತ ಹೆಚ್ಚಾಗಿ ಕಾದಂಬರಿಯಲ್ಲಿ ಪಡೆದ ಉತ್ಕೃಷ್ಟತೆಯನ್ನು ಫ್ರೆಂಚ್ ಸಾಹಿತಿಗಳು ನಾಟಕದಲ್ಲಿ ಸಾಧಿಸಲಿಲ್ಲ. ಅದಕ್ಕೆ ಕಾರಣ ಪ್ರತಿಭಾವಂತ ನಾಟಕಕಾರರೇ ಇಲ್ಲದಿದ್ದುದು ಒಂದು. ನಾಟಕ ಕ್ಷೇತ್ರದಲ್ಲೂ ಸುಪ್ರಸಿದ್ಧರಾದ ಕ್ಲಾಡೆಲ್, ಜೂಲ್ಸ್ ರೋಮೇನ್ಸ್, ಬ್ಲಾಖ್ ರೋಮೇನ್ ರೋಲಾ, ಗೇಬ್ರಿಯಲ್ ಮಾರ್ಸೆಲ್, ಮಂತರ್, ಲ್ಯಾಂಟ್, ಗಿರಡು, ಕಾಕ್ಟ್ಯೂ, ಸೂಪರ್ ವಿಯೆಲ್ಲೆ, ಸಾರ್ತ್ರ್ ಮತ್ತು ಕಾಮು ಮೂಲಭೂತವಾಗಿ ಕಾವ್ಯ, ಕಾದಂಬರಿ ಮಾಧ್ಯಮಗಳಲ್ಲಿ ಸಮರ್ಥರಾದವರು. ನಾಟಕ ಕಲೆಗೆ ಒಗ್ಗದ, ಪೋಷಕವಾಗದ ಕಾವ್ಯದ, ಕಾದಂಬರಿಯ ಅಂಶಗಳನ್ನು ಬೆರೆಸಿ ನಾಟಕ ಅದರ ಸಹಜ ಧರ್ಮದಂತೆ ಪ್ರದರ್ಶನ ಕಲೆಯಾಗುವುದನ್ನು ಹಾಳು ಮಾಡಿ ಕೇವಲ ಶ್ರವ್ಯ ನಾಟಕವಾಗಿ ಉಳಿಯುವಂತೆ ಮಾಡಿದುದು ಇವರು ಎಸಗಿದ ದೊಡ್ಡ ತಪ್ಪು. ಕಾದಂಬರಿಯಲ್ಲಿ ಇಲ್ಲವೆ ಪ್ರಬಂಧಗಳಲ್ಲಿ, ಕಾವ್ಯದಲ್ಲಿ ಶ್ರೇಷ್ಠವಾಗಿ ಕಾಣಬಹುದಾದ ಅಂಶ ಅದು ಎಷ್ಟೇ ಚೆನ್ನಾಗಿದ್ದರೂ ನಾಟಕಕ್ಕೆ ಮಾರಕವಾಗುವ ಸಂಭವವುಂಟು. ನಾಟಕಕ್ಕೆ ಅತಿಕ್ರಮ ಪ್ರವೇಶ ಮಾಡಿದ ಈ ಕಾದಂಬರಿಕಾರರು, ಕವಿಗಳು ಉತ್ತಮ ನಾಟಕಕಾರರೂ ಆಗಿದ್ದಿದ್ದರೆ ಪರಿಣಾಮ ಬೇರೆಯೇ ಆಗುತ್ತಿತ್ತು, ಅವರ ಪ್ರಭಾವ ಅತ್ಯಂತ ಪ್ರಬಲವಾಗಿದ್ದದ್ದರಿಂದ, ನಾಟಕವೇ ಸಹಜ ಮಾಧ್ಯಮವಾಗಿದ್ದ ನಾಟಕಕಾರರೂ ಅದೇ ಪ್ರಭಾವಕ್ಕೊಳಗಾಗಿ ಅಂಥವೇ ತಪ್ಪುಗಳನ್ನು ಮಾಡಿದರು. ಎಡ್ಮಂಡ್ ರೋಸ್ಟ್ಯಾಂಡ್, ಫ್ರಾಂಕೊಂಡಿ ಕ್ಯುರೆಲ್ ಮತ್ತು ಟ್ರಸ್ಟ್ಯಾನ್ ಬರ್ನಾಟ್ ಈ ಶತಕದ ಫ್ರೆಂಚ್ ನಾಟಕರಂಗದಲ್ಲಿ ದೊಡ್ಡ ಹೆಸರು ಮಾಡಿದವರು. ಆದರೆ

ಅವರ ಖ್ಯಾತಿ ಬಹುಕಾಲ ಉಳಿಯಲಿಲ್ಲ. ಜೀನ್ ಅನೌಯಿಲ್ (೧೯೧೦–), ಮಾರ್ಸೆಲ್ ಪ್ಯಾಗ್ನೋಲ್, ಹೆನ್ರಿರೆನೆಲಿನೊರ್ ಮ್ಯಾಂಡ್, ಸ್ಟೀವ್ ಪ್ಯಾಸ್ಯೂರ್, ಸಾಚಾ ಗಿಟ್ರೆ ೧೯೩೦ರಿಂದೀಚೆಯ ಪ್ರಸಿದ್ಧ ನಾಟಕಕಾರರು.

೧೯೫೦ರಿಂದೀಚೆಗೆ ಫ್ರೆಂಚ್ ಸಾಹಿತ್ಯ ತನ್ನ ಕೀರ್ತಿ–ಪ್ರತಿಷ್ಠೆಗಳನ್ನು ಉಳಿಸಿಕೊಂಡು ಬಂದಿದೆ. ಗದ್ಯದಲ್ಲಿ ತನ್ನ ಶ್ರೇಷ್ಠ ಪರಂಪರೆಯಲ್ಲೆ ನಡೆಯುತ್ತ ಹೆಚ್ಚು ಸಂಪುಷ್ಟಿಯನ್ನು ಪ್ರಗತಿಯನ್ನೂ ಸಾಧಿಸಿದೆ. ಕಾವ್ಯದಲ್ಲಿ ಬೊದಿಲೇರ್ ಮತ್ತು ಮಲ್ಲಾರ್ಮೆ ಅವರ ನವ್ಯ ಪಂಥ. ಹಳೆಯ ಸಂಪ್ರದಾಯ ಪರಂಪರೆಗಳನ್ನು ತೊಡೆದುಹಾಕಿ, ಜಗತ್ತಿನ ಎಲ್ಲ ನಾಗರಿಕ ದೇಶಗಳ ಸಾಹಿತ್ಯದಲ್ಲೂ ಕ್ರಾಂತಿಕಾರಕ ಬದಲಾವಣೆಯನ್ನು ಪ್ರಚೋದಿಸಿದೆ. ಮಲ್ಲಾರ್ಮೆಯಿಂದ ಪಾಲ್ ವೇಲರಿವರೆಗೂ ಆಗಿ ಹೋದ ಫ್ರೆಂಚ್ ಕವಿಗಳ ಅನುಕರಣೆಯಿಂದಾಗಿ ಕಾವ್ಯ ಎಲ್ಲ ಕಡೆಯೂ ಕ್ಲಿಷ್ಟವೂ ಅಸ್ಪಷ್ಟವು ಆಗಿ ಸಾಧಾರಣ ಸಹೃದಯರಿಗೆ ಅಗ್ರಾಹ್ಯವಾಗಿದೆ. ರಸಾಸ್ವಾದಕ್ಕೆ ವಿಶೇಷವಾದ ಶ್ರಮ, ಪಾಂಡಿತ್ಯ, ಸಿದ್ಧತೆ ಅಗತ್ಯವಾಗಿದೆ.

೧೯೫೦ರ ದಶಕದಲ್ಲಿ ಒಂದು ಬಗೆಯ ಗೊಂದಲದ ವಾತಾವರಣವೇ ಕಾಣುತ್ತದೆ. ಹೊಸ ಹೊಸ ಸಾಹಿತ್ಯ ಪ್ರಯೋಗಗಳನ್ನು ದಾರಿಗಳನ್ನೂ ಹುಡುಕುವ ಉತ್ಸಾಹದಲ್ಲಿ ಕೆಲವರಿದ್ದರೆ, ಇನ್ನು ಕೆಲವರು ಆಧ್ಯಾತ್ಮಿಕ ಮೌಲ್ಯಗಳ ಕಡೆ ತಿರುಗುವ, ಮತ್ತೆ ಕೆಲವರು ಆಧ್ಯಾತ್ಮಿಕ ಹಾಗೂ ರಾಜಕೀಯ ಎರಡರಿಂದಲೂ ಸಾಹಿತ್ಯವನ್ನು ಮುಕ್ತಗೊಳಿಸುವ ಹವಣಿಕೆಯಲ್ಲಿರುವುದು ಕಂಡುಬರುತ್ತದೆ. (ಕೆ.ಬಿ.ಪಿ.)

ಎರಡನೆಯ ಮಹಾಯುದ್ಧದ ನಂತರ ಶೆನೆ ಷಾರ್ (Char), ಜೂಲ್ಸ್ ಸುಪರ್‌ವೀಲೆ, ನೈಸ್ ಬಾನಿಫಾಯ್ ಮೊದಲಾದ ಕವಿಗಳು ಸಾಂಪ್ರದಾಯಿಕ ವಸ್ತುಗಳಿಗೆ ಮತ್ತು ಪ್ರಕಾರಗಳಿಗೆ ಅಂಟಿಕೊಂಡರು. ಆದರೆ ಹಲವರು ಹೊಸ ಹೊಸ ಪ್ರಯೋಗಗಳನ್ನು ಮಾಡಿದರು. ಫಿಲಸ್ ಜಕೊತೆಯ್ ಕವನಗಳಿಗೆ ಜಪಾನಿನ ಹೈಕು ಪ್ರಕಾರವೇ ಸ್ಫೂರ್ತಿ. ಮಾಸಿಲಿನ್ ಪ್ಲೆನೆ ಮುಂತಾದವರು ಹೊಸದೊಂದು ಪಂಥವನ್ನು ಪ್ರಾರಂಭಿಸಿದ್ದಾರೆ. ಕಾವ್ಯದ ಕಾವ್ಯಾಂಶ ಇವರಿಗೆ ಬೇಕಿಲ್ಲ, ಭಾಷೆಯು ಸಂವಹನ ಮಾಡುವ ಅರ್ಥದಲ್ಲಿ ಇವರಿಗೆ ಆಸಕ್ತಿ ಇಲ್ಲ. ಭಾಷೆಯನ್ನು ಸಂಜ್ಞೆಗಳ ವ್ಯವಸ್ಥೆಯಾಗಿ ಇವರು ಕಾಣುತ್ತಾರೆ. ೨೦ನೆ ಶತಮಾನದ ಉತ್ತರಾರ್ಧದಲ್ಲಿ ಶ್ರೇಷ್ಠ ಕವಿ ಯಾರೂ ಮೂಡಿ ಬರಲಿಲ್ಲ. (ಎಲ್.ಎಸ್.ಎಸ್.)

ಜೆರಾಲ್ಡ್ ಡೆ ನೆರ್ವಾಲ್

ಮೇ ೨೨, ೧೮೦೮ರಲ್ಲಿ ಫ್ರಾನ್ಸ್ ದೇಶದ ಪ್ಯಾರಿಸ್‌ನಲ್ಲಿ ಜನಿಸಿದ ನೆರ್ವಾಲ್, ಜೆರಾಲ್ಡ್ ಡೆ ಫ್ರೆಂಚ್ ಕವಿ. ಇದು ಕವಿಯ ಕಾವ್ಯನಾಮ ಮಾತ್ರ; ಈತನ ನಿಜನಾಮ ಜೆರಾರ್ಡ್ ಲಬ್ರೂನಿ. ತಂದೆ ವೈದ್ಯ. ನೆಪೋಲಿಯನ್ನನ ದಂಡಿನೊಡನೆ ಸಂಚರಿಸುತ್ತಿದ್ದ. ನೆರ್ವಾಲ್ ಪ್ಯಾರಿಸಿನ ಉತ್ತರ ಭಾಗದ ಹಳ್ಳಿಗಾಡು ಪ್ರದೇಶದಲ್ಲಿ ಸಮೀಪ ಬಂಧುಗಳೊಂದಿಗೆ ವಾಸವಿದ್ದು ವಿದ್ಯಾಭ್ಯಾಸ ನಡೆಸಿದ. ಚಿಕ್ಕಪ್ಪನ ಮನೆಯಲ್ಲಿದ್ದ

ಅಮೂಲ್ಯ ಗ್ರಂಥಗಳನ್ನು ಓದಿ ಹೆಚ್ಚಿನ ಜ್ಞಾನ ಸಂಪಾದಿಸಿಕೊಂಡ. ಅನಂತರ ಪ್ಯಾರಿಸಿನ ಚಾರ್ಲ್‌ಮೆನ್ ಶಾಲೆಯಲ್ಲಿ ಓದು ಮುಂದುವರಿಸಿದ. ಆಗ ನಗರದಲ್ಲಿ ತರುಣ ಫ್ರಾನ್ಸು ಎಂಬೊಂದು ಕಿರಿಯ ರೊಮ್ಯಾಂಟಿಕ್ ಕಲಾವಿದರ ಗುಂಪು ಗಣರಾಜ್ಯವಾದಿಯಗಿ, ವೇಷ ವಸನದಲ್ಲಿ ಸ್ವೇಚ್ಛಾವರ್ತನೆ ನಡೆಸುತ್ತ ಗಲಭೆ ಎಬ್ಬಿಸುತ್ತಿತ್ತು. ಗೌತಿಯರ್, ಬೋರೆಲ್, ಓನೆಡ್ಡಿ ಮುಂತಾದವರು ಒಂದು ರಾತ್ರಿ ಮದ್ಯಪಾನದ ಅಮಲಿನಲ್ಲಿ ಬೀದಿ ಬೀದಿ ಸುತ್ತುತ್ತ ತಾವು ಬೂಸಿಂಗೊಗಳು ಎಂದು ಕಿರುಚುತ್ತ ಶಾಂತಿಭಂಗ ಉಂಟುಮಾಡಿ ಪೋಲೀಸರ ಬಂಧನಕ್ಕೆ ಗುರಿಯಾದರು. ಬೊಸಿಂಗೊ ಎಂದರೆ ನಾವಿಕರ ಅಗಲವಾದ ಅಂಚಿನ ತಲೆಟೊಪ್ಪಿಗೆ; ಅದೇ ಕಿರಿಯ ರೊಮ್ಯಾಂಟಿಕರ ಮಂಡೆಯ ಮೇಲೆ ವಿರಾಜಿಸುತ್ತಿದ್ದ ಅಲಂಕಾರ; ಮುಂದೆ ಅವರಿಗೆ ಬೂಸಿಂಗೊ ಎಂದೇ ಅಣಕದ ಅಂಕಿತವಾಯಿತು. ಜಾಯಮಾನ ಸಾಮ್ಯತೆಯಿಂದ ನೆರ್ವಾಲ್ ಈ ತಂಡದವರ ಗೆಳೆಯನಾದ; ಸಮಾಜದ ನಯನೀತಿ ಎದುರು ದಂಗೆಯೆದ್ದು ಸಭ್ಯರಿಗೆ ತೊಂದರೆ ಕೊಡುವ ಕಾರ್ಯ ಈತನಿಗೂ ರುಚಿಸಿತು.

ಈತನಲ್ಲಿ ಲೇಖನಶಕ್ತಿ ಅಸಾಧಾರಣವಾಗಿತ್ತು. ಇಪ್ಪತ್ತು ವರ್ಷದವನಾಗಿದ್ದಾಗಲೇ ಈತ ಗಯಟೆಯ ಫೌಸ್ಟ್ ನಾಟಕವನ್ನು ಫ್ರೆಂಚಿಗೆ ಗಯಟೆಯ ಮೆಚ್ಚುವಂತೆ ಭಾಷಾಂತರ ಮಾಡಿದ. ಸುಮಾರು ೧೮೩೧–೧೮೩೮ರ ಅವಧಿಯಲ್ಲಿ ಜೆನ್ನಿ ಕೋಲನ್ ಎಂಬ ನಟಿಗೂ ಈತನಿಗೂ ಏರ್ಪಟ್ಟ ಪ್ರೇಮ ಈತನ ಜೀವನದ ಮೇಲೆ ತುಂಬ ಪ್ರಭಾವ ಬೀರಿತು. ಈ ಪ್ರೇಮ ಈತನಿಗೆ ನೆಮ್ಮದಿಯಾಗಲಿ ಉಲ್ಲಾಸವಾಗಲಿ ತರಲಿಲ್ಲ. ಸದಾ ಅಲೆದಾಡುವ ಸ್ವಭಾವದವನಾದ ಈತ ಎಲ್ಲೂ ಖಾಯಂ ಆಗಿ ನೆಲೆಸದೆ, ಮಿತ್ರರ ಅನಿಶ್ಚಿತ ಆತಿಥ್ಯದಿಂದ ಹೊಟ್ಟೆಹೊರೆದುಕೊಳ್ಳುತ್ತ ಸಿಕ್ಕಿದೆಡೆ ಮಲಗುತ್ತ ದಿವಸಗಳನ್ನು ದೂಡಿದ. ಪರಿಣಾಮವಾಗಿ ೧೮೪೧ರಲ್ಲಿ ಬುದ್ಧಿವಿಕಲ್ಪಕ್ಕೆ ಒಳಗಾದ. ಖಾಸಗಿ ಚಿಕಿತ್ಸಾಲಯ ದಲ್ಲಿ ಕೆಲವು ತಿಂಗಳು ತಂಗಿದ್ದು ಸಾಕಷ್ಟು ಮಾನಸಿಕ ಆರೋಗ್ಯವನ್ನು ಸಂಪಾದಿಸಿ ಕೊಂಡ. ಆದರೂ ಮತ್ತೆ ಹುಚ್ಚು ಮರುಕಳಿಸುವ ಭೀತಿ ಕಾಡುತ್ತಲೇ ಇತ್ತು. ಆಂತರ್ಯ ಸ್ವಸ್ಥವಾಗಿರುತ್ತಿದ್ದ ಸಮಯದಲ್ಲಿ ಈತ ಬರೆದ 'ಪೂರ್ವದಿಕ್ಕಿಗೆ ಪಯಣ', 'ಲೊರೆಲಿ', 'ಜರ್ಮನಿಯ ಸಂಸ್ಮರಣ' ಎಂಬ ಪ್ರಬಂಧಗಳು ಜನಪ್ರಿಯ ವಾದವು. ಸಾಹಿತ್ಯ ಪತ್ರಿಕೆಗಳಿಂದ ಮತ್ತೆ ಮತ್ತೆ ಲೇಖನಕ್ಕಾಗಿ ಕರೆ ಬರತೊಡಗಿತು. ಭಾವಗೀತೆ, ಗದ್ಯ, ಪದ್ಯ, ವಿಡಂಬನ, ಸಣ್ಣ ಕಥೆ, ಪ್ರಬಂಧ, ನಾಟಕ ವಿಮರ್ಶೆ ಮೊದಲಾದವನ್ನು ರಸವತ್ತಾಗಿಯೂ ಅಚ್ಚರಿ ಮೂಡುವಂತೆಯೂ ಬರೆದು ಪ್ರಕಟಿಸಿದ. ಅವುಗಳಿಂದ ಸಾಕಷ್ಟು ವರಮಾನ ಬರುತ್ತಿದ್ದರೂ ಈತನ ಅಕ್ರಮ ಬದುಕು ಸದಾ ಬಡತನದಲ್ಲಿ ಈತನನ್ನು ಮುಳುಗಿಸಿತ್ತು. ಹುಚ್ಚನಾಗುವ ಭಯ ಇದ್ದೇ ಇತ್ತು. ಆಗಾಗ ಹುಚ್ಚು ಕೆರಳುತ್ತಿದ್ದುದೂ ಉಂಟು. ಒಂದು ಮುಂಜಾನೆ ಹಳೆಯ ಪ್ಯಾರಿಸ್ಸಿನ ಕೇರಿಯೊಂದರಲ್ಲಿ ಈತನ ಮೃತ ಶರೀರ ಕಟಕಟೆಗೆ ಒರಗಿಕೊಂಡಿತ್ತು. ಬಾಳಬೇಗೆಯಿಂದ ರೋಸಿ ತಾನೇ ಆತ್ಮಹತ್ಯೆ ಮಾಡಿಕೊಂಡನೋ ಈತನ ಬಳಿ ಇದ್ದ ಪುಡಿಕಾಸಿಗೋಸ್ಕರ ಯಾರಾದರೂ ಕತ್ತು ಹಿಸುಕಿದರೊ ತಿಳಿಯದು.

ಪದ್ಯಕಾವ್ಯದಲ್ಲಿ ಈತ ಸಂಯುಕ್ತ ಸಂಸ್ಥಾನದ ಎಡ್ಗರ್ ಆಲನ್ ಪೋನನ್ನು ಹೋಲುತ್ತಾನೆಂದು ಅನೇಕ ವಿಮರ್ಶಕರ ಅಭಿಪ್ರಾಯ. ಇಬ್ಬರ ಭಾಷೆಯೂ ಛಂದೋಬಂಧವೂ ಓಟ, ಧಾಟಿ ಇಂಪು ರಮಣೀಯತೆಗಳಲ್ಲಿ ಉತ್ಕೃಷ್ಟ ಕವಿತೆಯನ್ನೂ ಮೀರಿಸಿ ಮುಂದೆ ಹೋಗಿ ತಾಳಲಯಬದ್ಧ ಸಂಗೀತದ ನೆನಪನ್ನು ತಂದುಕೊಡಬಲ್ಲವು. ಬೇರೆಬೇರೆಯಾದ ಎರಡು ಲಲಿತಕಲೆಗಳ ಸಮ್ಮಿಶ್ರ ಲಾವಣ್ಯ ಇವುಗಳಲ್ಲಿ ಕುದುರಿ ಬಂದಿದೆ. ಹಾಗಿದ್ದರೂ ಪೋ ಹಾಗೂ ನೆರ್ವಾಲ್ ಸರಿಸಮರಲ್ಲ. ಸೌಜನ್ಯಪೂರಿತ ಮನೋಧರ್ಮದಲ್ಲೂ ಸಾಹಿತ್ಯಪ್ರಜ್ಞೆ ಮತ್ತು ಗ್ರಂಥ ಜ್ಞಾನದಲ್ಲೂ ನೆರ್ವಾಲ್ ಹೆಚ್ಚಿನವ. ಪೋನಲ್ಲಿ ಕಾಣಬರುವ ಕೃತಕತೆ ಪ್ರಯಾಸಗಳ ಛಾಯೆ ಈತನಲ್ಲಿ ಇಲ್ಲ. ಈತನ ಪದ್ಯಕಾವ್ಯ ಮೂರು ಬಗೆಯದು. ಕೊಂಚ ಆಧುನಿಕತ್ವ ಕೂಡಿದ ಜನಪದ ಗೀತ, ಭಾವಪೂರಿತ ಸಾನೆಟ್ಟು, ಮಿಶ್ರಕವನ.

ಗದ್ಯಲೇಖನ ನೆರ್ವಾಲನ ಪುಷ್ಟ ಕೊಡುಗೆ, ಇಷ್ಟ ಮಾರ್ಗ. ವಿಸ್ಮಯ ಮಾದರಿಯ ಲಯಬದ್ಧ ವಾಕ್ಯಗಳಿಂದ ತುಂಬಿದೆಯಾಗಿ ಅದು ಹಿರಿಯರ್ಥದಲ್ಲಿ ಗದ್ಯಕಾವ್ಯ ಎಂದಿದ್ದಾರೆ. ಹಾಗೂ ಅದೆಲ್ಲ ನೇರವೂ ಸರಾಗವೂ ಪ್ರಾಮಾಣಿಕವೂ ಆದ ಬರೆವಣಿಗೆ. ನೆರ್ವಾಲನ ಕೃತಿಗಳೆಲ್ಲ ಅವನ ದೃಷ್ಟಿಯಂತೆ ಒಂದೇ ರೀತಿಯವೆಂದೂ ತೋರಿ ಬಂದರೂ ಇತರರ ದೃಷ್ಟಿಗೆ ಅವು ಎರಡು ರೀತಿಯಾಗಿ ಗೋಚರಿಸುತ್ತವೆ. ನಿಸರ್ಗ ವರ್ಣನೆ, ಸರಳ ಸಾಮಾನ್ಯ ವ್ಯಕ್ತಿಚಿತ್ರಣ. ಕವಿಯ ಬಾಲ್ಯ ಯೌವನಗಳ ಸವಿನೆನಪಿನ ವರದಿ–ಇವುಗಳನ್ನು ಈತ ಮುದ್ದಾಗಿಯೂ ಅಂದಚಂದವಾಗಿಯೂ ರೂಪಿಸಿದ್ದಾನೆ. ಆತ್ಮಾನುಭವದ ಅಡಿಪಾಯದ ಮೇಲೆ ಕಟ್ಟಿದ ಸಿಲ್ವೀ ಎಂಬ ಸಣ್ಣ ಕಥೆ ಈತನ ಮೇರುಕೃತಿ. ರೊಮ್ಯಾಂಟಿಕ್ ಪಂಥದ ಸೌಮ್ಯ ಮುಖ ಒಂದಾದರೆ ಇನ್ನೊಂದು ಮುಖ ಘೋರ ಮತ್ತು ವಿಕಾರ. ನೆತ್ತರು ದೆವ್ವ ಮುಂತಾದ ಕಲ್ಪನೆಗಳು, ಗಾಬರಿಗೊಳಿಸುವ ಘಟನಾವಳಿಗಳು ಅಕಟವಿಕಟ ವ್ಯಕ್ತಿಗಳೂ ಎಲ್ಲವೂ ಒಟ್ಟುಗೂಡಿ ಕಥೆಯನ್ನು ಮೈನವಿರೇಳಿಸಿ ಓದುಗರ ರಕ್ತವನ್ನು ಹೆಪ್ಪುಗಟ್ಟಿಸುತ್ತವೆ. ಈಗ ತಾನೆ ಶವವಾದ ದೇಹದಿಂದ ಕತ್ತರಿಸಿ ತೆಗೆದ ಹಸ್ತದಿಂದ ಉತ್ಪತ್ತಿಯಾಗುವ ಭೀಕರ ವಿದ್ಯಮಾನಗಳ ಉಪಾಖ್ಯಾನವಾದ 'ಮಾಯದ ಹಸ್ತ' ಎಂಬುದು ಒಳ್ಳೆಯ ನಿದರ್ಶನ. ಅಂಥ ಲೇಖನಗಳ ಕಂತೆಗೆ ಸೇರಿದ್ದರೂ 'ಆರೀಲಿಯಾ' ಎಂಬುದು ಅತ್ಯಂತ ಕುತೂಹಲಜನಕವಾಗಿದೆ. ಇದರಲ್ಲಿ ಕವಿ ನಾನಾ ಸ್ವಪ್ನ ದರ್ಶನಗಳನ್ನೂ ತನ್ನ ಹುಚ್ಚು ಹಂತ ಹಂತವಾಗಿ ಬೆಳೆದ ವೃತ್ತಾಂತವನ್ನೂ ಸ್ಫುಟವಾಗಿ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾನೆ. ಪ್ರಬಂಧದ ವಿಷಯ ಮತಿವಿಭ್ರಮ ಅಥವಾ ಸನ್ನಿಯ ಅದುರಾಟ ಕೂಗಾಟ. ಶೈಲಿಯಾದರೋ ಬಹಳ ತಿಳಿಯಾದದ್ದು. ಈ ವೈಚಿತ್ರ್ಯವನ್ನು ಗೌತಿಯರ್ 'ಬುದ್ಧಿ ವಿಕಲ್ಪ ತನ್ನ ನೆನಪುಗಳನ್ನು ಒರೆಯಿತು, ವಿವೇಕ ಬರೆಯಿತು. ನಿದ್ದೆಯಲ್ಲಿ ಕಾಣ್ಕೆ, ಸುಪ್ತಚೇತನದ ಅರಿಮೆ, ಅತೀಂದ್ರಿಯ

ವ್ಯಾಪಾರ–ಇತ್ಯಾದಿ ಗೂಢ ವಿಚಾರ ಯೋಚನಾಪರರನ್ನು ಚೋದಿಸುತ್ತಿರುವ ಈ ಕಾಲದಲ್ಲಿ ನೆರ್ವಾಲ್ ಅತಿಶಯ ಮುನ್ನೋಟದ ಪ್ರತಿಭಾಶಾಲಿಯಂತೆ ಕಂಡುಬಂದರೆ ಆಶ್ಚರ್ಯವಿಲ್ಲ' ಎಂದಿದ್ದಾನೆ. (ಎಸ್.ಐ.ಆರ್.)

ಬಾಲ್ಜಾಕ್ ಆನೋರೆ ಡೀ (೧೭೯೯–೧೮೫೦)

ಫ್ರೆಂಚ್ ಕಾದಂಬರಿ ಪ್ರಕಾರಕ್ಕೆ ಹೊಸ ಆಯಾಮ ಕೊಟ್ಟ ಕಾದಂಬರಿಕಾರ. ವೈವಿಧ್ಯಮಯವಾದ ಸಹಸ್ರಾರು ಪಾತ್ರಗಳನ್ನು ಸೃಜಿಸಿ ಶ್ರೇಷ್ಠವಾದ ವಾಸ್ತವಿಕ ರಮ್ಯ ಹಾಗೂ ಐತಿಹಾಸಿಕ ಕಾದಂಬರಿಗಳನ್ನು ರಚಿಸಿ ಪ್ರಪಂಚ ದಾಖಲೆ ಸ್ಥಾಪಿಸಿದ ಸೃಜನಶೀಲ ಸಾಹಿತಿ. ಹುಟ್ಟಿದ್ದು ಟೂರ್ ಎಂಬಲ್ಲಿ. ತಂದೆ ಸ್ವಸಾಮರ್ಥ್ಯದಿಂದ ಮುಂದೆ ಬಂದ ರೈತ. ತಾಯಿ ಪ್ಯಾರಿಸಿನ ಸಿರಿವಂತ ವರ್ತಕನ ಮಗಳು. ಈಕೆ ಶಿಸ್ತಿನಿಂದ ಮಕ್ಕಳನ್ನು ಬೆಳೆಸಿದಳು. ಎಂಟನೆಯ ವಯಸ್ಸಿಗೆ ಬಾಲ್ಜಾಕ್ ಶಿಕ್ಷಣಕ್ಕಾಗಿ ವೆಂಡೋಮ್ ವಸತಿ ಶಾಲೆಗೆ ಸೇರಿದ. ಶಾಲೆಯ ಓದಿನಲ್ಲಿ ಎಷ್ಟೂ ಆಸಕ್ತಿ ತೋರಿದರೆ ಈತ ಪುಸ್ತಕಗಳನ್ನು ಓದುವ ಗೀಳು ಬೆಳೆಸಿಕೊಂಡ. ಮಹತ್ವಾಕಾಂಕ್ಷಿಯಾಗಿದ್ದ ಈತ ತನ್ನ ಭವಿಷ್ಯದ ಉಜ್ಜ್ವಲತೆಯ ಬಗ್ಗೆ ತುಂಬ ಆತ್ಮ ವಿಶ್ವಾಸ ತಳಿದಿದ್ದ. ಈತನ ಶಾಲಾ ಜೀವನದ ಅನುಭವಗಳೆಲ್ಲ ಲೂಯಿಲ್ಯಾಂಬರ್ಟ್ (೧೮೩೨) ಎಂಬ ಕೃತಿಯಲ್ಲಿ ಪ್ರತಿಬಿಂಬಿತವಾಗಿವೆ.

ಮಗ ವಕೀಲನಾಗಬೇಕೆಂದು ತಂದೆಯ ಅಪೇಕ್ಷೆಯಾಗಿತ್ತು. ಪ್ಯಾರಿಸ್ ವಿಶ್ವವಿದ್ಯಾಲಯಕ್ಕೆ ಸೇರಿದ ಸೋರ್ಬೋನ್ ಲಾ ಕಾಲೇಜಿನಲ್ಲಿ ಓದುತ್ತ, ವಕೀಲರೊಬ್ಬರ ಬಳಿ ಗುಮಾಸ್ತನಾಗಿ ವ್ಯಾವಹಾರಿಕ ಅನುಭವ ಪಡೆಯುವ ವ್ಯವಸ್ಥೆಯೂ ಆಯಿತು. ಆದರೆ ಲೇಖಕವೃತ್ತಿಯನ್ನೇ ಅವಲಂಬಿಸುವ ದೃಢನಿಶ್ಚಯ ಮಾಡಿ ತಂದೆಯ ಒಪ್ಪಿಗೆ ಪಡೆದು ೧೮೧೯ರಲ್ಲಿ ಪ್ಯಾರಿಸ್‌ನಲ್ಲಿ ಹೊಸ ಜೀವನ ಆರಂಭಿಸಿದ. ಕ್ರಾಮ್‌ವೆಲ್ ಎಂಬ ದುರಂತ ಕಾವ್ಯನಾಟಕ ಈತನ ಮೊದಲ ಕೃತಿ. ಅದಕ್ಕೆ ಅಷ್ಟೇನೂ ಪ್ರೋತ್ಸಾಹ ದೊರೆಯಲಿಲ್ಲ. ಬಾಲ್ಜಾಕ್ ನಿರಾಶನಾಗದೆ ನಾಟಕಗಳ ಜೊತೆಗೆ ಕಟ್ಟುಕತೆಗಳನ್ನು ಬರೆಯತೊಡಗಿದ. ಜೀವನೋಪಾಯಕ್ಕಾಗಿ ವ್ಯಾಪಾರ ಮಾಡಲು ಹೋಗಿ ನಷ್ಟಕ್ಕೊಳಗಾದ. ೧೮೩೦ರ ಅನಂತರ ಪತ್ರಿಕೋದ್ಯಮಕ್ಕಿಳಿದು ಹಲವು ಬಗೆಯ ಲೇಖನಗಳನ್ನು ಬರೆದ. ಕೆಲವು ಮಾಸಿಕಗಳನ್ನು ಸ್ವತಃ ಆರಂಭಿಸಿ ವಿಫಲನಾದ. ಪತ್ರಿಕೆಗಳಲ್ಲಿ ಧಾರಾವಾಹಿ ಕಾದಂಬರಿಗಳನ್ನು ಪ್ರಕಟಿಸಿದ.

ಲೇಖನದಿಂದ ಹಣಸಂಪಾದನೆ ಆಗದೆಂದು ಪ್ರಕಾಶಕನಾದ, ಮುದ್ರಕನಾದ. ಅದರಲ್ಲೂ ಅಪಾರ, ನಷ್ಟಪಟ್ಟು, ಸಾಲಗಾರನಾದ. ವಿಲಾಸಜೀವನ ದುಂದುಗಾರಿಕೆಗಳಿಂದಾಗಿ ಮತ್ತಷ್ಟು ಸಾಲ, ಸಾಲ ತೀರಿಸಲು ಮತ್ತೆ ಬೇರೆ ಕಡೆ ಸಾಲ ಹೀಗೆ ಇಡೀ ಜೀವನಪರ್ಯಂತ ಸಾಲದಲ್ಲಿ ಮುಳುಗಿದ. ಮುಂದೆ ಪ್ರಸಿದ್ಧ ಕಾದಂಬರಿಕಾರನಾಗಿ ಸೊಗಸಾದ ಭಾರಿ ಬಂಗಲೆ ಕಟ್ಟಿಸಿದಾಗಲೂ ಸಾಲಗಾರನಿಂದ ತಪ್ಪಿಸಿಕೊಳ್ಳಲು ಸುರಂಗಮಾರ್ಗವೊಂದನ್ನು ಮಾಡಿಸಿಕೊಂಡಿದ್ದನಂತೆ.

೧೮೨೯ರಲ್ಲಿ ಬಂದ ಲೇ ಡೆರ್‌ನಿಯರ್ ಚೌವಾನ್ ಯಶಸ್ಸು, ಕೀರ್ತಿ ತಂದಿತು. ಅನೇಕ ಪ್ರತಿಷ್ಠಿತ ಮಹಿಳೆಯರು ಮೆಚ್ಚಿ ಧನಸಹಾಯ ಮಾಡಿದರು. ಇದೊಂದು ವರ್ಣಮಯ ಐತಿಹಾಸಿಕ ಕಾದಂಬರಿ. ವಾಲ್ಟರ್‌ಸ್ಕಾಟ್‌ನ ಪ್ರಭಾವ ಇದರ ಮೇಲಿದೆ. ಅನಂತರ ೨೦ ವರ್ಷಗಳಲ್ಲಿ ಬಾಲ್ಜಾಕ್ ೮೫ ಕಾದಂಬರಿಗಳನ್ನು ಬರೆದ. ಜೊತೆಗೆ ಹಲವಾರು ಕಟ್ಟುಕತೆಗಳನ್ನು ಪ್ರಕಟಿಸಿದ. ಮೊದಮೊದಲು ಅದ್ಭುತ ರೋಮಾಂಚಕ ಕತೆಗಳನ್ನು ಬರೆಯುತ್ತಿದ್ದು ಅನಂತರ ವಾಸ್ತವ ಕತೆಗಳ ರಚನೆಗೆ ತೊಡಗಿದ. ಪತ್ರಿಕೆಗಳಿಗೆ ವಿವಿಧ ವಿಷಯಗಳನ್ನು ಕುರಿತ ಲೇಖನಗಳು, ನಾಟಕಗಳು ಸ್ನೇಹಿತರಿಗೆ ಓದುಗರಿಗೆ, ವಿಶೇಷವಾಗಿ ತಂಗಿಗೆ ಬರೆದ ಸುದೀರ್ಘ ಪತ್ರಗಳು– ಹೀಗೆ ನಿತ್ಯ ೧೬–೧೮ ಘಂಟೆಗಳ ಕಾಲ ಸತತವಾಗಿ ಕೂತು ಬರೆಯುತ್ತಿದ್ದ.

ಬಾಲ್ಜಾಕನಿಗೆ ತನ್ನ ಕಾಲದ ಇತಿಹಾಸಕಾರನಾಗುವ ಹಂಬಲ ಇತ್ತು. ೧೮೪೧ರ ವೇಳೆಗೆ ಹನ್ನೆರಡಕ್ಕೂ ಹೆಚ್ಚು ಐತಿಹಾಸಿಕ ಕಾದಂಬರಿಗಳನ್ನು ಬರೆದ. ಐತಿಹಾಸಿಕ ಸ್ಥಳಗಳನ್ನು ಸಂದರ್ಶಿಸುವ ಸಲುವಾಗಿ ವ್ಯಾಪಕ ಪ್ರವಾಸಮಾಡಿದ. ಬಾಲ್ಜಾಕ್ ಸೂಕ್ಷ್ಮಮತಿ: ಅವಲೋಕನಶಕ್ತಿ ಅಪಾರವಾಗಿತ್ತು. ಈತನ ದೃಷ್ಟಿಗೆ ಬೀಳದ ವಿಷಯವೇ ಇರಲಿಲ್ಲ. ಜೊತೆಗೆ ಅಸಾಧಾರಣ ಕಲ್ಪನಾಶಕ್ತಿ, ಭಾಷಾಪ್ರಭುತ್ವ ಸೇರಿ ಕಾದಂಬರಿಗಳಲ್ಲಿ ಸನ್ನಿವೇಶಗಳನ್ನು ಸವಿವರವಾಗಿಯೂ ವರ್ಣಮಯವಾಗಿಯೂ ಚಿತ್ರಿಸುತ್ತಿದ್ದ. ಸುದೀರ್ಘವಾಗಿ ಬೆಳೆದು ಬಂದ ಕತೆಯನ್ನು ಕ್ಷಿಪ್ರವಾಗಿ ಪರಾಕಾಷ್ಠೆಗೆ ಕೊಂಡೊಯ್ಯುವುದು ಈತನ ವೈಶಿಷ್ಟ್ಯ.

ಈತನ ಕಾದಂಬರಿಗಳು ಸ್ವಯಂಪೂರ್ಣವೆಂಬಂತೆ ಬೇರೆ ಬೇರೆ ಕತೆಗಳನ್ನು ಹೇಳಿದರೂ ಮಾನವನ ಬದುಕಿನ ವಿವಿಧ ಮುಖಗಳನ್ನು ತೋರಿಸುವ ಬೃಹತ್ ವಸ್ತುವೊಂದಕ್ಕೆ ಸೇರಿದ ಭಾಗಗಳಂತೆ ಆಂತರಿಕ ಸಂಬಂಧದ ಸೂತ್ರದಲ್ಲಿ ಪೋಣಿಸಿದ ಮಣಿಗಳಂತೆ ಇವೆ. ಅವೆಲ್ಲವನ್ನೂ ಒಟ್ಟಾಗಿ ನೋಡಿದಾಗ ಮಹಾಕಾವ್ಯದ ಹರವು ಇರುವುದು ಕಾಣದೆ ಇರದು. ಬಾಲ್ಜಾಕ್ ತನ್ನ ಕತೆ, ಕಾದಂಬರಿ, ನಾಟಕಗಳಲ್ಲಿ ಸುಮಾರು ಮೂರು ಸಾವಿರ ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಸಿದ್ದಾನೆ. ಜೊತೆಗೆ ಪ್ರಸಿದ್ಧ ಐತಿಹಾಸಿಕ ವ್ಯಕ್ತಿಗಳನ್ನು ಅವರವರ ನಿಜವಾದ ಹೆಸರಿನಲ್ಲೇ ತಂದಿದ್ದಾನೆ. ಮಾನವ ಸ್ವಭಾವದ ಎಲ್ಲ ಮುಖಗಳನ್ನೂ ತೋರಿಸಿದ್ದಾನೆ. ಇಂಗ್ಲಿಷ್ ಸಾಹಿತ್ಯದಲ್ಲಿ ಡಿಕನ್ಸ್ ಇರುವಂತೆ ಫ್ರೆಂಚ್ ಸಾಹಿತ್ಯದಲ್ಲಿ ಬಾಲ್ಜಾಕ್. ವಿವಿಧ ಪಾತ್ರ ಚಿತ್ರಣದಲ್ಲಿ ಈತನ ಅದ್ಭುತ ಕೌಶಲ ವ್ಯಕ್ತವಾಗುತ್ತದೆ. ಸೃಜಿಸಿದ ಪಾತ್ರಗಳಲ್ಲಿ ಕೆಲವು ವಿಶಿಷ್ಟವೆನಿಸಿ ಚಿರಸ್ಮರಣೀಯವಾಗಿವೆ. ಇನ್ನು ಕೆಲವು ವಾಸ್ತವ ಬದುಕಿನಲ್ಲಿ ಕಾಣಬರುವ ಕೆಲವು ಮಾದರಿಗಳ ಪಡಿಯಚ್ಚಿನಂತಿವೆ. ಯೂರೋಪಿನ ನಾಗರಿಕ ಸಮಾಜದ, ಇಡೀ ಯುಗದ ಸಮಗ್ರ ಚಿತ್ರ ಬಾಲ್ಜಾಕನ ಕತೆ–ಕಾದಂಬರಿಗಳಲ್ಲಿ ಪ್ರತಿಬಿಂಬಿತವಾಗಿದೆ. ಆದರೆ ಈತ ಸೃಜಿಸಿದ ದುಷ್ಟ ಸ್ವಭಾವದ ಪಾತ್ರಗಳು ಮನಸ್ಸಿನ ಮೇಲೆ ಅಚ್ಚೊತ್ತಿದಷ್ಟು ಚೆನ್ನಾಗಿ ಸಭ್ಯ ನಾಯಕ ಪಾತ್ರಗಳು ರೂಪುಗೊಂಡಿಲ್ಲ.

ಜೀವನದ ವಿವಿಧ ಅನುಭವಗಳನ್ನು ನಾನಾ ಮುಖಗಳನ್ನು ತನ್ನ ಕೃತಿಗಳಲ್ಲಿ ಚಿತ್ರಿಸುವಾಗ ಬಾಲ್ಜಾಕ್ ಕಂಡುಕೊಂಡದ್ದು ತ್ಯಾಗ ಮತ್ತು ನಿಷ್ಠೆಗಳಿಂದ ಕೂಡಿದ ಪರಿಪೂರ್ಣ ಪ್ರೇಮ. ಇದರ ಅನ್ವೇಷಣೆಯಲ್ಲಿ ಅಳೆಯುವ ಮಾನವನ ಪಾಡನ್ನು ಗಂಭೀರವಾಗಿ ಚಿತ್ರಿಸುವುದರಲ್ಲಿ ಸಮಗ್ರ ಜೀವನದರ್ಶನವನ್ನೇ ಮಾಡಿಸುತ್ತಾನೆ. ಡಾಂಟೆ ಮಹಾಕವಿಯ ಡಿವೈನ್ ಕಾಮೆಡಿಯಿಂದ ಸ್ಫೂರ್ತಿತನಾಗಿ ಈತ ತನ್ನ ಕೃತಿಗಳನ್ನು ವಿಂಗಡಿಸಿ ಮಾನವನ ಜೀವನ ದರ್ಶನವನ್ನು ಮೂಡಿಸುವ ಸಂಯೋಜಿತ ಶಿಲ್ಪದ ಮಾದರಿಯಲ್ಲಿ ಜೋಡಿಸುವ ಬೃಹತ್ ಯೋಜನೆ ಹಾಕಿಕೊಂಡ. ಈ ಸಮಸ್ತ ಕೃತಿ ಶ್ರೇಣಿಗೆ ಲಾ ಕಾಮೆಡಿ ಹ್ಯೂಮೇನ್ ಎಂಬ ಹೆಸರು ಕೊಟ್ಟ, ಅದುವರೆಗಿನ ತನ್ನ ಕತೆ–ಕಾದಂಬರಿ–ನಾಟಕಗಳನ್ನು ಜೊತೆಗೆ ಈ ಬೃಹತ್ ವಸ್ತುವಿಗೆ ಪೂರಕವಾಗುವಂಥ ಇನ್ನು ಐವತ್ತೊಂದು ಕೃತಿಗಳನ್ನು ರಚಿಸಿ ಒಟ್ಟು ೧೩೩ ಸಂಪುಟಗಳಲ್ಲಿ ಪ್ರಕಟಿಸುವ ಭಾರೀ ಯೋಜನೆ ಹಾಕಿಕೊಂಡು ಕಾರ್ಯಪ್ರವರ್ತನಾದ. ಆದರೆ ಆತ ಹೊಸದಾಗಿ ಬರೆಯಲೆಂದು ಗುರುತು ಮಾಡಿಕೊಂಡ ಐವತ್ತೊಂದು ಕೃತಿಗಳಲ್ಲಿ ಪೂರ್ಣವಾದದ್ದು ಒಂದೇ. ಈ ಪ್ರಮಾಣದ ಯೋಜನೆಯನ್ನು ಪ್ರಪಂಚದ ಯಾವ ಕಾದಂಬರಿಕಾರನೂ ಮಾಡಿಲ್ಲ. ಅಷ್ಟು ಪ್ರಮಾಣದಲ್ಲಿ ಬರೆದೂ ಇಲ್ಲ.

೧೮೪೫ರ ವೇಳೆಗೆ ೨೬ ಸಂಪುಟಗಳನ್ನು ಪ್ರಕಟಿಸುವ ಆಸೆ ಈಡೇರದೆ ೧೮೩೮ರಲ್ಲಿ ೧೭ ಸಂಪುಟಗಳು ಮಾತ್ರ ಹೊರಬಂದುವು. ೧೯ನೆಯ ಸಂಪುಟದಲ್ಲಿ ನಾಟಕಗಳು, ೨೦ನೆಯ ಸಂಪುಟದಲ್ಲಿ ಕಾಂಟೆಸ್ ಡ್ರೋಲೆಟಿಕ್ಸ್ ಎಂಬ ಕೃತಿ ಸೇರಿವೆ. ಬಾಲ್ಜಾಕ್ ಈ ಕೃತಿ ಶ್ರೇಣಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಿದ. ಎಟ್ಯೂಡಿಸ್ ಡಿ ಮೊಯುರ್ಸ್ ಎಂಬ ಮೊದಲ ವಿಭಾಗದಲ್ಲಿ ವ್ಯಕ್ತಿಯ ಖಾಸಗಿ ಜೀವನದಿಂದ ಹಿಡಿದು ಹಳ್ಳಿ ನಗರ ಪ್ರಾಂತ್ಯಗಳ ವಿಸ್ತೃತ ಸಾರ್ವಜನಿಕ ಜೀವನ, ರಾಜಕಾರಣ, ಸೇನಾ ಜೀವನಗಳವರೆಗೆ ಸಾಮಾಜಿಕಚಿತ್ರವನ್ನು ಕೊಡುವ ಕತೆ ಕಾದಂಬರಿಗಳನ್ನು ಸೇರಿಸಿದ್ದಾನೆ. ಎರಡನೆಯ ವಿಭಾಗದಲ್ಲಿ ತಾತ್ತ್ವಿಕ ಅಧ್ಯಯನಗಳನ್ನು ಸೇರಿಸಿ ಎಟ್ಯೂಡಿಸ್ ಡಿ ಫಿಲಸಾಫಿಕ್ಸ್ ಎಂದು ಕರೆದಿದ್ದಾನೆ. ಮೂರನೆಯದು ಎಟ್ಯೂಡಿಸ್ ಡಿ ಅನಾಲಿಟಿಕ್ಸ್–ವಿಶ್ಲೇಷಣಾತ್ಮಕ ಲೇಖನಗಳ ವಿಭಾಗ; ಈ ಸಮಗ್ರ ಕೃತಿಯಲ್ಲಿ ಒಟ್ಟು ೯೧ ಕೃತಿಗಳಿವೆ. ಇದರ ಮಾರಾಟ ನಿರಾಶಾಜನಕವಾಗಿತ್ತು. ಬಾಲ್ಜಾಕನ ಮರಣೋತ್ತರ ಹ್ಯೂಮನ್ ಕಾಮೆಡಿ ಸಂಪುಟಗಳು ಎರಡನೆಯ ಮುದ್ರಣ ಕಂಡವು.

ಬಾಲ್ಜಾಕನ ಹಲವು ಪ್ರಣಯ ಪ್ರಸಂಗಗಳಲ್ಲಿ ಕೊನೆಯವರೆಗೂ ಸ್ಥಿರವಾಗಿ ನಿಂತುದು ಪೋಲಿಷ್ ಶ್ರೀಮಂತ ಸರದಾರನೊಬ್ಬನ ಪತ್ನಿ ಮದಾಮ್ (ಕೌಂಟೆಸ್ ಡಿ) ಹನ್ಸ್‌ಕಾಳೊಡನೆ ಇದ್ದ ಬಾಂಧವ್ಯ. ಬಾಲ್ಜಾಕನ ಬರೆಹದ ಮೋಡಿಯನ್ನು ಮೆಚ್ಚಿದ ಓದುಗಳಾಗಿ ಪತ್ರ ಬರೆದು ಪರಿಚಿತಳಾದ ಈಕೆ ಸ್ನೇಹಿತಳಾಗಿ ಪ್ರಿಯತಮೆಯಾಗಿ, ಬರೆಹಕ್ಕೆ ಸ್ಫೂರ್ತಿದಾಯಿನಿಯಾಗಿ ಬೆಳದು ಬಾಲ್ಜಾಕನ ಹೃದಯದಲ್ಲಿ ನಿಂತಳು.

೧೮೩೦-೪೨ರ ಅವಧಿ ಬಾಲ್ಜಾಕನ ಸಾಹಿತ್ಯದ ಪ್ರಥಮ ಯಶಸ್ಸಿನಕಾಲ. ೧೮೪೨ರ ತನಕ ಈತನ ಸಾಹಿತ್ಯದ ಉತ್ಕರ್ಷಕಾಲ. ಅನಂತರ ಅದರ ಇಳಿಮುಖ. ಮದಾಮ್ ಹನ್ಸ್‌ಕಾ ಸೂಚಿಸಿದ ವಸ್ತುಗಳನ್ನು ಕುರಿತ ಮಾಡೆಸ್ಟ್‌ಮಿನಾನ್ ಬಳಿಕ ಲಾ ಕಸಿನ್ ಬೆಟ್ಟಿ (೧೮೪೬) ಮತ್ತು ಲೆ ಕಸಿನ್ ಪಾನ್ಸ್ (೧೮೪೭) ಕೃತಿಗಳೇ ಬಾಲ್ಜಾಕನ ಕಡೆಯ ಕೃತಿಗಳು.

ಕೀರ್ತಿಶಾಲಿಯಾಗಿ ಪ್ರತಿಷ್ಠಿತ ಶ್ರೀಮಂತ ಸಮಾಜದಲ್ಲಿ ಮನ್ನಣೆ ಪಡೆದು ಸೊಗಸುಗಾರನಾಗಿ ಓಡಾಡಿದರೂ ಬಾಲ್ಜಾಕನ ವೈಯಕ್ತಿಕ ಜೀವನ ದುರ್ಭರವಾಗಿತ್ತು. ಆರ್ಥಿಕ ಮುಗ್ಗಟ್ಟಿನಿಂದ, ಸಾಲಗಾರನಾಗಿ ಸಂಕಟ ಪರಿಸ್ಥಿತಿಗೆ ಒಳಗಾದುದು ಈತನ ಇನ್ನೊಂದು ಅವಸ್ಥೆ. ಮದುವೆಯಾಗಿ ಸುಖಜೀವನ ನಡೆಸಬೇಕು ಎಂಬ ಹಂಬಲ ಈಡೇರದೆ ಇದ್ದುದು ಈತನ ಜೀವನದಲ್ಲಿ ತುಂಬಲಾರದ ಕೊರತೆ. ಮದಾಮ್‌ಹನ್ಸ್‌ಕಾಳ ಪ್ರೇಮವೊಂದೇ ಈತನ ಖಾಸಗಿ ಜೀವನದ ಒಂದು ಭಾಗ್ಯ. ೧೮೪೫ರಿಂದ ೪೮ರ ತನಕ ಈಕೆಯೊಂದಿಗೆ ಐರೋಪ್ಯ ಪ್ರವಾಸ ಮಾಡುವ ಸಂದರ್ಭಗಳು ಈತನ ಜೀವನದ ಅತ್ಯಂತ ಸುಖದ ದಿನಗಳು. ಕಡೆಗೆ ೧೮೫೦ರಲ್ಲಿ ಈಕೆಯನ್ನು ಮದುವೆಯೂ ಆದ. ೧೮೪೮ರಿಂದಲೇ ಈತನ ಆರೋಗ್ಯ ಕುಸಿಯತೊಡಗಿತ್ತು. ಮದುವೆಯಾದ ಐದೇ ತಿಂಗಳಲ್ಲಿ ೧೮೫೦ರ ಆಗಸ್ಟಿನಲ್ಲಿ ಬಾಲ್ಜಾಕ್ ನಿಧನ ಹೊಂದಿದ. (ಕೆ.ಬಿ.ಪಿ.)

ಮ್ಯಾಟರ್‌ಲಿಂಕ್ ಮಾರಿಸ್ (೧೮೬೨-೧೯೪೯)

ನೊಬೆಲ್ ಪ್ರಶಸ್ತಿ ಪಡೆದ ಬೆಲ್ಜಿಯಮ್ ನಾಟಕಕಾರ, ಪ್ರಬಂಧಕಾರ ಹಾಗೂ ಕವಿ. ಇವನ ಬರೆಹಗಳೆಲ್ಲ ಫ್ರೆಂಚ್ ಭಾಷೆಯಲ್ಲಿವೆ. ಈತ ಘೆಂಟ್ ನಗರದಲ್ಲಿ ೨೯ ಆಗಸ್ಟ್ ೧೮೬೨ರಂದು ಜನಿಸಿದ, ಜೆಸೂಯಿಟ್ ಕಾಲೇಜಿನಿಂದ ಪದವಿಗಳಿಸಿದ ಮೇಲೆ ಘೆಂಟ್ ವಿಶ್ವವಿದ್ಯಾಲಯದಲ್ಲಿ ಕಾನೂನು ವ್ಯಾಸಂಗ ಮಾಡಿದ, ವಿದ್ಯಾರ್ಥಿ ದೆಸೆಯಲ್ಲಿಯೇ ಸಾಹಿತ್ಯ ರಚನೆಗೆ ತೊಡಗಿದ. ನ್ಯಾಯವಾದಿಯಾಗಿದ್ದ ತನ್ನ ತಂದೆಯ ಅಪೇಕ್ಷೆಯಂತೆ ಕಾನೂನು ವ್ಯಾಸಂಗ ಮಾಡಿ ಬ್ಯಾರಿಸ್ಟರ್ ಆದರೂ ಇತನ ಒಲವು ಹೆಚ್ಚಾಗಿ ಸಾಹಿತ್ಯದ ಕಡೆಗೇ ಇತ್ತು. ಹೀಗಾಗಿ ನ್ಯಾಯವಾದಿ ವೃತ್ತಿಯನ್ನು ನೆಪಮಾತ್ರ ಸಾಗಿಸಿಕೊಂಡು ಸಂಪೂರ್ಣ ಬರೆವಣಿಗೆಯಲ್ಲಿ ಮಗ್ನನಾದ. ೧೯೮೯ರಲ್ಲಿ ಇವನ ಮೊದಲ ಕವಿತಾ ಸಂಗ್ರಹ ' ಹಾಟ್ ಹೌಸಸ್' ಮತ್ತು ಮೊದಲ ನಾಟಕ 'ಪ್ರಿನ್ಸೆಸ್ ಮ್ಯಾಲೀನೆ' ಪ್ರಕಟವಾದವು. ಈ ನಾಟಕ ವಿಮರ್ಶಕರ ಪ್ರಶಂಸೆಗೆ ಪಾತ್ರವಾಯಿತು. ಸಾಹಿತ್ಯ ಪ್ರಿಯರು ಇತನನ್ನು ಫ್ಲೆಮಿಷ್ ಷೆಕ್ಸ್‌ಪಿಯರ್ ಎಂದು ಕೊಂಡಾಡಿದರು. ಅನಂತ ಒಂದಾದ ಮೇಲೊಂದು ನಾಟಕಗಳು ಪ್ರಕಟವಾಗತೊಡಗಿದವು. ೧೯೫ರಲ್ಲಿ ಈತನಿಗೆ ಜಾರ್ಜೆಟ್ ಲೆಬ್ಲಾಂಕ್ ಎಂಬ ಪ್ರಸಿದ್ಧ ರಂಗಭೂಮಿ ನಟಿ ಹಾಗೂ ಗಾಯಕಿಯ ಪರಿಚಯವಾಯಿತು. ಈ ಪರಿಚಯ ಸ್ನೇಹವಾಗಿ, ಪ್ರೀತಿಯಾಗಿ ಮದುವೆಯಾಗದಿದ್ದರೂ ಮುಂದೆ ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಉಳಿದು

ಬಂತು. ಈತನ ಬಹುಪಾಲು ನಾಟಕಗಳಲ್ಲಿ ಪ್ರಧಾನ ಸ್ತ್ರೀ–ಪಾತ್ರಗಳನ್ನು ಈಕೆ ಅಭಿನಯಿಸುತ್ತಿದ್ದಳು. ಈತ ೧೮೯೭ರಲ್ಲಿ ಘೆಂಟ್ ನಗರವನ್ನು ಬಿಟ್ಟು, ಲೆಬ್ಲಾಂಕಳೊಡನೆ ಪ್ಯಾರಿಸ್ಸಿಗೆ ಹೋಗಿ ಗ್ರಾಸ್ ಎಂಬಲ್ಲಿ, ಗ್ರಾಮೀಣ ಪರಿಸರದಲ್ಲಿ ಮನೆಮಾಡಿಕೊಂಡು ಜೀವಿಸತೊಡಗಿದ. ಈ ಸಂದರ್ಭದಲ್ಲಿ ಈತ ಪ್ರಾಣಿಜೀವನ ಕುರಿತು ಕೆಲವು ವಿಶಿಷ್ಟ ಬಗೆಯ ಪ್ರಬಂಧಗಳನ್ನು ರಚಿಸಿ ವಿಖ್ಯಾತನಾದ, ಜೇನುಹುಳುಗಳ ಜೀವನ ಕುರಿತ ದಿ ಲೈಫ್ ಆಫ್ ದಿ ಬೀಸ್ (೧೯೦೧) ಅಂಥ ಕೃತಿಗಳಲ್ಲೊಂದು. ೧೯೦೪ರಲ್ಲಿ ಈತನ ತಂದೆ ನಿಧನನಾದಾಗ ಆಸ್ತಿಯ ಹೊಣೆಗಾರಿಕೆಯ ಜೊತೆಗೆ ಇವನಿಗೆ ಆರ್ಥಿಕ ಸ್ವಾತಂತ್ರ್ಯ ಲಭ್ಯವಾಯಿತು. ಅನಂತರ ಪ್ಯಾರಿಸ್ ತೊರೆದು ದಕ್ಷಿಣ ಫ್ರಾನ್ಸ್‌ಗೆ ಹೋಗಿ ನೆಲೆಸಿದ. ೧೯೦೫ರಲ್ಲಿ ಬ್ಲೂಬಡ ಎಂಬ ನಾಟಕವನ್ನು ರಚಿಸಿದ. ಅನಂತರ ಇದು ಇವನ ಮಹೋನ್ನತ ಕೃತಿ ಎಂದು ಪ್ರಸಿದ್ಧಿಯಾಯಿತು. ರಷ್ಯನ್ ರಂಗಭೂಮಿಯ ಪ್ರಸಿದ್ಧ ನಿರ್ದೇಶಕ ಸ್ಟಾನಿಸ್ ಲಾವೆಸ್ಕಿಯ ನಿರ್ದೇಶನದಲ್ಲಿ ಈ ನಾಟಕದ ಮೊದಲ ಪ್ರದರ್ಶನ ೧೯೦೮ರಲ್ಲಿ ಮಾಸ್ಕೋದಲ್ಲಿ ನಡೆಯಿತು.

೧೯೧೪ರಲ್ಲಿ ಮೊದಲನೆಯ ಮಹಾಯುದ್ಧ ಆರಂಭವಾದಾಗ ಈತ ಸೈನ್ಯ ಸೇರಲು ತಾಯ್ನಾಡಾದ ಬೆಲ್ಜಿಯನ್‌ಗೆ ವಾಪಸ್ಸಾದ. ಆದರೆ ವಯಸ್ಸಿನ ಕಾರಣಕ್ಕಾಗಿ ಈತನಿಗೆ ಸೈನ್ಯ ಸೇರುವ ಅವಕಾಶವಾಗಲಿಲ್ಲ. ಆಗ ಈತನಿಗೆ ೫೨ ವರ್ಷ ವಯಸ್ಸು ಬೆಲ್ಜಿಯಮ್ ಜರ್ಮನ್ ಆಕ್ರಮಣಕ್ಕೆ ಒಳಗಾದಾಗ ತನ್ನ ದೇಶದ ಪರವಾಗಿ ಈತ ಇಟಲಿ, ಸ್ಪೇನ್, ಇಂಗ್ಲೆಂಡ್ ಅಮೇರಿಕ ದೇಶಗಳಲ್ಲಿ ಪ್ರವಾಸ ಕೈಗೊಂಡು ಸಾರ್ವಜನಿಕ ಭಾಷಣಗಳನ್ನು ಮಾಡಿ, ಲೇಖನಗಳನ್ನು ಬರೆದು ಜನಜಾಗೃತಿ ಮೂಡಿಸಿದ, ೧೯೧೯ರಲ್ಲಿ ಲೆಬ್ಲಾಂಕಳನ್ನು ತೊರೆದು ನಟಿ ರೀನೆ ದಹನ್ ಎಂಬಾಕೆಯನ್ನು ಮದುವೆಯಾದ, ಯುದ್ಧಾನಂತರದ ದಿನಗಳಲ್ಲಿ ಈ ಸಾರ್ವಜನಿಕ ಜೀವನದಿಂದ ಸಂಪೂರ್ಣವಾಗಿ ದೂರವಾಗಿ ಬರೆವಣಿಗೆಯಲ್ಲಿ ತೊಡಗಿದ್ದ. ೧೯೩೦ರಲ್ಲಿ ಇಟಲಿಗೂ, ಫ್ರಾನ್ಸಿಗೂ ಮಧ್ಯದ ಗಡಿಯಲ್ಲಿರುವ ನೀಸ್ ನಗರದಲ್ಲಿ ಒಂದು ಸುಂದರವಾದ ಮನೆಯನ್ನು ಪಡೆದು ವಿಶ್ರಾಂತಿ ಜೀವನ ನಡೆಸಿದ, ಎರಡನೆಯ ಮಹಾಯುದ್ದ ಆರಂಭವಾದಾಗ ಈತ ಪೋರ್ಚುಗಲ್‌ಗೆ ಹೋದ ಬೆಲ್ಜಿಯಮ್ ಫ್ರಾನ್ಸ್‌ಗಳ ಮೇಲೆ ದಾಳಿಯಾಗುವ ತನಕ ಅಲ್ಲಿದ್ದ. ಜರ್ಮನರ ಕ್ರೌರ್ಯ, ಹಿಂಸೆಗಳನ್ನು ಕಂಡು ಹೇಸಿ ಅಮೇರಿಕಕ್ಕೆ ಹೋದ, ನ್ಯೂಯಾರ್ಕ್‌ನಲ್ಲಿ ಸುಮಾರು ಏಳು ವರ್ಷಗಳ ಕಾಲ ಅಜ್ಞಾತ ಜೀವನ ನಡೆಸಿ ೧೯೪೭ರಲ್ಲಿ ಮತ್ತೆ ನೀಸ್‌ಗೆ ವಾಪಸ್ಸಾದ. ೧೯೪೮ರಲ್ಲಿ ಇವನ ಜೀವನಚರಿತ್ರೆ (ಮೆಮ್ವರ್) ಮೊನಾಕೋದಲ್ಲಿ ಪ್ರಕಟವಾಯಿತು. ಈತ ತನ್ನ ೮೬ನೆಯ ವಯಸ್ಸಿನಲ್ಲಿ ೬ ಮೇ ೧೯೪೯ ರಂದು ನಿಧನ ಹೊಂದಿದ.

ಬೆಲ್ಜಿಯಮ್ ಸಾಹಿತ್ಯ ಲೋಕದ ಮಹತ್ವದ ಹೆಸರುಗಳಲ್ಲಿ ಮ್ಯಾಟರ್ ಲಿಂಕನದು ಬಹು ಮುಖ್ಯವಾದುದು. ಪದ್ಯ, ಕಾವ್ಯ, ನಾಟಕ, ತತ್ತ್ವ ಚಿಂತನೆಯ ಪ್ರಬಂಧಗಳು, ವೈಜ್ಞಾನಿಕ ವಿಚಾರಗಳು ಇವುಗಳನ್ನೊಳಗೊಂಡ ದೊಡ್ಡ ಸಾಹಿತ್ಯ

ಸೃಷ್ಟಿಯನ್ನು ಈತ ತನ್ನ ದೇಶಕ್ಕೆ ಬಿಟ್ಟುಹೋಗಿದ್ದಾನೆ. ಮನುಷ್ಯನ ಹೃದಯರಂಗದಲ್ಲಿ ಗುಪ್ತಗೋಚರವಾಗಿ ಪ್ರತಿಕ್ಷಣವೂ ನಡೆಯುವ ನಾಟಕಕ್ಕೆ ಒಂದು ಮೂರ್ತಸ್ವರೂಪ ವನ್ನು ಈತ ತನ್ನ ನಾಟಕದಲ್ಲಿ ಕೊಟ್ಟಿದ್ದಾನೆ. ಈತನ ಪ್ರಬಂಧಗಳಲ್ಲಿ ಮಾನವನ ಆಸೆ-ಆಕಾಂಕ್ಷೆಗಳ ಉತ್ತಮೋತ್ತಮ ಚಿತ್ರವನ್ನು ನಾವು ಕಾಣಬಹುದಾಗಿದೆ. ತಾತ್ವಿಕತೆ ಹಾಗೂ ಸಾಂಕೇತಿಕತೆ ಇವನ ಬರೆವಣಿಗೆಯ ಪ್ರಧಾನ ಗುಣ, ನಾಟಕಕಾರನೆಂದೇ ಪ್ರಸಿದ್ಧನಾಗಿರುವ ಈತ ಇಪ್ಪತ್ತೈದಕ್ಕೂ ಹೆಚ್ಚು ನಾಟಕಗಳನ್ನೂ ರಚಿಸಿದ್ದಾನೆ. ಪ್ರಿನ್ಸೆಸ್ ಮ್ಯಾಲೀನೆ (೧೮೮೯), ದಿ ಇಂಟ್ರ್ಯೂಡರ್ (೧೮೯೧), ದಿ ಬ್ಲೈಂಡ್ (೧೮೯೧), ದಿ ಸವೆನ್ ಪ್ರಿನ್ಸೆಸ್ (೧೮೯೧), ಪೆಲ್ಲಿಯಸ್ ಆಂಡ್ ಮೆಲಿಸೆಂಡೆ (೧೮೯೩), ಇಂಟಿರಿಯರ್ (೧೮೯೪), ಅಲ್ಲಾದಿನ್ ಅಂಡ್ ಪಲೋಮೈಡ್ಸ್ (೧೮೯೪), ಅಗ್ಲವೈನ್ ಆಂಡ್ ಸ್ಯಾಲಿಸೆಟ್ (೧೮೯೬), ದಿ ಯೂಸ್ಲೆಸ್ ಡೆಲಿವರೆನ್ಸ್ (೧೯೦೧), ಸಿಸ್ಟರ್ ಬಿಟ್ರೈಸ್ (೧೯೦೧), ಮೊನ್ನವನ್ನ (೧೯೦೨), ಜಾಯೋಜೆಲ್ಲಿ (೧೯೦೩), ದಿ ಮಿರಾಕಲ್ ಆಫ್ ಸೆಂಟ್ ಅಂಥೋನಿ (೧೯೦೩), ದಿ ಬ್ಲೂಬರ್ಡ (೧೯೦೮), ಮೇರಿ ಮ್ಯಾಗ್ಡಲೀನ್ (೧೯೦೯), ದಿ ಕ್ಲೌಡ್‌ದಟ್ ಲಿಫ್ಟೆಡ್ (೧೯೧೬), ದಿ ಬೆಟ್ರೊತಲ್ (೧೯೧೮), ದಿ ಪವರ್ ಆಫ್ ದಿ ಡೆಡ್ (೧೦೨೬), – ಇವು ಇವನ ಕೆಲವು ಮುಖ್ಯ ನಾಟಕಗಳು.

ದಿ ಟ್ರೆಷರ್ ಆಫ್ ದಿ ಹಂಬಲ್, ವಿಸ್ಡಮ್ ಅಂಡ್ ಡೆಸ್ಟಿನಿ. ದಿ ಡಬ್ಬಲ್ ಗಾರ್ಡನ್, ಲೈಫ್ ಅಂಡ್ ಫ್ಲವರ್ಸ್, ದಿ ಆಫ್ ದಿಬೀಸ್ (೧೯೦೧) ದಿ ಲೈಫ್ ಆಫ್ ದಿ ವೈಟ್ ಅಂಟ್ (೧೯೨೬)ಅವರ ಎಟರ್‌ನಿಟಿ ಅನ್ ಡೆತ್–ಇವು ಇವನ ವಿಶಿಷ್ಟ ಪ್ರಬಂಧ ಕೃತಿಗಳು.

ಬೆಲ್ಜಿಯಮ್ ದೇಶದ ಭಾಷಾ ಸಾಹಿತ್ಯದ ಪುನರುತ್ತಾನಕ್ಕಾಗಿ ದುಡಿದ ಮ್ಯಾಟರ್ ಲಿಂಕನಿಗೆ ಅನೇಕ ಗೌರವ ಪ್ರಶಸ್ತಿಗಳು ಲಭ್ಯವಾಗಿವೆ. ಬೆಲ್ಜಿಯಮ್ ಸಾಹಿತ್ಯ ಸಂಘ, ನಾಟಕ ಸಾಹಿತ್ಯಕ್ಕೆ ಮೂರು ವರ್ಷಗಳಿಗೊಮ್ಮೆ ಕೊಡುವ ಬಹುಮಾನವನ್ನು ಈತ ಎರಡು ಬಾರಿ (೧೯೦೨ ಮತ್ತು ೧೯೧೧) ಪಡೆದ ೧೯೧೧ರಲ್ಲಿ ಇವನಿಗೆ ನೋಬೆಲ್ ಪ್ರಶಸ್ತಿ ಲಭಿಸಿತು, ಹೀಗೆ ನೋಬೆಲ್ ಪ್ರಶಸ್ತಿ ಪಡೆದ ಬೆಲ್ಜಿಯಮ್ ಲೇಖಕರಲ್ಲಿ ಈತನೇ ಮೊದಲಿಗ, ೧೯೩೨ರಲ್ಲಿ ಇವನಿಗೆ ಕೌಂಟ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇವನ ಮೊನ್ನವನ್ನ ಎಂಬ ನಾಟಕವನ್ನು ಎಸ್.ಜಿ ಶಾಸ್ತ್ರಿಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. (೧೯೫೨) *

ಮೋಲಿಯೆರ್ (೧೬೨೨ – ೭೩)

೧೭ನೆಯ ಶತಮಾನದ ಫ್ರೆಂಚ್ ರಂಗಭೂಮಿಯ ಪ್ರತಿಭಾವಂತ ನಾಟಕಕಾರ. ನಟ ಹಾಗೂ ನಿರ್ದೇಶಕ. ಇವನ ನಿಜವಾದ ಹೆಸರು ಜಾನ್ ಬ್ಯಾಪ್ಟಿಸ್ಟ್ ಪೋಕ್ಲಾನ್. ಮೋಲಿಯೆರ್ ಇವನ ಕಾವ್ಯನಾಮ. ೧೫ ಜನವರಿ ೧೬೨೨ರಲ್ಲಿ ಪ್ಯಾರಿಸ್‌ನಲ್ಲಿ

ಹುಟ್ಟಿದ. ಇವನ ತಂದೆ ಜಾನ್ ಪೋಕ್ಲಾನ್, ತಾಯಿ ಮಾರಿ ಕ್ರೆಸೆ. ಅರಮನೆಯಲ್ಲಿ ರಾಜನ ಶಯ್ಯಾಗಾರವನ್ನು ಸಜ್ಜುಗೊಳಿಸುವುದು ವಂಶ ಪಾರಂಪರ್ಯವಾಗಿ ಬಂದ ಇವನ ತಂದೆಯ ವೃತ್ತಿಯಾಗಿತ್ತು ಹಾಗಾಗಿ ದೊರೆ ಮತ್ತು ಪ್ರತಿಷ್ಠಿತರ ಸಂಪರ್ಕವನ್ನು ಇವನ ತಂದೆ ಜಾನ್ ಪೋಕ್ಲಾನ್ ಹೊಂದಿದ್ದ. ಮೋಲಿಯೆರ್ ತನ್ನ ಬಾಲ್ಯವನ್ನು ಸುಖವಾಗಿ ಕಳೆದ. ಇವನ ತಾತನೂ ಸೋದರ ಮಾವನೂ ಆಗಿದ್ದ ಲೂಯಿ ಕ್ರೆಸೆಗೆ ನಾಟಕದ ಖಯಾಲಿ. ಅವನೊಂದಿಗೆ ಪದೆ ಪದೇ ನೋಡುತ್ತಿದ್ದ ಸಂಚಾರಿ ನಾಟಕ ಕಂಪನಿಯ ನಾಟಕಗಳು. ಮೂಕಾಭಿನಯ ಪ್ರದರ್ಶನಗಳು ಮೋಲಿಯೆರ್‌ನ ಮೇಲೆ ಗಾಢವಾದ ಪ್ರಭಾವ ಬೀರಿದವು; ನಾಟಕದ ಕಡೆ ಒಲವು ಬೆಳೆಯಿತು. ಇವನಿಗೆ ಹತ್ತು ವರ್ಷವಾಗಿದ್ದಾಗ ತಾಯಿ ತೀರಿಹೋದಳು. ಶಾಲಾ ಶಿಕ್ಷಣದ ಬಳಿಕ ಪ್ರತಿಷ್ಠಿತ ಕ್ಲೇರ್‌ಮೋನ್ ಜೆಸುಯಿಟ್ ಕಾಲೇಜಿನಲ್ಲಿ ಐದು ವರ್ಷ ಓದಿ ಮಾನವಿಕ ವಿಷಯಗಳಲ್ಲಿ ಪದವಿ ಪಡೆದ. ಪ್ರಖ್ಯಾತ ಪ್ರಾಧ್ಯಾಪಕ ಗ್ಯಾಸೆಮಡಿ ಬಳಿ ತತ್ತ್ವಶಾಸ್ತ್ರಧ್ಯಯನ, ಎಪಿಕ್ಯೂರಸ್‌ನ ತತ್ತ್ವಗಳು, ಟೆರೆನ್ಸ್, ಪ್ಲಾಟಿಸ್, ಸೆನಕ – ಇವರ ನಾಟಕಗಳು. ಕಾಲೇಜು ನಾಟಕಗಳಲ್ಲಿ ಅಭಿನಯಿಸುವ ಅವಕಾಶಗಳು, ಕೆಪ್ಲರ್, ಗೆಲಿಲಿಯೊ ಇವರ ವೈಜ್ಞಾನಿಕ ಸಿದ್ಧಾಂತಗಳು ಈತನ ಮನೋಧರ್ಮವನ್ನು ಖಚಿತವಾಗಿ ರೂಪಿಸಿದವು. ಒಳ್ಳೆಯ ಕಲಾಭಿರುಚಿ, ವಿಚಾರವಂತಿಕೆ, ಅಂಧಸಂಪ್ರದಾಯ ಶರಣತೆಯನ್ನು ಪರಿಹಾಸಮಾಡುವ ಧೈರ್ಯ, ಪೊಳ್ಳು ಶಿಷ್ಟಾಚಾರದ ಬಗ್ಗೆ ಅಸಹನೆ ಇವನ ಮನೋಧರ್ಮದಲ್ಲಿ ಸೇರಿಕೊಂಡವು. ೧೬೪೧ರಲ್ಲಿ ಕಾನೂನು ಪದವಿಯನ್ನೂ ಪಡೆದ. ಆದರೆ ತಂದೆ ಆಶಿಸಿದಂತೆ ವಕೀಲನಾಗಲಿಲ್ಲ. ಕುಲಕಸುಬಿಗೂ ಬರಲಿಲ್ಲ. ೧೬೪೩ರಲ್ಲಿ ಭೆಟ್ಟಿಯಾದ ಮಾದಲೆನ ಬೆಜಾರ್ ಎಂಬ ತನಗಿಂತ ನಾಲ್ಕು ವರ್ಷಕ್ಕೆ ದೊಡ್ಡವಳಾದ ಅವಳ ನಡಿಗೆಯ ಆಕರ್ಷಣೆಗೂ ಪ್ರಭಾವಕ್ಕೂ ಸಿಕ್ಕು ಬಣ್ಣದ ಬದುಕನ್ನು ಆರಿಸಿಕೊಂಡ. ಆಕೆ ನಡೆಸುತ್ತಿದ್ದ ಇಲ್ಲುಸ್ತ್ರೆತಿಯೇತರ್ ಎಂಬ ನಾಟಕ ಕಂಪನಿಗೆ ಪಾಲುದಾರನಾಗಿ ಸೇರಿಕೊಂಡು ಮುಖ್ಯ ನಟನಾದ. ಹಣಕಾಸಿನ ವ್ಯವಹಾರ, ಆಡಳಿತಗಳ ಹೊಣೆಯನ್ನೂ ಹೊತ್ತು ಕಂಪನಿಯ ಸಾಲದ ದೆಸೆಯಿಂದ ಎರಡು ಬಾರಿ ಸೆರೆಮನೆಗೂ ಹೋಗಿ ಬಂದ. ಆ ಕಾಲದಲ್ಲಿ ನಾಟಕದವರು ನೀತಿಗೆಟ್ಟವರೆಂಬ ತುಚ್ಛ ಭಾವನೆಯಿದ್ದದರಿಂದ ತನ್ನಿಂದ ತನ್ನ ಮನೆತನದವರಿಗೆ ಕೆಟ್ಟ ಹೆಸರು ಬರದಿರಲೆಂದು ಮೋಲಿಯೆರ್ ಎಂಬ ಗುಪ್ತ ನಾಮವಿರಿಸಿಕೊಂಡ. ಅನಂತರ ಇದೇ ಹೆಸರಿನಲ್ಲಿ ನಟನಾಗಿ, ನಾಟಕ ಕಾರನಾಗಿ ಪ್ರಸಿದ್ಧನಾದ.

ಮೋಲಿಯೆರ್‌ನ ಪ್ರತಿಭೆಯನ್ನು ಮೊದಲು ಗುರುತಿಸಿದ ದ್ಯೂಕ್‌ಡಿ ಇ ಪೆರ್‌ನಾ ಮತ್ತು ಹಳೆಯ ಕಾಲೇಜು ಸಹಪಾಠಿ ಪ್ರಿನ್ಸ್‌ಡಿ ಕೋಂಟಿ ಇವನಿಗೆ ಪೋಷಕರಾಗಿ ಪ್ರೋತ್ಸಾಹಕೊಟ್ಟರು. ಈತ ೧೩ ವರ್ಷ ಕಾಲ ಪ್ರೊವೆನ್ಸ್‌ನಲ್ಲಿ ಪ್ರವಾಸ ಮಾಡುತ್ತ, ನಾನಾ ಊರು, ನಗರಗಳಲ್ಲಿ ನಾಟಕವಾಡಿಸಿದ. ಅನೇಕ ನಾಟಕಗಳನ್ನೂ ರಚಿಸಿದ. ಕಾಮೆಡಿಯ ಡೆಲ್‌ಆರ್ಟ್ ಎಂಬ ಇಟಲಿಯ ಜನಪದ

ನಾಟಕ ಮಾದರಿಯಲ್ಲಿ ಬರೆದ ವೈನೋದಿಕಗಳು, ಸುತ್ತಲಿನ ಸಾಮಾಜಿಕ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸಿ ಬರೆದ ವಿಡಂಬನಾತ್ಮಕ ಪ್ರಹಸನಗಳು, ಹರ್ಷಕಗಳು ಅತ್ಯಂತ ಜನಪ್ರಿಯವಾದವು. ದೂರದ ಹಳ್ಳಿಗಳಿಂದ ಇವನ ನಾಟಕಗಳನ್ನು ನೋಡಲು ಗಾಡಿಕಟ್ಟಿಕೊಂಡು ಬರುತ್ತಿದ್ದರು. ನಾಟಕಗಳಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದ ಈತ ಒಳ್ಳೆಯ ನಟನೆಂದೂ ಹೆಸರಾದ. ಹಾಸ್ಯ ಪಾತ್ರಗಳಿಗಂತೂ ಹೇಳಿ ಮಾಡಿಸಿದಂತಿದ್ದ. ಇವನ ಬಗ್ಗೆ ಎಲ್ಲರಿಗೂ ತುಂಬ ಗೌರವವಿತ್ತು. ಕಂಪನಿಯ ನಟ ನಟಿಯರಂತೂ ಅಪಾರ ಪ್ರೀತಿ ಗೌರವಗಳೊಡನೆ ಈತನಿಗೆ ನಿಷ್ಠರಾಗಿದ್ದರು. ನಾಟಕಗಳು ಚೆನ್ನಾಗಿ ಹಣಗಳಿಸಿದವು. ನಟರು ಸುಖವಾದ ಜೀವನ ನಡೆಸುವಂತಾಯಿತು.

೧೬೫೮ರಲ್ಲಿ ೧೪ನೆಯ ಲೂಯಿ ಚಕ್ರವರ್ತಿಯ ಆಸ್ಥಾನದಲ್ಲಿ ನಾಟಕವಾಡುವ ಅವಕಾಶ ಮೋಲಿಯೆರ್‌ನ ಕಂಪನಿಗೆ ಸಿಕ್ಕಿತು. ಕೋರ್ನಿಲ್ ಎಂಬವನ ನಿಕೊಮೀಡ್ ಎಂಬ ರುದ್ರನಾಟಕವನ್ನೂ ಕಡೆಯಲ್ಲಿ ಲಿ ಡಾಕ್ಟ್ಯೂರ್‌ಅಮೋರೊ ಎಂಬ ಪ್ರಹಸವನ್ನೂ (ಮೋಲಿಯೆರನ ಈ ನಾಟಕ ಕಳೆದುಹೋಗಿದೆ) ಆಡಿದರು. ಪ್ರಹಸನ ಪ್ರಚಂಡ ಮೆಚ್ಚುಗೆಗಳಿಸಿತು. ಅಂದಿನಿಂದ ರಾಜಾಶ್ರಯ ದೊರೆತು ಮೋಲಿಯೆರ್ ಪ್ಯಾರಿಸ್‌ನಲ್ಲಿ ನೆಲೆಸಿದ. ಕೊನೆಯವರೆಗೂ ಇವನಿಗೂ ಇವನ ನಾಟಕಗಳಿಗೂ ವಿಶೇಷವಾದ ರಾಜ ಮನ್ನಣೆ ದೊರೆಯಿತು. ಡ್ಯೂಕ್‌ಡಿ ಅಂಜೊವ್‌ನ ಕೃಪಾಪೋಷನೆಯಲ್ಲಿ ಮೋಲಿಯೆರ್‌ನ ಕಂಪನಿ ತ್ರೂಪ್ ಡ ಮಾಶ್ಯರ್ ಎಂದೂ ೧೬೬೫ರಲ್ಲಿ ಲೂಯಿ ದೊರೆಯ ಆಶ್ರಯದಲ್ಲಿ ತ್ರೂಪ್ ದು ರಾಯ್ ಎಂದೂ ಪ್ರಸಿದ್ಧವಾಯಿತು. ಇದಕ್ಕೆ ಪ್ರತಿಸ್ಪರ್ಧಿಗಳಾಗಿದ್ದ ನಾಟಕ ಕಂಪನಿಗಳಲ್ಲಿ ಓಟೆಲ್‌ದ ಬೋಗೋರ್ನ್ನಾ ಮುಖ್ಯವಾದುದು. ರುದ್ರನಾಟಕಗಳನ್ನು ಆಡುವುದರಲ್ಲಿ ಅದರ ಸಮ ಇನ್ನೊಂದಿರಲಿಲ್ಲ. ಆದರೆ, ಮೋಲಿಯೆರ್‌ನ ಪ್ರಹಸನಗಳ ಪ್ರದರ್ಶನವನ್ನು ಬೇರಾವ ಕಂಪನಿಯೂ ಮೀರಿಸುವುದಕ್ಕಾಗಲಿಲ್ಲ.

೧೬೬೨ರಲ್ಲಿ ೪೦ ವರ್ಷದ ಮೋಲಿಯೆರ್ ತನ್ನ ಕಂಪನಿಯಲೆಲ್ಲ ನಟಿಯೂ ಮಾದಲೆನ ಬೆಜಾರ್‌ಳ ತಂಗಿಯೂ ಆಗಿದ್ದ ೧೯ ವರ್ಷದ ಆರ್ಮಂದೆ ಬೆಜಾರ್‌ಳನ್ನು ಪ್ರೀತಿಸಿ ಮದುವೆಯಾದ. ಆಕೆ ಚಂಚಲೆ, ಸುಖಲೋಲುಪಳು, ಮೋಲಿಯೆರ್‌ನ ಅತಿ ಪ್ರಶಂಸೆಯಿಂದ ಹಾಳಾಗಿದ್ದಳು. ಇವರ ದಾಂಪತ್ಯ ಜೀವನ ಉದ್ದಕ್ಕೂ ವಿರಸದಿಂದ ಕೂಡಿತ್ತು. ೧೬೬೬ರಲ್ಲಿ ಇಬ್ಬರೂ ಬೇರೆಯಾದರು. ೧೬೭೧ರಲ್ಲಿ ಮತ್ತೆ ರಾಜಿಯಾದರು. ಮೋಲಿಯೆರ್ ಈಕೆಯಿಂದ ಪಡೆದ ಮಕ್ಕಳಲ್ಲಿ ಮೊದಲನೆಯ ಮಗ (೧೦ ನವೆಂಬರ್ ೧೬೬೪) ೯ ತಿಂಗಳಲ್ಲಿ, ಕೊನೆಯ ಮಗ (೧೫ ಸೆಪ್ಟೆಂಬರ್ ೧೬೭೨) ಒಂದೇ ತಿಂಗಳಲ್ಲಿ ತೀರಿಹೋಗಿ ಮಧ್ಯೆ ಹುಟ್ಟಿದ ಮಗಳು (೧೬೬೫) ಮಾತ್ರ ಉಳಿದಳು.

೧೬೭೨ರಲ್ಲಿ ಮಾದಲೆನ ಬೆಜಾರ್ ತೀರಿಹೋದುದು, ಎರಡನೆಯ ಮಗನೂ ಸತ್ತದ್ದೂ ಮೊದಲೇ ಅಸ್ವಸ್ಥನಾಗಿದ್ದ ಮೋಲಿಯೆರ್‌ಗೆ ಮಾನಸಿಕ ಆಘಾತ ಉಂಟಾಯಿತು. ಅನೇಕ ಕಾಲ್ಪನಿಕ ಕಾಯಿಲೆಗಳಿಗೊಳಗಾದಂತೆ ಭಯಭ್ರಾಂತಿಗಳಿಂದ

ವಿಹ್ವಲಚಿತ್ತನಾದ. ಆಗ ರಚಿಸಿದ ಲಿ ಮ್ಯಾಲಡ್ ಇಮ್ಯಾಜಿನೇರ್ (ಕಾಲ್ಪನಿಕ ಖಾಯಿಲೆ) ಎಂಬ ನಾಟಕವನ್ನು ೧೬೭೩ ಫೆಬ್ರುವರಿ ೧೭ರಂದು ಆಡುತ್ತಿರುವಾಗ, ಮುಖ್ಯ ಪಾತ್ರದಲ್ಲಿ ಅಭಿನಯಿಸುತ್ತಿದ್ದ ಮೋಲಿಯೆರ್‌ಗೆ ಧನುರ್ವಾಯು ತೋರಿತು. ನಾಟಕ ಮುಗಿದು ಮನೆಗೆ ಕರೆದೊಯ್ದು ಸ್ವಲ್ಪ ಸಮಯದಲ್ಲೇ ಈತ ಕೊನೆಯುಸಿರೆಳೆದ.

ಮೋಲಿಯೆರ್ ಒಟ್ಟು ೩೩ ನಾಟಕಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಒಂದೆರಡು ರುದ್ರನಾಟಕಗಳನ್ನು ಬಿಟ್ಟರೆ ಉಳಿದವುಗಳೆಲ್ಲ ಹರ್ಷಕಗಳೇ. ಇವುಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು. (೧) ಇಟಲಿಯ ಜನಪದ ಹಾಗೂ ಹಳೆಯ ಕ್ಲಾಸಿಕ್ ರಂಗಭೂಮಿಯಿಂದ ಸ್ಫೂರ್ತಿ, ಪ್ರೇರಣೆ ಪಡೆದು ರಚಿಸಿದ ನಾಟಕಗಳು (೨) ಆಸ್ಥಾನಕ್ಕಾಗಿ ಬರೆದ ಮನರಂಜನ ಪ್ರಹಸನಗಳು (೩) ಸಾಮಾಜಿಕ ವಾಸ್ತವ ಜೀವನಾಧರಿತ ವಿಡಂಬನೆಗಳು. ಎಲ್ಲ ನಾಟಕಗಳಲ್ಲೂ ಈ ಮೂರು ಅಂಶಗಳು ಒಂದೊಂದು ಪ್ರಮಾಣದಲ್ಲಿವೆ. ೧೬೫೪ರಲ್ಲಿ ಲಿಯೋನ್ ನಗರದಲ್ಲಿ ಪ್ರದರ್ಶಿತವಾದ ಲಾ ಎತೂರ್ಡ್ (ಮುಟ್ಠಾಳರು) ಇವನ ಮೊಟ್ಟಮೊದಲ ನಾಟಕ; ಅಪಾರ ಮೆಚ್ಚುಗೆಯನ್ನು ಜನಪ್ರಿಯತೆಯನ್ನೂ ಗಳಿಸಿತು. ಈ ಪ್ರೋತ್ಸಾಹದಿಂದಲೇ ಈತ ಇಂಥ ಅನೇಕ ನಾಟಕಗಳನ್ನು ರಚಿಸಿದ. ಇವನ ಎಲ್ಲ ನಾಟಕಗಳು ರಂಗದ ಮೇಲೆ ಅದ್ಭುತವಾಗಿ ಯಶಸ್ವಿಯಾದವು. ಅನೇಕ ಪ್ರದರ್ಶನಗಳನ್ನು ಕಂಡವು. ೧೪ನೆಯ ಲೂಯಿಯಂಥ ಸುಸಂಸ್ಕೃತ ಅಭಿರುಚಿಯುಳ್ಳ ಮೇಲುವರ್ಗದವರಿಗೆ ಹಿಡಿಸಿದಂತೆಯೇ ಜನಸಾಮಾನ್ಯರಿಗೂ ಪ್ರಿಯವಾದವು. ಮೋಲಿಯೆರ್ ದೇಶಾದ್ಯಂತ ಪ್ರಖ್ಯಾತನಾದ. ಅಷ್ಟೇ ವ್ಯಾಪಕವಾಗಿ ಪ್ರತಿಷ್ಠಿತ ಹಾಗೂ ಧಾರ್ಮಿಕ ವರ್ಗಗಳಲ್ಲಿ ದೊಡ್ಡ ವಿವಾದ. ಪ್ರಬಲವಾದ ವಿರೋಧ, ಧಾರ್ಮಿಕ ಗುರುಗಳ ಉಗ್ರ ಬಹಿಷ್ಕಾರಗಳನ್ನು ಈತನ ನಾಟಕಗಳು ಪ್ರಚೋದಿಸಿದವು. ಈತನನ್ನು ಪ್ರತಿಭಾನ್ವಿತ ಕಲಾವಿದನೆಂದು ಮೆಚ್ಚಿಕೊಂಡಂತೆಯೇ ನೀತಿಗೆಟ್ಟವ, ಧರ್ಮಬಾಹಿರ ನಾಸ್ತಿಕ, ಸುಧಾರಣೆಯಾಗಲಿ, ಉದ್ಧಾರವಾಗಲಿ ಸಾಧ್ಯವೇ ಇಲ್ಲದಷ್ಟು ಪತಿತ ಎಂದು ಖಂಡಿಸುವವರೂ ಆಗ ಇದ್ದರು.

ಲಾ ಒಕೋಲ್‌ಡೆ ಮಾರಿ (೧೬೬೧, ದಿ ಸ್ಕೂಲ್ ಫಾರ್ ಹಸ್ಬೆಂಡ್ಸ್), ಲಾ ಇಕೋಲ್ ಡೆ ಫೆಮೆ (೧೬೬೩, ದಿ ಸ್ಕೂಲ್ ಫಾರ್ ವೈವ್ಸ್ ಕ್ರಿಟಿಸೈಸ್ಡ್), ತಾರ್ತುಫ್ ೯೧೬೬೪, ದಿ ಇಂಪೋಸ್ಟರ್), ಲಿ ಮಿಸಾಂತ್ರೋಪ್ (೧೬೬೬, ದಿ ಮಿಸಾಂತ್ರೋಪ್), ಲಿ ಮೆಡಿಸಿನ್ ಮಾಲ್ ರೆ ಲ್ಯೂಯಿ (೧೬೬೬, ದಿ ಡಾಕ್ಟರ್ ಇನ್‌ಸ್ಪೈಟ್ ಆಫ್ ಹಿಮ್‌ಸೆಲ್ಫ್), ಲಾ ಆವೆರ್ (೧೬೬೮, ದಿ ಮೈಸರ್), ಲಿ ಮ್ಯಾಲಡ್ ಇಮ್ಯಾಜಿನೇರ್ (೧೬೭೩, ದಿ ಇಮ್ಯಾಜಿನೆರಿ ಇನ್‌ವ್ಯಾಲಿಡ್) – ಇವು ಇವನ ಪ್ರಸಿದ್ಧ ನಾಟಕಗಳು. ಇವನ ಹಲವು ನಾಟಕಗಳು ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದವಾಗಿವೆ; ರೂಪಾಂತರಗೊಂಡಿವೆ. ಇಂಗ್ಲಿಷ್ ಆದಿಯಾಗಿ ಜಗತ್ತಿನ ಅನೇಕ ಸಾಹಿತ್ಯಗಳ ಮೇಲೆ ಪ್ರಭಾವ ಬೀರಿವೆ. ಇವನ ಸಮಗ್ರ ಕೃತಿಗಳು

ಇಂಗ್ಲಿಷ್ ಭಾಷೆಗೆ ಅನುವಾದವಾಗಿವೆ. ದಿ ಮೈಸರ್ ಅಂಡ್ ಅದರ್ ಪ್ಲೇಸ್ (೧೯೫೩), ಎಯ್ಟ್ ಪ್ಲೇಸ್ (೧೯೫೭), ತಾರ್ತುಫ್ ಅಂಡ್ ಅದರ್ ಪ್ಲೇಸ್ (೧೯೬೭), ದಿ ಮಿಸಾಂತ್ರೋಪ್ ಅಂಡ್ ಅದರ್ ಪ್ಲೇಸ್ (೧೯೬೮)– ಇವು ಕೆಲವು ಮುಖ್ಯ ಸಂಗ್ರಹಗಳು. ಕೆಲವು ನಾಟಕಗಳು ರೂಪಾಂತರಗೊಂಡು ಕನ್ನಡದಲ್ಲೂ ಬಂದಿವೆ. ಎ.ಎನ್. ಮೂರ್ತಿರಾಯರ ಆಷಾಢಭೂತಿ, ಪರ್ವತ ವಾಣಿಯವರ ಹಣಹದ್ದು, ನಾ. ಕಸ್ತೂರಿಯವರ ಗಗ್ಗಯ್ಯನ ಗಡಿಬಿಡಿ – ಇವು ಇಂಥ ಕೆಲವು ಕೃತಿಗಳು.

ಮೋಲಿಯೆರ್ ಒಬ್ಬ ಮಹಾನ್ ಕಲಾವಿದ. ಶ್ರೇಷ್ಠ ನಾಟಕಕಾರ. ಇವನ ನಾಟಕಗಳಲ್ಲಿ ಮುಕ್ತ ಮನಸ್ಸಿನ ಗಹನ ಸಾಮಾಜಿಕ ಚಿಂತನೆಗಳು ವಸ್ತುನಿಷ್ಠವಾಗಿ ಪ್ರತಿಪಾದಿತವಾಗಿದೆ. ಮಾನವ ಸ್ವಭಾವದ ವಿವಿಧ ಪರಿಗಳನ್ನು ಚೆನ್ನಾಗಿಪ್ರದರ್ಶಿಸುವ ಹಲವು ಅವಿಸ್ಮರಣೀಯ ಪಾತ್ರಗಳನ್ನು ಈತ ಕಣ್ಣು ಮುಂದೆ ನಿಲ್ಲಿಸುತ್ತಾನೆ. ಈತನ ನಾಟಕಗಳು ಸಮಾಜದ ರೀತಿ ನೀತಿಗಳಿಗೆ ಹಿಡಿದ ಹಾಸ್ಯಗನ್ನಡಿ; ದೋಷ ದೌರ್ಬಲ್ಯ ಗಳನ್ನು ನಗೆಯ ಮೂಲಕ ತಿದ್ದುವ ಸಾಧನ. ಈತ ಪೂರ್ವಗ್ರಹ ಮುಕ್ತನಾದ ವಿಚಾರವಂತ. ಆರೋಗ್ಯಕರವಾದ ಬುದ್ಧಿಯನ್ನೂ ನ್ಯಾಯವಾದ ವರ್ತನೆಯನ್ನೂ ವಿಕೃತಗೊಳಿಸುವ ಕಾರ್ಯಶೀಲತೆಯನ್ನೂ ಮೊಟಕುಗೊಳಿಸುವ ವಿಚಾರಗಳನ್ನು ಮಾತ್ರ ಬಿಟ್ಟು ಉಳಿದ ಎಲ್ಲ ವಿಚಾರಗಳನ್ನು ಸ್ವೀಕರಿಸುವ ಉದಾರ ಹಾಗೂ ತೆರೆದ ಮನಸ್ಸು ಈತನದು. ನಿರ್ವಿಕಾರವಾದ ವಿಚಾರಪರತೆಯನ್ನೂ ಅತಿರೇಕಗಳನ್ನು ತ್ಯಜಿಸಿ ಅನುಸರಿಸಬೇಕಾದ ಸುವರ್ಣಮಾಧ್ಯಮ ಮಾರ್ಗವನ್ನು ಈತನ ನಾಟಕಗಳು ಎತ್ತಿ ಹಿಡಿಯುತ್ತವೆ. ಈತನ ಹಾಸ್ಯ ಮೊನಚಾದರೂ ಮಾತುಗಳಲ್ಲಿ ನಂಜಿಲ್ಲ. ಮಾನವ ಸಹಜವಾದ ದೋಷ, ದುರ್ವ್ಯಸನಗಳ ಬಗ್ಗೆ ಮರುಕ, ಜೀವನದ ನೋವು ನಿರಾಸೆಗಳ ಬಗ್ಗೆ ನಿರ್ಲಿಪ್ತತೆ ಈತನ ವ್ಯಕ್ತಿತ್ವದ ಹಿರಿಯ ಗುಣಗಳು. ಎಂತಹ ಸಂದರ್ಭದಲ್ಲೂ (ಆರ್ಮಂದೆಯನ್ನು ಮದುವೆಯಾದಾಗ ಅಗಮ್ಯ ಗಮನ ಮಾಡಿದ ಪಾಪವೆಂದು ದೊಡ್ಡ ಗುಲ್ಲಾಗಿ – ಆರ್ಮಂದೆಯು ಮಾದಲೆನ ಬೆಜಾರಳ ತಂಗಿಯಲ್ಲ, ಮಗಳು ಎಂಬ ಊಹೆಯಿಂದ – ತೀವ್ರ ಟೀಕೆ, ನಿಂದೆಗಳಿಗೆ ಈತ ಗುರಿಯಾಗಿದ್ದ) ಈತ ತನ್ನ ಮಾನಸಿಕ ಸಮತೋಲನವನ್ನಾಗಲೀ ಪ್ರಸನ್ನತೆಯನ್ನಾಗಲಿ ಕಳೆದುಕೊಳ್ಳಲಿಲ್ಲ. ಎಷ್ಟೇ ಕಹಗಿಯನ್ನುಂಡರೂ ಜೀವನೋತ್ಸಾಹ, ಉಲ್ಲಾಸಗಳನ್ನು ಉಳಿಸಿಕೊಂಡು ಎಲ್ಲರಿಗೂ ಹಂಚಿದ. ಬದುಕು ಅನಂತವಾದುದು; ಅದರ ಶಕ್ತಿ ವೈವಿಧ್ಯತೆಗಳು ಅಪಾರ; ಮಾನವ ಚೇತನ ಯಾವ ಒಂದು ಸೂತ್ರಕ್ಕಾಗಲಿ, ಕಟ್ಟುಪಾಡಿಗಾಗಲಿ ಸೀಮಿತವಾಗದು – ಎಂಬುದು ಈತನ ದೃಢವಾದ ಅಭಿಮತವಾಗಿತ್ತು. ಸ್ವತಂತ್ರ ಹಾಗೂ ನಿರ್ದಾಕ್ಷಿಣ್ಯ ವಿಚಾರ ಧಾರೆ ಇವನ ಎಲ್ಲ ಕೃತಿಗಳಲ್ಲೂ ಪ್ರತಿಬಿಂಬಿತ ವಾಗಿದೆ. ಈತನ ಶೈಲಿ ಸುಲಲಿತವಾದುದು; ನಿರರ್ಗಳ:ವಾದುದು. ವಿಪುಲತೆ,

ಸಂಕ್ಷಿಪ್ತತೆ ಎರಡರಲ್ಲೂ ಈತ ಸಮರ್ಥ. ಮೋಲಿಯೆರ್‌ನ ಚುರುಕಾದ ಮತ್ತು ಅರ್ಥ ವ್ಯಂಜಕತೆಯುಳ್ಳ ಸಂಭಾಷಣಾ ಚಾತುರ್ಯ ಷೇಕ್‌ಸ್ಪಿಯರ್‌ನ ಹೊರತು ಬೇರಾವ ನಾಟಕಕಾರನಲ್ಲೂ ಕಂಡುಬರುವುದಿಲ್ಲ. (ಕೆ.ಬಿ.ಪಿ.)

ಜೀನ್ ರಾಸೀನ್ (೧೬೩೯–೯೯)

ಫ್ರಾನ್ಸ್‌ನ ಪ್ರಸಿದ್ಧ ದುರಂತನಾಟಕ ಕಾರ. ಪಿಕಾರ್ಡಿಯಲ್ಲಿನ ಲಾಫರ್ಟೆ–ಮಿಲಾನ್‌ನಲ್ಲಿ ೧೬೩೯ ಡಿಸೆಂಬರ್‌ನಲ್ಲಿ ಜನಿಸಿದ. ಚಿಕ್ಕವಯಸ್ಸಿನಲ್ಲಿಯೇ ತಂದೆತಾಯಿಗಳನ್ನು ಕಳೆದುಕೊಂಡ ಇವನನ್ನು ತಂದೆಯ ಅಜ್ಜ ಅಜ್ಜಿ ಬೆಳೆಸಿದರು. ಮೊದಲು ಇವನು ಕಾಲೇಜ್–ಡಿ–ಬ್ಯೂವಾಯ್‌ನಲ್ಲಿ ಓದಿದ. ಅನಂತರ ಪ್ರಸಿದ್ಧ ಪೋರ್ಟ್ ರಾಯಲ್ ಶಾಲೆಯನ್ನು ಸೇರಿದ. ಅಲ್ಲಿ ಅಭಿಜಾತ ಸಾಹಿತ್ಯದ ಬಗೆಗೆ ಅದರಲ್ಲೂ ಗ್ರೀಕ್ ಅಭಿಜಾತ ಸಾಹಿತ್ಯದ ಬಗೆಗೆ ಆಸಕ್ತಿಯುಂಟಾಗಿ ಅದನ್ನು ಆಳವಾಗಿ ಅಧ್ಯಯನ ಮಾಡಿದ.

೧೬೫೮ರಲ್ಲಿ ಇವನು ಪ್ಯಾರಿಸ್‌ಗೆ ಬಂದು, ಅಲ್ಲಿ ತನ್ನ ತಂದೆಯ ದಾಯಾದಿಯ ಮನೆಯಲ್ಲಿ ವಾಸಿಸತೊಡಗಿದ. ಅಲ್ಲಿ ಇವನಿಗೆ ಸಾಹಿತಿಗಳ ಮತ್ತು ಫ್ಯಾಷನ್ ಕಲಾವಿದರ ಪರಿಚಯವಾಯಿತು. ಮುಖ್ಯವಾಗಿ ಲಾ–ಫಾಂಟೇನ್ ಜೊತೆಗಿನ ಇವನ ಸಂಬಂಧ ಗಾಢವಾಯಿತು. ಅನಂತರ ೧೬೬೧ರಲ್ಲಿ ಇವನ ಚಿಕ್ಕಪ್ಪನ ಆಹ್ವಾನದಂತೆ ಧರ್ಮಶಾಸ್ತ್ರವನ್ನು ಅಧ್ಯಯನ ಮಾಡಲು ಹೋದ. ಆ ಮೂಲಕವಾಗಿ ಕ್ರೈಸ್ತಮತದ ಒಪ್ಪಿಗೆಯನ್ನು ಪಡೆಯುವುದು ಇವನ ಉದ್ದೇಶವಾಗಿತ್ತು. ಅಲ್ಲಿದ್ದ ಸುಮಾರು ಒಂದು ವರ್ಷದ ಅವಧಿಯಲ್ಲಿ ತತ್ತ್ವಶಾಸ್ತ್ರ, ಪ್ರಾಚೀನ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯಗಳ ಬಗೆಗೆ ಅಧ್ಯಯನ ಮಾಡಿದ. ಕಾವ್ಯರಚನೆಯನ್ನು ಆರಂಭಿಸಿದ. ಆದರೆ ಕ್ರೈಸ್ತಮತದ ಒಪ್ಪಿಗೆ ಪಡೆಯುವಲ್ಲಿ ವಿಫಲನಾಗಿ ಪ್ಯಾರಿಸ್‌ಗೆ ಹಿಂತಿರುಗಿದ. ಲಾ ಫಾಂಟೇನ್ ಜೊತೆಗೆ ಮೋಲಿಯರ್‌ನ ಸ್ನೇಹವೂ ಇವನಿಗೆ ಲಭಿಸಿತು. ಆದರೆ ಸ್ವಲ್ಪಕಾಲದಲ್ಲಿಯೇ ಮೋಲಿಯರ್ ನೊಡನೆ ಇವನಿಗೆ ವಿರಸವುಂಟಾಯಿತು. ಇದಕ್ಕೆ ಕಾರಣ ತಿಳಿಯದು. ಪರಿಣಾಮವಾಗಿ ಮೋಲಿಯರ್‌ನ ನಾಟಕ ಕಂಪನಿಯಲ್ಲಿ ಪ್ರದರ್ಶನವಾಗುತ್ತಿದ್ದ ಇವನ ಅಲೆಗ್ಸಾಂಡ್ರೆ–ಲೆ–ಗ್ರಾಂಟ್ ಎಂಬ ನಾಟಕವನ್ನು ಇನ್ನೊಂದು ನಾಟಕ ಕಂಪನಿಗೆ ವರ್ಗಾವಣೆ ಮಾಡಲಾಯಿತು. ಮೋಲಿಯರ್ ಕಂಪನಿಯ ಮುಖ್ಯ ನಟಿಯಾಗಿದ್ದ ಮೆಡಮಾಯ್ಸಿಲ್–ಡು–ಪಾರ್ಕ್‌ಳನ್ನು ತನ್ನ ಪ್ರೇಯಸಿಯನ್ನಾಗಿ ಮಾಡಿಕೊಂಡು ಅವಳು ಆ ಕಂಪನಿಯಿಂದ ಹೊರಬರುವಂತೆ ಮಾಡಿದ. ಈತ ಫ್ರೆಂಚ್ ಅಕಾಡೆಮಿಗೆ ೧೬೭೩ರಲ್ಲಿ ಆಯ್ಕೆಯಾದ. ಇವನಿಗೆ ಲಾ–ಫಾಂಟೇನ್, ಬಾಯ್ಲೂರಂತಹ ಗಾಢಸ್ನೇಹಿತರು ಇದ್ದಂತೆ ಕಡುವೈರಿಗಳೂ ಇದ್ದರು. ವಿಮರ್ಶೆಯೆಂದರೆ ರಾಸೀನನಿಗೆ ಆಗುತ್ತಿರಲಿಲ್ಲ. ಆದ್ದರಿಂದ ತನ್ನ ಕೃತಿಯ ವಿಮರ್ಶಕರ ವಿರುದ್ಧ ಕಟುವಾಗಿ ತಿರುಗುಬಾಣ ಬಿಡುವ ಪ್ರವೃತ್ತಿ ಇವನದು. ಇವನು ತನ್ನ ಪತ್ರಗಳಲ್ಲಿ, ತನ್ನ ನಾಟಕಗಳಿಗೆ ಬರೆದ ಮುನ್ನುಡಿಗಳಲ್ಲಿ ತನ್ನ ಎದುರಾಳಿಗಳು

ಮತ್ತು ವಿಮರ್ಶಕರನ್ನು ಕುರಿತು ಕಟುವಾಗಿ ಟೀಕಿಸಿದ್ದಾನೆ. ಇವನು ಪೋರ್ಟ್‌ರಾಯಲ್ ಶಾಲೆಯ ಅಧ್ಯಾಪಕರ ವಿರುದ್ಧ ಮಾಡಿದ ಟೀಕೆಗಳು ಬಹಳ ತೀಕ್ಷ್ಣವಾದವು. ಏಕೆಂದರೆ ಧರ್ಮಶೋಧನಾವಾದಿ ದೃಷ್ಟಿಯುಳ್ಳ ಅವರು ನಾಟಕವನ್ನು ಮತ್ತು ರಂಗಭೂಮಿಯನ್ನು ಅನೈತಿಕವಾದದ್ದೆಂದೂ ಆ ಚಟುವಟಿಕೆಯಲ್ಲಿ ತೊಡಗುವವರು ನೇರವಾಗಿ ನರಕಕ್ಕೆ ಹೋಗುವವರೆಂದೂ ಟೀಕಿಸುತ್ತಿದ್ದರು. ಇವನ ಅಧ್ಯಾಪಕನಾಗಿದ್ದ ನಿಕೋಲ್ ತನ್ನ ಒಂದು ಲೇಖನ ಲೆವಿಷನರೀಸ್‌ನಲ್ಲಿ (೧೬೬೬) ಕಾದಂಬರಿಕಾರರು ಹಾಗೂ ನಾಟಕಕಾರರನ್ನು ಸಾರ್ವಜನಿಕ ಜೀವನದಲ್ಲಿ ವಿಷ ಬೆರೆಸಿದವರೆಂದು ಬರೆದ. ಈತ ಇದಕ್ಕೆ ಉತ್ತರ ರೂಪದಲ್ಲಿ ಎರಡು ಬಹಿರಂಗ ಪತ್ರಗಳನ್ನು ಬರೆದು ಟೀಕಿಸಿದ.

೧೬೬೪-೭೭ರ ಅವಧಿ ಇವನ ಸೃಜನಶೀಲತೆಯ ದೃಷ್ಟಿಯಿಂದ ಬಹಳ ಮುಖ್ಯವಾದ ಕಾಲ. ಈ ಅವಧಿಯಲ್ಲಿ ಇವನ ಪ್ರಸಿದ್ಧ ಕೃತಿಗಳು ರಚನೆಗೊಂಡವು. ಆದರೆ ಈ ಅವಧಿಯಲ್ಲಿನ ಇವನ ವೈಯಕ್ತಿಕ ಜೀವನದ ಬಗೆಗೆ ಹೆಚ್ಚು ತಿಳಿಯುವುದಿಲ್ಲ. ಇವನಿಗೆ ಈ ಅವಧಿಯಲ್ಲಿ ಮೆಡಮಾಯ್ಸಿಲ್-ಡು-ಪಾರ್ಕ್ ಅಲ್ಲದೆ ಇನ್ನೊಬ್ಬಳೂ ಪ್ರಸಿದ್ಧ ನಟಿ ಮೆಡಮಾಯ್ಸಿಲ್-ಚಾಮ್ ಎಮೆಸ್ಲೆ ಎನ್ನುವವಳ ಜೊತೆ ನಿಕಟ ಸಂಪರ್ಕವಿತ್ತೆಂದು ತಿಳಿದುಬರುತ್ತದೆ. ಈ ಇಬ್ಬರು ನಟಿಯರೂ ಇವನ ನಾಟಕಗಳಲ್ಲಿ ನಟಿಸುತ್ತಿದ್ದರು. ಇವನಿಗೆ ಪ್ಯಾರಿಸ್‌ನ ಅಧೋಲೋಕ ಚಿರಪರಿಚಿತವಾಗಿತ್ತು. ಆ ಕಾಲದ ಪ್ಯಾರಿಸ್ಸಿನ ಅಧೋಲೋಕದ ಪ್ರಸಿದ್ಧ ಮಾಟಗಾತಿಯೆನಿಸಿದ್ದ ಲವಾಯ್ಸಿನ್ ಎಂಬುವಳ ಸಹಾಯದಿಂದ ತನ್ನ ಪ್ರೇಯಸಿಯರಲ್ಲಿ ಒಬ್ಬಳನ್ನು ವಿಷಹಾಕಿ ಕೊಲ್ಲಿಸಿದನೆಂದ ಪ್ರತೀತಿಯಿತ್ತು. ಆದರೆ ಇವೆಲ್ಲ ಕಟ್ಟುಕಥೆ ಎಂಬುದು ಇತ್ತೀಚಿನ ಸಂಶೋಧನೆಗಳಿಂದ ತಿಳಿದಿದೆ. ಇವನ ನಾಟಕಗಳಲ್ಲಿ ಈ ರೀತಿಯ ಹಿಂಸೆ ಅದರಲ್ಲೂ ಸ್ತ್ರೀಯರಿಂದಾಗುವ ಹಿಂಸೆ ತೀವ್ರವಾಗಿ ಚಿತ್ರಣಗೊಂಡಿದೆ. ಆ ಕಾಲದಲ್ಲಿ ಪ್ಯಾರಿಸ್ ಮತ್ತು ವರ್ಸೆಲ್ಸ್‌ಗಳಲ್ಲಿದ್ದ ಹಿಂಸಾತ್ಮಕ ಜೀವನದ ಮೇಲೆ ಈತ ಮಾಡಿದ ವ್ಯಂಗ್ಯ ವ್ಯಾಖ್ಯಾನವೆಂದು ಈಗಿನ ವಿಮರ್ಶಕರು ಗುರುತಿಸಿದ್ದಾರೆ.

ಈತ ನಾಟಕರಚನೆಯನ್ನು ಆರಂಭಿಸಿದಾಗ, ಸಾಮಾನ್ಯವಾಗಿ ಎರಡು ರೀತಿಯ ದುರಂತನಾಟಕಗಳು ಫ್ರಾನ್ಸ್‌ನಲ್ಲಿ ಪ್ರಾಚುರ್ಯದಲ್ಲಿದ್ದವು. ೧) ಗಂಭೀರ ವಸ್ತುಗಳನ್ನುಳ್ಳ, ರಾಜಕೀಯ ಒಳಸಂಚು ಕುತಂತ್ರಗಳನ್ನೊಳ ಗೊಂಡ, ಮಹತ್ವಾಕಾಂಕ್ಷೆಯ ಕ್ರೂರ ನಾಯಕ, ನಾಯಿಕೆಯರನ್ನುಳ್ಳ ಕಾರ್ನೀಲನ ನಾಟಕಗಳು (ಇವುಗಳಲ್ಲಿ ಪ್ರೇಮಪ್ರಸಂಗಗಳಿಗೆ ಪ್ರಾಮುಖ್ಯ ವಿರುತ್ತಿರಲಿಲ್ಲ) ೨) ಯುವಜನಾಂಗಕ್ಕೆ ಪ್ರಿಯವಾಗುವಂತಹ, ರಾಜಕೀಯ ಕುತಂತ್ರಗಳಿಗೆ ಪ್ರಾಮುಖ್ಯ ಕೊಡದೆ, ಅಂತರಂಗದ ವಿಷಯಗಳಿಗೆ ಪ್ರಾಮುಖ್ಯ ಕೊಡುವ ಕ್ವಿನಾಲ್ಟನ ನಾಟಕಗಳು. ಕೆಲವು ನಾಟಕಗಳು ಈ ಎರಡೂ ಅಭಿರುಚಿಗಳನ್ನು ಸಮಾನವಾಗಿ ಒಳಗೊಂಡಿರುವುದನ್ನು ಕಾಣಬಹುದು.

ಇವನ ಮೊದಲ ನಾಟಕ ಲಾ ಥೆಬೈಡೆ (೧೬೬೪) ಕಾರ್ನೀಲನ ಪ್ರಕಾರಕ್ಕೆ ಸೇರಿದ್ದು, ಇಲ್ಲಿ ಮಹತ್ವಾಕಾಂಕ್ಷೆಯುಳ್ಳ ವ್ಯಕ್ತಿಗಳು ಸಿಂಹಾಸನಕ್ಕಾಗಿ ಹೋರಾಡುತ್ತಾರೆ.

ಇವನ ಅಲೆಗ್ಸಾಂಡ್ರೆ–ಲೆ–ಗ್ರಾಂಟ್ (೧೬೬೫) ನಾಟಕದ ಮೇಲೆ ಕ್ವಿನಾಲ್ಟನ ಪ್ರಭಾವ ಗಾಢವಾಗಿರುವುದನ್ನು ಕಾಣಬಹುದು. ಇದರ ನಾಯಕ ಕೇವಲ ಪ್ರೇಮಜ್ವರದಿಂದ ಪೀಡಿತನಾದ ಒಬ್ಬ ಗ್ರಾಮ್ಯ ಪ್ರಣಯಿ. ಆ್ಯಂಡ್ರೋಮ್ಯಾಕೆ (೧೬೬೭) ನಾಟಕ ರಚನೆಯೊಂದಿಗೆ ಇವನ ವಿಶಿಷ್ಟ ನಾಟಕ ಪ್ರತಿಭೆ ಪ್ರಕಾಶಕ್ಕೆ ಬಂದಿತು. ಮಾನವೀಯ ಭಾವನೆಗಳ ಪಾರಸ್ಪರಿಕ ಪ್ರಭಾವ ಅಥವಾ ಅನ್ಯೋನ್ಯ ಕ್ರಿಯೆಯ ಚಿತ್ರಣ, ಚಿತ್ತಕ್ಷೋಭೆಯಂಟು ಮಾಡುವ ಪ್ರೇಮಕಾಮದ ಚಿತ್ರಣ, ಇದೇ ತೀಕ್ಷ್ಣ ಅಸೂಯೆಯಾಗಿ, ದ್ವೇಷವಾಗಿ, ಬುದ್ಧಿಭ್ರಮಣೆ ಮತ್ತು ಅಪರಾಧದಲ್ಲಿ ಕೊನೆಯಾಗುವುದು ಇವುಗಳನ್ನು ಇವನು ಚಿತ್ರಿಸುವ ರೀತಿ, ಈ ನಾಟಕದಿಂದ ಆರಂಭವಾಯಿ ತು. ಅರಿಸ್ಟೋಫೆನಿಸ್‌ನ ಪ್ರಭಾವವುಳ್ಳ–ಲೆ–ಪ್ಲೆಡ್ಯೂರ್ಸ್ ಎಂಬ ಏಕಮಾತ್ರ ವಿನೋದ ನಾಟಕವನ್ನೂ ಇವನು ಬರೆದಿದ್ದಾನೆ. ಬ್ರಿಟಾನಿಕಸ್ (೧೬೬೯) ನಾಟಕದಲ್ಲಿ ಟಾಸಿಟಸ್‌ನಿಂದ ವಸ್ತುವನ್ನು ತೆಗೆದುಕೊಂಡು, ರೋಮನ್ ಚಕ್ರಾಧಿಪತ್ಯದ ಅತ್ಯಂತ ಕರಾಳ ಯುಗವನ್ನು ಚಿತ್ರಿಸಿದ್ದಾನೆ. ಬೇರೇನಿಸೆಲ್ (೧೬೭೦) ನಾಟಕದಲ್ಲಿ ಶುದ್ಧ ಮನಶ್ಶಾಸ್ತ್ರೀಯ ವಸ್ತುವನ್ನು ಬಳಸಿಕೊಳ್ಳಲಾ ಗಿದೆ. ಕರುಣಾಜನಕ ಸ್ಥಿತಿಯಲ್ಲಿರುವ ನಾಯಕಿಯ ಅಂತರಂಗದ ತುಮುಲ ವನ್ನು ಇದು ಚಿತ್ರಿಸುತ್ತದೆ. ಕ್ರಿಯೆ ಅತ್ಯಂತ ಸರಳವಾಗಿದೆ. ಆದರೆ ಬಜಾಜೆಟ್ ನಾಟಕ (೧೬೭೨) ಅಷ್ಟೇ ಸಂಕೀರ್ಣ ಕ್ರಿಯೆಯನ್ನುಳ್ಳದ್ದಾಗಿದೆ. ಇದರ ವಸ್ತು ಟರ್ಕಿಯಲ್ಲಿ ನಡೆದಂತೆ ಇದೆ. ಹಿಂಸಾತ್ಮಕ ಒಳಸಂಚುಗ ಳಿಂದ ಕೂಡಿದೆ. ಮತ್ರಿದಾತೆ (೧೬೭೩) ಕಾರ್ನಿಲನ ಸಂಪ್ರದಾಯದ ನಾಟಕ. ಇದರಲ್ಲಿ ಪ್ರೇಮಕಥೆ, ರಾಜಕೀಯ ಮಹತ್ವಾಕಾಂಶೆಗೆ ಅಧೀನವಾಗಿ ಬರುತ್ತದೆ. ಇಫಿಜೇನಿ (೧೬೭೪) ನಾಟಕದಲ್ಲಿ ರಾಜಕೀಯ ದುರಂತ ಮತ್ತು ವೈಯಕ್ತಿಕ ಕಾಮದ ವಸ್ತುಗಳಲ್ಲಿ ಹೊಂದಾಣಿಕೆ ಮಾಡುವ ಪ್ರಯತ್ನವನ್ನು ಕಾಣಬಹುದು. ಆದರೆ ಫೀಡ್ರೆ (೧೬೭೭) ವಸ್ತು ಮತ್ತು ಅದರ ನಿರ್ವಹಣೆಯ ದೃಷ್ಟಿಯಿಂದ ಬಹಳ ಧೈರ್ಯದ ನಾಟಕ. ಇದರಲ್ಲಿ ಅಕ್ರಮ ಪ್ರಣಯದ ಚಿತ್ರಣ ಅತ್ಯಂತ ತೀವ್ರವಾಗಿ ರೂಪಗೊಂಡಿದೆ. ಗ್ರೀಕ್ ಕಥೆಯನ್ನು ಆಧರಿಸಿ ಇದರಲ್ಲಿ ಪ್ರಾಚೀನ ಗ್ರೀಕರ ಅದೃಷ್ಟದ ಪರಿಕಲ್ಪನೆ, ಕ್ರಿಶ್ಚಿಯನ್ ಧರ್ಮದ ಕರುಣೆ, ದೈವದ ಅನಂತಶಕ್ತಿ, ಮಾನವೀಯ ಕಾಮ ಇವುಗಳ ಸಂಕೀರ್ಣ ಸಂಬಂಧವನ್ನು ಅತ್ಯಂತ ಸಮರ್ಪಕವಾಗಿ ಕಾವ್ಯಾತ್ಮಕವಾಗಿ ಚಿತ್ರಿಸಲಾಗಿದೆ.

೧೬೭೭ರಲ್ಲಿ ಈತ ಮತ್ತು ಬಾಯ್ಲೂರನ್ನು ರಾಜಾಸ್ಥಾನದ ಅಧಿಕೃತ ಇತಿಹಾಸ ಲೇಖಕರನ್ನಾಗಿ ನೇಮಿಸಲಾಯಿತು. ಇದರಿಂದ ಇವನಿಗೆ ಆರ್ಥಿಕವಾಗಿ ಒಂದು ನೆಲೆ ಸಿಕ್ಕಂತಾಯಿತು. ಅದೇ ವರ್ಷ ಈತ ಮದುವೆಯಾದ, ಅನಂತರ ಇವನಿಗೆ ಇಬ್ಬರು ಗಂಡುಮಕ್ಕಳು ಐವರು ಹೆಣ್ಣುಮಕ್ಕಳು ಹುಟ್ಟಿದರು. ಅನಂತರ ರಂಗಮಂದಿರದೊಂದಿಗಿನ ತನ್ನ ಎಲ್ಲ ಸಂಬಂಧಗಳನ್ನೂ ಕಡಿದುಕೊಂಡನಾದರೂ ನಾಟಕರಚನೆಯನ್ನು ನಿಲ್ಲಿಸಲಿಲ್ಲ. ಎಸ್ತರ್ (೧೬೮೯) ಮತ್ತು ಅಥೀಲಿ (೧೬೯೧)

ಇವು ಈ ಅವಧಿಯಲ್ಲಿ ಬರೆದ ನಾಟಕಗಳು; ರೂಪ ಮತ್ತು ವಸ್ತುವಿನ ದೃಷ್ಟಿಯಿಂದ ಸ್ವೋಪಜ್ಞತೆಯಿಂದ ಕೂಡಿವೆ. ಹಳೆಯ ಒಡಂಬಡಿಕೆಯ ಮೇಲೆ ಆಧರಿತವಾದ ಅಥೀಲಿ ಅತ್ಯಂತ ಶಕ್ತಿಯುತವಾದ ನಾಟಕ. ದೈವಕೋಪ ಮತ್ತು ದೈವಾನುಗ್ರಹದ ವಸ್ತುವನ್ನುಳ್ಳ ಈ ನಾಟಕ ಕ್ಯಾಥೊಲಿಕ್ ಧರ್ಮದ ನಿಷ್ಠೆಯಿಂದ ಕೂಡಿದೆ. ಮೇಳದ ವಿಶಿಷ್ಟ ಚೆಲುವು, ಪರಿಣಾಮಕಾರಿಯಾದ ರಂಗತಂತ್ರ, ಸೂಕ್ಷ್ಮ ಪಾತ್ರಚಿತ್ರಣಗಳಿಂದ ಕೂಡಿ ಶ್ರೇಷ್ಠ ನಾಟಕಗಳಲ್ಲೊಂದಾಗಿದೆ. ಇದರಿಂದ ನಾಟಕಕಾರನಾಗಿ ರಾಜಾಸ್ಥಾನ ದಲ್ಲಿ ಇವನ ಸ್ಥಾನ ಭದ್ರವಾಯಿತು. ಈತ ೧೬೯೯ರ ಏಪ್ರಿಲ್‌ನಲ್ಲಿ ನಿಧನಹೊಂದಿದ. ಇವನ ಇಚ್ಛೆಯಂತೆ ಪೋರ್ಟ್‌ರಾಯಲ್‌ನಲ್ಲಿ ಇವನನ್ನು ಸಮಾಧಿ ಮಾಡಲಾಯಿತು. ಅನಂತರ ಪೋರ್ಟ್‌ರಾಯಲ್ ನಾಶವಾದಾಗ ಇವನ ಅಸ್ಥಿಗಳನ್ನು ಪ್ಯಾರಿಸ್‌ನ ಸೆಯಿಂಟ್-ಎಟಿಯಾನ್ನೆ-ಡು ಮಾಂಟ್ ಚರ್ಚ್‌ಗೆ ತಂದು ಅಲ್ಲಿ ಮರು ಸಮಾಧಿ ಮಾಡಲಾಯಿತು.

ಈತ ಅತ್ಯಂತ ತೀಕ್ಷ್ಣ ಪ್ರತಿಭೆಯ ನಾಟಕಕಾರ. ಇವನ ನಾಟಕಗಳು ಸರಳವಾಗಿದ್ದರೂ ಪ್ರಭಾವಶಾಲಿಯಾದಂಥವು. ಪ್ರಾಚೀನ ಗ್ರೀಕ್ ದುರಂತನಾಟಕಗಳು ಮತ್ತು ಅರಿಸ್ಟಾಟಲನ ದುರಂತ ನಾಟಕ ಪರಿಕಲ್ಪನೆ ಇವನಿಗೆ ಮಾರ್ಗದರ್ಶಕವಾಗಿದ್ದವು. ವಸ್ತುವಿಗನುಗುಣವಾಗಿ ಗಂಭೀರ ಅಥವಾ ಸರಳವಾಗುವ ಇವನ ನಾಟಕಗಳ ಶೈಲಿ ವಿಶಿಷ್ಟವಾದದ್ದು. ಅಲೆಗ್ಸಾಂಡ್ರೈನ್ ಛಂದದಲ್ಲಿ ರಚನೆಗೊಂಡರುವ ಇವನ ನಾಟಕಗಳು ಅಭಿಜಾತ ಶೈಲಿಗೆ ಶ್ರೇಷ್ಠ ಉದಾಹರಣೆಗಳಾಗಿವೆ. *

ವಾಲ್ಟೇರ್ (೧೬೯೪-೧೭೭೮)

ಪ್ರಸಿದ್ಧ ಫ್ರೆಂಚ್ ಬರೆಹಗಾರ, ವಿಮರ್ಶಕ, ತತ್ತ್ವಜ್ಞಾನಿ ಹಾಗೂ ದಾರ್ಶನಿಕ. ಈತ ಯುಗಪ್ರವರ್ತಕ ವ್ಯಕ್ತಿಯಾಗಿದ್ದುದರಿಂದ ಇವನ ಕಾಲವನ್ನು ವಾಲ್ಟೇರ್‌ಯುಗ ಎಂದು ಕರೆಯಲಾಗಿದೆ. ಈತ ೧೬೯೪ ನವೆಂಬರ್ ೨೪ರಂದು ಪ್ಯಾರಿಸ್‌ನಲ್ಲಿ ಜನಿಸಿದ. ಇವನ ಪೂರ್ಣ ಹೆಸರು ಫ್ರಾಂಕಾಯ್ಸ್ ಮಾರಿ ಅರೂಟ್. ಜೆಸೂಯಿಟ್ ಶಾಲೆಯಲ್ಲಿ ವಿದ್ಯಾಭ್ಯಾಸ ನಡೆಯಿತು. ಕಾನೂನು ಅಧ್ಯಯನದ ಕಡೆ ಸ್ವಲ್ಪ ಆಸಕ್ತಿಯಿದ್ದುದರಿಂದ ೧೬ನೆಯ ವಯಸ್ಸಿಗೆ ಶಾಲೆ ಬಿಟ್ಟ. ಅನಂತರ ಶ್ರೀಮಂತರ ಗುಂಪಿನೊಡನೆ ಸ್ನೇಹ ಬೆಳೆಸಿದ. ಈತನ ಕುಶಾಗ್ರಮತಿ, ಪದ್ಯರಚನ ಸಾಮರ್ಥ್ಯ, ವಾಕ್ಪಟುತ್ವಗಳು ಜನರನ್ನು ಆಕರ್ಷಿಸುತ್ತಿದ್ದುವು. ಫ್ರಾನ್ಸಿನ ಸರ್ಕಾರ ಹಾಗೂ ಚರ್ಚುಗಳಲ್ಲಿಯ ಲೋಪದೋಷಗಳನ್ನು ತನ್ನ ಬರೆವಣಿಗೆ ಮೂಲಕ ಟೀಕಿಸಿದ ಎಂಬ ಕಾರಣಕ್ಕೆ ಇವನನ್ನು ಬ್ಯಾಸ್ಟಿಲ್ ಸೆರೆಮನೆಗೆ ದೂಡಲಾಯಿತು (೧೭೧೭). ಸೆರೆಮನೆಯಲ್ಲಿದ್ದಾಗ ಒಡಿಪೆ ಎಂಬ ದುರಂತನಾಟಕ(ಆ ಕಾಲದ ಅತ್ಯುತ್ತಮ ನಾಟಕ ಕಾರನೆಂದು ಯಶಸ್ಸು ತಂದುಕೊಟ್ಟ ಕೃತಿ) ಹಾಗೂ ದೊರೆ ಹೆನ್ರಿ IV ಬಗ್ಗೆ ಲ ಹೆನ್ರಿಡ್ ಎಂಬ ಮಹಾಕಾವ್ಯ ಬರೆದ.

ಈತ ೨೩ನೆಯ ವಯಸ್ಸಿಗೆ ಕವಿಯಾಗಿ, ಚಿತ್ರಕಾರನಾಗಿ, ನಾಟಕಕಾರನಾಗಿ ಪ್ರಸಿದ್ಧನಾದ. ೧೭೨೫ರ ಹೊತ್ತಿಗೆ ಮೂರು ನಾಟಕಗಳು ಯಶಸ್ವಿಯಾಗಿ ಪ್ರದರ್ಶನಗೊಂಡು ಇವನ ಕೀರ್ತಿ ಇಮ್ಮಡಿಸಿ ೧೫ನೆಯ ಲೂಯಿ ದೊರೆಯಿಂದ ಸನ್ಮಾನಿತನಾದ. ಆದರೆ ಶೆವಲ್ಲೆ ಡಿ ರೊಹನ್ ಎಂಬ ಶ್ರೀಮಂತನ ಆಗ್ರಹಕ್ಕೆ ತುತ್ತಾಗಿ ಗಡಿಪಾರಾದ (೧೭೨೬-೨೯). ಈ ಅವಧಿಯಲ್ಲಿ ಈತ ರಾಜಕೀಯ ಹಾಗೂ ಧಾರ್ಮಿಕ ಸ್ವಾತಂತ್ರ್ಯವಿದ್ದ ಇಂಗ್ಲೆಂಡಿನಲ್ಲಿದ್ದ. ಇಲ್ಲಿ ಅಲೆಕ್ಸಾಂಡರ್ ಪೋಪ್, ಜೊನಾಥ್ನ್ ಸ್ವಿಫ್ಟ್‌ರನ್ನು ಭೇಟಿಯಾದ. ತತ್ತ್ವಶಾಸ್ತ್ರಜ್ಞ ಜಾನ್‌ಲಾಕ್ ಹಾಗೂ ಐಸಾಕ್ ನ್ಯೂಟನ್ನರ ವಿಚಾರಧಾರೆ ಗಳಿಂದ ಆಕರ್ಷಿತನಾದ. ಕವಿಯಾಗಿ ಇಂಗ್ಲೆಂಡಿಗೆ ಹೋದ ಈತ ತತ್ತ್ವಜ್ಞಾನಿಯಾಗಿ ಫ್ರಾನ್ಸಿಗೆ ಹಿಂದಿರುಗಿದ (೧೭೨೯).

ಹಿಸ್ಟೋರಿ ಆಫ್ ಚಾರ್ಲ್ಸ್ XII (೧೭೩೧), ಜೈರ್ (೧೭೩೨), ಲೆಟರ್ಸ್ ಕನ್‌ಸರ್ನಿಂಗ್ ದಿ ಇಂಗ್ಲಿಷ್ ನೇಷನ್ ಅಪಿಯರ್ಡ್ ಇನ್ ಇಂಗ್ಲೆಂಡ್ (೧೭೩೩, ಈ ಕೃತಿ ಅನಂತರ ಫಿಲಸಾಫಿಕಲ್ ಲೆಟರ್ಸ್ ಎಂಬ ಹೆಸರಿನಲ್ಲಿ ಪ್ರಕಟಗೊಂಡಿತು) ಕೃತಿಗಳನ್ನು ಪ್ರಕಟಿಸಿದ. ಮೂರನೆಯ ಪುಸ್ತಕದಲ್ಲಿ ಇಂಗ್ಲೆಂಡಿನ ಸಂಪ್ರದಾಯಗಳು, ಸಂಸ್ಥೆಗಳು ಹಾಗೂ ವಿಚಾರಸರಣಿಗಳನ್ನು ಹೇಳುತ್ತಲೇ ಫ್ರಾನ್ಸನ್ನು ಅಪರೋಕ್ಷವಾಗಿ ಟೀಕಿಸಿದ ಕಾರಣ ಇದನ್ನು ಫ್ರಾನ್ಸಿನಲ್ಲಿ ಬಹಿಷ್ಕರಿಸಲಾಯಿತು. ೧೭೩೪-೪೯ ಅವಧಿಯಲ್ಲಿ ತತ್ತ್ವಶಾಸ್ತ್ರದ ಬಗೆಗೆ ಅನೇಕ ಪ್ರಬಂಧಗಳನ್ನೂ ನ್ಯೂಟನ್ನನ ಬಗೆಗೆ ಎರಡು ಕೃತಿಗಳನ್ನೂ ಕೆಲವು ಪದ್ಯಗಳನ್ನೂ ಬರೆದ. ಜ಼ಡಿಗ್ (೧೭೪೭), ಮೈಕ್ರೊಮೇಗಸ್ (೧೭೫೨), ನ್ಯಾಚುರಲ್ ಲಾ (೧೭೫೬), ಕ್ಯಾಂಡಿಡ್ (೧೭೫೯), ಯೂನಿವರ್ಸಲ್ ಹಿಸ್ಟೋರಿ (೧೭೫೯-೬೬), ಐರಿನ್ (೧೭೭೮)-ಈತನ ಇನ್ನಿತರ ಕೃತಿಗಳು.

ಇವನ ಅಭಿಪ್ರಾಯದಲ್ಲಿ ಧರ್ಮಸಂಸ್ಥೆ ಅಥವಾ ಚರ್ಚ್ ಎಂದರೆ ಅಂಧಶ್ರದ್ಧೆಗಳನ್ನು ಸೃಷ್ಟಿಸುವ ಸಾಧನ, ವಿಚಾರ ಸ್ವಾತಂತ್ರ್ಯದ ವಿರೋಧಿ ಶಕ್ತಿ, ಮುಗ್ಧ ಜನತೆಯನ್ನು ಹಿಂಸಿಸುವ ಅಸಹನೆಯ ಸ್ಥಾನ, ಸಂಕುಚಿತ ಹಾಗೂ ಮತಾಂಧತೆಗಳನ್ನು ಬೆಂಬಲಿಸುವ ಸಂಸ್ಥೆ. ಇವನ ಬರೆಹಗಳಲ್ಲಿ ಧಾರ್ಮಿಕ ಸಹನೆ ಮತ್ತು ಆರ್ಥಿಕ ಭದ್ರತೆಗೆ ಪ್ರಾಮುಖ್ಯ ನೀಡಲಾಗಿದೆ. ಮನುಷ್ಯನ ಜನ್ಮಸಿದ್ಧ ಹಕ್ಕುಗಳಿಗಾಗಿ ಈತ ಹೋರಾಟ ಮುಂದುವರಿಸಿದ. ಚಿತ್ರಹಿಂಸೆಗೆ ಒಳಗಾದವರ ಪರವಾಗಿ ಹೋರಾಟ ಮಾಡಿದುದಲ್ಲದೆ ಎಲ್ಲ ಬಗೆಯ ಶಿಕ್ಷೆಗಳನ್ನೂ ತೆಗೆದುಹಾಕಬೇಕೆಂದು ತನ್ನ ಬರೆಹಗಳ ಮೂಲಕ ವಾದಿಸಿದ. ಇಡೀ ದೇಶದಲ್ಲಿ ಏಕರೀತಿ ತೆರಿಗೆ, ಏಕರೀತಿ ಕಾನೂನುಗಳಿರ ಬೇಕೆಂದು, ಎಲ್ಲ ಧಾರ್ಮಿಕ ಸಂಸ್ಥೆಗಳೂ ಆ ದೇಶದ ಕಾನೂನಿನ ವ್ಯಾಪ್ತಿಗೆ ಒಳಪಡಬೇಕೆಂದು ಹೇಳಿದ. ಸ್ವಾತಂತ್ರ್ಯದಲ್ಲಿ ನಂಬಿಕೆಯಿಡದಿರುವುದು ಮಾನವ ಸಮಾಜದ ಎಲ್ಲ ಸಂಬಂಧವನ್ನು ನಾಶಮಾಡಿದಂತೆ ಎಂದು ಅಭಿಪ್ರಾಯಪಟ್ಟ.

ಇವನು ರಾಜಕೀಯ ಸಿದ್ಧಾಂತಿಯಾಗದಿದ್ದರೂ ಸರ್ಕಾರದ ದೋಷಗಳನ್ನು ಟೀಕಿಸುತ್ತಾ ರಾಜಪ್ರಭುತ್ವದ ಬಗ್ಗೆ ಜನರಲ್ಲಿ ಗೌರವ ಕಡಿಮೆಮಾಡಿದ. ಆದರೆ ಇವನು ರಾಜಪ್ರಭುತ್ವವನ್ನು ಒಂದು ಸಂಸ್ಥೆಯಾಗಿ ಗೌರವಿಸುತ್ತಿದ್ದ; ಕಡೆತನಕ ದೊರೆತನದ ಬಗ್ಗೆ ಗೌರವ ಉಳಿಸಿಕೊಂಡೇ ಬಂದ. ಪ್ರಗತಿಪರ ದೊರೆಗಳು ಮುನ್ನಡೆಗೆ ಅತ್ಯಗತ್ಯವೆಂದು ಭಾವಿಸಿದ. ಕಲ್ಯಾಣಕಾರಕವಾದ ನಿರಂಕುಶ ಪ್ರಭುತ್ವ ಇವನ ಕಲ್ಪನೆಯ ಆದರ್ಶ ಸರ್ಕಾರವಾಗಿತ್ತು. ಇವನು ಪ್ರಜಾಪ್ರಭುತ್ವವಾದಿಯಾಗಿರಲಿಲ್ಲ. ನೂರು ಇಲಿಗಳಿಂದ ಆಳಿಸಿಕೊಳ್ಳುವುದಕ್ಕಿಂತ ಒಂದು ಹುಲಿಯಿಂದ ಆಳಿಸಿಕೊಳ್ಳಲು ಇಚ್ಛಿಸುತ್ತೇನೆ ಎಂದಿದ್ದಾನೆ. ಇವನಿಗೆ ಸರ್ಕಾರದ ಗುಣಲಕ್ಷಣಗಳನ್ನು ಬದಲಿಸಬೇಕೆಂಬ ಮನಸ್ಸಿರಲಿಲ್ಲ. ಈತ ಬಯಸಿದ್ದು ಸಾಮಾಜಿಕ ಸ್ವಾತಂತ್ರ್ಯವನ್ನು. ಪ್ರತಿಯೊಬ್ಬ ಮಾನವನಿಗೂ ತನ್ನ ಇಚ್ಛೆಯಂತೆ ನಡೆಯುವ, ಆಲೋಚಿಸುವ, ಮಾತನಾಡುವ, ಬದುಕುವ ಹಾಗೂ ಬರೆಯುವ ಸ್ವಾತಂತ್ರ್ಯವಿರಬೇಕೆಂದ. ಸ್ವಾತಂತ್ರ್ಯವೊಂದೇ ಸಾರ್ವತ್ರಿಕಸತ್ಯ ಎಂದು ಹೇಳಿದ. ಸ್ವಾತಂತ್ರ್ಯವೇ ಎಲ್ಲ ಪ್ರಗತಿಯ ಆಧಾರಶಕ್ತಿ, ಅದರಿಂದ ಮಾತ್ರ ವಿವೇಚನಾ ಶಕ್ತಿ ಬೆಳೆಯಲು ಸಾಧ್ಯ ಎಂದು ಪ್ರತಿಪಾದಿಸಿದ. ಇವನ ತತ್ತ್ವಗಳು ಫ್ರಾನ್ಸಿನ ಮಹಾಕ್ರಾಂತಿಯ ಮೈಲುಗಲ್ಲುಗಳಾದುವು. ಇವನು ೧೭೭೮ ಮೇ ೩೦ರಂದು ನಿಧನಹೊಂದಿದ. (ಡಿ.ಎಸ್.ಎ.)

ಜೀನ್‌ಪಾಲ್ ಸಾರ್ತ್ರೆ

ನೆವಿಯ ಅಧಿಕಾರಿ ಜೀನ್‌ಬ್ಯಾಪ್ಟಿಸ್ಟ್ ಸಾರ್ತ್ರೆಯ ಏಕೈಕ ಪುತ್ರ ಜೀನ್‌ಪಾಲ್, ಸಾರ್ತ್ರೆ ೨೧ ಜೂನ್, ೧೯೦೫ರಲ್ಲಿ ಫ್ರಂಚ್ ಪ್ಯಾರಿಸ್‌ನಲ್ಲಿ ಜನಿಸಿದ. ಇವನ ತಾಯಿ ಮೂಲತಃ ಆಲಾಸ್ಷೀಯನ್‌ನವಳು. ಅವಳ ಸಂಬಂಧಿ ಆಲ್ಬರ್ಟ್‌ಸ್ವಿಜಿರ್ವಿರ್ ನೊಬಲ್ ಪುರಸ್ಕೃತ. ಈತ ಫ್ರಾನ್ಸ್‌ನ ಅಸ್ತಿತ್ವವಾದದ ತತ್ತ್ವಜ್ಞಾನಿ, ಲೇಖಕ. ಇವನು ತನ್ನ ಅಭಿಪ್ರಾಯಗಳನ್ನು ತನ್ನ ಕಾದಂಬರಿಗಳು, ನಾಟಕಗಳು, ಸಣ್ಣಕಥೆಗಳಲ್ಲದೇ, ತಾತ್ತ್ವಿಕ ಚಿಂತನೆಗಳಲ್ಲಿ ವ್ಯಕ್ತಪಡಿಸಿದ್ದಾನೆ.

ವಸ್ತುಗಳ ನಗ್ನ ಅಸ್ತಿತ್ವವು, ವಿಶೇಷವಾಗಿ ತನ್ನದೇ ಅಸ್ತಿತ್ವ ಅವನನ್ನು ಬಹಳವಾಗಿ ಆಕರ್ಷಿಸಿತು. ಏಕೆಂದರೆ, ಯಾವುದೇ ಆಗಲಿ ಅಸ್ತಿತ್ವವಾಗಿರಲು ಯಾವುದೇ ಕಾರಣಗಳು ಕಂಡುಬರುವುದು ಕಾಣುವುದಿಲ್ಲ. ಇವನ ಮೊದಲ ಕಾದಂಬರಿ ನಾಸಿಯಾ.

ಇವನ ಪ್ರಮುಖ ತಾತ್ತ್ವಿಕ ಕಾರ್ಯವಾದಂತಹ ಬೀಯಿಂಗ್ ಅಂಡ್ ನಥಿಂಗ್–೧೯೪೩ ರಲ್ಲಿ ಪರಿಸರ ಹಾಗೂ ಅಸ್ತಿತ್ವತೆಯ ಅಥವಾಜೀವಿಗಳ ರಚನೆಯನ್ನು ಕಂಡುಹಿಡಿದಿದ್ದಾನೆ. ಇವನ ಹೇಳಿಕೆಯೆಂದರೆ, ಮನುಷ್ಯನ ಅಸ್ತಿತ್ವತೆ, ಯಾವುದನ್ನು ಇವನು "ತನಗಾಗಿಯೇ ಇರುವ" ಎಂದು ಕರೆದಿದ್ದಾನೆಯೋ ಅದು ಟೇಬಲ್ ಎಂಬಂತಹ ನಿರ್ಜೀವ ವಸ್ತುವಿನ ಅಸ್ತಿತ್ವಕ್ಕಿಂತಲೂ ಹೆಚ್ಚಾಗಿ ಬುಡಮಟ್ಟದಲ್ಲೇ ವ್ಯತ್ಯಾಸವಿದೆ ಎಂದಿದ್ದಾನೆ. ಸಾರ್ತ್ರೆಯ ಪ್ರಕಾರ ಕೇವಲ ಮಾನವನ ಅಸ್ತಿತ್ವ ಮಾತ್ರವೇ ತನ್ನ ಬಗ್ಗೆ ಹಾಗೂ ಇನ್ನಿತರ ವಸ್ತುವಿನ ಬಗ್ಗೆ ಅರಿವನ್ನು ಉಳ್ಳದ್ದಾಗಿದೆ.

ಇವನು ವಾದಿಸುವುದರಂತೆ, ನಿರ್ಜೀವ ವಸ್ತುಗಳು ಸಾಮಾನ್ಯವಾಗಿ ಅವು ಹೇಗಿವೆಯೋ, ಹಾಗೆಯೇ ಇರುತ್ತವೆ. ಹೀಗಾಗಿ, ಮನುಷ್ಯರು ತಾವು ಏನು ಇಚ್ಛಿಸುತ್ತಾರೋ ಅದರಂತಿರುತ್ತಾರೆ. ಮನುಷ್ಯ ಹೇಡಿಯಲ್ಲ, ಮೇಜು ಕೇವಲ ಮೇಜಿನಂತೆ ಎಂಬ ಸರಳ ಮಾತಿನಂತೆ, ಮನುಷ್ಯ ಹೇಡಿಯಾಗುವುದು ಕೇವಲ ಅವನ ಇಚ್ಛೆಯಿಂದ (ಆಯ್ಕೆಯಿಂದ). ಮೇಜಿನಂತೆ, ಮನುಷ್ಯ ಯಾವುದೇ ನಿರ್ದಿಷ್ಟ ಪಾತ್ರ ಅಥವಾ "ಸಾರ" (ಸತ್ತ್ವ) ನಾಗಲ್ಲ. ಪ್ರಾಥಮಿಕವಾಗಿ ಜನರು ಜೀವಿಗಳಾಗಿ ಅಸ್ತಿತ್ತ್ವದಲ್ಲಿದ್ದು, ಅವರದೇ ಪಾತ್ರ (ಜೀವನ) ಅಥವಾ ಸತ್ತ್ವವನ್ನು ಆಯ್ಕೆ ಮಾಡಿ ಕೊಂಡಿರುತ್ತಾರೆ. ಹಾಗಾಗಿ, ತನ್ನ "ಎಕ್ಸಿಸ್‌ಟೆನ್ಷಿಯಲಿಸಮ್ ಮತ್ತು ಹ್ಯುಮನಿಸಮ್" ಎಂಬ ಪ್ರಬಂಧದಲ್ಲಿ ಅಸ್ತಿತ್ತ್ವ ಎನ್ನುವುದು ಸಿದ್ಧಾಂತ ಎಂದು ಪ್ರತಿಪಾದಿಸಿದ್ದಾನೆ.

ಮನುಷ್ಯರು ಸಂಪೂರ್ಣವಾಗಿ ಸ್ವತಂತ್ರರು ಎಂಬುದನ್ನು ಸಾರ್ತ್ರೆ ನಂಬಿದ್ದ. ಆದರೆ ಅವರು ಈ ಸ್ವಾತಂತ್ರ್ಯವನ್ನು ಗುರುತಿಸಿಕೊಳ್ಳಲು ಹಾಗೂ ಅವರದೇ ನಡತೆಯಿಂದ ಪೂರ್ಣ ಜವಾಬ್ದಾರಿಯನ್ನು ಒಪ್ಪಿಕೊಳ್ಳಲು ಹೆದರುತ್ತಾರೆ. ಏಕೆಂದರೆ ಅಂತಹ ಸ್ವಾತಂತ್ರ್ಯ ತೊಡಕಾಗುತ್ತದೆ. ಹಾಗಾಗಿ, ಜನರು ತಮ್ಮ ವಾಸ್ತವವಾದ ಸಂದರ್ಭದ ಬಗ್ಗೆ ತಾವೇ ಮೋಸ ಮಾಡಿಕೊಳ್ಳಲು (ಹೋಗಲು) ಹವಣಿಸುತ್ತಾರೆ.

ಈತ ಸಿಗ್ಮಂಡ್ ಫ್ರಾಯ್ಡ್‌ನ "ಮನುಷ್ಯನ ನಡವಳಿಯ ಮನೋವಿಶ್ಲೇಷಣಾತ್ಮಕ ಸಿದ್ಧಾಂತ"ವನ್ನು ವಿಮರ್ಶಿಸಿ ತನ್ನದೇ "ಎಕ್ಸಿಸ್‌ಟೆನ್ಷಿಯಲ್, ಸೈಕೋ ಅನಾಲಿಸಿಸ್" ನ್ನು ಹೊರತಂದ.

ಸಾರ್ತ್ರೆ ಹೇಳಿದಂತೆ "ಮನುಷ್ಯ ಒಬ್ಬ ಉಪಯೋಗವಿಲ್ಲದ ಆಕಾಂಕ್ಷಿ". ಈ ಅಭಿಪ್ರಾಯವನ್ನು ಈತನು ಪೂರ್ಣವಾಗಿ ಸ್ವ-ಸಂತೋಷ ಹೊಂದಿರುವ ಜೀವಿಗಳಲ್ಲಿ ಗುರುತಿಸಿದ್ದು, ಅವರು ದೇವರ ಬಗೆಗಿನ ಸಾಂಪ್ರದಾಯಿಕ ನಂಬಿಕೆಯನ್ನು ಹೊಂದಿದ್ದು ತಮ್ಮ ಅಸ್ತಿತ್ವಕ್ಕೆ ತಾವೇ ಕಾರಣವಾಗಿದ್ದಾರೆ, ಆದರೆ ದೇವರು ಪ್ರಾಯಶಃ ಅಸ್ತಿತ್ವದಲ್ಲಿಯೇ ಇಲ್ಲವೆನಿಸುತ್ತದೆ. ತನ್ನ "ಕ್ರಿಟಿಕ್ ಆಫ್ ಡಯಲೆಕ್ಟಿಕಲ್ ರೀಸನ್"ನಲ್ಲಿ ಸಾರ್ತ್ರೆ ಮಾರ್ಕ್ಸಿಸಂ ರಚನೆ ಎಂದು ತಿಳಿದಿದ್ದ, ರಾಜಕೀಯ ಹಾಗೂ ಸಾಮಾಜಿಕ ಸಿದ್ಧಾಂತಗಳನ್ನು ಬರೆದಿದ್ದಾನೆ.

ಸಾರ್ತ್ರೆಯ ನಾಟಕಗಳಿವು ದ ಫ್ಲೈಸ್ (೧೯೪೩), ನೋ ಎಕ್ಸಿಟ್ (೧೯೪೪), ಡರ್ಟಿ ಹ್ಯಾಂಡ್ಸ್ (೧೯೪೮), ದ ಕಂಡೆಮನ್ಡ್ ಆಫ್ ಅಲ್‌ಟೋನಾ (೧೯೫೯). ಕಾದಂಬರಿಗಳಿವು. ದ ರೋಡ್ಸ್ ಆಫ್ ಫ್ರೀಡಮ್, ದ ಏಜ್ ಆಫ್ ರೀಸನ್ (೧೯೪೫), ದ ರಿಪ್ರೀವ್ (೧೯೪೫) ಹಾಗೂ ಟ್ರಬಲ್ಡ್ ಸ್ಲೀಪ್ (೧೯೪೯) ತನ್ನ ಮನೋವಿಶ್ಲೇಷಣಾತ್ಮಕ ಸಿದ್ಧಾಂತಗಳನ್ನು ತನ್ನ ಆತ್ಮ ಕಥನಗಳಾದ ಬೋದಿಲೇರ್ (೧೯೪೭), ಸೈಂಟ್ ಜೆನೆಟ್ (೧೯೫೩) ಹಾಗೂ ಫ್ಲಾಬರ್ಟ್-೧೯೭೧ ನಲ್ಲಿ ತಿಳಿಸಿದ್ದಾನೆ. ವರ್ಡ್ಸ್ (೧೯೬೩) ಎಂಬುದು ಇವನ ಯೌವ್ವನದ ದಿನಗಳ ಆತ್ಮಕಥನವಾಗಿದೆ.

ಈತ ಪ್ಯಾರಿಸ್‌ನಲ್ಲಿ ಜನಿಸಿದ. ಇವನು ಎಕೋಲ್‌ನಾರ್‌ಮೇಲ್ ಸುಪೀರಿಯರ್‌ನಲ್ಲಿ ವ್ಯಾಸಂಗ ಮಾಡಿದ. ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ (೧೯೩೯–೧೯೪೫) ಫ್ರೆಂಚ್ ಸೈನ್ಯದಲ್ಲಿದ್ದು ಹೋರಾಡಿದ್ದಲ್ಲದೇ, ಫ್ರೆಂಚ್ ವಿರೋಧ ಚಳವಳಿಯಲ್ಲಿ ಭಾಗವಹಿಸಿದ. ಈತ "ಲೆಸ್ ಟೆಂಪ್ಸ್ ಮಾಡರ್ನ್ಸ್" ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ (೧೯೪೫) ಅದರ ಸಂಪಾದಕನಾಗಿ ಕಾರ್ಯ ನಿರ್ವಹಿಸಿದ. ೧೯೬೪ರಲ್ಲಿ ಇವನು ಸಾಹಿತ್ಯ ಸಾಧನೆಗಾಗಿ ನೊಬೆಲ್ ಪಾರಿತೋಷಕವನ್ನು ನೀಡಲಾಯಿತು. ಆದರೆ ಅದನ್ನು ಅಂಗೀಕರಿಸಲು ನಿರಾಕರಿಸಿದ. (ಜಿ.ಎನ್.ಎಸ್.)

ಹೆನ್ರಿ ಬರ್ಗ್‌ಸನ್ (೧೮೫೯–೧೯೪೧)

ಪ್ರಸಿದ್ಧ ಫ್ರೆಂಚ್ ತತ್ತ್ವಶಾಸ್ತ್ರಜ್ಞ; ಲೇಖಕ. ಇವನು ೧೯೨೭ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಸಾಹಿತ್ಯಕ್ಕೆ ಪಡೆದುಕೊಂಡಿದ್ದಾನೆ. ೧೮೫೯ರಲ್ಲಿ ಪ್ಯಾರಿಸ್‌ನಲ್ಲಿ ಜನಿಸಿದ. ಉತ್ತಮ ಬೋಧಕ. ಪ್ರಾಧ್ಯಾಪಕನಾಗಿ ಫ್ರಾನ್ಸ್‌ನ ಕಾಲೇಜೊಂದ ರಲ್ಲಿ ಅಧ್ಯಾಪಕನಾಗಿ ಸೇವೆಸಲ್ಲಿಸಿದ (೧೯೦೦–೧೯೨೧). ಟೈಮ್ ಆ್ಯಂಡ್ ಫ್ರೀ ವಿಲ್(೧೮೮೯), ಮ್ಯಾಟರ್ ಆ್ಯಂಡ್ ಮೆಮೊರಿ (೧೮೯೬), ಕ್ರಿಯೇಟಿವ್ ಎವಲ್ಯೂಷನ್ (೧೯೦೭) ಮೊದಲಾದ ಕೃತಿಗಳಲ್ಲಿ ಇವನ ತತ್ತ್ವಶಾಸ್ತ್ರದ ಚಿಂತನೆಗಳಿವೆ.

ಇವನ ಚಿಂತನೆಗಳಲ್ಲಿ 'ಕಾಲ'ದ ಪರಿಕಲ್ಪನೆ ಮಹತ್ತರವಾದದ್ದು. 'ಕಾಲ' (ಟೈಮ್) ಎಂಬುದಕ್ಕೆ ಗತಿ (ಡ್ಯುರೇಷನ್) ಎಂಬ ಅರ್ಥ ನೀಡುತ್ತಾನೆ. ಜಗತ್ತು ನಿರಂತರ ಚಲನಶೀಲತೆಯುಳ್ಳದ್ದು. ಈ ಚಲನೆಯಲ್ಲಿ ಪ್ರತಿ ಕ್ಷಣಗಳು ಒಂದರ ಪಡಿಯಚ್ಚು ಮತ್ತೊಂದಲ್ಲ. ಕ್ಷಣಕ್ಷಣಗಳ ಪರಿಣಾಮ ಹೊಂದುವುದೇ ಜಗತ್ತಿನ ಲಕ್ಷಣ. ಇದೇ ಇದರ ಸತ್ಯ ಸೌಂದರ್ಯಗಳು. ಜಗತ್ತಿನಲ್ಲಿ ಸಂಭವಿಸುವ ಪ್ರತಿ ಘಟನೆಯೂ ನವನವೋನ್ಮೇಷಶಾಲಿನಿಯಾದದ್ದು. ನಿನ್ನೆಯ ಸೂರ್ಯೋದಯ ಸೂರ್ಯಾಸ್ತಗಳಂತೆ ಈ ದಿನದ ಸೂರ್ಯೋದಯ ಸೂರ್ಯಾಸ್ತಗಳಿಲ್ಲ. ಈ ಜಗತ್ತು ವೈವಿಧ್ಯತೆಯೊಂದಿಗೆ ಪ್ರತಿ ನಿಮಿಷದಲ್ಲೂ ಹೊಸರೂಪ ತಾಳುತ್ತಿರುತ್ತದೆ. ಹಾಗೆಯೇ ಬದುಕೂ ಒಂದು ಸತತ ಪ್ರವಾಹ. ಇದು ನಿತ್ಯವಾದದ್ದು. ಇದರಲ್ಲಿ ಸ್ಥಾಯಿ ಎನಿಸಿಕೊಳ್ಳುವಂತಹದ್ದು ಯಾವುದೂ ಇಲ್ಲ; ಇದೇ ಎಂದು ಭಾವಿಸುವುದು ಕೇವಲ ಭ್ರಮೆ. ಜಗತ್ತಿನಲ್ಲಿ ಪರಿಣಾಮವಿದೆ. ಆದರೆ ಈ ಪರಿಣಾಮ ಯಾಂತ್ರಿಕವಲ್ಲ; ಸೃಷ್ಟ್ಯಾತ್ಮಕವಾದದ್ದು. ಇದು ಕೇವಲ ಪುನರಾವರ್ತನೆಯಲ್ಲ, ನಿರಂತರ ಪರಿವರ್ತನೆಯುಳ್ಳದ್ದು. ಇದೇ ಜಗತ್ತಿನ ರಹಸ್ಯ ಎಂಬಿತ್ಯಾದಿ ಗಹನ ತಾತ್ತ್ವಿಕ ಚಿಂತನೆಗಳನ್ನು ತನ್ನ ಕ್ರಿಯೇಟಿವ್ ಎವಲ್ಯೂಷನ್ ಎಂಬ ಕೃತಿಯಲ್ಲಿ ಚರ್ಚಿಸಿದ್ದಾನೆ. ಸೃಷ್ಟಿ–ಸ್ಥಿತಿ–ಲಯಗಳೆಂಬುವು ಜಗ್ತತಿನ ಸತತ ಗತಿಯ ಅವಸ್ಥಾಂತರಗಳೆಂಬುದು ಇವನ ಅಭಿಪ್ರಾಯ. ಆದರೆ ಪ್ರತಿ ಸೃಷ್ಟಿಯೂ ನವಸೃಷ್ಟಿ, ನವೋದಯಗಳಾಗಿರುತ್ತವೆ ಎನ್ನುವುದು ಈತನವಾದದ ತಿರುಳು. ಇವನ ಸಾಹಿತ್ಯ ಸೇವೆಗಾಗಿ ೧೯೨೭ರಲ್ಲಿ ನೊಬೆಲ್ ಪ್ರಶಸ್ತಿ ದೊರಕಿತು. ಇವನು ೧೯೪೧ರಲ್ಲಿ ನಿಧನನಾದ. *

ಸೀಮನ್ ದ ಬೊವ (೧೯೦೮–೮೬)

ಫ್ರೆಂಚ್ ಲೇಖಕಿ. ೧೯೦೮ರಲ್ಲಿ ಪ್ಯಾರಿಸ್‌ನಲ್ಲಿ ಜನಿಸಿದಳು. ಇವಳನ್ನು ಸ್ತ್ರೀವಾದದ ಆದಿಚಿಂತಕಿ ಎಂದು ಗುರುತಿಸಲಾಗಿದೆ. ಚಾರಿತ್ರಿಕ ಭೌತವಾದ, ಮನೋವಿಶ್ಲೇಷಣೆ ಮತ್ತು ಅಸ್ತಿತ್ವವಾದಗಳ ಆಧಾರದ ಮೇಲೆ ಮಹಿಳೆಯ ಶೋಷಣೆಯ ಸಿದ್ಧಾಂತವನ್ನು ನಿರ್ಮಿಸಲು ಪ್ರಯತ್ನಿಸಿದ್ದಾಳೆ. ಈಕೆ ತತ್ತ್ವಶಾಸ್ತ್ರದ ಅಧ್ಯಯನ ಮಾಡುತ್ತಿದ್ದ ಅವಧಿಯಲ್ಲಿ ಪ್ರಸಿದ್ಧ ಫ್ರೆಂಚ್ ನಾಟಕಕಾರ ಹಾಗೂ ತತ್ತ್ವಶಾಸ್ತ್ರಜ್ಞನಾದ ಜೀನ್ ಪಾಲ್ ಸಾರ್ತ್ರ್‌ನನ್ನು ಭೇಟಿಯಾಗಿ ಹಲವಾರು ವಿಚಾರಗಳ ಬಗೆಗೆ ಚರ್ಚಿಸುತ್ತಿದ್ದಳು. ಹೀಗೆ ಇವರಿಬ್ಬರೂ ಕುಳಿತು ಆಲೋಚಿಸಿದ ವಿಚಾರಗಳು ಮುಂದೆ ಅಸ್ತಿತ್ವವಾದ ಎಂದು ಹೆಸರು ಪಡೆಯಿತು.

ಮಹಿಳೆ ಎಂಬುದನ್ನು ಇವಳು ಜೀವಶಾಸ್ತ್ರೀಯ ಘಟಕ ಎಂದು ವಿಶ್ಲೇಷಿಸುತ್ತಾಳೆ. ಮಹಿಳೆಯ ಅಧಃಪತನ ಮತ್ತು ಖಾಸಗಿ ಆಸ್ತಿಯ ಉಗಮ ಇವುಗಳ ನಡುವಿನ ಅತ್ಯಂತ ನಿಕಟ ಸಂಬಂಧವನ್ನು ಗುರುತಿಸುತ್ತಾಳೆ. ಸ್ತ್ರೀ ವಿಮೋಚನೆ ಪ್ರಪಂಚಾದ್ಯಂತ ಶ್ರಮಶಕ್ತಿಯನ್ನು ಅವಲಂಬಿಸಿದೆ. ಉತ್ಪಾದನಾ ಪ್ರಕ್ರಿಯೆಯಲ್ಲಿ ಒಂದು ಮಹತ್ತರ ಕ್ರಾಂತಿಯಾದಾಗ ಮಾತ್ರ ಸ್ತ್ರೀಯ ಸ್ಥಿತಿ–ಗತಿ ಬದಲಾಗಲು ಸಾಧ್ಯ ಇತ್ಯಾದಿ ಹಲವಾರು ಹೊಸ ಬಗೆಯ ವಾಸ್ತವ ಆಲೋಚನೆ ಇವಳದು.

ಇವಳ ಮೊದಲ ಕಾದಂಬರಿ ಷಿ ಕೇಮ್ ಟು ಸ್ಟೇ (೧೯೪೩) ಮತ್ತು ದ ಎಥಿಕ್ಸ್ ಆಫ್ ಆ್ಯಂಬಿಗ್ಯುಟಿ (೧೯೪೭) ಎಂಬ ಪ್ರಬಂಧದಲ್ಲಿ ಇವಳ ಅಸ್ತಿತ್ವವಾದದ ಚಿಂತನೆಗಳನ್ನು ಕಾಣಬಹುದು. ರಾಜಕೀಯ ಹಾಗೂ ಸಾಮಾಜಿಕ ಸ್ವಾತಂತ್ರ್ಯಗಳನ್ನು ಕುರಿತಂತೆ ನಾಟಕಗಳನ್ನು ಬರೆದಿದ್ದಾಳೆ. ಇವಳ ಹೆಸರನ್ನು ಅತ್ಯಂತ ಉತ್ತುಂಗಕ್ಕೇರಿಸಿದ ಕೃತಿ ‘ದ ಸಕೆಂಡ್ ಸೆಕ್ಸ್’ (೧೯೪೯). ಇದು ಆಧುನಿಕ ಪ್ರಪಂಚದಲ್ಲಿ ಮಹಿಳೆಯನ್ನು ಕುರಿತ ವಿಚಾರ ವಿಮರ್ಶೆಗಳ ಅತ್ಯಂತ ವಿಸ್ತಾರವಾದ ಪ್ರಬಂಧವಾಗಿದೆ.

೪ ಸಂಪುಟಗಳ ಆತ್ಮಚರಿತ್ರೆಯನ್ನೂ ಬರೆದಿದ್ದಾಳೆ: ಮೆಮೋರಿಸ್ ಆಫ್ ಎ ಡ್ಯೂಟಿಫುಲ್ ಡಾಟರ್ (೧೯೫೮) ಎಂಬ ಮೊದಲ ಸಂಪುಟದಲ್ಲಿ ಈಕೆಯ ಯೌವನಾವಸ್ಥೆಯ ಬದುಕು ಹಾಗೂ ಅಧ್ಯಯನಗಳಿಗೆ ಸಂಬಂಧಿಸಿದ ವಿಚಾರಗಳಿವೆ. ಇನ್ ದ ಪ್ರೈಮ್ ಆಫ್ ಲೈಫ್ (೧೯೬೦) ಎಂಬ ಎರಡನೆಯ ಸಂಪುಟ ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಫ್ರಾನ್ಸನ್ನು ನಾಜ಼ೀಗಳು ಆಕ್ರಮಿಸಿಕೊಂಡಾಗ ಈಕೆಗಾದ ಅನುಭವಗಳನ್ನು ಒಳಗೊಂಡಿದೆ. ಫೋರ್ಸ್ ಆಫ್ ಸರ್‌ಕಮ್‌ಸ್ಟೆನ್ಸಸ್ (೧೯೬೩) ಎಂಬ ಮೂರನೆಯ ಸಂಪುಟ ಫ್ರೆಂಚ್ ಕ್ರಾಂತಿಯ ಸಂದರ್ಭದ್ದು. ಆಲ್‌ಸೆಡ್ ಆ್ಯಂಡ್ ಡನ್ (೧೯೭೨) ಎಂಬ ನಾಲ್ಕನೆಯ ಸಂಪುಟ ೧೯೬೨–೭೨ರ ಅವಧಿಯ ಈಕೆಯ ಬದುಕನ್ನು ವಿವರಿಸುತ್ತದೆ. ಆಧುನಿಕ ಸಾಮಾಜಿಕ ಚಿಂತನೆಯ ಮೇಲೆ ಗಾಢ ಪರಿಣಾಮ ಬೀರಿದ ಇವಳು ೧೯೮೬ರಲ್ಲಿ ನಿಧನಳಾದಳು. *

ಹ್ಯೂಗೋವಿಕ್ಟರ್ (೧೮೦೨–೧೮೮೫)

ಫ್ರೆಂಚ್ ನಾಟಕಕಾರ ಹಾಗೂ ಫ್ರೆಂಚ್ ಸಾಹಿತ್ಯದ ರೊಮ್ಯಾಂಟಿಕ್ ಯುಗದ ನೇತಾರ. ಫ್ರಾನ್ಸ್‌ನ ಬೆಸಾಂಕನ್ ಎಂಬಲ್ಲಿ ೧೮೦೨ರಲ್ಲಿ ಜನಿಸಿದ. ಈತ ೧೭ನೆಯ ವಯಸ್ಸಿನಲ್ಲಿಯೇ ಫ್ರೆಂಚ್ ಭಾಷೆಯಲ್ಲಿ ಅದ್ಭುತ ಪ್ರಾವೀಣ್ಯ ಪಡೆದಿದ್ದ. ತನ್ನ ಸಹೋದರರೊಂದಿಗೆ ಸೇರಿ ದ ಲಿಟರರಿ ಕನ್ಸರ್ವೇಟಿವ್ ಎಂಬ ಪತ್ರಿಕೆಯನ್ನು ಹೊರತಂದ. ರಾಜಕೀಯದಲ್ಲಿಯೂ ಆಸಕ್ತಿ ಹೊಂದಿದ್ದ. ೧೮೪೮ರಲ್ಲಿ ಫ್ರೆಂಚ್‌ನ ಎರಡನೆಯ ಗಣರಾಜ್ಯ ಸ್ಥಾಪನೆ ಕಾಲದಲ್ಲಿ ಇವನ ಆಸಕ್ತಿ ಏಕಾಧಿಪತ್ಯದಿಂದ ಗಣರಾಜ್ಯದತ್ತ ಹರಿಯಿತು. ಹೊಸ ರಾಷ್ಟ್ರೀಯ ಗಣಪರಿಷತ್ತಿಗೂ ಆಯ್ಕೆಯಾದ. ಮತದ ಹಕ್ಕು, ಉಚಿತ ಶಿಕ್ಷಣ, ಪತ್ರಿಕಾ ಸ್ವಾತಂತ್ರ್ಯಗಳ ವಿಚಾರದಲ್ಲಿ ಆಸಕ್ತಿ ವಹಿಸಿದ. ಲೂಯಿ ನೆಪೋಲಿಯನ್‌ನ ಆಗಮನದ ಅನಂತರ ರಾಜಕೀಯ ಬದಲಾವಣೆಗಳಲ್ಲಿ ಸಕ್ರಿಯವಾಗಿ ಭಾಗಿಯಾದ. ಇದರ ಪರಿಣಾಮದಿಂದ ೨೦ ವರ್ಷ ದೇಶಭ್ರಷ್ಟನಾಗಿ, ಗಡಿಪಾರಾಗಿ ಬೆಲ್ಜಿಯಂ ಹಾಗೂ ಇಂಗ್ಲಿಷ್ ಕಡಲ್ಗಾಲುವೆಯ ಜರ್ಸಿ ದ್ವೀಪಗಳಲ್ಲಿರ ಬೇಕಾಯಿತು. ಫ್ರಾನ್ಸಿಗೆ ಮರಳುವ ಅವಕಾಶವೊದಗಿದರೂ ಅದನ್ನು ತಿರಸ್ಕರಿಸಿ ತಾನು ಸ್ವಾತಂತ್ರ್ಯ ಪಡೆಯದ ಹೊರತು ಬಂಧಮುಕ್ತನಾಗಲಾರೆನೆಂದು ಘೋಷಿಸಿದ, ನೆಪೋಲಿಯನ್ ಅಧಿಕಾರದಿಂದ ಕೆಳಗಿಳಿದ ಅನಂತರವೇ ಫ್ರಾನ್ಸಿಗೆ ಮರಳಿದ.

'ಓಡ್ಸ್ ಅಂಡ್ ವೇರಿಯಸ್ ಪೊಯಮ್ಸ್' (೧೮೨೨) ಇದು ಇವನ ಮೊದಲನೆಯ ಕವನ ಸಂಕಲನ. 'ಓಡ್ಸ್ ಅಂಡ್ ಬ್ಯಾಲೆಡ್ಸ್' (೧೮೨೬) ಹಾಗೂ 'ದ ಓರಿಯಂಟಲ್' (೧೮೨೯)– ಇವು ತರುಣ ರೊಮ್ಯಾಂಟಿಕ್ ಕವಿಗಳನ್ನು ಸಂಘಟಿಸಿ ಹೊರತಂದ ಕೃತಿಗಳು. ಇವನು ಪ್ರಸಿದ್ಧ ರೊಮ್ಯಾಂಟಿಕ್ ಕವಿ ಎಂದು ಹೆಸರು ಪಡೆಯಲು ಇವು ಕಾರಣವಾದುವು. ಕ್ರಾಮ್‌ವೆಲ್ (೧೮೭೭) ಒಂದು ಐತಿಹಾಸಿಕ ನಾಟಕ. ಇದರ ಮುನ್ನುಡಿಯಲ್ಲಿ ರೊಮ್ಯಾಂಟಿಕ್ ಸೌಂದರ್ಯ ಮೀಮಾಂಸೆಯನ್ನು ಪರಿಚಯಿಸಿದ್ದಾನೆ, ಸಾಂಪ್ರದಾಯಿಕ ಸಾಹಿತ್ಯ ತತ್ತ್ವಗಳನ್ನು ಮೀರಿ ಬರೆಯುವ ಅಗತ್ಯವನ್ನು ಇಲ್ಲಿ ಸೂಚಿಸಿದ್ದಾನೆ.

'ಹರ್ನಾನಿ' (೧೮೩೦) ಇವನ ಅತ್ಯಂತ ಪ್ರಸಿದ್ಧ ನಾಟಕ ಕೃತಿ. ಫ್ರೆಂಚ್ ರಂಗಭೂಮಿಯ ಹೊಸ ದಿಕ್ಕಿಗೆ ಇದು ಕಾರಣವಾಯಿತಲ್ಲದೆ, ಇವನನ್ನು ರೊಮ್ಯಾಂಟಿಕ್ ಯುಗದ ಮುಂಚೂಣಿಗೆ ತಂದು ನಿಲ್ಲಿಸಿತು. ದ ಕಿಂಗ್ ಈಸ್ ಅಮ್ಯೂಸ್ಡ್ (೧೮೩೨), ರೇಬ್ಲಾಸ್ (೧೮೩೮), ಲೀವ್ಸ್ ಆಫ್ ಆಟಂ (೧೮೩೧), ಸಾಂಗ್ಸ್ ಆಫ್ ಟ್ವಿಲೈಟ್ (೧೮೩೫) ಇನ್ನರ್ ವಾಯ್ಸಸ್ (೧೮೩೭), ರೇಸ್ ಅಂಡ್ ಶಾಡೋಸ್ (೧೮೪೦) ಮೊದಲಾದುವು ಇವನ ಇತರ ಕೃತಿಗಳು.

ದ ಚಸ್ಟಿಸ್‌ಮೆಂಟ್ಸ್ (೧೮೫೩) ವಿಡಂಬನಾ ಕಾವ್ಯ ಸಂಗ್ರಹ. ದಿ ಕಾನ್ ಟೆಂಪ್ಲೇಷನ್ಸ್ (೧೮೫೬), ದ ಲೆಜೆಂಡ್ ಆಫ್ ಸೆಂಚುರೀಸ್ (೧೮೫೯), ಲೆಸ್ ಮಿಸರಬಲ್ (೧೮೬೨) ಕೃತಿಗಳು ಗಡೀಪಾರಾಗಿದ್ದ ಸಂದರ್ಭದಲ್ಲಿ ಈತ ಬರೆದುವು.

ಇವನು ಪ್ರಸಿದ್ಧಿಗೆ ಬಂದದ್ದು ನಾಟಕಗಳಿಂದಲೆ ಆದರೂ ಬ್ರಿಟನ್ ಹಾಗೂ ಸಂಯುಕ್ತ ರಾಷ್ಟ್ರಗಳಲ್ಲಿ ಇವನನ್ನು ಶ್ರೇಷ್ಠ ಕಾದಂಬರಿಕಾರ ಎಂದು ಗುರುತಿಸಲಾಗಿದೆ. ಫ್ರಾನ್ಸ್‌ನಲ್ಲಿ ಇವನ ಕಾವ್ಯಗಳಿಗೆ ಅಪಾರ ಮನ್ನಣೆ ದೊರೆತಿದೆ. ಈತ ೧೮೮೫ರಲ್ಲಿ ನಿಧನನಾದ. (ಜಿ.ಎಸ್.ಎಸ್.)

ಅಲೆಕ್ಸಾಂಡರ್ ಡ್ಯೂಮಾ (ಕಿರಿಯ) (೧೮೨೪-೧೮೯೫)

ಫ್ರೆಂಚ್ ನಾಟಕಕಾರ. ಹಿರಿಯ ಅಲೆಕ್ಸಾಂಡರ್ ಡ್ಯೂಮಾನ ಮಗ. ಡ್ಯೂಮಾಫೀಸ್ ಎಂದು ಪ್ರಸಿದ್ಧನಾದವ. ರಂಗಭೂಮಿಯನ್ನು ವಿಚಾರವೇದಿ ಯನ್ನಾಗಿ ಮಾಡಲು ಯತ್ನಿಸಿದವರಲ್ಲಿ ಒಬ್ಬ. ಪ್ಯಾರಿಸ್‌ನಲ್ಲಿ ಹುಟ್ಟಿದ ಈತ ತನ್ನ ತಾಯಿಯ ಜೊತೆ ತಾನೂ ಕಡುಬಡತನ ಅನುಭವಿಸಿದ. ತಂದೆ ಮಗನ ಪ್ರತಿಭೆಯನ್ನು ಗುರುತಿಸಿ ಯೋಗ್ಯ ಶಿಕ್ಷಣ ದೊರೆಯುವಂತೆ ಮಾಡಿದ. ಡ್ಯೂಮಾ, ತಾನು ಹುಟ್ಟಿದ ವಿಷಾದನೀಯ ಸನ್ನಿವೇಶಗಳಿಂದಾಗಿಯೇ ಏನೋ ತನ್ನ ನಾಟಕಗಳಲ್ಲಿ ಉಗ್ರವಾದ ನೀತಿನಿಷ್ಠೆಗಳನ್ನು ಪ್ರತಿಪಾದಿಸಿದ್ದಾನೆ. ಮೊದಲು ಈತನೂ ತನ್ನ ತಂದೆಯಂತೆ ಕಾದಂಬರಿಗಳನ್ನು ಬರೆಯಲು ಪ್ರಾರಂಭಿಸಿದನಾದರೂ ಸ್ವಲ್ಪ ಕಾಲದಲ್ಲೇ ಈತನಿಗೇ ನಾಟಕದ ಗೀಳು ಹಿಡಿಯಿತು. ಆ ವೇಳೆಗೆ ತನಗೆ ವಿಶೇಷವಾದ ಖ್ಯಾತಿ ತಂದುಕೊಟ್ಟಿದ್ದ ಲಾ ಡೇವ ಔಕ್ಸ್ ಕೆಮೆಲಿಯಾ ಎಂಬ ಕಾದಂಬರಿಯನ್ನು ೧೮೫೨ರಲ್ಲಿ ನಾಟಕವನ್ನಾಗಿ ಅಳವಡಿಸಿದ. ಇದೇ ಕಥೆಯ ಆಧಾರದ ಮೇಲೆ ಆಮೇಲೆ ತಯಾರಾದ ಚಲನಚಿತ್ರ ಗ್ರೀಟ ಗಾರ್ಬೋಳ ಅಭಿನಯದಿಂದ ಪ್ರಸಿದ್ಧವಾಗಿದೆ. ನಾಟಕ ಈತನ ಬದುಕಿಗೆ ಹೊಸ ತಿರುವು ಕೊಟ್ಟಿತು. ಅನಂತರ ಈತ ಅನೇಕ ಸಮಸ್ಯಾತ್ಮಕ ನಾಟಕಗಳನ್ನು ಬರೆದ. ಷಾ ಮತ್ತು ಇಬ್ಸನರಂತೆ ಈತನೂ ವಿಷಮ ವಿವಾಹ, ವ್ಯಭಿಚಾರ, ಸೂಳೆಗಾರಿಕೆ, ಅಕ್ರಮಸಂತಾನ, ಸ್ತ್ರೀಸ್ವಾತಂತ್ರ್ಯ ಮುಂತಾದ ಗಂಭೀರ ವಿಷಯಗಳನ್ನೆತ್ತಿಕೊಂಡು ಅವುಗಳ ಬಗ್ಗೆ ಆಳವಾದ ಚಿಂತನಮಂಥನ ನಡೆಸಿ ಸುದೀರ್ಘ ಪೀಠಿಕೆಗಳನ್ನು ಬರೆದು ಸೇರಿಸಿದ್ದಾನೆ, ವಸ್ತುವಿನ ಗಂಭೀರತೆಯಿಂದಾಗಿ ಡ್ಯೂಮಾನ ನಾಟಕಗಳಲ್ಲಿ ಪ್ರಖರವಾದ ಮಾತುಗಾರಿಕೆ, ತಳಸ್ಪರ್ಶಿಯಾದ ಚರ್ಚೆಗಳು ನಿಬಿಡವಾಗಿ ಬರುತ್ತವೆ. ಒಂದು ವ್ಯತ್ಯಾಸವೆಂದರೆ ಅವನಲ್ಲಿ ಇಬ್ಸನ್‌ನ ವಾಸ್ತವಿಕ ಪ್ರಜ್ಞೆಯಾಗಲಿ ಸಂಯಮ ವಾಗಲಿ ಬರ್ನಾರ್ಡ್ ಷಾನ ತರ್ಕಬದ್ಧತೆಯಾಗಲಿ ಇಲ್ಲ. ಗಂಭೀರ ಸಾಮಾಜಿಕ ಸಮಸ್ಯೆಗಳನ್ನು ವಿಡಂಬನೆಯ ಮೂಲಕ ಚಿತ್ರಿಸುವ ಅವಕಾಶವನ್ನು ಈತ ಬಳಸಿಕೊಳ್ಳುವುದೇ ಇಲ್ಲ. ಕೆಲವೊಮ್ಮೆ ಈತ ಚರ್ಚಿಸುವ ಸಮಸ್ಯೆಗಳು ಹಳತಾಗಿಬಿಟ್ಟಿವೆ ಎನಿಸುತ್ತದೆ. ಆದರೆ ಡ್ಯೂಮಾ ತನ್ನ ಜೀವಿತಕಾಲದಲ್ಲಿ ತಂದೆಗಿಂತಲೂ ಅತಿಶಯವಾದ ಜನಪ್ರಿಯತೆಯನ್ನು ಗಳಿಸಿ ಅನನ್ಯಪ್ರತಿಭಾವಂತ ಎನಿಸಿಕೊಂಡ. ೧೮೭೫ರಲ್ಲಿ ಈತನನ್ನು ಫ್ರೆಂಚ್ ಸಾಹಿತ್ಯ ಅಕಾಡೆಮಿಯ ಸದಸ್ಯನನ್ನಾಗಿ ಆರಿಸಿ ಗೌರವಿಸಲಾಯಿತು. ಈತನ ಕೃತಿಗಳಲ್ಲಿ ಲೆ ದೆಮಿ ಮಾಂಡ್ (ಸೂಳೆ), ಫ್ರಾನ್ಸಿ ಲಾನ್, ಡೆನಿಸ್ ದಿ ಫಿಲ್ಸ್ ನ್ಯಾಚುರಲ್ (ಹಾದರಕ್ಕೆ ಹುಟ್ಟಿದ ಶಿಶು) ಎಂಬುವು ಮುಖ್ಯವಾದುವು. ಇವನು

ಹಾಗೂ ಸ್ಕ್ರೈಬ್, ಸಾರ್ದು ಮುಂತಾದವರು ಬರೆದ ನಾಟಕಗಳು ಸುನಿರ್ಮಿತ ನಾಟಕಗಳು (ವೆಲ್‌ಮೇಡ್ ಪ್ಲೇಸ್) ಎಂಬ ಹೊಸ ಪ್ರಕಾರದ ನಾಟಕಗಳಿಗೆ ನಾಂದಿಯಾಗಿವೆ. (ಎಚ್.ಕೆ.ಆರ್.; ಎಚ್.ಆರ್.)

ಲಾ ಡೇವ ಔಕ್ಸ್ ಕೆಮೆಲಿಯಾ ಕಾದಂಬರಿ ನಾಟಕ ರೂಪದಲ್ಲಿ ಹೊರಗಿನ ಜಗತ್ತಿಗೆ ಕೆಮಿಟಿ ಎಂದು ಪರಿಚಿತವಾಗಿದೆ. ತನ್ನ ಪ್ರೇಮಿಗಾಗಿ ತನ್ನ ಸುಖವನ್ನು ತ್ಯಾಗ ಮಾಡುವ ಶ್ರೀಮಂತ ವೇಶ್ಯೆಯ ಕಥೆ ಇದು. ಪ್ರಸಿದ್ಧ ನಟಿ ಸಾರಾ ಬನ್ ಹಾಟ್, ಈ ನಾಟಕದಲ್ಲಿ ಖ್ಯಾತಿ ಪಡೆದಳು. ಗ್ರೇಟಾ ಗಾರ್ಬೋ ಚಲನಚಿತ್ರದಲ್ಲಿ ಖ್ಯಾತಿ ಪಡೆದಳು. 'ಸಮಸ್ಯೆಯ ನಾಟಕ'ವನ್ನು ಪ್ರಾರಂಭಿಸಿದವರಲ್ಲಿ ಇವನು ಒಬ್ಬ. ಲವಲವಿಕೆಯ ಸಂಭಾಷಣೆಯನ್ನು ಬರೆಯಬಲ್ಲ. ಆದರೆ ಅತಿಯಾದ ನೀತಿ ಉಪದೇಶವು ಇವನ ನಾಟಕಗಳಲ್ಲಿ ಒಂದು ಕುಂದು. (ಎಲ್.ಎಸ್.ಎಸ್)

ಅಲೆಕ್ಸಾಂಡರ್ ಡ್ಯೂಮಾ (ಹಿರಿಯ) (೧೮೦೨-೧೮೭೦)

ಫ್ರೆಂಚ್ ಕಾದಂಬರಿಕಾರ ಮತ್ತು ನಾಟಕಕಾರ. ಡ್ಯೂಮಾ ಪೇರ್ ಎಂದು ಪ್ರಸಿದ್ಧನಾಗಿದ್ದ. ಈತ ಹುಟ್ಟಿದ್ದು ಫ್ರಾನ್ಸಿನ ವಿಲರ್ಸ್ ಕಾಟ್‌ರೆಟ್ಸ್‌ನಲ್ಲಿ. ಈತನ ಪೂರ್ವಜರು ಫ್ರೆಂಚ್ ಹಾಗೂ ನೀಗ್ರೋ ಮಿಶ್ರತಳಿಯವರು. ಡ್ಯೂ ಮಾನ ತಂದೆ ಅಲೆಕ್ಸಾಂಡರ್ ಡೇವಿ ಫ್ರಾನ್ಸಿನ ಮಹಾಕ್ರಾಂತಿಯ ಕಾಲದಲ್ಲಿ ಸೈನ್ಯಾಧಿಪತಿಯಾಗಿದ್ದ. ೧೮೨೩ರಲ್ಲಿ ಈತ ಜೀವನೋಪಾಯಕ್ಕಾಗಿ ಪ್ಯಾರಿಸ್‌ಗೆ ಹೋಗಿ ಅಲ್ಲಿ ಡಕ್ ದಿ ಆರ್ಲಿಯನ್ಸ್ ಎಂಬ ಶ್ರೀಮಂತನ ಬಳಿಗುಮಾಸ್ತನಾಗಿ ಸೇರಿಕೊಂಡ; ಸ್ವಲ್ಪ ಕಾಲಾನಂತರ ಲೇಖನ ವೃತ್ತಿಯನ್ನೇ ಸಂಪೂರ್ಣವಾಗಿ ಅವಲಂಬಿಸಿದ. ಪ್ಯಾರಿಸ್‌ನಲ್ಲಿ ಈತ ಮಾರಿಲೆಬೇ ಎಂಬುವಳೊಡನೆ ಸಂಬಂಧವಿಟ್ಟುಕೊಂಡಿದ್ದು ೧೮೨೪ರಲ್ಲಿ ಅವಳಲ್ಲಿ ಒಬ್ಬ ಮಗನನ್ನು ಪಡೆದ. ಆತನೇ ಮುಂದೆ ಕಿರಿಯ ಡ್ಯೂಮಾ ಎಂದು ಪ್ರಸಿದ್ಧನಾದ ನಾಟಕಕಾರ. ಡ್ಯೂಮಾ ಜೀವನ ಪರ್ಯಂತ ದುಡಿಯುತ್ತಿದ್ದರೂ ಬಹು ವಿಧವಾದ ಕಷ್ಟಕೋಟಲೆಗಳಿಗೂ ದುರ್ವ್ಯಸನಗಳಿಗೂ ಸಿಕ್ಕಿ ತೊಳಲಿದ. ರಾಜಕೀಯದಲ್ಲಿ ಈತ ರಿಪಬ್ಲಿಕನ್ (ಪ್ರಜಾಪ್ರಭುತ್ವವಾದಿಗಳ) ಪಕ್ಷದಲ್ಲಿ ಒಲವುಳ್ಳವನಾಗಿದ್ದು ೧೮೪೮ರ ಸ್ವಾತಂತ್ರ್ಯ ಚಳವಳಿಗೆ ಬೆಂಬಲವಿತ್ತ. ೧೮೫೧ರ ತರುವಾಯ ತಾನಾಗಿಯೇ ದೇಶ ತ್ಯಾಗಮಾಡಿ ಇಟಲಿಯ ಜನನಾಯಕ ಗಾರಿಬಾಲ್ಡಿಯ ಜೊತೆ ಸೇರಿಸಿಕೊಂಡು ಇಟಲಿಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ. ನಾಲ್ಕು ವರ್ಷ ಕಾಲ ನೇಪಲ್ಸಿನಲ್ಲಿದ್ದು ಅನಂತರ ಫ್ರಾನ್ಸಿಗೆ ಹಿಂತಿರುಗಿದ. ಈತ ತನ್ನ ಕೊನೆಗಾಲದವರೆಗೂ ಸಾಲಸೋಲಗಳಿಗೆ ಸಿಕ್ಕಿ ನರಳುತ್ತ ಜೀವಿಸಿದ್ದ.

ಡ್ಯೂಮಾ ಮೊದಲು ನಾಟಕಾರನೆಂದು ಹೆಸರು ಮಾಡಿಕೊಂಡನಾದರೂ ಈತನ ಕೀರ್ತಿ ನಿಂತಿರುವುದು ಈತನ ಜನಪ್ರಿಯ ಕಾದಂಬರಿಗಳ ಮೇಲೆ. ರೊಮ್ಯಾಂಟಿಕ್ ಸಾಹಿತಿ ವಿಕ್ಟರ್ ಹ್ಯೂಗೋನ ಕವನಗಳನ್ನು ಅನುಕರಿಸಿ ಮೊದಲು ಕೆಲವು ಪದ್ಯಗಳನ್ನು ಬರೆದ. ಅಗ್ಗದ ಪ್ರಹಸನಗಳನ್ನೂ ಬರೆದದ್ದುಂಟು. ಆದರೆ

ಕೆಲಕಾಲದ ಮೇಲೆ ನಾಟಕ ರಚನೆ ಕೈಬಿಟ್ಟು ರೋಮಾಂಚಕಾರಿ ಕಥೆ ಕಾದಂಬರಿಗಳನ್ನು ಬರೆಯಲುಪಕ್ರಮಿಸಿದ. ಇದಕ್ಕಾಗಿ ಈತ ಪೋಲೀಸ್ ರಹಸ್ಯ ದಾಖಲೆಗಳನ್ನೂ ಸುದ್ದಿಸಂಗ್ರಹಗಳನ್ನೂ ತಡಕಾಡಿ ರಸಭರಿತ ಘಟನೆಗಳನ್ನು ಆರಿಸಿಕೊಂಡ. ಅವುಗಳ ಆಧಾರದ ಮೇಲೆ ಐತಿಹಾಸಿಕತೆಯ ಬಣ್ಣ ಬಳಿದು ದಿ ಕ್ಲೋಕ್ ಆಂಡ್ ಡ್ಯಾಗರ್ ಪ್ಲೇ ಮಾದರಿಯ ರಮ್ಯ ಸಾಹಸಮಯ ಕಥೆಗಳನ್ನು ಬರೆದು ನಿಯತಕಾಲಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದ. ತನ್ನ ಕಥೆಗಳಿಗೆ ಬೇಕಾದ ಐತಿಹಾಸಿಕ ಪುರಾವೆಗಳನ್ನು ಸಂಗ್ರಹಿಸಲು ಹಲವಾರು ಜನರ ನೆರವು ಪಡೆದ. ಸುಮಾರು ೩೦೦ ಕ್ಕೂ ಹೆಚ್ಚಿನ ರಮ್ಯ ಐತಿಹಾಸಿಕಗಳನ್ನು ಈತ ಬರೆದನೆನ್ನಲಾಗಿದೆ. ಕಲೆಯ ದೃಷ್ಟಿಯಿಂದ ಈತನ ಕಾದಂಬರಿಗಳಲ್ಲಿ ಹೆಚ್ಚು ಗಟ್ಟಿ ಅಂಶಗಳಿಲ್ಲ; ಸ್ಕಾಟ್‌ನ ಕಾದಂಬರಿಗಳಲ್ಲಿರುವಂತೆ ಈತನ ಕಾದಂಬರಿಗಳಲ್ಲಿ ಯಥಾರ್ಥವಾದ ಐತಿಹಾಸಿಕ ವಾತಾವರಣವಾಗಲೀ ಖಚಿತ ಪಾತ್ರನಿರ್ಮಾಣವಾಗಲೀ ಇಲ್ಲ ಕಥಾಸನ್ನಿವೇಶಗಳಲ್ಲಿ ಆಯಾಮವಿಲ್ಲ. ಆದರೂ ಜೀವಂತವಾದ ನಿರರ್ಗಳ ನಿರೂಪಣೆ, ರೋಮಾಂಚಕಾರಿ ಘಟನಾವಳಿಗಳಿಂದಾಗಿ ಅವು ಸುಲಭವಾಗಿ ಓದಿಸಿಕೊಂಡು ಹೋಗುತ್ತವೆ. ಆದ್ದರಿಂದಲೇ ಕೇವಲ ಮನೋರಂಜನೆಯನ್ನು ಬಯಸಿದ ಲಕ್ಷಾಂತರ ಮಂದಿಗೆ ಡ್ಯೂಮಾನ ಕಾದಂಬರಿಗಳು ರಸದೌತಣ ಒದಗಿಸಿದವು. ಹಾಗೆ ಬಹುಕಾಲ ಓದುಗರನ್ನು ಸೆರೆಹಿಡಿದ ಕಾದಂಬರಿಗಳಲ್ಲಿ ದಿ ತ್ರೀ ಮಸ್ಕೆಟಿಯರ್ಸ್, ದಿ ಕೌಂಟ್ ಆಫ್ ಮಾಂಟೆ ಕ್ರಿಸ್ಟೊ, ದಿ ಮ್ಯಾನ್ ಇನ್ ದಿ ಅಯರ್ನ್ ಮಾಸ್ಕ್- ಇವು ಚಲನಚಿತ್ರಗಳಾಗಿ ಯಶಸ್ಸುಗಳಿಸಿವೆ. ಟ್ವೆಂಟಿ ಇಯರ್ಸ್ ಆಫ್ಟರ್- ಮುಂತಾದವು ಸುಪ್ರಸಿದ್ಧವಾದುವು. ಇವಲ್ಲದೆ ಡ್ಯೂಮಾ ಸ್ವಾರಸ್ಯವಾದ ಆತ್ಮ ಕಥೆಯನ್ನೂ ಪ್ರವಾಸಚಿತ್ರಗಳನ್ನೂ ಬರೆದಿಟ್ಟಿದ್ದಾನೆ. (ಎಚ್.ಕೆ.ಆರ್.; ಎಲ್.ಎಸ್.ಎಸ್)

VI ಜರ್ಮನ್ ಸಾಹಿತ್ಯ

ಜರ್ಮನಿಭಾಷೆ ಸಾಹಿತ್ಯವು, ಜರ್ಮನಿ, ಆಷ್ಟ್ರಿಯಾ, ಸ್ವಿಡ್ಜರ್‌ಲ್ಯಾಂಡ್‌ನ ಕೆಲವುಭಾಗಗಳಲ್ಲಿ ಪ್ರಚಲಿತದಲ್ಲಿದ್ದು

ಹಳೆ ಜರ್ಮನ್ ಸಾಹಿತ್ಯ – ೭೫೦–೧೦೫೦
ಮಧ್ಯಯುಗಿನ ಸಾಹಿತ್ಯ– ೧೦೫೦–೧೩೦೦
ನಂತರದ ಮಧ್ಯಯುಗದ ಸಾಹಿತ್ಯ– ೧೫೦೦–೧೬೫೦

ಆಧುನಿಕ ಸಾಹಿತ್ಯ – ೧೯ನೆಯ ಶತಮಾನ ಹಾಗೂ ೨೦ನೆಯ ಶತಮಾನದ ಸಾಹಿತ್ಯವೆಂದು ಗುರುತಿಸಲಾಗಿದೆ.

ಜರ್ಮನ್ ಸಾಹಿತ್ಯದ ಪುನರು ಜೀವನವು ಸಾಬಾಷ್ಟಿಯನ್ ಬರ್ನ್ ೧೪೫೭–೧೫೨೧. ಥಾಮಸ್ ಮೂರ್ನರ್, ಪಿಲಿಪ್‌ಮೆಹಲ್ಜಂಟ್ ಸಬಾಷ್ಟಿಯನ್ ಪ್ರಾಂಕ್ ಮುಂತಾದವರ ಬರೆವಣಿಗೆಯೊಂದಿಗೆ ಆರಂಭವಾಯಿತು. ಇಂದು ಸುಮಾರು ೧೩ ಜನರು ನೊಬೆಲ್ ಬಹುಮಾನ ಪಡೆದ ಸಾಹಿತಿಗಳನ್ನು ಹೊಂದುವುದರ ಮೂಲಕ ಜಗತ್ತಿನ ಸಾಹಿತ್ಯಗಳಲ್ಲಿ ಅಗ್ರಸ್ಥಾನವನ್ನು ಹೊಂದಿದೆ.

ಫ್ರಾನ್ಜ್ ಕಾಫ್ಕ (೧೮೮೩-೧೯೨೪)

ಜರ್ಮನ್ ಭಾಷೆಯ ಹಾಗೂ ಜಗತ್ತಿನ ಪ್ರಸಿದ್ಧ ಲೇಖಕರಲ್ಲೊಬ್ಬ. ಯಹೂದಿ ಜೆಕ್ ಮನೆತನಕ್ಕೆ ಸೇರಿದ ಈತ ೧೮೮೩ರಲ್ಲಿ ಪ್ರಾಗ್ ನಗರದಲ್ಲಿ ಜನಿಸಿದ. ಇವನ ತಂದೆ ಶ್ರೀಮಂತ ವರ್ತಕನಾಗಿದ್ದ. ಸಾಹಿತ್ಯ ಅಥವಾ ವೈದ್ಯಶಾಸ್ತ್ರವನ್ನು ಅಭ್ಯಾಸ ಮಾಡಬೇಕೆಂಬ ಯೋಚನೆ ಇಟ್ಟುಕೊಂಡಿದ್ದ. ಕೊನೆಗೆ ಕಾನೂನುಶಾಸ್ತ್ರ ವ್ಯಾಸಂಗಮಾಡಿ ಪ್ರಾಗ್‌ನಲ್ಲಿನ ಜರ್ಮನ್ ಕಾರ್ಲ್ ಫರ್ಡಿನಂಡ್ ವಿಶ್ವವಿದ್ಯಾಲಯದಿಂದ ಕಾನೂನುಶಾಸ್ತ್ರದಲ್ಲಿ ಡಾಕ್ಟೊರೇಟ್ ಪದವಿ ಪಡೆದು ಸುಮಾರು ಒಂದು ವರ್ಷಕಾಲ ಖಾಸಗಿ ವಕೀಲನಾಗಿ ಕೆಲಸಮಾಡಿದ. ಅನಂತರ ಕೆಲವು ತಿಂಗಳು ಒಂದು ಖಾಸಗಿ ಇನ್ಶ್ಯೂರನ್ಸ್ ಕಂಪನಿಯಲ್ಲಿ ಕೆಲಸಮಾಡಿ, ಕೊನೆಗೆ ಸರ್ಕಾರ ಸ್ಥಾಪಿಸಿದ ಕಾರ್ಮಿಕರ ಇನ್ಶ್ಯೂರನ್ಸ್ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡು. ತನ್ನ ಬದುಕಿನ ಕೊನೆಯ ಕೆಲವು ವರ್ಷಗಳನ್ನು ಬಿಟ್ಟರೆ, ಕಾಫ್ಕ ತನ್ನಯುಷ್ಯ ಪೂರ್ತ ಇದೇ ವೃತ್ತಿಯಲ್ಲಿದ್ದ.

ಕಾಫ್ಕ ರಚಿಸಿದ ಬಹುಪಾಲು ಸಾಹಿತ್ಯ ಪ್ರಕಟವಾದದ್ದು, ಪ್ರಸಿದ್ಧಿಗೆ ಬಂದದ್ದು ಈತ ತೀರಿಕೊಂಡ ಅನಂತರ. ಇಡೀ ಜೀವನವನ್ನು ಮದುವೆಯಾಗದೆ ಒಂಟಿಯಾಗಿ ಕಳೆದ ಕಾಫ್ಕ ತನ್ನ ೪೩ನೆಯ ವಯಸ್ಸಿನಲ್ಲಿ ಕ್ಷಯರೋಗಕ್ಕೆ ತುತ್ತಾಗಿ ತೀರಿಕೊಂಡ. ಸಾಯುವಾಗ, ತನ್ನಿಂದ ರಚಿತವಾಗಿದ್ದು ಇನ್ನೂ ಹಸ್ತಪ್ರತಿಯ ರೂಪದಲ್ಲೇ ಇರುವ ಎಲ್ಲ ಸಾಹಿತ್ಯವನ್ನೂ ಸುಟ್ಟುಹಾಕಿ ನಾಶಪಡಿಸುವಂತೆ ತನ್ನ ಸ್ನೇಹಿತ ಮ್ಯಾಕ್ಸ್ ಬ್ರಾಂಡ್‌ಗೆ ತಿಳಿಸಿದ್ದ. ಆದರೆ ಆತ ಹಾಗೆ ಮಾಡದೆ ಕಾಫ್ಕನ ನಿಧನಾ ನಂತರ ಇವನ ಎಲ್ಲ ಕೃತಿಗಳನ್ನೂ ಸಂಪಾದಿಸಿ ಪ್ರಕಟಿಸಿದ.

ಕಾಫ್ಕನದು ಒಂದು ಬಗೆಯ ಹತಾಶ ಬದುಕು. ಇಂಥ ಹತಾಶ ಬದುಕಿಗೆ ಕಾರಣವಾದ ಸಂಗತಿಗಳು ಅನೇಕವಾದರೂ ಮುಖ್ಯವಾದವೆಂದರೆ ಮಧ್ಯಮವರ್ಗದ ಬದುಕಿನ ದೈನಂದಿನ ಹೊರೆ, ತಂದೆಯೊಡನಿದ್ದ ಒಂದು ಬಗೆಯ ಭೀತಿಯ ಹಾಗೂ ಜುಗುಪ್ಸೆಯ ಸಂಬಂಧ. ಕಾಫ್ಕನಲ್ಲಿಯೇ ಕಂಡುಬರುವ ಅತಿ ವಿಚಿತ್ರವಾದ, ಕೆಲವೊಮ್ಮೆ ವಿಕೃತವೆನ್ನಿಸುವ ಸಂವೇದನಶೀಲತೆ. ಕಾಫ್ಕನೇ ವಿವರಿಸಿದಂತೆ ಇವನ ತಂದೆ ಕಾಫ್ಕನಿಗಿಂತ ತೀರ ಭಿನ್ನಪ್ರಕೃತಿಯ ವ್ಯಕ್ತಿಯಾಗಿದ್ದ. ಕಾಫ್ಕನಿಗೆ ವ್ಯಾವಹಾರಿಕ ದೃಷ್ಟಿಯಿಂದ ಜೀವನದಲ್ಲಿ ಯಶಸ್ವಿಯಾಗಬೇಕೆಂಬ ತುರಾತುರಿ ಇರಲಿಲ್ಲ. ಅಪ್ಪನ ಬದುಕಿನಲ್ಲಿ ಆ ತುರಾತುರಿ ಬಲು ಜೋರಾಗಿತ್ತು. ಬದುಕಿನಲ್ಲಿ ಸಾಮಾನ್ಯ ಅರ್ಥದಲ್ಲಿ ಯಶಸ್ವಿಯಾಗಬೇಕೆಂಬ ಹಂಬಲ ಅಪ್ಪನಲ್ಲಿ ತೀವ್ರವಾಗಿದ್ದರೆ, ಮಗನಲ್ಲಿ ದೈನಂದಿನ ಬದುಕಿನ ಸಾಮಾಜಿಕ ಆರ್ಥಿಕ ಹಣಾಹಣಿಯ ನಿರರ್ಥಕತೆಯ ಭಾವನೆ ಅಷ್ಟೇ ಪ್ರಮುಖವಾಗಿತ್ತು. ತಂದೆಯಲ್ಲಿ ಅಸಾಧಾರಣ ಶಕ್ತಿ, ಆರೋಗ್ಯ, ಆತ್ಮವಿಶ್ವಾಸ, ವ್ಯಾವಹಾರಿಕ ಜ್ಞಾನ, ಜಾಣ್ಮೆ, ತಾಳ್ಮೆ ಕೂಡಿದ್ದರೆ ಕಾಫ್ಕನಲ್ಲಿ ದೌರ್ಬಲ್ಯ, ಅಸಹನೆ, ಅನಾರೋಗ್ಯ, ಅನಾಸಕ್ತಿ, ತನ್ನ ಶಕ್ತಿ ಸಾಮರ್ಥ್ಯಗಳಲ್ಲಿ ನಂಬಿಕೆಯಿಲ್ಲದಿರುವಿಕೆ, ಸೋಲಿನ ಪ್ರವೃತ್ತಿ, ಕುಂದಿದ ಮನಸ್ಸು, ಭೀತಿಗ್ರಸ್ತನಡಿಗೆ, ಹತಾಶೆ, ಅತಿಯಾದ

ಸಂವೇದನಶೀಲತೆ ತುಂಬಿಕೊಂಡಿದ್ದವು. ಇದೆಲ್ಲಕ್ಕಿಂತ ಹೆಚ್ಚಾಗಿ ತಂದೆಗೆ ಸಾಹಿತ್ಯದ ಬಗ್ಗೆ ಇದ್ದ ಅಸಡ್ಡೆ, ತನ್ನ ಬಗ್ಗೆ ಇದ್ದ ಅನುಕಂಪರಹಿತ ದೃಷ್ಟಿ. ಇಬ್ಬರೂ ಭಿನ್ನ ಮೌಲ್ಯಾನ್ವೇಷಣೆಯಲ್ಲಿ ತೊಡಗಿದವರು. ಈ ಬಗೆಯ ಸಂಘರ್ಷ ಕಾಫ್ಕನ ಸಾಹಿತ್ಯದ ಮೇಲೆ ಸಾಕಷ್ಟು ಪ್ರಭಾವ ಬೀರುವಲ್ಲಿ ಕಾರಣವಾಗಿದೆ. ಕಾಫ್ಕನೇ ತನ್ನ ತಂದೆಗೆ ಬರೆದ ದೀರ್ಘ ಪತ್ರವೊಂದರಿಂದ ಈ ಅಂಶ ನಿಚ್ಚಳವಾಗುತ್ತದೆ. ಆ ಪತ್ರದಲ್ಲಿ ಕಾಫ್ಕ ಹೀಗೆ ಬರೆದಿದ್ದಾನೆ. 'ನನ್ನ ಬರೆಹಗಳೆಲ್ಲ ನಿನ್ನ ಕುರಿತಾದದ್ದೇ; ನನ್ನ ಬರೆಹಗಳಲ್ಲಿ ನಾನು ಮಾಡಿದ್ದಾದರೂ ಏನು? ನಿನ್ನ ಮುಂದೆ ತೋಡಿಕೊಳ್ಳಬೇಕಾದ್ದನ್ನು ನನ್ನ ಬರೆವಣಿಗೆಯಲ್ಲಿ ತೋಡಿಕೊಂಡಿದ್ದೇನೆ, ಅಷ್ಟೆ ಉದ್ದೇಶಪೂರ್ವಕವಾಗಿಯೇ ನಿನ್ನಿಂದ ಬಿಡುಗಡೆ ಪಡೆಯುವ ಪ್ರಯತ್ನವದು. ನನ್ನನ್ನು ಇಂತಹ ಪ್ರಯತ್ನದಲ್ಲಿ ತೊಡಗಿಸಲು ನೀನೇ ಕಾರಣ; ಆದರೆ ನನ್ನ ಬರೆವಣಿಗೆ ಬೆಳೆದುಬಂದು ರೀತಿ ಮಾತ್ರ ನಾನೇ ರೂಪಿಸಿದ್ದು.'

ಕಾಫ್ಕನ ಬರೆಹದ ಅರ್ಥವನ್ನು ಅನೇಕ ವಿಮರ್ಶಕರು ಅನೇಕ ವಿಧದಲ್ಲಿ ಅನೇಕ ರೂಪದಲ್ಲಿ ಶೋಧಿಸಿದ್ದಾರೆ. ಇವನ ಬರೆಹದ ತಿರುಳು ಧಾರ್ಮಿಕ ತತ್ತ್ವವೆಂದು ಕೆಲವರು ಬಗೆದರೆ, ಇನ್ನು ಕೆಲವರು ಅದು ಅಸ್ತಿತ್ವವಾದದ ಪರಿಶೋಧನೆ ಎಂದು ಭಾವಿಸಿದ್ದಾರೆ. ಮತ್ತೆ ಕೆಲವರು ಅವನ ಬರೆಹದಲ್ಲಿ ಅತೀಂದ್ರಿಯ ಜ್ಞಾನದ ಹೊಳವನ್ನು ಕಂಡರೆ, ಇನ್ನು ಕೆಲವು ವಿಮರ್ಶಕರು ಮನೋವೈಜ್ಞಾನಿಕ-ಮಾನಸಿಕ ಅರ್ಥವನ್ನು ಕಷ್ಟಪಟ್ಟು ಹೊರಗೆಳೆಯಲು ಪ್ರಯತ್ನಿಸಿದ್ದಾರೆ. ಈ ಶತಮಾನದ ಪ್ರಾರಂಭವಾದ ದಶಕಗಳಲ್ಲಿ ಪಾಶ್ಚಾತ್ಯ ಸಮಾಜದಲ್ಲಿ ಸಾಂಪ್ರದಾಯಿಕ-ಸಂಸಾರಿಕ ಜೀವನದ ಪದ್ಧತಿಗಳು ಛಿದ್ರಗೊಂಡು ಔದ್ಯಮೀಕರಣ ಕ್ರಮೇಣ ಮನುಷ್ಯನ ಬದುಕನ್ನು ಆಕ್ರಮಿಸತೊಡಗಿದ್ದರ ಮಾನಸಿಕ ಪ್ರಭಾವವನ್ನು ಕೆಲವು ವಿಮರ್ಶಕರು ಗುರುತಿಸಿದ್ದಾರೆ. ಒಟ್ಟಿನಲ್ಲಿ ಮನುಷ್ಯನ ನಿರಂತರವಾದ ಸಂದಿಗ್ಧಸ್ಥಿತಿಯನ್ನು, ತನ್ನ ಒಡನಾಡಿಗಳಿಂದ ಮನುಷ್ಯ ದಿನೇ ದಿನೇ ದೂರಸರಿದು ಏಕಾಂಗಿಯಾಗಿ, ಒಂಟಿಯಾದ ಆದರೂ ಎಲ್ಲರ ನಡುವೆ ಬದುಕಬೇಕಾದ ನೈತಿಕ ಅನಿವಾರ್ಯಕತೆಯ ಮೂಲ ಸ್ಥಿತಿಯನ್ನು ಕಾಫ್ಕನ ಬರೆಹ ಸೃಷ್ಟಿಸುತ್ತದೆ-ಎಂಬ ವಿಷಯವಾಗಿ ಬಹುಪಾಲು ವಿಮರ್ಶಕರಲ್ಲಿ ಒಮ್ಮತವಿರುವುದನ್ನು ಕಾಣಬಹುದು.

ಕಾಫ್ಕ ಬರೆದದ್ದು ಹೆಚ್ಚಿಲ್ಲವಾದರೂ ಬರೆದಷ್ಟು ಉತ್ತಮ ಸಾಹಿತ್ಯವಾಗಿ ವಿಶ್ವವಿಖ್ಯಾತವಾಗಿದೆ. ಈತ ಮೂರು ಕಾದಂಬರಿಗಳನ್ನು ಅನೇಕ ಸಣ್ಣಕಥೆಗಳನ್ನು ಬರೆದಿದ್ದಾನೆ. ದಿ ಟ್ರಯಲ್ (೧೯೨೫), ದಿ ಕ್ಯಾಸಲ್ (೧೯೨೬)-ಇವು ಕಾದಂಬರಿಗಳು. ದಿ ಮೆಟಮಾರ್ಫಸಿಸ್, ದಿ ಜಡ್ಜಮೆಂಟ್, ಇನ್ ದಿ ಪೀನಲ್ ಕಾಲೋನಿ, ಎ ಹಂಗರ್ ಆರ್ಟಿಸ್ಟ್-ಈ ಮೊದಲಾದ ಕಥೆಗಳು ಜಗತ್ತಿನ ಅತ್ಯುತ್ತಮ ಕಥೆಗಳೆಂದು ಪ್ರಸಿದ್ಧವಾಗಿವೆ.

ಯಾವ ತಪ್ಪನ್ನೂ ಮಾಡದ ವ್ಯಕ್ತಿಯೊಬ್ಬನನ್ನು ಬಂಧಿಸಿ ಒಂದು ವರ್ಷಕಾಲ ನಿರಂತರವಾದ, ಅರ್ಥವೇ ಆಗದ, ಹಿಂದುಮುಂದಿಲ್ಲದ ವಿಚಾರಣೆಗೆ ಗುರಿಪಡಿಸಿ, ಮರಣದಂಡನೆ ವಿಧಿಸುವುದು 'ದಿ ಟ್ರಯಲ್' ಕಾದಂಬರಿಯ ವಸ್ತು. ಆದರೆ ಮರಣದಂಡನೆಗೆ ಗುರಿಯಾದ ವ್ಯಕ್ತಿ ತನ್ನನ್ನು ಯಾವ ಕಾನೂನಿನ ಪ್ರಕಾರ ವಿಚಾರಣೆಗೆ ಗುರಿಪಡಿಸಿದ್ದಾರೆಂಬುದನ್ನು ತಿಳಿದುಕೊಳ್ಳಲಾಗದೆ ತೊಳಲಾಡುವುದು ಕಾದಂಬರಿಯ ಕೇಂದ್ರಬಿಂದು. 'ಕೆ' ಎಂಬ ವ್ಯಕ್ತಿಯೊಬ್ಬ ಗ್ರಾಮಸಮುದಾಯವೊಂದರ ಒಪ್ಪಿಗೆ ಪಡೆದು, ನಿಗೂಢ ಪರಮಾಧಿಕಾರದ ಮನೆಯಾದ 'ದುರ್ಗ'ವನ್ನು ಪ್ರವೇಶಿಸುವಲ್ಲಿ ಪಡುವ ವ್ಯರ್ಥಮಾನಸಿಕ ತೊಳಲಾಟ, ಹಿಂಸೆಯ ಚಿತ್ರಣ ದಿ ಕ್ಯಾಸಲ್ ಕಾದಂಬರಿಯಲ್ಲಿದೆ. ಮನುಷ್ಯನೊಬ್ಬ ದೈತ್ಯಾಕಾರದ ಹುಳುವಾಗಿ ರೂಪಾಂತರಗೊಂಡ ಮೇಲೆ ಆತ ಹಲವು ದಿನಗಳು ಬದುಕಿದ್ದು ಪಡುವ ಯಾತನೆ, ಮಾನಸಿಕ ಕ್ಷೋಭೆಯ ಚಿತ್ರಣ ದಿ ಮೆಟಮಾರ್ಫಸಿಸ್ ಕಥೆಯಲ್ಲಿ ಬರುತ್ತದೆ. ಜಗತ್ತಿನಾದ್ಯಂತ ಸಾಹಿತ್ಯವಲಯದಲ್ಲಿ ಬಹುಚರ್ಚಿತವಾಗಿರುವ ಕೃತಿಯಿದು. ಗ್ರಿಗೊರ್ ಸಂಸ ಒಬ್ಬ ಸಂಚಾರಿ ವ್ಯಾಪಾರಿ; ತಂದೆ, ತಾಯಿ, ಮತ್ತು ತಂಗಿಯ ಜೊತೆ ವಾಸಿಸುವವ. ತಂದೆ ಮಾಡಿದ ಸಾಲದ ಹೊರೆಯನ್ನು ಹೊತ್ತು, ಸಂಸಾರ ನಡೆಸುವ ಉದ್ದೇಶದಿಂದ ತನಗಿಷ್ಟವಿಲ್ಲದ ವ್ಯಾಪಾರೀ ವೃತ್ತಿ ಹಿಡಿದವ. ತಂದೆಯ ಸಾಲ ಮುಗಿದಕೂಡಲೇ ಆ ಅನಿಷ್ಟ ಕೆಲಸವನ್ನು ತೊರೆದು ಸ್ವತಂತ್ರನಾಗುವ ಹಂಬಲದಲ್ಲಿದ್ದವ; ತಂಗಿಯನ್ನು ಸಂಗೀತ ಶಾಲೆಗೆ ಕಳಿಸುವ ಯೋಚನೆಯಲ್ಲಿದ್ದವ. ಆದರೆ ಇದ್ದಕ್ಕಿದ್ದಂತೆ ಒಂದು ಬೆಳಗ್ಗೆ ಎದ್ದು ಕೆಲಸಕ್ಕೆ ಹೋಗಬೇಕಾಗಿದ್ದವ ಹಾಸಿಗೆಯಲ್ಲಿ ಹುಳುವಾಗಿ ರೂಪಾಂತರಗೊಂಡಿದ್ದು ವೇದ್ಯವಾಗುತ್ತದೆ. ಕಥೆ ಆರಂಭವಾಗುವಾಗಲೇ ಈ ರೂಪಾಂತರಮುಗಿದು ಹೋಗಿರುವುದರಿಂದ ಸಂಸ ಏಕೆ ಮತ್ತು ಹೇಗೆ ಹುಳುವಾದ ಎಂಬುದರ ವಿವರಣೆಯನ್ನು ಕತೆಯಲ್ಲಿ ಕಾಣುವುದು ಸಾಧ್ಯವಿಲ್ಲ. ಅಲ್ಲದೆ ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ಆತ ಹುಳುವಿನ ರೂಪಕ್ಕೆ ಮಾರ್ಪಾಡಾದರೂ ಮನುಷ್ಯನ ಆಲೋಚನೆ, ಭಾವನೆ ಪ್ರಕ್ರಿಯೆಗಳನ್ನು ಉಳಿಸಿಕೊಂಡಿರುತ್ತಾನೆ. ಕಥೆಯ ಬಹುಪಾಲು ಸಂಸನ ದೃಷ್ಟಿಯಲ್ಲೇ ತೆರೆದುಕೊಳ್ಳುತ್ತ ಹೋಗುತ್ತದೆ. ಆಗೀಗ ಅವನ ವರ್ತನೆ, ಭಾವನೆ, ಆಹಾರದ ರುಚಿ? ಇತ್ಯಾದಿಗಳಲ್ಲಿ ಮನುಷ್ಯತನ ಕ್ರಮೇಣ ಕುಂದುವಂತೆ ಕಂಡುಬಂದರೂ ಅದರ ಬಗ್ಗೆ ಅವನಲ್ಲೇ ಇರುವ ಪ್ರಜ್ಞೆಯಿಂದಾಗಿ ಆತ ತಿರುತಿರುಗಿ ಮಾನವೀಯ ವೃತ್ತಕ್ಕೆ ಹೊರಳಿಕೊಳ್ಳಲು ಪ್ರಯತ್ನಿಸುವುದು ವ್ಯಕ್ತವಾಗುತ್ತದೆ. ಕತೆಯಲ್ಲಿ ತುಂಬಿಕೊಂಡಿರುವ ಹಲವು ಬಗೆಯ ವಿಪರ್ಯಾಸಗಳಲ್ಲಿ ಇದೂ ಒಂದು. ಒಂದು ದೃಷ್ಟಿಯಿಂದ ಮನುಷ್ಯರಿಂದ ಪೂರ್ತಿ ದೂರ ಸರಿದೂ ಅವರ ನಡುವೆ ಬದುಕಲೇಬೇಕಾದ ನೈತಿಕ ಅನಿವಾರ್ಯತೆಯನ್ನು ಸಂಸನ ರೂಪಾಂತರ ಬಲು ಸಮರ್ಥವಾಗಿ ಚಿತ್ರಿಸುತ್ತದೆ.

ಕಾಫ್ಕನ ಸಾಹಿತ್ಯ ಕನ್ನಡಕ್ಕೆ ಸಾಕಷ್ಟು ಅನುವಾದಗೊಂಡಿದೆ. ದಿ ಮೆಟಮಾರ್ಫ಼ಸಿಸ್ ಕಥೆಯನ್ನು ರೂಪಾಂತರ ಎಂಬ ಹೆಸರಿನಲ್ಲಿ ಗಿರಿ, ಜಿ.ಎನ್. ರಂಗನಾಥರಾವ್ ಸ್ವತಂತ್ರವಾಗಿ ಅನುವಾದಿಸಿದ್ದಾರೆ. ಕಾಫ್ಕನ ಆಯ್ದ ಕೆಲವು ಕಥೆಗಳನ್ನು ಕೃಷ್ಣಮೂರ್ತಿ ಚಂದರ್ ಅವರು 'ಕಾಫ್ಕಾನ ಕಥೆಗಳು ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ದೇ.ನ. ಶ್ರೀನಿವಾಸಮೂರ್ತಿಯವರು ದಿ ಕ್ಯಾಸಲ್ ಕಾದಂಬರಿಯನ್ನು ದುರ್ಗ ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. (ಜಿ.ಎಚ್‌ಇ.)

ಗೆಸ್ಟಾಫ್ ಫ್ರೈಟಾಕ್ (೧೮೧೬-೧೮೯೫)

ಜರ್ಮನ್ ಕಾದಂಬರಿಕಾರ, ನಾಟಕಕಾರ ಮತ್ತು ವಿಮರ್ಶಕ, ಹುಟ್ಟಿದ್ದು ಸೈಲೀಶಿಯದ ಕ್ರೆಟ್ಸ್‌ಬರ್ಗ್‌ನಲ್ಲಿ ಈತ ಬ್ರೆಸ್ಲಾವ್ ಮತ್ತು ಬರ್ಲಿನ್ ಶಾಲೆ, ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಭಾಷಾಶಾಸ್ತ್ರದಲ್ಲಿ ವಿಶೇಷ ಅಧ್ಯಯನ ನಡೆಸಿ ಮಹಾಪ್ರಬಂಧ ಬರೆದು ಪದವೀಧರನಾದ. ೧೮೪೮ರಿಂದ ೧೮೬೧ರವರೆಗೆ ಮತ್ತು ೧೮೬೭-೭೦ರವರೆಗೆ ಲೀಪಾಜಿಗ್ನಲ್ಲಿ ಗ್ರೆಂಟ್ಸ್‌ಬೊಟನ್ ವಾರಪತ್ರಿಕೆಯ ಸಹ ಸಂಪಾದಕನಾಗಿ ದುಡಿದ. ೧೮೪೧ರಲ್ಲಿ ಆರಂಭವಾದ ಈ ಪತ್ರಿಕೆ ಜರ್ಮನಿ ಮತ್ತು ಆಸ್ಟ್ರಿಯಾಗಳ ಉದಾರವಾದದ ಮುಖವಾಣಿ ಆಯಿತು. ಜರ್ಮನ್ ಉದಾರವಾದಿ ಪಕ್ಷದ ಮತ್ತು ಮಧ್ಯಮವರ್ಗದ ನಾಯಕನಾಗಿದ್ದ ಈತ ಜರ್ಮನ್ ಭಾಷೆಯ ಮತ್ತು ಸಾಹಿತ್ಯದ ಖಾಸಗಿ ಶಿಕ್ಷಕನಾಗಿ ಬ್ರೆಸ್ಲಾವ್‌ನಲ್ಲಿ ನೆಲಸಿದ. ೧೮೭೯ರಲ್ಲಿ ವೀಸ್ ಬೇಡೆನ್ಗೆ ಹೋಗಿ ವಾಸಿಸತೊಡಗಿದ.

ಡೈ ಬ್ರಾಂಟ್ ಫಾಟ (೧೮೪೪). ಡೈಜರ್ನಲಿಸ್ಟೆನ್ (೧೮೫೪) ಎಂಬ ಎರಡು ಹರ್ಷನಾಟಕಗಳನ್ನು ಬರೆದ. ಜರ್ನಲಿಸ್ಟೆನ್ (ದಿ ಜರ್ನಲಿಸ್ಟ್) ೧೯ನೆಯ ಶತಕದ ಶ್ರೇಷ್ಠ ಪ್ರಹಸನಗಳಲ್ಲಿ ಒಂದು ಎಂದು ಪರಿಗಣಿಸಲಾಯಿತು. ಸ್ವಾನುಭವವೇ ಇದರ ವಸ್ತು. ೧೮೫೫ರಲ್ಲಿ ಜರ್ಮನಿಯ ವರ್ತಕ ಜೀವನವನ್ನು ಚಿತ್ರಿಸುವ ಜೋಲ್ ಊಂಟ್ ಹಾಬಿನ್ ಎಂಬ ವಸ್ತುನಿಷ್ಠಪ್ರಧಾನ ಕಾದಂಬರಿಯನ್ನು ಪ್ರಕಟಿಸಿ ವಿಶ್ವವಿಖ್ಯಾತನಾದ. ಎಲ್ಲ ಐರೋಪ್ಯ ಭಾಷೆಗಳಿಗೂ ಅದು ಅನುವಾದವಾಗಿದೆ. ಸಾಮಾಜಿಕ, ರಾಜಕೀಯ ಕ್ಷೋಭೆಯ ಹಿನ್ನೆಲೆಯಲ್ಲಿ ಜರ್ಮನಿಯ ವ್ಯಾಪಾರಸ್ಥರ ಜೀವನದ ತದ್ವತ್ ಚಿತ್ರ ಇಲ್ಲಿದೆ. ಜೊತೆಗೆ ಡಿಕನ್ಸ್‌ನನ್ನು ನೆನಪಿಗೆ ತರುವ ಲವಲವಿಕೆಯ ಹಾಸ್ಯಸಿಂಚನ. ಈ ಹಲವಾರು ಗುಣಗಳಿಂದ ಇದು ಆ ಕಾಲದ ಶ್ರೇಷ್ಠ ಕಾದಂಬರಿ ಎನಿಸಿತು.

ಗ್ರೆಂಟ್ಸ್ ಬೋಟೆನ್ ಪತ್ರಿಕೆಯಲ್ಲಿ ಪ್ರಷ್ಯಾದ ಅಧಿನಾಯಕತ್ವದ ಪರವಾಗಿ ವಾದಿಸಿದ. ಇದರಿಂದ ಗೋಥಾದ ಡ್ಯೂಕ್ ಸ್ಯಾಕ್ಸ್ ಕೋಬಗನ ಸ್ನೇಹ ಲಭಿಸಿತು. ಗೋಥಾದ ಪಕ್ಕದ ಎಸ್ಟೇಟನ್ನೇ ಕೊಂಡು ಅಲ್ಲಿ ನೆಲೆಸಿದ. ೧೮೭೦ರ ಯುದ್ಧ ಮತ್ತು ಚಳವಳಿಗಳಲ್ಲಿ ಭಾಗವಹಿಸಿದ. ೧೮೬೪ರಲ್ಲಿ ಡೀ ಫರ್ಲೋರೇನ್ ಹ್ಯಾಂಡ್ ಶ್ರಿಫ್ಟ್ ಎಂಬ ಕಾದಂಬರಿ ರಚಿಸಿದ. ಈ ಕೃತಿಯಲ್ಲಿ ಲೀಪಾಜಿಗ್ನ ಸಮಾಜವನ್ನೂ

ಜರ್ಮನ್ ವಿಶ್ವವಿದ್ಯಾಲಯದ ಜೀವನವನ್ನೂ ಚಿತ್ರಿಸಿದ. ಡೈ ಆನೆನ್ ಎಂಬ ಆರು ಐತಿಹಾಸಿಕ ಕಾದಂಬರಿಗಳ ಸರಣಿ ಈತನ ಮತ್ತೊಂದು ಕೊಡುಗೆ. ೪ನೆಯ ಶತಮಾನದ ಜರ್ಮನ್ ಇತಿಹಾಸದ ಆರಂಭಕಾಲದಿಂದ ೧೯ನೆಯ ಶತಕದ ವರೆಗಿನ ಜರ್ಮನ್ ಕುಟುಂಬವೊಂದರ ರಮ್ಯ ಕಥಾನಕ. ಜರ್ಮನಿಯ ಐತಿಹಾಸಿಕ ಸಂಗತಿಗಳು, ಕಾಲಕಾಲದ ಸಾಮಾಜಿಕ ಜೀವನ ಎಲ್ಲ ತೆರೆದುಕೊಳ್ಳುತ್ತ ಸ್ವಾರಸ್ಯವಾಗಿ ಕಥೆ ಓದಿಸಿಕೊಳ್ಳುತ್ತದೆ. ಉದ್ದಕ್ಕೂ ರಾಷ್ಟ್ರಾಭಿಮಾನ ದೇಶಭಕ್ತಿ ತುಂಬಿ ತುಳುಕುತ್ತವೆ.

ಬಿಲ್ಡರ್ ಔಸ್ ಡೆರ್ ಡಾಯಿಟ್ಷೆನ್ ಫರ್ಗಾಂಗೆನ್‌ಹೈಟ್ (೧೮೭೨) ಜನಪ್ರಿಯತೆಯನ್ನು ಗಳಿಸಿದ ಜರ್ಮನ್ ಇತಿಹಾಸ ಗ್ರಂಥ. ಗ್ರೀನ್ ಸಂಕ್ಷಿಪ್ತ ಇಂಗ್ಲಿಷ್ ಇತಿಹಾಸ ಎಂಬ ಗ್ರಂಥದಷ್ಟೇ ಶ್ರೇಷ್ಠ ಮತ್ತು ಮಹೋನ್ನತ ಕೃತಿ. ಇದರದು ಮಾದರಿ ಶೈಲಿ. ೧೮೮೭ರಲ್ಲಿ ಕಾಲಮ್ಯಾಥಿ ಎಂಬ ಕಾವ್ಯನಾಮದಲ್ಲಿ ಎರಿನ್ನೆರುಂಗೆನ್ ಔಸ್ ಮೇನಿಮ್ ಲೀಬೆನ್ ಎಂಬ ಶಿರೋನಾಮೆಯಲ್ಲಿ ಆತ್ಮಕತೆ ಬರೆದ.

ಈತ ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯತತ್ತ್ವಗಳ ಸಮನ್ವಯವನ್ನು ಸಾಧಿಸಿದ. ಸಮಕಾಲೀನರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ. ಈತನ ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿಗಳ ಡಿಕನ್ಸ್ ಮತ್ತು ಸ್ಕಾಟ್‌ರ ಪ್ರಭಾವವಿರುವುದನ್ನು ಗುರುತಿಸಬಹುದು.

ಓಡರ್ ಕುಂಟ್ಸ್ 'ಫಾನ್ ಡೆರ್ ರೊಸೆನ್ (೧೮೮೪) ಎಂಬುದು ಈತನ ಯಶಸ್ವಿ ಪ್ರಹಾಸನ.

ಗೆಸಾಮ್ಮೆಲೆ ಔಫ್ ಸೆಟ್ಜ್‌ಗ್ರೆಂಟ್ಸ್ ಬೊಟನ್ (೧೮೮೮), ಡೆರ್ ಕ್ರೋನ್ ಪ್ರಿನ್ಜ್ ಊಚಿಟ್ ಡೀ ಡಾಯಿಟ್ಷ ಕೈಸೆರ್ ಕ್ರೋನ್, ಎರಿನ್ನೆರೊಂಗ್ಸ್ ಬ್ಲಾಟೆರ್ (೧೮೮೯) – ಇವು ಈತನ ಇತರ ಕೃತಿಗಳು. (ಕೆ.ಬಿ.ಪಿ.)

ಕ್ರಿಸ್ಟೋಫ್ ಫ್ರೀಡ್ರಿಕ್ ನೀಕೊಲಾಯಿ (೧೭೩೩–೧೮೧೧)

ಜರ್ಮನಿಯ ಲೇಖಕ, ವಿಮರ್ಶಕ ಹಾಗೂ ಪುಸ್ತಕ ವ್ಯಾಪಾರಿ. ಹುಟ್ಟಿದ್ದು ಬರ್ಲಿನ್ನಿನಲ್ಲಿ. ಈತನ ತಂದೆ ಕ್ರಿಸ್ಟೋಫ್ ಗಾಟ್ಲೀಬ್ ನೀಕೊಲಾಯಿ ಪ್ರಸಿದ್ಧ ಪುಸ್ತಕ ವ್ಯಾಪಾರಿ. ತಂದೆಯೊಡನೆ ಪುಸ್ತಕ ವ್ಯಾಪಾರ ಮಾಡುತ್ತಲೇ ಆಂಗ್ಲ ಸಾಹಿತ್ಯದ ಪರಿಚಯ ಮಾಡಿಕೊಂಡ. ೧೭೫೨ರಲ್ಲಿ ಅಂಗಡಿಯ ಮಾಲೀಕನಾಗಿ ಅದನ್ನು ಒಂದು ಪ್ರಮುಖ ಸಂಸ್ಥೆಯನ್ನಾಗಿ ಬೆಳೆಸಿದ. ಸಾಹಿತ್ಯದ ವಾದವಿವಾದಗಳಲ್ಲಿ ಭಾಗವಹಿಸಿ ಜೆ. ಸಿ. ಗಾಟ್‌ಷೆಡ್‌ನ ಟೀಕೆಗಳಿಗೆ ಉತ್ತರವಾಗಿ ಮಿಲ್ಟನ್ ಕವಿಯನ್ನು ಸಮರ್ಥಿಸಿದ. ೧೭೫೫ರಲ್ಲಿ ಅನಾಮಧೇಯವಾಗಿ ಪ್ರಕಟವಾದ ಬ್ರೀಫ್ ವ್ಯೂಬರ್ ಡೆನ್ ಯೆಟ್ಸಿಗೆನ್ ಟ್ಸುಶ್ಟಾಂಟ್ ಡೆಲ್ ಶೋನೆನ್ ವಿಸೆನ್‌ಷಾಫ್ಟೆನ್ ಇನ ಡಾಯಿಟ್ಷ್‌ಲಾಂಡ್ ಎಂಬ ಈತನ ಲೇಖನಗಳು ಗಾಟ್‌ಷೆಡ್ ಮತ್ತು ಆತನ ಎದುರಾಳಿಗಳನ್ನು ವಿರೋಧಿಸಿ ಬರೆದುದಾಗಿದ್ದವು. ಆಂಗ್ಲ ಸಾಹಿತ್ಯದಲ್ಲಿ ಈತ ತೋರಿಸುತ್ತಿದ್ದ ಆಸಕ್ತಿಯಿಂದಾಗಿ ಲೆಸಿಂಗ್ ಹಾಗೂ ಮೋಸೆಸ್ ಮೆಂಡಲ್ ಸೋನ್

ಇವರೊಡನೆ ಸಖ್ಯ ಬೆಳೆಯಿತು. ಮುಂದೆ ಮೆಂಡಲ್ ಸೋನನ ಸಹಕಾರದಿಂದ ಈತ ಬಿಬ್ಲಿಯೋತೀಕ್ ಡೆರ್ ಶ್ಯೋನೆನ್ ವಿಸೆನ್‌ಷಾಫ್ಟೆನ್ ಎಂಬ ವಿಮರ್ಶೆಗೆ ಮೀಸಲಾದ ನಿಯತಕಾಲಿಕವೊಂದನ್ನು ನಡೆಸಿದ (೧೭೫೭–೬೦). ಆ ನಿಯತಕಾಲಿಕ ಆರಂಭದಲ್ಲಿ ಈತ ವರ್ಷದ ಅತ್ಯುತ್ತಮ ದುರಂತ ನಾಟಕವೊಂದಕ್ಕೆ ಬಹುಮಾನ ಕೊಡುವುದಾಗಿ ಘೋಷಿಸಿದ. ಮೊದಲ ಸಂಚಿಕೆಯಲ್ಲೇ ದುರಂತ ನಾಟಕಕ್ಕೆ ಒಂದು ಪ್ರಬಂಧವನ್ನೂ ಪ್ರಕಟಿಸಿದ. ಲೆಸಿಂಗ್ ಮತ್ತು ಮೆಂಡೆಲ್ ಸೋನ್ ಇವರ ಸಹಕಾರದೊಡನೆ ಬ್ರೀಫೆ, ಡೀ ನಾಯೆಸ್ಟೆ ಲಿಟರಾಟೂರ್ ಬ್ರಿಟೆಫೆಂಟ್ ಎಂಬ ಇನ್ನೊಂದು ಸಾಹಿತ್ಯದ ನಿಯತಕಾಲಿಕವನ್ನು ನಡೆಸಿದ (೧೭೫೯–೬೫). ೧೭೬೫ರಿಂದ ೧೭೯೨ರ ವರೆಗೆ ಈತ ಆಲ್‌ಗೆಮೈನ್ ಡಾಯಿಟ್‌ಷೆ ಬಿಬ್ಲಿಯೋತಿಕ್ ಎಂಬ ಪತ್ರಿಕೆಯ ಸಂಪಾದಕನಾಗಿ ದುಡಿದ. ಈ ಪತ್ರಿಕೆ ಧರ್ಮದಲ್ಲಿ ಅಧಿಕಾರ ಹಾಗೂ ಸಾಹಿತ್ಯದಲ್ಲಿ ಅತಿವರ್ತನೆ ಎಂದು ಕರೆಯಲಾಗುತ್ತಿದ್ದುದರ ವಿರುದ್ಧವಾಗಿತ್ತು. ಈತ ಹರ್ಡರ್, ಗಯಟೆ, ಷಿಲರ್, ಕಾಂಟ್ ಮತ್ತು ಫಿಕ್ಟೆ ಇವರುಗಳ ಸಾಹಿತ್ಯದಲ್ಲಿನ ಹೊಸ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ತೀರ ಅಸಮರ್ಥನಾಗಿದ್ದ. ಕ್ರಮೇಣ ಈತ ಜರ್ಮನ್ ವಿಚಾರವಾದಿಗಳಿಂದ ದೂರವಾಗಿ ಅವರನ್ನು ಟೀಕೆ ಮಾಡತೊಡಗಿದ. ಸಾಹಿತ್ಯದಲ್ಲಿನ ಹೊಸ ವಿಚಾರಗಳ ವಿರೋಧಿಯಾದ ಈತ ಹರ್ಡರ್, ಗಯಟೆ ಹಾಗೂ ಷಿಲರರ ಟೀಕೆಗಳಿಗೆ ಗುರಿಯಾಗಬೇಕಾಯಿತು. ಆದರೆ, ಈತನ ನಿಜವಾದ ಯೋಗ್ಯತೆಯ ಕಡೆಗೆ ಯಾರ ಗಮನವೂ ಹರಿಯಲಿಲ್ಲ.

ಜರ್ಮನ್ ಸಾಹಿತ್ಯದಲ್ಲಿ ಈತನಿಗಿದ್ದ ಆಸಕ್ತಿ ಈತ ನಡೆಸುತ್ತಿದ್ದ ಪತ್ರಿಕೆಗಳೇ ಸಾಕ್ಷಿ. ಅವು ಸಮಕಾಲೀನ ಸಾಹಿತ್ಯ ಮತ್ತು ಸಮಾಜದ ಮೇಲೆ ಸಾಕಷ್ಟು ಬೆಳಕು ಬೀರಿದುವು. (ಜಿ.ಕೆ.ಯು.)

VII ರಷ್ಯನ್ ಸಾಹಿತ್ಯ

ವಿಶ್ವಸಾಹಿತ್ಯದಲ್ಲಿ ಗಣ್ಯಸ್ಥಾನ ಗಳಿಸಿರುವ ರಷ್ಯನ್ ಸಾಹಿತ್ಯದ ಮೂಲ ಬಹು ಪ್ರಾಚೀನವಾದುದಾದರೂ ಇತಿಹಾಸದ ಕಕ್ಷೆಗೆ ಬಂದದು ೧೦ನೆಯ ಶತಮಾನದ ಕಡೆಯಲ್ಲಿ. ೯೮೮ ರಲ್ಲಿ ಕೀವ್‌ನ ವ್ಲಾದಿಮಿರ್ ರಾಜಕುವರ ಕ್ರೈಸ್ತನಾದ ಬಳಿಕ ಬಿಜಾಂಟೀಯನ್ ಸಂಸ್ಕೃತಿಯ ಪ್ರವೇಶಕ್ಕೆ ಬಾಗಿಲು ತೆರೆದಂತಾಯಿತು. ಕ್ರೈಸ್ತಮತ ಪ್ರಚಾರದೊಂದಿಗೆ ರಷ್ಯನ್ ಸಾಹಿತ್ಯದ ಉದಯವಾಯಿತು ಎನ್ನಬಹುದು. ರಾಜಧಾನಿ ಕೀವ್ ನಗರ ಸಾಹಿತ್ಯದ ಕೇಂದ್ರವಾಯಿತು. ಕ್ರೈಸ್ತಧರ್ಮದ ಸ್ಫೂರ್ತಿಯಿಂದ ಸ್ಲಾವಿಕ್‌ಭಾಷೆ ಅಭಿವೃದ್ಧಿಯಾಗತೊಡಗಿತು. ಧರ್ಮಪ್ರಚಾರಕರು ಪ್ರಾಂತಿಯ ಭಾಷೆಗೆ ಪ್ರೋತ್ಸಾಹ ಕೊಟ್ಟುದರಿಂದ ಪೂರ್ವ ಭಾಗದ ಸ್ಲಾವನಿಕ್ ಮೂಲದ ಭಾಷಾಪದ ಸಂಪತ್ತು, ಕಾಗುಣಿತ ಬಳಕೆಗೆ ಬಂದವು. ಅಸ್ತ್ರಮೀರ್ ಬೈಬಲ್ (೧೦೫೬–೫೭) ದೊರೆತಿರುವ ಮೊದಲ ಗ್ರಂಥ. ಇದರ ಭಾಷೆಯೇ ಚರ್ಚ್–ಸ್ಲಾವನಿಕ್ ಭಾಷೆಗೆ ನಾಂದಿಯಾಯಿತು. ಸಾಹಿತ್ಯದ ಬರೆಹಗಳಿಗೆಲ್ಲ ಇದೇ ಬಳಕೆಯಾಗತೊಡಗಿತು.

ಧಾರ್ಮಿಕ ಗ್ರಂಥಗಳು, ಪ್ರವಚಗಳು, ಧಾರ್ಮಿಕ ಬೋಧನೆಗಳು ಪ್ರಕಟವಾದವು. ದೇಸೀಭಾಷೆಯ ಬರೆಹಗಳಿದ್ದಿರಬಹುದಾದರೂ ಅಂತಹ ಗ್ರಂಥಗಳು ದೊರೆತಿಲ್ಲ. ಆದುದರಿಂದ ಆಡುಮಾತಿಗೂ ಚರ್ಚಿನ ಬಳಕೆಗೊಳಗಾದ ದೇಸಿ ಭಾಷೆಗೂ ಇದ್ದ ಅಂತರ ವ್ಯತ್ಯಾಸಗಳು ತಿಳಿದು ಬರುವುದಿಲ್ಲ.

೧೧ನೆಯ ಶತಕದ ಮಧ್ಯದಲ್ಲಿ ಕೀವ್ ನಗರದ ಇಲಾರಿಯೆನ್ ಎಂಬ ಪಾದ್ರಿ ಬರೆದ ಧರ್ಮಬೋಧಗಳ (ಸೆರ್ಮನ್ಸ್) ಸಂಗ್ರಹ. ೧೨ನೆಯ ಶತಮಾನದಲ್ಲಿ ಪ್ರಕಟವಾದ ತುರೋಫ್‌ನ ಸಿರಿಲ್ ಎಂಬ ಪಾದ್ರಿ ಬರೆದ ಬೋಧನೋಪನ್ಯಾಸಗಳು-ಇವು ಧಾರ್ಮಿಕ ಸಾಹಿತ್ಯದ ಮೊದಲ ಕೃತಿಗಳು. ನೆಸ್ಟರ್ ಎಂಬ ಕ್ರೈಸ್ತ ಸಾಧು ಬರೆದ ಸಂತ ಗ್ಲೆಬ್ ಎಂಬನ ಜೀವನ ಚರಿತ್ರೆ ಇನ್ನೊಂದು ಮಹತ್ತ್ವದ ಮೈಲಿಗಲ್ಲು. ಕಾನ್ಸ್‌ಟಾಂಟಿನೋಪಲ್‌ನ ಜಾನ್ ಮಲಾಲಸ್ ಬರೆದ ಕ್ರಾನಿಕಲ್ಸ್ ನಿಂದ (ವೃತ್ತಾಂತ ಕಥನಗಳು) ಈ ಬಗೆಯ ಬರೆವಣಿಗೆ ಆರಂಭವಾಯಿತು. ನೋವಾನಿಂದ ೧೧೧೬ರ ವರೆಗಿನ ಮನುಕುಲದ ಕಥೆ ಪ್ರೈಮರಿ ಕ್ರಾನಿಕಲ್ ಎಂಬ ಹೆಸರಿನಲ್ಲಿ ಹೊರಬಂದಿತು. ಇದರ ಮುಂದಿನ ಕಾಲದ ೧೧೧೬-೧೨೦೦ ವರೆಗಿನ ಮನುಕುಲದ ವೃತ್ತಾಂತವನ್ನು ಕೀವ್‌ನ ಕ್ರಾನಿಕಲ್ ನಿರೂಪಿಸಿತು. ಇದರ ರಚನೆಯಲ್ಲಿ ನೆಸ್ಟರ್ ಶ್ರಮಿಸಿದ ಪ್ರಧಾನ ಸಂಪಾದಕನಾಗಿ ವ್ಯಾದುಬಿತ್ಸ್‌ಕಿಯ ಆ್ಯಬಟ್ ಸಿಲ್ವೆಸ್ಟರ್ ಕೆಲಸಮಾಡಿದ. ಈ ಗ್ರಂಥದಲ್ಲಿ ಹಲವು ಪ್ರಾಚೀನ ಸಂಪ್ರದಾಯಗಳೂ ವಿವಿಧ ಮೂಲಗಳಿಂದ ಸಂಗ್ರಹಿಸಿದ ಕಥೆಗಳೂ ನಿರೂಪಿತವಾಗಿವೆ. ಇದಲ್ಲದೆ ಕೋಡ್ ಆಫ್ ಯಾರೋಸ್ಲಾವ್‌ದ ಗ್ರೇಟ್ (೧೦೧೯-೫೪), ಟೆಸ್ಟ್‌ಮೆಂಟ್ ಆಫ್ ವ್ಲಾದಿಮಿರ್ ಮನೊಮಾಖ್-ದ ಗ್ರಾಂಡ್ ಪ್ರಿನ್ಸ್ ಆಫ್ ಕೀವ್ (೧೧೧೩-೨೫) ಎಂಬ ಇನ್ನೆರಡು ಗ್ರಂಥಗಳು ಗಮನ ಸೆಳೆಯುತ್ತವೆ. ವ್ಲಾದಿಮಿರ್ ಮನೋಮಾಖ್ ಸುಸಂಸ್ಕೃತ ಸಾಹಿತಿ. ಈ ಪುಸ್ತಕಗಳಿಂದ ಕೀವ್ ರಾಜ್ಯದ ಸಂಸ್ಕೃತಿ ಸಮಕಾಲೀನ ಐರೋಪ್ಯ ಸಂಸ್ಕೃತಿಗಿಂತ ಬಹಳ ಉನ್ನತಮಟ್ಟದಲ್ಲಿತ್ತು ಎಂದು ತಿಳಿಯುತ್ತದೆ. ಕೀವ್‌ನ ನಾಯಕರಲ್ಲಿ ಮಾನವೀಯ ಸ್ಪಂದನ ಇದ್ದುದು ಸುವ್ಯಕ್ತ. ಪಿಲ್‌ಗ್ರಿಮೇಜ್ ಆಫ್ ಡೇನಿಯಲ್ ದ ಆ್ಯಬಟ್ ಟು ದ ಹೋಲಿ ಲ್ಯಾಂಡ್ (೧೧೦೬-೦೮) ಎಂಬ ಗ್ರಂಥ ಸೊಗಸಾದ ಪ್ರವಾಸ ಕಥನ. ಲೇಖಕನ ಉತ್ಕಟ ದೇಶಭಕ್ತಿ, ಫ್ರೆಂಚ್ ಆಡಳಿತದ ಪ್ಯಾಲಸ್ತೀನಿನ ಜನಜೀವನಚಿತ್ರ ಓದುಗರ ಮನಸ್ಸಿನಲ್ಲಿ ಉಳಿಯುತ್ತವೆ. ಪೆಟಿಷನ್ ಆಫ್ ಡೇನಿಯಲ್ ದ ಪ್ರಿಜ್ನರ್ ಎಂಬ ಗ್ರಂಥ ೧೩ನೆಯ ಶತಮಾನದ್ದು. ಇದರಲ್ಲಿ ಬೈಬಲ್‌ನ ಉದ್ಧೃತ ವಾಕ್ಯಗಳು ಜನಪ್ರಿಯ ಗಾದೆಗಳು ತುಂಬಿವೆ. ಹೆಸಿಯಾಡ್ ಶೈಲಿಯಲ್ಲೇ ಬರೆದ ಕೃತಿ ಇದು. ಟೇಲ್ ಆಫ್ ದ ಆರ್ಮಮೆಂಟ್ ಆಫ್ ಇಗೋರ್ ಎಂಬೊಂದು ಮಹತ್ತ್ವದ ಕೃತಿ. ೧೨ನೆಯ ಶತಮಾನದ ಜೈತ್ರಯಾತ್ರೆಯ ಕಥನ. ಈ ಕಾಲದ ಲೌಕಿಕ ಗ್ರಂಥ ಇದೊಂದೇ. ಪ್ರಿನ್ ಇಗೋರ್ ಸ್ವೆತೊಸ್ಲಾವಿಚ್ ಎಂಬಾತ ಟಾರ್ಟರ್ ಜನಾಂಗದ ಮೇಲೆ ಮಾಡಿದ ಧಾಳಿ ಮತ್ತು ಸಮರ ವೃತ್ತಾಂತ ಇದರ ವಸ್ತು. ಯುದ್ಧದಲ್ಲಿ

ಸೋತು ಸೆರೆ ಸಿಕ್ಕಿದ ರಾಜಕುಮಾರ ಸಾಹಸಗಳನ್ನೆಸಗಿ ತಪ್ಪಿಸಿಕೊಂಡು ಬರುತ್ತಾನೆ. ಒಳ್ಳೆಯ ವೀರ್ಯವತ್ತಾದ ಬರೆಹ, ಗದ್ಯವಾದರೂ ಕಾವ್ಯದ ಸೊಗಡಿದೆ. ಕ್ರೈಸ್ತ ಮತ್ತು ಪೇಗನ್ ಸಂಸ್ಕೃತಿಗಳು ಚಿತ್ರಣ ಸೊಗಸಾಗಿದೆ. ಇದು ಏಕವ್ಯಕ್ತಿ ಕೃತವೋ ಹಲವಾರು ವ್ಯಕ್ತಿಗಳು ರಚಿಸಿದ್ದೊ ಎಂಬ ಜಿಜ್ಞಾಸೆಯೀ ಇದೆ. ಈ ಕೃತಿ ಮಧ್ಯ ಯುರೋಪಿನ ಶ್ರೇಷ್ಠ ಸಾಹಿತ್ಯಕೃತಿಗಳಲ್ಲೊಂದೆಂದು ಪರಿಗಣಿತವಾಗಿದೆ. ಆ ಕಾಲದಲ್ಲಿ ಇದನ್ನು ಮೀರಿಸುವ ಮತ್ತೊಂದು ಕೃತಿ ಸಿಕ್ಕುವುದಿಲ್ಲ. ಧಾರ್ಮಿಕ ಖಂಡನೆಗೆ ಸಿಲುಕಿಯೊ ಟಾರ್ಟಾರರ ದಾಳಿಗೆ ತುತ್ತಾಗಿಯೊ ಇದರ ಪ್ರತಿಗಳು ಕಣ್ಮರೆಯಾದವು. ೧೮ನೆಯ ಶತಮಾನದಲ್ಲಿ ಒಂದು ಪ್ರತಿ ದೊರೆಯಿತು. ೧೨ನೆಯ ಶತಮಾನದ ಇತರ ಕೃತಿಗಳಲ್ಲಿ ದೊರೆಯುವ ಆ ಕಾಲದ ಜೀವನ ಚಿತ್ರಕ್ಕೂ ಇದರಲ್ಲಿ ಬರುವ ಚಿತ್ರಕ್ಕೂ ತುಂಬ ವ್ಯತ್ಯಾಸವನ್ನು ಕಾಣುವ ವಿಮರ್ಶಕರು ಇದೊಂದು ಪ್ರಕ್ಷಿಪ್ತ ಕೃತಿ ಇರಬಹುದು ಎಂದೂ ಶಂಕಿಸಿದ್ದಾರೆ. ಆದರೆ ಈ ಶಂಕೆಗೆ ಕಾರಣವಿಲ್ಲ ಎಂಬ ವಾದವೂ ಇದೆ.

ಕೀವ್ ಸಾಹಿತ್ಯಪಥ ಸುಗಮವಾಗಿರಲಿಲ್ಲ. ೧೧೭೦ರಲ್ಲಿ ಸುಜ್ದಲ್‌ನ ಆಂದ್ರೇ ಬೊಗೊಲ್ಯುಬೆಸ್ಕಿ ಧಾಳಿಮಾಡಿ ಕೀವ್ ನಗರವನ್ನು ಹಾಳುಗೆಡಹಿದ. ಎಲ್ಲ ಪಂಡಿತರೂ ಸುಸಂಸ್ಕೃತರೂ ಉತ್ತರ ಪ್ರಾಂತಕ್ಕೆ ಪಲಾಯನ ಮಾಡಿದರು. ರಷ್ಯನ್ ಸಾಹಿತ್ಯಕ್ಕೆ ಆ ಕಾಲದಿಂದ ಮಾಸ್ಕೋ ಕೇಂದ್ರವಾಯಿತು. ಕೀವ್ ಮತ್ತು ಸುತ್ತಣ ಪ್ರದೇಶ ಪೋಲೆಂಡ್, ಲಿಥುವೇನಿಯಗಳ ವಶವಾಯಿತು. ಉತ್ತರ ದಕ್ಷಿಣ ಸಾಂಸ್ಕೃತಿಕ ಇತಿಹಾಸ ಸ್ಪಷ್ಟವಾಗಿ ಬೇರೆಯಾಯಿತು. ದಕ್ಷಿಣಪಥದ ಕತೆ ಉಕ್ರೇನಿನ ಇತಿಹಾಸದೊಳಗೆ ಸೇರಿತು.

೧೨೪೦ರಲ್ಲಿ ಮಂಗೋಲರ ಅನಂತರ ಟಾರ್ಟಾರರ ಆಕ್ರಮಣಗಳಾಗಿ ಕೀವ್ ಮತ್ತಷ್ಟು ಹಾನಿಗೊಳಗಾಯಿತು. ಮಾಸ್ಕೋ ಕೂಡ ಶತ್ರುಗಳ ವಶವಾಯಿತು. ಪರಕೀಯರ ದಾಳಿಯನ್ನು ಉಗ್ರವಾಗಿ ಎದುರಿಸುತ್ತಿದ್ದ ಸೇಂಟ್ ಅಲೆಕ್ಸಾಂಡರ್ ನೆವೆಸ್ಕಿ ಕಡೆಗೆ ಚೆಂಗೇಸ್‌ಖಾನನ ಸಾಮಂತನಾದ. ಮಾಸ್ಕೋ ಮೇಲೆ ಕೆಲವು ಕಾಲ ಪೌರ್ವಾತ್ಯರ ಪ್ರಭಾವ ಬಿದ್ದಿತು. ಆದರೆ ಕ್ರಮೇಣ ಪುಣ್ಯ ಕ್ಷೇತ್ರವಾದ ಕಾನ್‌ಸ್ಟಾಂಟಿನೊಪಲ್‌ನ ಸಂಪರ್ಕ ಕಡಿದು, ಬಲ್ಗೇರಿಯದ ಕ್ರೈಸ್ತ ಸಾದುಗಳು ರಕ್ಷಿಸಿಟ್ಟುಕೊಂಡಿದ್ದ ಹಳೆಯ ಕೃತಿಗಳ ಹಸ್ತಪ್ರತಿಗಳನ್ನು ಪುನಃ ಮಾಸ್ಕೋಗೆ ತಂದಮೇಲೆ ಪಶ್ಚಿಮ ಯುರೋಪಿನ ಪ್ರಭಾವದ ಮಾಸ್ಕೋ ಸಂಸ್ಕೃತಿ ಪರಿವರ್ತನೆಗೊಳ್ಳತೊಡಗಿತು. ೧೩೮೦ ರಲ್ಲಿ ಡಿಮಿಟ್ರಿಡಾನ್ ಸ್ಕಾಯ್ ಟಾರ್ಟಾರರನ್ನು ಕುಲಿಕೋವಾದಲ್ಲಿ ಸೋಲಿಸಿದ. ಅನಕ್ಷರಸ್ಥನರೂ ದೇಶೀಯ ಸಾಹಿತ್ಯಕ್ಕೆ ಪೋಷಣೆ ನೀಡಿದ. ಈ ಕಾಲದಲ್ಲಿ ಬಂದ ಕೃತಿಗಳಲ್ಲಿ ಹೆಚ್ಚಿನವು ಸಂತರ ಜೀವನಚರಿತ್ರೆಗಳು; ಜನಪದ ಕಥಾ ಸಂಗ್ರಹಗಳು ಕೆಲವು; ಇನ್ನು ಕೆಲವು ದೈವಶಾಸ್ತ್ರದ ಗ್ರಂಥಗಳು.

೧೬ನೆಯ ಶತಕದ ಮಾಸ್ಕೊ ಸಂಸ್ಕೃತಿಯ ಪ್ರತೀಕವಾಗಿದ್ದವನು ನಾಲ್ಕನೆಯ ಜಾರ್ ಇವ್ಯಾನ್ (೧೫೩೦–೮೪). ಪ್ರಿನ್ಸ್ ಆಂಡ್ರೆ ಮಿಹೈಯ್ಲೋವಿಚ್ ಕುರ್ಬಸ್ಕಿಗೆ ಈತ ಬರೆದ ಪತ್ರಗಳಲ್ಲಿ ಸಮಕಾಲೀನ ಇತಿಹಾಸ ದಾಖಲಾಗಿದೆ. ಬಿಜಾಂಟೀಯನ್ ಪರಂಪರೆಯ ಆಡಂಬರಯುಕ್ತ ಭಾಷಾಶೈಲಿ, ತಾನು ರಾಜವಂಶದವನೆಂಬ ಹೆಮ್ಮೆ, ಠೀವಿ, ಗತ್ತುಗಳು ಬಹು ಕುಶಲತೆಯಿಂದ ಕಲಾಪೂರ್ಣವಾಗಿ ಬರೆದಿರುವ ಈ ಪತ್ರಗಳಲ್ಲಿ ಕಾಣದೆ ಹೋಗುವುದಿಲ್ಲ. ಒಟ್ಟಿನಲ್ಲಿ ಇದು ಪರಿಣಾಮಕಾರಿಯಾದ ಬರೆವಣಿಗೆ. ಜಾರ್ ಇವ್ಯಾನ್ ಇದೇ ಕಾಲದಲ್ಲಿ ಮೊದಲ ಮುದ್ರಣಯಂತ್ರವನ್ನು ಸ್ಥಾಪಿಸಿದ.

ಪ್ರಿನ್ಸ್ ಕುರ್ಬಸ್ಕಿ ಬರೆದ ರಾಜ–ಆಸ್ಥಾನಿಕ ಪತ್ರ ವ್ಯವಹಾರ ಸಹ ಇಂಥದೇ ಇನ್ನೊಂದು ಪತ್ರ ಸಾಹಿತ್ಯವಾದರೂ ಜಾರ್ ಇವ್ಯಾನ್‌ನ ಕೃತಿಯ ಸಮಕ್ಕೆ ಇದು ಬರುವುದಿಲ್ಲ. ಇದರಲ್ಲಿ ಧರ್ಮ ಮತ್ತು ಪ್ರಭುತ್ವಗಳ ಪೋಷಣೆಗೆ ರಾಜನ ಕರ್ತವ್ಯ ಮತ್ತು ಅಧಿಕಾರಗಳೇನು, ಪ್ರಜೆಗಳ ಕರ್ತವ್ಯ ಮತ್ತು ಸೇವೆಗಳೇನು ಎಂಬುದರ ವಿವರಗಳಿವೆ. ಇದೇ ಲೇಖಕನ ಇನ್ನೊಂದು ಕೃತಿ 'ರಷ್ಯ ಇತಿಹಾಸ' ಇದರಲ್ಲಿ ಝಾರ್ ಇವ್ಯಾನ್‌ನ ನೀತಿ ಧೋರಣೆಗಳನ್ನು ಖಂಡಿಸಲಾಗಿದೆ.

ಸಿಲ್ವಿಸ್ಟರ್ ಎಂಬ ಪಾದ್ರಿಯ ದೂಮ್‌ಸ್ತ್ರಾಯ್ ಎಂಬ ಗ್ರಂಥ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪ್ರಸ್ತಾಪಿಸುತ್ತದೆ. ಮಹಾಪರಿವರ್ತನೆಗೆ ಮುಂದಿನ ರಷ್ಯದ ಶಿಷ್ಟಾಚಾರ ಇದರಲ್ಲಿ ಪ್ರತಿಬಿಂಬಿತವಾಗಿದೆ. ಸಾಹಿತ್ಯ ದೃಷ್ಟಿಯಿಂದ ಇದೊಂದು ಸಾಧಾರಣ ಕೃತಿ.

೧೭ನೆಯ ಶತಮಾನದಲ್ಲಿ ದೇಶಾದ್ಯಂತ ಪ್ರಕ್ಷುಬ್ದ ಸ್ಥಿತಿ ಇತ್ತು. ಹಳೆಯ ರಾಜಮನೆತನ ಹೋಗಿ ರಾಜ್ಯದ ಬಹುಭಾಗ ಪೋಲೆಂಡ್ ರಾಜನ ಅಧೀನವಾಯಿತು. ಕ್ರೆಮ್ಲಿನ್‌ವರೆಗೂ ಪೋಲಿಷ್ ಸೇನೆ ಆಕ್ರಮಿಸಿ ಆಳತೊಡಗಿತು. ಇದರ ಪರಿಣಾಮವಾಗಿ ರಷ್ಯಕ್ಕೆ ಪಾಶ್ಚಾತ್ಯ ಜಗತ್ತಿನ ಸಂಪರ್ಕ ಹೆಚ್ಚಾಯಿತು. ರೋಮನೊವ್ ರಜನು ಅಧಿಕಾರಕ್ಕೆ ಬರುವವರೆಗೂ ಈ ಅಭಾವ ಬಲವಾಗಿತ್ತು. ಈ ಕಾಲದ ಒಂದು ಗಮನಾರ್ಹ ಕೃತಿ ಅವ್ವಕುಮ್‌ನ (೧೬೨೦–೮೧) ಆತ್ಮಕಥೆ. ಜಾರ್ ಅಲೆಕ್ಸಿ ಆಗಿನ ದೊರೆ. ಅವ್ವಕುಮ್ ಸಂಪ್ರದಾಯವಾದಿ ಎಂಬುದು ಕೃತಿಯಲ್ಲಿ ಸುವ್ಯಕ್ತವಾಗಿದೆ. ಚರ್ಚ್ ವಿವಾದದಲ್ಲಿ ಈತ ಮಂದಗಾಮಿಗಳ ನಾಯಕ. ತನ್ನ ಬಾಳಿನ ಕಷ್ಟನಷ್ಟ ಹೋರಾಟಗಳನ್ನು ವಸ್ತುನಿಷ್ಠವಾಗಿ ಬರೆದುದು ಈ ಕೃತಿಯ ಒಂದು ವಿಶೇಷ ; ಆಡುಮಾತು ಬಳಸಿದುದು ಇನ್ನೊಂದು ವಿಶೇಷ.

ಯುರೋಪಿನ ಮಿರಾಕಲ್ ನಾಟಕ ಮಾದರಿಯ ನಾಟಕಗಳು ಪ್ರಥಮ ಪ್ರಯೋಗ ಅಲ್ಲಲ್ಲಿ ನಡೆಯಿತು. ಜನಪದಗೀತೆಗಳು ವಿಪುಲವಾಗಿದ್ದುವು. ಆದರೆ ಅವುಗಳ ಸಂಗ್ರಹ ಸಂಪಾದನೆಗಳ ಕೆಲಸ ಆಗಲು ಇನ್ನೊಂದು ಶತಮಾನವೇ ಬೇಕಾಯಿತು. ಬೈಲಿನಿ ಅಥವಾ ಸ್ಟಾರನಿ ಎಂಬ ಗೀತೆಗಳಿಗೆ ಫೇರ್‌ಸನ್ ವ್ಲಾದಿಮಿರ್

ಮತ್ತು ಅವನ ದರ್ಬಾರಿನ ಕಥೆಗಳೇ ವಸ್ತು. ಮ್ಯೂರೋ, ಮನ್ ಹಳೆಯ ಕೋಸ್ಯಾಕ್ ಇಲ್ಯಾನ್ ಕಥೆಗಳೂ ಸೇರಿದಂತೆ ಈಎಲ್ಲ ಕಥೆಗಳು ಕೀವ್ ಮೂಲದಿಂದ ಬಂದವುಗಳು. ಟಾರ್ಟಾರ್‌ರ ಧಾಳಿಗೆ ಮುಂಚಿನ ಜೀವನವನ್ನು ಇವು ಚಿತ್ರಿಸುತ್ತವೆ. ಮಾಸ್ಕೋ ನಗರದ ಪ್ರಸ್ತಾಪ ಸಹ ಇಲ್ಲಿಲ್ಲ. ಇವು ಹಳೆಯ ಕಥೆಗಳೋ ಇಲ್ಲವೇ ಹಳೆಯ ಮಾದರಿಯಲ್ಲಿ ರಚಿತವಾದ ಈಚಿನ ಬರಹೆಗಳೂ ಎಂಬುದು ವಿವಾದ ಗ್ರಸ್ತವಿಚಾರ. ಐತಿಹಾಸಿಕ ಲಾವಣಿ ಪದಗಳೊಂದಿಗೆ ಈ ಗೀತೆಗಳು ಬೆರೆತುಹೋಗಿವೆ. ಇವ್ಯಾನ್‌ದ ಟೆರಿಬಲ್‌ನ ಕಾಲದ ಘಟನೆಗಳ ನೆನಪೂ ಇಲ್ಲಿದೆ. ಇವ್ಯಾನ್‌ನನ್ನು ಮೆಚ್ಚಿ ಪೀಟರ್ ದ ಗ್ರೇಟ್‌ನನ್ನು ವಿರೋಧಿಸಿ ಬರೆದ ಗೀತೆಗಳೂ ಇವೆ. ದಂತಕಥೆಗಳು, ಮಂತ್ರ, ತಂತ್ರ ಇಂದ್ರಜಾಲ ಕಥೆಗಳು, ಕುರುಡ ಭಿಕ್ಷುಕರ ಧಾರ್ಮಿಕ ಗೀತೆಗಳು– ಹೀಗೆ ಹಲವಾರು ಬಗೆಯ ಬರಹೆಗಳನ್ನು ಇವುಗಳಲ್ಲಿ ಕಾಣಬಹುದು. ಹೊಸ ಸಾಹಿತ್ಯ ಉದಯವಾದ ಮೇಲೂ ಈ ಹಳೆಯ ಕಥೆಗಳ ಬಗ್ಗೆ ಕೃಷಿಕರಿಗೆ ಇದ್ದ ಅಕ್ಕರೆ ತಗ್ಗಲಿಲ್ಲ.

ಹೊಸಸಾಹಿತ್ಯ ಪೀಟರ್ ದ ಗ್ರೇಟ್‌ನ (೧೬೭೨–೧೭೨೫) ಪ್ರಯತ್ನದ ಫಲ. ಪಾಶ್ಚಾತ್ಯೀಕರಣ ಸುಧಾರಣೆ ಆತನ ಧೋರಣೆಗಳು. ಈ ಸುಧಾರಣೆಯ ಮಾಧ್ಯಮವಾಗಿ ಮಾತ್ರ ಸಾಹಿತ್ಯ ಆತನಿಗೆ ಮಾನ್ಯವಾಗಿತ್ತು. ಪಾಶ್ಚಾತ್ಯ ಮಾದರಿಯಲ್ಲಿ ಸೇನೆಗೆ ತರಬೇತಿ ಹಾಗೂ ಸೇನಾರಚನೆಗಳನ್ನು ಜಾರಿಗೆ ತಂದ. ಸೇಂಟ್ ಪೀಟರ್ಸ್‌ಬರ್ಗ್ ಪಶ್ಚಿಮ ಭಾಗದ ರಾಜಧಾನಿಯಾಗಿ ನಿರ್ಮಾಣಗೊಂಡಿತು. ಚರ್ಚಿನ ಅಧಿಕಾರವನ್ನು ಮೊಟಕುಮಾಡಿದುದು, ಆರ್ಥಿಕ ಸುಧಾರಣೆ, ಪಾಶ್ಚಾತ್ಯ ಮಾದರಿಯ ಉಡುಗೆ ತೊಡುಗೆಗಳನ್ನು ರೂಢಿಗೆ ತಂದುದು ಇವೆ ಮುಂತಾದವು ಪೀಟರ್ಸ್ ದೊರೆ ಕೈಗೊಂಡ ಕಾರ್ಯಗಳು. ಹೀಗಾಗಿ ಅನಂತರ ಬಂದ ಸಾಹಿತ್ಯವೆಲ್ಲ ಪಾಶ್ಚಿತ್ಯ ಮಾದರಿಯನ್ನೇ ಅನುಸರಿಸಿತು. ಚರ್ಚ್ ಸ್ಲಾವನಿಕ್ ಆಡಂಬರದ ಆಲಂಕಾರಿಕ ಭಾಷೆಯನ್ನೇನೊ ಸರಳಗೊಳಿಸಿದರು. ಪಶ್ಚಿಪದ ಕಡೆಯ ಗವಾಕ್ಷ ತೆರೆದಂತಾಗಿ ಪಾಶ್ಚಿಮಾತ್ಯ ಗಾಳಿ ಬೀಸಿತು.

೧೮ನೆಯ ಶತಮಾನದ ರಷ್ಯನ್ ಸಾಹಿತ್ಯ ಒಂದು ವಿಚಿತ್ರವಾದ ಘಟನೆ. ಕೆಲವು ಕಾಲ ೧೯ನೆಯ ಶತಕದ ವಿಮರ್ಶಕರು ಈ ಕಾಲದ ಬರೆಹಗಳನ್ನು ಸಪ್ಪೆ, ಫ್ರೆಂಚ್‌ನ ಹುಸಿ ಕ್ಲಾಸಿಸಿಸಮ್‌ನ ಅದ್ದೂರಿ ಅನುಕರಣೆ ಎಂದು ಮೂಗು ಮುರಿದರು. ರೂಪ ಕೃತಕವಾದರೂ ಒಳಗಿನ ಸತ್ತ್ವ–ಚೈತನ್ಯಪೂರ್ಣವೆಂದು ಮೆಚ್ಚುವ ಅಭಿಪ್ರಾಯಗಳೂ ಕ್ರಮೇಣ ಬೆಳೆದವು. ಸಾಹಿತಿಗಳಿಗೆ ಗೌರವ ಮನ್ನಣೆಗಳೂ ಒಳ್ಳೆಯ ಸಂಭಾವನೆಯೂ ದೊರೆತವು. ಗೌರ್ನರ್ ಹುದ್ದೆಗೂ ನೇಮಕವಾಗುವಷ್ಟು ಕವಿಗಳಿಗೆ ಮಾನ್ಯತೆ ಬಂದಿತು. ಆಳುವವರನ್ನು ಪ್ರಶಂಸಿಸುವ ಕಾವ್ಯ ಒಂದು ಕಡೆ, ಸಾಮಾಜಿಕ ಲೋಪದೋಷಗಳ ಬಗ್ಗೆ ವಿಡಂಬನ ಕಾವ್ಯ ಇನ್ನೊಂದು ಕಡೆ–ಇವೇ ಈ ಕಾಲದ ಸಾಹಿತ್ಯದ ಪ್ರಧಾನ ಲಕ್ಷಣ.

ಪ್ರಿನ್ಸ್ ಆಂತಿಯೋಕ್ ಕಾಂತೆಮಿರ್ (೧೭೦೮-೪೪) ಹೊಸ ಸಾಹಿತ್ಯದ ಮೊದಲಿಗ. ಫ್ರೆಂಚ್ ಮತ್ತು ಪೋಲಿಷ್ ಮಾದರಿಯ ಛಂದಸ್ಸನ್ನು ಬಳಸಿ ಕಾವ್ಯ ಬರೆದ. ವಾಸಿಲಿ ಕಿರಿಲೋವಿಜ್ ತ್ರಿಜ್ಯಕೋವ್‌ಸ್ಕಿ (೧೭೦೩-೬೯) ಈ ಛಂದಸ್ಸನ್ನು ಸೂಕ್ತವಾಗಿ ಸುಧಾರಿಸಿ ಉತ್ತಮಗೊಳಿಸಿ ಕಾವ್ಯರಚನೆ ಮಾಡಿದ. ಈತ ರಷ್ಯದ ಪ್ರಥಮ ಮಾನವತಾವಾದಿ ವಿಮರ್ಶಕ. ಆದರೂ ಅನೇಕರ ಟೀಕೆಗೆ ಗುರಿಯಾದ. ಮಿಹೈಲೋ ವಸಿಲ್ಯೇವಿಚ್ ಲಮಸೊಸೊಫ್ (೧೭೦೮/೧೫-೭೬೫) ಆಧುನಿಕ ರಷ್ಯನ್ ಸಾಹಿತ್ಯದ ಪಿತಾಮಹ ಎಂದು ಹೇಳಬಹುದು. ಈತ ಒಬ್ಬ ಅಸಾಧಾರಣ ಮೇಧಾವಿ. ವಿಜ್ಞಾನದ ಎಲ್ಲ ಭಾಗಗಳಲ್ಲೂ ಪ್ರಕಾಂಡ ಪಂಡಿತ. ಚಲಿಸುವ ವಿಶ್ವಕೋಶ ಎಂಬ ಖ್ಯಾತಿಯನ್ನು ಪಡೆದಿದ್ದ. ಜರ್ಮನಿಯಲ್ಲಿ ಭೌತಶಾಸ್ತ್ರದ ವಿಶೇಷ ಅಧ್ಯಯನ ಮಾಡಿದ್ದ. ವಿಜ್ಞಾನ ಅಕಾಡೆಮಿಯಲ್ಲಿ ರಸಾಯನಶಾಸ್ತ್ರದ ಉಪಪ್ರಾಧ್ಯಾಪಕನಾಗಿದ್ದ. ರಷ್ಯನ್ ವ್ಯಾಕರಣವನ್ನು ನಿಯಮಗೊಳಿಸಿದ. ಈತ ರಚಿಸಿದ ಓಡ್ ಆನ್ ದ ಕ್ಯಾಪ್ಚರ್ ಆಫ್ ಖೋಟಿನ್ (೧೭೩೯) ಒಂದು ವಿಶಿಷ್ಟ ಕಾವ್ಯಮಾದರಿಯಾಯಿತು. ಮೆಡಿಟೇಷನ್ಸ್ ಆನ್ ದ ಡಿವೈನ್ ಮೆಜೆಸ್ಟಿ ಮತ್ತು ಬೈಬಲ್‌ನ ಹಳೆಯ ಒಡಂಬಡಿಕೆಯ ಅನುವಾದ ಎರಡೂ ಶ್ರೇಷ್ಠಸಾಹಿತ್ಯ ಕೃತಿಗಳೆನಿಸಿದವು. ಈತನ ಚಿಂತನ ಬರೆಹಗಳಿಂದ ರಷ್ಯನ್ ಸಾಹಿತ್ಯಕ್ಕೆ ಹೊಸ ಚೇತನ ಬಂದಿತು. ಅಂದಿನಿಂದ ವೈಚಾರಿಕತೆಯ ಹೊಸ ಗಾಳಿ ಬೀಸತೊಡಗಿತು.

ಅಲೆಕ್ಸಾಂಡರ್ ಪೆತ್ರೊವಿಚ್ ಸುಮರೊಕೊವ್ (೧೭೧೭-೭೪) ಇನ್ನೊಬ್ಬ ಸಾಹಿತ್ಯಪಥ ನಿರ್ಮಾಪಕ. ಈತನ ನಾಟಕಗಳು ಬಹಳ ಯಶಸ್ವಿಯಾಗಿ ಪ್ರಖ್ಯಾತವಾದವು. ಆಳುವವರ ನೀತಿಗೆಟ್ಟ ನಡತೆ, ದುಶ್ಚಟ, ದೌರ್ಬಲ್ಯಗಳನ್ನು ವಿಡಂಬಿಸುವ ಕೃತಿಗಳಿಂದ ಈತ ಹೆಸರಾದ.

ಕ್ಯಾಥರಿನ್ ಮಹಾರಾಣಿಯ ಕಾಲದಲ್ಲಿ (೧೭೬೯-೯೬) ಸಾಹಿತ್ಯಕ್ಕೊಂದು ಹೊಸ ತಿರುವು ದೊರಕಿತು. ಪೀಟರ್ ದೊರೆ ಪಾಶ್ಚಾತ್ಯ ಮಾದರಿಯ ದೇಹವನ್ನು ಸಿದ್ಧಪಡಿಸಿದ; ಕ್ಯಾಥರಿನ್ ರಾಣಿ ಅದಕ್ಕೆ ಜೀವ, ಆತ್ಮಗಳನ್ನು ತುಂಬಿದಳು. ಈಕೆ ಜರ್ಮನಿಯ ರಾಜಕುವರಿ. ರಷ್ಯದ ಮಹಾರಾಣಿಯಾದ ಮೇಲೆ ಅಲ್ಲಿನ ಸಾಹಿತ್ಯ-ಸಂಸ್ಕೃತಿಗಳ ಏಳಿಗೆಗೆ ಗಮನವಿತ್ತಳು. ಫ್ರೆಂಚ್ ಲೇಖಕ ವಾಲ್ಟೇರ್ ಮತ್ತು ಇತರ ವಿದ್ವಾಂಸರುಗಳನ್ನು ಆದರಿಂದ ಆಹ್ವಾನಿಸಿ ಬಹುಮಾನ ಮನ್ನಣೆಗಳನ್ನು ನೀಡಿದಳು. ಪಾಶ್ಚಾತ್ಯ ಮಾದರಿಯ ಸಾಹಿತ್ಯದ ಉತ್ಕರ್ಷಕ್ಕೆ ಈಕೆ ಕಾರಣವಾದಳು.

ಡೆನಿಸ್ ಇವ್ಯಾನೊವಿಚ್ ಫಾನ್ ವಿಜಿನ್‌ನ (೧೭೪೪-೯೨) ದ ಬ್ರಿಗೇಡಿಯರ್. ಅನ್‌ಲಿಕ್ಡ್ ಕಬ್ ಎಂಬ ಹರ್ಷಕಗಳಲ್ಲಿ ಜನಜೀವನದ ನೋಟ ಸುಸ್ಪಷ್ಟವಾಗಿ ಮೂಡಿದೆ. ನಾಟಕದ ಭಾಷೆ ಸಮರ್ಥವಾಗಿದೆ. ಹಾಗೆಯೇ ಗಾವ್ರಿಲಾ ರಮೊನೊವಿಚ್ ದೆರ್ಷಾವಿನ್‌ನ (೧೭೪೩-೧೮೧೬) ಕವನಗಳು ಬದುಕಿಗೆ ಹತ್ತಿರವಾಗಿವೆ. ನಿಕಲಾಯ್ ಇವಾನೊವಿಚ್ ನೆವಿಕೋವ್ (೧೭೪೪-೧೮೧೬) ಎಂಬ ವಿಡಂಬನ

ಕಾರ ಪತ್ರಿಕೆಯೊಂದರ ಸಂಪಾದಕನಾಗಿದ್ದ. ವಾಲ್ಟೇರನ ಸಂದೇಹ ವಾದವನ್ನು ಹಾಸ್ಯ ಮಾಡಿ ರಾಣಿಯ ಆಗ್ರಹಕ್ಕೆ ಗುರಿಯಾದ. ಈ ಕಾಲದ ಇನ್ನೊಂದು ಗಮನಾರ್ಹವಾದ ಕೃತಿ ಅಲೆಕ್ಸಾಂಡರ್ ನಿಕೊಲಾಯ್‌ವಿಚ್ ರಾದಿಷೇವ್‌ನ (೧೭೪೮–೧೮೦೨) ಜರ್ನಿಫ್ರಮ್ ಪೀಟರ್ಸ್‌ಬರ್ಗ್ ಟು ಮಾಸ್ಕೊ ಎಂಬ ಗ್ರಂಥ. ಇದರಲ್ಲಿ ಜೀತದಾಳುಗಳದು ಸ್ಥಿತಿಯ ನೈಜ ಚಿತ್ರಣ ಮತ್ತು ಈ ಪದ್ಧತಿಯನ್ನು ಉಗ್ರವಾಗಿ ಖಂಡಿಸುವ ವಿಚಾರಧಾರೆಗಳನ್ನು ಕಾಣಬಹುದು.

೧೮ನೆಯ ಶತಮಾನದ ತಿರುವಿನಲ್ಲಿ ಜನತೆಯ ಅಭಿರುಚಿಗಳಲ್ಲಿ ಸಾಕಷ್ಟು ಬದಲಾವಣೆಗಳು ಆದುವು. ಆಧುನಿಕ ರಷ್ಯನ್ ಸಾಹಿತ್ಯ ರೂಪುಗೊಳ್ಳಲು ಆರಂಭವಾಯಿತು. ಇಂಗ್ಲಿಷ್ ಭಾವುಕ ಕಾದಂಬರಿಗಳ ಅನುಕರಣ ಕಾಣಿಸತೊಡಗಿತು. ಫ್ರೆಂಚ್ ಕ್ರಾಂತಿಯನ್ನು ಪ್ರತ್ಯಕ್ಷ ಕಂಡು ಭ್ರಮನಿರಸನಗೊಂಡನಿಕಲಾಯ್ ಮಿಹೈಲೊವಿಚ್ ಕರಮ್‌ಜಿನ್‌ನ (೧೭೬೬–೧೮೨೬) ಮುಕ್ತಬರೆಹಗಳು. ಲೆಟರ್ಸ್ ಆಫ್ ಎ ರಷ್ಯನ್ ಟ್ರಾವೆಲರ್, ಪೂರ್‌ಲಿಜಾ ಎಂಬ ಕಾದಂಬರಿ ಬಹಳ ಜನಪ್ರಿಯವಾದವು. ಅನಂತರ ಈತ ಐತಿಹಾಸಿಕ ವಸ್ತುಗಳ ಕಡೆ ಗಮನಹರಿಸಿದ. ಮಾರ್ಫಾದ ಮೇಯರ್ಸ್ ವೈಫ್‌ನಲ್ಲಿ 'ಅನಾಗರಿಕರು ಅಂಕೆಯಿಲ್ಲದ ಸ್ವಾತಂತ್ರವನ್ನು ಪ್ರೀತಿಸುತ್ತಾರೆ. ನಾಗರಿಕರು ಸುವ್ಯವಸ್ಥೆಯನ್ನು ಪ್ರೀತಿಸುತ್ತಾರೆ. ಅಂತಹ ಸುವ್ಯವಸ್ಥೆ ನಿರಂಕುಶಾಡಳಿತದಲ್ಲಿ ಮಾತ್ರ ಸಾಧ್ಯ' ಎಂಬ ಮಹಾವಾಕ್ಯ ಬರುತ್ತದೆ. ಈತ ರಷ್ಯದ ಇತಿಹಾಸವನ್ನು ೮ ಸಂಪುಟಗಳಲ್ಲಿ ಬರೆದ. ಈತನ ಗದ್ಯ ಸೊಗಸಾದುದು. ಅನಂತರದ ಪೀಳಿಗೆಯವರಿಗೆ ಇದು ಮಾದರಿಯಾಯಿತು. ಇವಾನ್ ಆಂದ್ರಯೇವಿಚ್ ಕ್ರಿಲೋಫ್ (೧೭೬೩–೧೮೪೪) ಶ್ರೇಷ್ಠ ಫೇಬಲ್ಸ್ ಲೇಖಕ. ಈತ ಸುಮಾರು ೨೦೦ ಫೇಬಲ್ಸ್ ಬರೆದಿದ್ದಾನೆ. ಇವಕ್ಕೆ ನಿರೀಕ್ಷೆಗೂ ಮೀರಿ ಕೀರ್ತಿ ಬಂದಿತು. ಸಮಾಜದ ಎಲ್ಲ ವರ್ಗದವರಿಗೂ ಈ ಕಥೆಗಳು ಹಿಡಿಸಿದವು. ಮನಸೆಳೆಯುವ ಕಥನಶೈಲಿ. ನವುರಾದ ಹಾಸ್ಯ ಈತನ ಜನಪ್ರಿಯತೆಗೆ ಕಾರಣ. ರಷ್ಯದ ವಿಶಿಷ್ಟ ಸಂಸ್ಕೃತಿಯ ಪ್ರತೀಕವಾಗಿದ್ದ ಈತನ ಪ್ರಖ್ಯಾತಿ ನಿಷ್ಠುರ ವಿಮರ್ಶಾ ಪ್ರಹಾರಗಳನ್ನು ಲೆಕ್ಕಿಸದೆ ಇಂದಿಗೂ ಮಂಕಾಗದೆ ಉಳಿದಿದೆ.

೧೯ನೆಯ ಶತಕದ ಆದಿಯಲ್ಲಿ ವ್ಯಾಸಿಲಿ ಆಂದ್ರೆವಿಚ್ ಜುಕೊವ್‌ಸ್ಕಿಯ (೧೭೮೨–೧೮೫೨) ಬರೆಹಗಳ ಮೂಲಕ ರಮ್ಯ ಸಾಹಿತ್ಯದ ಗಾಳಿ ಬೀಸಿತು. 'ಈತ ಕ್ಯಾಥರಿನ್ ಮಹಾರಾಣಿಯ ಸಾಹಿತ್ಯ ಸಲಹೆಗಾರನಾಗಿದ್ದ. ಒಂದನೆಯ ಜಾರ್ ನಿಕೊಲಸ್‌ನ ಮಕ್ಕಳಿಗೆ ಗುರುವಾಗಿದ್ದ. ಬೈರನ್, ಸ್ಕಾಟ್, ಗಯಟೆ, ಷಿಲ್ಲರ್ ಮುಂತಾದವರ ಕೃತಿಗಳ ಪ್ರಭಾವ ಇವನ ಮೂಲಕ ರಷ್ಯನ್ ಸಾಹಿತ್ಯದ ಮೇಲೆ ಬಿದ್ದಿತು. ಈ ಕಾಲ ರಷ್ಯನ್ ಸಾಹಿತ್ಯದ ಸುವರ್ಣಕಾಲ. ಆಗಿನ ಎಲ್ಲ ಕವಿಗಳಿಗೂ ಈತನೆ ಸ್ಫೂರ್ತಿಯಾಗಿದ್ದ; ಮಾರ್ಗದರ್ಶನ ನೀಡಿದ; ಎಲ್ಲರ ಮೆಚ್ಚುಗೆಗೂ ಪಾತ್ರನಾದ.

ಕೆಲವು ಶ್ರೇಷ್ಠ ಇಂಗ್ಲಿಷ್, ಗ್ರೀಕ್, ಪರ್ಷಿಯನ್ ಮತ್ತು ಭಾರತೀಯ ಸಾಹಿತ್ಯ ಕೃತಿಗಳನ್ನು ರಷ್ಯನ್‌ಗೆ ಸೊಗಸಾಗಿ ಭಾಷಾಂತರಿಸಿದ. ಈ ಅನುವಾದಗಳು ಶ್ರೇಷ್ಠ ಅನುವಾದಗಳಾಗಿವೆ.

೧೯ನೆಯ ಶತಕದ ಎಲ್ಲ ಯಶಸ್ವಿ ಬರೆಹಗಾರರೂ ಶ್ರೀಮಂತ ಮನೆತನಗಳ, ಉದಾರವಿಚಾರ ದೃಷ್ಟಿಯ ವ್ಯಕ್ತಿಗಳು, ಸಾಹಿತ್ಯ ಇವರ ಹವ್ಯಾಸ, ಕುಲ, ಅಂತಸ್ತುಗಳಿಲ್ಲದ ವೃತ್ತಿಸಾಹಿತಿಗಳನ್ನು ತಿರಸ್ಕಾರವಾಗಿ ಕಾಣುತ್ತಿದ್ದ ಕಾಲವದು. ಅಲೆಗ್ಸಾಂಡರ್ ಸಿರ್ಗೆಯೆವಿಚ್ ಗ್ರಿಬಯೆದೊಫ್ (೧೭೯೫-೧೮೨೯) ಒಬ್ಬ ಕುಲೀನ ಸಾಹಿತಿ. ಬಹುಕಾಲ ಪ್ರಾಚ್ಯ ರಾಷ್ಟ್ರಗಳಲ್ಲಿದ್ದ. ಈತ ಟೆಹ್ರಾನ್‌ನಲ್ಲಿ ರಷ್ಯದ ರಾಯಭಾರಿಯಾಗಿದ್ದಾಗ ಪಾರ್ಸಿ ಗುಂಪುಘರ್ಷಣೆ ಯೊಂದರಲ್ಲಿ ಸಿಕ್ಕು ಹತನಾದ. ಈತನ ಗೋರೆ ಆತ್ ಊಮ ಎಂಬ ವೈನೋದಿಕ ರಂಗದಮೇಲೆ ಇಂದಿಗೂ ಮನಸೆಳೆಯುವ ಸೊಗಸಾದ ನಾಟಕ. ಮೇಲುವರ್ಗದವರ ಪೊಳ್ಳುತನವನ್ನು ಇದು ವಿಡಂಬಿಸುತ್ತದೆ. ಚತುರ ಸಂಭಾಷಣೆಗೆ ಹೆಸರಾದುದು. ಝಾರ್ ದೊರೆ ಇದರ ಪ್ರದರ್ಶನವನ್ನು ನಿಷೇಧಿಸಿದ್ದ.

ಝಾರ್ ಅಲೆಕ್ಸಾಂಡರ್ ಕುಲೀಣರಾದವರಿಗೆ ಮತ್ತು ಸರ್ಕಾರದ ಉನ್ನತಾಧಿಕಾರಿಗಳ ಮಕ್ಕಳಿಗೆಂದೇ ಸ್ಥಾಪಿಸಿದ ಲೈಸಿ ಅತ್ ಸಾರ್‌ಸ್ಕೊಯೆ ಸೇಲೊ ಎಂಬ ತರಬೇತಿ ಶಾಲೆ ಸಾಹಿತ್ಯಾಧ್ಯಯನದ ಅಧ್ಯಾಪಕನಾಗಿದ್ದ. ರಷ್ಯದ ಶ್ರೇಷ್ಠ ಕವಿಯೆನಿಸಿದ ಅಲಗ್ಸಾಂಡರ್ ಸಿರ್ಗೆಯೆವಿಚ್ ಪುಷ್ಕಿನ್ (೧೭೯೯-೧೮೩೭) ಈ ಶಾಲೆಯ ವಿದ್ಯಾರ್ಥಿ. ಅನಾಕ್ರಿಯಾಂಟಿಕ್ ಶೈಲಿಯ ಕವನ ರಚನೆಯಲ್ಲಿ ಪುಷ್ಕಿನ್ ಪ್ರಸಿದ್ಧಿ ಪಡೆದ. ರಾಜನ ಆತಳಿತವನ್ನು ಕುರಿತು ಚುರುಕಿನ, ಖಾರದ ಚುಟುಕಗಳನ್ನು ಬರೆದು ರಾಜಾಗ್ರಹಕ್ಕೆ ಗುರಿಯಾಗಿ ಕಪ್ಪುಸಮುದ್ರದ ಪ್ರದೇಶಕ್ಕೆ ಗಡಿಪಾರಾದ. ಡಿಸೆಂಬರ್ ಪಂಥದವರ ಒಳಸಂಚಿನಲ್ಲಿ ಈತನೂ ಬಹುಮಟ್ಟಿಗೆ ಸೇರಿ ಕೊಂಡಿದ್ದ. ಒಂದನೆಯ ನಿಕಲಸ್ ಕ್ಷಮಾದಾನಮಾಡಿ ರಾಜಧಾನಿಯಲ್ಲಿ ಬಂಗಾರದ ಸಂಕೋಲೆಗಳಲ್ಲಿ ಇವನನ್ನು ಬಂಧಿಸಿಟ್ಟಿದ್ದ ಈತನ ಕೃತಿಗಳಲ್ಲಿ ರುಸ್ಲಾನ್ ಅಂಡ್ ಲ್ಯೂದ್‌ಮಿಲಾ 'ಪ್ರೇಮ ಮತ್ತು ಮಾಂತ್ರಿಕ ಶಕ್ತಿಯ ಕಥಾ ವಸ್ತುಗುಳ್ಳ ರಮ್ಯ ಸಂಪ್ರದಾಯದ ಕವನ ಪ್ರಿಜ್ನರ್ ಆಫ್ ದ ಕಾಕಸಸ್ ದ ಫೌಂಟನ್ ಆಫ್ ಬಾಹ್ ಪಿಸರಾಯ್‌ಗಳಲ್ಲದೆ ಜಿಪ್ಸೀಸ್ ನಂತಹ ಬೈರನ್ ಕವನ ಮಾದರಿಯ ಪದ್ಯಗಳು ಪೀಟರ್ ದೊರೆಯನ್ನು ಮಹಾಪುರಷನನ್ನಾಗಿ ಚಿತ್ರಿಸಿರುವ ಮೊಲ್ಟಾವಾ ಎಂಬ ಕೃತಿ ಹಳೆಯ ರಷ್ಯ ಸಮಾಜವನ್ನು ಆದರ್ಶೀ ಕರಿಸುವ ಬೊರಿಸ್ ಗೊಡುನೋವ್ ಎಂಬ ಷೇಕ್‌ಸ್ಪಿಯರ್ ನಾಟಕ ಮಾದರಿಯ ಎರಡು ನಾಟಕಗಳು ಈತನ ಕೃತಿಗಳು ಪುಷ್ಕಿನ್ ರಷ್ಯದಲ್ಲಿ ಸೊಗಸಾದ ಕಾವ್ಯ ಮಾದರಿಯನ್ನು ರೂಪಿಸಿದ. ಹಿತವಾದ ಸಂಗೀತ ಕೇಳಿದಂತೆ, ನಾದಸೌಖ್ಯವನ್ನು ಕೊಡುವ ಶಬ್ದ ಪ್ರಯೋಗ. ಕಾವ್ಯಗುಣ ಗೇಯಗುಣ ಮೇಳವಿಸಿದ ಬರೆವಣಿಗೆ ಈತನ ಕೃತಿಗಳ ವೈಶಿಷ್ಟ್ಯ. ಮೊದಲ್ಲಿ

ಕಿರಿಯ ಪ್ರಾಯದಲ್ಲಿ ಬರೆದ ಕಾವ್ಯದಲ್ಲಿದ್ದ ಕೋಮಲತೆ. ಭವನಾತ್ಮಕತೆಗಳನ್ನು ಮನಸಾ ಕೈಬಿಟ್ಟಿರುವುದು ದ ಕಾಸರ್ ಹಾರ್ಸ್‌ಮನ್‌ನಲ್ಲಿ ಮತ್ತು ಕೊನೆಗಾಲದ ಬರೆಹಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಎವ್‌ಮನ್‌ದಲ್ಲಿ ಮತ್ತು ಕೊನೆಗಾಲದ ಬರೆಹಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಎವ್‌ಗೆನಿ ಒನೆಗಿನ್ ಈತನ ಅತ್ಯಂತ ಶ್ರೇಷ್ಠ ಕೃತಿ. ಡಾನ್‌ಜೂಆನ್ ಮಾದರಿಯಲ್ಲಿ ಆರಂಭವಾದರೂ ಬೇರೆ ರೀತಿಯಲ್ಲಿ ಬೆಳೆದು ರಷ್ಯ ಸಮಾಜದ ಉಜ್ವಲ ಚಿತ್ರಣವನ್ನು ಮುಂದಿಡುತ್ತದೆ. ತತ್ಯಾನ ಲ್ಯಾರಿನಳ ಪಾತ್ರ, ಕಥಾನಾಯಕ ಪೀಟರ್ಸ್‌ಬರ್ಗ್‌ನ ಎವ್‌ಗೆನಿಯನ್ನು ಪಾತ್ರಗಳನ್ನು ಚಿತ್ರಿಸುವುದನ್ನು ನೋಡಿದರೆ ಒಬ್ಬ ವ್ಯಕ್ತಿಯ, ಇಲ್ಲವೆ ಒಂದು ವರ್ಗದ ಇಲ್ಲವೆ ಒಂದು ಕಾಲದ ಜೀವಾಳವೆಂಬಂತಹ ಮುಖ್ಯ ಲಕ್ಷಣಗಳನ್ನು ಪುಷ್ಕಿನ್ ಅತ್ಯಂತ ಕಲಾತ್ಮಕವಾಗಿ ಕೆಲವೇ ನುಡಿ ಗಟ್ಟುಗಳಲ್ಲಿ ಮೂರ್ತಗೊಳಿಸಬಲ್ಲ ನೆಂಬುದು ವ್ಯಕ್ತವಾಗುತ್ತದೆ. ಈ ಬಗೆಯ ಕಲಾತ್ಮಕತೆಯಲ್ಲಿ, ಅಡಕವಾಗಿ ಹೇಳುವುದರಲ್ಲಿ ಈತನನ್ನು ಸರಿಗಟ್ಟುವ ಸಾಹಿತಿ ರಷ್ಯನ್ ಸಾಹಿತ್ಯದಲ್ಲೇ ಮತ್ತೊಬ್ಬನಿಲ್ಲ. ತನ್ನ ಜೀವಿತದ ಕೊನೆಗಾಲದಲ್ಲಿ ಈತ ಗದ್ಯ ಬರೆಹಕ್ಕೆ ಕೈಹಾಕಿದ. ದ ಕ್ಯಾಪ್ಟನ್ಸ್ ಡಾಟರ್ ಎಂಬ ಕಾದಂಬರಿ ೧೮ ನೆಯ ಶತಕದಲ್ಲಿ ನಡೆದ ಬಂಡಾಯದ ಕಥೆ. ವಾಲ್ಟರ್ ಸ್ಕಾಟ್‌ನ ಶೈಲಿಯದು. ಹಾಗೆಯೇ ಟೇಲ್ಸ್ ಆಫ್ ಬ್ಯೇಲಕಿನ್, ದ ಕ್ವೀನ್ ಆಫ್ ಸ್ಪೇಡ್ಸ್ – ಈ ಬಗೆಯ ಕಥೆಗಳು ಮತ್ತು ಉಳಿದ ಎಲ್ಲ ಕೃತಿಗಳಲ್ಲಿಯೂ ಗದ್ಯದ ಹೊಸ ಮಾದರಿಯನ್ನು ಮುಂದಿಟ್ಟ. ರಷ್ಯನ್ ಕಾವ್ಯದ ಸುವರ್ಣಯುಗದ ಪ್ರತೀಕ ಪುಷ್ಕಿನ್. ಇವನೊಂದಿಗೆ ಬೇರನ್ ಆ್ಯಂಟನ್ ಆ್ಯಂಟನೊವಿಚ್ ಡೆಲ್ವಿಗ್ (೧೭೯೮–೧೮೩೧). ಇವ್‌ಗೆನಿ ಅಬ್ರಮೊವಿಚ್ ಬರತಿನ್‌ಸ್ಕಿ (೧೮೦೦–೪೪), ನಿಕಲಯ್ ಮಿಹೈಲೋವಿಚ್ ಯಾಜಿಕೋಫ್ (೧೮೦೩–೪೬) ಇವರನ್ನೂ ಸೇರಿಸಬಹುದು. ಇವರೆಲ್ಲ ಶ್ರೇಷ್ಠ ಕುಲಸಂಜಾತರು. ವೃತ್ತಿಸಾಹಿತಿಗಳೊಂದಿಗೆ ಸೇರುವುದು ಮರ್ಯಾದೆಗೆ ಕಡಿಮೆ ಎಂದು ತಿಳಿದರು. ಶ್ರೀಮಂತ ಕುಲೀನ ಕವಿಗಳ ಪರಂಪರೆ ಅಲ್ಪಕಾಲದ್ದಾಗಿ ನೆಪೋಲಿಯನ್ ದಾಳಿಯನ್ನೆದುರಿಸಿ ಯುದ್ಧಮಾಡಿದ ಸೈನಾಧಿಕಾರಿಗಳು ಫ್ರೆಂಚ್ ಸೇನೆಯನ್ನೋಡಿಸಿ ಸ್ವದೇಶಕ್ಕೆ ಹಿಂತಿರುಗಿದ್ದರು. ಅನಂತರ ಒಂದನೆಯ ಅಲೆಕ್ಸಾಂಡರ್ ದೊರೆ ಸತ್ತು ಸಿಂಹಾಸನವೇರುವ ಉತ್ತರಾಧಿಕಾರಿ ಬರಲು ತಡವಾದಾಗ ರಾಜತ್ವದ ವಿರುದ್ಧ ದಂಗೆಯೆದ್ದು ವಿಫಲಗೊಂಡಾಗ ಹೊಸ ಪೀಳಿಗೆಯ ಸಾಹಿತ್ಯ ಉದಯವಾಯಿತು. ಈ ಮಧ್ಯಂತರ ಕಾಲದ ಗಣ್ಯ ಸಾಹಿತಿಗಳಲ್ಲಿ ಕಾಂದ್ರತಿ ಫೆದರೊ ವಿಚ್ ರಿಲೆಯೆವ್ (೧೭೮೫ – ೧೮೨೬) ಮುಖ್ಯನಾದವನು. ತನ್ನ ೪೧ ನೆಯ ವಯಸ್ಸಿನಲ್ಲಿ ಐತಿಹಾಸಿಕ ವಸ್ತುಗಳ ಮೇಲೆ ಅನೇಕ ಕವನಗಳನ್ನು ರಚಿಸಿದ. ಮಿಹೈಲ್ ಯೂರಿವಿಚ್ ಲೆರ್ಮಂತೊವ್ (೧೮೧೪ – ೪೧) ಅಲ್ಪಾಯುವಾದರೂ ಪ್ರಚಂಡ ಮಾರುತನೆನಿಸಿದ ಕವಿ. ರಷ್ಯದ ಬೈರನ್ ಎಂದು ಹೆಸರಾದ ಶಕ್ತಿಯುತ ಕವಿ. ಕೊನೆಯ ೪ ವರ್ಷಗಳ ಅವಧಿಯಲ್ಲಿ ಬಹುಶೀಘ್ರವಾಗಿ

ಬೆಳೆದು ಪಕ್ವವಾದ ಕವಿ. ಬೆಡಗು ಪ್ರದರ್ಶನಗಳನ್ನು ತುಚ್ಛೀಕರಿಸಿ ಅಂತಃಕರಣ ಸಹಜತೆಯನ್ನು ತನ್ನ ಎಲ್ಲ ಕವನಗಳಲ್ಲೂ ವೈವಿಧ್ಯಮಯವಾಗಿ ಅಭಿವ್ಯಕ್ತಿಸಿದ್ದಾನೆ. ಡೀಮನ್ (ಶಾಪಗ್ರಸ್ತ ದೇವತೆ ಮರ್ತ್ಯಕನ್ಯೆಯೊಬ್ಬಳಲ್ಲಿ ಅನುರಕ್ತನಾದ ಪ್ರೇಮಕಥೆ) ಎಂಬ ಕವನದಲ್ಲಿ ಅದ್ವಿತೀಯವಾದ ಕಾವ್ಯ. ಪ್ರತಿಮೆಗಳನ್ನು ಕಾಣಬಹುದು. ೧೮೪೦ ರ ಅನಂತರದ ರಷ್ಯದ ಜಮೀನ್ದಾರಿ ಮನೆತನಗಳ ಬದುಕಿನ ಅವಲೋಕನವನ್ನು ಮಾಡಿರುವ ಮತ್ಸಿರಿ ಎಂಬ ಕಾವ್ಯವೂ ಇಂತಹ ಒಂದು ಶ್ರೇಷ್ಠ ಕೃತಿ.

ಸಾಹಿತ್ಯದಲ್ಲಿ ಪದ್ಯಕ್ಕೆ ಬದಲು ಗದ್ಯ ಪ್ರಧಾನವಾದಾಗ ದ ಹೀರೊ ಆಫ್ ಅವರ್ ಟೈಮ್ಸ್ ಎಂಬತಹ ಕಥಾಸರಣಿ ಮೊದಲು ಕಾಣಿಸಿತು. ಮನೋವೈಜ್ಞಾನಿಕ ಕಾದಂಬರಿಯ ಉಗಮವನ್ನು ಈ ಕಥೆಗಳಲ್ಲಿ ಕಾಣುತ್ತೇವೆ. ಈ ಕಥೆಗಳಲ್ಲಿ ತೇಮನ್ ಎಂಬುದು ಶ್ರೇಷ್ಠವಾದ ಸಣ್ಣಕಥೆ ಎಂದು ಚೆಕಾಫ್ ಗುರುತಿಸಿದ್ದಾನೆ. ಈ ಕಾಲದ ಮಹಾಪ್ರತಿ ಭಾವಚಿತ, ಶ್ರೇಷ್ಠತೆಯಲ್ಲಿ ಪುಷ್ಕಿನ್‌ಗೆ ಸಮ ಎಂದೆನಿಸಿದ್ದ ಲೆರ್ಮಂತೊವ್‌ನ ಅಕಾಲಿಕ ಮರಣದಿಂದ ರಷ್ಯನ್ ಸಾಹಿತ್ಯಕ್ಕಾದ ನಷ್ಟ ಅಪಾರವಾದುದು.

ಪ್ಯೋದರ್ ಇವ್ಯಾನೊವಿಚ್ ತ್ಯೂಚೆಫ್‌ನ (೧೮೦೩ – ೭೩) ತಾತ್ವಿಕ ಚಿಂತನೆಯ, ಗೇಯ ಮಾಧುರ್ಯದ ಕವನಗಳು ಒಂದು ಬಗೆಯಾದರೆ ಅಲಿಕ್ಸೆಯಿ ವಾಸಿಲ್ಯೇವಿಚ್ ಕಲ್ತ್‌ಸೊವ್‌ನ (೧೮೦೮ – ೪೨) ಬೇರೆಯೇ ಸ್ತರದ ರೈತಾಪಿ ಕವನಗಳು ಶಿಷ್ಟ ಸಾಹಿತ್ಯದಿಂದ ದೂರವಾದ ನೈಜ ಜನಪದ ಸೊಗಡಿನ ಗೀತೆಗಳು ಇನ್ನೊಂದು ಬಗೆ. ತ್ಯೂಚೆಫ್ ಈ ಕಾಲದ ಶ್ರೇಷ್ಠ ಕವಿಗಳಲ್ಲೊಬ್ಬ. ಮೆಟಫಿಜಿಕಲ್ ಗುಂಪಿಗೆ ಸೇರಿದವನು. ಈ ಇಬ್ಬರು ಕವಿಗಳೊಂದಿಗೆ ರಷ್ಯನ್ ಕಾವ್ಯದ ಸುವರ್ಣಯುಗ ಮುಗಿಯಿತು. ಅನಂತರ ಗದ್ಯಯುಗ – ಅಂದರೆ ಕಾದಂಬರಿಯುಗ ಆರಂಭವಾಯಿತು. ೧೯ ನೆಯ ಶತಕದ ಮೊದಲಲ್ಲಿ ಬಂದ ಕಾದಂಬರಿಗಳು ಎಲ್ಲೊ ಕೆಲವು. ಪುಷ್ಕಿನ್‌ನ ದ ಕ್ಯಾಪ್ಟನ್ಸ್ ಡಾಟರ್ (೧೮೩೬), ಲೆರ್ಮಂತೊವ್‌ನ ದಿ ಹೀರೊ ಆಫ್ ಅವರ್ ಟೈಮ್ಸ್ (೧೮೪೬) ಕೃತಿಗಳಲ್ಲಿ ವಾಸ್ತವಿಕತೆ, ಮಾನವ ಮನಸ್ಸಿನ ಅಧ್ಯಯನ ಕಾಣುತ್ತದೆ. ರಮ್ಯ – ವಾಸ್ತವತೆಗಳು ಮಿಶ್ರಿತವಾದ ಕತೆಗಳನ್ನು ಹೆಣೆದ ನಿಕೊಲಯ್ ವಾಸಿಲ್ಯೇವಿಚ್ ಗೋಗೋಲ್ (೧೮೦೯ – ೫೨) ಸಮಕಾಲೀನ ಸಾಹಿತಿಗಳಾದ ಬೇರೆಯಾಗಿ ನಿಲ್ಲುವ ವಿಶಿಷ್ಟ ಬಗೆಯ ಶ್ರೇಷ್ಠ ಗದ್ಯ ಸಾಹಿತಿ. ತುಂಬ ನಾಜೂಕಾದ ಆರೋಗ್ಯ, ಸಂಕೋಚ ಸ್ವಭಾವವುಳ್ಳ ಈ ಯುವಕ ದೊಡ್ಡ ಕವಿಯಾಗುವ ನಸು ಕಟ್ಟಿಕೊಂಡು ಸೇಂಟ್ ಪೀಟರ್ಸ್‌ಬರ್ಗ್‌ಗೆ ಹೋದ. ಜೊತೆಗೆ ಇತಿಹಾಸ ಪ್ರೊಫೆಸರ್ ಆಗುವ ಆಸೆಯು ಇತ್ತು. ಕಾವ್ಯ ರಚನೆಯಲ್ಲಿ ವಿಫಲನಾದ. ಈವ್ನಿಂಗ್ಸ್ ಆನ್ ಎ ಫಾರಮ್ ನಿಯರ್ ಡಿಕಾಂಕ ಎಂಬ ಕೃತಿಯಿಂದ ಪ್ರಸಿದ್ಧನಾದ. ಇದು ಸಣ್ಣ ರಷ್ಯ ಎಂದೆನಿಸುವ ಉಕ್ರೇನಿನ ಬದುಕಿನ ಹಲವು ಹನ್ನೊಂದು ಅನುಭವಗಳನ್ನು ನಿರೂಪಿಸುವ ಸಣ್ಣ ಕಥೆಗಳ ಸಂಕಲನ. ಮಾಟ ಮದ್ದು, ಭೂತ, ಪಿಶಾಚಿಗಳ ಘಟನೆಗಳು ಹೇರಳವಾಗಿವೆ. ಈತನ ಇನ್ನೊಂದು ಹೆಸರಾಂತ ಕೃತಿ ಮಿರ್‌ಗೋರದ್.

ಓವರ್‌ಕೋಟ್ ಎಂಬ ಸಣ್ಣ ಕಥೆ ಕೂಡ ಅಷ್ಟೇ ಪ್ರಸಿದ್ಧವಾಗಿದೆ. ವಾಸ್ತವ ಸನ್ನಿವೇಶಗಳು, ಪಾತ್ರಚಿತ್ರಣದಲ್ಲಿ ವ್ಯಂಗ್ಯ ಈ ಕಥೆಗಳ ಮುಖ್ಯ ಲಕ್ಷಣಗಳು. ಕತೆಗಾರ ತಾನು ಬೆಳೆದ ದೇಸೀ ಪರಿಸರದಿಂದ ಎತ್ತಿಕೊಂಡ ವಸ್ತುಗಳನ್ನೇ ಕತೆಗಳಿಗೆ ಆರಿಸಿಕೊಂಡಿದ್ದಾನೆ. ಮುಂದೆ ಪೂರ್ತಿ ರಷ್ಯದ ರಾಜಧಾನಿಯ ಜೀವನವನ್ನು ಕುರಿತ ಸಾಹಿತ್ಯವನ್ನೇ ರಚಿಸಿದ. ಈತ ಬರೆದ ವೈನೋದಿಕಗಳಲ್ಲಿ ದ ಇನ್ಸ್‌ಪೆಕ್ಟರ್ ಜನರಲ್ ಎಂಬ ವಿಡಂಬನಾತ್ಮಕ ನಾಟಕ ಪ್ರಸಿದ್ಧವಾದುದು. ಕೆಳವರ್ಗದ ನೌಕರರ ಭ್ರಷ್ಟಾಚಾರವನ್ನು ಈ ನಾಟಕದಲ್ಲಿ ವಿಡಂಬನೆ ಮಾಡಿದ್ದಾನೆ. ಈ ನಾಟಕವನ್ನು ರಂಗದ ಮೇಲೆ ನೋಡಿದ ದೊರೆ ನಿಕಲಸ್ ಸಹ ನಕ್ಕು ಮೆಚ್ಚಿಕೊಂಡನಂತೆ. ಆದರೆ ನಾಟಕ ಒಂದು ಮನರಂಜಕ ಹಾಸ್ಯ ಪ್ರಹಸವಾಯಿತೇ ವಿನಹ ಉದ್ದೇಶಿಸಿದಂತೆ ಸುಧಾರಣೆ ತರುವ ವಿಡಂಬನೆ ಯಾಗಲಿಲ್ಲ ಎಂದು ಗೋಗೋಲ್ ವ್ಯಥಿತನಾದ. ಬಡಜನರ ಬದುಕಿನ ಸ್ಥಿತಿಯನ್ನು ಕುರಿತ ದ ಕ್ಲೋಕ್ ಎಂಬ ಕಥೆ ಹೊಸ ಅಲೆಯ ಸಾಹಿತ್ಯಕ್ಕೆ ನಾಂದಿಯಾಯಿತು. ಗೋಗೋಲ್ ಜನಪ್ರಿಯವಾದ. ಪುಷ್ಕಿನ್‌ನ ಸಲಹೆಯ ಮೇರೆಗೆ ಬರೆದ ಡೆಡ್‌ಸೋಲ್ಸ್ ಬಹುದೊಡ್ಡ ಗದ್ಯಕಾವ್ಯ. ರಷ್ಯ ಅನುಸರಿಸಬೇಕಾದ ದಾರಿಯಾವುದು ಎಂದು ಸೂಚಿಸುವ ಕೃತಿ. ಇದರ ಮೊದಲ ಭಾಗವನ್ನು ಮಾತ್ರ ಬರೆದು ಪ್ರಕಟಿಸಿದ. ನೇತ್ಯಾತ್ಮಕ ದನಿಯಿಂದಾಗಿ ಈ ಕೃತಿ ವಿಫಲಗೊಂಡಿತು. ಗೋಗೋಲ್‌ನ ಬದುಕಿನ ಕೊನೆಯ ದಿನಗಳು ಧಾರ್ಮಿಕ ಪ್ರವೃತ್ತಿಯ ಅತಿರೇಕಗಳಲ್ಲಿ ಕಳೆದವು. ಸುಧಾರಣೆಗಾಗಿಯೇ ಹೊರತಂದ ಸೆಲೆಕ್ಟಡ್ ಪ್ಯಾಸೇಜಸ್ ಫ್ರಮ್ ಕರೆಸ್ಪಾಂಡೆನ್ಸ್ ವಿಥ್ ಫ್ರೆಂಡ್ಸ್ ಎಂಬ ಕೃತಿ ಹಲವರ ಕಟು ವಿಮರ್ಶೆಗೆ ಗುರಿಯಾಯಿತು. ಗೋಗೋಲ್ ನಿರಾಸೆಯಿಂದ ಉತ್ಸಾಹ ಮತ್ತು ಬುದ್ಧಿ ಸ್ವಾಸ್ಥ್ಯವನ್ನು ಕಳೆದುಕೊಂಡು ಕೊನೆಯುಸಿರೆಳೆದ.

ಡಿಸೆಂಬರ್ ಕ್ರಾಂತಿ ಮತ್ತು ಒಂದನೆಯ ನಿಕಲಸ್‌ನ ಬಿಗಿ ದಮನ ನೀತಿಯ ಪರಿಣಾಮವಾಗಿ ಸಾಹಿತ್ಯ ಲೋಕದಲ್ಲಿ ದೊಡ್ಡ ಬದಲಾವಣೆಯಾಯಿತು. ಅದುವರೆಗೆ ಸಾಹಿತ್ಯ ಸೂತ್ರಗಳನ್ನು ಹಿಡಿದಿದ್ದ ಕುಲೀನ ಶ್ರೀಮಂತ ವರ್ಗವನ್ನು ಒತ್ತಿ ಪತ್ರಕರ್ತರ ಮತ್ತು ವಿಚಾರವಂತರ ಹೊಸ ಗುಂಪು ತಲೆಯೆತ್ತಿತು. ಅವರಲ್ಲಿ ಪಶ್ಚಿಮದ ಒಲವಿನವರು, ಸ್ಲಾವ್ ಒಲವಿನವರು ಎಂದು ಎರಡು ಪಂಥಗಳಾಗಿ ಇಬ್ಬರ ನಡುವಿನ ವಾದ ವಿವಾದಗಳೇ ಮುಂದೆ ಅನೇಕ ದಶಕಗಳವರೆಗೆ ಸಾಹಿತ್ಯ ಪಥವನ್ನು ನಿರ್ಧರಿಸಿದವು.

ಸ್ಲಾವ್ ಪ್ರಿಯರು ಸನಾತನಿಗಳು. ಪಶ್ಚಿಮದ ಗಾಳಿಯನ್ನು ತಡೆದು ರಷ್ಯದ ವಿಶಿಷ್ಟತೆಯನ್ನು ರಕ್ಷಿಸಬೇಕೆನ್ನುವವರು. ನಿರಂಕುಶಾಧಿಕಾರ, ಚರ್ಚಿನ ಸಂಪ್ರದಾಯದ ಧಾರ್ಮಿಕ ಪಂಗಡಗಳನ್ನು ಸಮರ್ಥಿಸಿದರು. ಜೀತ ಪದ್ಧತಿಯನ್ನು ಮಾತ್ರ ಇವರು ವಿರೋಧಿಸಿದರು. ಎ ಫ್ಯಾಮಿಲಿ ಕ್ರಾನಿಕಲ್ ಮತ್ತು ರಷ್ಯ ಜಮೀನ್ದಾರಿ ಮನೆತನಗಳ ಬದುಕಿನ ಅವಲೋಕನ ನೀಡುವ ದ ಅರ್ಲಿ ಇಯರ್ಸ್ ಆಫ್ ಬಾಗ್ರೊವ್

ಗ್ರ್ಯಾಂಡ್‌ಸನ್ ಎಂಬ ಕೃತಿಯನ್ನು ಬರೆದ ಸರ್ಗೆಯ ತಿಮೊಪೆಯೆವಿಚ್ ಅಕ್ಸಕೊಫ್ (೧೭೯೧-೧೮೫೯). ಅಲೆಕ್ಸೆಯ ಸ್ತಿಷಾನೊವಿಚ್ ಖೋಮ್ಯಾ ಕಫ್ (೧೮೦೪-೬೦), ಕಿರಿಯೆವ್‌ಸ್ಕಿ ಸೋದರರಾದ ಇವಾನ್ (೧೮೦೬-೫೬), ಪೀಟರ್ (೧೮೦೮-೫೬) ಮತ್ತು ಕಾನ್ಸಟಾಂಟಿನ್ ನಿಕಲಯೊವಿಚ್ ಲಿಯೊಂತೇಫ್ (೧೮೩೧-೯೧) – ಈ ಉಜ್ವಲ ಲೇಖಕರು ಸ್ಲಾವ್ ಗುಂಪಿನವರು.

ಪಶ್ಚಿಮದ ಪ್ರಭಾವವನ್ನು ಸ್ವಾಗತಿಸುವವರ ಸಾಹಿತ್ಯ ಕ್ಷೇತ್ರವೇ ಹೆಚ್ಚು ಫಲವತ್ತಾಗಿತ್ತು. ಪೀಟರ್ ಯಾಕೊವ್ಲಿವಿಚ್ ಚದಾಯೆಫ್‌ನ (೧೭೯೩-೧೮೫೬) ದ ಫಿಲಸಾಫಿಕಲ್ ಲೆಟರ್ಸ್ ಎಂಬ ಕೃತಿ ರೋಮನ್ ಕ್ಯಾಥಲಿಕ್ ಚರ್ಚಿನ ನಿಲುವಿನಲ್ಲಿ ರಷ್ಯದ ಇತಿಹಾಸ, ಸಂಸ್ಕೃತಿಗಳನ್ನು ಖಂಡಿಸುತ್ತದೆ. ವಿಸೇರಿಯನ್ ಗ್ರಿಗರ್ಯೆವಿಚ್ ಬೆಲಿನ್‌ಸ್ಕಿ (೧೮೧೧-೪೮) ತಲೆಯೆತ್ತತೊಡಗಿದ ಬುದ್ಧಿಜೀವಿಗಳ ಮುಂದಾಳಾದ. ಫ್ರೆಂಚ್ ಸಮತಾವಾದಿಗಳ ವಿಚಾರಗಳನ್ನು ಸಾಹಿತ್ಯದಲ್ಲಿ ತಂದ. ಸಾಮಾಜಿಕ ಕ್ರಾಂತಿಯನ್ನು ತರುವುದೇ ಶ್ರೇಷ್ಠ ಸಾಹಿತ್ಯದ ಲಕ್ಷಣ ಎಂದ. ಅಲೆಕ್ಸಾಂಡರ್ ಇವಾನೊವಿಚ್ ಹೆರ್ಜನ್ (೧೮೧೨-೭೦), ನಿಕಲಾಯ್ ಗವ್ರಿಲೋವಿಚ್ ಚೆರ್ನಿಷೆವ್‌ಸ್ಕಿ (೧೮೦೮-೮೯) ಮತ್ತು ಈತನ ಕಾದಂಬರಿ ವಾಟ್‌ಈಜ್ ಟು ಬಿ ಡನ್, ನಿಕಲಾಯ್ ಅಲೆಕ್ಸಾಂಡ್ರಿವಿಚ್ ದಬ್ರೊಲ್ಯುಬಫ್ (೧೮೩೬-೮೧). ಡಿಮಿಟ್ರಿ ಇವಾನೊವಿಚ್ ಪಿಸಾರೆಫ್ (೧೮೪೦-೭೮) ಮುಂತಾದ ಬರೆಹಗಾರರು ಸಾಮಾಜಿಕ ಕಾಳಜಿ, ಬದುಕಿಗೆ ಆವಶ್ಯಕವಾದ ಪ್ರಾಪಂಚಿಕ ವಸ್ತುಗಳು ಮತ್ತು ಪ್ರಯೋಜನ ದೃಷ್ಟಿಗಳನ್ನು ಬೆಳೆಸುವ ಆವೇಶದಲ್ಲಿ ಪುಷ್ಕಿನ್‌ಗಿಂತ ಪದರಕ್ಷೆಗಳು ಹೆಚ್ಚು ಉಪಯುಕ್ತ. ಕಲೆ ಕಾವ್ಯಗಳನ್ನು ಕಟ್ಟಿಕೊಂಡೇನು ಎಂಬ ಅತಿರೇಕಕ್ಕೆ ಒಯ್ದರು. ಸಾಹಿತ್ಯ ವಿಮರ್ಶೆಗಿಂತ ಪಾಶ್ಚಾತ್ಯ ವಿಜ್ಞಾನದ ಮುನ್ನಡೆ, ರಾಜಕೀಯ ಹಾಗೂ ಸಾಮಾಜಿಕ ಚರ್ಚೆ ಮುಖ್ಯವಾದವು. ಮುಂದಿನ ೫೦ ವರ್ಷಗಳ ರಷ್ಯನ್ ಸಾಹಿತ್ಯ ಇತಿಹಾಸ ಈ ವಿಚಾರಗಳಿಂದ ರೂಪುಗೊಂಡಿತು. ಕಾವ್ಯದ ಬದಲು ಕಾದಂಬರಿ ಮುಖ್ಯ ಪ್ರಕಾರವಾಗಿ ಬೆಳೆಯಿತು. ಈ ಕಾಲವನ್ನು ಕಾದಂಬರಿಯ ಸುವರ್ಣಯುಗ ಎಂದು ಕರೆಯಬಹುದು.

ಇವಾನ್ ಸೆರ್ಗಿಯೆವಿಚ್ ತುರ್ಗೇನೆಫ್ (೧೮೧೮ – ೮೩) ಐರೋಪ್ಯವೆನಿಸಬಹುದಾದ ರಷ್ಯನ್ ಲೇಖಕ. ತಾಯಿಯೊಡನೆ ಜಗಳವಾಡಿ, ಆಸ್ತಿ ಹಕ್ಕನ್ನು ಕಳೆದುಕೊಂಡು ಪಶ್ಚಿಮ ಯೂರೋಪಿನಲ್ಲಿರುತ್ತ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಗೌರವ ಪದವೀಧರನಾಗಿ ವಿದೇಶದಲ್ಲಿ ರಷ್ಯನ್ ಸಾಹಿತ್ಯದ ವಕ್ತಾರನಾದ. ಮೆಮಾಯಿರ್ಸ್ ಆಫ್ ಎ ಸ್ಪೋರ್ಟ್ಸ್‌ಮನ್ ಎಂಬ ಕೃತಿ ಶಿಕಾರಿ ಚಿತ್ರಗಳ ಸರಣಿ. ಅಂಕಲ್‌ಟಾಮ್ಸ್ ಕ್ಯಾಬಿನ್ ತರಹ ಜೀತ ವಿಮುಕ್ತಿಯ ಧೋರಣೆಯುಳ್ಳ ಸಾಹಿತ್ಯ ಕೃತಿ. ಜಮೀನ್ದಾರರನ್ನು ರಾಕ್ಷಸರನ್ನಾಗಿ ಚಿತ್ರಿಸದೆ ಜೀತಕ್ಕಿರುವವರ ಗುಣ ಸಂಪನ್ನತೆಯನ್ನು ಮಾತ್ರ ಎತ್ತಿ ತೋರಿಸುತ್ತ, ಈ ಬಡಪಾಯಿಗಳು ಒಳ್ಳೆಯವರಾಗಿದ್ದರೂ ಸಂಕಟಗಳಿಗೆ

ಗುರಿಯಾಗುವುದನ್ನು ಪ್ರಧಾನ ಮಾಡಿ ಬರೆದಿರುವುದು ಪರಿಣಾಮಕಾರಿಯಾಗಿದೆ. ಎರಡನೆಯ ಅಲೆಗ್ಸಾಂಡರ್ ಜಾರ್ ಇದರ ಒಂದು ಪ್ರತಿಯನ್ನು ಸದಾ ತನ್ನೊಡನೆ ಇಟ್ಟುಕೊಂಡಿರುತ್ತಿದ್ದನಂತೆ. ೨೦ ವರ್ಷಗಳ ಅವಧಿಯಲ್ಲಿ ರುಡಿನ್, ಎ ನೆಸ್ಟ್ ಆಫ್ ನೋಬಲ್ಸ್, ಆನ್ ದ ಈವ್, ಫಾದರ್ಸ್ ಅಂಡ್ ಚಿಲ್ಡ್ರನ್, ಸ್ಮೋಕ್, ವರ್ಜಿನ್ ಸಾಯಿಲ್ ಎಂಬ ಆರು ಕಾದಂಬರಿ ಸರಣಿಯನ್ನು ಬರೆದು ಈತ ಸಾಮಾಜಿಕ ಕಳಕಳಿ ಇರುವ ಧ್ಯೇಯವಾದಿ ಯುವ ಜನರ ಪ್ರಗತಿಶೀಲ ಬೆಳವಣಿಗೆಯನ್ನು ಚಿತ್ರಿಸಿದ. ಚೆನ್ನಾಗಿ ಓದಿಸಿಕೊಂಡು ಹೋಗುವ ಈ ಕಥೆಗಳಲ್ಲಿ ಚಿತ್ರಿತವಾಗಿರುವ ಮಹಿಳೆ ಪುರುಷನಿಗಿಂತ ಹೆಚ್ಚು ತ್ಯಾಗಶೀಲೆಯೂ ಕ್ರಿಯಾಶೀಲೆಯೂ ಆಗಿದ್ದಾಳೆ. ಎ ನೆಸ್ಟ್ ಆಫ್ ನೋಬಲ್ಸ್ ಒಂದು ಪರಿಪೂರ್ಣ ಕಾದಂಬರಿ. ಫಾದರ್ಸ್ ಅಂಡ್ ಚಿಲ್ಡ್ರನ್ ಅಂಥದೇ ಒಂದು ಶ್ರೇಷ್ಠ ಕೃತಿ. ಇದರ ನಾಯಕ ಬಜರೊವ್‌ನ ಪಾತ್ರ ಚಿತ್ರಣ ಅದ್ಭುತವಾಗಿದೆ. ಆದರೆ ಈತನ ಶೂನ್ಯವಾದ, ತನ್ನ ಪ್ರತಿಯೊಂದು ಪ್ರವೃತ್ತಿಯನ್ನೂ ವಿಜ್ಞಾನದ ನಿಯಮಕ್ಕೆ ಒಳಪಡಿಸುವ ಪ್ರಯತ್ನದಲ್ಲಿ ವಿಫಲನಾಗುವುದು ಕಿರಿಯ ಪೀಳಿಗೆಯವರ ಕಟು ವಿಮರ್ಶೆಗೆ ಗುರಿಯಾಗಿ ತುರ್ಗೇನೆಫ್‌ನ ಮನಸ್ಸನ್ನು ಕಹಿಗೊಳಿಸಿತು. ಆದರೂ ಸಾವಿನಂಚಿನಲ್ಲಿದ್ದಾಗ ಬರೆದ ಪೊಯಿಮ್ಸ್ ಇನ್ ಪ್ರೋಜ್‌ನಲ್ಲಿ ಮತ್ತು ಇತರ ಚಿಕ್ಕ ಚಿಕ್ಕ ಸಾಹಿತ್ಯ ಚಿತ್ರಗಳಲ್ಲಿ ದೇಶಾಭಿಮಾನ, ವಿಶ್ವಾಸಗಳು ಅಚ್ಚಳಿಯದೆ ಮೂಡಿವೆ.

೧೯ನೆಯ ಶತಕದ ಉತ್ತರಾರ್ಧ ಬೌದ್ಧಿಕ ಕುತೂಹಲಕ್ಕೆ ಹೆಸರಾದುದು. ಈ ಕಾಲದಲ್ಲಿ ಬಂದ ಅಲೆಗ್ಸಾಂಡರ್ ಇವಾನೊವಿಚ್ ಗನ್‌ಚೆರಾಫ್ (೧೮೧೨ – ೯೧) ವ್ಯತಿರಿಕ್ತವಾಗಿ ಕ್ರಿಯಾಹೀನ ಅಥವಾ ಜಡ ಸಾಹಿತಿಯಾಗಿಯೇ ಹೆಸರಾದ. ಬರೆದುದು ಓಬಿಕ್ನೊವೆನ್ಯ ಇಸ್ಟೋರಿಯ (೧೮೪೭). ಒಬ್ಲಮೊವ್ (೧೮೫೭). ಓಬ್ರಿವ್ (೧೮೬೯) ಎಂಬ ಮೂರೇ ಕಾದಂಬರಿ. ಓಬ್ಲಮೊವ್ ಒಂದು ಆಚಾರ್ಯ ಕೃತಿ. ನಾಯಕ ಓಬ್ಲಮೊವ್ ಜೀತಪದ್ಧತಿಯ ಸಮಾಜದಲ್ಲಿ ಬೆಳೆದ ವಿಶಿಷ್ಟ ರಷ್ಯನ್ ಮನೋಧರ್ಮದ ಪ್ರತೀಕ. ಉದಾಸೀನನಲ್ಲವಾದರೂ ಕಾರ್ಯ ಪ್ರವೃತ್ತನಾಗಲು ಹಿಂಜರಿಯುವ ಸೋಮಾರಿ. ಆದರೆ ತನ್ನದೇ ಒಂದು ಪಂಥವನ್ನು ಬೆಳೆಸುವಂಥ ಪ್ರಭಾವಶಾಲಿ ನಾಯಕ. ಇದೊಂದು ಅಮರಕೃತಿ ಎನಿಸಿದ ಈ ಕಾದಂಬರಿ ಅಪಾರ ಜನಪ್ರಿಯತೆಗಳಿಸಿತು. ರಷ್ಯದ ಅತ್ಯಂತ ಶ್ರೇಷ್ಠ ಆರು ಕಾದಂಬರಿಗಳಲ್ಲಿ ಒಂದೆಂದು ಇದನ್ನು ಪರಿಗಣಿಸಬಹುದು. ಇದೆ ಪೀಳಿಗೆಗೆ ಸೇರಿದ ಇನ್ನಿಬ್ಬರು ಮಹಾ ಸಾಹಿತಿಗಳು ರಷ್ಯನ್ ಸಾಹಿತ್ಯ ಹಾಗೂ ವಿಶ್ವ ಸಾಹಿತ್ಯ ಎರಡನ್ನೂ ಶ್ರೀಮಂತಗೊಳಿಸಿದವರೆಂದರೆ ಕೌಂಟ್ ಲಿಯೊ ಟಾಲ್‌ಸ್ಟಾಯ್ (೧೮೨೮ – ೧೯೧೦) ಮತ್ತು ಫ್ಯೋದರ್ ದಸ್ತಾಯಿವ್‌ಸ್ಕಿ (೧೮೨೧ – ೮೧).

ಟಾಲ್‌ಸ್ಟಾಯ್ ನಿಸ್ಸಂದೇಹವಾಗಿ ಮಹಾಪುರುಷ, ಮಹಾನ್ ಲೇಖಕ. ಸೈನ್ಯಾಧಿಕಾರಿಯಾಗಿ ಜಮೀನು ಒಡೆಯನಾಗಿ, ಗೃಹಸ್ಥನಾಗಿ, ಲೇಖಕನಾಗಿ ಎಲ್ಲದರಲ್ಲೂ ಇವನ ಅನುಭವ ತೀವ್ರವಾದುದು. ಚಿಂತನೆ ಗಾಢವಾದುದು. ಮನುಕುಲದ

ನೈತಿಕತೆಯ ಬಗೆಗೆ ಒದ್ದಾಡಿದವನು. ಇವನದು ನೈತಿಕ ಧಾರ್ಮಿಕ ಸಮಸ್ಯೆಗಳ ಬಗ್ಗೆ ಆಳವಾದ ಆಸಕ್ತಿ. ವಿಚಾರ ಶೀಲನಾದರೂ ಕೆಲವೊಮ್ಮೆ ಈತನ ವಿಚಾರಗಳಲ್ಲಿ ವಿರುದ್ಧ ದೃಷ್ಟಿಗಳ ತಾಕಲಾಟ ಕಾಣಬರುತ್ತದೆ. ಒಮ್ಮೆ ಅನುಮೋದಿಸಿದ್ದನ್ನು ಇನ್ನಾವುದೂ ಸಂದರ್ಭದಲ್ಲಿ ಖಂಡಿಸುವುದು. ಖಂಡಿಸಿದ್ದನ್ನು ಮತ್ತೊಂದೆಡೆ ಅನುಮೋದಿಸುವುದೂ ಉಂಟು. ಈತ ಉಜ್ಜ್ವಲವಾದ ಪಾತ್ರಗಳನ್ನು ಸೃಷ್ಟಿಸಿದ. ಕಣ್ಣಿಗೆ ಕಟ್ಟಿದಂತೆ ಚಿತ್ರಿಸುವ ಛಾಯಾಗ್ರಾಹಕ ಶಕ್ತಿ ಈತನ ಲೇಖನಿಗಿತ್ತು. ಚೈಲ್ಡ್‌ಹುಡ್, ಬಾಯ್‌ಹುಡ್ ಆ್ಯಂಡ್ ಯೂಥ್ ಎಂಬ ಆತ್ಮಕಥಾ ಕೃತಿಗಳಿಂದ ಇವನ ಸಾಹಿತ್ಯ ಜೀವನ ಆರಂಭವಾಯಿತು. ಈತನ ಕೃತಿಗಳಲ್ಲೆಲ್ಲ ಸ್ವತಂತ್ರ ಜೀವನಾನುಭವಗಳ ಕಲಾತ್ಮಕ ಚಿತ್ರಣವನ್ನೇ ಕಾಣುತ್ತೇವೆ. ಶ್ರೀಮಂತಿಕೆಯ ಧೋರಣೆ, ಪ್ರಚಂಡವಾದ ಆತ್ಮ ಪ್ರತ್ಯಯಗಳ ಹಿಂದೆ ಕೀಳರಿಮೆ ಅಡಗಿತ್ತು. ಕ್ರಮಿಯನ್ ಯುದ್ಧದ ವಾಸ್ತವ ಚಿತ್ರಗಳನ್ನು ಈತ ಕಥೆಗಳ ರೂಪದಲ್ಲಿ ಬರೆದ. ದ ಕಾಸ್ಯಾಕ್ಸ್ (೧೮೬೩) ಒಂದು ಶ್ರೇಷ್ಠ ಕಥಾ ಸಂಕಲನ. ಇಲ್ಲಿಯ ಕಥೆಗಳು ಮನವ ನಾಗರಿಕತೆಯ ಟೊಳ್ಳನ್ನು ಎತ್ತಿ ತೋರಿಸುತ್ತವೆ. ವಾರ್ ಅಂಡ್ ಪೀಸ್ (೧೮೬೫) ಈತನ ಆಚಾರ್ಯ ಕೃತಿ; ಅಸಾಧಾರಣವಾದ ಮೇರು ಕೃತಿ. ಇದು ಕಾದಂಬರಿಯ ಮಿತಿಯನ್ನು ಅತಿಕ್ರಮಿಸಿ ಬೆಳೆದ ಸಮಸ್ತ ರಷ್ಯದ ಬೃಹತ್ ಅವಲೋಕನವಾಗಿದೆ. ಸರ್ವಾಧಿಕಾರದ ದೌಷ್ಟ್ಯವನ್ನು ಸೋಲಿಸಿದ ರಷ್ಯದ ಮೂಲಭೂತ ಮಾನವೀಯ ಶಕ್ತಿ. ಸತ್ವ ಮತ್ತು ಉತ್ಕಟ ರಾಷ್ಟ್ರಾಭಿಮಾನಗಳನ್ನು ಎತ್ತಿ ಹಿಡಿದ ಮಹಾಕಾದಂಬರಿ. ಅನ ಚರನಿನ (೧೮೭೭) ಇನ್ನೊಂದು ಮಹತ್ತರವಾದ ಕಾದಂಬರಿ. ಉಜ್ಜ್ವಲ ಹಾಗೂ ಆಕರ್ಷಕ ವ್ಯಕ್ತಿತ್ವವಿದ್ದ ಗೃಹಿಣಿ ಪ್ರಣಯಕ್ಕೊಳಗಾಗಿ ಪತಿಪುತ್ರರನ್ನು ತ್ಯಜಿಸಿ ಪತನದ ಹಾದಿ ಹಿಡಿಯುವ ಜೀವನ ಚಿತ್ರಣ ಇದರಲ್ಲಿ ಸೊಗಸಾಗಿ ಮೂಡಿಬಂದಿದೆ. ಹಂತ ಹಂತವಾಗಿ ಆಗುವ ಅವಳ ಪ್ರಾಮಾಣಿಕ ವ್ಯಕ್ತಿತ್ವ, ಹುಸಿ ಗೌರವಾನ್ವಿತ ಮಹಿಳೆಯರಿಗಿಂತ ಆಕೆ ಉತ್ತಮ ಎಂಬ ಭಾವನೆಯನ್ನೂ ಕನಿಕರವನ್ನೂ ಮೂಡಿಸುತ್ತದೆ. ಲೆವಿನ್ ಮತ್ತು ಕಿಟ್ಟಿಯರ ಪರಿಶುದ್ಧವಾದ ಪ್ರೇಮ ವೈದೃಶವಾಗಿ ಬರುತ್ತದೆ. ಬಾಹ್ಯದಲ್ಲಿ ಸುಖವಾಗಿರುವಂತೆ ಕಂಡರೂ ಆಂತರ್ಯದಲ್ಲಿ ಚೆನ್ನಾಗಿ ಬದುಕಬೇಕೆಂಬ ಆಸೆಯಿಂದ ಕೊರಗುತ್ತ ಲೆವಿನ್ (ಟಾಲ್‌ಸ್ಟಾಯ್) ನೈತಿಕ ಸಮಸ್ಯೆಗಳನ್ನೂ ತಲೆಯಲ್ಲಿ ತುಂಬಿಕೊಂಡಿರುವುದು ಕಾಣುತ್ತದೆ. ಕನ್‌ಫೆಷನ್ (೧೮೭೯) ಎಂಬ ಕೃತಿ ಆತ್ಮಕಥೆಗಳಲ್ಲಿ ಬಹುಶ್ರೇಷ್ಠವಾದುದು. ದೇವರ ಅಸ್ತಿತ್ವದಲ್ಲಿ ನಂಬಿಕೆಯಿಲ್ಲದ ನಾಸ್ತಿಕನಾಗಿದ್ದವನು ಕಡೆಯಲ್ಲಿ ಹೀಗೆ ಆಸ್ತಿಕನೂ ಧಾರ್ಮಿಕನೂ ಆಗುತ್ತಾನೆ ಎಂಬುದೇ ಈ ಕೃತಿಯ ಮನಮುಟ್ಟುವ ಅಂಶ. ಯೇಸುಕ್ರಿಸ್ತನ ಬೆಟ್ಟದ ಮೇಲಿನ ಉಪದೇಶದಂತೆ ಬಾಳುವುದೊಂದೇ ಪರಮಧನ್ಯ ಮಾರ್ಗ ಎಂಬ ಸತ್ಯವನ್ನು ಕಂಡುಕೊಳ್ಳುತ್ತಾನೆ. ದ ಪವರ್ ಆಫ್ ಡಾರ್ಕ್‌ನೆಸ್ ಎಂಬ ಯಶಸ್ವಿಯಾದ ನಾಟಕ, ಮೂರನೆಯ ಮಹಾಕಾದಂಬರಿಯಾದ ರೆಸರಕ್ಷನ್ ಎಂಬುದು ಮೊದಲು ಬಂದ ಕೃತಿಗಳ

ಮಟ್ಟಕ್ಕೆ ಬರಲಿಲ್ಲ. ಕಡೆಯಲ್ಲಿ ಬಂದ ಕೃತಿಗಳಲ್ಲಿ ಮಾಸ್ಟರ್ ಅಂಡ್ ಮ್ಯಾನ್ ಕಿರುಚಿತ್ರಗಳ ಸಂಕಲನ. ಇವುಗಳಲ್ಲಿ ನೈತಿಕ ವಿಚಾರಗಳ ಪರಿಶೀಲನೆ ತುಂಬಿದೆ. ವಾಟ್ ಈಸ್ ಆರ್ಟ್ (೧೮೯೬) ಎಂಬುದು ಕಲೆಯ ಅರ್ಥ ವಿಶೇಷತೆಗಳನ್ನು ಸರಳ ಸಾಮಾನ್ಯ ಓದುಗನಿಗೂ ಅರ್ಥವಾಗುವಂತೆ ವಿವರಿಸುವ ಪುಸ್ತಕ. ನೆಪೋಲಿಯನ್‌ನನ್ನು ವಿರೋಧಿಸುವಷ್ಟೇ ಉಗ್ರವಾಗಿ ಷೇಕ್‌ಸ್ಪಿಯರ್‌ನನ್ನು ವಿರೋಧಿಸಿ ಬರೆದ ಲೇಖನವೂ ಇದರಲ್ಲಿದೆ.

ದಸ್ತಾಯೆವ್‌ಸ್ಕಿ (೧೮೨೧ – ೮೧) ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿ, ತಂದೆ ಸೇನೆಯ ವೈದ್ಯನಾಗಿದ್ದಂತೆ ತಾನೂ ಸೇವಾ ನೌಕರಿಗೆ ಸೇರಿದರೂ ಕೆಲಕಾಲದಲ್ಲಿ ಅದನನು ಬಿಟ್ಟು ಬರೆಹಕ್ಕೆ ಕೈಹಾಕಿದ. ಜೂಜು, ಅಜಾಗರೂಕತೆಗಳಿಂದ ಸದಾ ಸಾಲಗಳಲ್ಲಿ ಮುಳುಗಿರುತ್ತಿದ್ದ. ಪೂರ್ ಫೋಕ್ (೧೮೪೬) ಈತನ ಮೊದಲ ಕಥೆ. ಬಡ ಗುಮಾಸ್ತನಾಗಿದ್ದವನೊಬ್ಬ ತನಗಿಂತ ಬಡವಳಾಗಿದ್ದ ಹುಡುಗಿಯನ್ನು ಪ್ರೀತಿಸುವ ಪ್ರಸಂಗ. ಭಾವನಾತ್ಮಕವಾಗಿದ್ದುದರಿಂದ ಬಹಳ ಜನಪ್ರಿಯವಾಯಿತು. ಕತೆಗಾರನಾಗಿ ಪ್ರಖ್ಯಾತನಾದ. ಭಾವಜೀವಿ, ಕನಸುಗಾರ ವಿಧಿಯ ಕ್ರೂರ ವಿಲಾಸಕ್ಕೆ ಸಿಕ್ಕುನರಳುವುದೇ ಈತನ ಕಥೆಗಳ ಸಾಮಾನ್ಯ ವಸ್ತು.

೧೮೪೮ರಲ್ಲಿ ರಾಜವಿರೋಧಿ ಗುಂಪಿನ ಸದಸ್ಯನಾಗಿದ್ದ ಕಾರಣ ಈತ ದಸ್ತಗಿರಿಯಾಗಿ ವಿಚಾರಣೆಯಾಗಿ ಮರಣದಂಡನೆಗೂ ಗುರಿಯಾದ. ಕೂದಲೆಳೆಯಷ್ಟು ಅಂತರದಲ್ಲಿ ಮರಣ ದಂಡನೆಯಿಂದ ಪಾರಾದ. ಈ ಮುನ್ನ ೪ ವರ್ಷ ಕಠಿಣ ಸಜೆ ಅನುಭವಿಸಲು ಸೈಬೀರಿಯಕ್ಕೆ ಕಳಿಸಲಾಗಿತ್ತು. ಶಿಕ್ಷೆಯಲ್ಲಿ ಮಾರ್ಪಾಡಾಗಿ ೮ ವರ್ಷಗಳು ಅಲ್ಲಿಯೇ ಇದ್ದು ರಷ್ಯಕ್ಕೆ ಹಿಂತಿರುಗಿದ. ಮತ್ತೆ ಬರೆವಣಿಗೆಯನ್ನು ಕೈಕೊಂಡ. ವಿಚಾರಗಳು ಬದಲಾಗಿ ಮಂದಗಾಮಿಯಾದವು. ಸೆರೆವಾಸದಿಂದ ಆರೋಗ್ಯ ಕ್ಷೀಣಿಸಿತು. ಆದರೂ ದ ವಿಲೇಜ್ ಸ್ತಿಪಾನ್ ಚೆಕಾಫ್ ಆ್ಯಂಡ್ ಇಟ್ಸ್ ಇನ್‌ಹ್ಯಾಬಿಟೆಂಟ್ಸ್, ದ ಹ್ಯುಮಿ ಲಿಯೇಟೆಡ್ ಆ್ಯಂಡ್ ಇನ್ಸಲ್ಟೆಡ್ ಎಂಬ ಉತ್ಕೃಷ್ಟ ಕಥೆಗಳನ್ನು ಬರೆದ. ಮೆಮಾಯರ್ಸ್ ಆಫ್ ಎ ಡೆಡ್ ಹೌಸ್ ಎಂಬುದು ಸೈಬೀರಿಯ ಕಾರಾಗೃಹ ಜೀವನದ ವಿಸ್ಮಯಕಾರಿ ಚಿತ್ರ. ಹಾಗೆಯೇ ಮೆಮಾಯರ್ಸ್ ಫ್ರಮ್ ಅಂಡರ್ ಗ್ರೌಂಡ್ ಎಂಬುದು ಸಾಹಿತ್ಯ ರೂಪ ತಳೆದ ಮಾನವ ಹೃದಯದ ಕಹಿ, ಆಕ್ರೋಶಗಳ ಪ್ರಚಂಡ ಪ್ರವಾಹ. ಇವನ ಕ್ರೈಮ್ ಅಂಡ್ ಪನಿಷ್ಮೆಂಟ್; ದ ಇಡಿಯಟ್; ದ ಡೆವಿಲ್ಸ್; ದ ಬ್ರದರ್ಸ್ ಕರಮಜೊವ್ – ಎಂಬ ನಾಲ್ಕು ಮಹಾಕಾದಂಬರಿಗಳು ಲೋಕವಿಖ್ಯಾತವಾಗಿದೆ. ಇವಲ್ಲದೆ ದ ಗ್ಯಾಂಬ್ಲರ್; ದ ಇಟರ್ನಲ್ ಹಸ್ಬೆಂಡ್; ದ ರಾ ಯೂಥ್ ಎಂಬ ಕಾದಂಬರಿಗಳನ್ನು ಬರೆದ. ದಸ್ತಾಯೆವ್‌ಸ್ಕಿಯಂತೆ ಮಾನವ ಚೇತನದ ವಿಶ್ಲೇಷಣೆಯನ್ನು ಮಾಡಿದ ಲೇಖಕರು ಹಿಂದೆಯೂ ಇರಲಿಲ್ಲ. ಅನಂತರವೂ ಬರಲಿಲ್ಲ. ಕೇವಲ ಕಥೆಯ ಹೊರಮೈಯ ಬೆರಗಿನಲ್ಲಿ ತೃಪ್ತನಾಗದೆ ತನ್ನ ಪಾತ್ರಗಳ ಮೂಲಕ ಸುಪ್ತ ಮಾನಸದ ಆಳಕ್ಕಿಳಿದು ದೈವೀ ಮತ್ತು ಆಸುರೀ

ಗುಣಗಳ ಸಂಘರ್ಷವನ್ನು ತರ್ಕಬದ್ಧ ವೈಚಾರಿಕ ದೃಷ್ಟಿಯಿಂದ ಅವಲೋಕಿಸುತ್ತಾನೆ. ಜೀವನದಲ್ಲಿ ಸುಖ, ಶಾಂತಿಗಳನ್ನು ಪಡೆಯಲು, ಪರಿತ್ಯಜಿಸಬೇಕಾದ ಅಂಶಗಳನ್ನು ಕಂಡುಕೊಳ್ಳುವ ವ್ಯಕ್ತಿಗಳನ್ನು ತನ್ನ ಕೃತಿಗಳಲ್ಲಿ ಚಿತ್ರಿಸುತ್ತಾನೆ. ಅತ್ಯಂತ ಒಳ್ಳೆಯ ವ್ಯಕ್ತಿಯಲ್ಲೂ ದುಷ್ಟತನದ ಅಂಶಗಳಿರುವುದನ್ನು ಅತ್ಯಂತ ಕೆಟ್ಟವನಲ್ಲೂ ಒಳ್ಳೆಯ ಅಂಶಗಳಿರುವುದನ್ನೂ ಗುರುತಿಸಿ ಯಾರನ್ನೂ ಹೀನಾಯವಾಗಿ ಕಾಣಬಾರದೆನ್ನುವ ಕ್ರೈಸ್ತ ಮನೋಧರ್ಮವನ್ನು ಎತ್ತಿ ಹಿಡಿಯುತ್ತಾನೆ. ಕೃತಿ, ಕರ್ಮ ಏನೇ ಇರಲಿ ಅದರ ಹಿಂದಿರುವ ಉದ್ದೇಶವನ್ನು ತಿಳಿದು ತೀರ್ಮಾನ ಕೊಡಬೇಕು ಎಂಬುದು ಇವನ ಅಭಿಮತ. ಲೋಕದ ರೀತಿಗೆ ಒಪ್ಪಿಕೊಂಡು ನೀತಿಗಾಗಿ ನೀತಿ ಎಂಬಂತೆ ನಡೆದುಕೊಳ್ಳಬೇಕು. ಕ್ರೌರ್ಯ, ಅಹಂಕಾರಗಳಿರುವಂತೆ ದಯೆ, ವಿನಯಗಳೂ ಬದುಕಿನಲ್ಲಿ ಸಹಜ ಹಾಗೂ ವಾಸ್ತವ ಸಂಗತಿಗಳು. ಪ್ರಪಂಚ ಸಾಹಿತ್ಯದ ಮೇಲೆ ಅದರಲ್ಲೂ ಆಧುನಿಕ ಕಾದಂಬರಿ ಪ್ರಕಾರದ ಮೇಲೆ ದಸ್ತಾಯೆವ್‌ಸ್ಕಿಯ ಬರೆಹಗಳು ಗಾಢವಾದ ಪ್ರಭಾವವನ್ನು ಬೀರಿವೆ.

ದಸ್ತಾಯೆವ್‌ಸ್ಕಿ ೧೮೮೧ರಲ್ಲಿ ಮರಣ ಹೊಂದಿದ. ಎರಡನೆಯ ಜಾರ್ ಅಲೆಗ್ಸಾಂಡರನನ್ನು ಹತ್ಯೆ ಮಾಡಿದರು. ಎರಡು ವರ್ಷಗಳ ಬಳಿಕ ತುರ್ಗೇನೆಫ್ ತೀರಿಹೋದ. ಟಾಲ್‌ಸ್ಟಾಯ್ ೧೯೧೦ರವರೆಗೂ ಇದ್ದನಾದರೂ ರಷ್ಯದ ಕಾದಂಬರಿಯ ಮಹಾಯುಗ ೧೮೮೧ರ ವೇಳೆಗೆ ಮುಗಿಯಿತು. ಆದರೂ ಸುಮಾರು ಹತ್ತು ವರ್ಷಕಾಲ ಅಂದರೆ ೧೮೯೦ರವರೆಗೂ ಕಾದಂಬರಿ ಕ್ಷೇತ್ರದಲ್ಲಿ ಟಾಲ್‌ಸ್ಟಾಯ್‌ನ ಪ್ರಭಾವೇ ಪ್ರಬಲವಾಗಿತ್ತು. ಈತನ ಸೊಗಸಾದ ಧಾರ್ಮಿಕ ಮತ್ತು ನೀತಿ ಬೋಧಕ ಕಥೆಗಳನ್ನು ಬಿಟ್ಟು ಕಾದಂಬರಿಗಳನ್ನು ಅನುಕರಿಸುವ ಗೀಳೇ ಅನೇಕ ಯುವ ಸಾಹಿತಿಗಳಲ್ಲಿ ಅಂಟಿಕೊಂಡಿತ್ತು.

ಹೀಗೆ ಟಾಲ್‌ಸ್ಟಾಯ್ ಮತ್ತು ತುರ್ಗೇನೆಫ್ ಅವರಿಂದ ಪ್ರಭಾವಿತರಾದ ಹೊಸ ಪೀಳಿಗೆಯ ಲೇಖಕರಲ್ಲಿ ವಿ.ಎಂ. ಗಾರ್ಷಿನ್ ಅಗ್ರಪಂಕ್ತಿಯ ಶ್ರೇಷ್ಠ ಸಾಹಿತಿ. ಈತನ ಅಲ್ಪ ಕಾಲಾವಧಿಯ ಸೃಜನಶೀಲ ಜೀವನ ದುರಂತ ಮರಣದಲ್ಲಿ ಮುಗಿದು ಹೋಯಿತು. ಕ್ರಾಸ್ಯುತ್ಸೆವೆತಕ್‌ನ (೧೮೮೩) ದ ಸ್ಕಾರ್ಲೆಟ್ ಬ್ಲಾಜಮ್; ದ ಸಿಗ್ನಲ್ ಅಂಡ್ ಅದರ್ ಸ್ಟೋರೀಸ್ ಎಂಬ ಸಣ್ಣಕಥೆಗಳು ನೈತಿಕ ಸೂಕ್ಷ್ಮ ಭಾವಗಳನ್ನೊಳಗೊಂಡು ರೂಪ, ತಂತ್ರ, ಕಥನ ಶೈಲಗಳಿಂದ ಆಹ್ಲಾದಗೊಳಿಸುತ್ತವೆ. ರೋಗಗ್ರಸ್ತ ಭಾವದಲ್ಲಿದ್ದು ಬರೆಯುವುದೇ ಈತನ ಪ್ರಿಯವಾದ ಮನೋವೃತ್ತಿಯಾಯಿತು.

ಉಗ್ರವಾದಿ ಬರೆಹಗಾರರಲ್ಲಿ ವಿ.ಜಿ. ಕೊರೊಂಲೆಕೊನ ಕತೆಗಳು ಗಮನವನ್ನು ಸೆಳೆಯುತ್ತವೆ. ಕತೆಗಾರ ಯಾವುದೊ ಪ್ರಕರಣದಲ್ಲಿ ಗಡೀಪಾರಾಗಿ ಸೈಬೀರಿಯಲ್ಲಿರಬೇಕಾಗಿ ಬಂದಾಗ ಅಲ್ಲಿನ ಜೀವನ, ಶೋಷಿತರ ಪಾಡು ಇತ್ಯಾದಿ ಚಿತ್ರಗಳನ್ನೂ ತನ್ನ ಅನುಭವಗಳನ್ನೂ ಸಣ್ಣಕತೆಗಳಲ್ಲಿ ಅಭಿವ್ಯಕ್ತಿಸಿ ಬರೆದ. ಮಾಕರ್‌್ಸ ಡ್ರೀಮ್ ಅಂಡ್ ಅದರ್ ಸ್ಟೋರೀಸ್ (೧೮೯೨ರಲ್ಲಿ ಇಂಗ್ಲಿಷ್ ಅನುವಾದ)

ಒಂದು ಸೊಗಸಾದ ಕೃತಿ. ಅಭಿಜಾತ ಸಾಹಿತ್ಯಕ್ಕೆ ಸೇರಲು ಯೋಗ್ಯವಾದುದು. ಉತ್ತರದ ಹಿಮಾಚ್ಛಾದಿತ ರಮ್ಯ ನೋಟಗಳನ್ನೂ ಕಣ್ಣಿಗೆ ಕಟ್ಟುವಂತೆ ಈ ಕತೆಗಳಲ್ಲಿ ಬಣ್ಣಿಸುತ್ತಾನೆ. ಮನುಷ್ಯನ ಅಂತರಂಗದಲ್ಲಿರುವ ಸ್ವಾಭಾವಿಕ ಒಳ್ಳೆಯತನವೇ ಕೊನೆಗೆ ಗೆಲ್ಲುವುದು ಎಂಬ ಆದರ್ಶ ಈತನದು. ಇವನ ಕಥೆಗಳಲ್ಲಿ ವಾಸ್ತವತೆ– ಮಣ್ಣಿನ ವಾಸನೆಗಳಲ್ಲದೆ ಆಹ್ಲಾದಕರವಾದ ಹಾಸ್ಯವೂ ಬೆರೆತಿದೆ. ಈತನ ಶ್ರೇಷ್ಠ ಕಥೆಗಾರಿಕೆಯನ್ನು ಪ್ರತಿಭಾಶಾಲಿ ಚೆಕಾಫ್‌ನ ಕಥೆಗಳು ಮರೆಮಾಡಿದವು.

ತುರ್ಗೇನೆಫ್, ಟಾಲ್‌ಸ್ಟಾಯ್, ದಸ್ತಾಯೆವ್‌ಸ್ಕಿಯವರಂತಹ ಮಹಾ ಸಾಹಿತಿಗಳ ಮುಂದೆ ಆ ಕಾಲದ ಇತರ ರಷ್ಯನ್ ಲೇಖಕರು ಕುಬ್ಜರಾಗಿ ಕಾಣುತ್ತಾರೆ. ಅಲೆಗ್ಸಾಂಡರ್ ನಿಕೊಲಯೆವಿಚ್ ಓಸ್ಟ್ರೋವೆಸ್ಕಿ ನೆಕ್ರಸೊವ್ (೧೮೨೧ – ೭೭) ಎಂಬ ಕವಿ, ಅಲೆಕ್ಸಿ, ಕಾನ್‌ಸ್ಟಾಂಟಿನೊವಿಚ್ ಟಾಲ್‌ಸ್ಟಾಯ್ (೧೮೧೭–೭೫) ಎಂಬ ಕವಿ, ಮಿಹೈಲಿನ್ ಗ್ರಾಫೋವಿಚ್ ಸ್ತಲಿಕೋವ್ ಷೆದ್ರಿನ್ (೧೮೨೬–೮೯) ಎಂಬ ವಿಡಂಬನಕಾರ; ಅಲೆಕ್ಸಿ ಫಿಯಲಕ್ತೊವಿಚ್ ಪಿಸೆಮ್‌ಸ್ಕಿ (೧೮೨೦–೮೧) ಎಂಬ ಸಂದೇಹವಾದಿ; ನಿಕೊಲಯ್ ಸೆಮೆನೋವಿಚ್ ಲೈಯೆಸ್ಕೊವ್ (೧೮೩೧ – ೯೫) ಎಂಬ ಕಾದಂಬರಿಕಾರ ಹಾಗೂ ಪ್ರಬಂಧಕಾರ – ಈ ಮುಂತಾದವರು ಹುಟ್ಟಿದ ಅವಧಿ ಮಹಾಲೇಖಕರಿದ್ದ ಅದ್ಭುತವಾದ ಕಾಲ. ಸಾಮಾಜಿಕ ಹಾಗೂ ಪೌರಪ್ರಜ್ಞೆ ಸಾಹಿತ್ಯದಲ್ಲಿ ಅಭಿವ್ಯಕ್ತವಾದ ಕಾಲ. ಈ ಕಾಲದಲ್ಲಿ ರೈತ ಕಾರ್ಮಿಕರ ಬಗ್ಗೆ, ಶ್ರಮಜೀವಿಗಳ ಬಗ್ಗೆ ಸಹಾನುಭೂತಿ ಬೆಳೆಯಿತು.

ಅಂತೋನ್ ಪಾವ್ಲೊವಿಚ್ ಚೆಕಾಫ್ (೧೮೬೦–೧೯೦೪) ಬರೆಯಲಾ ರಂಭಿಸಿದ್ದು ೧೮೮೦ರ ಸುಮಾರಿನಲ್ಲಿ, ರಷ್ಯನ್ ಸಾಹಿತ್ಯ ಲೋಕವನ್ನು ಒಂದು ಬಗೆಯ ಮ್ಲಾನತೆ ಆವರಿಸಿದ್ದ ಕಾಲದಲ್ಲಿ. ಚೆಕಾಫ್ ಮಾಸ್ಕೊದಲ್ಲಿ ವೈದ್ಯ ಶಿಕ್ಷಣವನ್ನು ಪಡೆಯುತ್ತಿದ್ದ. ಮೊದಲಲ್ಲಿ ಹಾಸ್ಯ ಕಥೆಗಳನ್ನು ಬರೆಯುತ್ತಿದ್ದ. ಅನಂತರ ಬರೆದ ನಾಟಕ, ಸಣ್ಣಕಥೆಗಳಲ್ಲೂ ಈ ಹಾಸ್ಯಾಭಿರುಚಿ ಹರಿಯಿತು. ಮಾಸ್ಕೊದ ಆರ್ಟ್ ಥಿಯೇಟರ್‌ಗೆ ಬೇಕಾದ ನಾಟಕಗಳನ್ನು ಬರೆಯತೊಡಗಿದ. ದ ಗಲ್, ಅಂಕಲ್‌ವಾನ್ಯಾ, ದ ತ್ರೀ ಸಿಸ್ಟರ್ಸ್, ದ ಚೆರಿ ಆರ್ಚ್‌ರ್ಡ್ ಎಂಬ ಉತ್ಕೃಷ್ಟ ನಾಟಕಗಳು ಬಂದವು. ಚೆಕಾಫ್ ದೊಡ್ಡ ಭರವಸೆಯನ್ನು ನೀಡಿದ. ಆದರೆ ಕ್ಷಯರೋಗದಿಂದ ಅಕಾಲ ಮರಣಕ್ಕೀಡಾದ.

ಸಾಹಿತ್ಯದ ಬೆಳವಣಿಗೆಗೆ ಉತ್ಸಾಹ – ಪ್ರೋತ್ಸಾಹಗಳಿಲ್ಲದೆ ಕುಗ್ಗಿದ ಈ ಕಾಲದಲ್ಲಿ ಉತ್ತಮ ಸಾಹಿತ್ಯ ಸೃಷ್ಟಿಗೆ ಪ್ರಬಲವಾದ ಬೇರೊಂದು ಪ್ರೇರಣೆ ಬೇಕಿತ್ತು. ೧೮೯೦ರ ದಶಕದ ನಡುವೆ ತಲೆಯೆತ್ತತೊಡಗಿದ ಮಾರ್ಕ್ಸ್‌ವಾದ ಕೃಷಿಕ ಜಗತ್ತಿನಿಂದ ಕಾರ್ಖಾನೆಗಳ ಕಾರ್ಮಿಕ ಜಗತ್ತಿನ ಕಡೆ ದೃಷ್ಟಿ ಹರಿಸಿ ಹೊಸ ಯುಗದ ಉದಯವನ್ನು ಸೂಚಿಸಿತು. ಈ ಬದಲಾವಣೆಯ ಪ್ರವರ್ತಕ ಮ್ಯಾಕ್ಸಿಂಗಾರ್ಕಿ (ಅಲೆಕ್ಸಿ ನಿಕಲಯೆವಿಚ್ ಪಿಸೆಷ್‌ಕಾಪ್, ೧೮೬೮–೧೯೩೬). ಈತ ನಿಜ್ನಿನವ್ ಗೊರೊದ್‌ನ

ಜೋಪಡಿಹಟ್ಟಿಯಲ್ಲಿ ಹುಟ್ಟಿ ಬೆಳೆದ. ಇತ್ತ ಕೃಷಿಕರ ನಿಷ್ಕ್ರಿಯೆ ಅತ್ತ ಬುದ್ಧಿಜೀವಿಗಳ ನಿಷ್ಕ್ರಿಯೆ, ಈ ಎರಡನ್ನೂ ತುಚ್ಛೀಕರಿಸಿ ಕೂಲಿಕಾರ ದೀನದಲಿತರ ಬೆಂಬಲಿಗನಾಗಿ ಕಥೆ ಬರೆದ. ಈ ಕಥೆಗಳ ಹೊಸತನ, ಹೊಸ ಆಲೋಚನೆ ಜನರ ಮನಸೆಳೆದವು. ಸಾಮಾಜಿಕ ಸಮತಾವಾದ, ಕ್ರಾಂತಿವಾದಗಳನ್ನು ಅನುಮೋದಿಸಿ ಬರೆದ ಕದಂಬರಿಗಳು ಸಣ್ಣಕಥೆಗಳಷ್ಟು ಚೈತನ್ಯಶೀಲವಾಗಲಿಲ್ಲ. ದ ಲೋಯರ್ ಡೆಪ್ತ್ ಎಂಬ ನಾಟಕ ತುಂಬಾ ಜನಪ್ರಿಯವಾಯಿತು. ೧೯೧೩ರಲ್ಲಿ ಶೈಲಿಯು ಬದಲಾಗಿ ಚೈಲ್ಡ್‌ಹುಡ್, ಎಮಾಂಗ್ ಪೀಪಲ್, ಮೈ ಯೂನಿವರ್ಸಿಟಿ ಡೇಸ್ ಎಂಬ ಆತ್ಮಕಥಾರೂಪದ ಮೂರು ಉತ್ಕೃಷ್ಟ ಗ್ರಂಥಗಳು ಬಂದವು. ೧೯೧೭ ರಲ್ಲಿ ರಷ್ಯ ಕ್ರಾಂತಿಯಾದಾಗ ರಷ್ಯದ ಪ್ರಾಚೀನ ಸಂಸ್ಕೃತಿಯ ರಕ್ಷಣೆಗೆ ಕಂಕಣತೊಟ್ಟುನಿಂತ. ಸಮಾಜವಾದದ ಹೊಸಯುಗದ ಸಾಹಿತಿಯಾದರೂ ತನ್ನ ಕೊನೆಯ ಕಾದಂಬರಿ ಲೈಫ್ ಆಫ್ ಕ್ಲಿಮ್ ಸಾಮಗಿನ್‌ನಲ್ಲಿ ಕ್ರಾಂತಿಪೂರ್ವದ ರಷ್ಯದ ಚಿತ್ರವನ್ನೇ ಕೊಟ್ಟಿದ್ದಾನೆ.

ಲಿಯೊನಿದ್ ನಿಕಲಯೆವಿಚ್ ಆಂದ್ರೆಯೆವ್ (೧೮೭೧-೧೯೧೯) ಅತ್ಯಂತ ಜನಪ್ರಿಯ ಲೇಖಕ. ಜೀವನದ ವಿಫಲತೆ, ಶೂನ್ಯತೆಗಳನ್ನೇ ಚಿತ್ರಿಸುವ ಲೇಖಕರಲ್ಲಿ ಅಗ್ರಗಣ್ಯ, ಇತರ ಹಲವಾರು ಲೇಖಕರು ಗಾರ್ಕಿಯಿಂದ ಪ್ರಭಾವಿತರಾದರು. ಅಲೆಗ್ಸಾಂಡರ್ ಇವ್ಯಾನೊವಿಚ್ ಕುಪ್ರಿನ್ (೧೮೭೦-೧೯೩೯) ಯಾವೊಂದು ಧ್ಯೇಯ ಆದರ್ಶಗಳ ಗೋಜಿಲ್ಲದೆ ಸಂತೋಷವಾಗಿ ಓದಿಸಿಕೊಂಡು ಹೋಗುವ ಹಲವಾರು ಬಗೆಯ ಪುಸ್ತಕಗಳನ್ನು ಬರೆದು ಜನಪ್ರಿಯನಾದ. ಇವ್ಯಾನ್ ಅಲೆಕ್ಸೆಯೆವಿಚ್ ಬ್ಯೂನಿನ್ (೧೮೭೦) ಈ ಕಾಲದ ದೊಡ್ಡ ಸಾಹಿತಿ. ದ ವಿಲೇಜ್ ಎಂಬ ಕಾದಂಬರಿಯಲ್ಲಿ ಜಮೀನ್ದಾರಿ ಪದ್ಧತಿ ನಶಿಸಿಹೋಗುತ್ತಲೇ ಬದಲಾದ ಹೊಸ ಸಮಾಜವನ್ನು ಚಿತ್ರಿಸುತ್ತಾನೆ. ಈತನ ದ ಜೆಂಟ್ಲ್‌ಮನ್ ಫ್ರಮ್ ಸ್ಯಾನ್‌ಫ್ರಾನ್ಸಿಸ್ಕೊಗೆ ನೊಬೆಲ್ ಬಹುಮಾನ ಬಂದಿತು. ಮಿಹೈಲ್ ಪೆಟ್ರೋವಿಚ್ ಆರ್ಟ್ಸಿಬಾಷೆವ್ (೧೮೭೮-೧೯೨೭) ಸಮಸ್ತ ಯೂರೋಪನ್ನೇ ಬಿರುಗಾಳಿಯಂತೆ ಆವರಿಸಿದ ಸ್ಯಾನಿನ್ ಗ್ರಂಥದಂಥಹ ಲೈಂಗಿಕ ಕಥೆಗಳನ್ನು ಬರೆದ.

ಮಾರ್ಕ್ಸ್‌ತತ್ತ್ವದಿಂದ ಪ್ರಭಾವಿತರಾಗದ ಲೇಖಕರು ಸಾಹಿತಿಗಳನ್ನು ನಿರ್ಬಂಧಿಸಿದ್ದ ಸಮಾಜೋದ್ಧಾರ ಉದ್ದೇಶಗಳ ಸಂಕೋಲೆಗಳನ್ನು ಕಿತ್ತೆಸೆದು ಕಲೆಗಾಗಿ ಕಲೆ ಎಂಬ ನಿಲುವನ್ನು ತಳೆದರು. ರಷ್ಯದ ಬದುಕಿನ ರೀತಿಯಲ್ಲಿ ಫ್ರೆಂಚ್ ಮಾದರಿ ಸಾಂಕೇತಿಕ ಬರೆವಣಿಗೆ ಸಮೃದ್ಧ ಸಾಮಾಗ್ರಿಯನ್ನು ಕಂಡರು. ಬರೆವಣಿಗೆಯ ತಂತ್ರ, ಶೈಲಿಗಳನ್ನು ಉತ್ತಮಗೊಳಿಸಿದರು. ಪ್ರಾದೇಶಿಕತೆ, ರಾಷ್ಟ್ರೀಯತೆಗಳ ಸೀಮಾರೇಖೆಗಳನ್ನು ದಾಟಿ ತ್ರಿಕಾಲಾಬಾಧಿತ - ಸಾರ್ವತ್ರಿಕ ವಸ್ತುಗಳನ್ನು ಬರೆಹಕ್ಕೆ ಆರಿಸಿಕೊಂಡರು.

ಈ ಬಗೆಯ ಸಾಹಿತಿಗಳಲ್ಲಿ ಹೆಸರಿಸಬಹುದಾದವನು ಡಿಮಿಟ್ರಿ ಸೆರ್ಗೆಯೆವಿಚ್ ಮೆರೆಜ್‌ಕೊವ್‌ಸ್ಕಿ (೧೮೬೬-೧೯೪೨). ಕ್ರೈಸ್ಟ್ ಅಂಡ್ ಆ್ಯಂಟಿ ಕ್ರೈಸ್ಟ್ ಎಂಬ ಕಾದಂಬರಿ ತ್ರಯ ಸರಣಿಯನ್ನು (ದ ಡೆತ್ ಆಫ್ ಗಾಡ್ಸ್, ದ ರಿಸರೆಕ್ಷನ್ ಆಫ್

ದ ಗಾಡ್ಸ್, ಪೀಟರ್ ಅಂಡ್ ಅಲೆಕ್ಸಿ) ಬರೆದ. ಬರೆವಣಿಗೆಯ ತೀರಾ ವೈಚಾರಿಕವಾಗಿದ್ದು ಆಲೋಚನೆಗಳು ಹಲವೆಡೆ ಅಸ್ಪಷ್ಟವಾಗಿದೆ. ದಿಮಿತ್ರಿಯೆವಿಚ್ ಬಲ್ಮಾಂಟ್ (೧೮೬೭–೧೯೪೩), ವ್ಯಾಲೆರಿ ಯಕೊವ್‌ಲೆವಿಚ್ ಬ್ರಿಯುಸೊವ್ (೧೮೭೩–೧೯೨೪) ಉತ್ತಮ ದರ್ಜೆಯ ಕವಿಗಳು. ಬ್ರಿಯುಸೊವ್‌ನ ಕವ ಸಂಕಲನಗಳಾದ ದ ರಿಪಬ್ಲಿಕ್ ಆಫ್ ದ ಸದರ್ನ್ ಕ್ರಾಸ್, ದ ಫೈರಿ ಏಂಜಲ್, ಆನ್ ದ ಆಲ್ಟರ್ ಆಫ್ ವಿಕ್ಟರೀಸ್ – ಕವಿಯ ಕಲ್ಪನೆಯ ಹವೆಯನ್ನು ತೋರಿಸುತ್ತದೆ.

ಬೋರಿಸ್ ನಿಕಲಯೆವಿಚ್ ಬ್ಯುಗಾಯೆವ್ (೧೮೮೦–೧೯೩೪) ಪ್ರತಿಭಾವಂತ ಕವಿ, ವಿಮರ್ಶಕ. ರುಡುಲ್ಫ್ ಸ್ಟೇನರ್‌ನ ಮಾನವಶಾಸ್ತ್ರ ಅಧ್ಯಯನದ ಗೀಳು ತುಂಬಿದ್ದ ಈತನ ಬರೆಹಗಳು ವಿದ್ಯಾವಂತರಿಗೂ ಅರ್ಥವಾಗದಷ್ಟು ಕ್ಲಿಷ್ಟವಾಗಿವೆ. ಈತನ ದ ಸಿಲ್ವರ್ ಡೊವ್ ಎಂಬ ಕೃತಿ ರಷ್ಯನ್ ಸಮಾಜದಲ್ಲುಂಟಾದ ಪೂರ್ವ ಪಶ್ಚಿಮ ಸಂಸ್ಕೃತಿಗಳ ಘರ್ಷಣೆಯ ಸೊಗಸಾದ ಅಧ್ಯಯನವಾಗಿದೆ.

ಕವಿ, ಅನುಭಾವಿ, ತತ್ತ್ವಜ್ಞಾನಿ – ವ್ಲಾದಿಮಿರ್ ಸೆರ್ಗೆಯೆವಿಚ್ ಸೋಲೊಯೆವ್‌ನ (೧೮೫೩–೧೯೦೦) ಕೃತಿ 'ತ್ರೀ ಕಾನ್ವರ್ಸೇಷನ್ಸ್ ವಿಥ್ ದ ವಿಜನ್ ಆಫ್ ಆ್ಯಂಟಿ ಕ್ರೈಸ್ಟ್‌ವ್‌ಸಿ ಗಮನಾರ್ಹ ಗದ್ಯಗ್ರಂಥ. ಚಿರಂತನ ಸ್ತ್ರೀತ್ವವನ್ನು ಸಂಕೇತಿಸುವ ಸಫೈಯಳಿಗೆ (ಈತನ ಕಾಲ್ಪನಿಕ ಸಖಿ) ಬರೆದ ಅನುವಾದ ರೀತಿಯ ಪ್ರೇಮಗೀತೆಗಳು ಸಾಂಕೇತಿಕ ಪಂಥದ ಬೆಳವಣಿಗೆಯ ಮೇಲೆ ಪ್ರಬಲವಾದ ಪ್ರಭಾವ ಬೀರಿದವು. ಆ ಪಂಥದ ಅತಿ ದೊಡ್ಡ ಕವಿ ಅಲೆಗ್ಸಾಂಡರ್ ಅಲೆಕ್ಸಾಂಡ್ರೊವಿಚ್ ಬ್ಲಾಕ್ (೧೮೮೦–೧೯೨೧) ಈ ಪ್ರಭಾವದಲ್ಲಿ ವಿಕಾಸಗೊಂಡವನು. ಆತ ಕನಸು ಕಾಣುತ್ತಿದ್ದುದೂ ಸಫೈಯಳಂತೆ ಚಿರಂತನ ಸ್ತ್ರೀತ್ವ ಸಂಕೇತವಾದ ಕಾಲ್ಪನಿಕ ಸುಂದರಿಯನ್ನೇ. ಫೇರ್‌ಲೇಡಿ, ಮುದ್ದು ಗೆಳತಿ, ಚೆಲುವೆ ಎಂದು ಆಕೆಯನ್ನು ಕಲ್ಪಿಸಿಕೊಳ್ಳುವ ಕವಿ ರಷ್ಯ ದೇಶವನ್ನು ದೇವಿ ರೂಪದಲ್ಲಿ ದರ್ಶಿಸಿಕೊಂಡಾಡುತ್ತಾನೆ. ದ ಟ್ವೆಲ್ವ್ ಎಂಬ ಕಾವ್ಯದಿಂದ ರಷ್ಯ ಕ್ರಾಂತಿಯನ್ನು ಸ್ವಾಗತಿಸಿದ. ಇದೊಂದು ರಷ್ಯನ್ ಸಾಹಿತ್ಯದ ಶ್ರೇಷ್ಠ ಕಾವ್ಯ. ದ ಸಿಥಿಯನ್ಸ್ ಎಂಬ ಕಾವ್ಯ ರಷ್ಯದ ಸ್ನೇಹ ಗಳಿಸಿರಿ, ಇಲ್ಲವಾದರೆ ಪರಿಣಾಮ ಒಳ್ಳೆದಾಗದು ಎಂದು ಪಶ್ಚಿಮ ರಾಷ್ಟ್ರಗಳಿಗೆ ಕೊಡುವ ಎಚ್ಚರಿಕೆ.

ಕ್ರಾಂತಿಗೆ ಕೊಂಚ ಮುನ್ನ ನಾನಾ ಕಾವ್ಯಪಂಥಗಳು ಹುಟ್ಟಿಕೊಂಡಿದ್ದವು. ಸ್ಪಷ್ಟ ಪ್ರತಿಮೆಗಳ, ಇತ್ಯಾತ್ಮಕ ಮನೋಧರ್ಮದ ಕಾವ್ಯಪಂಥದ ನಾಯಕ ನಿಕಲಾಯ್ ಸ್ಟಿಪಾನೊವಿಚ್ ಗುಮಿಲೆವ್ (೧೮೮೮–೧೯೨೧). ಇವನ ವಿವಾಹವಿಚ್ಛೇದಿತ ಪತ್ನಿ ಸುಪ್ರಸಿದ್ಧ ಕವಯಿತ್ರಿ – ಅನ್ನಾ ಅಖ್‌ಮತೊವ್ (೧೮೮೯); ಓಸಿಪ್ ಎಮಿಲಿವಿಚ್ ಮ್ಯಾಂಡೆಲ್ ಸ್ಟಾಮ್, ಅಹಂ – ಸ್ವೇಚ್ಛಾ ಸಂಕೇತಾನುವರ್ತನವಾದಿ ಪಂಥದ ನಾಯಕ ಇಗೊರ್ ಸೆವೆರ್ಯಾನಿನ್ (ಇಗೊರ್ ವ್ಯಾಸಿಲ್ಯವಿಚ್‌ಲಟರಾಫ್, ೧೮೮೭ –೧೯೪೨), ಅರ್ಥಾತೀತ ಕಾವ್ಯ ಪಂಥದ (ಟ್ರಾನ್ಸ್ ಸೆನ್ಸ್) ಕ್ರುಚೊನಿಖ್‌ನ ಕಾವ್ಯ ಒಂದು ಹೊಸ ಪ್ರಯೋಗ; ಅರ್ಥವಾಗದ ಹೊಸ ಪದಗಳನ್ನು ರಚಿಸಿ ಕಾವ್ಯದಲ್ಲಿ

ಬಳಸುವುದು. ಸ್ವೇಚ್ಛಾ – ಸಂಕೇತಾನುವರ್ತನವಾದಿ ಪಂಥದನಾಯಕ ವ್ಲಾದಿಮಿರ್ ಮಯಕೋವ್‌ಸ್ಕಿ (೧೮೯೩–೧೯೩೦) ಕ್ರಾಂತಿಯ ಅನಂತರ ಬೆಳೆದ ಕವಿ. ಒಂದನೆಯ ಮಹಾಯುದ್ಧ ಕಾಲದಲ್ಲಿ ರಷ್ಯ ಮಿತ್ರ ರಾಷ್ಟ್ರಗಳನ್ನು ಬೆಂಬಲಿಸಿದ ಕವಿಗಳು ಬಹುವಿರಳ. ಲಿಯೊನಿದ್ ಆಂದ್ರೆಯೆವ್ ಅಂತಹವರಲ್ಲಿ ಒಬ್ಬ. ಕ್ರಾಂತಿಯಾದಾಗ ಅನೇಕ ಉದಾರವಾದಿ ಕವಿಗಳು ದೇಶವನ್ನು ಬಿಟ್ಟು ಹೋದರು.

ಪೀಟರ್ ನಿಕಲಯೆವಿಚ್ ಕ್ರಾಸ್‌ನೊವ್‌ನ ಫ್ರಮ್ ದ ಟೂ ಹೆಡೆಟ್ ಈಗಲ್ ಟು ದ ರೆಡ್ ಫ್ಲ್ಯಾಗ್ ಎಂಬ (ಕ್ರಾಂತಿಯ ಅನಂತರದ ಸೋವಿಯೆತ್ ಓದುಗರಿಗೆ ಪ್ರಿಯವಾದ) ಪುಸ್ತಕವನ್ನು ಬಿಟ್ಟರೆ ಹೊಸ ಸಮಾಜ ನಿರ್ಮಾಣದಿಂದ ಸ್ಫೂರ್ತಿತವಾದ ಶ್ರೇಷ್ಠ ಸಾಹಿತ್ಯ ರಚನೆಯಾಗದೆಹೋದುದು ಆಶ್ಚರ್ಯದ ಸಂಗತಿ. ಹೊಸಕಾಲದ ಮೊದಲಲ್ಲಿ ಬರೆದವರು ಸಹ ಹಳೆಯ ರಷ್ಯದ ಜೀವನ ಮತ್ತು ಸಂಸ್ಕೃತಿಗಳನ್ನೇ ವೈಭವೀಕರಿಸಿದರು.

೨೦ನೆಯ ಶತಕದ ಮೊದಲ ಮೂರು ದಶಕಗಳಲ್ಲಿ ಇಂಗ್ಲಿಷಿನಲ್ಲಿ ಬರೆಯತೊಡಗಿದ ಸಿರಿನ್ ನೆಬಕೋವ್ (೧೮೯೯), ಆಲ್ಡನೊವ್ (೧೮೮೬), ರೈತ ಕವಿ ಸರ್ಗೆಯೆಸನಿನ್ (೧೮೯೫ –೧೯೨೫), ವ್ಲಾದಿಮಿರ್ ಮಯಕೋವ್‌ಸ್ಕಿ –ಈ ಕೆಲವರನ್ನು ಬಿಟ್ಟರೆ ಹೇಳಿಕೊಳ್ಳುವಂತಹ ಶ್ರೇಷ್ಠ ಸಾಹಿತಿಗಳು ಯಾರು ಬರಲಿಲ್ಲ.

ರಷ್ಯದ ಕ್ರಾಂತಿಯ (೧೯೧೭) ಅನಂತರ ಸಾಹಿತ್ಯ ಮತ್ತು ಕಲೆಗೆ ಸಂಬಂಧಿಸಿದ ಚಿಂತನೆಯಲ್ಲಿಯೇ ಅನೇಕ ಬದಲಾವಣೆಗಳುಂಟಾದವು. ಅನೇಕ ಪ್ರಯೋಗಗಳು ನಡೆದವು. ಇದಕ್ಕೆ ಕಮ್ಯುನಿಸ್ಟ್ ಸಾಹಿತ್ಯ ಅಥವಾ ಕಮ್ಯುನಿಸ್ಟ್ ಕಲೆ ಎನ್ನಬಹುದು. ಸಾಹಿತ್ಯದಲ್ಲಿ ಸಂಪ್ರದಾಯಸ್ಥರು ಒಂದು ಕಡೆ, ಶ್ರಮಜೀವಿಗಳ ಸಂಸ್ಕೃತಿಯ ಪ್ರತಿಪಾದಕರು ಮತ್ತೊಂದು ಕಡೆ ಹೀಗೆ ಎರಡು ಗುಂಪುಗಳಾದವು. ಸರ್ಜೆ ಎಸೆನಿನ್ (೧೮೯೫–೧೯೨೫) ಸಮಷ್ಟಿ ಬೇಸಾಯದಿಂದ ಹಳ್ಳಿಗಳಲ್ಲಿ ಬರಲಿರುವ ಸುಖಸಂತೋಷಗಳನ್ನು ಸಾಂಪ್ರದಾಯಿಕ ರೀತಿಯ ಭಾವಗೀತೆಗಳಲ್ಲಿ ತುಂಬಿದ. ಮಯಕೋವ್‌ಸ್ಕಿ ಹಿಂದಿನ ಸಂಪ್ರದಾಯಗಳನ್ನು ಕಿತ್ತೊಗೆದು, ಮುನ್ನೋಟ ಬೀರಿ ಸಂಘಶಕ್ತಿಯಿಂದ ಶ್ರಮಜೀವಿವರ್ಗ ಬಲಗೊಳ್ಳುವುದೆಂದು ನಂಬಿದ. ರಷ್ಯದಲ್ಲಿ ಅಂತರ್ಯುದ್ಧದ ಹಿಂಸಾಕೃತ್ಯಗಳು, ಗೆರಿಲ್ಲಾ ಯುದ್ಧಗಳ ಬಗ್ಗೆ ಅನೇಕ ಬರೆಹಗಳು ಬಂದವು. ಬುಡೆನ್ನಿಯ ಕೊಸಾಕ್ ಸೈನ್ಯದ ಕತೆಗಳಲ್ಲಿ ಯಥಾರ್ಥತೆ ಹಾಗೂ ನಿರೂಪಣೆಯಲ್ಲಿ ನಾಜೂಕು ಇದೆ. ಬೋರಿಸ್ ಪಿಲ್ನಕ್‌ನ ಕತೆಗಳಲ್ಲಿ ಅಂತರ್ಯುದ್ಧದ ಕಾಲದಲ್ಲಿ ಹೇಗೆ ಸಮಾಜ ಅವನತಿಗಿಳಿಯಿತು ಎಂದು ತಿಳಿಯುತ್ತದೆ. ಹೊಸದು ಹಳತರ ನಡುವಣ ತೊಳಲಾಟ, ಪ್ರಾಜ್ಞರು ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವುದರಲ್ಲಿ ಎದುರಿಸಿದ ದುರಂತ ಸಮಸ್ಯೆಗಳನ್ನು ಕಾನ್‌ಸ್ಟಾನ್‌ಟಿನ್ ಫೆಡಿನ್ (೧೮೯೨) ಚಿತ್ರಿಸಿದ್ದಾನೆ. ಈ ಬರೆಹಗಾರರ ಮೇಲೆ ಟಾಲ್‌ಸ್ಟಾಯ್,

ದಸ್ತಾಯೇವ್‌ಸ್ಕಿ, ಚೆಕಾಫ್ – ಇವರುಗಳ ಪ್ರಭಾವ ಸ್ಪಷ್ಟವಾಗಿದೆ. ಬರೆವಣಿಗೆಯ ಮೇಲೆ ಸರ್ಕಾರದ ಹತೋಟಿ ಇಲ್ಲದಿದ್ದಾಗ ವಿಡಂಬನೆ ಬೆಳೆದು ಸೋವಿಯೆತ್ ಜೀವನದ ನ್ಯೂನತೆಗಳನ್ನು ವ್ಯಾಲಂಟಿನ್ ಕಟಾಯೆವ್ (೧೮೯೭) ಮತ್ತು ಮೈಕೇಲ್ ಜೋರೊಸೆಂಕೋ ನಿರೂಪಿಸಿದ್ದಾರೆ.

ಆಧುನಿಕ ಕಮ್ಯುನಿಸ್ಟ್ ಸಾಹಿತ್ಯದ ಎರಡನೆಯ ಮೈಲಿಗಲ್ಲು ರಷ್ಯದ ಪಂಚವಾರ್ಷಿಕ ಯೋಜನೆಯ ಯಶಸ್ಸಿಗೆ ಸಂಬಂಧಿಸಿದ ಸಾಹಿತ್ಯ. ಇಲ್ಲಿಯೂ ಬರೆಹಗಾರರಲ್ಲಿ ಎರಡು ಬಣಗಳು. ಕ್ರಿಯಾತ್ಮಕ ಸ್ವಯಂ ನಿರ್ಧಾರವಾದಿಗಳೊಂದು ಗುಂಪು. ಎಡಪಕ್ಷದವರು ಮತ್ತೊಂದು ಗುಂಪು. ಪ್ರಥಮ ಪಂಚವಾರ್ಷಿಕ ಯೋಜನೆಯ ಪ್ರಗತಿಗೆ ಎಲ್ಲಾ ರೀತಿಯ ಬೆಂಬಲದ ಅಗತ್ಯವಿದ್ದಿತು. ಕಲೆ, ಸಾಹಿತ್ಯ ಕೂಡ ರಾಷ್ಟ್ರನಿರ್ಮಾಣ, ಸಮಷ್ಟಿ ಬೇಸಾಯ ಇವುಗಳ ಯಶಸ್ಸನ್ನು ಹಾಡಬೇಕಾಯಿತು. ಫೆಡಾರ್ ಗ್ಲಾಡ್‌ಕೋವ್ (೧೮೮೩–೧೯೫೮) ಹಾಗೂ ಮೈಕೇಲ್ ಷೊಲೋಖೋವ್ (೧೯೦೫–) ಹೀಗೆ ಬರೆದವರಲ್ಲಿ ಮುಖ್ಯರು. ಷೊಲೋಖೋವ್‌ನ ಹಾರ್ವೆಸ್ಟ್ ಆನ್ ದ ಡಾನ್ ಎಂಬ ಕಾದಂಬರಿಯಲ್ಲಿ ಸಮಷ್ಟಿ ಬೇಸಾಯವನ್ನು ವ್ಯವಸ್ಥೆ ಮಾಡುವುದರಲ್ಲಿ ನಾಟಕ ಸಹಿಸಿದ ಜಯಾಪಜಯಗಳು ನಿರೂಪಿತವಾಗಿವೆ. ಲಿಯೊನಿದ್ ಲಿಯೊನಿವ್ (೧೮೯೯) ಸಾಟ್ ಎಂಬ ಕಾದಂಬರಿಯಲ್ಲಿ ಸಾಮಾಜಿಕ ಕಟ್ಟಳೆಗಳಿಗೆ ಬದ್ಧರಾಗಲು ವ್ಯಕ್ತಿಗಳು ನಡೆಸುವ ಹೋರಾಟವನ್ನು ಚಿತ್ರಿಸಿದ್ದಾನೆ. ಪಂಚವಾರ್ಷಿಕ ಯೋಜನೆಯನ್ನು ವಸ್ತುವಾಗುಳ್ಳ ಅನೇಕ ಪದ್ಯ, ನಾಟಕಗಳಿದ್ದರೂ ಅವೆಲ್ಲ ಪ್ರಚಾರ ಸಾಹಿತ್ಯಗಳು.

ಸಾಹಿತ್ಯಗತಿ ಸಮಾಜವಾದದ ಯಥಾರ್ಥತೆಯನ್ನು ಬಣ್ಣಿಸುವುದೇ ಆಯಿತು. ಆದರೂ ರಷ್ಯದ ಶ್ರಮಜೀವಿಗಳಿಗೆ ಸಹಾನುಭೂತಿ ತೋರುವ ಬರೆಹಗಾರರ ಕೇಂದ್ರ ಸಂಸ್ಥೆ ಆರಂಭವಾಗಿ ಅದು ಸಾಹಿತ್ಯದ ರಾಜಕೀಯಕ್ಕೆ ಹಾಗೂ ಪಕ್ಷದ ಉದ್ದೇಶಗಳಿಗೆ ಹೊಂದಿಕೊಂಡಿರಬೇಕೆಂಬುದು ಸಾರಿದ್ರ. ಆದರೂ ಬರೆಹಗಾರರಿಗೆ ಸ್ವಾತಂತ್ರ್ಯವಿದ್ದುದರಿಂದ ಷೊಲೋಖೋವ್, ಲಿಯೊನಿವ್ ಮೊದಲಾದವರ ಕಾದಂಬರಿ ಗಳಲ್ಲಿ ಸಮಾಜವಾದದ ನ್ಯೂನತೆಗಳು ಎದ್ದು ಕಾಣುತ್ತವೆ. ಷೊಲೋಖೋವ್‌ನ ಕಾದಂಬರಿಯಲ್ಲಿ ನಾಯಕ ತನ್ನ ಅಚಲ ನಿರ್ಧಾರಗಳನ್ನು ಬದಲಾಯಿಸದೆ ಇದ್ದು ದುರಂತದಲ್ಲಿ ಕೊನೆಗಾಣುತ್ತಾನೆ. ಲಿಯೊನಿವ್‌ನ ರೋಡ್ ಟು ದಿ ಓಷನ್ ಎಂಬ ಕಾದಂಬರಿಯಲ್ಲಿ ನಾಯಕನಿಗೆ ಕಮ್ಯೂನಿಸಂನಲ್ಲಿ ಅಚಲ ಶ್ರದ್ಧೆಯಿದ್ದರೂ ತಾನು ಮಾಡುತ್ತಿರುವ ತ್ಯಾಗದ ಬಗ್ಗೆ ಸಂತೋಷವಿಲ್ಲದೆ, ಆ ನೆನಪಿನಿಂದಲೇ ದುಃಖಿಯಾಗುತ್ತಾನೆ. ಫೆರ್ಡಿನ್‌ನ ಕಾದಂಬರಿಗಳಲ್ಲಿ ಪಕ್ಷದ ಪ್ರಚಾರ ಉತ್ಪ್ರೇಕ್ಷೆಯ ಬಗ್ಗೆ ಜುಗುಪ್ಸೆಯ್ನು ಕಾಣಬಹುದು. ಈ ಧೋರಣೆಗೆ ವಿರುದ್ಧವಾಗಿ ಪಕ್ಷದ ಪ್ರಣಾಳಿಕೆಯನ್ನೇ ಎತ್ತಿ ಹಿಡಿದವರೆಮದರೆ ಆಸ್ಟ್ರೋವ್‌ಸ್ಕಿ, ಕಟೌಯೆವ್ ಮತ್ತು ಇಲ್ಯಾ ಎರ್ಹೆನ್‌ಬರ್ಗ್. ಆಸ್ಟ್ರೋವ್‌ಸ್ಕಿಯ ಹೌ ಸ್ಟೀಲ್ ವಾಸ್ ಟೆಂಪರ್ಡ್

ಎಂಬ ಕಾದಂಬರಿಯಲ್ಲಿ ನಾಯಕ ಆದರ್ಶ ಕಮ್ಯೂನಿಸ್ಟ್, ಧಿರೋದಾತ್ತ ವ್ಯಕ್ತಿ. ಕಮ್ಯೂನಿಸ್ಟ್ ತತ್ತ್ವದ ವಿರುದ್ಧ ಬರೆದವರನ್ನು ನಿರ್ನಾಮ ಮಾಡಿದಾಗ ಹಲವು ಪ್ರಮುಖ ಬರೆಪಗಾರರು ಮೂಕ ವಿಸ್ಮಿತರಾದರು. ಇನ್ನು ಕೆಲವರು ಚರಿತ್ರೆಗೆ ಮಾರ್ಕ್ಸಿಸ್ಟ್ ಬಣ್ಣಬಳಿದು ಬರೆದರು.

ಎರಡನೆಯ ಮಹಾಯುದ್ಧ ಅದರಲ್ಲೂ ಜರ್ಮನರಿಂದ ರಷ್ಯದ ಆಕ್ರಮಣ ಸುಪ್ತ ರಾಷ್ಟ್ರ ಪ್ರೇಮವನ್ನು ಬಡಿದೆಬ್ಬಿಸಿತು. ಸ್ಟಾಲಿನ್ ಗ್ರಾಡ್ ಎಂಬ ಆಯಕಟ್ಟಿನ ನಗರವನ್ನು ವಶಪಡಿಸಿಕೊಳ್ಳಲು ಜರ್ಮನರು ಅವ್ಯಾಹತವಾಗಿ ನಡೆಸಿದ ದಾಳಿ, ರಷ್ಯನರು ಅವರನ್ನು ಎದುರಿಸಿದ ಪರಾಕ್ರಮ ಬೋರಿಸ್ ಗಾರ್ಬಟೋವ್‌ನ (೧೯೦೮-೫೪) ಕಾದಂಬರಿಯಲ್ಲಿದೆ. ಹೀಗೆಯೇ ಜರ್ಮನ್ ಆಕ್ರಮಿತ ಪ್ರದೇಶಗಳಲ್ಲಿ ರಷ್ಯನ್ ಯುವಕ ಸಂಘದ ಭೂಗತ ಚಟುವಟಿಕೆಗಳು, ಗೆರಿಲ್ಲಾಯುದ್ಧಗಳನ್ನು ಕುರಿತ ಕಥೆ, ನಾಟಕಗಳು ಅಪಾರವಾಗಿವೆ.

ಯುದ್ಧಾನಂತರದಲ್ಲಿ ಸ್ಟಾಲಿನ್ ತನ್ನ ಮುಷ್ಟಿಯನ್ನು ಬಿಗಿಗೊಳಿಸಿ ಸಾಹಿತ್ಯ ಪ್ರವೀಣ ಸ್ಡನೋವ್‌ನ ಸಲಹೆಯಂತೆ ಎಲ್ಲಾ ಕುಶಲತೆಗಳೂ ರಾಜಕೀಯಕ್ಕೆ, ಪಕ್ಷದ ಪ್ರಣಾಳಿಕೆಗೆ ಬದ್ಧವಾಗಿರಬೇಕೆಂದು ರೂಪಿಸಿದ. ಎಲ್ಲಾ ಕಲೆಗಳಲ್ಲಿ, ಬೌದ್ಧಿಕ ಪ್ರದರ್ಶನಗಳಲ್ಲಿ ಪಕ್ಷದ ಹಿಡಿತ ಬಿಗಿಯಾಗಿತ್ತು. ಯುದ್ಧಾನಂತರದ ರಾಷ್ಟ್ರ ನಿರ್ಮಾಣ, ಸೈನಿಕರ ಪುನರ್ವಸತಿ, ಪಶ್ಚಿಮ ಯೂರೋಪ್ ಹಾಗೂ ಅಮರಿಕ ಸಂಯುಕ್ತ ಸಂಸ್ಥಾನಗಳ ಬಗ್ಗೆ ದ್ವೇಷ ಇವು ಸಾಹಿತ್ಯದ ವಸ್ತುಗಳಾದವು. ಯುದ್ಧವನ್ನೇ ವಸ್ತುವಾಗಿರಿಸಿಕೊಂಡ ಬೋರಿಸ್ ಪೋಲೆವಾಯ್‌ನ (೧೯೦೮) ಎ ಸ್ಟೋರಿ ಅಬೌಟ್ ಎ ರಿಯಲ್ ಮ್ಯಾನ್ ಹಾಗೂ ಇಲ್ಯಾ ಎರ್ಹೆನ್‌ಬರ್ಗ್‌ನ ಸ್ಟಾರ್ಮ್ ಮುಖ್ಯವಾದವು. ಸಾಹಿತ್ಯದಲ್ಲಿ ಈ ದಶಕ ಬರಗಾಲವೆಂದೆನ್ನಬಹುದು.

ಸ್ಟಾಲಿನ್‌ನ ನಿಧನ ರಷ್ಯದಲ್ಲಿ ಆಂದೋಲನವನ್ನೆಬ್ಬಿಸಿತು. ಅದುವರೆಗೂ ಮೂಕರಾಗಿದ್ದ ಜನ ಕಟು ವಿಮರ್ಶಕರಾದರು. ೧೯೫೩ರ ಅನಂತರ ಬಂದ ಲಿಯೋನಿಡ್ ಜೋರಿನ್‌ನ ನಾಟಕ ದ ಗೆಸ್ಟ್ಸ್ ವರ್ಗರಹಿತ ಸಮಾಜ ಇಲ್ಲವೆಂದು ಪ್ರತಿಭಟಿಸಿದ. ಎರ್ಹೆನ್‌ಬರ್ಗ್‌ನ ತೋ (ನೀರ್ಗಲ್ಲು) ಎಂಬ ನಾಟಕದಲ್ಲಿ ಸ್ಟಾಲಿನ್ ಕಾಲದಲ್ಲಿ ಕಲಾಕಾರರ ದುರಂತವನ್ನು ಚಿತ್ರಿಸಿದ. ಆದರೂ ರಸಾಭಿಜ್ಞತೆಯನ್ನು ಮೆಟ್ಟಿ ನಿಂತಿತು ಕಮ್ಯೂನಿಸ್ಟ್ ಆದರ್ಶತತ್ತ್ವ. ಪಕ್ಷದ ಇಪ್ಪತ್ತನೆಯ ಸಮ್ಮೇಳನದಲ್ಲಿ ಕ್ರುಶ್ಚೇವ್ ಭಾಷಣ ಮಾಡಿ, ಸ್ಟಾಲಿನ್‌ನ ತಪ್ಪುಗಳನ್ನು ಬಯಲಿಗೆಳೆದು ಖಂಡಿಸಿ, ವ್ಯಕ್ತಿಪೂಜೆಯನ್ನು ಅಲ್ಲಗಳೆದ. ಇದರಿಂದ ಬರೆಹಗಾರರು ಸ್ಫೂರ್ತಿ ಹೊಂದಿ ಪದ್ಯ, ಕತೆ, ಕಾದಂಬರಿಗಳಲ್ಲಿ ಸೋವಿಯೆತ್ ಜೀವನದ ಅವಲಕ್ಷಣಗಳನ್ನು ಟೀಕಿಸಿ, ಪಕ್ಷದ ಎಲ್ಲವೂ ತನಗೆ ತಿಳಿದಿದೆಯೆಂಬ ಧೋರಣೆಯನ್ನು ಖಂಡಿಸಿದರು. ಇದು ಕಮ್ಯೂನಿಸಂ ಆದರ್ಶ ಮತ್ತು ಅನುಕರಣೀಯವೆಂಬ ಪ್ರಚಾರಕ್ಕೆ ವಿರುದ್ಧವಾಗಿತ್ತು. ಪಕ್ಷಕ್ಕೆ ಇದು ಸಹಿಸದೆ ೧೯೫೬ ರಲ್ಲಿ ಹಂಗೇರಿಯ ಕ್ರಾಂತಿಯ ಅನಂತರ ಬರೆಹಗಾರರ ಸ್ವಾತಂತ್ರ್ಯದ ಮೇಲೆ ನಿರ್ಬಂಧಗಳನ್ನು ಹೇರಿತು.

ರಷ್ಯದ ಸಾಧನೆಯನ್ನು ಪ್ರಶ್ನಿಸುವ ಹಾಗೂ ರಷ್ಯನ್ ಯುವ ಜನತೆಯ ನಿರಾಶೆಯನ್ನು ಪ್ರತಿಬಿಂಬಿಸುವ ಬೋರಿಸ್ ಪಾಸ್ತರ್‌ನಾಕ್‌ನ ಕಾದಂಬರಿ ಡಾಕ್ಟರ್ ಜಿವಾಗೋ ಇಟಲಿಯಲ್ಲಿ ಪ್ರಕಟವಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಶಂಸೆ ಪಡೆದರೂ ಅದನ್ನು ರಷ್ಯದಲ್ಲಿ ಖಂಡಿಸಲಾಯಿತು. ಸಮಗ್ರ ಲೇಖಕರ ಮೂರನೆಯ ಸಮ್ಮೇಳನದಲ್ಲಿ (೧೯೫೯) ಕ್ರುಶ್ಚೇವ್ ಕೆಲಸಗಾರರ ಕಮ್ಯೂನಿಸ್ಟ್ ಶಿಕ್ಷಣದಲ್ಲಿ ಪಕ್ಷಕ್ಕೆ ಹಾಗೂ ಸರಕಾರಕ್ಕೆ ಬರೆಹಗಾರರ ಬೆಂಬಲ ಕೋರಿದ. ಯೆವ್ತುಷೆಂಕೋ (೧೯೫೩) ಮತ್ತಿತರ ಯುವ ಬರೆಹಗಾರರು ಸ್ಟಾಲಿನ್ ತತ್ತ್ವಗಳ ನಿರ್ನಾಮಕ್ಕೆ ಕರೆಯಿತ್ತರು. ಆದರೆ ಪೂರ್ವಾಚಾರಪ್ರಿಯರು ಪ್ರಗತಿಪರ ಸುಧಾರಣೆಗಳಿಗೆ ಸಮ್ಮತಿಸದೆ ಇದನ್ನು ವಿರೋಧಿಸಿದರು. ಸೊಲ್ಜೆನಿಟ್ಸನ್‌ನ ಕಾದಂಬರಿಗಳು ಪಾಶ್ಚಾತ್ಯ ಜಗತ್ತಿನ ಗಮನವನ್ನು ಸೆಳೆದುಕೊಂಡವು (ಕ್ಯಾನ್ಸರ್‌ವಾರ್ಡ್ ಇತ್ಯಾದಿ).

ಬರೆಹಗಾರರ ನಾಲ್ಕನೆಯ ಸಮ್ಮೇಳನದಲ್ಲಿ (೧೯೬೩) ಪ್ರಗತಿಪರರು ಹಿಮ್ಮೆಟ್ಟಿದರು. ೧೯೬೪ರಲ್ಲು ಕ್ರುಶ್ಚೇವ್ ಪತನದ ಅನಂತರ ಬರೆಹಗಾರರ ಮೇಲೆ ನಿರ್ಬಂಧಗಳು ಬಿಗಿಗೊಂಡವು. ಸಾಹಿತ್ಯವು ಪಕ್ಷ ಹಿತಾಸಕ್ತಿಗಳಿಗೆ ಅನುಗುಣವಾಗಿರಬೇಕೆಂಬವಾದ ಬಲವಾಯಿತು. ಸಾಹಿತ್ಯದ ಪ್ರಕಾರ ಮತ್ತು ವಸ್ತು ನಿರೂಪಣೆಯಲ್ಲಿ ಮಾತ್ರ ಬರೆಹಗಾರರಿಗೆ ಸ್ವಾತಂತ್ರ್ಯವಿರುವುದೆಂದು ಸಾರಲಾಯಿತು. ಆದರೂ ಕೆಲವು ಪ್ರಗತಿಪರ ಬರೆಹಗಾರರು ಸಮಾಜವಾದದ ಯಥಾರ್ಥತೆಯಲ್ಲಿಲ್ಲದ ಸ್ವತಂತ್ರ ವಿಚಾರ ಧಾರೆಯನ್ನು ಆರಂಭಿಸಿದರು. ೧೯೬೬ ರಲ್ಲಿ ಇಬ್ಬರು ಸಾಮಾನ್ಯ ಬರೆಹಗಾರರು ಆಂದ್ರೆ ಸಿನ್ಯವ್‌ಸ್ಕಿ ಮತ್ತು ಯೂಲಿ ಡೇನಿಯಲ್, ರಷ್ಯದ ಹೊರಗಡೆ ಆಬ್ರಾಂ ಟೆರ್ಟ್ಸ್ ಮತ್ತು ನೊಕೋಲಾಯ್ ಆರ್ಜಕ್ ಎಂಬ ಕಾವ್ಯನಾಮಗಳಲ್ಲಿ ರಷ್ಯವನ್ನು ಮಿಥ್ಯಾಪವಾದದಿಂದ ಅವಮಾನಗೊಳಿಸಿದರೆಂಬ ದೂರಿನ ಮೇಲೆ ಸರ್ಕಾರ ಇವರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟಿತು. ಈ ರೀತಿಯ ನಿರ್ಬಂಧಗಳಿಂದ ಸಾಹಿತಿಗಳಿಗೆ ವಿಚಾರ ಸ್ವಾತಂತ್ರ್ಯ ಮತ್ತು ಬರೆಹ ಸ್ವಾತಂತ್ರ್ಯವಿಲ್ಲದೆ ಸಾಹಿತ್ಯ ಸತ್ತ್ವಹೀನವಾಗಿ, ಏಕಮುಖವಾಗಿ, ಸ್ಫೂರ್ತಿರಹಿತವಾಗತೊಡಗಿತು. ಇತ್ತೀಚೆಗೆ ಗೊರ್ಬಚೇವ್‌ನ ಪೆರಿಸ್ತ್ರೋಯಿಕದ ಅನಂತರ ರಷ್ಯನ್ ಸಾಹಿತ್ಯ ಲೋಕದಲ್ಲಿ ಸಾಕಷ್ಟು ಪ್ರಗತಿಪರ ಬದಲಾವಣೆಗಳು ಕಾಣಿಸಿಕೊಳ್ಳತೊಡಗಿದವು. (ಕೆ.ಬಿ.ಪಿ.)

ಕೌಂಟ್ ಲಿಯೊ ಟಾಲ್‌ಸ್ಟಾಯ್ (೧೮೨೮–೧೯೧೦)

ರಷ್ಯದ ತಲಾಪ್ರಾಂತ್ಯಕ್ಕೆ ಸೇರಿದ ಯೂಸ್ನಾಯ ಪಾತ್ಯೆನದಲ್ಲಿ ನಿಕೋಲಾಯ್ ಇಲಿಚಿ ಟಾಲ್‌ಸ್ಟಾಯ್ ಮಗನಾಗಿ ಸೆಪ್ಟೆಂಬರ್ ೯ ೧೮೨೮ರಲ್ಲಿ ಜನಿಸಿದನು. ಇವನು ರಷ್ಯದ ಕಾದಂಬರಿಕಾರ. ನೀತಿಬೋಧಕ. ಪ್ರಪಂಚದ ಪ್ರಸಿದ್ಧ ಸಾಹಿತಿಗಳ ಗುಂಪಿಗೆ ಸೇರಿದವ. ಶ್ರೀಮಂತವರ್ಗಕ್ಕೆ ಸೇರಿದ ಈತನದು ಮೊದಲಿನಿಂದ ಸಮಾಧಾನವರಿಯದ ಚೇತನ. ಪದವೀಧರನಾಗದೆ ಕಾಝಾನ್ ವಿಶ್ವವಿದ್ಯಾಲಯವನ್ನು ಬಿಟ್ಟ. ಯೌವನದಿಂದಲೇ ಬಾಳಿನ ಸಾರ್ಥಕ್ಯವನ್ನು ಕಂಡುಕೊಳ್ಳುವ ಬಯಕೆ

ಇದ್ದಿತಾದರೂ ಯಾವ ನಿರ್ದಿಷ್ಟ ಗುರಿಯೂ ಸಾಧನೆಯೂ ಇಲ್ಲದೆ ಕೆಲವು ವರ್ಷಗಳನ್ನು ಕಳೆದ. ೧೮೫೧ರಲ್ಲಿ ಸೈನ್ಯಕ್ಕೆ ಸೇರಿ ಕ್ರಿಮಿಯ ಯುದ್ಧದಲ್ಲಿ ತುರ್ಕರ ವಿರುದ್ಧ ಹೋರಾಡಿದ. ೧೮೫೫ರಲ್ಲಿ ಸೈನ್ಯವನ್ನು ಬಿಟ್ಟು ಮಾಸ್ಕೊಗೆ ಹಿಂದಿರುಗಿದ. ಕೆಲವು ವರ್ಷ ವಿದೇಶ ಪ್ರವಾಸ ಮಾಡಿ, ಅನಂತರ ರೈತರ ಮಕ್ಕಳಿಗಾಗಿ ಒಂದು ಶಾಲೆಯನ್ನು ಪ್ರಾರಂಭಿಸಿದ. ೧೮೬೨ರಲ್ಲಿ ಮದುವೆಯಾಯಿತು. ಹದಿನೈದು ವರ್ಷಗಳ ಕಾಲ ಪತಿಪತ್ನಿಯರ ಜೀವನ ಸುಗಮವಾಗಿ ಕಳೆಯಿತು. ಆದರೆ ೧೮೭೯ರಲ್ಲಿ ಈತನಲ್ಲಾದ ಮಾರ್ಪಾಡು ಗೃಹಜೀವನಕ್ಕೆ ಧಕ್ಕೆ ತಂದಿತು. ಸುಮಾರು ೧೮೭೫ರಿಂದ ೧೮೭೯ರವರೆಗಿನದು ಈತನ ಜೀವನದಲ್ಲಿ ಪರ್ವಕಾಲ, ವಿಚಾರರಹಿತವಾದ, ತರುಲತೆಗಳ ಬಾಳಿನಂಥ ಸಹಜಜೀವನದಿಂದ ವಿಮುಖನಾಗಿ, ನೀತಿ ಪರಿಶುದ್ಧವೂ ಅರ್ಥ ಪೂರ್ಣವೂ ಆದ ಬಾಳನ್ನು ನಡೆಸುವ ಬಯಕೆ ಗರಿಗೂಡಿ ಇವನ ವಿಚಾರಲಹರಿ ಯನ್ನೂ ಜೀವನ ವಿಧಾನವನ್ನೂ ಸಂಪೂರ್ಣವಾಗಿ ಮಾರ್ಪಡಿಸಿತು. ತನ್ನ ಆವರೆಗಿನ ಸಾಹಿತ್ಯ ಸೃಷ್ಟಿ ಮತ್ತು ಪದ್ಧತಿಗಳನ್ನು ಪಾಪಕರವೆಂದು ತಿರಸ್ಕರಿಸಿ, ಎಲ್ಲರಿಗೂ ಸುಲಭವಾಗಿ ಅರ್ಥವಾಗುವ, ಎಲ್ಲರ ಮೇಲೆ ಪರಿಣಾಮವನ್ನುಂಟು ಮಾಡುವ ಸಾಹಿತ್ಯ ರಚನೆ ಮಾಡಲು ನಿರ್ಧರಿಸಿದ. ಇವನದೇ ಒಂದು ಪಂಥವಾಯಿತು. ಆಸ್ತಿಪಾಸ್ತಿಗಳನ್ನೆಲ್ಲ ತ್ಯಜಿಸಿ, ಏಸುಕ್ರಿಸ್ತನ ಉಪದೇಶದಂತೆ ಸರ್ವತ್ಯಾಗ ಮಾಡಿ ಬದುಕುವ ಆದರ್ಶವನ್ನು ಇವನ ಹೆಂಡತಿ ಒಪ್ಪಲಿಲ್ಲ. ಈ ಆದರ್ಶಕ್ಕೆ ಕ್ರಿಯಾತ್ಮಕ ರೂಪ ಕೊಡಲು ಈತ ಮಾಡಿದ ಪ್ರಯತ್ನಗಳೆಲ್ಲ ನಿರರ್ಥಕವಾದುವು. ತನ್ನ ಮಗಳೊಂದಿಗೆ ಮನೆ ಬಿಟ್ಟ ಹೊರಟು ಸ್ವಲ್ಪ ದಿನ ಗೊತ್ತು ಗುರಿಯಿಲ್ಲದೆ ಅಲೆದು ೧೯೧೦ರಲ್ಲಿ ಈತ ಮರಣಹೊಂದಿದ.

ಟಾಲ್‌ಸ್ಟಾಯಿಯಲ್ಲಿ ಪರಸ್ಪರ ವಿರುದ್ಧವಾಗಿದ್ದ ಎರಡು ಪ್ರವೃತ್ತಿಗಳು ಪ್ರಬಲವಾಗಿದ್ದು, ಜೀವನದಲ್ಲಿಯೂ ಸಾಹಿತ್ಯದಲ್ಲಿಯೂ ಎರಡೂ ವ್ಯಕ್ತವಾಗಿವೆ. ಒಂದು ಕಡೆ ಸಹಜ ಪ್ರವೃತ್ತಿಗಳನ್ನನುಸರಿಸಿ ಉತ್ಸಾಹದಿಂದ ಮನಸಾರೆ ಜೀವನವನ್ನು ಸವಿಯುವ ಬಯಕೆ, ಮತ್ತೊಂದು ಕಡೆ ಜೀವನದ ಪರಮಾರ್ಥವನ್ನು ಕಂಡುಕೊಂಡು ಸಾವನ್ನು ಮೆಟ್ಟಿ ನಿಲ್ಲುವ ಬಯಕೆ. ಸಾವು ಬಾಳನ್ನು ನಿರರ್ಥಕಗೊಳಿಸುವುದೆಂಬ ಭಾವನೆ ಈತನನ್ನು ಯಾತನೆಗೊಳಿಸುತ್ತಿತ್ತು. ಈತನ ಎಲ್ಲ ಕೃತಿಗಳಲ್ಲಿ ಬಾಳಿನ ಅರ್ಥವನ್ನು ಕಂಡುಕೊಳ್ಳುವ ತೀವ್ರ ಬಯಕೆ ಇದೆ. ಜೀವನದಲ್ಲಿ ಹೇಗೋ ಹಾಗೆ ಸಾಹಿತ್ಯಸೃಷ್ಟಿಯಲ್ಲಿಯೂ ೧೮೭೯ ಒಂದು ಸೀಮಾರೇಖೆ. ಇವನ ಮೊದಲನೆಯ ಕೃತಿ ಚೈಲ್ಡ್‌ಹುಡ್ (ಬಾಲ್ಯ) (೧೮೫೨) ಮೊದಲಾದ ಪ್ರಾರಂಭಿಕ ಬರೆಹಗಳಲ್ಲಿ ನೆನಪುಗಳನ್ನು ವಿಶ್ಲೇಷಣೆ ಮಾಡಿ, ಸಣ್ಣಪುಟ್ಟ ಘಟನೆಗಳ ಅರ್ಥದ ಮೂಲಕ್ಕೆ ಕೃತಿಕಾರ ಸಾಗಿರುವುದನ್ನು ಕಾಣಬಹುದು. ಕ್ರಮೇಣ ಇವನ ಆಸಕ್ತಿ ವಿಶ್ಲೇಷಣೆಯಿಂದ ನೀತಿಯ ಕಡೆಗೆ ತಿರುಗಿತು. ಇದನ್ನು ಮುಂದಿನ ಹತ್ತು ವರ್ಷಗಳ ಕಥೆಗಳಲ್ಲಿ ಕಾಣಬಹುದು. ೧೮೬೩ರಲ್ಲಿ ಪ್ರಕಟವಾದ ಕಾಸ್ಯಾಕ್ಸ್ ಎಂಬುದು ಉತ್ತಮ ವಂಶಕ್ಕೆ

ಸೇರಿದ, ವಿಶ್ವವಿದ್ಯಾಲಯದ ವಿದ್ಯಾಭ್ಯಾಸ ಪಡೆದ ಒಬ್ಬ ಯುವಕ ಒಂದು ಹಳ್ಳಿಯಲ್ಲಿ ನಡೆಸುವ ಜೀವನದ ಚಿತ್ರ. ನಾಯಕನ ಕೃತಕತೆಯನ್ನು ಕಾಸ್ಯಾಕ್ ರೈತರ ಸಹಜತೆಯೊಂದಿಗೆ ಹೋಲಿಸಲಾಗಿದೆ. ಈ ರೈತರು ಅವಿಚಾರವಂತರಾದರೂ ಪಾಪ ಮತ್ತು ದೋಷಗಳಿಂದ ಕೂಡಿದ್ದರೂ ತಮ್ಮ ಸಹಜತೆಯಿಂದ ನಾಗರಿಕತೆ ಮತ್ತು ಕೃತಕತೆಯ ಸೋಂಕು ತಗಲಿದ ನಾಯಕನಿಗಿಂತ ಉತ್ತಮರಾಗಿ ಚಿತ್ರಿತರಾಗಿದ್ದಾರೆ. ವಾರ್ ಅಂಡ್ ಪೀಸ್ (ಸಮರ ಮತ್ತು ಶಾಂತಿ ೧೮೬೫) ಟಾಲ್ಸಾಟಾಯಿಯ ಪರಿವರ್ತನೆಯ ಮುನ್ನಿನ ಸಾಹಿತ್ಯದಲ್ಲಿ ಮಹಾಕೃತಿ. ಇದರ ಅನಂತರ ಪ್ರಕಟವಾದ ಅನ ಕರನಿನ (೧೮೭೭) ಸಮರ ಮತ್ತು ಶಾಂತಿಯ ಮುಂದಿನ ಭಾಗ ಎನ್ನಬಹುದು. ಈ ಕೃತಿಯಲ್ಲಿಯೂ ಪಾತ್ರವೈವಿಧ್ಯ ಆಶ್ಚರ್ಯಕರವಾದುದು. ಕಾದಂಬರಿಯ ಕಡೆಯ ಭಾಗದಲ್ಲಿ ದುರಂತ ವಾತಾವರಣ ಕವಿಯುತ್ತದೆ. ಇದ್ದಕ್ಕಿದ್ದಂತೆ ದಾರಿ ಕೊನೆಗೊಂಡು ದಿಗ್ಭ್ರಮೆಯನ್ನುಂಟುಮಾಡುತ್ತದೆ. ಸಂತೃಪ್ತ ಜೀವನದ ಚಿತ್ರಗಳಿದ್ದರೂ ದುರಂತದ ಛಾಯೆ ಈ ಕೃತಿಯ ಜಗತ್ತನ್ನು ಮುತ್ತಿದೆ. ಸಮರ ಮತ್ತು ಶಾಂತಿ, ಅನ ಕರನಿನ–ಇವೆರಡರಲ್ಲಿಯೂ ಜೀವನಕ್ಕೆ ಬೇರೆ ಅರ್ಥವಿಲ್ಲ, ಬಾಳಿನ ಅರ್ಥ ಬಾಳೇ, ಅನಗತ್ಯ ವಿಚಾರ, ಕೃತಕತೆಗಳನ್ನು ಬಿಟ್ಟು ತನ್ನ ಸಹಜವಾದ ಸ್ಥಾನವನ್ನು ಸ್ವೀಕರಿಸುವುದೇ ವಿವೇಕ ಎನ್ನುವ ದೃಷ್ಟಿ ಕಾಣುತ್ತದೆ. ಆದರೆ ಈ ಕಾಲದಲ್ಲಿ ಕೃತಿಕಾರನ ಮನಸ್ಸಿನಲ್ಲಿ ನಡೆಯುತ್ತಿದ್ದ ಘರ್ಷಣೆಯ ಛಾಯೆ ಅನಕರೆನಿನದ ಮೇಲೆ ಬಿದ್ದಿದೆ. ಆಗಲೇ ಟಾಲ್ಸ್‌ಟಾಯ್ ಜಟಿಲ ಮನಸ್ಸುಗಳ ವಿಶ್ಲೇಷಣದಿಂದ ಎಲ್ಲ ಸ್ವಭಾವಗಳ ಚಿತ್ರಣದ ತಂತ್ರದತ್ತ ದೃಷ್ಟಿ ಹೊರಳಿಸಿದ್ದಾನೆ. ಅನಕರೆನಿನ ಬರೆದು ಮುಗಿಸುವ ಹೊತ್ತಿಗೆ ಕನ್‌ಫೆಷನ್ (೧೮೭೯ ಸತ್ಯನಿವೇದನೆ) ಎಂಬ ಕೃತಿಯಲ್ಲಿ ಚಿತ್ರಿತವಾಗಿರುವ ಪರಿವರ್ತನೆಯೂ ಮುಗಿಯುತ್ತ ಬಂದಿತು. ೧೮೭೯ರಲ್ಲಿ ಟಾಲ್ಸ್‌ಟಾಯ್ ಮತಸಂಸ್ಥೆ, ರಾಷ್ಟ್ರ ಭಾವನೆಗಳನ್ನು ತಿರಸ್ಕರಿಸಿ, ನಾಗರಿಕತೆಯನ್ನೂ ತಿರಸ್ಕರಿಸಿ, ಕೆಟ್ಟುದನ್ನು ವಿರೋಧಿಸಬೇಡ ಎನ್ನುವ ಏಸುಕ್ರಿಸ್ತನ ಸಂದೇಶವೇ ಜೀವನದ ತಿರುಳೆಂಬ ನಂಬಿಕೆಯನ್ನು ಘೋಷಿಸಿದ, ಅಹಿಂಸೆಯನ್ನು ಎತ್ತಿ ಹಿಡಿದ, ಪರಮಧರ್ಮ, ಪರಮಜ್ಞಾನ ಎರಡೂ ಒಂದೇ ಎಂಬುದು ಇವನ ನಂಬಿಕೆ. ಆತ್ಮಸಾಕ್ಷಿಯೇ ಜೀವನದ ಪರಮಮಾರ್ಗದರ್ಶಿ ಎಂದು ಸಾರಿದ. ೧೮೭೯ರ ಅನಂತರ ಸಾಹಿತ್ಯ ಮತ್ತು ಕಲೆಗಳ ವಿಷಯದಲ್ಲಿ ಇವನ ಭಾವನೆ ಸಂಪೂರ್ಣವಾಗಿ ಬದಲಾವಣೆ ಹೊಂದಿತು. ೧೮೯೬ರಲ್ಲಿ ಪ್ರಕಟವಾದ ವಾಟ್ ಈಸ್ ಆರ್ಟ್ ಎನ್ನುವ ಕೃತಿ ಬಹಳ ಮುಖ್ಯವಾದುದು. ಇದರಲ್ಲಿ ಷೇಕ್ಸ್‌ಪಿಯರ್, ವ್ಯಾಗ್ನರ್ ಇವರ ಕೃತಿಗಳನ್ನು ಕಲೆ ಎಂದು ಕರೆಯಲು ಸಾಧ್ಯವಿಲ್ಲವೆಂದು ವಾದಿಸಿ ಕೃತಿಕರ್ತನ ಆತ್ಮದ ಸ್ಥಿತಿಯಿಂದ ಓದುಗನ ಮೇಲೆ ಪರಿಣಾಮವನ್ನುಂಟುಮಾಡಿ, ಓದುಗ–ಕೃತಿಕರ್ತರ ಐಕ್ಯವನ್ನು ಸಾಧಿಸುವ ಕೃತಿ ಮಾತ್ರ ಕಲೆ ಎಂದೂ ಕಲೆಯಲ್ಲಿ ಉದ್ದೇಶಪೂರ್ವಕವಾಗಿ ಕೌಶಲ್ಯ ತಂತ್ರಗಳನ್ನು ತರವುದು ಅನಗತ್ಯ ಎಂದೂ ಸಾರಲಾಗಿದೆ. ಒಂದು ಗುಂಪು ಅಥವಾ

ವೃತ್ತಕ್ಕೆ ಮಾತ್ರ ರುಚಿಸುವ ಕಲೆ ಕಲೆಯೇ ಅಲ್ಲ, ಕೃತಿ ಎಷ್ಟು ಸರಳವಾಗಿ, ನಿರಾಂಡಂಬರವಾಗಿ ಇದ್ದು, ವಿಸ್ತಾರವಾದ ವೃತ್ತದ ಮೇಲೆ ಪರಿಣಾಮವನ್ನುಂಟು ಮಾಡುವಂತಿದ್ದರೆ ಅಷ್ಟೂ ಅಷ್ಟು ಉತ್ತಮ ಎಂಬುದು ಇಲ್ಲಿನ ನಿಲುವು. ೧೮೭೯ರ ಅನಂತರ ರಚಿತವಾದ ಕೃತಿಗಳು ಈ ಸಿದ್ಧಾಂತದಿಂದ ಪ್ರಭಾವಿತವಾದುವು. ನೈತಿಕವಾಗಿಯೂ ಕಲಾತ್ಮಕವಾಗಿಯೂ ತನ್ನ ಹಿಂದಿನ ಕೃತಿಗಳೆಲ್ಲ ಅತೃಪ್ತಿಕರವೆಂದು ಟಾಲ್‌ಸ್ಟಾಯ್ ತಿರಸ್ಕರಿಸಿದ. ಇದಾದ ಅನಂತರ ನೀತಿಬೋಧಕ ವಾದ ಹಲವಾರು ಸಣ್ಣ ಕಥೆಗಳನ್ನು ಬರೆದ. ಇಬ್ಬರು ಮುದುಕರಂಥ ಕಥೆಯಲ್ಲಿ ಉದ್ದೇಶಿತ ಕಲೆಗಾರಿಕೆಯನ್ನು ತಿರಸ್ಕರಿಸಿದ್ದರೂ ಟಾಲ್‌ಸ್ಟಾಯ್ ಪರಿಪೂರ್ಣ ಕಲೆಗಾರಿಕೆಯನ್ನು ಸಾಧಿಸಿದ. ಹಲವು ಕಥೆಗಳಲ್ಲಿ ನೈಜ್ಯತೆಯನ್ನು ಕಳೆದುಕೊಂಡ ನಾಗರಿಕ ಮನುಷ್ಯ ಸಾವಿನ ಅಥವಾ ಹುಟ್ಟಿನ ನೆರಳಿನಲ್ಲಿ ಸತ್ಯವನ್ನು ಅರಿಯುವ ಚಿತ್ರವಿದೆ. ಲೈಂಗಿಕ ಪ್ರವೃತ್ತಿಗಳನ್ನು ಕುರುತು ಬರೆದ ಕಥೆಗಳಲ್ಲಿ 'ಪಿಶಾಚಿ'ಯ ಶಕ್ತಿ, ರಚನಾಕೌಶಲ್ಯಗಳು ಅಸಾಧಾರಣವಾದುವು. ರೆಸ಼ರಕ್ಷನ್-ಪುನರುತ್ಥಾನ (೧೮೮೦) ದೀರ್ಘವಾದ, ಬೋಧನೆಯನ್ನೇ ಪ್ರಧಾನ ಉದ್ದೇಶವಾಗುಳ್ಳ ಕಾದಂಬರಿ. ಹಾಜಿ ಮುರಾದ್ ಎನ್ನುವ ಕಾದಂಬರಿ (೧೮೯೬-೧೯೦೪) ಟಾಲ್‌ಸ್ಟಾಯಿಯ ಸಾಹಿತ್ಯ ರಚನೆಯ ಎರಡನೆಯ ವಿಭಾಗದ ಅತ್ಯುತ್ತಮ ಕೃತಿಗಳಲ್ಲೊಂದು. ಕಾಕಸಸ್ ಬೆಟ್ಟಗಾಡಿನ ಪ್ರದೇಶದ ಜನರಿಗೆ ಸಂಬಂಧಿಸಿದ ಈ ಕಾದಂಬರಿಯಲ್ಲಿ ಹೊಸದೊಂದು ತಂತ್ರವನ್ನು-ದೃಶ್ಯಗಳನ್ನು ವೇಗವಾಗಿ ಬದಲಾಯಿಸುವ ವಿಧಾನವನ್ನು-ಯಶಸ್ವಿಯಾಗಿ ಬಳಸುತ್ತಾನೆ. ಈವ್ಯನ್ ಇಲ್ಯಿಚ್‌ನ ಮರಣ ಎನ್ನುವ ಕಥೆಯಲ್ಲಿ ಮತ್ತೊಂದು ಶಿಖರವನ್ನು ಮುಟ್ಟುತ್ತಾನೆ. ತನ್ನ ಇರವೆಲ್ಲ ನಿರರ್ಥಕ, ಸಾವಿನ ಸೀಮೆಯೊಳಕ್ಕೆ ತಾನು ಏನನ್ನೂ ಕೊಂಡೊಯ್ಯಲಾರೆ ಎಂಬ ಅರಿವಿನೊಡನೆ ಸಾಯುವ ಜೀವಿಯ ಈ ಚಿತ್ರದಲ್ಲಿ ಟಾಲ್‌ಸ್ಟಾಯ್ ಭಗವದ್ಗೀತೆ ಮತ್ತು ಧರ್ಮಗ್ರಂಥಗಳ ಕ್ಷೇತ್ರವನ್ನು ಪ್ರವೇಶಿಸುತ್ತಾನೆ ಎಂದು ವಿಮರ್ಶಕರು ನುಡಿದಿದ್ದಾರೆ.

ಟಾಲ್‌ಸ್ಟಾಯ್ ಹಲವು ನಾಟಕಗಳನ್ನು ಬರೆದಿದ್ದಾನೆ. ದಿ ಪವರ್ ಆಫ್ ಡಾರ್ಕ್‌ನೆಸ್ (೧೮೮೮) ಎಂಬುದು ರೈತಜೀವನಕ್ಕೆ ಸಂಬಂಧಪಟ್ಟ ಶಕ್ತಿಯುತ ನಾಟಕ. ದಿ ಫ್ರುಟ್ಸ್ ಆಫ್ ಎನ್‌ಲೈಟನ್‌ಮೆಂಟ್ (೧೮೯೧) ಎಂಬುದು ಸಮಾಜದ ರೀತಿನೀತಿಗಳ ಲಘುವಿಮರ್ಶೆ. ದಿ ಲಿವಿಂಗ್ ಕಾರ್ಪ್ಸ್ (೧೯೧೧) ಎಂಬುದು ಈತನ ಪರಿಣತ ವಯಸ್ಸಿನ ಪರಿಣತಕೃತಿ.

ಟಾಲ್ಸ್ ಟಾಯ್ ಉದ್ದೇಶಿತ ಕಲೆಗಾರಿಕೆಯನ್ನು ಒಪ್ಪದಿದ್ದರೂ ಈತನ ಕನ್‌ಫೆಷನ್ಸ್ ಕೃತಿ ಅಸಾಮಾನ್ಯವಾದ, ಅದ್ಭುತವಾದ ಕಲೆಯನ್ನು ತೋರುತ್ತದೆ. ವಿಮರ್ಶಕರು ಇದನ್ನು ಬುಕ್ ಆಫ್ ಜೋಬ್‌ನ ಪಂಕ್ತಿಗೆ ಸೇರಿಸುತ್ತಾರೆ. ಜೀವಂತ, ತೇಜೋಮಯ ಕೃತಿ ಇದು. ಬಾಳು, ಸತ್ಯಗಳನ್ನು ಕುರಿತು ಮನುಷ್ಯನ ಚೇತನ

ಸೃಷ್ಟಿಸಿರುವ ಅತ್ಯದ್ಭುತ ಕೃತಿಗಳಲ್ಲಿ ಇದೊಂದು. ಇದೂ ಕಲೆ ಎಂದರೇನು ಎನ್ನುವ ಲೇಖನವೂ ಟಾಲ್‌ಸ್ಟಾಯಿಯ ಅಸ್ಖಲಿತ ವಿಚಾರಸರಣಿ, ತೇಜೋಮಯವಾದ ಶೈಲಿ, ನಿರ್ಭಯ ನಿರರ್ಗಳ ವಾದವೈಖರಿಗಳಿಗೆ ನಿದರ್ಶನಗಳಾಗಿವೆ.

ವೃತ್ತಾಂತ ಹಾಗೂ ಘಟನೆಗಳಿಗೆ ಪ್ರಾಮುಖ್ಯ ನೀಡದ ಕಾದಂಬರಿ ವಿಧಾನವನ್ನು ಟಾಲ್‌ಸ್ಟಾಯ್ ಪರಿಪೂರ್ಣತೆಗೆ ಕೊಂಡೊಯ್ದ. ಇತರ ವಾಸ್ತವಿಕ ಕಾದಂಬರಿಕಾರರಂತೆ ಕಥೆಗೆ ಪ್ರಕೃತವಲ್ಲದ, ಆದರೆ ವ್ಯಕ್ತಿಗಳಿಗೆ ವೈಶಿಷ್ಟ್ಯವನ್ನು ನೀಡುವ ಅರ್ಥವತ್ತಾದ ವಿವರಗಳನ್ನು ಈತ ಬಳಸಿಕೊಳ್ಳುತ್ತಾನೆ. ಆದರೆ ೧೮೭೫ರ ಹಿಂದಿನ ಕೃತಿಗಳಲ್ಲಿ ಜಟಿಲತೆಯನ್ನು ಹಾದು ಮೂಲ ಸರಳ ಸಂಗತಿಯನ್ನು ಬೆಳಕಿಗೆ ತರುವ ಕ್ಷ-ಕಿರಣದಂಥ ವಿಶ್ಲೇಷಣದಿಂದ ಪಾತ್ರಗಳು ವಿಲಕ್ಷಣವಾಗದಂತೆ ಮಾಡುತ್ತಾನೆ. ತನ್ನ ಶೈಲಿ ನಿರಾಡಂಬರವಾಗಿಯೂ ಸ್ಪಷ್ಟವಾಗಿಯೂ ಇರುವಂತೆ ಎಚ್ಚರಿಕೆ ವಹಿಸುತ್ತಾನೆ. ಬರುಬರುತ್ತ ಶೈಲಿಯ ಸರಳತೆ, ಸಹಜತೆ, ಲಲಿತ ಗಮನಗಳು ಬೆಳೆದುವು. ಇವನ ಕೃತಿಗಳು ಒಂದು ಕಾಲದ ಸಮಾಜದ ಅಥವಾ ಪ್ರಾತಿನಿಧಿಕ ಪಾತ್ರಗಳ ವಿಭಜನೆಯನ್ನು ಮಾತ್ರ ನೀಡದೆ, ಕಾಲದೇಶಗಳ ಎಲ್ಲೆಯನ್ನು ಮೆಟ್ಟಿ ನಿಲ್ಲುವುದಕ್ಕೆ ಅಂತರಾತ್ಮದ ಅನುಭವಗಳಿಗೆ ಈತ ಕೊಟ್ಟ ಪ್ರಾಮುಖ್ಯ, ಅದರಲ್ಲಿಯೂ ಸೂಕ್ಷ್ಮವಾದ ಅನುಭವಗಳಲ್ಲಿ ತೋರುವ ಗಾಢವಾದ ಆಸಕ್ತಿಗಳೇ ಕಾರಣ. ಟಾಲ್‌ಸ್ಟಾಯ್ ಸಾಹಿತಿ ಮಾತ್ರವಲ್ಲ, ಮಾನವ ಕುಲದ ಆಧ್ಯಾತ್ಮಿಕ ದ್ರಷ್ಟಾರ. ಇವನ ಚಿತ್ರಪಟದ ವೈಶಾಲ್ಯ ಅತ್ಯದ್ಭುತ, ಕಲೆಗಾರಿಕೆ ಇವನ ಪ್ರತಿಭೆಯ ಒಂದು ಭಾಗ ಮಾತ್ರ. ಇತರ ವಾಸ್ತವಿಕ ಕಾದಂಬರಿಕಾರರಂತೆ ಕಥೆಗೆ ಪ್ರಕೃತವಲ್ಲದ ಆದರೆ ವ್ಯಕ್ತಿಗಳಿಗೆ ವೈಶಿಷ್ಟ್ಯವನ್ನು ನೀಡುವ ವಿವರಗಳನ್ನು ಬಳಸಿಕೊಳ್ಳುತ್ತಾನೆ. ಆದರೆ ೧೮೭೫ರ ಹಿಂದಿನ ಕೃತಿಗಳಲ್ಲಿ, ಜಟಿಲತೆಯನ್ನು ಹಾದು ಮೂಲ ಸರಳ ಸಂಗತಿಯನ್ನು ಬೆಳಕಿಗೆ ತರುವ ಕ್ಷ-ಕಿರಣದಂಥ ವಿಶ್ಲೇಷಣದಿಂದ, ಪಾತ್ರಗಳು ವಿಲಕ್ಷಣವಾಗದಂತೆ ಮಾಡಿದ್ದಾನೆ. ಮನಸ್ಸಿನ ಪದರಪದರಗಳನ್ನು ಬಿಡಿಸುತ್ತ ಹೋಗುವುದು ಇವನ ಅದ್ಭುತ ಸಾಧನೆ.

ಮಹಾತ್ಮ ಗಾಂಧೀಜೀ ಟಾಲ್‌ಸ್ಟಾಯ್‌ನ ಕೃತಿಗಳನ್ನೋದಿದ್ದರು. ಇಬ್ಬರಿಗೂ ಪತ್ರಮುಖೇನ ಸಂಬಂಧವಿತ್ತು. ವೈಯಕ್ತಿಕ ಜೀವನ ನಿರ್ವಹಣೆಯಲ್ಲಿ, ರಾಜಕೀಯ ವಿಚಾರಗಳಲ್ಲಿ ಧರ್ಮದ ಸ್ಥಾನವೇನೆಂಬುದನ್ನು ನಿರ್ಧರಿಸುವರಲ್ಲಿ ಗಾಂಧೀಜಿ ಟಾಲ್‌ಸ್ಟಾಯ್ ಮಹಾಶಯನ ಜೀವನ ಹಾಗೂ ನೈತಿಕ ಕೃತಿಗಳನ್ನು ಆದರ್ಶವಾಗಿಟ್ಟುಕೊಂಡಿದ್ದರು. (ಎಲ್.ಎಸ್.; ಕೆ.ಬಿ.ಆರ್.)

ಫ್ಯೊದರ್ ಮ್ಯಿಕೈಲವ್ಯಿಚ್ ದಸ್ತಯೇಫ್‌ಸ್ಕಿ (೧೮೨೧-೧೮೮೧)

ರಷ್ಯದ ಕಾದಂಬರಿಕಾರರಲ್ಲಿ ಅಗ್ರಪಂಕ್ತಿಗೆ ಸೇರಿದವ. ಪ್ರತಿಕೋದ್ಯಮಿ, ಸಣ್ಣ ಕಥೆಗಾರ. ಹುಟ್ಟಿದ್ದು ಮಾಸ್ಕೊದಲ್ಲಿ. ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದು ಎರಡು ವರ್ಷ ಸೈನ್ಯದಲ್ಲಿದ್ದ. ಕ್ರಾಂತಿಯ (೧೮೪೮) ಅನಂತರ ಮತಸಂಸ್ಥೆ ಮತ್ತು ಸರ್ಕಾರಗಳ

ವಿರುದ್ಧ ನಡೆಸಿದ ಚಟುವಟಿಕೆಗಳಿಗಾಗಿ ಎಂಟು ವರ್ಷಗಳ ಕಠಿಣಶಿಕ್ಷೆಗೊಳಗಾದ. ನಾಲ್ಕು ವರ್ಷಗಳ ಕಾಲ ಸೆರೆಮನೆಯಲ್ಲಿ ಓದಲು ಬೇರೇನೂ ಇಲ್ಲದಾಗ ಬೈಬಲ್ಲನ್ನೇ ಓದುತ್ತ ಕಾಲ ಕಳೆದ. ಸೆರೆಮನೆಯ ವಾಸ ಈತನ ಯೌವನದ ಪ್ರಗತಿಗಾಮಿ ಉತ್ಸಾಹಕ್ಕೆ ತಡೆ ಹಾಕಿತು. ೧೮೫೯ರಲ್ಲಿ ಕ್ಷಮಾದಾನ ಪಡೆದು ಪೀಟರ್ಸ್‌ಬರ್ಗಿಗೆ ಹಿಂದಿರುಗಿದ. ಕೆಲಕಾಲ ಪತ್ರಿಕೋದ್ಯಮಿಯಾಗಿ, ಸರ್ಕಾರದ ಅಧಿಕಾರಿಯೊಬ್ಬನ ಮೂರ್ಖತನದಿಂದ ಅಪಾರ ನಷ್ಟವನ್ನನುಭವಿಸಿ, ದಿವಾಳಿಯಾದ. ೧೮೭೩ರವರೆಗೆ ಈತನ ಬಾಳು ಕಷ್ಟಮಯವಾಗಿತ್ತು. ಅನಂತರ ಈತನ ಕೀರ್ತಿ ಹಬ್ಬಿತಲ್ಲದೆ ಪರಿಸ್ಥಿತಿ ಆರ್ಥಿಕವಾಗಿಯೂ ಸುಧಾರಿಸಿತು. ಮೊದಲ ಮದುವೆ ಈತನಿಗೆ ಸುಖವನ್ನು ತರಲಿಲ್ಲ. ಎರಡನೆಯ ಮದುವೆ ಸುಖಸಮಾಧಾನಗಳನ್ನಿತ್ತಿತು. ಹೆಂಡತಿಯ ವ್ಯವಹಾರ ಚತುರತೆ ಈತನಿಗೆ ಅನೇಕ ವಿಧದಲ್ಲಿ ಸಹಾಯಕವಾಯಿತು.

ಈತನ ಸಾಹಿತ್ಯ ಸೃಷ್ಟಿಯನ್ನು ೧೮೪೫ರಿಂದ ೧೮೫೯, ೧೮೫೭ರಿಂದ ೧೮೬೩, ೧೮೬೩ರಿಂದ ಮುಂದಕ್ಕೆ ಎಂಬುದಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು. ಈತನ ಪ್ರಥಮ ಕಾದಂಬರಿ ಪೂರ್ ಫೋಕ್ (ಬಡಜನರು–೧೮೪೬) ಎಂಬುದು. ನೆಕ್ರಸಾಫ್, ಬೆಲಿನ್‌ಸ್ಕಿಯವರಂಥ ಖ್ಯಾತಸಾಹಿತಿಗಳ ಮನ್ನಣೆ ಪಡೆಯಿತು. ಇದರ ಕೇಂದ್ರಭಾವ ಅನುಕಂಪ–ಕಾಲಕಸವಾಗಿ, ಹಾಸ್ಯಕ್ಕೆ ಗುರಿಯಾಗಿ ಆದರೂ ಉದಾತ್ತಜೀವನ ನಡೆಸುವ ಮಾನವರ ವಿಷಯದಲ್ಲಿ–ಅನುಕಂಪ. ಈತನ ಮೊದಲ ಭಾಗದ ಸಾಹಿತ್ಯಿಕ ಕೃತಿಗಳಲ್ಲಿ ಗಾಗಲ್‌ನ ಪ್ರಭಾವ ಸ್ಪಷ್ಟವಾಗಿದೆ. ಈತನ ಮಹಾನ್ ಕೃತಿಗಳೆಲ್ಲ ಸೆರೆಮನೆಯನ್ನು ಸೇರಿ ಅಲ್ಲಿನ ಕ್ರೂರ ಅನುಭವಗಳಾದನಂತರ ರಚಿತವಾದವು. ಈತನ ಮಧ್ಯಕಾಲದ ಕೃತಿಗಳಲ್ಲಿ ಗಾಗಲ್‌ನ ಪ್ರಭಾವವಿಲ್ಲ. ಆದರೆ ಕೊನೆಯ ಭಾಗದ ಕೃತಿಗಳಲ್ಲಿ ಗಹನತೆ ಇಲ್ಲ. ಈತನ ಜೀವಿತಕಾಲದಲ್ಲಿಯೇ ಹೆಸರು ಪಡೆದ ಕೃತಿ ದಿ ಹೌಸ್ ಆಫ್ ದಿ ಡೆಡ್ (ಸಾವಿನ ಮನೆಯ ನೆನಪುಗಳು ೧೮೬೧–೬೨) ಈ ಅವಧಿಗೆ ಸೇರಿದುದು. ಇದರ ಕೇಂದ್ರ ವ್ಯಕ್ತಿ ಸೈಬೀರಿಯದ ಸೆರೆಮನೆಯಲ್ಲಿ ಶಿಕ್ಷೆಗೊಳಗಾಗಿ ಹಲವು ವರ್ಷಗಳ ಕಾಲ ಕೊಳೆಯುತ್ತಿದ್ದ ವಿದ್ಯಾವಂತ ವರ್ಗಕ್ಕೆ ಸೇರಿದ, ಖೈದಿಯೊಬ್ಬ. ಸಹಜವಾಗಿ ಇಲ್ಲಿ ಲೇಖಕನ ಸ್ವಾನುಭವಗಳ ಛಾಯೆ ಇದೆ. ಒಟ್ಟಿನಲ್ಲಿ ಈ ಕೃತಿಯಲ್ಲಿ ಕಹಿ ಇಲ್ಲ, ಆಶಾದೃಷ್ಟಿಯಿದೆ ಎನ್ನುವುದು ವಿಶೇಷವಾದ ಅಂಶ. ಶಿಕ್ಷೆಯ ನಿರರ್ಥಕತೆಯನ್ನು ಇಲ್ಲಿ ನಿರೂಪಿಸಲಾಗಿದೆ. ವಿದ್ಯಾವಂತ ವರ್ಗ ಜನಸಾಮಾನ್ಯರಿಂದ ದೂರವಾಗಿರದೆ ಅವರೊಡನೆ ಒಂದಾಗಬೇಕು ಎನ್ನುವುದು ಲೇಖಕನ ದೃಷ್ಟಿ. ಈತನ ಮಹಾಕಾದಂಬರಿಗಳು ಕ್ರೈಮ್ ಅಂಡ್ ಪನಿಷ್‌ಮೆಂಟ್ (ಅಪರಾಧ ಮತ್ತು ಶಿಕ್ಷೆ–೧೮೬೬); ದಿ ಇಡಿಅಟ್ (ಪೆದ್ದ ೧೮೬೮); ದಿ ಡೆವಿಲ್ಸ್ (ದೆವ್ವಗಳು ೧೮೭೧–೭೨) ಮತ್ತು ದಿ ಬ್ರದರ್ಸ್ ಕಾರಾಮಾಜಾಯ್ (೧೮೮೦)–ಇವು ಕಡೆಯ ಭಾಗಕ್ಕೆ ಸೇರಿದುವು. ಇವಕ್ಕೆ ಮೂರು ದೃಷ್ಟಿಗಳಿಂದ ವ್ಯಾಖ್ಯಾನ ಮಾಡಲಾಗಿದೆ. ಈತನ ಸಮಕಾಲೀನರು ಇವು ೧೮೬೫ರಿಂದ ೧೮೮೦ರವರೆಗಿನ

ರಷ್ಯದ ಸಾರ್ವಜನಿಕ ಮತ್ತು ಸಾಮಾಜಿಕ ಜೀವನಕ್ಕೆ ಸಂಬಂಧಿಸಿದುವೆಂದೂ ಈತ ಇವುಗಳಲ್ಲಿ ತನ್ನ ಅಭಿಪ್ರಾಯವನ್ನು ಪರೋಕ್ಷವಾಗಿ ನಿರೂಪಿಸುತ್ತಿರುವನೆಂದೂ ಭಾವಿಸಿದರು. ಮುಂದಿನ ತಲೆಮಾರಿನವರು ಇವು ಹೊಸ ಕ್ರೈಸ್ತಧರ್ಮದ ನಿರೂಪಣೆ ಎಂದು ಬಗೆದು ಮಾನವಕುಲಕ್ಕೆ ಶಾಂತಿ ತರುವ ಹೊಸದೊಂದು ಸಾಮರಸ್ಯವನ್ನು ಲೇಖಕ ಜಗತ್ತಿಗೆ ನೀಡಿರುವನೆಂದು ಭಾವಿಸಿದರು. ಕೃತಿಗಳು, ಓದುಗರಿಂದ ಕಾಲಮಾನದಲ್ಲಿ ದೂರ ಸರಿದಂತೆ ಲೇಖಕನ ಆಧ್ಯಾತ್ಮಿಕ ಅನುಭವಗಳ ದುರಂತದ ನಿರೂಪಣೆಗಳಾಗಿವೆ ಎನ್ನುವುದು ಈಚೆಗಿನ ಅಭಿಪ್ರಾಯ.

ಕ್ರೈಮ್ ಅಂಡ್ ಪನಿಷ್‌ಮೆಂಟ್ ಕಾದಂಬರಿಗೆ ದಸ್ತಯೇಫಸ್ಕಿಯ ಮನಸ್ಸಿನಲ್ಲಿ ಬಹಳ ಕಾಲದಿಂದ ಇದ್ದ ಒಂದು ಭಾವನೆಯೇ ಕೇಂದ್ರ ಎನಿಸುತ್ತದೆ. ಪಾಪ ಪಾಪಿಯಲ್ಲಿನ ಉದಾತ್ತವಾದುದನ್ನು ನಾಶಗೊಳಿಸುವುದರಿಂದ ಅದಕ್ಕೆ ಮನುಷ್ಯರ ಜಗತ್ತಿನಲ್ಲಿ ಶಿಕ್ಷೆಯಾಗದಿದ್ದರೂ ಪಶ್ಚಾತ್ತಾಪವಂತೂ ಉದ್ಭವಿಸಿಯೇ ತೀರುತ್ತದೆ ಎನ್ನುವುದೇ ಆ ಭಾವನೆ. ವಿದ್ಯಾರ್ಥಿಯೊಬ್ಬ ಒಂದು ಕೊಲೆ ಮಾಡುತ್ತಾನೆ. ಆತ ಕೊಲೆಗಡುಕನೆಂದು ಯಾರಿಗೂ ಅನುಮಾನ ಬರುವುದಿಲ್ಲ. ಒಂದಾದ ಅನಂತರ ಮತ್ತೊಂದು ಕೊಲೆ ಮಾಡಿ, ಮಾನವರ ನೀತಿನಿಯಮಗಳ ಸೀಮೆಯನ್ನು ದಾಟಿ, ಅತಿಮಾನವನಾಗುವ ಕನಸು ಆತನದು. ಆದರೆ ಈ ಪಾಪದ ಸ್ಮೃತಿ ಆತನನ್ನು ಕಾಡುತ್ತಲೇ ಇರುತ್ತದೆ. ಕೊನೆಗೆ ಪ್ರಾಯಶ್ಚಿತ್ತವಾಗಲೇಬೇಕೆಂಬ ಅರಿವು ಮೂಡಿದಾಗ ತಾನೇ ಸತ್ಯವನ್ನೊಪ್ಪಿಕೊಂಡು, ನತದೃಷ್ಟ ಸ್ತ್ರೀಯೊಬ್ಬಳ ಬಾಳಿನೊಡನೆ ತನ್ನ ಬಾಳನ್ನು ಬೆರೆಸುತ್ತಾನೆ. ಇದರಲ್ಲಿ ಲೇಖಕ ನರಕಕ್ಕಿಳಿಯುವ ಆತ್ಮದ ಯಾತನೆಯ ಸೀಮಾ ರೇಖೆಯನ್ನು ಮುಟ್ಟಿದಂತೆ ಭಾಸವಾಗುತ್ತದೆ. ನಾಯಕ ನತದೃಷ್ಟ ಸ್ತ್ರೀಗೆ ಹೇಳುವ ಮಾತುಗಳು ಈ ಕೃತಿಯ ಮತ್ತು ಲೇಖಕನ ಎಲ್ಲ ಕೃತಿಗಳ ಧ್ಯೇಯವಾಕ್ಯ ಎನ್ನಬಹುದು; ನಾನು ಮೊಣಕಾಲೂರಿರುವುದು ನಿನ್ನ ಮುಂದಲ್ಲ. ನರಳುತ್ತಿರುವ ಎಲ್ಲ ಮಾನವರ ಮುಂದೆ. ಇಡಿಅಟ್‌ನಲ್ಲಿನ ನಾಯಕ ಜಗತ್ತೆಲ್ಲ ತಿಳಿದಂತೆ ಬೆಪ್ಪನಲ್ಲ, ಒಂದು ವಿಶೇಷವಾದ ಶಾಂತಿಯ ಸ್ಥಿತಿಯನ್ನು ಮುಟ್ಟಿದ, ಮುಗ್ಧತೆಯೇ ಮೂರ್ತಿ ವೆತ್ತಂತಿದ್ದ ತರುಣ. ಬುದ್ಧಿವಂತರ ಜ್ಞಾನವನ್ನು ಮೀರಿಸಿದ ಮುಗ್ಧತೆ ಆತನದು. ಡೆವಿಲ್ಸ್‌ನಲ್ಲಿನ ಕೇಂದ್ರ ವ್ಯಕ್ತಿ ಏಕವಿಷಯ ಭ್ರಮೆಗೊಳಗಾದ ವಿಶಿಷ್ಟಮನಃಸ್ಥಿತಿಯವ್ಯಕ್ತಿ. ಪಾಶ್ಚಾತ್ಯ ಪ್ರೇಮಿಗಳನ್ನು ವಿರೋಧಿಸಲು ರಚಿತವಾದ ಕೃತಿಯಿದು. ಆದರೆ ಇದರಲ್ಲಿ ಲೇಖಕ ಭವಿಷ್ಯಜ್ಞಾನಿಯಾಗಿ ಸಂಯಮಹೀನರಾದ ಎಲ್ಲ ರಾಜಕಾರಣಿಗಳ ಆಂತರ್ಯದ ರೀತಿಯನ್ನು ನಿರೂಪಿಸಿದ್ದಾನೆ. ೧೯೦೦ಳರ ಅನಂತರ ಬಂದ ನಾಯಕರು ಇಂಥವರೇ.

ಇವೆಲ್ಲವನ್ನೂ ಮೀರಿಸಿದ ಕೃತಿ ದಿ ಬ್ರದರ್ಸ್ ಕಾರಾಮಾಜಾಯ್. ಐಹಿಕಭೋಗ ಮಗ್ನನೂ ಮೂರ್ಖನೂ ಎಲ್ಲವನ್ನೂ ಹಾಸ್ಯಮಾಡುವವನೂ ಆದ ಮುದುಕ ತಂದೆ ಮತ್ತು ಆತನ ಮಕ್ಕಳ ಸುತ್ತ ಹೆಣೆದಿರುವ ಕಥೆಯಿದು. ಇಲ್ಲಿನ ನೀಚ ಮುದುಕ ಮತ್ತು ಆತನ ಮೂವರು ಮಕ್ಕಳಲ್ಲಿ ನರಕದಿಂದ ಸ್ವರ್ಗದವರೆಗಿನ

ಸ್ತರಗಳನ್ನೆಲ್ಲ ಲೇಖಕ ನಿರೂಪಿಸಿದ್ದಾನೆಂದು ಹೇಳುವುದುಂಟು. ಸಾಮಾಜಿಕ ಸಮಸ್ಯೆಗಳನ್ನೂ ತಾತ್ತ್ವಿಕ ಮೌಲ್ಯಗಳನ್ನೂ ಪ್ರತ್ಯೇಕಿಸಲು ಒಪ್ಪದ ಲೇಖಕನ ಭಗವದನ್ವೇಷಣೆ ಇಲ್ಲಿ ಪ್ರತಿಬಿಂಬಿತವಾಗಿದೆ. ಮಾನವ ತನ್ನ ಅರಿವಿನಿಂದ ನವಚೇತನ ವನ್ನು ಪಡೆಯುವನೆಂಬ ನಂಬಿಕೆ ನಿರೂಪಿತವಾಗಿದೆ. ಲೇಖಕ ಸಾಯುವ ಹೊತ್ತಿಗೆ ಕಾದಂಬರಿಯ ಮೊದಲರ್ಧ ಮಾತ್ರ ಮುಗಿದಿತ್ತು. ಕೃತಿ ಅಪೂರ್ಣವಾದರೂ ಬರೆಹಕ್ಕಿಳಿದಷ್ಟು ಮಾತ್ರ ಬಾಳಿನ ಒಂದು ಹೋಳು ಎನ್ನಬಹುದು. ಏಕಾಂತದಲ್ಲಿ ಗಹನವಾದ ವಿಷಯಗಳನ್ನು ಕುರಿತು ಚಿಂತಿಸಬಯಸುವ ಸನ್ಯಾಸಿ, ತನ್ನ ಬುದ್ಧಿಶಕ್ತಿಗೆ ವ್ಯಾಯಾಮವನ್ನು ನೀಡಬಯಸುವ ವೇದಾಂತಿ, ಸಮಾಧಾನವನ್ನರಸುವ ಅಸುಖಿ, ರೈಲಿನಲ್ಲಿ ಕಾಲವನ್ನು ಕಳೆಯಲು ಬಯಸುವ ಪ್ರಯಾಣಿಕ ಎಲ್ಲರೂ ಪ್ರೀತಿಯಿಂದ ಓದಬಹುದಾದ ಕೃತಿ ಇದು ಎಂದು ಇದನ್ನು ವರ್ಣಿಸಲಾಗಿದೆ.

ಸಮಕಾಲೀನ ಜೀವನದಲ್ಲಿ ಮತ್ತು ಅಪ್ರಮುಖ ವ್ಯಕ್ತಿಗಳಲ್ಲಿ ಆಸಕ್ತಿ, ಕಷ್ಟಜೀವಿಗಳಲ್ಲಿ ಅನುಕಂಪ-ಇವುಗಳ ನಿರೂಪಣೆಯಲ್ಲಿ ದಸ್ತಯೇಫ್‌ಸ್ಕಿ ವಾಸ್ತವಿಕ ಪಂಥಕ್ಕೆ ಸೇರಿದವನಾದರೂ ವೃತ್ತಾಂತ ಮತ್ತು ಘಟನೆಗಳಿಗೆ ಪ್ರಾಮುಖ್ಯ ನೀಡುವುದರಲ್ಲಿ ಭಿನ್ನನಾಗಿದ್ದಾನೆ. ಈತನ ಕಥೆಗಳಲ್ಲಿ ಕೋಲಾಹಲಕರವಾದ ಘಟನೆಗಳು, ಕುತೂಹಲಕಾರಿಯಾದ ಅಂಶಗಳು, ತಿರುವುಗಳು ಉಂಟು. ಈತ ಜನಸಾಮಾನ್ಯಕ್ಕೆ ಸೇರಿದವ. ಟಾಲ್‌ಸ್ಟಾಯಿಯ ಕೃತಿಗಳ ನಯ, ಲಾಲಿತ್ಯ, ಸಂಯಮ, ಗಾಂಭೀರ್ಯ ಗಳು ಈತನ ಕೃತಿಗಳಲ್ಲಿಲ್ಲ. ಈತನ ಕಾದಂಬರಿಗಳೆಲ್ಲ ಧ್ಯೇಯನಿಷ್ಠವಾದವು. ಇತರರು ಚಳಿ ಸೆಖೆಗಳನ್ನು ಅನುಭವಿಸುವಂತೆ ಈತ ಭಾವಗಳನ್ನು ಅನುಭಸುತ್ತಿದ್ದನೆಂದು ಹೇಳುವುದುಂಟು. ಟಾಲ್‌ಸ್ಟಾಯಿಯಂತೆ ಈತನೂ ಮಾನಸಿಕ ವಿಶ್ಲೇಷಣೆಯ ಕಾದಂಬರಿಕಾರ. ಈತನ ಸಾಧನ ವಿಶ್ಲೇಷಣೆ. ಟಾಲ್‌ಸ್ಟಾಯಿಯ ಪ್ರಶ್ನೆ ಏಕೆ ಆದರೆ ಈತನ ಪ್ರಶ್ನೆ ಏನು, ಟಾಲ್‌ಸ್ಟಾಯ್ ಶಾಂತಿಯ ಅನ್ವೇಷಣದಲ್ಲಿ ನಿಶ್ಚಲ ನೈತಿಕ ನಿಯಮದತ್ತ ತಿರುಗಿದರೆ ಈತ ಪಾಶ್ಚಾತ್ಯ ರಾಷ್ಟ್ರಗಳ ಇಳಿಮುಖ ವಿಜ್ಞಾನ ಮತ್ತು ತಾಂತ್ರಿಕ ಪ್ರಗತಿಯ ಅನಾಹುತಗಳು, ಯೂರೋಪಿನ ಮಧ್ಯಮವರ್ಗದ ಪ್ರಾಪಂಚಿಕ ಮನೋವೃತ್ತಿ ಪರಿಣಾಮ, ಸಾಂಸ್ಕೃತಿಕ ಮೌಲ್ಯಗಳ ಅಗತ್ಯ-ಎಲ್ಲವನ್ನೂ ಗುರುತಿಸಿದ. ಈತನ ಆಸಕ್ತಿ ಪರಮಮೌಲ್ಯಗಳ ಪ್ರಭಾವಕ್ಕೆ ಒಳಗಾದ ಮನಸ್ಸಿನ ಪದರಗಳ ವಿಶ್ಲೇಷಣೆಯಲ್ಲಿ. ಈತನ ಒಳ ಹೋರಾಟ ಆಧ್ಯಾತ್ಮಿಕ ದಿಗ್ಭ್ರಮೆಗೆಯ್ಯುವಂಥದು. ಎಲ್ಲದರ ಆಧಾರವನ್ನೂ ಪ್ರಶ್ನಿಸಿ ಜೀವನದ ಅಸ್ತಿಭಾರವನ್ನು ಅರಸುವ ಪ್ರವೃತ್ತಿ ಈತನದು. ಆದುದರಿಂದ ಈ ಹೋರಾಟದ ವಸ್ತು ಸ್ವರೂಪವನ್ನು ಈತ ತನಗೆ ತಾನೇ ಸ್ಪಷ್ಟಪಡಿಸಿಕೊಳ್ಳಬೇಕಾಯಿತು. ಈ ಸ್ಪಷ್ಟೀಕರಣದ ಪ್ರಯತ್ನ ಈತನ ಕಾದಂಬರಿ ಗಳಲ್ಲಿ ಮೂಡಿದೆ. ಆದುದರಿಂದಲೇ ಈತನ ಕೃತಿಗಳ ಅಧ್ಯಯನ ಭಾವಶುದ್ಧಿಯ ಅನುಭವವೆನ್ನಿಸುವುದು. ಅಜಾಗೃತ ಮನಸ್ಸಿನ ಮೂಲೆ ಮೂಲೆಗೂ ಬೆಳಕು ಚೆಲ್ಲುವ ಪ್ರಯತ್ನ ಈತನದು. ಈತ ತನ್ನ ಅನ್ವೇಷಣೆಯ ಎಲ್ಲ ಒಗಟುಗಳು, ಜಟಿಲತೆಗಳಿಗೆ

ಕೌತುಕಕಾರಿಯಾದ ನಿರೂಪಣೆಯನ್ನು ತನ್ನ ಕಾದಂಬರಿಗಳಲ್ಲಿ ಕೊಟ್ಟಿದ್ದಾನೆ. ಈತನ ಕಥಾನಾಯಕರ ಭಾವನೆಗಳು, ಆಲೋಚನೆಗಳು ಆ ಪತ್ರಗಳು ಅಂತರಪ್ರಜ್ಞೆಯ ಒಡಲಿನಿಂದ ಚಿಮ್ಮುತ್ತವೆ. ಪಾತ್ರಗಳು ಸಂಪೂರ್ಣವಾದ ಸ್ವಾತಂತ್ರ್ಯದಿಂದ ವರ್ತಿಸುತ್ತವೆ. ತಾತ್ತ್ವಿಕ ಮತ್ತು ಕಾಲ್ಪನಿಕ ಎಳೆಗಳನ್ನು ಒಟ್ಟಿಗೆ ಹೆಣೆಯುವುದರಲ್ಲಿ ಲೇಖಕ ಪೂರ್ಣ ಕುಶಲ. ತತ್ತ್ವವನ್ನೇ ಬಾಳಿನ ಮಹಾಶಕ್ತಿಯನ್ನಾಗಿ ನಿರೂಪಿಸುವ ಹೊಸ ಮನೋವಿಶ್ಲೇಷಣಾತ್ಮಕ ಕಾದಂಬರಿಯನ್ನೇ ಈತ ಸೃಷ್ಟಿಸಿದನೆನ್ನಬಹುದು.

ಪಾತ್ರಗಳಿಗೆ ಅನುಭವವಾಗುವ ಅನಿರೀಕ್ಷಿತ ಭಾವನಾತ್ಮಕ ಅರಿವುಗಳನ್ನು ಈತನಂತೆ ಬೇರಾರೂ ನಿರೂಪಿಸಲಾರರು. ಈತನ ದುರಂತ ಪಾತ್ರಗಳು ಈತನ ಭಗವದನ್ವೇಷಣೆಯನ್ನು ಪ್ರತಿಬಿಂಬಿಸುತ್ತವೆ. ಒಂದು ಕಡೆ ಆಸ್ತಿಕ ಮನೋವೃತ್ತಿ, ಮತ್ತೊಂದು ಕಡೆ ಎಲ್ಲವನ್ನೂ ಪ್ರಶ್ನಿಸುವ ಅನಿಶ್ಚಯ ವೃತ್ತಿ ಎರಡೂ ಈತನ ಸ್ವಭಾವದಲ್ಲಿ ಬೆರೆತವಾಗಿ ಆಂತರ್ಯದಲ್ಲಿ ಉದ್ಭವಿಸುವ ಘರ್ಷಣೆ ಈತನ ಕಾದಂಬರಿಗಳಲ್ಲಿ ನಿರೂಪಿತವಾಗಿದೆ.

ಈತನ ಪತ್ರಿಕಾಲೇಖನಗಳಲ್ಲಿ ಪ್ರಾರಂಭದಲ್ಲಿ ಪ್ರಜಾಪ್ರಭುತ್ವ ಪಂಥದ ಪ್ರಭಾವವೂ ಅನಂತರದಲ್ಲಿ ರಾಷ್ಟ್ರೀಯ ಮತ್ತು ಮಂದಗಾಮಿ ಪಂಥದ ಪ್ರಭಾವವೂ ಕಾಣುತ್ತವೆ. ಈತ ನೀಡಿದ ಪುಷ್ಕಿನ್ನನ ಮೇಲಿನ ಭಾಷಣ (೧೮೮೦) ಸ್ಮರಣೀಯವಾದುದು.

ಯೂಲಿಕ್ಸಾಂದರ್ ಸಿರ್ಗೇಯವಿಚ್ ಪೂಷ್ಕಿನ್ (೧೭೯೯–೧೮೩೭)

ರಷ್ಯದ ಮಹಾಕವಿ. ಹಿರಿಯ ಜಮೀನ್ದಾರ ಮನೆತನದಲ್ಲಿ ಹುಟ್ಟಿದ. ತಂದೆತಾಯಿಗಳೊಡನೆ ಬಾಂಧವ್ಯ ಹಿತಕರವಾಗಿರಲಿಲ್ಲ. ವಿದೇಶ ವ್ಯವಹಾರ ಕಚೇರಿಯಲ್ಲಿ ಗುಮಾಸ್ತನಾಗಿ ಕೆಲಸಕ್ಕೆ ಸೇರಿದ. ತನ್ನ ನಾಸ್ತಿಕವಾದದಿಂದಲೂ ಕ್ರಾಂತಿಕಾರಕ ಚಾಟುಪದ್ಯಗಳಿಂದಲೂ ಕಷ್ಟವನ್ನನುಭವಿಸಬೇಕಾಯಿತು. ಅಮೇಲಿಯ ರಿಜನಿಕ್ ಎಂಬಾಕೆಯ ಸಂಪರ್ಕ ಹಲವು ಸುಂದರ ಗೀತೆಗಳಿಗೆ ಸ್ಫೂರ್ತಿ ನೀಡಿತು. ನತಾಲಿ ಗಾಂಚರೊವ ಎಂಬ ಚಲುವೆಯನ್ನು ಮದುವೆಯಾದುದು (೧೮೩೧) ಹಲವು ಕಷ್ಟಗಳಿಗೂ ಅವಮಾನಗಳಿಗೂ ಕಾರಣವಾಯಿತು. ಪತ್ನಿಯ ದುಂದುವೆಚ್ಚ, ಅರಸ ಆಕೆಯಲ್ಲಿ ತೋರಿಸುತ್ತಿದ್ದ ಅನುರಾಗ, ಇನ್ನಿತರರೊಡನೆ ಅವಳ ಪ್ರಣಯ– ಎಲ್ಲ ಈತನ ಬಾಳನ್ನು ದುಸ್ಸಹವನ್ನಾಗಿ ಮಾಡಿದುವು. ಕೊನೆಗೆ ಈತ ದ್ವಂದ್ವ ಯುದ್ಧವೊಂದರಲ್ಲಿ ಸಾವಿಗೀಡಾದ.

೧೮೧೪ರಲ್ಲಿಯೇ ಪೂಷ್ಕಿನ್ ಸಾಹಿತ್ಯ ರಚನೆ ಪ್ರಾರಂಭಿಸಿದ. ಅಲ್ಲಿಂದ ೧೮೧೮ರ ತನಕವೂ ಕೈ ಪಳಗಿಸಿಕೊಂಡ. ಪ್ರತಿಮೆಗಳಿಲ್ಲದ, ಲಾಲಿತ್ಯ–ಪ್ರಸನ್ನತೆಗಳು ಎದ್ದುಕಾಣುವ ಶೈಲಿ ಕರಗತವಾಯಿತು. ಪೂಷ್ಕಿನ್ ಹಲವು ಸಾಹಿತಿಗಳ ಪ್ರಭಾವಕ್ಕೆ ಒಳಗಾದವ. ಕಾವ್ಯದಲ್ಲಿ ಪ್ರಾರಂಭದ ದೆಸೆಯಲ್ಲಿ ರಷ್ಯನ್ ಕವಿಗಳ, ಅನಂತರ ಫ್ರೆಂಚ್ ಕವಿಗಳ ಆಮೇಲೆ ಬೈರನ್ನನ ಪ್ರಭಾವ ಇವನ ಬರೆಹಗಳಲ್ಲಿ ಕಂಡುಬರುತ್ತದೆ. ಆದರೆ, ಶೀಘ್ರವಾಗಿ ಈತ ತನ್ನ ವಿಶಿಷ್ಟ ಶಕ್ತಿಯನ್ನು ಶೈಲಿಯನ್ನು ಗುರುತಿಸಿಕೊಂಡ.

ಮೊದಲನೇ ಗಮನಾರ್ಹ ಕೃತಿ ರಸ್ಲಾನ್ ಆಂಡ್ ರುಡ್‌ಮಿಲ (೧೮೨೦). ಇದು ಫ್ರೆಂಚ್ ಕವಿಗಳ ಪ್ರಭಾವದ ಅವಧಿಯಲ್ಲಿ ರಚಿತವಾದುದು. ಆದರೆ, ಇದರಲ್ಲಿಯೇ ಇವನ ಲೀಲಾಜಾಲವಾದ ಕಾವ್ಯ ಸೃಷ್ಟಿಯ ಶಕ್ತಿ. ಥಳಥಳಿಸುವ ಚತುರೋಕ್ತಿ ಸ್ಪಷ್ಟತೆ – ಇವೆಲ್ಲವನ್ನೂ ಕಾಣಬಹುದು. ಇದರ ಪ್ರಕಟಣೆ ರಷ್ಯನ್ ಕಾವ್ಯ ಚರಿತ್ರೆಯಲ್ಲಿ ಒಂದು ಮೈಲಿಗಲ್ಲೆಂದು ಹಲವರು ಸ್ವಾಗತಿಸಿದರು. ದಿ ಪ್ರಿಸ್ನರ್ ಆಫ್ ದಿ ಕಾಕಸಸ್ (೧೮೨೧) ಮತ್ತು ದಿ ಫೌಂಟನ್ಸ್ ಆಫ್ ಬ್ಯಾಕಿಸೇರಾಯ್ (೧೮೨೪) ಎಂಬ ಎರಡು ಕಾವ್ಯಗಳು ಇವನಿಗೆ ಕೀರ್ತಿ ತಂದುವು. ಮರುವರ್ಷವೇ ಈತನ ಇನ್ನೊಂದು ಮುಖ್ಯ ಕಾವ್ಯ ದಿ ಜಪ್ಸೀಸ್ ಪ್ರಕಟವಾಯಿತು. ಇವುಗಳಲ್ಲಿ ಒಳಗಿನ ತಿರುಳು ಕಡಿಮೆ. ಆದರೆ, ಪದಗಳ ಆಯ್ಕೆ ಮತ್ತು ಶಬ್ದಮಾಧುರ್ಯ ಮನೋಹರವಾದವು. ಶಬ್ದಮಾಧುರ್ಯದ ಪರಿಪೂರ್ಣತೆಯನ್ನು ಬ್ಯಾಕಿಸೇರಾಯ್ ಸಾಧಿಸಿತು. ಪ್ರೇಮಕ್ಕೆ ಸರ್ವಸ್ವವನ್ನೂ ಅರ್ಪಿಸಿಕೊಂಡ ಪೌರಸ್ತ್ಯ ಲಾವಣ್ಯವತಿ, ರೋಮಾಂಚನಗೊಳಿಸುವ ಜೀವನವನ್ನು ನಡೆಸಿ ಕಹಿಯನ್ನುಂಡ ನಾಯಕ, ನಿರ್ದಯನೂ ಮಿತಭಾಷಿಯೂ ಆದ ಪೌರಸ್ತ್ಯ ಪ್ರಭು–ಇಂಥ ಪಾತ್ರಗಳ ಸೃಷ್ಟಿ, ನಾಟಕೀಯ ಕಥನ ರೀತಿ, ಅನಿರೀಕ್ಷಿತ ತಿರುವುಗಳು – ಇವುಗಳಲ್ಲಿ ಬೈರನ್ನನ ಪ್ರಭಾವವನ್ನು ಕಾಣಬಹುದು. ೧೮೨೪ ರಿಂದ ೧೮೩೩ರವರೆಗಿನದು. ಪೂಷ್ಕಿನ್ನನ ಸಾಹಿತ್ಯ ಸೃಷ್ಟಿಯಲ್ಲಿ ಸುಗ್ಗಿಯ ಕಾಲ. ದಿ ಜಿಪ್ಸೀಸ್ ಸ್ತ್ರೀ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಮತ್ತು ಶಿಕ್ಷೆಯ ನಿರರ್ಥಕತೆಯನ್ನೂ ನಾಗರಿಕ ಮಾನವನಲ್ಲಿ ರಕ್ತಗತವಾಗಿರುವ ಒಡೆತನದ ಬಯಕೆಯನ್ನೂ ನಿರೂಪಿಸುವ ಮಹಾಕಥನ ಕವನ. ಪೂಷ್ಕಿನ್ನನ ಅಸಮಾನ ಕಲ್ಪನೆ ಕಥೆಗೆ ಶಕ್ತಿ ನೀಡುವುದನ್ನು ಇಲ್ಲಿ ಕಾಣಬಹುದು. ಪದ್ಯರೂಪದಲ್ಲಿರುವ ಯೂಜೀನ್ ಓನೀಜಿನ್ (೧೮೩೧) ಎಂಬ ಕಾದಂಬರಿ ಈತನ ಅತ್ಯುತ್ತಮ ಕೃತಿ ಎಂದು ವಿಮರ್ಶಕರ ಅಭಿಪ್ರಾಯ. ಹಲವರು ದಿ ಬ್ರಾಂಜ್ ಹಾರ್ಸ್‌ಮನ್ ಎಂಬುದನ್ನು (೧೮೩೩) ಪೂಃಷ್ಕಿನ್ನನ ಅತ್ಯುತ್ತಮ ಕೃತಿ ಎಂದು ಭಾವಿಸುತ್ತಾರೆ. ಇದು ಸಮಾಜ ಮತ್ತು ವ್ಯಕ್ತಿಯ ಜೀವನಗಳ ಅವಶ್ಯಕತೆಗಳ ಘರ್ಷಣೀಯ ಚಿತ್ರ. ಇಲ್ಲಿ ಪೀಟರ್ಸ್‌ಬರ್ಗ್ ನಗರದಲ್ಲಿನ ಪೀಟರ್ ಮಹಾಶಯನ ಕಂಚಿನ ಪ್ರತಿಮೆ ಸಮಾಜದ ಹಕ್ಕುಗಳ ಮೂರ್ತಿಯಾಗುತ್ತದೆ. ಈ ಅವಧಿಯಲ್ಲಿ ಪೂಃಷ್ಕಿನ್ ಹಲವು ಭಾವಗೀತೆಗಳನ್ನು ನಾಡುಪದಗಳನ್ನೂ ಬರೆದ. ಅಂದಿನ ಯಾವ ಕವಿಗೂ ನಿಲುಕದಷ್ಟು ಉತ್ತಮ ಭಾವಗೀತೆಗಳನ್ನು ಈತ ಬರೆದಿದ್ದಾನೆ. ಇವನ ಶೈಲಿ ನಿರಾಡಂಭರವಾದುದು, ಸಂಯಮಪೂರ್ಣವಾದುದು. ಕೃತಿಯಲ್ಲಿ ನಿರೂಪಿಸಿರು ವುದು ಎಷ್ಟು ಪರಿಣಾಮವನ್ನುಂಟು ಮಾಡುವುದೋ ನಿರೂಪಿಸದೆ ಬಿಟ್ಟಿರುವುದೂ ಅಷ್ಟೇ ಪರಿಣಾಮಕಾರಿಯಾಗಿದೆ. ವೈಯುಕ್ತಿಕ ಭಾವನೆಗಳು ಸಂಪೂರ್ಣವಾಗಿ ಹಿನ್ನೆಲೆಯಲ್ಲಿ ಉಳಿಯುತ್ತವೆ. ಸಾಧಾರಣೀಕರಣಗೊಂಡ ಹಲವು ಭಾವಗಳು ಮೇಲೆ ತೇಲುತ್ತವೆ.

ಪೂಷ್ಕಿನ್ ಗಣನೀಯವಾದ ನಾಟಕಗಳನ್ನೂ ರಚಿಸಿದ್ದಾನೆ. ಬೋರಿಸ್ ಗೊಡುನಫ್ (೧೮೩೧) ಇವನ ಮೊದಲ ಅತಿ ದೀರ್ಘ ನಾಟಕ. ಇದರಲ್ಲಿ ಷೇಕ್ಸ್‌ಪಿಯರನ ಪ್ರಭಾವವಿದೆ. ಇದು ರಷ್ಯದಲ್ಲಿ ಮೊದಲನೆ ರೊಮ್ಯಾಂಟಿಕ್ ರುದ್ರ ನಾಟಕ. ಇದನ್ನೂ ವಿಮರ್ಶಕರು ಇವನ ಮೇರುಕೃತಿಗಳ ಸಾಲಿಗೆ ಸೇರಿಸಿದ್ದಾರೆ. ಕೊನೆಯ ಕಾಲದಲ್ಲಿ ಬರೆದ ಕಿರಿದುರಂತ ನಾಟಕಗಳು (೧೮೩೦) ಇದಕ್ಕಿಂತ ಸತ್ತ್ವಯುತವಾದವು ಎಂದು ಕೆಲವರ ಅನಿಸಿಕೆ. ಇವುಗಳಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರಭಾವ ಕಾಣುತ್ತದೆ. ಆಧುನಿಕ ಗದ್ಯ ಸಾಹಿತ್ಯದ ಆದ್ಯಪ್ರವರ್ತಕ ಪೂಷ್ಕಿನ್ ರಷ್ಯನ್ ಗದ್ಯಕ್ಕೆ ಆಧುನಿಕತೆಯನ್ನೂ ಜೀವಕಳೆಯನ್ನೂ ಒದಗಿಸಿಕೊಟ್ಟ. ಇವನ ಗದ್ಯ ಸಾಹಿತ್ಯದಲ್ಲಿ ವಾಲ್ಟರ್ ಸ್ಕಾಟನ ಪ್ರಭಾವ ತೋರಿಬರುತ್ತದೆ. ರಷ್ಯದಲ್ಲಿ ಮೊಟ್ಟಮೊದಲು ಸ್ವತಂತ್ರ ಕಾದಂಬರಿಯನ್ನು ರಚಿಸಿದವ ಪೂಷ್ಕಿನ್. ಬೆಲ್ಕಿನ್ನನ ಕಥೆಗಳು (೧೮೩೦) ಮತ್ತು ದುಬ್ರೊವ್‌ಸ್ಕಿಗಳಲ್ಲಿನ ವೃತ್ತಾಂತ ಕಲೆ ಸೊಗಸಾಗಿದೆ. ಸಣ್ಣ ಕಥೆ ಸಕ್ವೀನ್ ಆಫ್ ಸ್ಪೇಡ್ಸ್ (೧೮೩೪) ಎಂಬುದರಲ್ಲಿ ರೊಮ್ಯಾಂಟಿಕ್ ವಸ್ತುವಿಗೆ ಪ್ರಾಚೀನ ಸಾಹಿತ್ಯ ಮಾರ್ಗದ ರೂಪವಿತ್ತಿರುವ ಈತನ ಕಲೆಯನ್ನು ಪವಾಡ ಎಂದೇ ಬಣ್ಣಿಸಬೇಕು. ಪೂಷ್ಕಿನ್ ಉತ್ತಮ ವಿಮರ್ಶಕನೂ ಹೌದು.

ಪೂಷ್ಕಿನ್ ಬಾಳಿನಲ್ಲಿ ಸುಖ-ದುಃಖಗಳನ್ನು ಪ್ರಧಾನವೆಂದು ಎಣಿಸುವುದಿಲ್ಲ. ಇವನಿಗೆ ಬಾಳು ಚೈತನ್ಯಮಯವಾದ ಅನುಭವಗಳ ಆಕರ. ತೋರಿಕೆಯ ಜೀವವನ್ನು ಮಾತ್ರ ಈತ ಸಹಿಸಲಾರ. ಜೀವನ ಕಷ್ಟ ಹಾಗೂ ದುರಂತಗಳಿಂದ ಕೂಡಿದ್ದರೂ ಅದನ್ನು ಧೈರ್ಯವಾಗಿ ಸ್ವೀಕರಿಸಬೇಕೆಂಬುದೇ ಇವನ ಸಂದೇಶ.

ಪೂಷ್ಕಿನ್ನನದು ಬಹುಮುಖ ಪ್ರತಿಭೆ. ಅದ್ಭುತ ಕಲ್ಪನಾಶಕ್ತಿ. ರಷ್ಯನ್ ಕವಿಗಳು ಫ್ರೆಂಚ್ ಕವಿಗಳು, ಬೈರನ್, ಸ್ಕಾಟ್ ಇವರೆಲ್ಲರ ಪ್ರಭಾವಕ್ಕೆ ಒಳಗಾದರೂ ಎಲ್ಲ ಪ್ರಭಾವಗಳನ್ನೂ ರಕ್ತಗತ ಮಾಡಿಕೊಂಡು ಸ್ವತಂತ್ರವೂ ಸತ್ಯಪೂರ್ಣವೂ ಆದ ಕೃತಿಗಳನ್ನು ಈತ ರಚನೆ ಮಾಡಿದ. ಪಾಶ್ಚಾತ್ಯ ಸಾಹಿತ್ಯದ ಎಲ್ಲ ರೂಪಗಳನ್ನೂ ಪ್ರಭೇದಗಳನ್ನೂ ಈತ ರಷ್ಯನ್ ಭಾಷೆ ಸಾಹಿತಿಗಳಲ್ಲಿ ಚೇತನದೊಂದಿಗೆ ಸಮನ್ವಯ ಮಾಡಿದ. ಹಲವು ರಷ್ಯನ್ ಸಾಹಿತಿಗಳಲ್ಲಿ ಕಂಡುಬರುವ ಭಾವಪೂರ್ಣವಾದ ಆತ್ಮಶೋಧ ಇವನಲ್ಲಿ ಕಾಣಬರುವುದಿಲ್ಲ. ಅದ್ಭುತವಾದ ಸಮತೂಕ ಇವನ ಸಾಹಿತ್ಯದ ವಿಶಿಷ್ಟ ಲಕ್ಷಣ. ಇದರಿಂದ ಮಾನವೀಯತೆಯನ್ನು ರಷ್ಯನ್ ಸಾಹಿತ್ಯಕ್ಕೆ ತಂದುಕೊಂಡು ಅದನ್ನು ಯೂರೋಪಿನ ಸಾಹಿತ್ಯದ ಭಾಗವನ್ನಾಗಿ ಮಾಡುವುದು ಸಾಧ್ಯವಾಯಿತು. ಹೊಸ ವಸ್ತುಗಳನ್ನು ರಷ್ಯನ್ ಸಾಹಿತ್ಯಕ್ಕೆ ಸೇರಿಸಿ ಅದರ ವಾಸ್ತವಿಕತೆಗೆ ಮಾರ್ಗದರ್ಶನ ಮಾಡಿದ ಮತ್ತು ಅದನ್ನು ಜನಸಾಮಾನ್ಯರ ಮನೋಧರ್ಮ ಹತ್ತಿರಕ್ಕೆ ತಂದ ಸಾಧನೆ ಪೂಷ್ಕಿನ್ನನದು. ಇವನ ಕೃತಿಗಳಲ್ಲಿ ರಷ್ಯನ್ ಭಾಷೆ ಪರಿಪೂರ್ಣತೆಯನ್ನು ಪಡೆಯಿತು. ಇವನ ಕಾಲವನ್ನು ರಷ್ಯದ ಒಬ್ಬ ವ್ಯಕ್ತಿಯ ಸುವರ್ಣಯುಗ ಎಂದು ವರ್ಣಿಸಿದ್ದಾರೆ. ಅತಿ ದಬ್ಬಾಳಿಕೆಯ ಯುಗದಲ್ಲಿಯೂ ಸಾಹಿತಿಯ ಸ್ವಾತಂತ್ರ್ಯವನ್ನೂ ಉಳಿಸಿಕೊಂಡ ಕೀರ್ತಿಯೂ ಪೂಷ್ಕಿನ್ನನಿಗೆ ಸೇರಬೇಕು. (ಎಲ್.ಎಸ್.ಎಸ್.)

ಅಂತೋನ್ ಪಾವ್ಲೊವಿಚ್ ಚೆಕಾಫ್ (೧೮೬೦-೧೯೦೪)

ರಷ್ಯದ ಪ್ರಸಿದ್ಧ ಕತೆಗಾರ ಮತ್ತು ನಾಟಕಕಾರ. ಈತನ ಸಣ್ಣಕತೆಗಳು ಮತ್ತು ನಾಟಕಗಳು ವಿಶ್ವದಾದ್ಯಂತ ಜನಪ್ರಿಯತೆಗಳಿಸಿವೆ. ಈತ ತಗಾನ್‌ರಾಗ್ ಎಂಬಲ್ಲಿ ಬಡಕುಟುಂಬವೊಂದರಲ್ಲಿ ಜನಿಸಿದ. ಈತನ ತಾತ ಜೀತದಾಳಾಗಿ ಬಹಳ ವರ್ಷ ದುಡಿದು ವಿಮೋಚನೆ ಹೊಂದಿದವ. ತಂದೆ ಪುಟ್ಟ ಅಂಗಡಿಯ ಮಾಲೀಕನಾಗಿ ಸಂಸಾರದ ಹೊಣೆಯನ್ನು ನಿರ್ವಹಿಸುತ್ತಿದ್ದ. ಅಂಗಡಿಯ ವರಮಾನದಿಂದ ಸಂಸಾರದ ನಿರ್ವಹಣೆ ದುಸ್ಸಾಧ್ಯವಾದಾಗ ಚೆಕಾಫ್ ಮಕ್ಕಳಿಗೆ ಪಾಠ ಹೇಳಿಕೊಟ್ಟು ಹಣ ಸಂಪಾದಿಸಿ ಸಂಸಾರದ ನಿರ್ವಹಣೆಯಲ್ಲಿ ನೆರವಾಗುತ್ತಿದ್ದ. ಬಾಲ್ಯದ ದಿನಗಳು ತನಗೂ ತನ್ನ ಸೋದರರಿಗೂ ದುರ್ಭರವಾಗಿದ್ದವು; ತನ್ನ ಜೀವನದಲ್ಲಂತೂ ಬಾಲ್ಯದ ದಿನಗಳು ಇಲ್ಲವಾದವು ಎಂದು ತಾನೆ ಹೇಳಿಕೊಂಡಿದ್ದಾನೆ.

ಚೆಕಾಫ್ ಗ್ರೀಕ್ ಶಾಲೆಯಲ್ಲಿ ತನ್ನ ಶಿಕ್ಷಣವನ್ನು ಆರಂಭಿಸಿದ. ಆದರೆ ಒಂದು ವರ್ಷ ಮುಗಿಯುವುದರೊಳಗಾಗಿ ಈತನ ತಂದೆ ಈತನನ್ನು ಸ್ಥಳೀಯ ಶಾಲೆಗೆ (ಗಿಮ್ನಾಜಿ) ಸೇರಿಸಿದ (೧೮೬೯). ಚೆಕಾಫನಿಗೆ ಹದಿನೇಳು ವರ್ಷಗಳು ನಡೆಯುತ್ತಿದ್ದಾಗ ಈತನ ತಂದೆ ಎಲ್ಲವನ್ನು ಕಳೆದುಕೊಂಡು ತುಂಬ ಹೀನಸ್ಥಿತಿಗೆ ಬಂದ ಇಡೀ ಸಂಸಾರ ತಗಾನ್‌ರಾಗ್ ಊರನ್ನು ಬಿಟ್ಟು ಮಾಸ್ಕೊಗೆ ಪ್ರಯಾಣ ಬೆಳೆಸಬೇಕಾಯಿತು (೧೮೭೬). ಮಾಸ್ಕೊದ ಓಣಿಯೊಂದರಲ್ಲಿ ಚೆಕಾಫ್‌ನ ತಂದೆ ಬಿಡಾರಹೂಡಿದ. ಆದರೆ ಚೆಕಾಫ್ ತನ್ನ ಶಿಕ್ಷಣ ಪೂರೈಸುವವರೆಗೂ ಒಬ್ಬಂಟಿಗನಾಗಿ ತಗಾನ್‌ರಾಗ್‌ನಲ್ಲಿರಬೇಕಾಯಿತು. ಈತನಿಗೆ ಸಹಾಯ ಮಾಡುವ ಸ್ಥಿತಿಯಲ್ಲಿ ತಂದೆತಾಯಿಗಳಿರಲಿಲ್ಲ. ತಂದೆಗೆ ಸರಿಯಾಗಿ ಕೆಲಸವಿಲ್ಲದಿದ್ದುದರಿಂದ ಎಷ್ಟೋ ವೇಳೆ ಇಡೀ ಸಂಸಾರ ಹಸಿವಿನಿಂದ ನರಳಬೇಕಾಗುತ್ತಿತ್ತು.

ಚೆಕಾಫ್‌ನಿಗೆ ಚಿಕ್ಕಂದಿನಿಂದಲೂ ಬರೆಯುವ ಹವ್ಯಾಸ. ತಾನೂ ಅರೆಹೊಟ್ಟೆಯಿಂದ ಇದ್ದರೂ ತಂದೆತಾಯಿಗಳಿಗೆ, ಸೋದರರಿಗೆ ಹಾಸ್ಯಪೂರಿತ ಪತ್ರಗಳನ್ನು ಬರೆಯುತ್ತಿದ್ದ. ಸೋದರರಿಗಾಗಿ ಜ಼ಾಯ್‌ಕ ಎಂಬ ಕೈಬರೆಹದ ಹಾಸ್ಯ ಪತ್ರಿಕೆಯನ್ನು ಕಳುಹಿಸುತ್ತಿದ್ದ. ಮಾಸ್ಕೊ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ ಈತನ ಹಿರಿಯ ಅಣ್ಣ ಅಲೆಕ್ಸಾಂಡರನ ಪ್ರಭಾವ ಈತನ ಮೇಲೆ ಈ ಅವಧಿಯಲ್ಲಿ ಬಹುಮಟ್ಟಿಗೆ ಉಂಟಾಯಿತು. ರಷ್ಯದ ಮಧ್ಯಮವರ್ಗದ ಕುಟುಂಬಗಳಿಗೆ ಜೀವನ ದುಸ್ಸಹನೀಯವಾಗಿತ್ತು. ಈ ಪರಿಸ್ಥಿತಿ ಚೆಕಾಫನ ಮೇಲೆ ತುಂಬ ಪರಿಣಾಮ ಮಾಡಿತು. ಶಾಲಾ ಶಿಕ್ಷಣ ಪೂರೈಸಿದೊಡನೆಯೇ (೧೮೭೯) ಈತನಿಗೆ ಮಾಸ್ಕೊ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗದಲ್ಲಿ ಪ್ರವೇಶ ದೊರಕಿತು. ವೈದ್ಯಕೀಯ ಶಿಕ್ಷಣ ತನ್ನ ಸಾಹಿತ್ಯಕ ಕೃತಿಗಳ ಮೇಲೆ ಪ್ರಭಾವ ಬೀರಿತೆಂದು ಚೆಕಾಫ್ ಹೇಳಿಕೊಂಡಿದ್ದಾನೆ. ವೈದ್ಯಕೀಯ ಶಿಕ್ಷಣದಲ್ಲಿ ತೊಡಗಿದ್ದಾಗಲೇ ಸ್ವಲ್ಪ ಕಾಲ ಈತ ಆಸ್ಪತ್ರೆಗಳಲ್ಲಿ ಕೆಲಸ ಮಾಡಬೇಕಾಯಿತು. ಮುಂದೆ ವಿಶ್ವವಿದ್ಯಾಲಯ ಶಿಕ್ಷಣವನ್ನು

ಮುಗಿಸಿದೊಡನೆಯೇ (೧೮೮೪) ಚೆಕಾಫ್ ವೈದ್ಯವೃತ್ತಿಯನ್ನು ಬಿಟ್ಟು ಕೊಟ್ಟ, ಕೆಲಕಾಲ ಹಳ್ಳಿಗಳಿಗೆ ಹೋಗಿ ರೈತರಿಗೆ ಓದುಬರೆಹ ಕಲಿಸಿದ. ಹೀಗಾಗಿ ಜನ ಸಂಪರ್ಕ ನಿಕಟವಾಯಿತು.

೧೮೮೧ರಿಂದ ೧೮೮೭ರ ಅವಧಿಯಲ್ಲಿ ಈತ ಅಸಂಖ್ಯಾತ ಕೃತಿಗಳನ್ನು ರಚಿಸಿದ. ೧೮೮೫ರಲ್ಲಿ ಪೀಟರ್ಸ್‌ಬರ್ಗ್‌ನ ಪ್ರಸಿದ್ಧ ಪತ್ರಿಕೆ ಎನಿಸಿದ ನೋವಯ ವ್ರೇಮ್ಯದ (ಹೊಸಕಾಲ) ಸಂಪಾದಕ ಸವೋರಿನ್‌ನ ಪರಿಚಯವಾಯಿತು. ಆ ಪತ್ರಿಕೆಯ ಸಾಹಿತ್ಯಕ ಪುರವಣಿಗೆ ಈತ ಕಾಯಂ ಬರೆಹಗಾರನಾದ. ಇವರಿಬ್ಬರ ಸ್ನೇಹ ಗಾಢವಾಗಿ ಇಬ್ಬರೂ ಜೊತೆಯಲ್ಲೇ ಇಟಲಿ ದೇಶವನ್ನು ಸುತ್ತಿದರು. ಇವರಿಬ್ಬರ ನಡುವೆ ನಡೆದ ಪತ್ರವ್ಯವಹಾರ ಸಾಹಿತ್ಯದ ದೃಷ್ಟಿಯಿಂದ ಗಮನಾರ್ಹವಾದುದು. ೧೮೮೬ರಲ್ಲಿ ಈತ ತನ್ನ ಮೊದಲ ಕಥಾಸಂಕಲನವನ್ನೂ ೧೮೮೭ರಲ್ಲಿ ಇವಾನೊ ಎಂಬ ಮೊದಲ ನಾಟಕವನ್ನೂ ಪ್ರಕಟಿಸಿದ. ಈತ ಟಾಲ್‌ಸ್ಟಾಯ್‌ನ ಪ್ರಭಾವಕ್ಕೆ ಒಳಗಾಗಿದ್ದರೂ ಆತನ ಭೇಟಿಯಾದುದು ೧೮೯೫ರಲ್ಲಿ. ಅಪರಾಧಿಗಳ ಸ್ಥಿತಿಗತಿಗಳನ್ನರಿಯಲೋಸುಗ ಈಗ ಸಹಾಲಿನ್ ದ್ವೀಪದ ಪ್ರವಾಸವನ್ನು ಕೈಗೊಂಡ. ಈ ಪ್ರವಾಸದ ಫಲವಾಗಿ ಈತ ಸಹಾಲಿನ್ ದ್ವೀಪ ಎಂಬ ಕೃತಿಯನ್ನು ರಚಿಸಿದ. ಅಲ್ಲಿನ ದುಃಸ್ಥಿತಿಗೆ ದೇಶದ ಪ್ರತಿಯೊಬ್ಬ ಪ್ರಜೆಯೂ ಹೊಣೆಯೆಂದು ಅದರಲ್ಲಿ ಟೀಕಿಸಿದ. ಹಾಗಾಗಿ ಅಪರಾಧಿಗಳ ಸ್ಥಿತಿಗತಿಯಲ್ಲಿ ಸುಧಾರಣೆಗಳಾದವು. ೧೯೦೧ರಲ್ಲಿ ಈತ ವೋಲ್ಗಾ ಲಿಯೊನಾರ್ಡೋ ನೀಪರ್ ಎಂಬಾಕೆಯನ್ನು ವಿವಾಹವಾದ.

ಚೆಕಾಫ್ ಕ್ಷಯರೋಗ ಪೀಡಿತನಾಗಿದ್ದರಿಂದ ೧೮೯೨ರಲ್ಲಿ ಮಾಸ್ಕೊದಿಂದ ೬೦ ಕಿ.ಮೀ. ದೂರವಿದ್ದ ಮೇಲಿಹವ ಎಂಬ ಹಳ್ಳಿಗೆ ಬಂದು ಅಲ್ಲಿ ೬ ವರ್ಷಗಳ ಕಾಲ ವಾಸವಾಗಿದ್ದ. ಈ ಅವಧಿಯಲ್ಲಿ ಈತನ ಸೃಜನಾತ್ಮಕ ಸಾಹಿತ್ಯ ಸಿದ್ಧಿಯ ನೆಲೆಯನ್ನು ಮುಟ್ಟಿತೆಂದು ಹೇಳಬಹುದು. ಈತನ ಆರೋಗ್ಯ ದಿನದಿನಕ್ಕೂ ಕೆಡುತ್ತಾ ಹೋದಾಗ ವಿಶ್ರಾಂತಿಗಾಗಿ ಕ್ರಿಮ್‌ನಲ್ಲಿರುವ ಯಾಲ್ತಾ ಎಂಬ ನಗರಕ್ಕೆ ಬಂದ (೧೮೯೨). ಅಲ್ಲಿ ಈತನಿಗೆ ಗಾರ್ಕಿಯ ಸ್ನೇಹ ಲಭಿಸಿತು. ರಷ್ಯದಲ್ಲಿ ಇಂದಿಗೂ ಚೆಕಾಫ್, ಗಾರ್ಕಿ, ಟಾಲ್‌ಸ್ಟಾಯ್ ಈ ಮೂವರನ್ನು ರಷ್ಯದ ಸಾಹಿತ್ಯತ್ರಯರೆಂದು ಗಣಿಸಲಾಗಿದೆ.

೧೯೦೦ರಲ್ಲಿ ಈತ ರಷ್ಯನ್ ಅಕಾಡೆಮಿ ಆಫ್ ಸೈನ್ಸ್ (ಸಾಹಿತ್ಯ ವಿಭಾಗ) ಸಂಸ್ಥೆಯ ಗೌರವಸದಸ್ಯನಾಗಿ ಚುನಾಯಿತನಾದ. ಆದರೆ ಝಾರ್ ದೊರೆಯ ಆದೇಶದ ಮೇರೆಗೆ ಗಾರ್ಕಿಯ ಆಯ್ಕೆಯನ್ನು ರದ್ದುಗೊಳಿಸಿದ್ದರಿಂದ ಈತ ರಾಜೀನಾಮೆ ನೀಡಿದ.

ಈತನಿಗೆ ಉಕ್ರೇನಿಯನ್ ಸಾಹಿತ್ಯದ ಪರಿಚಯವಿತ್ತು. ಈತನ ಅಜ್ಜಿ ಉಕ್ರೇನಿಯನ್ನಳು. ಚಿಕ್ಕಂದಿನಲ್ಲಿ ಅಜ್ಜಿಯಿಂದ ಉಕ್ರೇನಿಯನ್ ಹಾಡುಗಳನ್ನೂ ಕತೆಗಳನ್ನೂ ಕೇಳಿದ್ದ. ಉಕ್ರೇನ್‌ನಲ್ಲಿ ಹರಿಯುವ ಹರೋಲ್ ನದಿಯ ದಂಡೆಯಲ್ಲಿ

ವಾಸಿಸಬೇಕೆಂದು ಎಷ್ಟೋ ಬಾರಿ ಈತ ಕನಸು ಕಂಡಿದ್ದುಂಟು. ಉಕ್ರೇನಿಯನ್ನರ ಸರಳತೆ, ಸಜ್ಜನಿಕೆ, ಹರಿತವಾದ ಬುದ್ಧಿಶಕ್ತಿ ಇವೇ ಮೊದಲಾದ ಸದ್ಗುಣಗಳಿಗೆ ಮಾರು ಹೋಗಿ ಈತ ತನ್ನಲ್ಲೂ ಆ ಗುಣಗಳನ್ನು ಅಳವಡಿಸಿಕೊಂಡಿದ್ದ, ವಿದ್ಯಾರ್ಥಿ ದೆಸೆಯಿಂದಲೂ ನಾಟಕರಂಗದ ಬಗ್ಗೆ ಈತನಿಗೆ ಆಸಕ್ತಿ: ಉಕ್ರೇನಿಯನ್ ಜನಜೀವನವನ್ನು ಆಧರಿಸಿ ಒಂದು ನಾಟಕವನ್ನು ಬರೆಯಬೇಕೆಂಬ ಅಭಿಲಾಷೆ; ಆದರೆ ಅದು ಸಾಧ್ಯವಾಗದೆ ಹೋಯಿತು. ಆದರೆ ಈತನ ಜೀವಿತಕಾಲದಲ್ಲೇ ಈತನ ಕೃತಿಗಳು ಉಕ್ರೇನಿಯನ್ ಭಾಷೆಗೆ ಅನುವಾದಗೊಂಡವು. ಇವಾನ್ ಫ್ರಾಂಕೊ, ಎಂ. ಕೊತ್ಸ್ಯುಬೀನ್‌ಸ್ಕಿ ಮತ್ತಿತರರು ಈತನ ಕೃತಿಗಳನ್ನು ಅನುವಾದಿಸಿದ್ದಾರೆ.

ಈತನ ನಾಟಕಗಳಲ್ಲಿ ವೀಷ್ ನ್ಯೋವಿ ಸಾದ್ (ಚೆರಿ ಹಣ್ಣಿನ ತೋಟ), ಜಾಜ್ಯಾವಾನ್ಯಾ (ವಾನ್ಯಾ ಚಿಕ್ಕಪ್ಪ), ಜಾಯಕ್ (ಕಡಲ ಕಾಗೆ), ತ್ರ್ಯೋಹ್ ಸ್ಯೋಸ್ತ್ರಿ (ಮೂವರು ಸಹೋದರಿಯರು), ಇವನೋ ಮುಖ್ಯವಾದುವು, ಚೆರಿಹಣ್ಣಿನ ತೋಟವಂತೂ ಜಗತ್ಪ್ರಸಿದ್ಧವಾಗಿದೆ. **(ಎಚ್.ಎಸ್.ಎಚ್.)**

ಜಮೀನ್ದಾರ ವರ್ಗಕ್ಕೆ ಸೇರಿದ ಓರ್ವ ಮಹಿಳೆ ಮತ್ತು ಅವಳ ಸಹೋದರನ ಕತೆಯನ್ನು ಚೆರಿ ತೋಟ ನಾಟಕದಲ್ಲಿ ಕಾಣಬಹುದು. ವ್ಯಕ್ತಿಗಳ ಆಸೆ ಕನಸುಗಳನ್ನು ಲಕ್ಷಿಸದೆ ಸಾಗುವ ಜಗತ್ತಿಗೆ ಹೊಂದಿಕೊಳ್ಳಲಾರದ ವ್ಯಕ್ತಿಗಳ ಆಸೆ ಭರವಸೆಗಳ ದುರಂತ ನಾಶ ಈ ಕೃತಿಯ ವಸ್ತು. ಚೆರಿತೋಟ ಈ ಆಸೆ ಭರವಸೆಗಳ ಪ್ರತೀಕ. ನಿರೂಪಣೆಯ ಸೌಮ್ಯತೆ ನಾಟಕದ ಪರಿಣಾಮವನ್ನು ಹೆಚ್ಚಿಸಿದೆ.

ಕಷ್ಟಾಂಕ ಎಂಬುದು ಸರ್ಕಸ್ಸಿನಲ್ಲಿ ಕೆಲಸ ಮಾಡುವ ಒಂದು ನಾಯಿಯ ಕತೆ. ನಿರೂಪಣೆ ಅದ್ಭುತವಾದುದು. ಇದು ಎಳೆಯ ಹೃದಯಗಳನ್ನು ಸೂರೆಗೊಳ್ಳುವ ಅತ್ಯಂತ ಯಶಸ್ವಿ ಕತೆ. ಈತನ ಕತೆಗಳಲ್ಲಿ ಮುಖ್ಯವಾಗಿ ಪ್ರತಿ ವ್ಯಕ್ತಿಯ ಅಂತರ್ಯದ ಒಂಟಿತನ, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದರ ಮತ್ತು ಒಬ್ಬರು ಮತ್ತೊಬ್ಬರಿಗೆ ತಮ್ಮ ಆಂತರ್ಯವನ್ನು ವ್ಯಕ್ತಪಡಿಸುವುದರ ಅಸಾಧ್ಯತೆ ಇವು ಚಿತ್ರಿತವಾಗಿವೆ. ಇದರಿಂದ ಚೆಕಾಫ್‌ನ ಕತೆಗಳ ಕ್ರಿಯೆ ವಿಷಾದ, ಬೇಸರ, ನಿಸ್ಸಹಾಯಕತೆಯ ಅರಿವು–ಇವು ಬೆರೆತ ವಾತಾವರಣದಲ್ಲಿ ಸಾಗುತ್ತದೆ.

ಈತ ತನ್ನದೇ ಆದ ವಿಶಿಷ್ಟ ಶೈಲಿಯನ್ನು ನಿರ್ಮಿಸಿಕೊಂಡ. 'ಬೇಸರದ ಕತೆ' 'ಸಾಹಿತ್ಯದ ಪ್ರಾಧ್ಯಾಪಕ' ಮೊದಲಾದವು ಸುಪ್ರಸಿದ್ಧ ಕತೆಗಳು. 'ವಾರ್ಡ್ ನಂ.೬' ಪ್ರತಿಮೆಯ ಬಳಕೆಯಲ್ಲಿ ಅದ್ಭುತ ಸಾಧನೆ.

ಈತ ತುರ್ಗ್ಯನೆಫ್ ಮತ್ತು ಆಸ್ಟ್ರೌಸ್ಕಿ ಇವರುಗಳ ಪ್ರಯೋಗಗಳನ್ನು ಬೆಳೆಸಿದ. ಈತನ ನಾಟಕಗಳಲ್ಲಿ ಘಟನೆಗಳು ನಡೆಯುವಂತೆ ಭಾಸವಾದರೂ ವಾಸ್ತವವಾಗಿ ಕ್ರಿಯೆ ಮುಂದುವರೆದಿರುವುದಿಲ್ಲ. ಸಣ್ಣ ಪುಟ್ಟ ಸಂಗತಿಗಳು ಮತ್ತು ವಿವರಗಳನ್ನು ಬಳಸಿಕೊಂಡು ನಿರಾಸೆಯ ವಾತಾವರಣವನ್ನು ಸೃಷ್ಟಿಸುವ ಈತನ ಕೌಶಲ ಅವನು

ಕರಣೀಯವಾದುದು. ಆಳವಾದ ಅನುಕಂಪದಿಂದ ಕೂಡಿದ ಪಾತ್ರನಿರೂಪಣೆ, ಪ್ರತಿಮಾವಿಧಾನದ ಬಳಕೆ, ವಿಶಿಷ್ಟವಾತಾವರಣದ ಸೃಷ್ಟಿ–ಇವು ಈತನ ನಾಟಕಗಳ ವೈಶಿಷ್ಟ್ಯ. ಇವು ರಂಗಭೂಮಿಯ ಮೇಲೂ ಬಹಳ ಯಶಸ್ವಿಯಾಗಿವೆ.

ಪಾಶ್ಚಾತ್ಯ ಜಗತ್ತಿನಲ್ಲಿ ಹತ್ತೊಂಬತ್ತನೆಯ ಶತಮಾನದ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬ. ತಾನು ನಾಟಕವನ್ನು ಹೇಗೆ ಕಲ್ಪಿಸಿಕೊಳ್ಳುತ್ತೇನೆ ಎನ್ನುವುದನ್ನು ಅವನು ಹೀಗೆ ವಿವರಿಸಿದ್ದಾನೆ. ನಾಟಕ ಹೇಗಿರಬೇಕೆಂದರೆ ಜನರು ಬಂದು ಹೋಗಬೇಕು, ಊಟಮಾಡಬೇಕು, ಹವೆಯ ವಿಷಯ ಮಾತನಾಡಬೇಕು, ಇಸ್ಪೀಟ್ ಆಡಬೇಕು, ಆದರೆ ಇದೆಲ್ಲವನ್ನು ನಾಟಕಕಾರ ಬಯಸುತ್ತಾನೆ ಎಂದು ಮಾಡಬಾರದು, ನಿಜ ಜೀವನದಲ್ಲಿ ಆಗುವುದು ಇದೇ ಎನ್ನುವ ಕಾವ್ಯಕ್ಕಾಗಿ ಮಾಡಬೇಕು. ರಂಗಭೂಮಿಯ ಮೇಲಿನ ಬದುಕು, ವಾಸ್ತವ ಬದುಕಿನಂತೆಯೇ ಇರಬೇಕು, ಅಲ್ಲಿ ಕಾಣುವ ಜನರೂ ನಿಜ ಜೀವನದಲ್ಲಿ ಇರುವಂತೆಯೂ ಇರಬೇಕು. ಆದರೆ ತೀರ ಸಾಮಾನ್ಯವೆಂದು ಕಾಣುವ, ಅಮುಖ್ಯವೆಂದು ಕಾಣುವ ಈ ಕ್ರಿಯೆಗಳು ನಡೆಯುತ್ತಿರುವಾಗಲೇ ಪಾತ್ರಗಳ ಬದುಕಿನ ದಿಕ್ಕುಗಳೇ ಬದಲಾಗುತ್ತಿವೆ, ಹೃದಯಗಳು ಒಡೆಯುತ್ತವೆ. ರಂಗಭೂಮಿಯ ಮೇಲಿನ ಕ್ರಿಯೆ ಬದುಕಿನ ಏರಿಳಿತಗಳನ್ನೂ ಸಾತತ್ವವನ್ನೂ ಅನುಭವಕ್ಕೆ ತಂದುಕೊಡಬೇಕು ಎಂದು ಇವನ ಅಭಿಪ್ರಾಯ. ಇವನ ನಾಟಕಗಳನ್ನು "ನಗೆ ಮತ್ತು ಉತ್ಪ್ರೇಕ್ಷೆಗಳಿಲ್ಲದ ಕಾಮಿಡಿ, ಎದೆ ಬಿಗಿಯುವುದು ಮತ್ತು ದುಷ್ಟತನಗಳಿಲ್ಲದ ಟ್ರಾಜಿಡಿ" ಎಂದು ವರ್ಣಿಸಿದೆ. (ಎಂದರೆ ಎದೆ ಬಡಿಯುವುದು ರಂಗಭೂಮಿಯ ಮೇಲಿನ ಕ್ರಿಯೆಯ ಭಾಗವಲ್ಲ). ಇವನ ನಾಟಕಗಳ ಕೇಂದ್ರದಲ್ಲಿ ಒಬ್ಬ ನಾಯಕ ಅಥವಾ ನಾಯಕಿ ಇರುವುದಿಲ್ಲ. ಒಂದು ಗುಂಪು ಇರುತ್ತದೆ. ನಾಟಕದಲ್ಲಿ ಕಥಾವಸ್ತು ಬೆಳೆಯುತ್ತದೆ ಎನ್ನುವುದಕ್ಕಿಂತ ಒಂದು ಸನ್ನಿವೇಶ ಅನಾವರಣವಾಗುತ್ತ ಹೋಗುತ್ತದೆ ಎನ್ನಬಹುದು. ಕಾಮಿಡಿ ಮತ್ತು ವಿಷಾದಗಳ ಅಸಿಧಾರಾ ಸಮತೋಲನವನ್ನು ಇವನ ನಾಟಕಗಳಲ್ಲಿ ಕಾಣಬಹುದು. (ಎಲ್.ಎಸ್.ಎಸ್.)

ಐವಾನ್ ಸ್ಯಿರ್‌ಗ್ಯೇಯೆವ್ವಿಚ್ ತುರ್ಗ್ಯೇನ್ಯೆಫ್ (೧೮೧೮–೮೩)

ಹೆಸರಾಂತ ರಷ್ಯನ್ ಕಾದಂಬರಿಕಾರ, ನಾಟಕಕಾರ, ಹಾಗೂ ಸಣ್ಣ ಕತೆಗಾರ. ರಷ್ಯನ್ ಸಾಹಿತ್ಯದ ಕಡೆಗೆ ಪಶ್ಚಿಮ ಯುರೋಪಿನ ಜನರ ಗಮನವನ್ನು ಸೆಳೆದ ರಷ್ಯನ್ ಸಾಹಿತಿಗಳಲ್ಲಿ ಮೊದಲಿಗ.

ಹುಟ್ಟಿದ್ದು ಆರಲ್‌ನಲ್ಲಿ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡ. ತಾಯಿ ಸ್ವಭಾವತಃ ಕ್ರೂರಿ. ವಿಶ್ವಾಸವಿದ್ದರೂ ಮಗನನ್ನು ಅತ್ಯಂತ ಕಠಿಣವಾದ ರೀತಿಯಲ್ಲಿ ಬೆಳೆಸಿದಳು ; ತನ್ನ ತಾಯಿಯ ಕ್ರೂರವರ್ತನೆ, ದರ್ಪ, ನಿರಂಕುಶ ಪ್ರವೃತ್ತಿಗಳೇ ಈತ ಸಮಾಜವನ್ನು ಬಹಳವಾಗಿ ದ್ವೇಷಿಸಲು ಕಾರಣವಿರಬೇಕು.

ಮನೆಯಲ್ಲಿನ ವಿದ್ಯಾಭ್ಯಾಸ ಮುಗಿಸಿದ ಈತ ಮಾಸ್ಕೊ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷ ಕಾಲ ಇದ್ದು ಅನಂತರ ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯ ಸೇರಿ ಪದವೀಧರನಾಗಿ (೧೮೩೭) ಅನಂತರ ಬರ್ಲಿನ್ ನಗರಕ್ಕೆ ತೆರಳಿ

ಅಲ್ಲಿ ತತ್ತ್ವಶಾಸ್ತ್ರವನ್ನು ಅಭ್ಯಾಸ ಮಾಡಿದ. ಪಶ್ಚಿಮ ಯುರೋಪಿನ ಸಂಸ್ಕೃತಿ ಮತ್ತು ರಾಜಕೀಯ ಸಂಸ್ಥೆಗಳಿಂದ ಪ್ರಭಾವಿತನಾಗಿ ಪಾಶ್ಚಾತ್ಯ ಸಂಸ್ಕೃತಿಯ ಆರಾಧಕನಾದ.

ರಷ್ಯಕ್ಕೆ ಹಿಂತಿರುಗಿ (೧೮೪೧) ಗೃಹಸಚಿವಶಾಖೆ ಒಂದರಲ್ಲಿ ಎರಡು ವರ್ಷ ಕೆಲಸ ಮಾಡಿ ಕೆಲಸಕ್ಕೆ ರಾಜೀನಾಮೆಯಿತ್ತು ಪೂರ್ಣವಾಗಿ ಸಾಹಿತ್ಯರಚನೆಯಲ್ಲಿ ತೊಡಗಿದ. ಈತನ ಮೊದಲ ಕವನ ಪರಾಶಾ ಅದೇ ವರ್ಷ ಪ್ರಕಟವಾಯಿತು. ಮೊದಲಲ್ಲಿ ಈತನ ಒಲವು ಕಾವ್ಯದ ಕಡೆಗಿದ್ದಿತಾದರೂ ಕ್ರಮೇಣ ಅದು ತನ್ನ ಜಾಯಮಾನಕ್ಕೆ ಒಗ್ಗತಕ್ಕದಲ್ಲವೆಂದು ಭಾವಿಸಿ ಈತ ಗದ್ಯದಲ್ಲಿ ಬರೆಯಲು ತೊಡಗಿದ. ೧೮೫೨ರಲ್ಲಿ ಈತನ ಪ್ರಥಮ ಕಥಾಸಂಕಲನ ಷಿಕಾರಿಯ ಚಿತ್ರಗಳು ಪ್ರಕಟಗೊಂಡಿತು. ಈ ಕೃತಿ ಈತನಿಗೆ ರಷ್ಯನ್ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನುಗಳಿಸಿಕೊಟ್ಟಿತು. ರಷ್ಯದ ಜೀತವ್ಯವಸ್ಥೆಯನ್ನು ಕಟುವಾಗಿ ಟೀಕಿಸಿ ಎತ್ತಿ ತೋರಿಸಿ ಇಲ್ಲಿನ ಕ್ರಾಂತಿಕಾರಕ ಚಿತ್ರಗಳು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾದವು. ರಷ್ಯದ ಚಕ್ರವರ್ತಿ ಎರಡನೆಯ ಅಲೆಕ್ಸಾಂಡರ್‌ನ ಮೇಲೆ ಈ ಕೃತಿ ಅತ್ಯಂತ ಪರಿಣಾಮಕಾರಿ ಪ್ರಭಾವ ಬೀರಿ ಜೀತದಾಳು ವ್ಯವಸ್ಥೆಯನ್ನು ತೊಡೆದು ಹಾಕುವಂತೆ ಪ್ರೇರೇಪಿಸಿತು. ಇತಿಹಾಸವನ್ನು ಬದಲಿಸಲು ಸಾಹಿತ್ಯ ಹೇಗೆ ಸಹಾಯಕವಾಗಬಹುದು ಎಂಬುದನ್ನು ತೋರಿಸಲು ಈ ಪುಸ್ತಕ ಉತ್ತಮ ನಿದರ್ಶನವಾಗಿದೆ. ಇಷ್ಟಾದರೂ ರಷ್ಯದ ಅಧಿಕಾರವರ್ಗ ಈತನಿಗೆ ಅಷ್ಟಾಗಿ ಮನ್ನಣೆ ಕೊಡಲಿಲ್ಲ. ೧೮೫೨ರಲ್ಲಿ ಹೆಸರಾಂತ ಸಾಹಿತಿ ಗಾಗಲ್‌ನಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲು ಈತ ಪ್ರಕಟಿಸಿದ ಲೇಖನ ಈತನನ್ನು ಸರ್ಕಾರದ ಕ್ರೋಧಕ್ಕೀಡುಮಾಡಿದ್ದುದಲ್ಲದೆ ೧೮ ತಿಂಗಳುಗಳ ಕಾಲ ಕಾರಾಗೃಹ ವಾಸಕ್ಕೆ ಗುರಿ ಮಾಡಿತು.

೧೮೫೦ರಿಂದ ೧೮೬೦ರ ಅವಧಿಯಲ್ಲಿ ಈತನ ಪ್ರಮುಖ ಕೃತಿಗಳಾದ ರೂಡಿನ್, ಎ ನೆಸ್ಟ್ ಆಫ್ ಜಂಟಲ್‌ಫೋಕ್, ಆನ್ ದಿ ಈವ್, ಮುಂತಾದ ಕೃತಿಗಳು ಪ್ರಕಟವಾದವು. ಇವುಗಳಲ್ಲಿ ಕಂಡುಬರುವ ಉದಾರ ಮನೋಭಾವ ಮತ್ತು ರಷ್ಯದ ಜನಜೀವನದಲ್ಲಿ ಪರಿಹರಿಸಲಾಗದಿದ್ದ ಘರ್ಷಣೆಗಳ ಯಥಾವತ್ತಾದ ಚಿತ್ರಣ ಈತನ ಖ್ಯಾತಿಯನ್ನು ಹೆಚ್ಚಿಸಿದವು. ಈ ಎಲ್ಲ ಕಾದಂಬರಿಗಳ ನಾಯಕರೂ ಉದಾರ ಮನೋಭಾವವುಳ್ಳವರು; ಸಾಮಾಜಿಕ ಮತ್ತು ನೈತಿಕ ಸಮಸ್ಯೆಗಳ ಅರಿವುಳ್ಳವರು. ಆದರೆ ಇವರು ತಮ್ಮ ಭಾವನೆಗಳನ್ನು ಕಾರ್ಯರೂಪಕ್ಕೆ ತರುಲು ಅಶಕ್ತರಾದರು. ಇಂಥ ಜನರನ್ನು ಗುರುತಿಸಲು ರಷ್ಯನ್ ಸಾಹಿತಿಗಳು ಅನಾವಶ್ಯಕ ಮನುಷ್ಯ ಎಂಬ ಪದವನ್ನು ಉಪಯೋಗಿಸುತ್ತಿದ್ದರು. ಈ ಸಂಪ್ರದಾಯವನ್ನು ಮೊದಲು ಮಾಡಿದವ ಪುಷ್ಕಿನ್. ತುರ್ಗೇನ್ಯೆಫ್ ಇದನ್ನು ಮುಂದುವರಿಸಿದ.

ಫಾದರ್ಸ್ ಅಂಡ್ ಸನ್ಸ್ (೧೮೬೧) ಈತನ ಅತ್ಯಂತ ಉತ್ತಮ ಕಾದಂಬರಿ. ಇದರ ನಾಯಕ ಬಜರೋವ್. ತೀವ್ರವಾದಿಗಳಂತೆ ಸಂಪ್ರದಾಯ ಮತ್ತು ಅರಸೊತ್ತಿಗೆಗಳ ವಿರೋಧಿ, ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲದವ,

ಸಮಾಜದ ಓರೆಕೋರೆಗಳನ್ನು ತಿದ್ದಲು ವೈಜ್ಞಾನಿಕ ಮಾರ್ಗದಿಂದ ಮಾತ್ರ ಸಾಧ್ಯವೆಂದು ನಂಬಿದವ. ತೀರ ಬಿಚ್ಚುಮನಸ್ಸಿನ ಒರಟು ಸ್ವಭಾವದ. ಧೈರ್ಯಶಾಲಿ ಯುವಕ. ಆದರೆ ಯಾವ ಸಂಪ್ರದಾಯವನ್ನು ತುಚ್ಛವಾಗಿ ಕಾಣುತ್ತಿದ್ದನೋ ಅದೇ ಸಂಪ್ರದಾಯಕ್ಕೆ ಈತ ಶರಣು ಹೋಗಬೇಕಾಯಿತು. ಬಜರೋವ್ ಒಡಿನ್‌ಕ್ಸೋವ ಎಂಬ ಶ್ರೀಮಂತ ತರುಣಿಯ ಪ್ರೇಮಪಾಶಕ್ಕೆ ಸಿಕ್ಕಿ ಕ್ರಾಂತಿಕಾರಿ ತತ್ತ್ವಗಳ ಬಗ್ಗೆ ತನ್ನಲ್ಲಿದ್ದ ನಂಬಿಕೆಗಳನ್ನು ಸಡಿಲಗೊಳಿಸುತ್ತಾನೆ. ಆತ್ಮವಿಶ್ವಾಸವನ್ನೂ ರಷ್ಯದ ಜನತೆಯಲ್ಲಿ ತನಗಿದ್ದ ನಂಬಿಕೆಯನ್ನೂ ಕಳೆದುಕೊಂಡು ಜೀವನದಲ್ಲಿ ಜುಗುಪ್ಸೆ ಹೊಂದಿ ಪ್ರಾಣ ಬಿಡುತ್ತಾನೆ. ರಷ್ಯದ ಯುವಕರು ಕ್ರಾಂತಿಯುಂಟುಮಾಡಲು ಹಂಬಲಿಸುತ್ತಿದ್ದರೂ ರಷ್ಯದ ಅಂದಿನ ವಾತವರಣ ಕ್ರಾಂತಿಗೆ ಹೇಗೆ ಅನುವಾಗಿಲ್ಲವೆಂದು ತೋರಿಸಲು ಬಾಜರೋವಿನ ಪಾತ್ರವನ್ನು ತುರ್ಗೇನೈಫ್ ಸೃಷ್ಟಿಸಿದಂತಿದೆ. ಯೌವನದ ಕಾವಿನಲ್ಲಿ ಆದರ್ಶಗಳು ಹೇಗೆ ಹಿಂದಕ್ಕೆ ಸರಿಯುತ್ತವೆ ಎಂಬ ಕಟುಸತ್ಯವನ್ನು ಇಲ್ಲಿ ಕಾಣಬಹುದು. ಇದು ಆ ಕಾಲದ ರಷ್ಯನ್ ತೀವ್ರವಾದಿಗಳನ್ನು ಕೆರಳಿಸಿತು. ಅವರು ತುರ್ಗೇನೈಫ್‌ನ ಜೀವನದರ್ಶನವನ್ನು, ಸೂಕ್ಷ್ಮವಿಡಂಬನೆಯನ್ನು ಅರ್ಥಮಾಡಿಕೊಳ್ಳಲಾರದೆ ಈತನನ್ನು ಪ್ರತಿಗಾಮಿ ಎಂದು ಕರೆದರು. ತನ್ನ ಕಾದಂಬರಿ ಎಬ್ಬಿಸಿದ ಕೋಲಾಹಲ ಸೂಕ್ಷ್ಮಸ್ವಭಾವದ ಈತನ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿತು. ಸ್ಮೋಕ್ (೧೮೬೭) ಎಂಬ ಈತನ ಆತ್ಮಕಥಾರೂಪದ ಕಾದಂಬರಿಯಲ್ಲಿ ಕಂಡುಬರುವಂತೆ ಈತನು ತನ್ನ ಸಾಹಿತ್ಯ ರಚನೆಯನ್ನೇ ನಿಲ್ಲಿಸಿಬಿಡಬೇಕೆಂಬ ನಿರ್ಧಾರಕ್ಕೂ ಬಂದಿದ್ದ. ಕೆಲವು ಕಾಲ ತಾಯ್ನಾಡನ್ನು ತ್ಯಜಿಸಿ ವಿದೇಶಯಾತ್ರೆಯನ್ನು ಕೈಕೊಂಡ. ಮತ್ತೆ ಮತ್ತೆ ರಷ್ಯಕ್ಕೆ ಹಿಂತಿರುಗುತ್ತಿದ್ದರೂ ಅಲ್ಲಿ ಹೆಚ್ಚು ದಿನ ನಿಲ್ಲುತ್ತಿರಲಿಲ್ಲ. ಸ್ಮೋಕ್ ಕಾದಂಬರಿಯಲ್ಲಿ ರಷ್ಯದ ಅಂದಿನ ಜೀವನದ ಬಗೆಗೆ ತನ್ನಲ್ಲಿದ್ದ ಜುಗುಪ್ಸೆಯನ್ನು ಈತ ವಿವರವಾಗಿ ತೋಡಿಕೊಂಡಿದ್ದಾರೆ. ರಷ್ಯದ ಜನಜೀವನದಲ್ಲಿ ತನ್ನಂಥವರು ಅನವಶ್ಯಕ ಎಂಬ ಭಾವನೆ ಈತನನ್ನು ಮಾನಸಿಕಯಾತನೆಗೆ ಎಡೆ ಮಾಡಿತು. ಕ್ರಮೇಣ ಬೆನ್ನೆಲುಬಿನ ಕ್ಯಾನ್ಸರ್ ಕಾಯಿಲೆಯಿಂದ ಬಳಲಿದ ಈತ ೧೮೮೩ರಲ್ಲಿ ಪ್ಯಾರಿಸ್ಸಿನ ಬಳಿ ಸೀನ್ ನದಿಯ ದಡದಲ್ಲಿನ ಬಾಗಿನಾಲ್ ಹಳ್ಳಿಯಲ್ಲಿ ತನ್ನ ಕೊನೆಯುಸಿರನ್ನೆಳೆದ.

ಈತ ನಿಜಕ್ಕೂ ಪ್ರತಿಭಾವಂತ ಸಣ್ಣ ಕತೆಗಾರ. ಫಸ್ಟ್ ಲವ್ (೧೮೭೦); ಎಲಿಯರ್ ಆಫ್ ದಿ ಸ್ಟೆಪ್ಸ್ (೧೮೭೦); ಟಾರೆಂಟ್ಸ್ ಆಫ್ ಸ್ಪ್ರಿಂಗ್ (೧೮೭೧); ಕ್ಲಾರಮಿಲಿಚ್ (೧೮೮೧) – ಇವು ಈತನ ಅತ್ಯುತ್ತಮ ಸಣ್ಣ ಕತೆಗಳು. ಈತ ಜೀವನದ ನಿಷ್ಕೃಷ್ಟತೆ, ಸ್ಪಷ್ಟತೆ. ರಮ್ಯತೆಗಳ ವಾಸ್ತವ ಚಿತ್ರಣವನ್ನು ಚಿತ್ರಿಸುವಲ್ಲಿ ಹೆಸರಾದವ. ಈತನ ಬಹುತೇಕ ಪುಸ್ತಕಗಳು ಇಂಗ್ಲಿಷ್ ಭಾಷೆಗೆ ಅನುವಾದವಾಗಿವೆ.

ಸಾಹಿತ್ಯರಂಗದಲ್ಲಿ ಎಷ್ಟೇ ಬದಲಾವಣೆಗಳಾಗಿದ್ದರೂ ಇಂದಿಗೂ ಈತ ರಷ್ಯದ ಮತ್ತು ಯುರೋಪಿನ ಸಾಹಿತ್ಯ ಕ್ಷಿತಿಜದ ಪ್ರಮುಖ ಸಾಹಿತಿ ಎನಿಸಿದ್ದಾನೆ.

(ಜಿ.ಎಚ್.ಆರ್.; ಎಸ್.ಎಸ್.)

ತುರ್ಗೆನೈಫ್ ಜೀವದಾಳುಗಳು ಮತ್ತು ಭೂಮಾಲಿಕರು – ಈ ಎರಡು ವರ್ಗಗಳನ್ನೇ ಚಿತ್ರಿಸಿದ. ಜಮೀನ್ದಾರರದು ನಾಶವಾಗುವ ವರ್ಗ ಎಂದು ಚಿತ್ರಿಸಿದ. ನಿರರ್ಥಕ ವ್ಯಕ್ತಿಗಳು (ಇವರು ಹುಟ್ಟದೆ ಹೋಗಿದ್ದರೆ ಏನೂ ನಷ್ಟವಾಗುತ್ತಿರಲಿಲ್ಲ ಎನ್ನುವಂಥ ಜನರು) ಹಲವರನ್ನು ಕುತೂಹಲಕರವಾಗಿ ಚಿತ್ರಿಸಿದ. 'ಫಾದರ್ಸ್ ಅಂಡ್ ಸನ್ಸ್' ಕಾದಂಬರಿಯ ಬಜರೋವ್‌ನ ಪಾತ್ರದಲ್ಲಿ 'ನಿಹಿಲಿಸ್ಟ್' ಅನ್ನು ಸೃಷ್ಟಿಸಿದ. 'ನಿಹಿಲಿಸಂ' ಎನ್ನುವ ಪದವನ್ನು ಅವನೇ ಸೃಷ್ಟಿಸಿದ. ಎಲ್ಲ ಪದ್ಧತಿಗಳನ್ನೂ ಸಂಸ್ಥೆಗಳಲ್ಲಿ ತಿರಸ್ಕರಿಸಿ, ಪರಿಣಾಮ ಏನೇ ಆಗಲಿ, ಅವನ್ನೆಲ್ಲ ನಾಶಮಾಡಿಬಿಡಬೇಕೆಂಬ ಪಂಥ ನಿಹಿಲಿಸಂ ತುರ್ಗೆನೈಫ್‌ನ ಕಾದಂಬರಿಯಿಂದ ಜನರು ಈ ಪಂಥದ ವಿಷಯವಾಗಿ – ಈ ಪಾತ್ರದ ಸೃಷ್ಟಿಯಿಂದಾಗಿ ಕಾದಂಬರಿಕಾರ ಹಲವರು ಉಗ್ರವಾದಿಗಳ ಕೋಪಕ್ಕೆ ಗುರಿಯಾದ. (ಎಲ್.ಎಸ್.ಎಸ್.)

ವ್ಲಾಡಿಮಿರ್ ಮಯಕಾಫ್‌ಸ್ಕಿ

ರಷ್ಯದ ಕವಿ ಮತ್ತು ನಾಟಕಕಾರ. ೧೯೦೮ರಲ್ಲಿ ಬಾಲ್ಷೆವಿಕರನ್ನು ಸೇರಿದ. ೧೯೧೧ರಲ್ಲಿ ಭವಿಷ್ಯತಾವಾದಿಗಳ ಪರಿಚಯವಾಗಿ ಕಾವ್ಯ ರಚನೆ ಪ್ರಾರಂಭಿಸಿದ. ೧೯೧೭ರ ಕ್ರಾಂತಿಯ ಅನಂತರ ಕೆಲವು ಕಾಲ ಅಸಾಧಾರಣ ಜನಪ್ರಿಯತೆಗಳಿಸಿದ. ೧೯೨೧ರ ತರುವಾಯ ಬರೆದ ವಿಡಂಬನಗಳನ್ನು ಪ್ರಭುತ್ವ ನಿಷೇದಿಸಿತು. ೧೯೩೦ರಲ್ಲಿ ಪ್ರಾಯಶಃ ಪ್ರೇಮಜೀವನದಲ್ಲಿ ನಿರಾಸೆ ಹೊಂದಿ ಈತ ಆತ್ಮಹತ್ಯೆ ಮಾಡಿಕೊಂಡ.

ಮಯಕಾಫ್‌ಸ್ಕಿ ತನ್ನ ಸಾಹಿತ್ಯ ಸೃಷ್ಟಿಯನ್ನು ಇಟಾಲಿಯನ್ "ಭವಿಷ್ಯತಾವಾದಿಗಳ" ಪ್ರಭಾವದಿಂದ ಪ್ರಾರಂಭಿಸಿದ. ಸ್ವಭಾವತಃ ಮೇರೆಯಿಲ್ಲದ ಅಹಂಭಾವ ಇವನದು. ತನ್ನನ್ನೇ ಕುರಿತು ೨೧ನೆಯ ವರ್ಷದಲ್ಲಿ "ವ್ಲಾಡಿಮಿರ್ ಮಯಕಾಫ್‌ಸ್ಕಿ" ಎನ್ನುವ ದುರಂತ ನಾಟಕ ಬರೆದು ಅಭಿನಯ ಮಾಡಿಸಿದ. ನಿಯಮ–ನಿಷೇಧಗಳ ದ್ವೇಷಿ. ರಷ್ಯದಲ್ಲಿ ಬಹುಕಾಲ ನಡೆದು ಬಂದಿದ್ದ ಸ್ವೇಚ್ಛಾಪ್ರಭುತ್ವ, ದಬ್ಬಾಳಿಕೆಗಳ ವಿರುದ್ಧದ ಕ್ರಾಂತಿ ಸಾಹಿತ್ಯದಲ್ಲಿಯೂ ಗತಕಾಲದ ವಿರುದ್ಧ ದಂಗೆಯನ್ನು ಪ್ರೇರೇಪಿಸಿತು. ಪ್ರಾರಂಭದಲ್ಲಿ ಈತನ ಸಾಹಿತ್ಯ ಪುಷ್ಕಿನ್ ಮತ್ತು ಪ್ರತಿಮಾ ವಿಧಾನ– ಅದರ ಅತಿಮಾಧುರ್ಯ, ದೌರ್ಬಲ್ಯ, ಅನುಭಾವಗಳ–ವಿರುದ್ಧದ ಪ್ರತಿಕ್ರಿಯೆ, ಸ್ಪಷ್ಟವಾದ, ಸುಲಭವಾಗಿ ಅರ್ಥವಾಗುವ, ವೀರ್ಯವತ್ತಾದ, ಮೈನವಿರೇಳಿಸುವ, ಯಾವ ಒರಟು ತನಕ್ಕೂ ಹಿಂದೆಗೆಯದ ಕಾವ್ಯವನ್ನು ಈತ ಸೃಷ್ಟಿಮಾಡಲು ಹೊರಟ. ಉಚ್ಚರಣಾಂಶ ವನ್ನು ಅವಲಂಬಿಸಿದ ಛಂದಸ್ಸನ್ನು ತೊರೆದು, ಒತ್ತಿಲ್ಲದ ಉಚ್ಚರಣಾಂಶವನ್ನು ಅಲಕ್ಷಿಸಿ ಒತ್ತಿಗೆ ಪ್ರಾಧಾನ್ಯ ನೀಡಿದ. ಒಂದಕ್ಕಿಂತ ಹೆಚ್ಚು ಪದಗಳನ್ನು ಜೋಡಿಸಿದ ಪ್ರಾಸಗಳು, ಭಾಷೆಯ ಒರಟು ಪ್ರಯೋಗ, ಒರಟು ಹಾಸ್ಯ, ಒಂದೊಂದು ಪದಕ್ಕೆ– ಅಪ್ಪೇಕೆ ಪದಗಳನ್ನು ಅಚ್ಚುಮಾಡುವ ಬಗೆಗೆ ಪ್ರಾಧಾನ್ಯ ಅರ್ಧ ಪಂಕ್ತಿಗಳು–ಹೀಗೆ ಎಲ್ಲವನ್ನೂ ಬಳಕೆಗೆ ತಂದ. ಹೊಸ ಹೊಸ ಉಪಮಾನಗಳನ್ನು ಈತ ಬಳಸಿದ್ದಾನೆ. ಅವುಗಳಲ್ಲಿ ಕೆಲವು ಲಕ್ಷ್ಯವನ್ನು ಸೆಳೆಯುವಂಥ ತನ್ನತನವನ್ನು ತೋರುತ್ತವೆ. ಈತ ಉತ್ಪ್ರೇಕ್ಷೆಯನ್ನು ನಿರರ್ಗಳವಾಗಿ ತಂದಿದ್ದಾನೆ.

ಮಯಕಾಫ್‌ಸ್ಕಿಯದು ಅಳುಕಿಲ್ಲದ ಪ್ರಚಾರಕಾವ್ಯ. ಇದನ್ನು ಇವನೇ ಹೆಮ್ಮೆಯಿಂದ ಸಾರಿದ್ದಾನೆ. ತನ್ನನ್ನು ಚಳವಳಿಕಾರನೆಂದು ಮುಖ್ಯ ಧ್ವನಿವರ್ಧಕ ಎಂದೂ ಕರೆದುಕೊಳ್ಳುತ್ತಾನೆ. ಆತನು ಆರಿಸುವ ಹೆಸರುಗಳೂ ಭಿತ್ತಿಪತ್ರದ ಘೋಷಣೆಗಳಂಥವು–ದಿ ಕ್ಲೌಡ್ ಇನ್ ಟ್ರೌಸರ್ಸ್ (ಷರಾಯಿ ಧರಿಸಿದ ಮೋಡ), ೧೫೦ ಮಿಲಿಯನ್, ಇಂಥವು. ಅನುಭಾವ ಸೂಕ್ಷ್ಮತೆಗಳನ್ನು ಉದ್ದೇಶಪೂರ್ವಕವಾಗಿ ದೂರವಿಟ್ಟ ಐಹಿಕ ಮನೋಧರ್ಮದ ಕಾವ್ಯ ಈತನದು. ಇದನ್ನು ಭಿತ್ತಿ ಪತ್ರದ ಕಾವ್ಯ, ಧ್ವನಿವರ್ಧಕ ಯಂತ್ರದ ಕಾವ್ಯ ಎಂದೂ ಕರೆಯಬಹುದು. ಇದರಲ್ಲಿ ನಯ, ಸಂಸ್ಕೃತಿ, ಸಂಯಮಗಳಿಲ್ಲ; ಆದರೆ ಅಸಾಧಾರಣ ಶಕ್ತಿಯುಂಟು. ಮಯಕಾಫ್‌ಸ್ಕಿ ಹೊಸದೊಂದು ಭಾಷಾರೂಪವನ್ನು ಸೃಷ್ಟಿಸಿದ ಎನ್ನಬಹುದು. ಪದಗಳಿಗೆ ಹೊಸ ತೇಜಸ್ಸನ್ನು ನೀಡುವುದರಲ್ಲಿ ಈತನ ಸಮಾನರಿಲ್ಲ. ಒರಟುತನ, ಆಡಂಬರ, ಅಹಂಭಾವಗಳಿದ್ದರೂ ದಬ್ಬಾಳಿಕೆ ಮತ್ತು ಸಾಮಾಜಿಕ ಅನ್ಯಾಯ ಇವನ್ನ ಕಂಡು ಚಿಮ್ಮಿದರೋಷ ಈತನ ಕವನಗಳನ್ನು ಜಾಜ್ವಲ್ಯಮಾನವಾಗಿ ಮಾಡುತ್ತವೆ. 'ಷರಾಯಿ ಧರಿಸಿದ ಮೋಡ'ದಲ್ಲಿ ಇವನ ವೈಯಕ್ತಿಕ ಪ್ರೇಮದ ನಿರಾಸೆ, ಸಾಮಾಜಿಕ ವ್ಯವಸ್ಥೆ ವಿರುದ್ಧದ ದಂಗೆಯ ಮನೋಭಾವ ಇದೆ. ಅತಿ ನವೀನವೂ ಬೃಹದಾಕಾರವೂ ಆದ ಉಪಮಾನಗಳೂ ಪ್ರತಿಮೆಗಳೂ ಪರಿಣಾಮಕಾರಿಯಾಗುತ್ತವೆಂಬುದು ನಿಸ್ಸಂಶಯ. ಅಲ್ಲದೆ ಬಾಹ್ಯವಾಗಿ ಅಸಮಂಜಸವೆಂದು ತೋರಬಹುದಾದ ಪ್ರತಿಮೆಗಳಲ್ಲಿ ಒಂದು ಬಗೆಯ ಭಾವನೆಯ ಒಳಸಾಮರಸ್ಯವನ್ನು ಕವಿ ಸಾಧಿಸಿದ್ದಾನೆ. 'ಸಮರ ಮತ್ತು ಶಾಂತಿ'ಯಲ್ಲಿ ಹೊಸ ಬಗೆಯ ಮಾನವ ವಾಸಿಸುವ ಉತ್ತಮವಾದ, ಶಾಂತಿಮಯವಾದ ಜಗತ್ತಿನ ಕನಸನ್ನು ಕವಿ ಕಂಡಿದ್ದಾನೆ. '೧೫೦ ಮಿಲಿಯನ್' ಈ ಅಂಕಿ ರಷ್ಯದ ಆಗಿನ ಜನಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಪಾಶ್ಚಾತ್ಯ ರಾಷ್ಟ್ರಗಳು ಸೋವಿಯತ್ ರಷ್ಯದ ವಿರುದ್ಧ ಹೇರಿದ ನಿಬಂಧನೆಗಳನ್ನು ಹಾಸ್ಯ ಮಾಡುವ ಕೃತಿ ಇದು. ಜನರಿಗೆ ಸುಲಭವಾಗಿ ರಚಿಸಿತು. ಲೆನಿನ್‌ನ ನಿಧನದ ಸಮಯದಲ್ಲಿ 'ಲೆನಿನ್' ಎನ್ನುವ ಕವನ ಈತನ ಪ್ರಚಾರ ಕವನಗಳಲ್ಲಿ ಅತ್ಯುತ್ತಮವಾದುದು.

ಮಯಕಾಫ್‌ಸ್ಕಿ ಕಾವ್ಯದಲ್ಲಿ ಕ್ರಾಂತಿಯನ್ನು ಸಾಧಿಸಲು ಪ್ರಯತ್ನಿಸಿದ. ಅನುಭಾವದ ವಿರುದ್ಧ ದಂಗೆಯೆದ್ದು 'ಗುಟರು ಹಾಕುವಷ್ಟು ಸುಲಭವಾದ' (ಈತನ ಮೊದಲನೆಯ ಕವನ ಸಂಕಲನದ ಹೆಸರು) ಕವನಗಳ ಸೃಷ್ಟಿಗೆ ಪ್ರಯತ್ನಿಸಿದ. ೧೯೩೦ರ ಹೊತ್ತಿಗೆ ಇವನ ಒರಟುತನ, ಅಸಹನೆಗಳ ವಿರುದ್ಧ ಪ್ರತಿಕ್ರಿಯೆ 'ಮತ್ತೆ ಪುಷ್ಕಿನ್‌ಗೆ' ಎನ್ನುವ ಪಂಥಕ್ಕೆ ಎಡೆಕೊಟ್ಟಿತು. (ಎಲ್.ಎಸ್.ಎಸ್.)

ಮಿಖೇಲ್ ಯೂರಿಯೆವಿಚ್ ಲರ್ಮನ್‌ಟಾಫ್ (೧೮೧೪–೪೧)

ರಷ್ಯನ್ ಕವಿ ಹಾಗೂ ಕಾದಂಬರಿಕಾರ. ರಷ್ಯದ ಮನೋವಿಶ್ಲೇಷಣಾತ್ಮಕ ಕಾದಂಬರಿಗಳ ಜನಕ. ರಷ್ಯನ್ ಕಾವ್ಯ ಕ್ಷೇತ್ರದಲ್ಲಿಯೂ ಇವನು ಅಪೂರ್ವ ರೊಮ್ಯಾಂಟಿಕ್ ದರ್ಶನವನ್ನು ನಿರೂಪಿಸಿದ್ದಾನೆ. ಭಾವಾತಿರೇಕ ಹಾಗೂ

ಶಬ್ದಾಡಂಬರಗಳು ಇವನ ಕೃತಿಗಳಲ್ಲಿ ಹೆಚ್ಚು. ಬೈರನ್ ಕವಿಯ ಮಾರ್ಗವನ್ನು ಅನುಸರಿಸಿದ ಕವಿಗಳಲ್ಲಿ ಈತ ಶ್ರೇಷ್ಠನಾದವ. ಸಮತೂಕದ ಮನಸ್ಸು ಹಾಗೂ ವಾಸ್ತವಿಕತೆ ಗಳು ಇವನ ಕೃತಿಗಳಲ್ಲಿ ಎದ್ದು ಕಾಣುವ ಅಂಶಗಳಾಗಿವೆ. ಸ್ವಾತಂತ್ರ್ಯವಿಲ್ಲದೆ ನೆಲೆ ತಪ್ಪುವ ವ್ಯಕ್ತಿಯ ಆಂತರ್ಯದ ಒಂಟಿತನದ ಭಾವನೆಗಳನ್ನು ಶಕ್ತವಾಗಿ ನಿರೂಪಿಸುವ ದೋಸ್ತಯೆಫ್‌ಸ್ಕಿಯ ಕಾದಂಬರಿಗಳ ಮುನ್ಸೂಚನೆಗಳು ಇವನಲ್ಲಿಯೇ ಕಾಣಿಸಿಕೊಳ್ಳುತ್ತವೆ. ದ ಡೆಮನ್, ಇಸ್ಮೈಲ್ ಬೇ, ವಲೇರಿಕ, ದ ನೋವಿಸ್, ದ ಸಾಂಗ್ ಆಫ್ ದ ಜಾರ್ ಐವಾನ್‌ವ್ಯಾಸಿಲಿಯೆವಿಚ್–ಇವು ಇವನ ಕೆಲವು ಪ್ರಸಿದ್ಧ ಕವಿತೆಗಳು. ಇವನ ಡೆಮನ್ (೧೮೨೯–೩೯) ಎಂಬ ಕವನದ ಶಬ್ದಮಾಧುರ್ಯ, ಮಾಂತ್ರಿಕತೆಗಳು ಅಸಾಧಾರಣವಾದುದು. ಈತನ ಎ ಹೀರೊ ಆಫ್ ಅವರ್ ಟೈಮ್ಸ್ (೧೮೪೦) ಎಂಬ ಕಾದಂಬರಿ ಬಹಳ ಪ್ರಸಿದ್ಧವಾದುದು. ಈ ಕೃತಿ ರಷ್ಯದಲ್ಲಿ ಮನ್ನಣೆಗೆ ಪಾತ್ರವಾಗಿದೆ. ಈ ಕಾದಂಬರಿಯ ನಾಯಕ ಆದರ್ಶವಾದದೊಡನೆ ಬೌದ್ಧಿಕ ಸಂಶಯ ಪ್ರವೃತ್ತಿ ಬೆರೆತ ದ್ವಂದ್ವ ವ್ಯಕ್ತಿತ್ವವುಳ್ಳವನು, ಕವಿಯ ಆತ್ಮವುಳ್ಳವನು, ಮಿತಭಾಷಿ, ಸಂಕೋಚ ಸ್ವಭಾವ ಹಾಗೂ ಶ್ರೀಮಂತಿಕೆಯ ಬಗೆಗೆ ತಿರಸ್ಕಾರ ಮನೋಭಾವಗಳಿಂದ ಒರಟನಂತೆ ವರ್ತಿಸುತ್ತಾನೆ. ಈ ಕಾದಂಬರಿ ಆದರ್ಶ ಹಾಗೂ ವಾಸ್ತವದ ಸಂಘರ್ಷವನ್ನು ಚಿತ್ರಿಸುತ್ತದೆ. **(ಎಲ್.ಎಸ್.ಎಸ್.)**

ಮಿಖಾಯಿಲ್ ಲಾಮನೋಸಫ್ (೧೭೧೧–೬೫)

ರಷ್ಯನ್ ಕವಿ ಮತ್ತು ವಿಮರ್ಶಕ. ಈತನನ್ನು ಆಧುನಿಕ ರಷ್ಯನ್ ಸಾಹಿತ್ಯದ ಮೂಲಪುರುಷ ಎನ್ನಬಹುದು. ಬಡಮನೆತನದಲ್ಲಿ ಹುಟ್ಟಿದ ಈತ ಕಷ್ಟದಿಂದ ವಿದ್ಯಾಭ್ಯಾಸ ಮಾಡಿ ವಿಜ್ಞಾನ ಅಕಾಡೆಮಿಯಲ್ಲಿ ಉಪಪ್ರಾಧ್ಯಾಪಕನಾಗಿ ಕೆಲಸ ಮಾಡಿದ. ಈತನದು ವಿಶ್ವಕೋಶದಂಥ ಪ್ರತಿಭೆ. ಇವನ ಆಸಕ್ತಿಯನ್ನು ಸೆಳೆದ ವಿಷಯಗಳ ವೈವಿಧ್ಯ ಅಚ್ಚರಿಯನ್ನುಂಟುಮಾಡುತ್ತವೆ. ಭೌತವಿಜ್ಞಾನ, ರಸಾಯನವಿಜ್ಞಾನ, ಗಣಿತವಿಜ್ಞಾನ, ವ್ಯಾಕರಣ, ಚರಿತ್ರೆ, ಕಾವ್ಯ–ಎಲ್ಲವನ್ನೂ ಅಭ್ಯಾಸ ಮಾಡಿ ಹಲವು ಕ್ಷೇತ್ರಗಳಲ್ಲಿ ಗಣನೀಯವಾದ ಸಾಧನೆ ಮಾಡಿದ. ಈತನ ಜೀವನದಲ್ಲಿ ಪ್ರಬಲವಾಗಿದ್ದ ಶಕ್ತಿಗಳು ಎರಡು: ದೇಶಭಕ್ತಿ, ವಿಜ್ಞಾನ ಪ್ರೇಮ. ಈತನೊಬ್ಬ ಪ್ರಯೋಗಕಾರ. ಛಂದಸ್ಸು ಮತ್ತು ಶೈಲಿಗಳಲ್ಲಿ ಹಲವು ಪ್ರಯೋಗಗಳನ್ನು ನಡೆಸಿದ. ಸಾಹಿತ್ಯದಲ್ಲಿ ಮೊತ್ತಮೊದಲು ಈತ ಮಾಡಿದ ಕೆಲಸವೆಂದರೆ ಹೊಸದೊಂದು ಛಂದಸ್ಸನ್ನು ಬಳಕೆಗೆ ತಂದುದು; ಮತ್ತು ಆಗಲೇ ಬಳಕೆಯಲ್ಲಿ ಹಿಂದುಳಿದಿದ್ದ ಚರ್ಚ್ ಸ್ಲಾವೊನಿಕ್, ಇನ್ನೂ ರೂಪುಗೊಂಡಿರದಿದ್ದ ರಷ್ಯನ್ ಇವೆರಡನ್ನೂ ಸೇರಿಸಿ ಹೊಸ ಭಾಷೆಯನ್ನು ರೂಪುಗೊಳಿಸಿದುದು. ಭಾಷೆಯಲ್ಲಿ ಉತ್ತಮ, ಮಧ್ಯಮ, ಕೆಳಬಗೆಯ ಭಾಷೆಗಳೆಂಬ ವಿಂಗಡಣೆಯನ್ನು ಮಾಡಿದ. ಕವಿಯಾಗಿ ಈತನ ಕೀರ್ತಿ ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದಿದೆ. ಈತನ ತಾತ್ವಿಕ ಪ್ರಗಾಥಗಳು–ದೈವಿಕ ಭವ್ಯತೆಯನ್ನು

ಕುರಿತು ಎರಡು ಪ್ರಗಾಥಗಳು–ಇವು ಈತನ ಅತ್ಯುತ್ತಮ ಕವನಗಳು. ಈತನ ನೀತಿ ಬೋಧಕ ಪತ್ರಗಳ ಭಾಷೆಗೂ ಪ್ರಗಾಥಗಳ ಭಾಷೆಗೂ ವ್ಯತ್ಯಾಸವಿದೆ. ರಷ್ಯನ್ ಭಾಷೆಯಲ್ಲಿ ಪವಿತ್ರ ಗ್ರಂಥಗಳ ಬಳಕೆ ಎನ್ನುವುದು ಈತನ ಗಮನಾರ್ಹ ಕೃತಿ.

(ಎಲ್.ಎಸ್.ಎಸ್.)

VIII ಡೇನಿಷ್ ಸಾಹಿತ್ಯ

ಡೇನಿಷ್ ಸಾಹಿತ್ಯದ ಮೂಲ ಇರುವುದು ಜರ್ಮನ್, ಆಂಗ್ಲೋ–ಸ್ಯಾಕ್ಸ್ನ ಮತ್ತು ಸ್ಕ್ಯಾಂಡಿನೇವಿಯನ್ ಜನಾಂಗಗಳು ಜೀವನ ಹಾಗೂ ಸಮಾಜದ ಬಗೆಗೆ ಸಾಮಾನ್ಯವಾಗಿ ತಳೆದಿದ್ದ ಕಲ್ಪನೆಯಲ್ಲಿ. ಈ ಕಲ್ಪನೆ ನಾರ್ವೆ ಮತ್ತು ಐಸ್ಲಂಡುಗಳ ಪುರಾತನ ವೀರಕಾವ್ಯ ಮತ್ತು ಅದನ್ನು ಕುರಿತ ಗದ್ಯ ಕೈಪಿಡಿಗಳಲ್ಲಿ ಕಂಡುಬರುತ್ತದೆ. ಆದರೆ ಈ ಸಾಹಿತ್ಯ ಹಲವು ಶತಮಾನಗಳ ಕಾಲ ಲ್ಯಾಟಿನ್ ಭಾಷೆ ಹಾಗೂ ಸಾಹಿತ್ಯಗಳ ಹಿಡಿತಕ್ಕೆ ಸಿಕ್ಕಿತ್ತು. ಅನಂತರ ಜರ್ಮನಿ, ಫ್ರಾನ್ಸ್ ಮತ್ತು ಇಂಗ್ಲಿಷ್ ಮಾತನಾಡುವ ದೇಶಗಳ ಪ್ರಭಾವ ಒಂದರ ಮೇಲೊಂದು ಅಲೆಯಂತೆ ಬಂತು. ಇಪ್ಪತ್ತನೆಯ ಶತಮಾನದಲ್ಲಂತೂ ಇಂಗ್ಲಿಷ್ ಸಾಹಿತ್ಯದ ಪ್ರಭಾವ ಎದ್ದುಕಾಣುತ್ತದೆ.

ಡೆನ್‌ಮಾರ್ಕ್ ಮತ್ತು ಸ್ವೀಡನ್‌ಗಳ ಭಾಷೆಗಳೂ ಸಾಹಿತ್ಯಗಳೂ ಬೇರೆ ಬೇರೆಯಾದದ್ದು ಪ್ರ.ಶ.ಪೂ. ಸುಮಾರು ೧೦೦೦ದಲ್ಲಿ. ಆದರೂ ಹದಿನಾಲ್ಕನೆಯ ಶತಮಾನದಿಂದ ೧೮೧೪ರ ವರೆಗೂ ಡೆನ್‌ಮಾರ್ಕ್ ಮತ್ತು ನಾರ್ವೆಗಳು ರಾಜಕೀಯವಾಗಿ ಒಂದೇ ಆಗಿದ್ದುವು. ಆದ್ದರಿಂದ ಸಂಸ್ಕೃತಿ ಮತ್ತು ಸಾಹಿತ್ಯಗಳಲ್ಲೂ ಅವು ಒಂದೇ ಆಗಿದ್ದುವು. ಪರಿಣಾಮವಾಗಿ ಡೇನಿಷ್ ಸಾಹಿತ್ಯದಲ್ಲಿ ವಿಖ್ಯಾತರಾದ ಯೋಹಾನ್ ಲುಡ್‌ವಿಗ್ ಹೋಲ್‌ಬರ್ಗ್, ಯೋಹಾನ್ ಹರ್ಮನ್ ವೆಸ್ಸಲ್‌ರಂಥ ಹಲವು ಪ್ರಮುಖ ಲೇಖಕರು ನಾರ್ವೆಯಲ್ಲಿ ಹುಟ್ಟಿದವರು.

ರೂನಿಕ್ ಯುಗ: ಪ್ರ.ಶ.ಪೂ. ೮೫೦–೧೦೫೦. ಡೇನಿಷ್ ಸಾಹಿತ್ಯದ ಅತ್ಯಂತ ಪುರಾತನ ರೂಪ ದೊರೆಯುವುದು ವೈಕಿಂಗ್ ವೀರರುಗಳ ಸ್ಮಾರಕಗಳಾದ ಸುಮಾರು ೨೭೫ ರೂನಿಕ್ ಶಾಸನಗಳಲ್ಲಿ. ರೂನಿಕ್ ಲಿಪಿಯಲ್ಲಿ ಬರೆದಿರುವುದರಿಂದ ಇವುಗಳಿಗೆ ಆ ಹೆಸರು. ಈ ಶಾಸನಗಳಲ್ಲಿ ಗದ್ಯಪದ್ಯಗಳು ಒಂದಾದಮೇಲೊಂದು ಬರುತ್ತವೆ. ಇವುಗಳಿಂದ ಆ ಯುಗದ ಜನಜೀವನದ ಜೊತೆಗೆ ಡೇನಿಷ್ ವೀರಕಾವ್ಯದ ರೂಪ ರಚನೆಗಳೂ ತಿಳಿದುಬರುತ್ತವೆ.

ಮಧ್ಯಯುಗ: ಪ್ರ.ಶ.ಪೂ. ಸು. ೧೦೫೦–೧೫೦೦. ಕ್ಯಾತೊಲಿಕ್ ಚರ್ಚಿನ ಅಂತರ ರಾಷ್ಟ್ರೀಯ ಭಾಷೆಯಾದ ಲ್ಯಾಟಿನ್ ಪ್ರ.ಶ.ಪೂ. ೧೦೦೦ದ ಸುಮಾರಿಗೆ ರೂನ್ ಭಾಷೆಯ ಸ್ಥಾನವನ್ನು ಆಕ್ರಮಿಸತೊಡಗಿತು. ಮಧ್ಯಯುಗದ ಆದಿಯಲ್ಲಿ ಡೆನ್‌ಮಾರ್ಕಿನ ಪ್ರಮುಖ ಸಾಹಿತ್ಯವೆಂದರೆ ಚರ್ಚಿನ ಅಧಿಕಾರಿಗಳು ಬರೆದ ಕಾಲಾನುಕ್ರಮಣಿಗಳು, ವಂಶಾನುಕ್ರಮಣಿಗಳು ಮತ್ತು ಸಂತರ ಜೀವಿತ ಕಥೆಗಳು. ಇವುಗಳಲ್ಲಿ ದಿ ಲೆಜೆಂಡ್ ಆಫ್ ಕೆನೂಟ್ (೧೧೨೦) ಮತ್ತು ಕ್ರಾನಿಕರ್ ರಾಸ್ಕಿಲ್

ಡೆನ್ಸ್ (೧೧೫೦) ಇವೆರಡೂ ಸೇರಿವೆ. ಮೊದಲನೆಯದನ್ನು ಬರೆದವ ಏಲ್‌ನಾತ್ ಎಂಬ ಇಂಗ್ಲಿಷ್ ಸಂನ್ಯಾಸಿ. ಎರಡೆಯದನ್ನು ಬರೆದವರು ಲುಂಡ್ ನಗರದ ಆರ್ಚ್ ಬಿಷಪ್ ಮತ್ತು ಅವನ ಅಧಿಕಾರಿಗಳು. ಅಧಿಕಾರದ ಕೇಂದ್ರೀಕರಣವಾಗುತ್ತಿದ್ದ ಈ ಕಾಲದಲ್ಲಿ ಈ ಕಾಲಾನುಕ್ರಮಣಿ ಪ್ರಜಾತಂತ್ರದ ದೃಷ್ಟಿಯನ್ನು ಪ್ರಬಲವಾಗಿ ಎತ್ತಿಹಿಡಿಯುತ್ತದೆ. ಇದೊಂದು ಗಮನ ಸೆಳೆಯುವ ಸಂಗತಿ.

೧೧೫೭ರಿಂದ ೧೨೨೭ರವರೆಗೂ ಯುದ್ಧಗಳು ನಡೆದು ಡೆನ್ಮಾರ್ಕ್ ವಿಸ್ತರಣಗೊಂಡು ಬಾಲ್ಟಿಕ್ ಸಮುದ್ರದ ದಕ್ಷಿಣತೀರವನ್ನು ವಶಪಡಿಸಿಕೊಂಡಿತು. ರಾಜರ ಸಾಧನೆಗಳನ್ನು ಹೊಗಳುವ ಅದ್ಭುತವಾದ ಐತಿಹಾಸಿಕ ಕೃತಿಗಳು ಈ ಅವಧಿಯಲ್ಲಿ ಹುಟ್ಟಿದವು. ಶ್ರೇಷ್ಠಯೋಧನೂ ರಾಜನೀತಿ ಪಟವೂ ಆದ ಲುಂಡ್‌ನ ಆರ್ಚ್‌ಬಿಷಪ್ ನೀಡಿದ ಸ್ಫೂರ್ತಿಯೇ ಈ ಕೃತಿಗಳಿಗೆಲ್ಲ ಕಾರಣ. ಹಿಸ್ಟೋರಿಯಾ ರೀಗಮ್‌ಡ್ಯಾನೀ ಕಾಂಪೆಂಡಿಯೋಸಾ ಎಂಬ ಚರಿತ್ರೆಯನ್ನು ಆಗೆಸೆನ್ ಎಂಬಾತ ಬರೆದ. ಆದರೆ ಲ್ಯಾಟಿನ್ನಿನಲ್ಲಿ ಬರೆದ ಮಧ್ಯಯುಗದ ಡೇನಿಷ್ ಸಾಹಿತ್ಯದ ಅತ್ಯುತ್ತಮ ಕೃತಿಯೆಂದರೆ ಗೆಸ್ಟಡ್ಯಾನೋರಮ್ (ಡೇನರ ಸಾಹಸಗಳು) ಎಂಬ ಗ್ರಂಥ. ೧೬ ಭಾಗಗಳನ್ನೊಳಗೊಂಡ ಈ ಗ್ರಂಥವನ್ನು ಬರೆಯಲು ೧೧೮೦ ರಿಂದ ೧೨೧೯ರ ವರೆಗೆ ೩೯ ವರ್ಷಗಳು ಬೇಕಾಯಿತು. ಇದನ್ನು ಬರೆದವ ಸ್ಯಾಕ್ಸೋ ಗ್ರಮಾಟಿಕಸ್ ಎಂಬಾತ. ಆಲಿವರ್‌ಎಲ್ಟನ್ ಎಂಬ ಇಂಗ್ಲಿಷ್ ಲೇಖಕ ಇದರ ಮೊದಲ ಒಂಬತ್ತು ಭಾಗಗಳನ್ನು ತನ್ನ ಡೇನಿಷ್ ಹಿಸ್ಟರಿ ಆಫ್ ಸ್ಯಾಕ್ಸೋ ಗ್ರಮಾಟಿಕಸ್ ಎಂಬ ಕೃತಿಯಲ್ಲಿ ಇಂಗ್ಲಿಷಿಗೆ ಭಾಷಾಂತರಿಸಿದ್ದಾನೆ. ಸ್ಯಾಕ್ಸೋ ಗ್ರಮಾಟಿಸ್ಸನ ಕೃತಿ ಪ್ರಾಚೀನ ದಂತಕಥೆಗಳ ಅತ್ಯಂತ ಶ್ರೀಮಂತವಾದ ಭಂಡಾರ. ಷೇಕ್ಸ್‌ಪಿಯರನ ವಿಖ್ಯಾತ ಟ್ರ್ಯಾಜೆಡಿಯಾದ ಹ್ಯಾಮ್ಲೆಟ್‌ನ ಆಕರವಾದ ಆಮ್ಲೆತ್‌ನ ಕಥೆ ಇರುವುದು ಅದರಲ್ಲೇ.

೮೦೦೦ ಹೆಕ್ಸಾಮೀಟರ್ ಪಂಕ್ತಿಗಳ ಹೆಕ್ಸೀಮೆರಾನ್ (ಆರು ದಿನಗಳು) ಎಂಬುದು ಇದೇ ಕಾಲದ ಬೃಹತ್ ಲ್ಯಾಟಿನ್ ಕಾವ್ಯ. ಇದರ ಕರ್ತೃ ಲುಂಡ್‌ನ ಆರ್ಚ್‌ಬಿಷಪ್ಪನಾದ ಆಂಡರ್ಸ್ ಸುನೇಸನ್ (೧೧೬೭–೧೨೨೮) ಎಂಬಾತ. ಬೈಬಲಿನ ಜೆನೆಸಿಸ್ ಪ್ರಕರಣದಲ್ಲಿ ವರ್ಣಿಸಿರುವಂತೆ ಜಗತ್ತಿನ ಸೃಷ್ಟಿಯನ್ನು ವಿವರಿಸುವ ಈ ಕಾವ್ಯ ಮಧ್ಯಯುಗದ ಲ್ಯಾಟಿನ್ ಪಾಂಡಿತ್ಯಕ್ಕೆ ಹೆಗ್ಗುರುತಾಗಿದೆ.

ಡೇನಿಷ್ ಭಾಷೆಯ ಅತ್ಯಂತ ಪುರಾತನ ಹಸ್ತಪತ್ರಿಗಳು ಪ್ರಾದೇಶಿಕ ಶಾಸನಗಳನ್ನು ಕುರಿತವು. ಇವುಗಳಲ್ಲಿ ಅತ್ಯಂತ ಹಿಂದಿನವು ಸ್ಕೇನಿಯಾ ಮತ್ತು ಜೀಲಂಡ್ ಪ್ರದೇಶಗಳ ಶಾಸನಗಳು. ಆದರೆ ಎರಡನೆಯ ವಾಲ್ಡಿಮಾರ್ ಘೋಷಿಸಿದ ಜಟ್‌ಲಂಡ್ ಲಾ ಎಂಬುದು ಅತ್ಯಂತ ಪ್ರಸಿದ್ಧವಾದದ್ದು. ಇದರ ಕರ್ತೃ ವೈಬರ್ಗಿನ ಬಿಷಪ್ ಆದ ಗುನ್ನರ್ ಎಂಬಾತ. ಇದರ ಮುಖಪತ್ರದಲ್ಲಿ ಮೆಡ್ ಲವ್ ಸ್ಕಲ್ ಲ್ಯಾಂಡ್ ಬಿಗ್ಸ್ (ರೈಮ್ ಕ್ರಾನಿಕಲ್) ಎಂಬುದು. ಇದರಲ್ಲಿ ಒಬ್ಬೊಬ್ಬ ರಾಜನೂ

ತನ್ನ ಕಥೆಯನ್ನು ಅಮೂಲಾಗ್ರವಾಗಿ ಹೇಳಿಕೊಳ್ಳುತ್ತಾನೆ; ಎಂದರೆ ಹುಟ್ಟು, ಬಾಳು, ಸಾವುಗಳನ್ನಲ್ಲದೆ ತನ್ನ ಶವಸಂಸ್ಕಾರವನ್ನೂ ಕಥಿಸುತ್ತಾನೆ. ೧೪೯೫ರಲ್ಲಿ ಡೇನಿಷ್ ಭಾಷೆಯಲ್ಲಿ ಮೊಟ್ಟ ಮೊದಲಿಗೆ ಅಚ್ಚಾದ ಪುಸ್ತಕ ಇದೇ.

ಮಧ್ಯಯುಗದ ಉತ್ತರಭಾಗದಲ್ಲಿ ಡೇನಿಷ್ ಭಾಷೆ ಲ್ಯಾಟಿನ್‌ಗಿಂತ ಮೇಲುಗೈಯಾಗಿತ್ತು. ವರ್ಜಿನ್ ಮೇರಿಯನ್ನು ಕುರಿತ ದಂತಕಥೆಗಳು ಹಾಗೂ ಗೀತಗಳಲ್ಲದೆ, ಲೂಸಿಡೇರಿಯಸ್ ಎಂಬುದರಂಥ ವಿಚಿತ್ರ ಸಂಗತಿಗಳನ್ನೊಳಗೊಂಡ ಜನಪ್ರಿಯ ಕೃತಿಗಳು ಹುಟ್ಟಿದವು. ಹೆನ್ರಿಕ್ ಹಾರ್ಪ್‌ಸ್ಟ್ರಂಗ್ ಎಂಬಾತ ಬರೆದ ಮೆಡಿಕಲ್ ಬುಕ್ಸ್ ಮತ್ತು ಪೀಡರ್ ಲಾಲ್ ಎಂಬಾತ ಸಂಗ್ರಹಿಸಿದ ಅರ್ಥಗರ್ಭಿತವಾದ ಗಾದೆಗಳು ಈ ಕಾಲದಲ್ಲಿ ಇತರ ಕೃತಿಗಳು.

ಆದರೆ ಮಧ್ಯಯುಗದ ಡೇನಿಷ್ ಸಾಹಿತ್ಯದ ಅತ್ಯಮೂಲ್ಯ ನಿಧಿಗಳೆಂದರೆ ಲಾವಣಿಗಳು. ಬ್ರಿಟನ್ ದೇಶವನ್ನು ಬಿಟ್ಟರೆ ಯೂರೋಪಿನ ಇನ್ನಾವ ದೇಶದಲ್ಲೂ ಲಾವಣಿಗಳ ಇಷ್ಟೊಂದು ದೊಡ್ಡ ಸಮುದಾಯವಿಲ್ಲ. ೧೬ನೆಯ ಶತಮಾನದಲ್ಲಿ ಎಲ್ಲ ಲಾವಣಿಗಳನ್ನೂ ಕೈಬರೆಹದ ೪೦ ಪುಸ್ತಕಗಳಲ್ಲಿ ಸಂಗ್ರಹಿಸಲಾಯಿತು. ಆಂಡರ್ಸ್‌ಸೋರೆನ್ಸನ್ ವೇಡೆಲ್ ಎಂಬಾತ ಸಂಗ್ರಹಿಸಿದ ೧೦೦ ಲಾವಣಿಗಳು ೧೫೯೧ರಲ್ಲಿ ಮೊಟ್ಟಮೊದಲಾಗಿ ಮುದ್ರಣಕ್ಕೆ ಬಂದುವು. ಆಕ್ಸೆಲ್ ಓಲ್‌ರಿಕ್ (೧೮೬೪-೧೯೧೭) ಎಂಬವನು ೫೦೦-೬೦೦ ಲಾವಣಿಗಳ ಸಮಗ್ರ ಸಂಕಲನವನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಏಳು ಸಂಪುಟಗಳಲ್ಲಿ ಪ್ರಕಟಿಸಿದ. ಈತನೇ ಸಂಪಾದಿಸಿದ ಸಣ್ಣ ಸಂಕಲನವೊಂದನ್ನು ಇ. ಎಮ್. ಸ್ಮಿತ್ ಡ್ಯಾಮ್ಪಿಯರ್ ಎಂಬಾತ ಇಂಗ್ಲಿಷಿಗೆ ಭಾಷಾಂತರಿಸಿ (ಎ ಬುಕ್ ಆಫ್ ಡೇನಿಷ್ ಬ್ಯಾಲಡ್ಸ್) ಪ್ರಕಟಿಸಿದ್ದಾನೆ.

೧೨ನೆಯ ಶತಮಾನದಲ್ಲಿ ಜನರಿಗೆ ಅಚ್ಚುಮೆಚ್ಚಾಗಿದ್ದ ಶ್ರೇಣಿನೃತ್ಯಗಳಲ್ಲಿ ಈ ಲಾವಣಿಗಳು ತುಂಬ ನೆರವಾದುವು. ಡೇನಿಷ್ ಲಾವಣಿಗಳು ಯೂರೋಪಿನ ಲಾವಣಿಗಳ ಪರಂಪರೆಗೆ ಸೇರಿದ ಒಂದು ಅಂಶವಾದರೂ ಅವುಗಳಿಗೆ ಸ್ವಂತವಾದೊಂದು ವೈಶಿಷ್ಟ್ಯವಿದೆ. ಉನ್ನತ ವರ್ಗದ ಸಂಸ್ಕೃತಿಯಿಂದ ಅವು ಜನ್ಮತಳೆದುವೆಂದು ಅವುಗಳ ವಸ್ತುಗಳನ್ನು ಪರಿಶೀಲಿಸುವುದರಿಂದ ಕಂಡುಬರುತ್ತದೆ. ವೀರರ ಸಾಹಸಗಳನ್ನು ಕುರಿತ ಬ್ಯಾಲಡ್ಸ್ ಆಫ್ ಷಿವಲ್ರಿ ಎಂಬ ಲಾವಣಿಗಳಲ್ಲಂತು ಈ ಸಂಗತಿ ಎದ್ದುಕಾಣುತ್ತದೆ. ಈ ಲಾವಣಿಗಳಲ್ಲಿ ವರಿಷ್ಠವರ್ಗದ ಜೀವನನ್ನು-ಎಂದರೆ, ಅವರ ಕುಲಕಲಹಗಳು, ಪ್ರಣಯಗಳು, ಮೃಗಯಾವಿಹಾರಗಳು, ಯುದ್ಧಗಳು, ಮತ್ತು ದಿನನಿತ್ಯದ ಜೀವನ-ಮುಂತಾದವು ಸಮಗ್ರವಾಗಿ ಚಿತ್ರಿತವಾಗಿವೆ.

ಮತಸುಧಾರಣೆಯ ಯುಗ (೧೬ನೆಯ ಶತಮಾನ): ಇಡೀ ಯೂರೋಪಿನ ಸ್ವರೂಪವನ್ನೇ ಬದಲಾಯಿಸಿದ ನವೋದಯ ಕ್ರಾಂತಿಗೆ ಮತಸುಧಾರಣೆಯೇ ನಾಂದಿಯಾಯಿತು. ಡೆನ್‌ಮಾರ್ಕಿನಲ್ಲಿ ಆದದ್ದೂ ಹೀಗೆಯೇ. ಮುದ್ರಣಕಲೆ ಆಗತಾನೆ ಬಳಕೆಗೆ ಬಂದಿದ್ದುದರಿಂದ ಕ್ಯಾತೊಲಿಕರಿಗೂ ಸುಧಾರಕರಿಗೂ ನಡೆದ

ವಾಗ್ಯುದ್ಧಗಳನ್ನು ಕುರಿತ ಕಿರುಹೊತ್ತಿಗೆಗಳೂ ವಿಡಂಬನಗಳೂ ಪ್ರವಾಹ ರೂಪದಲ್ಲಿ ಬರತೊಡಗಿದುವು. ಇವುಗಳಲ್ಲಿ ದಿಫಾಕ್ಸ್ ಬುಕ್, ಬ್ರದರ್ ರಸ್ ಮತ್ತು ದಿ ಡಾನ್ಸ್ ಆಫ್ ಡೆತ್ ಎಂಬುದು ಗಮನಾರ್ಹವಾದವು.

ಈ ವಾಗ್ಯುದ್ಧಕಾರರಲ್ಲಿ ಅತ್ಯಂತ ದೊಡ್ಡ ವ್ಯಕ್ತಿಯೆಂದರೆ ಕ್ಯಾತೊಲಿಕ್ ಪಕ್ಷದ ವೀರ ಸಮರ್ಥಕನಾದ ಪಾಲ್ ಹೆಲ್ಗೆಸನ್ (ಹು. ೧೪೮೦) ಎಂಬ ಸಂನ್ಯಾಸಿ ಕ್ಯಾತೊಲಿಕ್ ಚರ್ಚಿನಲ್ಲಿ ಸುಧಾರಣೆಯಾಗುವುದು ಅಗತ್ಯವೆಂಬುದನ್ನು ಒಪ್ಪಿಕೊಂಡರೂ ಅಂಥ ಸುಧಾರಣೆ ಅಂತಃಪರಿವರ್ತನೆಯಿಂದಲೇ ಆಗಬೇಕೆಂದೂ ಚರ್ಚಿನ ವಿರುದ್ಧ ಪ್ರತ್ಯಕ್ಷವಾಗಿ ಕ್ರಾಂತಿ ಎಬ್ಬಿಸುವುದು ಅನುಚಿತವೆಂದೂ ಈತನ ವಾದ. ಇದಕ್ಕಾಗಿ ಈತನ ಎದುರಾಳಿಗಳು ಇವನನ್ನು ಸಮಯಸಾಧಕ ಪಾಲ್ ಎಂದು ಜರೆದರು. ಸ್ಕಿಬ್ಬಿ ಕ್ರಾನಿಕ್ ಎಂಬ ಐತಿಹಾಸಿಕ ಗ್ರಂಥ ಈತನ ಅಮೂಲ್ಯ ಕೃತಿ. ದುರದೃಷ್ಟದಿಂದ ಈ ಕೃತಿ ೧೫೩೪ರಲ್ಲಿ ಒಂದು ವಾಕ್ಯದ ಮಧ್ಯದಲ್ಲೇ ನಿಂತುಹೋಗಿದೆ. ಹೆಲ್ಗೆಸನ್ನನ ಗತಿಯೇನಾಯಿತೋ ಗೊತ್ತೇ ಆಗಿಲ್ಲ. ಲ್ಯೂತರನ ಅನುಯಾಯಿಯೂ ಡೆನ್‌ಮಾರ್ಕಿನಲ್ಲಿ ಮತಸುಧಾರಣೆಯ ನಾಯಕನೂ ಆದ ಹಾನ್ಸ್ ಟೌಸನ್ (೧೪೯೪–೧೫೬೧) ಎಂಬಾತ ಹೆಲ್ಗೆಸನ್ನನ ಪ್ರಮುಖ ಎದುರಾಳಿ. ಈತ ಬರೆದ ಧರ್ಮೋಪದೇಶಗಳ ಗ್ರಂಥವೊಂದು ತುಂಬ ಜನಪ್ರಿಯವಾಗಿ ಈತನ ಹೆಸರು ಜನಜನಿತವಾಯಿತು. ಲ್ಯೂತರನ ಪಂಥದ ಮೊಟ್ಟಮೊದಲ ಬಿಷಪ್ ಆದ ಪೇಡರ್ ಪಲೇಡಿಯಸ್ (೧೫೦೩–೧೫೬೦) ಎಂಬಾತ ತನ್ನ ವಿಸಿಟಾಟ್ಸ್‌ಬಾಗ್ (ವಿಸಿಟೇಷನ್ ಬುಕ್) ಎಂಬ ಪುಸ್ತಕದಲ್ಲಿ ಈ ಕಾಲದ ಸಾಮಾನ್ಯ ಜನರ ಜೀವನವನ್ನು ಹೃದಯಂಗಮವಾಗಿ ಚಿತ್ರಿಸಿರುವುದಲ್ಲದೆ ತನ್ನ ಪ್ರವಾಸಗಳಲ್ಲಿ ತಾನು ಎದುರಿಸಬೇಕಾಗಿ ಬಂದ ಮಾನವೀಯ ಹಾಗೂ ಶೈಕ್ಷಣಿಕ ಸಮಸ್ಯೆಗಳನ್ನು ಹಾಸ್ಯಮಯವಾಗಿ ಚಿತ್ರಿಸಿದ್ದಾನೆ.

೧೫೧೪ರಲ್ಲಿ ಕ್ರಿಸ್ಟಿಯರ್ನ್ ಪೇಡರ್ಸನ್ (೧೪೮೦–೧೫೫೪) ಎಂಬಾತ ಸ್ಯಾಕ್ಸೋ ಗ್ರಮಾಟಿಕಸ್ಸನ ಗೆಸ್ಟ ಡ್ಯಾನೋರಮ್ ಎಂಬ ಇತಿಹಾಸ ಗ್ರಂಥವನ್ನು ಸಂಪಾದಿಸಿ ಮುದ್ರಣ ಮಾಡಿದ. ಈತನ ಈ ಮಹತ್ತರ ಕಾರ್ಯದಿಂದ ಮಧ್ಯಯುಗದ ಶ್ರೇಷ್ಠತಮ ಕೃತಿ ನಷ್ಟವಾಗಿ ಹೋಗದೆ ಉಳಿಯಿತು. ಇದಲ್ಲದೆ, ಮೂರನೆಯ ಕ್ರಿಶ್ಚನ್ನನ ಬೈಬಲ್ ಎಂದು ಕರೆದಿರುವ ಡೇನಿಷ್ ಭಾಷಾಂತರಕ್ಕೆ ಈತ ನೀಡಿದ ಕೊಡುಗೆಯೂ ವಿಶೇಷವಾದದ್ದೇ. ಡೇನಿಷ್ ಭಾಷೆ ಸಾಹಿತ್ಯಭಾಷೆಯಾಗಿ ಬೆಳೆಯಲು ಈ ಡೇನಿಷ್ ಬೈಬಲು ಬಹುಮಟ್ಟಿಗೆ ಕಾರಣ. ಡೇನಿಷ್ ಸಾಹಿತ್ಯಕ್ಕೆ ಮತಸುಧಾರಣಾ ಯುಗದ ಅತ್ಯಮೂಲ್ಯ ಕೊಡುಗೆಗಳೆಂದರೆ ಮಾತೃಭಾಷೆಯಲ್ಲಿ ಬರೆದ ಲ್ಯೂತರನ್ ಪ್ರಾರ್ಥನಾಗೀತೆಗಳು ; ಹಾನ್ಸ್ ತಾಮ್ಸನ್ನನ ಡೆನ್ ಡಾನ್ಸ್ಕ ಸಾಮ್‌ಬಾಗ್ (೧೫೬೯) ಎಂಬುದರಲ್ಲಿರುವ ಬಹುಪಾಲು ಪ್ರಾರ್ಥನಾಗೀತೆಗಳು ಜರ್ಮನ್ ಇಲ್ಲವೆ ಲ್ಯಾಟಿನ್

ಭಾಷೆಯಿಂದ ಮಾಡಿದ ಭಾಷಾಂತರಗಳೆಂಬುದೇನೊ ನಿಜ. ಆದರೆ ಸ್ವತಂತ್ರ ಪ್ರತಿಭೆಯಿಂದ ಭಾವಗೀತೆಗಳನ್ನು ಬರೆದ ಹಾನ್ಸ್ ಕ್ರಿಸ್ಟನ್‌ಸೆನ್ ಸ್ತೆನ್ (೧೫೪೦–೧೫೬೧) ಎಂಬಾತನಿಗೂ ಈ ಯುಗ ಜನ್ಮ ನೀಡಿತೆಂಬುದನ್ನು ಮರೆಯಲಾಗದು.

ಮತಸುಧಾರಣೆಯುಗದ ಸ್ಫೂರ್ತಿಗೆಲ್ಲ ಸುಧಾರಕರಿಗೆ ಜನಸಾಮಾನ್ಯರ ವಿಷಯದಲ್ಲಿದ್ದ ಒಲವೇ ಕಾರಣ. ಆದರೆ ಕಾಲಕ್ರಮದಲ್ಲಿ ಈ ಸ್ಫೂರ್ತಿ ಶಾಸ್ತ್ರ ಪಾಂಡಿತ್ಯದ ರೂಪ ತಳೆದು ದೇವತಾಶಾಸ್ತ್ರದ ಗ್ರಂಥಗಳು ಹುಟ್ಟತೊಡಗಿದುವು. ದೇವತಾಶಾಸ್ತ್ರಜ್ಞರಲ್ಲಿ ಅತ್ಯಂತ ಮೇಧಾವಿಯಾದ ನೀಲ್ಸ್ ಹೆಮ್ಮಿಂಗ್‌ಸನ್ (೧೫೧೩–೧೬೦೦) ಎಂಬಾತ ಯೂರೋಪಿನಲ್ಲೆಲ್ಲ ವಿಖ್ಯಾತನಾಗಿದ್ದ ಮೆಲಾಂಕ್‌ತಾನ್ ಎಂಬಾತನ ಶಿಷ್ಯ. ಮತಸಿದ್ಧಾಂತಗಳನ್ನು ಕುರಿತ ಪ್ರೌಢಗ್ರಂಥಗಳ ಜೊತೆಗೆ ಈತ ಈ ಲೇಗೆ ನ್ಯಾಟುರೀ (೧೫೬೨) ಎಂಬ ಗ್ರಂಥವನ್ನು ಬರೆದ. ಈ ಕೃತಿಯಿಂದ ಈತ ಮುಂದಿನ ಶತಮಾನದಲ್ಲಿ ನೈಸರ್ಗಿಕ ನಿಯಮವನ್ನು ಪ್ರತಿಪಾದಿಸಿದವರಿಗೆಲ್ಲ ಅಗ್ರಗಾಮಿಯಾದ.

ಇದೇ ಕಾಲದಲ್ಲಿ ಇತಿಹಾಸ ಹಾಗೂ ನಿಸರ್ಗ ವಿಜ್ಞಾನಗಳ ಕ್ಷೇತ್ರಗಳಲ್ಲೂ ದೊಡ್ಡ ಮುನ್ನಡೆಯುಂಟಾಯಿತು. ಆದರೆ ಈ ಯುಗದ ದೃಷ್ಟಿಯಲ್ಲಿ ಈ ಶಾಸ್ತ್ರಗಳು ದೇವತಾಶಾಸ್ತ್ರಕ್ಕಿಂತ ತೀರ ಕೀಳುಮಟ್ಟದವು. ಈ ಕಾಲದ ವರಿಷ್ಠ ವರ್ಗದ ಅನೇಕ ಮಹನೀಯರಲ್ಲಿ ಮುಂದಿನ ನವೋದಯದ ಮನೋಧರ್ಮ ಕಂಡುಬರುತ್ತದೆ. ಏಕೆಂದರೆ ಅವರು ಕಲೆಗಳಿಗೂ ವಿಜ್ಞಾನಗಳಿಗೂ ಪೋಷಕರಾದರು ಅಥವಾ ತಾವೇ ಕಲಾವಿದರೋ ವಿಜ್ಞಾನಿಗಳೋ ಆದರು. ಉದಾಹರಣೆಗೆ, ಆಂಡರ್ಸ್ ಸೋರೆನ್ಸನ್ ಮೇಡೆಲ್ (೧೫೪೨–೧೬೧೬) ಎಂಬಾತ ಸ್ಯಾಕ್ಸೋಗ್ರಮಾಟಿ ಕಸ್ಸ ಗೆಸ್ಟ ಸ್ಯಾನೋರಮ್ ಎಂಬ ಗ್ರಂಥದ ಭಾಷಾಂತರವೊಂದನ್ನೂ ಹಿಂದೆ ಹೇಳಿದ ಲಾವಣಿಗಳ ಸಂಕಲನವನ್ನೂ ಪ್ರಕಟಿಸಿದ. ಆರಿಲ್ಡ್ ಹೂಯಿಟ್ ಫೆಲ್ಟ್ (೧೫೪೬–೧೬೦೯) ಎಂಬ ವರಿಷ್ಠ ವರ್ಗದ ವಿದ್ವಾಂಸ ಡಾನ್‌ಮಾರ್ಕ್ಸ್ ರೀಜೆಸ್ ಕ್ರಾನಿಕ್ (ಡೇನಿಷ್ ರಾಜ್ಯದ ಕಾಲಾನುಕ್ರಮಣಿ) ಎಂಬ ಗ್ರಂಥವನ್ನು ಹತ್ತು ಸಂಪುಟಗಳಲ್ಲಿ ಬರೆದ (೧೫೯೬–೧೬೦೪). ವರಿಷ್ಠ ವರ್ಗದ ಟೈಕೋ ಬ್ರಾಹೀ (೧೫೪೬–೧೬೦೧) ಎಂಬ ವಿಜ್ಞಾನಿ ಖಗೋಳವಿಜ್ಞಾನದಲ್ಲಿ ಬೆರಗುಗೊಳಿಸುವಷ್ಟು ಖಚಿತವಾದ ಸಂಶೋಧನೆಗಳನ್ನು ಮಾಡಿ ಜಗತ್ಪ್ರಸಿದ್ಧನಾದ.

ಡೆನ್‌ಮಾರ್ಕಿನ ರಂಗಭೂಮಿ ಈ ಕಾಲದಲ್ಲಿ ಲ್ಯಾಟಿನ್ ಪಂಥಗಳು ಅಭಿನಯಿಸುತ್ತಿದ್ದ ನಾಟಕಗಳ ಪ್ರಾಬಲ್ಯಕ್ಕೆ ಒಳಪಟ್ಟಿತ್ತು. ಆದರೆ ಹೀರೋನಿಯಮಸ್ ಜಸ್ಟಿಸನ್ ರ‍್ಯಾಂಚ್ (೧೫೩೯–೧೬೦೭) ಎಂಬ ಪಾದ್ರಿ ಬರೆದ ಕ್ಯಾರಿಗ್ ನಿಡಿಂಗ್ ಎಂಬ ಲಘು ಪ್ರಹಸನದಿಂದ ರಂಗಭೂಮಿಗೆ ಹೊಸ ಕಳೆ ಬಂತು. ಇಂದಿಗೂ ಅದನ್ನು ಅಭಿನಯಿಸುತ್ತಾರೆ. ಹೋಲ್‌ಬರ್ಗಿಗೆ ಮುಂದೆ ಡೆನ್‌ಮಾರ್ಕಿನ ಅತ್ಯುತ್ತಮ ನಾಟಕ ಕೃತಿ ಇದೇ.

ನವೋದಯ ಮತ್ತು ಬರೋಕ್ ಕಾವ್ಯ: ೧೭ನೆಯ ಶತಮಾನ. ಯೂರೋಪಿನಲ್ಲುಂಟಾದ ನವೋದಯ ಡೆನ್ಮಾರ್ಕಿಗೆ ಹರಡಿದ್ದು ತೀರ ತಡವಾಗಿ. ಸು. ೧೬೨೦ರಲ್ಲಿ ನವೋದಯದ ಚಿಹ್ನೆಗಳು ಅಲ್ಲಿ ಕಾಣಿಸತೊಡಗಿದುವು. ಆಗಲೂ ಅದು ಕಾಣಿಸಿಕೊಂಡಿದ್ದು ಗ್ರೀಕ್, ಲ್ಯಾಟಿನ್, ಫ್ರೆಂಚ್ ಮತ್ತು ಜರ್ಮನ್ ಕೃತಿಗಳ ಅನುಕರಣದಲ್ಲಿ ಮಾತ್ರ. ಡೇನಿಷ್ ನವೋದಯದ ಅನಂತರಕಾಲದ ಪ್ರಧಾನ ಕೃತಿಯಾದ ಹೆಕ್ಸೀಮೆರಾನ್ ಎಂಬುದೂ ಅನುಕರಣವೇ. ಇದನ್ನು ಬರೆದವ ಬಿಷಪ್ ಅಂಡರ್ಸ್ ಆರೆಬೋ (೧೫೮೭–೧೬೩೭). ಸೃಷ್ಟಿಯನ್ನು ಕುರಿತ ಈ ಕಾವ್ಯ ಡಿ ಬಾರ್ತಾ ಎಂಬವನ ಲ ಸೆಮೇನ್ ಎಂಬ ಕಾವ್ಯದ ರೂಪಾಂತರ. ನಾಲ್ಕನೆಯ ಕ್ರಿಶ್ಚನ್ ದೊರೆಯ ಸಚಿವನಾಗಿದ್ದ ಸೋರೆನ್ ಟರ್ಕಲ್‌ಸನ್ ಎಂಬಾತ ಡೇನಿಷ್ ಸಾಹಿತ್ಯದಲ್ಲಿ ಹೊಸತಾಗಿ ಪ್ರಯೋಗಿಸಿದ. ಗ್ರಾಮಜೀವನವನ್ನು ಕುರಿತ ಕಾವ್ಯ ಇನ್ನೂ ಹೆಚ್ಚು ಪ್ರಮಾಣದಲ್ಲಿ ಅನುಕರಣವಾಗಿತ್ತು. ಆದರೆ ಈ ಕೃತಕ ಕಾವ್ಯದಿಂದ ಡೇನಿಷ್ ಭಾಷೆಗೆ ಒಂದು ಉಪಕಾರವಾಯಿತು ; ಅದೇನೆಂದರೆ ಈ ಕಾವ್ಯದ ಪರಿಣಾಮವಾಗಿ ಡೇನಿಷ್ ಭಾಷೆಯಲ್ಲಿ ನಮ್ಯತೆಯೂ ಲಾಲಿತ್ಯವೂ ಉಂಟಾದುವು.

ಸ್ವಂತಿಕೆಯೇ ಇಲ್ಲವೆನಿಸುವ ಈ ಯುಗದಲ್ಲಿ ಪ್ರತಿಭಾನ್ವಿತರಾದ ಇಬ್ಬರು ಕವಿಗಳ ಕೃತಿಗಳು ಉಜ್ವಲವಾಗಿ ಕಾಣುತ್ತವೆ. ಚಿತ್ರಾಕರ್ಷಕವಾದ ಡೇನಿಷ್ ಶೈಲಿಯಲ್ಲಿ ಲಘುವೂ ವಿನೋದಮಯವೂ ಆದ ಪದ್ಯಗಳನ್ನು ಬರೆದ ಆಂಡರ್ಸ್ ಬೋರ್ಡಿಂಗ್ (೧೬೧೯–೧೬೭೭) ಎಂಬಾತ ಒಬ್ಬ. ಡೆನ್‌ಮಾರ್ಕಿನಲ್ಲಿ ಡೆನ್‌ಡಾನ್ಸ್ಕ ಮರ್ಕ್ಯೂರಿಯಸ್ ಎಂಬ ವೃತ್ತಪತ್ರಿಕೆಯನ್ನು ಸ್ಥಾಪಿಸಿ ಬೋರ್ಡಿಂಗ್ ವೃತ್ತ ಪತ್ರಿಕೋದ್ಯಮದ ಜನಕನಾದ. ಈ ಪತ್ರಿಕೆಯಲ್ಲಿ ಈತ ಸಮಾಚಾರವನ್ನು ಅಲೆಕ್ಸಾಂಡ್ರೈನ್ ಛಂದಸ್ಸಿನಲ್ಲಿ ಬರೆಯುತ್ತಿದ್ದ. ತಾಮಸ್ ಕಿಂಗೊ (೧೬೩೪–೧೭೦೩) ಎಂಬ ಪಾದ್ರಿ ಎರಡನೆಯ ಕವಿ. ಈತ ಬರೆದ ಲೌಕಿಕ ಕಾವ್ಯವೆಲ್ಲ ಆ ಯುಗದ ಶಬ್ದಾಡಂಬರದಿಂದ ಕ್ಲೇಶಕರವಾಯಿತು. ಆದರೆ ಈತನ ಪ್ರಾರ್ಥನಾ ಗೀತೆಗಳಲ್ಲಿರುವ ನಾದ ಮತ್ತು ಅರ್ಥಗಾಂಭೀರ್ಯಗಳಿಂದಾಗಿ ಅವು ಈತನನ್ನು ಡೆನ್ಮಾರ್ಕಿನ ಬರೋಕ್ ಸಾಹಿತ್ಯದ ಶಿರೋಮಣಿಯನ್ನಾಗಿ ಮಾಡಿವೆ. ಕಿಂಗೊನ ಪ್ರಾರ್ಥನಾ ಗೀತೆಗಳನ್ನು ಆಂಡಿಲೈಡ್ ಸ್ಯೂಂಗ್‌ಕೋರ್ ಎಂಬಾತ ಎರಡು ಸಂಪುಟಗಳಲ್ಲಿ ಸಂಕಲನಮಾಡಿದ. ಅವುಗಳಲ್ಲಿ ಹಲವನ್ನು ಕರ್ಕ್ ಸಾಮ್‌ಬಾಗ್‌ನಲ್ಲಿ (ಚರ್ಚ್‌ಸಾಮ್‌ಬುಕ್, ಚರ್ಚಿನ ಪ್ರಾರ್ಥನಾಗೀತೆಗಳ ಪುಸ್ತಕ) ಪ್ರಕಟಿಸಲಾಯಿತು (೧೬೯೯). ಅವುಗಳಲ್ಲಿ ಹತ್ತು ಗಿಲ್‌ಬರ್ಟ್ ಟೇಟ್ ಎಂಬುವನು ಪ್ರಕಟಿಸಿದ ದಿ ಹಿಮ್ಸ್ ಆಫ್ ಡೆನ್‌ಮಾರ್ಕ್ ಎಂಬ ಪುಸ್ತಕದಲ್ಲಿ ಇಂಗ್ಲಿಷಿನಲ್ಲಿ ಭಾಷಾಂತರಗೊಂಡಿವೆ.

ಗದ್ಯ ಕ್ಷೇತ್ರದಲ್ಲಿ ಈ ಯುಗವನ್ನು ನೆನಹುಗಳ (ಮೆಮ್ವಾರ್ಸ್) ಯುಗವೆನ್ನಬಹುದು. ಡೆನ್‌ಮಾರ್ಕಿನ ನಾಲ್ಕನೆಯ ಕ್ರಿಶ್ಚನ್ ದೊರೆಯ ಮಗಳೂ ಕೌಂಟ್ ಉಲ್‌ಫೆಲ್ಟನ ಹೆಂಡತಿಯೂ ಆದ ಲಿಯೊನಾರಾ ಕ್ರಿಸ್ಟೀನ ಎಂಬಾಕೆಯೂ

ಕೋಪನ್‌ಹೇಗನ್ನಿನ ಕೋಟೆಯಲ್ಲಿ ಸೆರೆಯಾಳಾಗಿದ್ದಾಗ ಬರೆದ ಆತ್ಮಕಥೆ ಈ ಬಗೆಯ ಕೃತಿಗಳಲ್ಲೆಲ್ಲ ಅತ್ಯುತ್ತಮವಾದುದು. ಇದರ ಹಸ್ತಪ್ರತಿ ೧೮೬೯ರಲ್ಲಿ ವಿಯನ್ನದಲ್ಲಿ ಮೊದಲಿಗೆ ಮುದ್ರಿತವಾಯಿತು. ಹೃದಯವಿದ್ರಾವಕವಾದ ಈ ಕರುಣಕಥೆಯನ್ನು ಮೆಮ್ವಾರ್ಸ್ ಆಫ್ ಲಿಯೊನಾರಾ ಕ್ರಿಸ್ಟೀನ ಎಂಬ ಇಂಗ್ಲಿಷ್ ಭಾಷಾಂತರದಲ್ಲಿ ೧೮೭೨ರಲ್ಲಿ ಪ್ರಕಟಿಸಲಾಯಿತು.

ನವೋದಯಾನಂತರದಲ್ಲಿ ಡೆನ್‌ಮಾರ್ಕಿನಲ್ಲಿ ನಾಟಕಸಾಹಿತ್ಯ ಲೌಕಿಕ ವಿಷಯ ಪ್ರಧಾನವಾಯಿತು. ಗ್ರಿವೆನ್ಸ್ ಓಕ್ ಫ್ರೈಹೆರೆನ್ಸ್ ಕೋಮಿಡೀ (ಕೌಂಟ್ ಹಾಗೂ ಬ್ಯಾರನ್ನುಗಳ ಹಾಸ್ಯ ನಾಟಕ) ಎಂಬ ವಿಡಂಬನಾತ್ಮಕ ನಾಟಕ ಮ್ಯೋಗೆನ್ಸ್ ಸ್ಕಿಟ್ (೧೬೫೦-೧೯೪) ಎಂಬ, ವರಿಷ್ಠ ಮೋಲ್‌ಯೇರನ ಶೈಲಿಯಲ್ಲಿ ಬರೆದ ಸ್ವತಂತ್ರ ಕೃತಿ.

ಹೋಲ್‌ಬರ್ಗ್ ಯುಗ: ೧೭೦೦-೧೭೫೦. ಡೇನಿಷ್ ಸಾಹಿತ್ಯ ಚರಿತ್ರೆಯಲ್ಲಿ ೧೮ನೆಯ ಶತಮಾನದ ಪೂರ್ವಾರ್ಧವನ್ನು ಡೇನಿಷ್ ಸಾಹಿತ್ಯದ ಜನಕನಾದ ಯೋಹಾನ್ ಲುಡ್‌ವಿಗ್ ಹೋಲ್‌ಬರ್ಗ್ (೧೬೮೪-೧೭೫೪) ಎಂಬಾತನ ಹೆಸರನ್ನು ಸೇರಿಸಿ ಹೋಲ್‌ಬರ್ಗ್ ಯುಗವೆಂದು ಕರೆಯುತ್ತಾರೆ. ಶೈಲಿಯಲ್ಲಿ ಮೋಲ್‌ಯೇರನನ್ನು ಅನುಸರಿಸಿದರೂ ವಿಷಯದಲ್ಲಿ ರಾಷ್ಟ್ರೀಯವಾದ ಹಾಸ್ಯನಾಟಕಗಳನ್ನು ಬರೆದು ಹೋಲ್‌ಬರ್ಗ್ ಡೇನಿಷ್ ರಂಗಭೂಮಿಗೆ ಅಸ್ತಿಭಾರ ಹಾಕಿಕೊಟ್ಟ. ಯೆಪ್ ಪಾ ಬ್ಯೇರ್ ಗೆಟ್, ಡೆನ್ ಪಾಲಿಟಿಸ್ಕ್ ಕ್ಯಾಂಡಸ್ಟೋಬರ್, ಇರ್ಯಾಸ್ಮಸ್ ಮಾಂಟೇನಸ್ ಎಂಬ ವೈನಿನೋದಿಕಗಳಲ್ಲಿ (ಕಾಮಿಡಿ) ಈತ ಕುಡುಕ ರೈತ, ಹೆಡ್ಡ ರಾಜಕಾರಣಿ ಮತ್ತು ಮೂರ್ಖವಿದ್ಯಾರ್ಥಿಗಳ ಹಾಸ್ಯಾಸ್ಪದ ನಮೂನೆಗಳನ್ನು ಸೃಷ್ಟಿಸಿದ್ದಾನೆ. ಹೋಲ್‌ಬರ್ಗ್ ಡೇನಿಷ್ ಸಾಹಿತ್ಯವನ್ನು ಸತ್ತ್ವಶಾಲಿಯಾಗಿ ಮಾಡಿದ. ಒ.ಜೆ. ಕ್ಯಾಂಬೆಲ್ ಮತ್ತು ಫ್ರೆಡರಿಕ್ ಷೆಂಕ್ ೧೯೧೪ರಲ್ಲಿ ಮೇಲೆ ಹೇಳಿದ ಮೂರು ನಾಟಕಗಳ ಇಂಗ್ಲಿಷ್ ಭಾಷಾಂತರವನ್ನು ಕಾಮಿಡೀಸ್ ಬೈ ಹೋಲ್‌ಬರ್ಗ್ ಎಂಬ ಪುಸ್ತಕದಲ್ಲಿ ಪ್ರಕಟಿಸುವವರೆಗೂ ಈತನೊಬ್ಬ ಉತ್ತಮ ನಾಟಕಕಾರನೆಂಬುದು ಸ್ಕ್ಯಾಂಡಿನೇವಿಯದಿಂದಾಚೆ ತಿಳಿದೇ ಇರಲಿಲ್ಲ. ಆದರೆ ನಿಕೊಲೈ ಕ್ಲಿಮ್ಯೈ ಐಟರ್ ಸಬ್‌ಟೆರೇನಿಯಮ್ ಎಂಬ ಹೋಲ್‌ಬರ್ಗ್‌ನ ಗದ್ಯವಿಡಂಬನ ೧೭೪೧ರಲ್ಲಿ ಪ್ರಕಟವಾಯಿತು. ಈ ಕೃತಿ ಗಲಿವರ್ಸ್ ಟ್ರಾವಲ್ಸ್ ಎಂಬ ವಿಖ್ಯಾತ ವಿಡಂಬನದಂತೆಯೇ ಇದೆ. ೧೭೪೨ರಲ್ಲೇ, ಪ್ರಕಟವಾದ ಒಂದೇ ವರ್ಷದೊಳಗಾಗಿ, ಈ ವಿಡಂಬನದ ಡೇನಿಷ್ ಮತ್ತು ಇಂಗ್ಲಿಷ್ ಭಾಷಾಂತರಗಳು ಪ್ರಕಟವಾದುವು. ಪೇಪ್ರ ಪಾರ್ಸ್ (೧೭೧೯) ಎಂಬುದು ಹೋಲ್‌ಬರ್ಗನ ಅಣಕ ಮಹಾಕಾವ್ಯ. ಇದರಲ್ಲಿ ಹೋಮರ್ ಮತ್ತು ವರ್ಜಿಲ್ ಕವಿಗಳ ಕ್ಷುದ್ರ ಅನುಕರಣಕಾರರನ್ನು ನಗೆಗೀಡುಮಾಡಲಾಗಿದೆ. ಆದರೆ ಈ ವಿಡಂಬನದಿಂದ ಹೋಲ್‌ಬರ್ಗ್ ಅಧಿಕಾರಿಗಳ ಆಗ್ರಹಕ್ಕೆ ಪಾತ್ರನಾಗುವುದರಲ್ಲಿದ್ದ. ಹೀಗಾಗಿ ಆತ ವಿಡಂಬನ

ಬರೆಯುವುದನ್ನೇ ಕೈಬಿಡಬೇಕಾಯಿತು. ೧೭೨೮ರಲ್ಲಿ ಹೋಲ್‌ಬರ್ಗ್ ಕಾವ್ಯ ಬರೆಯುವುದನ್ನು ಬಿಟ್ಟು ಡಾನ್‌ಮಾರ್ಕ್ ರೈಜಿಸ್ ಹಿಸ್ಟರೀ ಎಂಬ ಇತಿಹಾಸಗ್ರಂಥವನ್ನು ಬರೆದ. ಹಾನ್ಸ್ ಗ್ರಾಮ್ ಎಂಬ ಇತಿಹಾಸಕಾರನ ಮೇಲಿನ ಸ್ಪರ್ಧೆಯಿಂದ ಈ ಪುಸ್ತಕ ಬರೆದದ್ದು. ಆಕರಗಳ ಅಧ್ಯಯನದಲ್ಲಿ ಹಾನ್ಸ್ ಗ್ರಾಮ್ ಮೇಲುಗೈಯಾದರೆ, ಲೇಖನಕಲೆಯಲ್ಲಿ ಹೋಲ್‌ಬರ್ಗ್‌ನದು ಮೇಲುಗೈ. ಹೋಲ್‌ಬರ್ಗ್ ಮಾರಲ್ಸ್ಕ ಟ್ಯಾನ್ಕರ್ ಮತ್ತು ಎಪಿಸ್ಲರ್ ಎಂಬ ನೀತಿಮೀಮಾಂಸೆಯನ್ನು ಕುರಿತ ೫೦೦ ಪ್ರಬಂಧಗಳನ್ನು ಬರೆದ. ಇವು ಮಾಂಟೇನ್ ಮತ್ತು ಅಡಿಸನ್ನರ ಪ್ರಬಂಧಗಳನ್ನು ಹೋಲುತ್ತವೆ. ಆದರೆ ಹೋಲ್‌ಬರ್ಗ್ ಯಾವೊಂದು ನಿರ್ದಿಷ್ಟ ತಾತ್ತ್ವಿಕ ಸಿದ್ಧಾಂತವನ್ನೂ ನಿರೂಪಿಸಲಿಲ್ಲ. ಆತ ತನ್ನ ಯುಗದ ಮಧ್ಯಸ್ಥ ಮನೋವೃತ್ತಿಯ ಪ್ರತೀಕ, ಅಷ್ಟೆ. ಇಡೀ ಯುರೋಪನ್ನು ಬಾಲ್ಯದಲ್ಲೇ ಪಾದಚಾರಿಯಾಗಿ ಸಂಚರಿಸಿದ್ದ ಹೋಲ್‌ಬರ್ಗನ ಕೃತಿಗಳಲ್ಲಿ ಒಂದು ಉದಾರವಾದ ಮನೋವೈಶಾಲ್ಯ ಎದ್ದು ಕಾಣುತ್ತದೆ. ಲೈಬ್ನಿಟ್ಸ್, ಅಲೆಕ್ಸಾಂಡರ್ ಪೋಪ್, ಐಸ್ಯಾಕ್ ನ್ಯೂಟನ್, ಜಾನ್ ಲಾಕರ್, ಪಿಯ್ ಬಾಯ್‌ಲ್, ಹ್ಯೂಗೋ, ಗ್ರೋಷಿಯಸ್ ಮುಂತಾದ ಮಹನೀಯರನ್ನೊಳಗೊಂಡ ಆಧುನಿಕ ಯೂರೋಪಿನ ಪರಿಚಯವನ್ನು ತನ್ನ ತಾಯ್ನಾಡಿಗೆ ಮಾಡಿಕೊಟ್ಟದ್ದು ಹೋಲ್‌ಬರ್ಗನ ದೊಡ್ಡ ಕೊಡುಗೆ.

೧೭ನೆಯ ಶತಮಾನದ ಅನುಭಾವಿಗಳಲ್ಲಿ ಮೊದಲಿಗೆ ಕಾಣಿಸಿಕೊಂಡ ಧರ್ಮ ಶ್ರದ್ಧೆ ಈಗ ಸಂಪೂರ್ಣವಾಗಿ ವಿಕಾಸಗೊಂಡು ಹಾನ್ಸ್ ಅಡಾಲ್ಫ್ ಬ್ರೋರ್‌ಸನ್ನನ (೧೬೯೪–೧೭೬೪) ಪ್ರಾರ್ಥನಾಗೀತೆಗಳಲ್ಲಿ ಅಭಿವ್ಯಕ್ತವಾಯಿತು. ಟ್ರೇನ್ಸ್ ರೇರ್ ಕ್ಲೆನೊಡೀ (ಧರ್ಮದ ಅಪೂರ್ವ ರತ್ನ) ಮತ್ತು ಸ್ವ್ಯಾನ್‌ಸಾಂಗ್ (ಹಂಸಗೀತೆ) ಎಂಬ ಸಂಕಲನಗಳಲ್ಲಿ ಪ್ರಕಟವಾಗಿವೆ. ಹೋಲ್‌ಬರ್ಗ್‌ನಲ್ಲಿಲ್ಲದ ನಿಸರ್ಗಪ್ರೇಮ ಆಂಬ್ರೋಸಿಯಸ್ ಸ್ಟುಬ್ (೧೭೦೫–೧೭೫೮) ಎಂಬವನ ಕವಿತೆಗಳಲ್ಲಿ ಸ್ವಚ್ಛಂದವಾಹಿನಿಯಾಗಿ ಹರಿಯುತ್ತದೆ.

ಪೋಸ್ಟ್–ಕ್ಲ್ಯಾಸಿಕಲ್ ಮತ್ತು ಪ್ರೀ–ರೊಮ್ಯಾಂಟಿಕ್ ಯುಗ: ೧೭೫೦–೧೮೦೦. ೧೮ನೆಯ ಶತಮಾನ ಪ್ರಬೋಧನ ಯುಗ. ಆ ಶತಮಾನದ ಉದ್ದಕ್ಕೂ ವೈಚಾರಿಕತೆ ಹಾಗೂ ಭಾವುಕತೆಗಳ ನಡುವೆ ಸಾಹಿತ್ಯಕ್ಷೇತ್ರದಲ್ಲಿ ಮೇಲುಗೈಯಾಗಲು ಸ್ಪರ್ಧೆ ನಡೆದಿತ್ತು. ಹೋಲ್‌ಬರ್ಗ್ ತನ್ನ ಕೃತಿಗಳಲ್ಲಿ ಎತ್ತಿ ಹಿಡಿದ ನಾಗರಿಕ ಸದ್ಗುಣಗಳ ಆದರ್ಶಕ್ಕೆ ವಿಶೇಷ ಮಾನ್ಯತೆಯಿದ್ದ ಕಾಲ ಅದು. ಈ ಯುಗದಲ್ಲಿ ರಾಜಕೀಯ ಮತ್ತು ಸಾಹಿತ್ಯ ಸಂಘಗಳು ಎಲ್ಲೆಲ್ಲೂ ಹುಟ್ಟಿಕೊಂಡುವು. ಹಲವು ನಿಯತಕಾಲಿಕೆಗಳು ಆರಂಭವಾದುವು. ಯ ಎನ್ಸ್ ಷೀಲ್ಡ್ರುಪ್ ಸ್ನೀಡಾರ್ಫ್ ಸ್ಥಾಪಿಸಿದ ಪ್ರಗತಿಪರ ನಿಯತಕಾಲಿಕೆ ಡೆನ್ಸ್ ಪೇಟ್ರಿಯಾಟಿಸ್ಕ್ ಟಿಲ್‌ಸ್ಕ್ವಾಯರ್ (ದೇಶಭಕ್ತ ಪ್ರೇಕ್ಷಕ) ಎಂಬ ಪತ್ರಿಕೆ. ಅದರಲ್ಲಿ ರೈತವರ್ಗದ ವಿಮೋಚನೆ, ಗುಲಾಮರ ಮಾರಾಟದ ನಿವಾರಣೆ, ಶಾಲಾ ಸುಧಾರಣೆಗಳು, ಪತ್ರಿಕಾಸ್ವಾತಂತ್ರ್ಯ ಮುಂತಾದ ಅನೇಕ ಪ್ರಸಕ್ತ ವಿಷಯಗಳು ಚರ್ಚಿತವಾಗುತ್ತಿದ್ದುವು.

ಆದರೆ ವಿಚಾರ ಮತ್ತು ಭಾವಗಳ ಆವೇಗದಿಂದ ಸಾಹಿತ್ಯದ ಓಜಸ್ಸು ಕಡಿಮೆಯಾಯಿತು. ಇಟಲಿಯ ಆಪೆರ ಮತ್ತು ಫ್ರಾನ್ಸಿನ ಟ್ರ್ಯಾಜೆಡಿಗಳ ಗಂಭೀರ ಶೈಲಿಯ ಅನುಕರಣದಿಂದ ವಾಗಾಡಂಬರದಿಂದಲೂ ದೀರ್ಘಭಾಷಣಗಳಿಂದಲೂ ಕಲುಷಿತವಾದ ಕೃತಿಗಳು ಹುಟ್ಟಿದುವು. ಯೋಹಾನ್ ನೋರ್‌ಡಾಲ್ ಬ್ರುನ್ ಎಂಬುವನ ಟ್ಸಾರಿನ್ ಎಂಬುದು ಇಂಥ ಕೃತಿಗಳಿಗೆ ಒಂದು ನಿದರ್ಶನ. ಇವುಗಳ ನೆನಪು ಉಳಿದಿರುವುದು ಒಂದೇ ಒಂದು ಕಾರಣದಿಂದ. ಅದೇಂದರೆ, ನಾರ್ವೆಯಲ್ಲಿ ಹುಟ್ಟಿದ ಯೋಹಾನ್ ಹರ್ಮನ್ ವೆಸೆಲ್ (೧೭೪೨-೧೭೮೫) ಎಂಬಾತ ಕೀರ್‌ಲೈಡ್ ಊಡೆನ್ ಸ್ಟ್ರೋಂಪರ್ ಎಂಬ ತನ್ನ ಅಣಕ ಟ್ರ್ಯಾಜೆಡಿಯಲ್ಲಿ ಇಂಥ ಕೃತಿಗಳನ್ನು ಹಾಸ್ಯಾಸ್ಪದಗೊಳಿಸಿದ್ದು, ಪದ್ಯಶೈಲಿಯಲ್ಲಿ ಬರೆದ ಕೆಲವು ಹಾಸ್ಯಮಯ ಕಥೆಗಳು, ಹಲವಾರು ತೀಕ್ಷ್ಣವಾದ ಹಾಸ್ಯೋಕ್ತಿಗಳು ಸ್ಟ್ರೋಂಪರನ ಅಣಕದಲ್ಲಿವೆ. ಈ ಕೃತಿ ಪೋಸ್ಟ್-ಕ್ಲ್ಯಾಸಿಕಲ್ ಯುಗದ ಅತ್ಯುತ್ತಮ ಫಲವೆನ್ನಬಹುದು.

ಕ್ರಿಶ್ಚನ್ ಬ್ರೌಮನ್ ಟುಲ್ಲಿನ್ (೧೭೨೮-೧೭೬೫) ಎಂಬಾತ ರೂಸೋ ಮತ್ತು ಅಲೆಕ್ಸಾಂಡರ್ ಪೋಪರನ್ನು ಅನುಸರಿಸಿ ನೀತಿಬೋಧಕ ಪದ್ಯಗಳನ್ನೂ ಜೇಮ್ಸ್ ತಾಮ್ಸನ್ನನ ದಿ ಸೀಸನ್ಸ್ ಎಂಬ ಕವಿತೆಯನ್ನನುಸರಿಸಿ ಪ್ರಕೃತಿವರ್ಣನೆಗಳಿಂದ ಕೂಡಿದ ಕವಿತೆಗಳನ್ನೂ ಬರೆದ. ಆದರೆ ಈ ಕಾಲದ ಕವಿಗಳೆಲ್ಲರನ್ನೂ ಮೀರಿಸಿದವ ಯೋಹಾನ್ಸ್ ಈವಾಲ್ಡ್ (೧೭೪೩-೧೭೮೧) ಎಂಬಾತ. ಡೆನ್‌ಮಾರ್ಕಿನ ರಾಷ್ಟ್ರಗೀತೆಯಾದ ಕಿಂಗ್, ಕ್ರಿಶ್ಚನ್ ಎಂಬುದನ್ನು ಬರೆದವ ಈತನೇ. ಈ ಶತಮಾನದಲ್ಲಿ ಇವನೇ ಅತ್ಯಂತ ಪ್ರತಿಭಾಶಾಲಿಯಾದ ಕವಿ. ಈತನ ತಂದೆ ಒಬ್ಬ ಪಾದ್ರಿ. ಹೀಗಾಗಿ ಧರ್ಮಶ್ರದ್ಧೆ ಇವನಿಗೆ ಪಿತೃಪ್ರಾಪ್ತವಾದದ್ದು. ಬುದ್ಧಿಯಲ್ಲಿ ಪ್ರಬೋಧನ ಯುಗಕ್ಕೂ ಭಾವದಲ್ಲಿ ಎಫ್.ಜಿ. ಕ್ಲಾಪ್‌ಸ್ಟಾಕ್‌ನಿಂದ ಉಪಕ್ರಮಗೊಂಡ ಜರ್ಮನ್ ನವೋದಯಕ್ಕೂ ಸೇರಿದವ ಈತ. ಈತನಿಂದ ಪ್ರೀ-ರೊಮ್ಯಾಂಟಿಕ್ ಯುಗ ಡೆನ್‌ಮಾರ್ಕಿನಲ್ಲಿ ತಲೆದೋರಿತು. ತನ್ನ ನಾಟಕದಲ್ಲಿ ಈತ ಫ್ರೆಂಚ್ ಕ್ಲಾಸಿಕ್ ಮಾರ್ಗವನ್ನು ಬಿಟ್ಟು ಷೇಕ್ಸ್‌ಪಿಯರ್, ಮಿಲ್ಟನ್, ಆಸಿಯನ್, ಲಾವಣಿಗಳು ಮತ್ತು ನಾರ್ಡಿಕ್ ದಂತಕಥೆಗಳು- ಇವುಗಳ ಅಂಶವನ್ನು ಅಳವಡಿಸಿಕೊಂಡ. ಈತನ ಭಾವಗೀತಾತ್ಮಕವಾದ ಓಡುಗಳಲ್ಲಿ ರೊಮ್ಯಾಂಟಿಕ್ ಯುಗದ ಕರುಣರಸ ಉಕ್ಕಿ ಹರಿಯುತ್ತದೆ. ಈವಾಲ್ಡನ ಅನಂತರ ಜರ್ಮನ್ ಮಾದರಿಯನ್ನನುಸರಿಸಿದ ಅನೇಕ ಟ್ರ್ಯಾಜೆಡಿಗಳು ಕಾಮಿಡಿಗಳೂ ಹುಟ್ಟಿದುವು. ಓಲಫ್ ಕ್ರಿಶ್ಚನ್ ಓಲಫ್‌ಸನ್ (೧೭೬೩-೧೮೨೭) ಎಂಬಾತನ ಗುಲ್ಡಾಸನ್ (ಸುವರ್ಣ ಸಂಪುಟ) ಎಂಬ ಒಂದು ಕಾಮಿಡಿಯ ಹೊರತು ಉಳಿದವೆಲ್ಲ ತೀರ ಸಾಮಾನ್ಯಮಟ್ಟದವು. ಪೀಟರ್ ಆಂಡ್ರಿಯಾಸ್ ಹೈಬರ್ಗ್ ಎಂಬಾತನಿಗೆ ಹೆಚ್ಚು ಗೌರವ ಸಲ್ಲಬೇಕಾಗುತ್ತದೆ. ತನ್ನ ಕಾಮಿಡಿಗಳಲ್ಲೂ ವಿಡಂಬನಗಳಲ್ಲೂ ಈತ ಹೋಲ್‌ಬರ್ಗನ ಮಾರ್ಗವನ್ನನುಸರಿಸಿದ. ಆದರೆ ಈತನನ್ನು ೧೮೦೦ರಲ್ಲಿ ದೇಶಭ್ರಷ್ಟನನ್ನಾಗಿ ಮಾಡಲಾಯಿತು. ಕಾವ್ಯದ ಪರಂಪರೆಯನ್ನು ೧೯ನೆಯ ಶತಮಾನಕ್ಕೆ

ಒಯ್ದ ಪ್ರತಿಭಾನ್ವಿತ ಕವಿಯೆಂದರೆ ಯೆನ್ಸ್ ಬ್ಯಾಗೆಸನ್ (೧೭೬೪-೧೮೨೬). ತನ್ನ ಹಾಸ್ಯಮಯ ಕಥೆಗಳು ಹಾಗೂ ಭಾವಪೂರ್ಣವಾದ ಪ್ರವಾಸ ಗ್ರಂಥಗಳಲ್ಲಿ ಈತ ಹೋಲ್‌ಬರ್ಗ್ ಮತ್ತು ವೆಸ್ಸೆಲ್ಲರ ಹಾಸ್ಯವನ್ನೂ ಈವಾಲ್ಡನ ಹಾಗೂ ಮುಂದಿನ ರೊಮ್ಯಾಂಟಿಕ್ ಯುಗದ ಕಲ್ಪನಾವಿಲಾಸವನ್ನೂ ಪ್ರದರ್ಶಿಸುತ್ತಾನೆ.

ರೊಮ್ಯಾಂಟಿಕ್ ಯುಗ: ೧೮೦೦-೧೮೭೦. ಡೇನಿಷ್ ಸಾಹಿತ್ಯದಲ್ಲಿ ಈವಾಲ್ಡ್ ಮತ್ತು ಬ್ಯಾಗೆಸನ್ ರೊಮ್ಯಾಂಟಿಕ್ ಯುಗದ ಪ್ರವರ್ತಕರು. ಕೋಪೆನ್‌ಹೇಗೆನ್ ನಗರದ ತತ್ತ್ವಶಾಸ್ತ್ರಜ್ಞ ಹೆನ್ರಿಕ್ ಸ್ಟೀಫನ್ಸ್ ೧೮೦೨ರಲ್ಲಿ ನೀಡಿದ ಭಾಷಣಗಳಿಂದಲೂ ಗಯಟೆ, ಷಿಲ್ಲರ್ ಮತ್ತು ಯೇನಾ ನಗರದ ರೊಮ್ಯಾಂಟಿಕ್ ಕವಿಗಳ ಉದಯದಿಂದಲೂ ಕಾಂಟ್ ಮತ್ತು ಷೆಲ್ಲಿಂಗ್ ಎಂಬ ಜರ್ಮನ್ ತತ್ತ್ವಜ್ಞರ ಸಿದ್ಧಾಂತಗಳಿಂದಲೂ ದೊರೆತ ಸ್ಫೂರ್ತಿಯಿಂದ ಡೆನ್‌ಮಾರ್ಕಿನಲ್ಲಿ ರೊಮ್ಯಾಂಟಿಕ್ ಯುಗದ ಉದಯವಾಯಿತು. ರೊಮ್ಯಾಂಟಿಕ್ ಯುಗವೇ ಡೇನಿಷ್ ಸಾಹಿತ್ಯದ ಸುವರ್ಣಯುಗ. ಆಡಮ್ ಓಲೆನ್‌ಷ್ಲಾಜರ್ (೧೭೭೮-೧೮೫೦) ಎಂಬ ಪ್ರತಿಭಾಶಾಲಿಯಾದ ತರುಣ ಈ ಯುಗದ ಅಗ್ರಗಾಮಿ ಕವಿ. ಗುಲ್ಡ್‌ಹಾರ್ನನ್ (೧೮೦೨) ಎಂಬ ಈತನ ಪದ್ಯದಲ್ಲಿ ರೊಮ್ಯಾಂಟಿಕ್ ಮನೋಧರ್ಮ ಅದ್ಭುತವಾಗಿ ವ್ಯಕ್ತಗೊಂಡಿದೆ. ಸ್ಯಾಂಕ್ಟ್ ಹ್ಯಾನ್ಸಾಫ್ಟನ್ ಸ್ಪಿಲ್ (೧೮೦೩) ಎಂಬ ಕಾವ್ಯಾತ್ಮಕ ವಿಡಂಬನದಲ್ಲಿ ೧೮ನೆಯ ಶತಮಾನದ ವೈಚಾರಿಕತೆಯನ್ನು ಈತ ಅಣಕಿಸಿದ್ದಾನೆ. ಅಲಾಡಿನ್ (೧೮೦೫) ಎಂಬ ಭಾವಗೀತಾತ್ಮಕ ನಾಟಕದಲ್ಲಿ ಭಾಗ್ಯಶಾಲಿಯಾದ ನಾಯಕ ಕವಿಯ ಪ್ರತಿಭೆಯ ಪ್ರತೀಕವಷ್ಟೇ ಅಲ್ಲದೆ ರೊಮ್ಯಾಂಟಿಕ್ ಕ್ರಾಂತಿಯ ಅಂತಸ್ಸತ್ತ್ವದ ಪ್ರತೀಕವೂ ಆಗಿದ್ದಾನೆ.

ಹೇಕೆನ್‌ಯಾರ್ಲ್ (೧೮೦೭) ಎಂಬ ಓಜಸ್ವಿಯಾದ ಟ್ರ್ಯಾಜೆಡಿಯಲ್ಲಿ ನಾರ್ಡಿಕ್ ಕಾವ್ಯ ತನ್ನ ಪರಾಕಾಷ್ಠೆಯನ್ನೇ ಮುಟ್ಟಿದೆ. ಇದಾದ ಮೇಲೆ ಈತ ಬರೆದ ನಾಟಕಗಳ ಸಾಲಿನಲ್ಲಿ ಯಾವುದೂ ಅಷ್ಟೇನೂ ಸತ್ತ್ವಶಾಲಿಯಾದದ್ದಲ್ಲ. ಆದರೆ ಅದೇ ಕಾಲದಲ್ಲಿ ಈತ ಬರೆದ ಭಾವಗೀತೆಗಳು ಭಾವ ಹಾಗೂ ಭಾವನಾಪೂರ್ಣ ವಾಗಿದೆ. ಡರ್ ಎರ್ ಎಟ್ ಇಂಡ್ಯೆಟ್ ಲ್ಯಾಂಡ್ (ಚೆಲುವ ನಾಡೊಂದುಂಟು) ಎಂಬ ದೇಶಭಕ್ತಿ ಗೀತೆ ತುಂಬ ವಿಖ್ಯಾತವಾದದ್ದು. ೧೮೨೯ರಲ್ಲಿ ಓಲೆನ್‌ಷ್ಲಾಜರನಿಗೆ ಲುಂಡ್ ನಗರದಲ್ಲಿ ಕಿರೀಟಧಾರಣ ಮಾಡಿ ನಾರ್ಡಿಕ್ ಕವಿರಾಜ ಎಂಬ ಬಿರುದನ್ನು ನೀಡಿ ಗೌರವಿಸಲಾಯಿತು. ಈತನ ಕೃತಿಗಳು ಭಾಷಾಂತರವಾಗಿದ್ದರೂ ಸ್ಕ್ಯಾಂಡಿನೇವಿಯದಿಂದಾಚೆ ಈತನಿಗೆ ಸಾಕಷ್ಟು ಮನ್ನಣೆ ದೊರೆತಿಲ್ಲದಿರುವುದು ಸೋಜಿಗದ ಸಂಗತಿ.

ಬರ್ನ್‌ಹಾರ್ಡ್ ಸೆವೆರಿನ್ ಇಂಗ್‌ಮನ್ (೧೭೮೯-೧೮೬೨) ಎಂಬಾತನ ಮಾರ್ಗೆನ್ ಓಕ್ ಆಫ್ಟನ್ ಸಾಂಗ್ ಎಂಬ ಕವನಸಂಗ್ರಹ ಜನಪ್ರಿಯವಾದದ್ದು. ಡೆನ್‌ಮಾರ್ಕ್ ಇಂಗ್ಲೆಂಡಿನೊಡನೆ ನಡೆಸಿದ ಯುದ್ಧದಲ್ಲಿ ೧೮೦೧, ೧೮೦೭ರಲ್ಲಿ

ಸೋಲುಗಳನ್ನನುಭವಿಸಿ ಕಡೆಗೆ ೧೮೧೪ರಲ್ಲಿ ನಾರ್ವೆಯನ್ನು ಕಳೆದುಕೊಂಡಿತು. ಈ ಘಟನೆಗಳಿಂದ ನಿಸ್ತೇಜನಗೊಂಡಿದ್ದ ತಾಯ್ನಾಡಿನಲ್ಲಿ ಇಂಗ್‌ಮೆನ್ ತನ್ನ ಐತಿಹಾಸಿಕ ಕಾದಂಬರಿಗಳಿಂದ ರಾಷ್ಟ್ರೀಯ ಸ್ವಾಭಿಮಾನವನ್ನು ಜಾಗೃತಗೊಳಿಸಿ ಡೇನರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿದ. ಯೋಹಾನ್ಸ್ ಕಾರ್ಸ್ಟನ್ ಹಾಂಕ್ (೧೭೯೦–೧೮೭೨) ಪೌರುಷಮಯವೂ ಉದಾತ್ತವೂ ಆದ ಭಾವಗೀತೆಗಳನ್ನು ಬರೆದ.

ಆದರೆ ಈ ಕಾಲದ ಅತ್ಯಂತ ಪ್ರಭಾವಶಾಲಿಯಾದ ವ್ಯಕ್ತಿ ಎಂದರೆ ನಿಕೋಲೈ ಫ್ರೆಡರಿಕ್ ಸೆವೆರೀನ್ ಗ್ರುಂಟ್‌ವಿಗ್ (೧೭೮೩–೧೮೭೨) ಎಂಬಾತ. ಈತ ಪ್ರಾರ್ಥನಾ ಗೀತಕಾರ. ಧರ್ಮೋಪದೇಶಕ ಹಾಗೂ ಶಿಕ್ಷಣಪಟು. ಈತನ ಉಜ್ವಲ ಪ್ರಾರ್ಥನಾ ಗೀತೆಗಳಿಂದ ಡೆನ್‌ಮಾರ್ಕಿನ ಚರ್ಚುಗಳಲ್ಲಿ ಈತನಿಗೆ ಅಗ್ರಸ್ಥಾನ ದೊರೆತಿತ್ತು. ಈತನ ಪ್ರಭಾವಕ್ಕೆ ಮುಖ್ಯ ಕಾರಣ ಈತ ಬೋಧಿಸಿದ ಶಿಕ್ಷಣ ತತ್ತ್ವ. ಶಿಕ್ಷಣ ಪುಸ್ತಕ ಪಾಠಕ್ಕಾಗಿ ಅಲ್ಲ, ಬದುಕಿಗಾಗಿ ಎಂದು ಈತ ಒತ್ತಿ ಹೇಳಿದ. ಈತನ ಸ್ಫೂರ್ತಿಯಿಂದಲೇ ಡೆನ್‌ಮಾರ್ಕಿನ ಸುಪ್ರಸಿದ್ಧ ಜನತಾ ಶಾಲಾ (ಫೋಕ್ ಸ್ಕೂಲು) ಚಳವಳಿ ಹುಟ್ಟಿದ್ದು.

೧೮೨೫ರ ತರುವಾಯ ಪ್ರಾಮುಖ್ಯ ಗಳಿಸಿದ ತರುಣ ರೊಮ್ಯಾಂಟಿಕರಲ್ಲಿ ಯೋಹಾನ್ ಲುಡ್‌ವಿಗ್ ಹೈಬರ್ಗ್ (೧೭೯೧–೧೮೬೦) ಎಂಬಾತನೇ ಅತ್ಯಂತ ವರ್ಚಸ್ವಿ. ಹೇಗಲನ ಸಿದ್ಧಾಂತವನ್ನು ಡೇನಿಷ್ ಸಾಹಿತ್ಯಕ್ಕೆ ತಂದವ ಈತನೇ. ಓಲೆನ್‌ಷ್ಲಾಜರನ ಕಲೆಯಲ್ಲಿ ನಯಗಾರಿಕೆ ಸಾಲದೆಂದು ಹೈಬರ್ಗ್ ಆತನನ್ನು ಟೀಕಿಸಿದ. ನೃತ್ಯಗೀತಗಳನ್ನೊಳಗೊಂಡ ತನ್ನ ವಾದ್‌ವಿಲ್‌ಗಳಲ್ಲಿ (ಲಘುನಾಟಿಕೆಗಳು) ಮತ್ತು ತನ್ನ ರೊಮ್ಯಾಂಟಿಕ್ ನಾಟಕಗಳಲ್ಲಿ ಈತ ಕಾವ್ಯದ ವಿವಿಧ ಪ್ರಕಾರಳಿಗೆ ಪರಿಷ್ಕೃತ ರೂಪ ಅತ್ಯಗತ್ಯವೆಂದು ಒತ್ತಿ ಹೇಳಿದ. ಎಲ್ವರ್ ಹೋಯ್ (ಎಲ್ವರನ ಬೆಟ್ಟ) ಎಂಬ ಈತನ ರೊಮ್ಯಾಂಟಿಕ್ ನಾಟಕದಲ್ಲಿ ಪ್ರೇಮ, ಜನತೆಯ ಸಂಪ್ರದಾಯಗಳು ಮತ್ತು ರಾಜಭಕ್ತಿಗಳಿಗೆ ಪೂಜ್ಯತೆ ಕೊಟ್ಟಿರುವುದರಿಂದ ಈ ನಾಟಕವನ್ನು ರಾಷ್ಟ್ರೀಯ ಉತ್ಸವಗಳಲ್ಲಿ ರಾಷ್ಟ್ರೀಯ ನಾಟಕವನ್ನಾಗಿ ಇಂದಿಗೂ ಪ್ರದರ್ಶಿಸುತ್ತಾರೆ. ಹೈಬರ್ಗ್ ತೋರಿದ ಕಲಾವಂತಿಕೆ ಹೆನ್ರಿಕ್ ಹರ್ಟ್ಸ್ (೧೭೯೮–೧೮೭೦) ಎಂಬುವನ ಅಸಂಖ್ಯಾತ ರೊಮ್ಯಾಂಟಿಕ್ ನಾಟಕಗಳಲ್ಲೂ ಕೋಪೆನ್ ಹೇಗೆನ್ ಕಾಮಿಡಿಗಳಲ್ಲೂ ಕಂಡುಬರುತ್ತದೆ. ಈ ಕಾಮಿಡಿಗಳಲ್ಲಿ ನಾಯಿಕೆಯ ಪಾತ್ರವನ್ನು ಹೈಬರ್ಗನ ಪತ್ನಿಯಾದ ಯೋಹಾನ್ ಲೂಯಿಸೆ ಹೈಬರ್ಗಳಿಗೆ (೧೮೧೨–೧೮೯೦) ಕೊಡಲಾಗುತ್ತಿತ್ತು. ಈಕೆ ಡೆನ್‌ಮಾರ್ಕಿನ ಶ್ರೇಷ್ಠತಮನಟಿ ಅಲ್ಲದೆ ಈಕೆ ತುಂಬ ಸ್ವಾರಸ್ಯಮಯವಾದ ಮೆಮ್ವಾರ್ ಲೇಖಕಿಯೂ ಹೌದು.

ವಾದ್‌ವಿಲ್‌ಗಳು ವಾಸ್ತವಿಕವಾಗಿರಬೇಕೆಂಬ ಒತ್ತಾಯ ಹೆಚ್ಚುತ್ತಿದ್ದುದರಿಂದ ಅವುಗಳಲ್ಲಿ ಪರಿಸರ ಚಿತ್ರಣ ಕೊಡುವ ಪದ್ಧತಿ ಬಳಕೆಗೆ ಬಂತು. ಡೆನ್ಮಾರ್ಕಿನ ನೈಸರ್ಗಿಕ ದೃಶ್ಯಗಳನ್ನೂ ವಿದ್ಯಾರ್ಥಿಗಳನ್ನೂ ಚಿತ್ರಿಸುವುದರಲ್ಲಿ ಸಿದ್ಧಹಸ್ತನಾದ ಪಾಲ್ ಮೋಲರ್ (೧೭೯೪–೧೮೩೮) ಎಂಬುವನಿಗೆ ಪರಿಸರ ಚಿತ್ರಣ

ಲೀಲಾಜಾಲವಾಗಿತ್ತು. ತನ್ನ ವಾದ್‌ವಿಲ್‌ಗಳಲ್ಲಿ ಈತ ವಿದ್ಯಾರ್ಥಿಗಳನ್ನು ಹಾಸ್ಯಮಯವಾಗಿ ಚಿತ್ರಿಸಿದ್ದಾನೆ. ಸ್ಟೀನ್ ಸ್ಟೀನ್‌ಸನ್ ಬ್ಲಿಕರ್ (೧೭೮೨-೧೮೪೮) ಎಂಬ ಪಾದ್ರಿ ಬರೆದ, ಹೃದಯವನ್ನು ಕಲಕುವ ಪದ್ಯಗಳಲ್ಲೂ ಸಣ್ಣ ಕಥೆಗಳಲ್ಲೂ ವಾಸ್ತವಿಕತೆ ಇನ್ನೂ ಚೆನ್ನಾಗಿ ಕಂಡುಬರುತ್ತದೆ. ಜಟ್‌ಲಂಡಿನ ಬರಡುನಾಡಿನ ರೈತರ ಕ್ಲೇಶಕರವಾದ ಜೀವನವನ್ನು ಈತ ಹೃದಯಂಗಮವಾಗಿ ವರ್ಣಿಸಿದ್ದಾನೆ. ಕ್ರಿಶ್ಚನ್ ವಿನ್ತರ್ (೧೭೯೬-೧೮೭೬) ಎಂಬಾತ ಜೀಲಂಡಿನ ಗ್ರಾಮಾಂತರ ಪ್ರದೇಶದ ಸೌಂದರ್ಯವನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿದ್ದಾನೆ. ಲುಡ್‌ವಿಗ್ ಬೋಚರ್ (೧೭೯೩-೧೮೭೪) ಮತ್ತು ಎಮೀಲ್ ಆರ್‌ಸ್ಟ್ರುಪ್ (೧೮೦೦-೧೮೫೬) ಎಂಬುವರೂ ನಿಸರ್ಗಸೌಂದರ್ಯಪ್ರೇಮಿಗಳು. ಆದರೆ ಫ್ರೆಡರಿಕ್ ಪಾಲುಡನ್ ಮ್ಯೂಲರ್ (೧೮೦೯-೧೮೭೬) ಉಪದೇಶಪ್ರಿಯ. ಭಾವಗೀತೆಗಳನ್ನು ಬರೆದ ಕವಿಗಳಲ್ಲಿ ಅಗ್ರಗಣ್ಯನಾದ ಈತ ಆ್ಯಡಮ್ ಹೋಮೋ ಎಂಬ ಪದ್ಯರೂಪದ ಕಾದಂಬರಿಯಲ್ಲಿ ಸಮಾಜದ ಅಂತಸ್ತು, ಗೌರವಗಳಿಗಾಗಿ ಜನ ನಡೆಸುವ ಕ್ಷುಲ್ಲಕವಾದ ಹೋರಾಟವನ್ನು ತೀವ್ರವಾಗಿ ಖಂಡಿಸಿದ. ಬೈರನ್ ಕವಿ ಬಳಸಿದ ಅಟಾವಾ ರೈಮ ಎಂಬ ಛಂದಸ್ಸಿನಲ್ಲಿ ಬರೆದಿರುವ ಈ ಕೃತಿ ಆ ಕಾಲದ ಉಜ್ಜ್ವಲ ಚಿತ್ರವನ್ನು ಕೊಡುತ್ತದೆ.

ಡೆನ್‌ಮಾರ್ಕಿನ ಸುವರ್ಣಯುಗಕ್ಕೆ ಸೇರಿದ ಇಬ್ಬರು ಲೇಖಕರಿಗೆ ಮಾತ್ರವೇ ಅಂತರಾಷ್ಟ್ರೀಯ ಖ್ಯಾತಿ ದೊರೆಯಿತು. ತುಂಬ ಪ್ರತಿಭಾನ್ವಿತನಾದ ಹಾನ್ಸ್ ಕ್ರಿಶ್ಚನ್ ಅಂಡರ್ಸನ್ (೧೮೦೫-೧೮೭೫) ಇವರಲ್ಲೊಬ್ಬ. ಈತನ ಕಿನ್ನರ ಕಥೆಗಳ ಮೊದಲ ಸಂಗ್ರಹ ಪ್ರಕಟವಾದದ್ದು ೧೮೩೫ರಲ್ಲಿ. ಈ ಕಥೆಗಳಲ್ಲಿ ಅಡಗಿರುವ ವ್ಯಂಗ್ಯ ವಿಡಂಬನಗಳು ವಿದೇಶೀಯರಿಗೆ ಇನ್ನೂ ಚೆನ್ನಾಗಿ ಅರ್ಥವಾಗಿಲ್ಲ. ಅತ್ಯುತ್ತಮ ಭಾಷಾಂತರದಲ್ಲೂ ಮೂಲಕೃತಿಗೆ ಆಗುವ ನಷ್ಟ ಅಷ್ಟು ದೊಡ್ಡದು. ಸೋರೆನ್ ಕರ್ಕ್‌ಗಾರ್ಡ್ (೧೮೧೩-೧೮೫೫) ಎಂಬ ತತ್ತ್ವಜ್ಞಾನಿ ಇನ್ನೊಬ್ಬ ಅಂತರರಾಷ್ಟ್ರೀಯ ಖ್ಯಾತಿ ಪಡೆದವ. ಈತ ಅಸ್ತಿತ್ವವಾದಿ. ಪಾಪ ಭೀತಿ ಮತ್ತು ಆತ್ಮಶೋಧನೆಗಳ ಮೂಲಕ ಸೌಂದರ್ಯೋಪಾಸಕ ಹಂತದಿಂದ ನೈತಿಕ ಮತ್ತು ಧಾರ್ಮಿಕ ಉನ್ನತಿಯನ್ನು ಸಾಧಿಸುವುದು ವ್ಯಕ್ತಿಯ ಕೈಯಲ್ಲೇ ಇದೆ ಎಂಬುದು ಈತನ ಸಿದ್ಧಾಂತ. ೧೯೩೦-೪೦ರ ದಶಕದ ವರೆಗೂ ಇತನ ಹೆಸರು ವಿದೇಶೀಯರಿಗೆ ತಿಳಿದೇ ಇರಲಿಲ್ಲ. ಆದರೆ ಆ ದಶಕದಲ್ಲಿ ಇದ್ದಕ್ಕಿದ್ದಂತೆ ಈತನ ಸಿದ್ಧಾಂತ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಹಲವೆಡೆಗಳಲ್ಲಿ ಚರ್ಚೆ ಹಾಗೂ ವ್ಯಾಖ್ಯಾನಗಳ ವಿಷಯವಾಯಿತು.

ಯುದ್ಧದಲ್ಲಿ ಸೋತು ಅವನತಿಯ ದಾರಿಯನ್ನು ಹಿಡಿದಿದ್ದ ಕಾಲದಲ್ಲಿ ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ಆಸಕ್ತಿ ಕುಂಠಿತವಾಗಿತ್ತು. ರೊಮ್ಯಾಂಟಿಕ್ ಯುಗದ ಕೊನೆಯಲ್ಲಿ ಅದು ಪುನಃ ಜಾಗ್ರತವಾಯಿತು. ೧೮೪೦ ರಿಂದಾಚೆಗೆ ಪ್ರಜಾಸತ್ತೆಯಲ್ಲಿ ನಂಬಿಕೆಯುಳ್ಳ ಕೆಲವು ಉದಾರವಾದಿಗಳು ಪ್ರಾಮುಖ್ಯಕ್ಕೆ ಬಂದರು. ಇವರೆಲ್ಲ ವಿಶ್ವವಿದ್ಯಾಲಯಗಳಿಗೆ ಸೇರಿದವರು. ಮೈಯರ್ ಗೋಲ್ಡ್‌ಶ್ಮಿಟ್

(೧೮೯೯-೧೮೮೭) ತನ್ನ ಕಾರ್ಸೇರನ್ (ನೀರ್ಗಳ್ಳ) ಎಂಬ ಹಾಸ್ಯಪತ್ರಿಕೆಯಲ್ಲಿ ನಿರಂಕುಶ ಪ್ರಭುತ್ವಕ್ಕೆ ಕೊಡಲಿಪೆಟ್ಟು ಹಾಕಿದ. ಕಾರ್ಲ್ ಪ್ಲೌಗ್ (೧೮೧೩-೧೮೯೪) ಜರ್ಮನರು ಡೆನ್‌ಮಾರ್ಕಿನ ಮೇಲೆ ಹೇರುತ್ತಿರುವ ಒತ್ತಡಕ್ಕೆ ಅಂತರ-ಸ್ಕ್ಯಾಂಡಿನೇವಿಯನ್ ವಿದ್ಯಾರ್ಥಿಚಳವಳಿಯೇ ಸೂಕ್ತಪರಿಹಾರವೆಂದು ತನ್ನ ಕವಿತೆಗಳಲ್ಲಿ ಉಪದೇಶಿಸಿದ. ಅಲ್ಲದೆ, ನಿರಂಕುಶ ಪ್ರಭುತ್ವವನ್ನು ಕೊನೆಗಾಣಿಸಿದ ೧೮೪೯ರ ಸಂವಿಧಾನವನ್ನು ಮುಕ್ತಕಂಠದಿಂದ ಪ್ರಶಂಸಿಸಿದ. ಯೆನ್ ಕ್ರಿಶ್ಚನ್ ಹೊಸ್ಟ್ರಪ್ (೧೮೧೮-೧೮೯೨) ರಂಗಭೂಮಿಯಲ್ಲಿ ಹೈಬರ್ಗನ ಸಂಪ್ರದಾಯವನ್ನು ಅವನ ನಾಟಕಗಳನ್ನೂ ಮೀರಿಸಿದ ಹಾಸ್ಯನಾಟಕಗಳಿಂದ ಬೆಳಗಿಸಿದ. ಗೋಲ್ಡ್‌ಶ್ಮಿಟ್ ತನ್ನ ಕಾದಂಬರಿಗಳಲ್ಲಿ ಯೆಹೂದ್ಯರ ಪರಿಸರವನ್ನು ಚಿತ್ರಿಸಿ ಅನೇಕ ಯೆಹೂದ್ಯ ಪಾತ್ರಗಳನ್ನು ಸೃಷ್ಟಿಸಿದ. ಹಾನ್ಸ್ ವಿಲ್‌ಹೆಲ್ಮ್ ಕಾಲುಂಡ್ (೧೮೧೮-೧೮೮೫) ಮತ್ತು ಅರ್ನ್ಸ್ಟ್ ಕ್ರಿಶ್ಚನ್ ರಿಕಾರ್ಟ್ (೧೮೩೧-೧೮೯೨) ಎಂಬುವರು ಈ ಕಾಲದ ಸಾಮಾನ್ಯ ಕವಿಗಳು. ಪಾಂಟಾಸ್ಪನ್ (ಭ್ರಾಂತಿ ವಿಕ್ಕೆಗಳು, ೧೮೫೭) ಎಂಬ ಕಾದಂಬರಿಯಲ್ಲಿ ಹಾನ್ಸ್ ಎಗೆಡ್ ಷಾಕ್ (೧೮೨೦-೧೮೫೯) ರೊಮ್ಯಾಂಟಿಕರ ಕಾಲ್ಪನಿಕ ಪ್ರಪಂಚವನ್ನೂ ಅವರ ಹಗಲುಗನಸುಗಳನ್ನೂ ಹೀಗಳೆದಾಗ ಹೊಸ ಯುಗವೊಂದೂ ಉದಯವಾಯಿತು.

ಯಥಾರ್ಥತಾವಾದದ ಯುಗ: ೧೮೭೦-೧೯೦೦. ಜಾರ್ಜ್ ಬ್ರಾಂಡಿಸ್ (೧೮೪೨-೧೯೨೭) ಎಂಬಾತ ಈ ಹೊಸ ಯುಗದ ಪ್ರವರ್ತಕ. ಈತ ಅಂತರರಾಷ್ಟ್ರೀಯ ಖ್ಯಾತಿಪಡೆದ ವಿಮರ್ಶಕ. ೧೮೭೧ರಲ್ಲಿ ಕೋಪೆನ್‌ಹೇಗೆನ್ನಿನಲ್ಲಿ ಈತ ಮಾಡಿದ ಉಪನ್ಯಾಸಗಳಿಂದ ಕೋಲಾಹಲಕರ ಪರಿಣಾಮ ಉಂಟಾಯಿತು. ೧೮೬೪ರಲ್ಲಿ ಪ್ರಷ್ಯ ಮತ್ತು ಆಸ್ಟ್ರಿಯಗಳಿಂದ ಪರಾಭವಗೊಂಡ ಮೇಲೆ ಇಳಿಮುಖವಾಗಿದ್ದ ಡೇನಿಷ್ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲು ಆಧುನಿಕ ಯೂರೋಪಿನಿಂದ ಸರ್ವತೋಮುಖವಾಗಿ ಸ್ಫೂರ್ತಿಯನ್ನು ಪಡೆಯಬೇಕೆಂದು ತನ್ನನ ದೇಶಬಾಂಧವರಿಗೆ ಬ್ರಾಂಡಿಸ್ ಕರೆಯಿತ್ತ. ಸಾಹಿತ್ಯಕ್ಷೇತ್ರದಲ್ಲಿ ವಿಖ್ಯಾತ ಫ್ರೆಂಚ್ ವಿಮರ್ಶಕರಾದ ಹಿಪ್ಪೊಲೈಟ್ ಟೇನ್ ಹಾಗೂ ಸಿ.ಎ. ಸೇಂಟ್ ಬವ್ ಅವರಿಂದಲೂ ಸಾಮಾಜಿಕ ಸಿದ್ಧಾಂತಗಳ ವಿಷಯದಲ್ಲಿ ಇಂಗ್ಲೆಂಡಿನ ವಿಖ್ಯಾತ ಚಿಂತಕನಾದ ಜಾನ್ ಸ್ಟೂಯರ್ಟ್ ಮಿಲ್‌ನ ಲೇಖನಗಳು ಹಾಗೂ ೧೮೭೧ರ ಪ್ಯಾರಿಸ್ ಕಾಮ್ಯೂನ್ ಗಳಿಂದಲೂ ತಾತ್ತ್ವಿಕ ಚಿಂತನದಲ್ಲಿ ಆಗಸ್ಟ ಕಾಂಟ್ ಹಾಗೂ ಎಲ್. ಎ. ಫೈಯರ್‌ಬಾಕ್ ಅವರಿಂದಲೂ ಪ್ರಭಾವಿತನಾದ ಬ್ರಾಂಡಿಸ್ ಡೇನಿಷ್ ಸಾಹಿತ್ಯ ವಾಸ್ತವತೆಗಳನ್ನು ಕುರಿತು ಬರೆಯಬೇಕೆಂದು ಒತ್ತಾಯಪಡಿಸಿದ. ಹೋಲ್ಗರ್ ಡ್ರಾಕ್‌ಮನ್ (೧೮೪೬-೧೯೦೮), ಯೆನ್ಸ್ ಪೀಟರ್ ಯಾಕಬ್‌ಸನ್ (೧೮೪೭-೧೮೮೫), ನಾರ್ವೆಯ ಹೆನ್ರಿಕ್ ಇಬ್ಸೆನ್, ಬ್ಯೋರ್ನ್‌ಸ್ಟಿಯರ್ನ್ ಬ್ಯೋರ್ನ್‌ಸನ್ ಮತ್ತು ಸ್ವೀಡನ್ನಿನ ಅಗಸ್ಟ ಸ್ಟ್ರಿಂಡ್‌ಬರ್ಗ್ ಇವರೆಲ್ಲ ಬ್ರಾಂಡಿಸ್ಸನ ಕರೆಯನ್ನು ಸಮರ್ಥಿಸಿದರು. ಈತನ ತಮ್ಮ

ಎಡ್ವರ್ಡ್ ಬ್ರಾಂಡಿಸ್ ತನ್ನ ಡೆಟ್ ಮಾಡರ್ನ್ ಗೆನ್ನೆಮ್‌ಬ್ರಂಡ್ಸ್ ಮೀಂಡ್ ಎಂಬ ಗ್ರಂಥದಲ್ಲಿ ಯಥಾರ್ಥತಾವಾದಿಗಳನ್ನು ಹೆಸರಿಸಿದ. ಕಟ್ಟಕಡೆಗೆ ಯಥಾರ್ಥತಾವಾದ ವಿಜಯ ಸಾಧಿಸಿತು. ಜಾರ್ಜ್ ಬ್ರಾಂಡಿಸನ ಪ್ರಸಿದ್ಧ ಕೃತಿಯಾದ ಮೇನ್ ಕರೆಂಟ್ಸ್ ಇನ್ ನೈಂಟೀಂತ್ ಸೆಂಚುರಿ ಲಿಟರೇಚರ್ ಮತ್ತು ಅವನ ಅಪಾರವಾದ ವಿಮರ್ಶನ ಕೃತಿಗಳು ಡೆನ್‌ಮಾರ್ಕಿನ ಚಿಂತನಶೀಲರಿಗೆಲ್ಲ ದಿಗ್‌ದರ್ಶಕಗಳಾದವು.

ಯಥಾರ್ಥತಾ ವಾದದ ಪ್ರಭಾವ ೧೮೮೦ರಿಂದಾಚೆಗೆ ಇನ್ನೂ ಹೆಚ್ಚಿತು. ಹೆನ್ರೀಕ್ ಪಾಂಟಾಪಿಡಾನ್ (೧೮೫೭–೧೯೪೩) ತನ್ನ ಕಾದಂಬರಿಗಳಲ್ಲಿ ಮಾನವ ಸಮಾಜದ ಕಠೋರ ಪರಿಸ್ಥಿತಿಗಳನ್ನೂ ಕ್ರೂರ ವಿಷಮತೆಗಳನ್ನೂ ನಿಷ್ಠುರವಾದ ರೀತಿಯಲ್ಲಿ ಚಿತ್ರಿಸಿದ್ದಾನೆ. ಡೆಟ್ ಫರ್‌ಯೀಟೀಡ್-ಲ್ಯಾಂಡ್ (ಮೋಹಿತ ಲೋಕ), ಲೈಕ್–ಪರ್ (ಭಾಗ್ಯಶಾಲಿಯಾದ ಪರ್) ಮತ್ತು ಡಿಡೋಡೆಸ್‌ರೈಗೆ (ಮೃತರ ರಾಜ್ಯ) ಎಂಬುವು ಈತನ ಪ್ರಸಿದ್ಧ ಕಾದಂಬರಿಗಳು. ಇವುಗಳಿಗಾಗಿ ಪಾಂಟಾಪಿಡಾನನಿಗೆ ೧೯೧೭ರಲ್ಲಿ ನೊಬೆಲ್ ಪಾರಿತೋಷಿಕ ದೊರೆಯಿತು.

ಹರ್ಮಾಂಕ್ ಬಾಂಗ್ (೧೮೫೭–೧೯೧೨) ಎಂಬಾತನ ಕಾದಂಬರಿಗಳಲ್ಲೂ ಸಣ್ಣ ಕಥೆಗಳಲ್ಲೂ ಯಥಾರ್ಥವಾದದ ಅಂತಿಮ ವಿಜಯವನ್ನು ಕಾಣಬಹುದು. ಗಸ್ಟಾಫ್ ವೀಡ್ (೧೮೫೮–೧೯೧೪) ಎಂಬ ವಿಡಂಬನಕಾರ ತನ್ನ ಕಾದಂಬರಿಗಳು. ಕಥೆಗಳು ಮತ್ತು ವ್ಯಂಗ್ಯ ನಾಟಕಗಳಲ್ಲಿ ಯಥಾರ್ಥತಾವಾದವನ್ನು ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕಕ್ಕೂ ಮುಂದುವರಿಸಿದ. ಹೋಲ್‌ಬರ್ಗನ ತರುವಾಯ ಹಾಸ್ಯದ ಹೊನಲು ಮಹಾಪೂರದಂತೆ ಹರಿಯುವುದು ವೀಡನ ಕೃತಿಗಳಲ್ಲೇ. ಯಥಾರ್ಥತಾವಾದ ವೀಡನಲ್ಲೇ ಅವಸಾನಗೊಂಡಿತೆನ್ನಬೇಕು. ಯೋಹಾನ್ಸ್ ಯೋರ್ಗೆನ್ಸನ್ (೧೮೬೬–೧೯೫೬), ಸೋಫಸ್ ಕ್ಲೌಸರ್ (೧೮೬೫–೧೯೩೧), ವಿಗ್ ಸ್ಟಾಕೆನ್‌ಬರ್ಗ್ (೧೮೬೩–೧೯೦೫) ಮತ್ತು ಹೆಲ್ಗೆ ರೋಡ್ (೧೮೭೦–೧೯೩೭) ಎಂಬವರು ಭಾವಗೀತೆಗಳನ್ನು ಬರೆದರು. ಆದರೆ ಇದರಲ್ಲಿ ಸ್ವಂತಿಕೆಗಿಂತ ಫ್ರೆಂಚ್ ಕವಿಗಳಾದ ವೆರ್‌ಲೆನ್, ಬೋದಲೇರ್ ಮುಂತಾದವರ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ.

ನೂತನ ಯಥಾರ್ಥತಾವಾದ ಮತ್ತು ನೂತನ ರೊಮ್ಯಾಂಟಿಕ್ ವಾದಗಳ ಯುಗ: ೨೦ನೆಯ ಶತಮಾನ ಹೊಸ ಶತಮಾನದ ಉದಯದೊಡನೆ ಹೊಸ ಶಕ್ತಿಗಳ ಉದಯವೂ ಆಯಿತು. ಮಧ್ಯಮ ವರ್ಗದವರಿಗೆ ಸರಿಸಮನಾಗಿ ರೈತರೂ ಕಾರ್ಮಿಕರೂ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಿದರು. ಯಥಾರ್ಥತಾವಾದ ನೂತನ ರೂಪ ತಾಳಿತು. ಸಾಮಾಜಿಕ ಸಮಸ್ಯೆಗಳನ್ನೊಳಗೊಂಡ ಪ್ರಾಂತೀಯ ಸಾಹಿತ್ಯ ಸೃಷ್ಟಿಯಾಯಿತು. ಯಾಕಬ್ ನೂಡ್‌ಸನ್ (೧೮೫೮–೧೯೧೭) ಎಂಬಾತ ರೈತವರ್ಗದ ಪ್ರತಿನಿಧಿಯಾದರೆ, ಯೋಹಾನ್ ಸ್ಕ್ಯೊಲ್ಡ್‌ಬಾರ್ಗ್ (೧೮೬೧–೧೯೩೬) ಮತ್ತು ಯೆಪ್ ಅಕ್‌ಯೇರ್ (೧೮೬೬–೧೯೩೦) ಇವರಿಬ್ಬರೂ ಕೃಷಿಕ

ಕಾರ್ಮಿಕರ ಪ್ರತಿನಿಧಿಗಳೆನ್ನಬಹುದು. ಆಕ್‌ಯೇರನ ವಿಪ್ಲವಕಾರಿಯಾದ ಗದ್ಯಕೃತಿಗಳಿಗಿಂತ ಆತನ ಸುಶ್ರಾವ್ಯವಾದ ಕವನಗಳು ಅದ್ಭುತವಾಗಿವೆ. ಇವುಗಳಲ್ಲಿ ಭವ್ಯವಾದ ಪ್ರಕೃತಿ ವರ್ಣನೆಯಿದೆ. ಸ್ತುತಿಗೀತೆಗಳನ್ನೂ ಇತರ ಗೀತೆಗಳನ್ನೂ ಬರೆದ ಗ್ರುಂಟ್‌ವಿಗ್ ಮತ್ತು ಆಕ್‌ಯೇರರನ್ನು ಡೆನ್‌ಮಾರ್ಕಿನ ಕಾವ್ಯ ವಾಣಿಯೆಂದೇ ಕರೆಯಬಹುದು. ಆಕ್‌ಯೇರನಂತೆಯೇ ಜಟ್‌ಲಂಡ್ ಪ್ರಾಂತದವನಾದ ತೋಗರ್ ಲಾರ್ಸನ್ (೧೮೭೫–೧೯೨೮) ಅವನಷ್ಟೇ ಪ್ರತಿಭಾವಂತ ಕವಿ. ಈತನ ಕಾವ್ಯದಲ್ಲಿ ಒಂದು ವಿಶ್ವವಿಶಾಲವಾದ ಉದಾರದರ್ಶನ ಕಂಡುಬರುತ್ತದೆ. ಪ್ರತ್ಯೇಕ ವೈಶಿಷ್ಟ್ಯವುಳ್ಳ ಇತರ ಪ್ರಾಂತೀಯ ಕವಿಗಳೆಂದರೆ, ಜಟ್‌ಲಂಡಿನ ಮೇರಿ ಬ್ರೇಗೆಂಡಾಲ್ (೧೮೬೭–೧೯೪೦), ತಾಮಸ್ ಓಲ್ಸನ್ ಲೋಕನ್ (೧೮೭೭–) ಹಾಗೂ ಯೋರ್ಗನ್ ನೀಲ್ಸನ್ (೧೯೦೨–೧೯೪೫) ಮತ್ತು ಜೀಲಂಡಿನ ನುಡ್ ಯೋರ್ಟೋರ್ (೧೮೬೮–೧೯೩೧) ಹಾಗೂ ತೋರ್‌ಕಿಲ್ಡ್ ಗ್ರೇಫ್ ಲುಂಡ್ (೧೮೭೯–೧೯೩೯) ಎಂಬವರು.

ಮಾರ್ಟಿನ್ ಅಂಡರ್ಸನ್ ನೆಕ್ಸೋ (೧೮೬೯–೧೯೫೪) ಎಂಬಾತ ಪೆಲ್ ಈರೋ ಬ್ರೆರೆನ್ (ವಿಜಯಿಯಾದ ಪೆಲ್) ಮತ್ತು ಡಿಟ್ ಮೆನೆಸ್ಕ್‌ಬಾರನ್ (ಮಾನವನ ಶಿಶು ಡಿಟ್) ಮುಂತಾದ ಮಹಾ ಕಾದಂಬರೀ ಚಕ್ರಗಳನ್ನೂ ಅವನ್ನೂ ಮೀರಿಸುವ ನೆನಹುಗಳನ್ನೂ ಬರೆದ. ಈತನಿಂದಾಗಿ ಕಾರ್ಮಿಕ ವರ್ಗಕ್ಕೆ ಸಮಾಜದಲ್ಲಿ ಹೇಗೋ ಹಾಗೆ ಸಾಹಿತ್ಯ ಕ್ಷೇತ್ರದಲ್ಲೂ ಸಲ್ಲಬೇಕಾದ ಸ್ಥಾನಮಾನ ದೊರಕಿತು. ನೆಕ್ಸೋವಿನ ಬಳಿಕ ೧೯೨೦ರ ದಶಕದಲ್ಲೂ ೧೯೩೦ರ ದಶಕದಲ್ಲೂ ಉದಾರಮನಸ್ಕರೂ ಸಮಾಜಾಸಕ್ತರೂ ಆದ ಲೇಖಕರು ಸಾಲುಸಾಲಾಗಿ ಬಂದರು. ಇವರಲ್ಲಿ ಮಂದಗಾಮಿಗಳೆಂದರೆ ಲೆಕ್ ಫಿಷರ್ (೧೯೦೪–) ಮತ್ತು ನುತ್ ಬೆಕರ್ (೧೮೯೩–) ಎಂಬುವರು. ತೀವ್ರ ಸಮಾಜವಾದಿಗಳೆಂದರೆ ಹೆರಾಲ್ಡ್ ಹರ್ಡಲ್ (೧೯೦೦–) ಮತ್ತು ಅವನ ಅನುಯಾಯಿಗಳಾದ ಹಾನ್ಸ್ ಕರ್ಕ್ (೧೮೯೮–) ಮತ್ತು ಹಾನ್ಸ್ ಷೆರ್‌ಫಿಗ್ (೧೯೦೫–) ಎಂಬುವರು. ಕರ್ಕ್ ಮತ್ತು ಷೆರ್‌ಫಿಗ್ ತೀಕ್ಷ್ಣ ವಿಡಂಬನಕಾರರು, ಏರುಪೇರುಗಳಿಂದ ಸಮಾಜದ ಉಗ್ರಖಂಡನಕಾರರು.

ಯೋಹಾನ್ಸ್ ವಿಲೆಲ್ಮ್ ಯೆನ್ಸನ್ (೧೮೭೩–೧೯೫೦) ಎಂಬಾತ ಹಿಂದೆ ಹೇಳಿದ ಪ್ರಾಂತೀಯ ಲೇಖಕರನ್ನೆಲ್ಲ ಮೀರಿಸಿದ ಪ್ರತಿಭಾವಂತ. ಈತನೇ ಈ ಶತಮಾನದ ಶ್ರೇಷ್ಠತಮ ಸಾಹಿತಿಯೆನ್ನಬಹುದು. ತನ್ನ ಅಮೆರಿಕದ ಪ್ರವಾಸದ ಪ್ರಭಾವದಿಂದ ಸ್ಫೂರ್ತಿಗೊಂಡು ಈತ ಬರೆದ ಡೆನ್ ಗೋತಿಸ್ಕ್ ರೆನೆಸಾನ್ಸ್ (ಗಾತಿಕ್ ನವೋದಯ) ಎಂಬ ಪ್ರಣಾಳಿಕೆಯಲ್ಲಿ ಈತ ಆಧುನಿಕ ತಾಂತ್ರಿಕ ವಿಜ್ಞಾನದ ಪ್ರಗತಿಯನ್ನು ಅಪಾರ ಉತ್ಸಾಹದಿಂದ ಶ್ಲಾಘಿಸಿದ. ಮ್ಯಾದಮ್ ದೋರ ಮತ್ತು ಹ್ಯೂಲೆಟ್ (ಚಕ್ರ) ಎಂಬ ಕಾದಂಬರಿಗಳಲ್ಲಿ ಯೆನ್ಸನ್ ತಾಂತ್ರಿಕ ಪ್ರಗತಿ ಸಾಧಿಸಿರುವ ಅಮೆರಿಕವನ್ನು ವರ್ಣಿಸಿದ್ದಾನೆ. ಡೆನ್‌ಲಾಂಗ್ ರೇಸ್ (ದೀರ್ಘ ಸಂಚಾರ) ಎಂಬುದು

ಈತನ ಕಾಲ್ಪನಿಕ ಕಾದಂಬರೀ ಚಕ್ರ. ಶ್ರೇತವರ್ಣೀಯ ಅತ್ಯಂತ ಆದಿಕಾಲದಿಂದ ಕ್ರಿಸ್ಟೊಫರ್ ಕೊಲಂಬಸನವರೆಗೂ ನಿಸರ್ಗದೊಡನೆ ಹೋರಾಡಿ ಗಳಿಸಿದ ಪ್ರಚಂಡ ವಿಜಯ, ಬಳಿಕ ಜಟ್‌ಲಂಡಿನಿಂದ ದೂರಪ್ರಾಚ್ಯಕ್ಕೆ ಮಾಡಿದ ವಿಜಯಯಾತ್ರೆ. ಕಡೆಗೆ ಪ್ರಾಚೀನ ವೈಕಿಂಗ್ ವೀರರಂತೆ ಅವಸಾನ ಕಾಲಕ್ಕೆ ಸ್ವಭೂಮಿಗೇ ಹಿಂದಿರುಗಿದ್ದು–ಇವನ್ನೆಲ್ಲ ಯೆನ್ಸನ್ ತನ್ನ ಭಾವನಾಮಯವಾದ ಕಾದಂಬರೀ ಚಕ್ರದಲ್ಲಿ ವರ್ಣಿಸಿದ್ದಾನೆ. ಕ್ರಿಶ್ಚನ್ ಅಂಡರ್ಸನ್ನನಂತೆ ಈತನೂ ತನ್ನ ವಸ್ತುವಿಗೆ ತಕ್ಕ ಮಾಧ್ಯಮವಾದ ಕಾವ್ಯಪ್ರಕಾರವನ್ನು ನೂತನವಾಗಿ ಸೃಷ್ಟಿಸಿಕೊಂಡಿದ್ದಾನೆ. ಇದೊಂದು ಬಗೆಯ ಪುರಾಣಕಥಾನಕ. ಇದರಲ್ಲಿ ರೂಪಕತೆಯ ಭಾವನಾವೇಶ, ಪತ್ರಿಕೋದ್ಯಮದ ವೃತ್ತಾಂತಕಥನ, ವಿಜ್ಞಾನದ ನಿಷ್ಕೃಷ್ಟ ಜ್ಞಾನ ಮತ್ತು ಭಾವಗೀತೆಯ ಸೌಂದರ್ಯ ಮಾಧುರ್ಯ–ಇವೆಲ್ಲದರ ಮಧುರ ಮಿಶ್ರಣವಿದೆ. ೧೯೪೪ರ ನೊಬೆಲ್ ಪಾರಿತೋಷಿಕವನ್ನು ಈತನಿಗೆ ಕೊಡಲಾಯಿತು. ಆದರೂ ಇಂಗ್ಲೆಂಡ್, ಅಮೆರಿಕ ಮುಂತಾದ ಹೊರದೇಶಗಳಲ್ಲಿ ಈತನ ಪರಿಚಯವೇ ಅಷ್ಟಾಗಿ ಇಲ್ಲದಿರುವುದು ವಿಸ್ಮಯಕರವಾದ ವಿಷಯ.

ಹೆರಾಲ್ಡ್ ಕಿಡ್ (೧೮೭೮–೧೯೧೮) ಮತ್ತು ಕಾರಿನ್ ಮೈಕಲಿಸ್ (೧೮೭೨–೧೯೫೦) ಎಂಬುವರು ಉತ್ತಮವಾದ ಗದ್ಯಲೇಖಕರು. ಮೈಕಲಿಸ್‌ನ ಕೃತಿಗಳು ವಿದೇಶಗಳಲ್ಲಿ ವಿಖ್ಯಾತವಾಗಿದೆ. ಈ ದಶಕದಲ್ಲಿ ವಿಡಂಬನೆಗಳನ್ನು ಬರೆದ ಹೆರಾಲ್ಡ್ ಬರ್ಗ್‌ಸ್ಟೆಟ್ (೧೮೭೭–) ಮತ್ತು ವಾಲ್ಡಿಮರ್ ರೋರ್‌ಡಮ್ (೧೮೭೨–೧೯೪೬) ಉತ್ತಮ ಕವಿಗಳು. ಆದರೆ ಯೆನ್ಸನ್ನನಂತೆ ಮುಂದಿನ ಪೀಳಿಗೆಯ ಮೇಲೆ ಪ್ರಭಾವ ಬೀರಿದವರು ಇನ್ನಾರೂ ಇಲ್ಲ. ೧೯೩೦ರ ದಶಕದ ಕವಿ ಹಾಗೂ ಕಾದಂಬರಿಕಾರನಾದ ಟಾಮ್ ಕ್ರಿಸ್ಟನ್‌ಸನ್ (೧೮೯೩–) ಎಂಬುವನು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದ ಶ್ರೇಷ್ಠತಮ ಭಾವಗೀತಕಾರ. ಆದರೆ ಈತನ ಕವಿತೆಗಳಲ್ಲೆಲ್ಲ ಮೊದಲನೆಯ ಮಹಾಯುದ್ಧದಿಂದ ಹುಟ್ಟಿದ ನಿರುತ್ಸಾಹ ನೈರಾಶ್ಯಗಳು ತುಂಬಿವೆ. ಯಾಕಬ್ ಪಾಲುಡನ್ (೧೮೯೬–) ಎಂಬಾತನೂ ತನ್ನ ಕಾದಂಬರಿಗಳಲ್ಲಿ ಯುದ್ಧಕಾಲದ ಆತ್ಮಶೂನ್ಯತೆಯನ್ನು ಹೊರಗೆಡಹಿದ್ದಾನೆ.

೧೯೩೦ರ ದಶಕದಲ್ಲಿ ಯಥಾರ್ಥತಾವಾದದ ಪ್ರಭಾವ ಕುಗ್ಗುತ್ತ ಬಂದು ಒಂದು ನೂತನ ರೊಮ್ಯಾಂಟಿಕ್ ಮನೋವೃತ್ತಿ ಹುಟ್ಟಿತು. ನಿಸ್ ಪೇಟರ್ಸನ್ (೧೮೯೭–೧೯೪೩) ಎಂಬ ಅಲೆಮಾರಿ ಕವಿ ಉತ್ತಮ ಕಥಾಕಾರ ಹಾಗೂ ಅದ್ಭುತ ಭಾವಗೀತಕಾರ. ಸ್ಯಾಂಡಲ್ ಮೇಗರ್ನ್ಸ್‌ಗೇಡ್ (ಮೆಟ್ಟುಗಾರರ ಬೀದಿ) ಮತ್ತು ಸ್ಪಿಲ್ಟ್ ಮಿಲ್ಕ್ (ಚೆಲ್ಲಿಹೋದ ಹಾಲು) ಎಂಬ ಕಾದಂಬರಿಗಳಿಂದ ಈತ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ. ಬ್ಯಾರೊನೆಸ್ ಕಾರೆನ್ ಬ್ಲಿಕ್ಸನ್ ಫಿನೆಕೆ ಎಂಬಾಕೆ ಐಸ್ಯಾಕ್ ಡೈನ್‌ಸನ್ ಎಂಬ ಕಾವ್ಯನಾಮವನ್ನಿಟ್ಟುಕೊಂಡು ಸೆವೆನ್ ಗಾತಿಕ್ ಟೇಲ್ಸ್ ಎಂಬ ಕಥಾಸಂಕಲವನ್ನು ಮೊದಲಿಗೆ ಇಂಗ್ಲೆಂಡಿನಲ್ಲಿ ಪ್ರಕಟಿಸಿದಳು. ಈಕೆಯ ಔಟ್ ಆಫ್ ಆಫ್ರಿಕ ಮತ್ತು ವಿಂಟರ್ಸ್ ಟೇಲ್ಸ್ ಎಂಬುವು ಇತರ ಕೃತಿಗಳ ಭಾಷಾಂತರಗಳು.

ಒಂದು ಶತಮಾನ ಪರ್ಯಂತ ಶೂನ್ಯಸ್ಥಿತಿಯಲ್ಲಿದ್ದ ಡೇನಿಷ್ ರಂಗಭೂಮಿ ಕಾಜ್ ಮಂಕ್ (೧೮೯೮–೧೯೪೪) ಎಂಬ ಪ್ರತಿಭಾಶಾಲಿ ಪಾದ್ರಿಯ ನಾಟಕಗಳಿಂದ ಪುನಶ್ಚೇತನಗೊಂಡಿತು. ಎನ್ ಐಡಿಯಲಿಸ್ಟ್ (ಆದರ್ಶವಾದಿ) ಮತ್ತು ಆರ್ಡೆಟ್ (ಪ್ರಪಂಚ) ಎಂಬುವು ಈತನ ಉತ್ತಮ ನಾಟಕಗಳು. ೧೯೪೦ರಲ್ಲಿ ಈತ ಜರ್ಮನಿಯ ಸರ್ವಾಧಿಕಾರದ ವಿರುದ್ಧ ನಡೆದ ಹೋರಾಟದಲ್ಲಿ ರಾಷ್ಟ್ರೀಯ ಪಕ್ಷ ಹಿಡಿದು ನೀಲ್ಸ್ ಎಬ್‌ಸನ್ ಮತ್ತು ಫೋರ್ ಕ್ಯಾನೀ (ಕ್ಯಾನೀಗೆ ಮುನ್ನ) ಎಂಬ ನಾಟಕಗಳನ್ನು ಬರೆದು ಹಿಟ್ಲರನ ದೌರ್ಜನ್ಯವನ್ನು ಖಂಡಿಸಿದ ಜರ್ಮನರು ಡೆನ್ಮಾರ್ಕನ್ನು ಆಕ್ರಮಿಸಿದ್ದಾಗ ಅವರ ಕೈಯಿಂದ ಹತನಾಗಿ ಈತ ರಾಷ್ಟ್ರೀಯ ಸಂಕೇತವಾದ. ಕೀಲ್ಡ್ ಅಬೆಲ್ (೧೯೦೧–) ಸೃಷ್ಟಿಶೀಲ ನಾಟಕಕಾರ. ಕಾರ್ಲ್ ಎರಿಕ್ ಸೊಯಾನ (೧೮೯೬–) ನಾಟಕಗಳು ಗಮನ ಸೆಳೆಯುವಂತೆ ಇದ್ದರೂ ಸಮಸ್ಯೆಗಳಾಗಿಯೇ ಉಳಿದಿವೆ.

೧೯೪೦ರ ದಶಕದಲ್ಲೂ ಯಥಾರ್ಥವಾದದ ವಿರುದ್ಧ ನಡೆಯುತ್ತಿದ್ದ ರೊಮ್ಯಾಂಟಿಕ್ ಪ್ರತಿಭಟನೆ ಮುಂದುವರಿಯಿತು. ಇದರಿಂದಾಗಿ ಪ್ರತಿಮಾತ್ಮಕ ಕಾವ್ಯದ ಉದಯವಾಯಿತು. ಈ ಬಗೆಯ ಸಾಹಿತಿಗಳಲ್ಲಿ ಮಾರ್ಟಿನ್ ಆಲ್‌ಫ್ರೆಡ್ ಹಾನ್ಸನ್ (೧೯೦೦ –) ಗಮನ ಸೆಳೆಯುವ ವ್ಯಕ್ತಿ. ಲೈಕ್‌ಲೀ ಕ್ರಿಸ್ಟೋಫರ್ (ಭಾಗ್ಯಶಾಲಿ ಕ್ರಿಸ್ಟೋಫರ್) ಮುಂತಾದ ಕಾದಂಬರಿಗಳಿಂದಲೂ ಟಾರನ್ ಬುಸ್ಕನ್ (ಮುಳ್ಳಿನ ಪೊದೆ) ಮೊದಲಾದ ಕಥಾಸಂಕಲನಗಳಿಂದಲೂ ಈತ ಹೆಸರು ಗಳಿಸಿದ್ದಾನೆ. ಟು ಮಿನುಟರ್ಸ್ ಸ್ಟಿಲ್‌ಹಡ್ (ಎರಡು ಕ್ಷಣಕಾಲ ಮೌನ) ಎಂಬ ಕಥಾಸಂಕಲನ ಮತತು ರೈಟರನ್ (ರಾವುತ) ಮುಂತಾದ ನಾಟಕಗಳನ್ನು ಬರೆದ ಹಾನ್ಸ್ ಕ್ರಿಶ್ಚನ್ ಬ್ರಾನರ್ (೧೯೦೩–), ಆಗೆ ಡಾನ್ಸ್ (೧೯೦೩–) ಎಂಬ ಕಾದಂಬರಿಕಾರ, ನುಡ್ ಸೋಂಡರ್‌ಬಿ (೧೯೦೯–) ಎಂಬ ಕಾದಂಬರಿಕಾರ ಹಾಗೂ ನಾಟಕಕಾರ, ಇವರೆಲ್ಲ ಈ ನಡುಗಾಲದ ಉತ್ತಮ ಲೇಖಕರು. ಪಾಲ್ ಲೌಕೂರ್ (೧೯೦೨) ಎಂಬಾತ ಸೊಗಸಾದ ಕಲಾವಂತಿಕೆಯುಳ್ಳ ಭಾವಗೀತಕಾರ.

ಜರ್ಮನರು ಡೆನ್‌ಮಾರ್ಕನ್ನು ಆಕ್ರಮಿಸಿದ್ದ ಅವಧಿಯಲ್ಲೂ ಕಾಲೋಚಿತವಾದ ಸಾಹಿತ್ಯದ ಸೃಷ್ಟಿ ಆಯಿತು. ಜರ್ಮನರ ದುರಾಕ್ರಮಣವನ್ನೂ ದುರಾಡಳಿತ ದೌರ್ಜನ್ಯಗಳನ್ನೂ ಪ್ರತಿಭಟಿಸಿದ ತರುಣರು ಬರೆದ ದಿನಚರಿಗಳು ಹಾಗೂ ಪತ್ರಗಳು ಸ್ಥಿರವಾದಿ ಉಳಿಯುವಂಥವು : ಅವುಗಳಲ್ಲಿ ಅಂಥ ಕರುಣಾಜನಕವಾದ ಭಾವುಕತೆ ಇದೆ. ೧೯೪೦ರ ದಶಕದಲ್ಲೂ ಒಳ್ಳೆಯ ಪದ್ಯಕಾವ್ಯ ಹುಟ್ಟಿತು. ಹಾಸಡನ್ ರಾಸ್‌ಮಸನ್ (೧೯೧೫–)ಮತ್ತು ಎರಿಕ್ ನುಡ್‌ಸನ್ (೧೯೨೨–)ಎವರ ಕಾವ್ಯದಲ್ಲಿ ಪರಮಾಣು ಯುಗದ ಕಳವಳ ಒಡಮೂಡಿದೆ. ಈ ಅವಧಿಯಲ್ಲಿ ವರಕವಿಯಾದ ತರುಣ ಫ್ರಾಂಕ್ ಯೇಗರ್ (೧೯೨೬–) ಮತ್ತು ಉಜ್ವಲ ಭವಿಷ್ಯವುಳ್ಳ ಇತರ ತರುಣ ಕವಿಗಳೂ ವೀರ್ಯವಂತವಾದ ಸಾಹಿತ್ಯವನ್ನು ಸೃಷ್ಟಿಸುತ್ತಿದ್ದಾರೆ. (ಕೆ.ವಿ.ಎಸ್.ಟಿ.)

ಬಿಷಪ್ ಪೀಡರ್ ಪೆಲೇಡಿಅಸ್ ಬರೆದ ವಿಸಿಟೇಷನ್ ಬುಕ್‌ನಲ್ಲಿ ೧೬ನೆಯ ಶತಮಾನದ ಡೇನಿಷ್ ಬದುಕನ್ನು ಚಿತ್ರಿಸಿದ. ಓಲೆನ್‌ಷ್ಲಾಜರನ ಭಾವಗೀತೆಗಳು, ನಾಟಕಗಳು, ಡೇನಿಷ್ ರೋಮ್ಯಾಂಟಿಕ್ ಸಾಹಿತ್ಯಕ್ಕೆ ತನ್ನತನವನ್ನು ತಂದುಕೊಟ್ಟವು.

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ವಾಸ್ತವತಾವಾದ ಮತ್ತು ನ್ಯಾಚುರಲಿಸಂ ಕಾಣಿಸಿಕೊಂಡವು. ಆದರೆ ಫ್ರೆಂಚ್ ಪ್ರತೀಕವಾದದ ಕವಿಗಳ ಪ್ರಭಾವದಿಂದ ನ್ಯಾಚುರಲಿಸಂನ ವಿರುದ್ಧ ಪ್ರತಿಕ್ರಿಯೆಯು ಪ್ರಾರಂಭವಾಯಿತು. ಭಾವಗೀತೆಗಳು ಮತ್ತೆ ಕಾಣಿಸಿಕೊಂಡವು. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ದೇಶಾಭಿಮಾನ, ಸಾಮಾಜಿಕ ವಾಸ್ತವತೆಗಳು ಸ್ವಭಾವಯುತ ಶಕ್ತಿಗಳಾದವು. ಕೂಲಿಕಾರ ರೈತರ ಜೀವನದ ಕಷ್ಟಕಾರ್ಪಣ್ಯಗಳನ್ನು ಮಾರ್ಟಿನ್ ನೆಕ್ಸೋ ತನ್ನ ಕಾದಂಬರಿಗಳಲ್ಲಿ ಚಿತ್ರಿಸಿದ.

‘ಡಿಟೆ ಡಾಟರ್ ಆಫ್ ಮ್ಯಾನ್’ ಕಾದಂಬರಿಯಲ್ಲಿ ಹಣ್ಣಾದ ತರುಣಿಯ ಬದುಕನ್ನು ಚಿತ್ರಿಸಿದ.

ಐಸಕ್ ಡಿನೆಸನ್ ಎಂಬಾಕೆ ‘ಸೆವೆನ್ ಗಾಥಿಕ್ ಟೇಲ್ಸ್’ (೧೯೩೪) ಮತ್ತು ಆತ್ಮವೃತ್ತ ‘ಔಟ್ ಆಫ್ ಆಫ್ರಿಕ’ (೧೯೩೭) ಕೃತಿಗಳಿಂದ ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದಳು. ಈಕೆ ಪ್ರತೀಕಗಳನ್ನೂ ‘ಮಿಥ್’ಗಳನ್ನೂ ಬಳಸಿಕೊಂಡಳು. ಎರಡನೆಯ ಮಹಾಯುದ್ಧ ಮುಗಿದನಂತರ ಇನ್ನೂ ಭಯಂಕರ ಅಸ್ತ್ರಗಳನ್ನು ಉತ್ಪಾದಿಸುವ ಸಾಧ್ಯತೆಯು ಮಾನವನಾಗರಿಕತೆಗೇ ಆತಂಕವನ್ನು ತಂದಿತು. ಈ ಕಾಲದ ಬರೆಹಗಾರರಲ್ಲಿ ಹಲವರು ಅಸ್ತಿತ್ವವಾದದ ಮನೋಧರ್ಮದವರು. ೧೯೪೮–೫೩ರ ಅವಧಿಯ ಸಾಹಿತ್ಯಕ ಪತ್ರಿಕೆ ಹೆರೆಟಿಕ್ ಈ ಆತ್ಮಕಥೆ ಕನ್ನಡಿಯಾಯಿತು. ತಾರ್ಕಿಲ್ಡ್ ಬೋರ್ನ್‌ವಿಗ್, ಓಲ್ ಸರ್‌ವಿಗ್ ಮತ್ತು ಓಲ್‌ವಿನೆಲ್–ಈ ಎಲ್ಲ ಕವಿಗಳ ವಸ್ತು, ಆಧುನಿಕ ಜಗತ್ತಿನಲ್ಲಿ ಮನುಷ್ಯನ ಸ್ಥಾನ ಕಾದಂಬರಿಕಾರರಾದ ಎಲಿ ಸೂರೆನ್‌ಸನ್ ಮತ್ತು ಕ್ಲಾಸ್ ರಿಫ್‌ಬ್ಯರ್ಗ್‌ರ ವಸ್ತುವೂ ಇದೇ. ಕಾಯ್ ಮಂಕ್‌ನ ನಾಟಕಗಳಲ್ಲಿ ಧಾರ್ಮಿಕ ಮನೋಧರ್ಮ ಧ್ವನಿತವಾಗಿದೆ. (ಎಲ್.ಎಸ್.ಎಸ್.)

ನಿಕೋಲೈ ಫ್ರೆಡರಿಕ್ ಸೆವರೀನ್ ಗ್ರುಂಟ್‌ವಿಗ್ (೧೭೮೩–೧೮೭೨)

ಡೇನಿಷ್ ಕವಿ, ತತ್ತ್ವಜ್ಞಾನಿ, ರಾಜನೀತಿಜ್ಞ, ಸಂಶೋಧಕ, ಸಮಾಜ ಸುಧಾರಕ ಮತ್ತು ಜನತಾ ಶಾಲೆಗಳ ಜನಕ. ಹುಟ್ಟಿದ್ದು ಜಿಲೆಂಡ್ ದ್ವೀಪದ ಉಡ್ಬಿಯಲ್ಲಿ. ಬಡಕುಟುಂಬದಲ್ಲಿ ಪಾದ್ರಿಯೊಬ್ಬನ ಮಗನಾಗಿ ಹುಟ್ಟಿದ ಈತನ ಪ್ರಾರಂಭದ ವಿದ್ಯಾಬ್ಯಾಸ ಹಳ್ಳಿಯಲ್ಲಿಯೇ ನಡೆಯಿತು. ಅನಂತರದ ವಿದ್ಯಾಭ್ಯಾಸ ಕೋಪೆನ್‌ಹೇಗನ್ ವಿಶ್ವವಿದ್ಯಾಲಯದಲ್ಲಿ ಆಯಿತು. ಐಸ್ಲೆಂಡಿಕ್ ಭಾಷೆಯನ್ನು ವಿಶೇಷವಾಗಿ ಅಭ್ಯಸಿಸಿದ್ದ ಈತ ಶಿಕ್ಷಕನಾಗಿ ನಿಂತ. ಅನಂತರ ಪಾದ್ರಿಯಾದ. ಈತನ ದೊಡ್ಡಪ್ಪನ ಮಗನಾದ ಹೆನ್ರಿಕ್ ಸ್ಟಾಫಿನ್ಸ್‌ನ ಪ್ರಭಾವಕ್ಕೊಳಗಾಗಿ ಷೇಕ್ಸ್‌ಪೀಯರ್, ಷಿಲರ್, ಫಿಶೆ, ಮುಂತಾದವರ ಕೃತಿಗಳನ್ನು ಆಳವಾಗಿ ಅಭ್ಯಾಸ ಮಾಡಿದ. ಜನಪದ ಸಾಹಿತ್ಯದ ಬಗ್ಗೆ ಚಿಕ್ಕಂದಿನಿಂದ

ಒಲವು ಇದ್ದುದರಿಂದ ರೈತರು ಹಾಡುತ್ತಿದ್ದ ಗೀತೆಗಳು ಇವನ ಮೇಲೆ ತುಂಬ ಪ್ರಭಾವ ಬೀರಿದವು. ಇದೇ ಸಮಯಕ್ಕೆ ಈತನ ಮೊದಲ ಕವನ ಸಂಕಲನ ಆನ್ ದಿ ಸಾಂಗ್ಸ್ ಇನ್ ದಿ ಎಡ ಪ್ರಕಟವಾಯಿತು. ಈ ಕೃತಿ ಅಷ್ಟಾಗಿ ಯಶಸ್ಸು ತರದೆ ಹೋದರೂ ಅನಂತರ ಪ್ರಕಟಿಸಿದ ನಾರ್ದರನ್ ಮೈಥಾಲಜಿ (೧೮೦೮) ಸಾಕಷ್ಟು ಯಶಸ್ಸು ತಂದಿತು. ಅನಂತರ ಬರೆದ ದಿ ಡಿಕ್ಲೈನ್ ಆಫ್ ದಿ ಹಿರೋಯಿಕ್ ಲೈಫ್ ಇನ್ ದಿ ನಾರ್ತ್ (೧೮೦೯–೧೮೧೧) ಎಂಬ ಎರಡು ಸಂಪುಟಗಳ ಸುದೀರ್ಘ ಮಹಾಕಾವ್ಯ ಈತನ ಪ್ರತಿಷ್ಠೆಯನ್ನು ಹೆಚ್ಚಿಸಿತು.

ಕ್ರೈಸ್ತ ಪಾದ್ರಿಯಾದ ಈತ ಮತಧರ್ಮದ ಬಗ್ಗೆ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದುದರಿಂದ ಕೆಲ ಕ್ರೈಸ್ತಮತೀಯರು ತಿರುಗಿ ಬಿದ್ದು ಏಳು ವರ್ಷಗಳ ಕಾಲ ಈತ ಮತೋಪದೇಶ ಮಾಡಬಾರದೆಂದು ಪ್ರತಿಬಂಧಕಾಜ್ಞೆಯನ್ನು ವಿಧಿಸಿದರು. ಇದೇ ಹೊತ್ತಿಗೆ ಇಂಗ್ಲೆಂಡಿಗೆ ಬಂದ ಈತ ಆಂಗ್ಲೋ – ಸ್ಯಾಕ್ಸನ್ ಅಭ್ಯಾಸ ಮಾಡಿ ತನ್ನ ಮತಧರ್ಮವನ್ನು ಕುರಿತ ಗ್ರಂಥಗಳನ್ನು ಸಂಗ್ರಹಿಸಿ ಪ್ರಕಟಿಸಿದ. ಅನಂತರ ೧೮೩೨ರಲ್ಲಿ ಮತ್ತೆ ಪಾದ್ರಿಯಾಗಿ ತನ್ನ ಜೀವಿತದ ಕೊನೆಯವರೆಗೂ ಅದೇ ಕಾಯಕದಲ್ಲಿ ಮುಂದುವರಿದ. ಈತ ೧೮೧೨–೧೭ರ ಅವಧಿಯಲ್ಲಿ ಪ್ರಕಟಿಸಿದ ಕೃತಿಗಳಲ್ಲಿ ಮುಖ್ಯ ಹಾಗೂ ವೈಶಿಷ್ಟ್ಯಪೂರ್ಣ ಕೃತಿ ಎಂದರೆ ರ್‍ಹೈಮ್ ಅಫ್ ರೋಸಲಿಂಡೆ. ೧೮೧೬–೧೮೧೯ರವರೆಗೆ ವಿವಾದಾತ್ಮಕ ಪತ್ರಿಕೆ ಎನಿಸಿದ್ದ ಡ್ಯಾನೆವಿರ್ಕೆ ಪತ್ರಿಕೆಯ ಸಂಪಾದಕನಾಗಿದ್ದ. ೧೮೩೭–೪೧ರ ಅವಧಿಯಲ್ಲಿ ಸಾಂಗ್ಸ್ ಫಾರ್ ದಿ ಡೇನಿಷ್ ಚರ್ಚ್ ಎಂಬ ಆಂಗ್ಲೋ–ಸ್ಯಾಕ್ಸನ್ ಪದ್ಯವನ್ನು ಸಂಗ್ರಹಿಸಿ ಡೇನಿಷ್ ಭಾಷಾಂತರದೊಡನೆ ಪ್ರಕಟಿಸಿದ.

ಡೇನಿಷ್ ಸಾಹಿತ್ಯದ ಗ್ರುಂಟ್‌ವಿಗ್‌ನ ಸ್ಥಾನ ಅಸಾಧಾರಣವಾದುದು. ಈತನ ಕಾವ್ಯಕೃತಿಗಳು ಏಳು ಸಂಪುಟಗಳಲ್ಲಿ ಈತನ ಮರಣಾನಂತರ ಪ್ರಕಟವಾಗಿದೆ.

ಗ್ರುಂಟ್‌ವಿಗ್ ಹೆಸರು ಉಳಿದಿರುವುದು ಆತನ ಶಿಕ್ಷಣತತ್ತ್ವ ಹಾಗೂ ಅದನ್ನು ಕಾರ್ಯಗತಗೊಳಿಸಲು ಆರಂಭಿಸಿದ ಜನತಾಶಾಲೆಗಳಿಂದ.

ಜನರೂ ಸಹ ಜಾಗೃತರಾಗಬೇಕೆಂದು ಈತನ ಆಕಾಂಕ್ಷೆಯಾಗಿತ್ತು. ಜನತೆ ಸರ್ಕಾರದ ಆಡಳಿತದಲ್ಲಿ ಪರಿಣಾಮಕಾರಿಯಾಗಿ ಪಾತ್ರವಹಿಸಬೇಕು. ಅದಕ್ಕೆ ವಿದ್ಯೆಬೇಕು. ಓದಿಗೂ ಮತ್ತು ಜೀವನಕ್ಕೂ ನಿಕಟ ಸಂಬಂಧವಿರಬೇಕು. ಜೀವನದ ಸಮಸ್ಯೆಗಳನ್ನು ನಿರ್ಭಯವಾಗಿ ಮತ್ತು ನಿಸ್ಸಂಕೋಚವಾಗಿ ಚರ್ಚಿಸಬೇಕು. ಉಪಾಧ್ಯಾಯರು ವಿದ್ಯಾರ್ಥಿಗಳೊಡನೆ ನಿಕಟ ಸಂಪರ್ಕ ಹೊಂದಿರಬೇಕು. ಶಾಲಾ ಕಾಲೇಜುಗಳಲ್ಲಿ ಈ ರೀತಿಯ ಶಿಕ್ಷಣ ದೊರೆಯದು. ನಿದ್ರಾವಸ್ಥೆಯಲ್ಲಿರುವವರನ್ನು ಕೇವಲ ಪುಸ್ತಕಗಳು ಎಚ್ಚರಿಸಲಾರವು. ಎಲ್ಲ ವರ್ಗದ ಜನರಿಗೂ ಶಿಕ್ಷಣವನ್ನು ತಾಯಿನುಡಿಯಲ್ಲೇ ನೀಡಬೇಕು. ಈ ತರಹ ಶಿಕ್ಷಣ ಜನತಾಶಾಲೆಗಳಲ್ಲಿ ಅನುಭವಿ ಉಪಾಧ್ಯಾಯರ ಮೂಲಕವೇ ನಡೆಯಬೇಕು. ಮಾನವನ ಜೀವಿತದಲ್ಲಿ ೧೮ರಿಂದ

೨೦ ವಯಸ್ಸಿನ ಅವಧಿ ಬಹಳ ಪ್ರಾಮುಖ್ಯವಾದುದು. ಅವನು ಆಗತಾನೆ ಜೀವನ ಸಂಗ್ರಾಮದಲ್ಲಿ ಕಾಲಿಟ್ಟಿರುತ್ತಾನೆ. ಅವನಲ್ಲಿ ವಿಚಾರಪ್ರವೃತ್ತಿ ಅಂಕುರಿಸಿರುತ್ತದೆ. ಬುದ್ಧಿ ಮತ್ತು ಮನಸ್ಸು ಕೂಡಿ ಕೆಲಸ ಮಾಡುವ ಕಾಲ ಅದು. ಆ ವಯಸ್ಸಿನ ಯುವಕರನ್ನು ಅಲ್ಪಸಂಖ್ಯೆಯಲ್ಲಿ ಒಂದು ಕಡೆ ಕಲೆ ಹಾಕಿ ಅವರಿಗೆ ನಿಜವಾದ ಜೀವನ ಶಿಕ್ಷಣ ನೀಡಬೇಕು. ಗ್ರುಂಟ್‌ವಿಗ್‌ನ ಶಿಕ್ಷಣ ತತ್ತ್ವಸಾರ. ಸಂಪ್ರದಾಯ ಶರಣರಿಗೆ ಈ ಮಾತು ಹಿಡಿಸಲಿಲ್ಲ. ಕೆಲವರು ಮಾತ್ರ ಇದನ್ನು ಒಪ್ಪಿದರು. ಒಟ್ಟಿನಲ್ಲಿ ಗ್ರುಂಟ್‌ವಿಗ್‌ನ ಕಲ್ಪನೆಗಳು ಜನತಾಶಾಲೆಗಳ ಮೂಲಕವೇ ರೂಪಗೊಂಡವು. ಇಂಥ ಶಾಲೆಗಳಿಗೆ ಬೆಂಬಲ ಕೊಟ್ಟವರಲ್ಲಿ ಕ್ರಿಶ್ಚನ್ ಕೋಲ್ಡ್‌ನೂ ಒಬ್ಬ. ಈತ ಡೆನ್ಮಾರ್ಕಿನ ಜೀವನವನ್ನು ಸುಧಾರಿಸಲು ಬಹುವಾಗಿ ಶ್ರಮಿಸಿದ. ಕೆಲಕಾಲ ಈತ ರಾಜ್ಯಾಂಗ ಸಮಿತಿ ಹಾಗೂ ಪಾರ್ಲಿಮೆಂಟುಗಳ ಸದಸ್ಯನಾಗಿದ್ದ. ರೈತರಿಗೆ ಭೂಮಿಯ ಒಡೆತನವನ್ನು ದೊರಕಿಸಿಕೊಟ್ಟ ಕೀರ್ತಿ ಈತನದು. (ಟಿ.ಆರ್.ಎನ್.; ಪಿ.ಎಂ.ಎಚ್.)

IX ಜಾರ್ಜಿಯನ್ ಸಾಹಿತ್ಯ

ಕ್ರೈಸ್ತಧರ್ಮದ ಪ್ರವೇಶದೊಂದಿಗೆ ಜಾರ್ಜಿಯನ್ ಸಾಹಿತ್ಯದ ಉಗಮವೂ ಆಗತೊಡಗಿತು. ಹೀಗಾಗಿ ಪ್ರಾಚೀನ ಜಾರ್ಜಿಯನ್ ಸಾಹಿತ್ಯ ಧಾರ್ಮಿಕ ಸಾಹಿತ್ಯವಾಗಿರುವುದು ಅನಿವಾರ್ಯವೇ ಆಯಿತು. ಆರ್ಮೇನಿಯನ್ ಆವೃತ್ತಿಯನ್ನು ಆಧಾರವಾಗಿಟ್ಟುಕೊಂಡು ಪ್ರ.ಶ.ಪೂ. ಐದನೆಯ ಶತಮಾನದಲ್ಲಿ ಸುವಾರ್ತೆಗಳನ್ನೂ ಇದಾದ ತರುಣದಲ್ಲಿಯೇ ಸ್ತೋತ್ರಗೀತೆಗಳನ್ನೂ ಭಾಷಾಂತರಿಸಲಾಯಿತು. ಅಂತೆಯೇ ನಯಸಾದ ಗ್ರೆಗೊರಿ, ನಜ಼ಯಾಂಜುಸ್‌ನ ಗ್ರೆಗೊರಿ, ಜಾನ್ ಕ್ರಿಸೋಸ್ಟೋಮ್ ಮೊದಲಾದ ಗ್ರೀಕ್ ಪಾದ್ರಿಗಳ ಕೃತಿಗಳನ್ನೂ ಭಾಷಾಂತರಿಸಲಾಯಿತು. ಮೌಲಿಕ ಕೃತಿಗಳ ದೃಷ್ಟಿಯಿಂದ ಜಾರ್ಜಿಯನ್ ಸಾಹಿತ್ಯವನ್ನು ಪರಿಶೀಲಿಸಿದರೆ ನಮಗೆ ಕಾಣದೊರೆಯುವುದು ಸಂತರ ಜೀವನಚರಿತ್ರೆಗಳು. ಇವುಗಳಲ್ಲಿ ಇಂದು ಉಪಲಬ್ಧವಾಗಿರುವ ಮೊಟ್ಟಮೊದಲ ಕೃತಿಯ ಕಾಲ ಪ್ರ.ಶ.ಪೂ.ಸು.೪೮೦ ಎಂದು ಹೇಳಲಾಗಿದೆ. ವಖ್ತಾಂಗ್ ಗೋರ್ಗಾಸ್ಲಾನಿ ಎಂಬ ದೊರೆಯ ಸಾಹಸ ಕಾರ್ಯಗಳ ವರ್ಣನೆಯನ್ನೊಳಗೊಂಡಿರುವ ಅರ್ಧ–ಐತಿಹ್ಯ ಸ್ವರೂಪದ ಕೃತಿಯೂ ಪ್ರಾಚೀನ ಕೃತಿಗಳಲ್ಲಿ ಒಂದು. ಮುಂದೆ ಇದು ಜಾರ್ಜಿಯನ್ ಇತಿಹಾಸದ ಅಂಗವೂ ಆಗಿ ಪ್ರವೇಶ ಪಡೆಯಿತು. ಪ್ರ.ಶ.ಪೂ. ೯ನೆಯ ಶತಮಾನದ ಹೊತ್ತಿಗೆ ಅರೇಬಿಯಾದ ಮುಖಾಂತರ ಇಲ್ಲಿಗೆ ತಲುಪಿದ ಬೌದ್ಧ ಐತಿಹ್ಯಗಳಿಗೆ ಕ್ರೈಸ್ತ ಧರ್ಮದ ಲೇಪನವನ್ನು ಕೊಟ್ಟು, ಅವನ್ನು ಆತ್ಮೀಕರಿಸಿಕೊಳ್ಳಲಾಯಿತು. ಇದಕ್ಕೆ ಉದಾಹರಣೆಯಾಗಿ, ಬಾರ್ಲಾಮ್ ಮತ್ತು ಜೋಸಫಾತ್ ಪ್ರಸಂಗಗಳನ್ನು ಉಲ್ಲೇಖಿಸಬಹುದು. ಜಾರ್ಜಿಯನ್ ಸಾಹಿತ್ಯದ ಸುವರ್ಣಯುಗ ಆರಂಭವಾದದ್ದು ೧೨ನೆಯ ಶತಮಾನದಲ್ಲಿ. ೧೩ನೆಯ ಶತಮಾನದ ಆದಿಭಾಗದವರೆಗೂ ಈ ಯುಗ ಮುಂದುವರಿಯಿತು. ಎರಡನೆಯ ಡೇವಿಡ್, ಮೂರನೆಯ ಜಾರ್ಜ್ ಹಾಗೂ

ರಾಣಿ ತಮಾರಾ ಅವರ ಆಳ್ವಿಕೆಯ ಅವಧಿಯಲ್ಲಿ ಪರಮೋತ್ಕರ್ಷವನ್ನು ಕಂಡ ಈ ಸಾಹಿತ್ಯಿಕ ಚಟುವಟಿಕೆಗಳು ಮಂಗೋಲರಿಂದ ನಾಲ್ಕನೆಯ ಜಾರ್ಜ್ ಪರಾಜಿತನಾಗುವವರೆಗೆ ಅನಿರ್ಬಾಧಿತವಾಗಿ ನಡೆದುವು. ಈ ಯುಗದ ಅತ್ಯುತ್ಕೃಷ್ಟ ಕೃತಿಯಾದ ಸೋತ್-ಅ-ರುಸ್ತವೆಲಿಯ ವೆಪ್-ಖಿಸ್-ತಾವೊಸಾನಿ ಎಂಬುದು ರಚಿತವಾದದ್ದು ರಾಣಿ ತಮಾರಾಳ ಆಳ್ವಿಕೆಯ ಅವಧಿಯಲ್ಲಿಯೇ. ದಿ ಮ್ಯಾನ್ ಇನ್ ದಿ ಪ್ಯಾಂತರ್ಸ್ ಸ್ಕಿನ್ ಎಂಬ ಹೆಸರಿನಲ್ಲಿ ಇದು ಇಂಗ್ಲಿಷ್‌ಗೂ ಭಾಷಾಂತರಗೊಂಡಿದೆ. ಈ ಯುಗದ ಇತರ ಗಮನಾರ್ಹ ಕೃತಿಗಳೆಂದರೆ ವಿಸ್ರಾಮಿಯಾನಿ (ವಿಸ್ ಮತ್ತು ರಾಮಿನ್ ಅವರ ಪ್ರೇಮಕಥೆಗಳು) ಮತ್ತು ಅಮೀರಾನ್-ದಾರೆಜನಿಯಾನಿ(ಮೋಸಸನ ಅದ್ಭುತ ಕಥೆಗಳು). ಈ ಕೃತಿಗಳೂ ಇಂಗ್ಲಿಷಿಗೆ ಭಾಷಾಂತರಗೊಂಡಿವೆ. ಇಷ್ಟಾಗಿಯೂ ಈ ರಚನೆಗಳು ಧಾರ್ಮಿಕ ಪರಿವೇಷದಿಂದ ಹೊರಬಂದಿಲ್ಲವೆಂದು ಹೇಳಲಾಗಿದೆ. ಎರಡನೆಯ ಡೇವಿಡ್ ಮತ್ತು ರಾಣಿ ತಮಾರಾಳನ್ನು ಕುರಿತ ಪ್ರಗಾಥಗಳೇ ಲೌಕಿಕ ರಚನೆಗಳೆಂದು ಹೇಳಬಹುದಾದಂಥವು. ಮಂಗೋಲರ ದಾಳಿಯಿಂದ ಅಸ್ತವ್ಯಸ್ತಗೊಂಡ ಈ ಚಟುವಟಿಕೆಗಳು ಪುನರುಜ್ಜೀವನಗೊಂಡದ್ದು ಮೂರು ಶತಮಾನಗಳ ಅನಂತರದಲ್ಲಿ- ಅಂದರೆ ೧೭ನೆಯ ಶತಮಾನದಲ್ಲಿ, ಈ ಶ್ರೇಯಸ್ಸನ್ನು ಗಳಿಸಿದ ರಾಜಕವಿಗಳೆಂದರೆ ಮೊದಲನೆಯ ತೈಮೂರಾಜ್ (ಪ್ರ.ಶ.ಪೂ. ೧೫೮೯-೧೬೬೩) ಮತ್ತು ಆರ್ಚಿಲ್ (ಪ್ರ.ಶ.ಪೂ. ೧೬೪೩ರಿಂದ ೧೭೧೩). ಹದಿನೆಂಟನೆಯ ಶತಮಾನದಲ್ಲಿ ತಮ್ಮ ಗಮನಾರ್ಹ ಸಾಹಿತ್ಯಿಕ ಚಟುವಟಿಕೆಗಳಿಂದ ಖ್ಯಾತಿಗಳಿಸಿದ ಕವಿಗಳೆಂದರೆ ಡೇವಿಡ್ ಗುರಾಮಿಶ್ ವಿಲಿ (ಪ್ರ.ಶ.ಪೂ.೧೭೦೫ರಿಂದ ೧೭೯೨) ಮತ್ತು ಬೆಸಾರಿಯೋ ಗಬಾಸ್‌ವಿಲಿ (ಪ್ರ.ಶ.ಪೂ. ೧೭೫೦ರಿಂದ ೧೭೯೧) ಈ ಎಲ್ಲ ರಚನೆಗಳಲ್ಲಿ ಪರ್ಷಿಯನ್ ಸಂಸ್ಕೃತಿಯ ಪ್ರಭಾವ ಕಾಣದೊರೆಯುತ್ತದೆ.

ಪ್ರ.ಶ.ಪೂ.೧೮೦೧ರಲ್ಲಿ ರಷ್ಯನ್ನರು ಜಾರ್ಜಿಯವರನ್ನು ಆಕ್ರಮಿಸಿಕೊಂಡುದರ ಫಲವಾಗಿ ಹೊಸಗಾಳಿ ಬೀಸತೊಡಗಿತು. ಐರೋಪ್ಯ ಸಂಸ್ಕೃತಿ ಹಾಗೂ ಬೌದ್ಧಿಕ ಜೀವನದ ಪ್ರಭಾವಕ್ಕೆ ಸಾಹಿತ್ಯಿಕ ರಂಗ ಅನುವಾಯಿತು. ಇದರ ಫಲವಾಗಿ ರೊಮ್ಯಾಂಟಿಕ್ ಕಾವ್ಯ ಉತ್ಕರ್ಷವನ್ನು ಪಡೆಯಿತು. ಅಲೆಕ್ಸಾಂಡರ್ ಶವ್‌ಚವದ್ಜೆ (ಪ್ರ.ಶ.ಪೂ. ೧೭೮೬-೧೮೪೬) ಈ ದೃಷ್ಟಿಯಿಂದ ಗಮನಾರ್ಹನಾಗಿರುವ ಕವಿ. ಬೈರನ್ ಮಾದರಿಯ ಭಾವಗೀತೆಗಳ ರಚನೆಯಲ್ಲಿ ನಿಕೊಲಾಸ್‌ಬರಾತ್-ಆಶ್‌ವಿಲಿ (ಪ್ರ.ಶ.ಪೂ.೧೮೧೭ ರಿಂದ ೧೮೪೫) ಹಾಗೂ ವಿಡಂಬನಾತ್ಮಕ ಕಾಮಿಡಿಗಳ ರಚನೆಯಲ್ಲಿ ಜಿಯಾರ್ಜಿ ಎರಸ್ತಾವಿಯೂ ಹೆಸರು ಗಳಿಸಿದರು. ವಾಸ್ತವವಾದಿ ಕಾದಂಬರಿಗಳ ರಚನೆಯಲ್ಲಿ ಖ್ಯಾತನಾಮರಾದ ಸಾಹಿತಿಗಳೆಂದರೆ ಲವರೆಂತಿ ಅರ್ದಾಝಿಯಾನಿ (ಪ್ರ.ಶ.ಪೂ. ೧೮೧೫-೧೮೭೦) ಮತ್ತು ಇಲಿಯಾ ಶವ್‌ಚವದ್ಜೆ (ಪ್ರ.ಶ.ಪೂ. ೧೮೩೭-೧೯೦೭); ಜಾರ್ಜಿಯಾದ ಗುಡ್ಡಗಾಡಿನ ಜನರ ಪರ್ವತಾರೋಹಿಗಳ ಜೀವನದ ರೋಮಾಂಚಕ ಚಿತ್ರಗಳು ಅಲೆಕ್ಸಾಂಡರ್ ಕಝ್‌ಬೇಗಿ

(ಪ್ರ.ಶ.ಪೂ. ೧೮೪೮–೯೩) ಹಾಗೂ ವಝಾಪಶ್ ವೇಲಾರ (ಪ್ರ.ಶ.ಪೂ. ೧೮೬೧–೧೯೧೫) ರಚನೆಗಳಲ್ಲಿ ಕಾಣದೊರೆಯುತ್ತವೆ. ಈ ಯುಗದ ಅತ್ಯಂತ ಜನಪ್ರಿಯ ಕವಿಯೆಂದರೆ ಅಕಾಕ್‌ಡ್ಸೆರೆತ್ ಎಲಿ (ಪ್ರ.ಶ.ಪೂ. ೧೮೪೦–೧೯೧೫). ಷೇಕ್ಸ್‌ಪಿಯರನ ನಾಟಕಗಳ ಭಾಷಾಂತರಕಾರನಾಗಿ ಪ್ರಖ್ಯಾತಿಗಳಿಸಿದ ಇವಾನೆ ಮೆಕಾಬೆಲಿಯ (ಪ್ರ.ಶ.ಪೂ. ೧೮೫೪–೧೯೪೮) ಹೆಸರನ್ನೂ ಇಲ್ಲಿ ಉಲ್ಲೇಖಿಸಬಹುದಾಗಿದೆ.

ರಾಜಕೀಯ ವ್ಯವಸ್ಥೆಯ ಬಗೆಗಿನ ಪ್ರತಿಕ್ರಿಯೆಗಳೂ ಕೆಲವೊಂದು ಸಾಹಿತ್ಯಿಕ ಕೃತಿಗಳಲ್ಲಿ ಕಾಣದೊರೆಯುತ್ತವೆ. ಡೇನಿಯಲ್ ಶೋನ್ ಕದ್ಜೆಯ (ಪ್ರ.ಶ.ಪೂ.೧೮೩೦–೬೦) ಕೆಲವೊಂದು ರಚನೆಗಳು ಈ ದೃಷ್ಟಿಯಿಂದ ಗಮನ ಸೆಳೆದಿವೆ. ಸಾಮ್ಯವಾದಿ ವ್ಯವಸ್ಥೆಯಲ್ಲಿ ನಲುಗಿದ ಸಾಹಿತಿಗಳೆಂದು ಹೆಸರಿಸಲಾಗಿರುವ ವ್ಯಕ್ತಿಗಳಲ್ಲಿ ಮಿಖೇಯಿಲ್ ಜವಾಖಿಶ್‌ವಿಲಿ, ಪವೊಲೋ ಅಯಾಶ್‌ವಿಲಿ ಮತ್ತು ತಿತ್ಸಿಯನ್ ತಬಿದ್ಜೆ ಮೊದಲಾದವರ ಹೆಸರುಗಳು ಕಾಣದೊರೆಯುತ್ತವೆ. ಇಷ್ಟಾಗಿಯೂ ಮೌಲಿಕ ಸರ್ಜನಾತ್ಮಕ ಸಾಹಿತಿಗಳನ್ನು ಕಾಣಿಕೆಯಾಗಿತ್ತಿರುವ ಶ್ರೇಯಸ್ಸಿನಿಂದ ಜಾರ್ಜಿಯನ್ ಸಾಹಿತ್ಯ ಹೊರತಾಗಿಲ್ಲ. ಅಯೋಸೆಬ್ ಗ್ರಿಶಾವಿಲಿಯಂಥ ಕವಿಗಳೂ ಶಲ್ವಾ ದಾದಿಯಾನಿಯಂಥ ನಾಟಕಕಾರರೂ ಗಮ್ಸಾಖುರ್ದಿಯಾನಂಥ ಕಾದಂಬರಿಕಾರರೂ ಜಾರ್ಜಿಯನ್ ಸಾಹಿತ್ಯದ ಆಶಾ ದೀಪವಾಗಿದ್ದಾರೆಂದು ಹೇಳಲಾಗಿದೆ. (ಪಿ.ಜ.ಡಿ.)

ಈವೊ ಆಂದ್ರಿಚ್

೧೮೯೨ರಲ್ಲಿ ಬೋಸ್ನಿಯಾದ ಟ್ರಾವನಿಕ್ ಹಳ್ಳಿಯ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ. ಯುಗೋಸ್ಲಾವಿಯದ ಕಾದಂಬರಿಕಾರ, ಕವಿ, ಕಥೆಗಾರ. ಮೊದಲ ಮಹಾಯುದ್ಧಕ್ಕೆ ಮೊದಲು ಯುಗೊಸ್ಲಾವಿಯದ ಐಕ್ಯಕ್ಕಾಗಿ ಹೋರಾಡಿದುದರಿಂದ ಆಸ್ಟ್ರಿಯದ ಆಡಳಿತಗಾರರು ಬಂಧನದಲ್ಲಿಟ್ಟರು. ಸ್ವತಂತ್ರ ಯುಗೊಸ್ಲಾವಿಯದಲ್ಲಿ ರಾಯಭಾರಿ ಶಾಖೆಯಲ್ಲಿ ಕೆಲಸ ಮಾಡಿದ. ಎರಡನೆಯ ಮಹಾಯುದ್ಧ, ಯುಗೊಸ್ಲಾವಿಯದಲ್ಲಿ ಹೊಸ ರಾಜಕೀಯ ಪಂಥದ ಆಡಳಿತದ ಪ್ರತಿಷ್ಠಾಪನೆ ಇವು ಹಲವು ಸಾಹಿತಿಗಳ ಅಸ್ತಮಯವನ್ನು ತಂದರೂ ಈತ ನಾಡಿನ ಅತ್ಯಂತ ಪ್ರಭಾವಯುತ, ಸನ್ಮಾನಿತ ಸಾಹಿತಿಗಳಲ್ಲಿ ಒಬ್ಬನಾಗಿ ಉಳಿದ. ಮನುಷ್ಯರ ನೋವಿನಲ್ಲಿ ಗಾಢವಾದ ಅನುಕಂಪ, ನಿಸರ್ಗದ ನಿಗೂಢತೆಯ ಎದುರಿನಲ್ಲಿ ಮನುಷ್ಯನ ಅಲ್ಪತ್ವಗಳು ಇವನ ಕೃತಿಗಳಲ್ಲಿ ಅಭಿವ್ಯಕ್ತಿ ಪಡೆದಿವೆ. ಇವನ ಶೈಲಿ ನಿಷ್ಕೃಷ್ಟವೂ ಅಡಕವೂ ಆಗಿದೆ. ಬೊಸ್ನಿಯ ರೈತವರ್ಗವನ್ನು ಅಸಾಧಾರಣ ಯಶಸ್ಸಿನಿಂದ, ಕಣ್ಣಿಗೆ ಕಟ್ಟುವ ಹಾಗೆ, ಆತ್ಮೀಯವಾಗಿ ಈತ ಚಿತ್ರಿಸಿದ್ದಾನೆ. ಬೊಸ್ನಿಯವನ್ನು ಕುರಿತು ಈತ ಬರೆದಿರುವ ಮೂರು ಭಾಗದ ಕೃತಿಗೆ ೧೯೬೧ರಲ್ಲಿ ನೊಬೆಲ್ ಬಹುಮಾನ ದೊರೆಯಿತು. (ಎಲ್.ಎಸ್.ಎಸ್.)

ಸೀಗ್‌ಫ್ರೀಡ್ ಉನ್ಸೆಟ್ (೧೮೮೭–೧೯೪೯)

ನಾರ್ವೆಯ ಕಾದಂಬರಿಕಾರ್ತಿ. ಹೊರಗಿನ ಜಗತ್ತಿನ ಗಮನವನ್ನು ಸೆಳೆದಿರುವ ಇಪ್ಪತ್ತನೆಯ ಶತಮಾನದ ಇಬ್ಬರು ಮೂವರು ನಾರ್ವೆ ಜಿಯನ್ ಸಾಹಿತಿಗಳಲ್ಲಿ ಒಬ್ಬಳು. ೧೯೨೮ರಲ್ಲಿ ನೋಬೆಲ್ ಪಾರಿತೋಷಕ ಪಡೆದಳು. ಮೊದಲ ಕೃತಿಗಳು

ಆಸ್ಲೋ ನಗರದ ಮಧ್ಯಮ ವರ್ಗದ ಹೆಂಗಸರ ಬಾಳಿನ ನೈಜ ಚಿತ್ರಗಳು. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದುದು-ಜೆನ್ನಿ (೧೯೧೧). ೧೯೨೦-೨೨ರ ಅವಧಿಯಲ್ಲಿ ಈಕೆಯ ಪ್ರಖ್ಯಾತ ಚಾರಿತ್ರಿಕ ಕಾದಂಬರಿಗಳು ಬರತೊಡಗಿದುವು. ಮಧ್ಯಯುಗದ ಸ್ಕಾಂಡಿನೇವಿಯ ದೇಶಗಳ ಜನಜೀವನದ ಚಿತ್ರಗಳಿಗೆ ಅವು ಹೆಸರಾದಂತಿವೆ. ಪ್ರಾಧ್ಯಾಪಕನೊಬ್ಬನ ಮಗಳಾಗಿದ್ದ ಉನ್ಸೆಟ್ ತಂದೆಗೆ ಅವನ ಸಂಶೋಧನ ಕಾರ್ಯದಲ್ಲಿ ಸಹಾಯ ಮಾಡುವಾಗ ಅವನ ವ್ಯಾಸಂಗ ವಿಷಯವಾದ ಮಧ್ಯಯುಗದ ವಿವರಗಳಲ್ಲಿ ತಾನೂ ಆಸಕ್ತಳಾದಳು. ಈ ಕ್ಷೇತ್ರದಲ್ಲಿ ಇವಳ ಅತ್ಯಂತ ಪ್ರಸಿದ್ಧವಾದ ಕಾದಂಬರಿಗಳು ಕ್ರಿಸ್ಟಿನ್ ಲ್ಯಾವ್ರೆನ್ಸ್ ಡ್ಯಾಟರ್ (೧೯೨೩) ಒಲಾವ್ ಆಡೆನ್ಸನ್ ಇಹೆಸ್ಟಿವಿಕೆನ್ (ಹೆಸ್ಟಿವಿಕೆನ್ನನ ಒಡೆಯ. ೧೯೨೭). ಮತ್ತು ಒಲಾವ್ ಆಡೆನ್‌ಸನ್ ಓಗ್ ಹ್ಯಾನ್ಸ್ ಬಾರ್ನ್ (ಒಲಾವ್ ಆಡೆನ್‌ಸನ್ ಮತ್ತು ಅವನ ಮಕ್ಕಳು ೧೯೨೭). ಇವೆಲ್ಲ ಹದಿನಾಲ್ಕನೆಯ ಶತಮಾನದ ನಾರ್ವೆಗೆ ಸಂಬಂಧಪಟ್ಟವು. ಇವುಗಳಲ್ಲಿ ಕಂಡುಬರುವ ಚಾರಿತ್ರಿಕ ವಿವರಗಳು. ವಾತಾವರಣ ಕಲ್ಪನೆ. ಮೊದಲಾದುವು ಇವಳ ಪಾಂಡಿತ್ಯಕ್ಕೆ ಸಾಕ್ಷಿಗಳಾಗಿವೆ. ಪಾತ್ರಗಳ ಧಾರ್ಮಿಕ ಮತ್ತು ಲೈಂಗಿಕ ಸಮಸ್ಯೆಗಳನ್ನು ಈಕೆ ವಿಶ್ಲೇಷಣೆ ಮಾಡಿ ತೋರಿಸಿರುವ ರೀತಿಯೂ ಅದ್ಭುತವಾಗಿದೆ. ಇವುಗಳ ಅನಂತರ ಬರೆದ ಕೊಡಲಿ (೧೯೨೮). ಸೇಡುಗಾರ ಮಗ (೧೯೩೦), ಉರಿಯುವ ಪೊದೆ (೧೯೩೦), ಮೊದಲಾದ ಕಾದಂಬರಿಗಳಲ್ಲಿ ಉನ್ಸೆ ಮತ್ತೆ ಸಮಕಾಲೀನ ಸಮಾಜಕ್ಕೆ ಹಿಂದಿರುಗುತ್ತಾಳೆ. ಈ ಮಧ್ಯೆ ೧೯೩೪ರಲ್ಲಿ ಇವಳು ರೋಮನ್ ಕೆಥೊಲಿಕ್ ಪಂಥಕ್ಕೆ ಪರಿವರ್ತನೆ ಹೊಂದಿದ್ದಳು. ಇವಳ ಈ ಹೊಸಮತದ ಪ್ರಭಾವವನ್ನು ಈ ಕಾದಂಬರಿಗಳಲ್ಲೂ ನಾರ್ಸ್ಕೆ ಹೆಲ್ಗ್‌ನರ್ (೧೯೩೪) ಎಂಬ ಸಂತರ ಚರಿತ್ರೆಯಲ್ಲೂ ಕಾಣಬಹುದು. ಇಡೆ ಎಲಿಜ಼ಬೆತ್ (೧೯೩೨) ಮತ್ತೆ ಡಾನ್ ಟ್ರೊಫಾಸ್ಟೆಹುಸ್ತ್ರು (ಪತಿವ್ರತೆ. ೧೯೩೬) ಇವಳ ಇನ್ನೆರಡು ಕಾದಂಬರಿಗಳು. ಇಲ್ಲೆವ್ ಆರ್ (ಹನ್ನೊಂದು ವರ್ಷಗಳು. ೧೯೩೪) ಬಹುಮಟ್ಟಿಗೆ ಆತ್ಮ ಚರಿತ್ರಾತ್ಮಕವಾದ ಕೃತಿ. ಇದರಲ್ಲೂ ತಾನು ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಬರೆದ ಹ್ಯಾಪಿ ಟೈಮ್ಸ್ ಇನ್ ನಾರ್ವೆ (೧೯೪೨) ಎಂಬ ಗ್ರಂಥದಲ್ಲೂ ಉನ್ಸೆಟ್ ಮಕ್ಕಳ ಮನಸ್ಸನ್ನು ಅರಿತುಕೊಳ್ಳುವುದರಲ್ಲಿ ತನಗಿದ್ದ ಅಸಾಧಾರಣ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾಳೆ.

ಉನ್ಸೆಟ್ಟಳ ವೈಯಕ್ತಿಕ ಜೀವನವೂ ಮಧ್ಯಯುಗದ ವಿಷಯದಲ್ಲಿ ಅವಳಿಗಿದ್ದ ಆದರವನ್ನು ತೋರಿಸುತ್ತಿತ್ತು. ಕ್ರಿ. ಶ. ೧,೦೦೦ದಲ್ಲಿ ಕಟ್ಟಿದ್ದ ಹಳೆಯ ಮನೆಯೊಂದನ್ನು ಸರಿಪಡಿಸಿ ಅದರಲ್ಲೆ ವಾಸಿಸುತ್ತಿದ್ದುದಲ್ಲದೆ ಈಕೆ ಮಧ್ಯ ಯುಗದ ವಯಸ್ಕ ಹೆಂಗಸರ ಉಡುಗೆಯನ್ನು ಧರಿಸುತ್ತಿದ್ದಳು. (ಎಂ.ಆರ್.)

ಆಲ್ಬರ್ಟ್ ಎಂಗ್‌ಸ್ಟ್ರಮ್ (೧೮೬೯-೧೯೪೦)

ಸ್ವೀಡನ್ನಿನ ಅತ್ಯಂತ ಜನಪ್ರಿಯ ಕಥೆಗಾರ. ವ್ಯಂಗ್ಯಚಿತ್ರಕಾರ. ಹುಟ್ಟಿದುದು ಸ್ಮಾಲ್ಯಾಂಡಿನ ಸ್ಟೇಷನ್ ಮಾಸ್ತರರ ಮಗನಾಗಿ. ಸ್ಟಾಕ್‌ಹೋಮ್ ನಗರದಲ್ಲಿ ವ್ಯಂಗ್ಯ ಚಿತ್ರಕಾರನಾಗಿ ಉದ್ಯೋಗವನ್ನಾರಂಭಿಸಿದ. ತಾನು ಕಂಡ ತನ್ನೂರಿನ

ಕೃಷಿಕರ ಮತ್ತು ಅಪ್‌ಲ್ಯಾಂಡ್ ಕಡಲತೀರದ ಬೆಸ್ತರ ಬದುಕನ್ನು ಚಿತ್ರಿಸುವ ಕಥೆಗಳನ್ನೂ ವ್ಯಂಗ್ಯಚಿತ್ರಗಳನ್ನೂ ಬರೆದು ಅಪರಿಮಿತ ಜನಪ್ರಶಂಸೆಯನ್ನು ಗಳಿಸಿದ.

ಕಥೆ ಹೇಳುವಲ್ಲಿ ಈತ ತಾನು ಬೆಳೆದ ನೆಲದ ಅಚ್ಚ ದೇಶೀಯತೆಯನ್ನು ವಿಪುಲವಾಗಿ ತಂದಿದ್ದಾನೆ. ಈತ ಸ್ವೀಡಿಷ್ ಜನರಿಗೆ ಸ್ವೀಡಿಷ್‌ನಲ್ಲಿ ನಗುವುದನ್ನು ಹೇಳಿಕೊಟ್ಟನೆಂಬ ಮಾತು ಇವನ ಕಾಲದಲ್ಲೇ ಜನಜನಿತವಾಗಿತ್ತು. ಸ್ಟ್ರಿಕ್ಸ್ (ಸ್ವೀಡನ್ನಿನ ಖ್ಯಾತ ನಾಟಕಕಾರ ಸ್ಟ್ರಿಂಡ್‌ಬರ್ಗ್‌ನ ಎಳೆತನದ ಅಡ್ಡಹೆಸರು. ಲ್ಯಾಟಿನ್ನಿನಲ್ಲಿ ಗೂಬೆ ಎಂದು ಅರ್ಥ) ಎಂಬ ಹಾಸ್ಯಕ್ಕೆ ಮೀಸಲಾದ (ಕನ್ನಡದ ಕೊರವಂಜಿಯಂಥ) ಚಿಕ್ಕ ಮಾಸಿಕವನ್ನು ಆರಂಭಿಸಿ, ಅದರ ಸಂಪಾದಕನಾಗಿ ಕೆಲವು ವರ್ಷ ಇದ್ದ. ಮುಂದೆ ಲಲಿತಕಲೆಗಳ ರಾಯಲ್ ಅಕಾಡೆಮಿಯಲ್ಲಿ ಪ್ರಾಧ್ಯಾಪಕನಾಗಿಯೂ ಸ್ವೀಡಿಷ್ ಅಕಾಡೆಮಿಯ ಸದಸ್ಯನಾಗಿಯೂ ಸೇವೆ ಸಲ್ಲಿಸಿದ. ೧೯೪೧ರಲ್ಲಿ ಇವನ ಎಲ್ಲ ಕೃತಿಗಳೂ ೨೮ ಸಂಪುಟಗಳಲ್ಲಿ ಪ್ರಕಟವಾದುವು. (ಕೆ.ಬಿ.ಪಿ.)

ಪೇಧ್ರೋ ಕಾಲ್ಡೆರೋನ್ (ಡೇ ಲಾ ಬಾರ್ಕಾ) (೧೬೦೦–೧೬೮೧)

ಸ್ಪ್ಯಾನಿಷ್ ನಾಟಕಕಾರ. ಸುಮಾರು ೭೦ ಮತೀಯ ನಾಟಕಗಳನ್ನೂ ವಿವಿಧ ಬಗೆಯ ೧೨೦ ಹೆಚ್ಚು ನಾಟಕಗಳನ್ನೂ ಬರೆದಿದ್ದಾನೆ. ಅನೇಕ ಇಂಗ್ಲಿಷ್ ನಾಟಕಕಾರರ ಮೇಲೆ ಈತನ ಪ್ರಭಾವ ಬಿದ್ದಿದೆ. ಆರು ನಾಟಕಗಳನ್ನು ಫಿಟ್ಸ್‌ಜೆರಾಲ್ಡ್ ಇಂಗ್ಲಿಷಿಗೆ ಅನುವಾದಿಸಿದ್ದಾನೆ. ಕೆಲವು ಕಾಲ ಜೆಸುಯಿಟ್ ವಿಶ್ವವಿದ್ಯಾಲಯದಲ್ಲಿ ಓದಿ, ಚರ್ಚಿನ ಪಾದ್ರಿ ವೃತ್ತಿಗೆ ಶಿಕ್ಷಣ ಪಡೆದು ಕೊನೆಗೆ ನಾಟಕರಂಗಕ್ಕೆ ಈತ ಬಂದ. ಲೋಪೆ ದೆ ವೇಗನ ಮೇಲ್ಪಂಕ್ತಿಯಲ್ಲಿ ಈತ ಬರೆದ ರಹ್ಯಸ ವರ್ತನೆ ಮತ್ತು ಕತ್ತಿವರಸೆಯ ಕಥೆಗಳು ಬರುಬರುತ್ತ ಬಾಹ್ಯರೂಪದಲ್ಲಿ ಹೆಚ್ಚು ಹೆಚ್ಚು ಅಚ್ಚುಕಟ್ಟಾದರೂ ಸ್ವಾರಸ್ಯ, ವೈವಿಧ್ಯದಲ್ಲಿ ಸಂಕುಚಿತವಾದುವು. ಇಲ್ಲಿ ಪ್ರಣಯ ಸಲ್ಲಾಪದ ನಿರೂಪಣೆ ಮತ್ತು ಪಾತ್ರ ಚಿತ್ರಣಗಳು ಸುಂದರವಾಗಿದ್ದರೂ ಕಥೆಯ ಚೌಕಟ್ಟು ಕೃತಕವೆನ್ನುವಷ್ಟು ಚಮತ್ಕಾರಯುತವಾಗಿದೆ. ಈ ನಾಟಕಗಳಲ್ಲಿ ಕಾಲ್ಡೆರೋನ್ ಲೌಕಿಕ ಮಾನ್ಯತೆ ಮತ್ತು ಸಹಜ ಅಸೂಯೆಗಳೇ ಪಾತ್ರಗಳ ನಡೆವಳಿಕೆಗೆ ಪ್ರಚೋದಕಾಂಶಗಳೆಂಬಂತೆ ತೋರಿಸಿದ್ದಾನೆ. ಈತನ ಎರಡನೆಯ ಬಗೆಯ ಕೃತಿಗಳು ಕಲ್ಪನಾಧಿಕ್ಯವನ್ನುಳ್ಳ ಕವನ ನಾಟಕಗಳು. ಜೀವನ ಸ್ವಪ್ನದಂತೆ ಭ್ರಾಂತಿಸ್ವರೂಪವಾದುದು ಎಂಬ ದೃಷ್ಟಿ ಇವುಗಳಲ್ಲಿ ಎದ್ದು ಕಾಣುತ್ತದೆ. ಜೀವನ ಒಂದು ಸ್ವಪ್ನ (ಇಂಗ್ಲಿಷ್ ಅನುವಾದ ಲೈಫ್ ಈಸ್ ಎ ಡ್ರೀಮ್) ಎಂಬ ನಾಟಕದಲ್ಲಿ ರೂಪಕಾರ್ಥವಿರುವುದಾದರೂ ಅಂಕಿತದಲ್ಲಿರುವಷ್ಟು ಅರ್ಥವನ್ನು ಬಿಟ್ಟರೆ, ಒಟ್ಟು ಕಥೆಯ ರೂಪಕಾರ್ಥ ಹೀಗೇ ಎಂದು ನಿರ್ಧರಿಸಲು ಬರುವುದಿಲ್ಲ. ಮೂರನೆಯ ವರ್ಗದ ಕೃತಿಗಳು ಅದ್ಭುತ ಕರುಣ ಭಯಾನಕ ರಸಪ್ರಧಾನವಾದ ನಾಟಕಗಳು ; ಮತೀಯ ಕಥಾವಸ್ತುವುಳ್ಳವು; ಬಹಳ ಅನ್ಯೈಜ ಘಟನಾವಳಿಯಿಂದ ಕೂಡಿದವು. ಬರುಬರುತ್ತ ಕಾಲ್ಡೆರೋನನ

ಕೃತಿಗಳಲ್ಲಿ ಸಂಭವನೀಯತೆ ಮತ್ತು ನೈಜಚಿತ್ರಣ ಕಡಿಮೆಯಾಗಿ ಶಕುನಗಳು, ಪವಾಡಗಳು, ದೈವೀಶಕ್ತಿಯ ಪ್ರತ್ಯಕ್ಷ ಹಸ್ತಕ್ಷೇಪ, ಭವಿಷ್ಯವಾಣಿ ಮುಂತಾದ ಅಂಶಗಳಿಗೆ ಪ್ರಾಶಸ್ತ್ಯ ಹೆಚ್ಚಿತು. ಈ ಬಗೆಯ ಕಲ್ಪನೆಯನ್ನು ಬ್ಯಾರೋಕ್ ಎನ್ನುವರು. ಕೊನೆಗೆ ಕವಿ ಪಾದ್ರಿ ವೃತ್ತಿಯನ್ನು ಕೈಕೊಂಡು ಕ್ರೈಸ್ತಪರ್ವ ದಿನಗಳಲ್ಲಿ ಅಭಿನಯಿಸಲು ಗ್ರಾಮ ಸಂಸ್ಥೆಗಳಿಗೆ ಔಟೋಗಳನ್ನೂ ಅರಮನೆಯಲ್ಲಿ ಅಭಿನಯಿಸಲು ತಾರ್ತ್ವೇಲಾ ಗಳನ್ನೂ ಬರೆದುಕೊಟ್ಟ. ಕಾಲ್ಡೆರೋನನ ಶೈಲಿ ಲೋಪೇ ದೆ ವೇಗನ ಶೈಲಿಯಷ್ಟು ಭಾವಪೂರ್ಣವಾಗಿಯೂ ವೈವಿಧ್ಯಮಯವಾಗಿಯೂ ಇಲ್ಲ.

ಈತ ಸುವರ್ಣಯುಗದ ನಾಟಕಕಾರರಲ್ಲಿ ಕೊನೆಯವನು. ಜೀವನ ಒಂದು ಸ್ವಪ್ನ–ಎಂಬ ಈತನ ಕೃತಿ ಅತ್ಯುತ್ತಮವಾದುದೆಂದು ಪರಿಗಣಿತವಾಗಿದೆ.

(ಎಂ.ಕೆ.ಕೆ.; ಕೆ.ಆರ್.ಜ.)

ಗಿಲ್ಗಾಮೆಷ್

ಸುಮೇರಿಯನ್ನರ ಅತಿಪ್ರಾಚೀನ ಸಂಪ್ರದಾಯಕ್ಕೆ ಸೇರಿದ, ಮೆಸಪೊಟೇಮಿಯದ ಪೌರಾಣಿಕ ಮಹಾಕಾವ್ಯವೊಂದರ ನಾಯಕ. ಈ ಮಹಾಕಾವ್ಯ ಅಕ್ಕೇಡಿಯನ್ ಭಾಷೆಯಲ್ಲಿಯೇ ಒಂದು ಬಹು ಮುಖ್ಯವಾದ ಸಾಹಿತ್ಯ ಕೃತಿ ಮತ್ತು ಇದರ ನಾಯಕ ಗಿಲ್ಗಾಮೆಷ್ ಸುಮೇರಿಯನ್ ನಾಯಕರೆಲ್ಲೆಲ್ಲ ಅಗ್ರಗಣ್ಯ. ಈ ಕಥೆ ಪ್ರ.ಶ.ಪೂ ೩೦೦೦ ವರ್ಷಗಳ ಹಿಂದೆ ದಕ್ಷಿಣ ಮೆಸಪೊಟೇಮಿಯದಲ್ಲಿದ್ದ ನಾಗರಿಕತೆಯ ಸ್ವರೂಪವನ್ನು ತಿಳಿಸುತ್ತದೆ. ಗಿಲ್ಗಾಮೆಷ್‌ನ ವಿಷಯದಲ್ಲಿ ಹುಟ್ಟಿಕೊಂಡಿರುವಷ್ಟು ಕಥೆಗಳು ಇತರರ ವಿಷಯದಲ್ಲಿಲ್ಲ. ಅಲ್ಲದೆ ಇವನು ತನ್ನ ಸ್ನೇಹಿತ ಎಂಕಿಡುವಿನೊಂದಿಗೆ ಸೇರಿ ತೋರಿಸಿದ ಸಾಹಸ ಬೇರೆಯವರಲ್ಲಿ ಕಂಡುಬರದು. ಸುಮೇರಿಯದಲ್ಲಿನ ಈತನ ಕಥೆಯ ಮೂಲವನ್ನು ಪ್ರ.ಶ.ಪೂ. ೧೫೦೦ಕ್ಕಿಂತ ಹಿಂದಕ್ಕೆ ಒಯ್ಯಬಹುದು. ನೈನೆವದಲ್ಲಿ ಅಸ್ಸೀರಿಯದ ದೊರೆ ಅಷೂರ್‌ಬನಿಪಾಲನ (ಪ್ರ.ಶ.ಪೂ ೬೬೯–೬೩೦) ಗ್ರಂಥಭಂಡಾರದಲ್ಲಿ ಈ ಕಥೆಯ ಅಪೂರ್ಣಪಾಠ (ಕೇವಲ ೧೨ ಫಲಕಗಳು ಮಾತ್ರ) ದೊರೆತಿದೆ. ಹಿಟ್ಟೈಟ್ ಮತ್ತು ಹುರಿಯನ್ ಭಾಷೆಗಳಲ್ಲಿ ಏಷ್ಯ ಮೈನರಿನಲ್ಲಿ ಕೆಲವು ಬದಲಾವಣೆಗಳೊಂದಿಗೆ ಪ್ರಚಲಿತವಿದ್ದ ಈ ಕಥೆ ಗ್ರೀಕರ ಒಡಿಸ್ಸಿಯ ಮೇಲೆ ಪ್ರಭಾವ ಬೀರಿರಬಹುದು. ಹೇಗೂ ಹೋಮರನಿಗಿಂತ ೧೫೦೦ ವರ್ಷಗಳಷ್ಟು ಹಿಂದೆಯೇ ಇದ್ದ ಅತ್ಯಂತ ಪ್ರಾಚೀನ ಮಹಾಕಾವ್ಯ ಈ ಗಿಲ್ಗಾಮೆಷ್ ಇತಿಹಾಸ.

ಈ ಕಥೆಯಲ್ಲಿ ಮಾನವ ಮತ್ತು ಪ್ರಕೃತಿ, ಪ್ರೀತಿ ಮತ್ತು ಸಾಹಸ, ಸ್ನೇಹ ಮತ್ತು ಯುದ್ಧ ಮುಂತಾದ ಪ್ರಾಪಂಚಿಕ ವಿಷಯಗಳನ್ನು ಅಪರಿಹಾರ್ಯವಾದ ಸಾವಿನ ಹಿನ್ನಲೆಯಲ್ಲಿ ವಿವರಿಸಿದೆ. ಸಾವಿನ ವಿಷಯದಲ್ಲಿ ಆಗಿನ ಜನತೆಯಲ್ಲಿದ್ದ ನಂಬಿಕೆಯನ್ನು ಇದು ವ್ಯಕ್ತಪಡಿಸುತ್ತದೆ.

ಈ ಮಹಾಕಾವ್ಯದ ಗಿಲ್ಗಾಮೆಷ್ ಬಹುಶಃ ಪ್ರ.ಶ.ಪೂ. ೩೦೦೦ ವರ್ಷಗಳ ಹಿಂದೆ ಕಿಷ್‌ನಲ್ಲಿದ್ದ ಆಗಿನ ಸಮಕಾಲೀನನಾಗಿ ಉರುಕ್‌ನಲ್ಲಿ ಆಳುತ್ತಿದ್ದವನೆನ್ನಲಾಗಿದೆ. ಗಿಲ್ಗಾಮೆಷ್ ಎಂಬ ಸುಮೇರಿಯನ್ ಭಾಷೆಯ ಹೆಸರನ್ನು ತಂದೆ ವೀರ, ಪುರಾತನ ವೀರ ಎಂದು ಮುಂತಾಗಿ ಅರ್ಥೈಸಿದ್ದಾರೆ. ಕಾವ್ಯ, ಕಥೆಗಳಲ್ಲಿ ವಿವರಿಸಿರುವ ಈತನ ಸಾಹಸಕಾರ್ಯಗಳಿಗೆ ಚಾರಿತ್ರಿಕಾಧಾರಗಳೇನೂ ಇಲ್ಲ. ಹಾಗೆಯೆ ಸ್ನೇಹಿತ ಮತ್ತು ಸಂಗಾತಿ ಎಂಕಿಡುವಿನ ಹೆಸರೂ ಬೇರೆಲ್ಲಿಯೂ ಇಲ್ಲ.

ಈ ಕಥೆ ಮುಖ್ಯವಾಗಿ ಗಿಲ್ಗಾಮೆಷ್ ಮತ್ತು ಎಂಕಿಡು ಇವರ ಸ್ನೇಹ ಬಂಧನವನ್ನು ಕುರಿತದ್ದು. ಇಬ್ಬರೂ ವೀರಾಧಿವೀರರು. ಗಿಲ್ಗಾಮೆಷ್ ಶೌರ್ಯದ ಉನ್ನತ ಆದರ್ಶವುಳ್ಳವ, ಕೀರ್ತಿ ತರುವ ಕಾರ್ಯಕ್ಕಾಗಿ ಏನನ್ನೇ ಆಗಲಿ, ಪ್ರಾಣವನ್ನು ಕೂಡ ತ್ಯಾಗ ಮಾಡಲು ಸಿದ್ಧನಾಗಿದ್ದವ. ಅರೆದೈವತ್ವ ಅರೆ ಮಾನವತ್ವವನ್ನು ಪಡೆದಿದ್ದ ಗಿಲ್ಗಾಮೆಷನಿಗೆ ಭೂಮಿ, ಸಾಗರಗಳ ಮೇಲಿನ ಎಲ್ಲ ವಿಷಯಗಳೂ ತಿಳಿದಿದ್ದವು. ಅನು ದೇವತೆ ಇವನ ದರ್ಪವನ್ನಡಗಿಸಲು ಎಂಕಿಡುವನ್ನು ಸೃಷ್ಟಿಸುತ್ತಾನೆ. ಗಿಲ್ಗಾಮೆಷ್‌ನಿಗೂ ಇವನಿಗೂ ನಡೆದ ಶಕ್ತಿ ಪ್ರದರ್ಶನದಲ್ಲಿ ಗಿಲ್ಗಾಮೆಷ್ ಜಯಶಾಲಿಯಾಗುತ್ತಾನೆ. ಮುಂದೆ ಇಬ್ಬರೂ ನಿಕಟವರ್ತಿಗಳಾಗಿ ಹುಂಬಾಬನ ಮೇಲೆ ಯುದ್ಧ ಹೂಡುತ್ತಾರೆ. ತನ್ನನ್ನು ಮದುವೆಯಾಗಲು ನಿರಾಕರಿಸಿದ ಗಿಲ್ಗಾಮೆಷ್‌ನ ಮೇಲೆ ಇಷ್ಟಾರ್ ದೇವತೆ ದೇವಲೋಕದ ಗೂಳಿಯನ್ನು ನುಗ್ಗಿಸಿದಾಗ ಎಂಕಿಡುವಿನ ಸಹಾಯದಿಂದ ಅದನ್ನು ಗಿಲ್ಗಾಮೆಷ್ ಕೊಲ್ಲುತ್ತಾನೆ. ಇದರಿಂದ ಕುಪಿತಗೊಂಡ ಅನು ಮೊದಲಾದ ದೇವತೆಗಳು ಎಂಕಿಡು ಸಾಯಬೇಕೆಂದು ನಿರ್ಧರಿಸುತ್ತಾರೆ. ರೋಗ ಬಂದು ಎಂಕಿಡು ಸಾಯುತ್ತಾನೆ. ಸ್ನೇಹಿತನ ಸಾವಿನ ದುಃಖದಿಂದ ಪರಿತಪಿಸುತ್ತಿದ್ದ ಗಿಲ್ಗಾಮೆಷ್‌ನಿಗೆ ಸಾವನ್ನೇ ಎದುರಿಸಬೇಕೆಂಬ ಸಂಕಲ್ಪ ಉಂಟಾಗುತ್ತದೆ; ಪ್ರಳಯದಿಂದ ಪಾರಾಗಿ ಸಾವನ್ನು ಗೆದ್ದ ಉತ್ನಪಿಷ್ಟಿಮನನ್ನು ಹುಡುಕಿಕೊಂಡು ಹೋಗುತ್ತಾನೆ. ಆಪತ್ಕಾರಕವಾದಾಗ ನಿಡುಪಯಣದ ಅನಂತರ ಉತ್ನಪಿಷ್ಟಿಮನ ದರ್ಶನವಾಗುತ್ತದೆ. ಆತನಿಂದ ಪ್ರಳಯದ ಕಥೆಯನ್ನು ತಿಳಿದು ನವ ಯೌವನವನ್ನುಂಟುಮಾಡುವ ಗಿಡವೊಂದನ್ನು ಪಡೆಯುತ್ತಾನೆ; ಜೊತೆಗೆ ಅಮರತ್ವ ದೇವತೆಗಳಿಗೆ ಮಾತ್ರ ಎಂಬ ಎಚ್ಚರಿಕೆಯನ್ನೂ ಉತ್ನಪಿಷ್ಟಿಮ್ ಕೊಡುತ್ತಾನೆ. ಮುಂದೆ ಆ ಗಿಡವನ್ನು ಸರ್ಪವೊಂದು ಅಪಹರಿಸುತ್ತದೆ. ಮತ್ತೊಂದು ಐತಿಹ್ಯದಂತೆ ಇಷ್ಟಾರ್ ಗಿಲ್ಗಾಮೆಷನಿಗೆ ಕೊಟ್ಟಿದ್ದ ಪುಕ್ಕು, ಮಿಕ್ಕು ಎಂಬ ಪದಾರ್ಥಗಳು (ಬಹುಶಃ ಡೋಲು ಮತ್ತು ಅದರ ಕೋಲು) ಕಳೆದು ಹೋದಂತೆಯೂ ಮತ್ತೆ ಬದುಕಿಬಂದ ಎಂಕಿಡು ಅವನ್ನು ಹುಡುಕಿ ತರುವುದಾಗಿ ಮಾತು ಕೊಟ್ಟು ಮೃತ್ಯುಲೋಕದ ಗಂಭೀರ ವರದಿಯನ್ನು ಒಪ್ಪಿಸಿದಂತೆಯೂ ತಿಳಿದುಬರುತ್ತದೆ. (ಎಂ.ಎಸ್)

X ಡಚ್ ಸಾಹಿತ್ಯ

ಜನಬಳಕೆಯ ಭಾಷೆಯಲ್ಲಿ ಮೊಟ್ಟಮೊದಲಿಗೆ ಹುಟ್ಟಿದ ಡಚ್ ಸಾಹಿತ್ಯಕ್ಕೆ ಲಿಂಬರ್ಗ್, ಫ್ಲಾಂಡರ್ಸ್ ಮತ್ತು ಬ್ರಬಾಂತ್ ನಗರಗಳ ದಕ್ಷಿಣ ಭಾಗಗಳೇ ಕೇಂದ್ರಸ್ಥಾನಗಳಾಗಿದ್ದುವು. ಲಿಂಬರ್ಗಿನ ಹೆನ್ರಿಕ್ ವಾನ್ ವೆಲ್ಡೀಕ್ ತನ್ನ ಸಿಂತ್ ಸರ್ವಿಸ್ (ಸೇಂಟ್ ಸರ್ವೇಷಿಯಸ್) ಎಂಬ ಗ್ರಂಥವನ್ನು ೧೧೭೦ಕ್ಕೆ ಮುಂಚೆಯೇ ಬರೆದಿದ್ದ. ಇದರಲ್ಲಿ ಷಾರ್ಲಮನ್ ಮತ್ತು ಆರ್ಥರ್‌ಗಳಿಗೆ ಸಂಬಂಧಿಸಿದ ರೊಮಾನ್ಸ್ ಜಾತಿಯ ಸಾಹಸ ಕಥೆಗಳ ಪ್ರಭಾವ ಎದ್ದುಕಾಣುತ್ತದೆ. ಇದಲ್ಲದೆ ಈ ಕಾಲದಲ್ಲಿ ನೀತಿಬೋಧಕ ಕಾವ್ಯವೂ ಸ್ವಲ್ಪಮಟ್ಟಿಗೆ ಬೆಳೆಯಿತು. ಯಾಕಬ್‌ವಾನ್ ಮೀರ್‌ಲಂಟ್‌ನ (೧೨೩೫–೧೩೦೦) ಕವನ ಕೃತಿಗಳು ನೀತಿಬೋಧಕ ಕಾವ್ಯಕ್ಕೆ ನಿದರ್ಶನ. ಲೌಕಿಕ ವಿಷಯಗಳನ್ನು ಕುರಿತ ಭಾವಗೀತೆಗಳೂ ಅನುಭಾವಿ ಗದ್ಯಪದ್ಯವೂ ತಕ್ಕ ಮಟ್ಟಿಗೆ ಬೆಳೆದುವು. ಸಂನ್ಯಾಸಿಯಾದ ಹೇಡ್‌ವಿಕ್ ಎಂಬಾಕೆ ಬರೆದ ಪದ್ಯಗಳು ಅನುಭಾವ ಕಾವ್ಯಕ್ಕೆ ಪ್ರಮುಖ ನಿದರ್ಶನವಾಗಿದೆ. ಈ ಕಾಲದ ಸಾಹಿತ್ಯ ವಾನ್ ದೆನ್ ರೇನಾರ್ದ್ ಎಂಬ ಕೃತಿಯಲ್ಲಿ ಅತ್ಯುನ್ನತಿಗೇರಿತು.

ಯಾನ್ ವಾನ್ ರೂಸ್ ಬ್ರೋಕ್ (೧೨೯೪–೧೩೮೧) ಎಂಬವನ ಅನುಭಾವಿ ಕೃತಿಗಳು ೧೪ನೆಯ ಶತಮಾನದ ಹೆಗ್ಗುರುತು. ನೆದರ್ಲೆಂಡ್ಸಿನ ನಾಗರಿಕರಲ್ಲಿ ೧೫ನೆಯ ಶತಮಾನದಲ್ಲಿ ಒಂದು ಬಗೆಯ ಸ್ವಾತಂತ್ರ್ಯ ಪ್ರವೃತ್ತಿ ಬೆಳೆಯತೊಡಗಿತು. ಇದರಿಂದಾಗಿ ಆ ಕಾಲದಲ್ಲಿ ಹಲವಾರು ಕಾವ್ಯ ಮೀಮಾಂಸಾ ಮಂಡಲಿಗಳು ರೂಪಗೊಂಡವು. ಇವುಗಳಲ್ಲಿ ನಡೆದ ಚರ್ಚೆಗಳ ಮೂಲಕ ಅನೇಕ ಧರ್ಮನಾಟಕಗಳೂ ಪವಾಡನಾಟಕಗಳೂ ರಚಿತವಾದುವು. ಮೇರಿಕನ್ ವಾನ್ ನ್ಯೂಮಿಗೆನ್ ಮತ್ತು ಎಲ್ಕರ್‌ಲೀಕ್ ಇವೆರಡೂ ಈ ಬಗೆಯ ನಾಟಕಗಳಲ್ಲಿ ಪ್ರಖ್ಯಾತವಾದವು. ೧೬ನೆಯ ಶತಮಾನದ ಕೊನೆಯ ವೇಳೆಗೆ ರಿನೆಸಾನ್ಸ್ ಯುಗ ಆರಂಭವಾಯಿತು. ಯೋಂಕರ್ ಯಾನ್ ವಾನ್ ದರ್ ನೂಟ್ (೧೫೨೯/೧೫೪೦– ಸು. ೧೫೯೫), ಹೆನ್ರಿಕ್ ಲೌರೆನ್ಸ್ ಸ್ಪೀಗಲ್ (೧೫೪೯–೧೬೧೨) ಮತ್ತು ಇವರಿಗಿಂತ ವಿಶೇಷವಾಗಿ. ಡರ್ಕ್‌ವಾಲ್ಕರ್‌ಟ್ಸ್ ಜೇಡ್‌ಕೂನ್ಸ್ಟ್, ದಟ್ ಈಸ್ ವೆಲ್ವೆನ್ಸ್ ಕೂನ್ಸ್ಟ್–ನೀತಿ ಅರ್ಥಾತ್ ಉತ್ತಮ ಜೀವನದ ಕಲೆ ಎಂಬುದು ಕೂನ್ ಹರ್ಟ್‌ನ ಮಹಾಕೃತಿ.

೧೭ನೆಯ ಶತಮಾನದಲ್ಲಿ ಪೀಟರ್ ಕಾರ್ನಿಲೀಸ್ ಜ಼ೂನ್ ಹೂಫ್ಟ್ (೧೫೮೧–೧೬೪೭), ಗೆರ್‌ಬ್ರಾಂಡ್ ಎಡ್ರಿಯಾನ್ಸ್ ಜ಼ೂನ್ ಬ್ರೀಡೆರೊ (೧೫೮೫–೧೬೧೮), ಯೂಸ್ಟ್‌ವಾನ್ ದಲ್‌ವಾಂದಲ್ (೧೫೮೭–೧೬೭೯), ಕಾನ್ಸ್ಟಾಂಟಿನ್ ಹ್ಯೂನ್ಸ್ (೧೫೯೬–೧೬೮೭) ಮತ್ತು ಯಾಕಬ್ ಕ್ಯಾಟ್ಸ್ (೧೫೭೭–೧೫೬೦) ಇವರುಗಳ ಪ್ರಭಾವದಿಂದ ಡಚ್ ಸಾಹಿತ್ಯ ಬಹಳ ಉನ್ನತಮಟ್ಟಕ್ಕೇರಿತು. ಇವರೆಲ್ಲ ರೆನೆಸಾನ್ಸ್ ಯುಗದ ಅಂತಸ್ಸತ್ತ್ವವೇ ಆಗಿದ್ದವರು. ಹೂಫ್ಟ್ ಸಾನೆಟ್ಟುಗಳನ್ನಲ್ಲದೆ

ನೆಚರ್ ಲಾಂಡ್ಷ್‌ಹಿಸ್ಟರೀನ್ ಎಂಬ ಇತಿಹಾಸ ಗ್ರಂಥವನ್ನೂ ಬರೆದಿದ್ದಾನೆ. ವಾಂದಲ್ ಅಭಿಜಾತ ನಾಟಕಗಳನ್ನು ರಚಿಸಿದ್ದಾನೆ. ಈತನಿಗೆ ಕಾವ್ಯದ ಎಲ್ಲ ಬಗೆಯ ಪ್ರಕಾರಗಳ ಮೇಲೂ ಪ್ರಭುತ್ವವಿತ್ತು. ಹ್ಯೂನ್ಸ್ ಮತ್ತು ಕ್ಯಾಟ್ಸ್ ಸಹ ತಮ್ಮ ಯುಗದ ವಾಣಿಗಳಾಗಿದ್ದರು. ಇವರಲ್ಲದೆ ಯಾಕೊಬಸ್ ರೇವಿಯಸ್ (೧೫೮೬–೧೬೫೮) ಮತ್ತು ಯೋನ್ಸ್ ಸ್ಟಾಲ್‌ಪರ್ಟ್‌ವಾನ್ ದರ್ ವೀದನ್ (೧೫೭೯–೧೬೩೦) ಎಂಬ ಧಾರ್ಮಿಕ ಕವಿಗಳೂ ಈ ಕಾಲದ ಖ್ಯಾತ ಸಾಹಿತಿಗಳು.

ಹದಿನೆಂಟನೆಯ ಶತಮಾನದಲ್ಲಿ ಡಚ್ ಸಾಹಿತ್ಯ ಇಳಿಮುಖವಾಯಿತು. ಈ ಶತಮಾನದ ಹೆಸರಾಂತ ಲೇಖಕರೆಂದರೆ ಪೀಟರ್ ಲಾಂಗೆನ್‌ಡೀಕ್ (೧೬೮೩–೧೭೫೬), ಎಲಿಜ಼ಬೆತ್ ಬೆಕರ್ (೧೭೩೮–೧೮೦೪) ಮತ್ತು ಆಗ್ಯೆ ಡೇಕನ್ (೧೭೪೧–೧೮೦೪) ಎಂಬವರು. ಲಾಂಗೆನ್ ಡಈಕ್ ನಾಟಕಕಾರ. ಡೇಕನ್ ಡಚ್ ಕಾದಂಬರಿ ಕಾರರಲ್ಲಿ ಮೊದಲಿಗ ವ್ಯಕ್ತಿ. ಈ ಅವಧಿಯಲ್ಲಿ ರೋಮ್ಯಾಂಟಿಕ್ ಯುಗದ ಮುನ್‌ಸೂಚಕನಾದ ವಿಲ್ಲಮ್ ಬೈಲ್ಡರ್ ಡೀಕ್ (೧೭೫೬–೧೮೩೧) ಎಂಬಾತನೂ ಇದ್ದ. ಈತ ಹಾಲಂಡಿನ ಆಧ್ಯಾತ್ಮಿಕ ಜೀವನದ ಮೇಲೆ ತುಂಬ ಪ್ರಭಾವ ಬೀರಿದ. ೧೮೩೭ರಲ್ಲಿ ಎವರ್ ಹಾರ್ಡ್‌ಸ್ ಯೋಹಾನ್ಸ್ ಪಾಟ್‌ಗೀಟರ್ (೧೮೦೮–೧೮೩೧) ಎಂಬಾತ ಡಿ ಗಿಡ್ಸ್ (ಮಾರ್ಗ ದರ್ಶಕ) ಎಂಬ ನಿಯತಕಾಲಿಕೆಯನ್ನು ಸ್ಥಾಪಿಸಿದ. ತಾನೇ ಹಲವಾರು ವಿಮರ್ಶನಾತ್ಮಕ ಲೇಖನಗಳನ್ನು ಬರೆದು ಆ ಪತ್ರಿಕೆಯಲ್ಲಿ ಪ್ರಕಟಿಸಿದ. ಇದರ ಪರಿಣಾಮವಾಗಿ ಸಾಹಿತ್ಯದ ಮಟ್ಟ ಬಹುಮಟ್ಟಿಗೆ ಹೆಚ್ಚಿತು. ಕಾನ್ರಾಡ್ ಬಸ್ಕೆನ್ ಹ್ಯೂಟ್ (೧೮೨೬–೧೮೮೬) ಎಂಬಾತ ಪಾಟ್‌ಗೀಟರನ ಕಾರ್ಯದಲ್ಲಿ ನೆರವಾದ. ಹಿಲ್ಡ್‌ಬ್ರಾಂಡ್ ಎಂಬ ಕಾವ್ಯನಾಮ ಇಟ್ಟುಕೊಂಡಿದ್ದ ನಿಕಾಸ್ ಬೀಟ್ಸ್ (೧೮೧೪–೧೯೦೩) ಆ ಕಾಲದ ಮಧ್ಯಮವರ್ಗದ ಸಮಾಜವನ್ನು ಹಾಸ್ಯಮಯ ರೀತಿಯಲ್ಲಿ ಚಿತ್ರಿಸಿದ ಹಲವಾರು ಲೇಖನಗಳನ್ನು ಬರೆದ. ಆನಾ ಲೂಯಿಸಾ ಗೆರ್‌ಟ್ರೂಡಾ ಬಾಸ್ ಬೂಮ್ ಟೂಸಾಂಟ್ (೧೮೧೨–೧೮೮೬), ಮತ್ತು ಯಾಕಬ್ ವಾನ್ ಲೆನೆಪ್ (೧೮೦೨–೧೮೬೭) ಎಂಬವರು ಐತಿಹಾಸಿಕವೂ ರಾಷ್ಟ್ರೀಯವೂ ಆದ ಕಾದಂಬರಿಗಳನ್ನು ಬರೆದರು. ಡೌವಿಸ್ ಡೆಕ್ಕರ್ (೧೮೨೦–೧೮೮೭) ಎಂಬಾತ ಸಮಾಜ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿದ. ಮುಲ್ಟಾಟುಲಿ ಎಂಬ ಕಾವ್ಯನಾಮವನ್ನಿಟ್ಟು ಕೊಂಡು ಈತ ಮ್ಯಾಕ್ಸ್ ಹಾವೆಲಾರ್ ಎಂಬ ಗ್ರಂಥವನ್ನು ಬರೆದ. ಇದರ ಎರಡು ಸಂಪುಟಗಳು ೧೮೬೦ರಲ್ಲಿ ಅಚ್ಚಾದವು. ಡಚ್ ಅಧಿಕಾರಿಗಳು ಜಪಾನೀಯರ ಬಗೆಗೆ ನಡೆದುಕೊಂಡ ರೀತಿಯನ್ನು ಈ ಗ್ರಂಥದಲ್ಲಿ ಡೆಕ್ಕರ್ ಉಜ್ಜ್ವಲ ಶೈಲಿಯಲ್ಲಿ ಪ್ರತಿಭಟಿಸಿದ್ದಾನೆ. ಈ ಗ್ರಂಥದಿಂದ ದೊಡ್ಡ ಕೋಲಾಹಲವೆದ್ದಿತು.

೧೮೮೫ರಲ್ಲಿ ಕೆಲವು ಲೇಖಕರು ಸೇರಿ ದಿ ನ್ಯೂವ್ ಗಿಡ್ಸ್ ಎಂಬ ಕೃತಿಯನ್ನು ಪ್ರಕಟಿಸಿದರು. ಈ ಲೇಖಕರನ್ನು ೧೮೮೦ರ ಪೀಳಿಗೆಯವರು ಎಂದು ಕರೆಯಲಾಗಿದೆ. ವಿಲ್ಲಮ್ ಕ್ಲೂಸ್ (೧೮೫೯–೧೯೩೮), ಲೋಡ್ ವಿಕ್ ವಾನ್ ಡೀಯ್ಸೆಲ್

(ಇದು ಕಾರಲ್ ಜಿ. ಎಲ್. ಆಲ್ಬರ್‌ಡಿಂಕ್ ಥೈಮ್ (೧೮೬೪-೧೯೫೨) ಎಂಬವನ ಕಾವ್ಯನಾಮ), ಫ್ರೆಡರಿಕ್‌ವಾನ್ ಈಡನ್ (೧೮೦೦-೧೯೩೨), ಆಲ್ಬರ್ಟ್ ವರ್ವೀ (೧೮೬೫-೧೯೩೭) ಇವರೆಲ್ಲ ೧೮೮೦ರ ಪೀಳಿಗೆಯವರು. ಈ ತಂಡದ ಪ್ರಯತ್ನದಿಂದ ಸಾಹಿತ್ಯದ ಮಟ್ಟ ಏರತೊಡಗಿತು. ಈ ಪ್ರವೃತ್ತಿ ಇಪ್ಪತ್ತನೆಯ ಶತಮಾನಕ್ಕೂ ಹರಡಿತು. ಹೆನ್ರಿಯಟ್ ರೋಲನ್ ಹೋಲ್ಸ್ಟ್ (೧೯೬೯-), ಯಾನ್‌ಹೆಂಡ್ರಿಕ್ ಲಿಯೊಪೋಲ್ಡ್ (೧೮೬೫-೧೯೨೫) ಮತ್ತು ಪೀಟರ್ ಕಾರ್ನೆಲಿಸ್ ಬೌಟನ್ಸ್ (೧೮೭೦-೧೯೪೩) ಇವರ ಭಾವಗೀತಾತ್ಮಕ ಗದ್ಯ ಮತ್ತು ಪದ್ಯಗಳಲ್ಲಿ ಈ ಧೋರಣೆ ವಿಶೇಷವಾಗಿ ಕಂಡುಬರುತ್ತದೆ.

೧೮೮೦ರಲ್ಲಿ ನಡೆದದ್ದು ವ್ಯಕ್ತಿವಾದವನ್ನು ಎತ್ತಿಹಿಡಿಯುವ ಚಳವಳಿ. ಇದರ ಬಳಿಕ ಬೇರೊಂದು ಲೇಖನವೃಂದ ಕಾಣಿಸಿಕೊಂಡಿತು. ಇವರು ಸಮಾಜವಾದೀ ಭಾವನೆಯುಳ್ಳವರು. ಹರ್ಮನ್ ಹೈಯರಮನ್ಸ್ (೧೮೬೪-೧೯೨೪) ಎಂಬಾತ ಸಾಮಾಜಿಕ ನಾಟಕಗಳನ್ನು ಬರೆದ. ಓಪ್ ಹೂಪ್ ವಾನ್ ಝೆಗನ್ (೧೯೦೦) ಎಂಬುದು ಇವನ ನಾಟಕಗಳಲ್ಲಿ ಹೆಸರು ಪಡೆದ ನಾಟಕ. ಇದನ್ನು ದಿ ಗುಡ್ ಹೋಪ್ ಎಂಬ ಅಂಕಿತದಲ್ಲಿ ಇಂಗ್ಲಿಷಿಗೆ ಭಾಷಾಂತರಿಸಲಾಗಿದೆ (೧೯೧೨). ಡಚ್ ರಂಗಭೂಮಿಯ ಶ್ರೇಷ್ಠ ಸಾಧನೆಗಳಲ್ಲಿ ಈತನ ನಾಟಕಗಳೂ ಸೇರಿವೆ. ಎರಡು ಮಹಾಯುದ್ಧಗಳ ನಡುವಣ ಕಾಲದಲ್ಲಿ ಸಾಹಿತ್ಯದಲ್ಲಿ ಇಳಿಮುಖವೇನೂ ಕಾಣಲಿಲ್ಲ. ಆದರೆ ಈ ಅವಧಿಯ ಸಾಹಿತ್ಯಗಳಲ್ಲಿ ಭಿನ್ನ ಭಿನ್ನ ಧೋರಣೆಗಳು ಕಂಡುಬರುತ್ತವೆ. ಜಾಕ್ವಿಸ್ ಸಿ. ಬ್ಲೀಮ್ (೧೮೮೭-), ಏಡ್ರಿಯನ್ ರೋಲನ್ಡ್ ಹೋಲ್ಸ್ಟ್ (೧೮೮೮-), ಯಾನ್ ಯಾಕಬ್ ಸ್ಲೇವರ್‌ಹಾಫ್ (೧೮೯೮-೧೯೩೬) ಮತ್ತು ಹೆಂಡ್ರಿಕ್ ಮಾರ್ಸ್‌ಮನ್ (೧೮೯೮-೧೯೪೦)-ಇವರು ಈ ಮಧ್ಯಂತರ ಅವಧಿಯ ಪ್ರಮುಖ ಲೇಖಕರು. ಲೂಯಿ ಕೂಪರಸ್ (೧೮೬೩-೧೯೨೩), ಆರ್ಥರ್ ವಾನ್ ಷೆಂಡಲ್ (೧೮೭೪-೧೯೪೬), ಸೈಮನ್ ವೆಸ್ಟ್ ಡೀಕ್ (೧೮೯೮-) ಮತ್ತು ಫರ್ಡಿನಂಡ್ ಬೋರ್ಡ್‌ವಿಕ್ (೧೮೮೪-) - ಇವರೆಲ್ಲ ಶ್ರೇಷ್ಠ ಕಾದಂಬರಿಕಾರರು. (ಕೆ.ವಿ.ಎಸ್.ಟಿ.)

XI ನಾರ್ವೀಜಿಯನ್ ಸಾಹಿತ್ಯ

ಆಧುನಿಕ ಯೂರೋಪಿಯನ್ ಸಾಹಿತ್ಯಗಳಲ್ಲಿ ನಾರ್ವೀಜಿಯನ್ ಸಾಹಿತ್ಯ ಸಮೃದ್ಧವಾಗಿ ಬೆಳೆದದ್ದು ಸ್ವಲ್ಪ ಸಾವಕಾಶವಾಗಿಯಾದರೂ ಅದು ಆ ನೆಲದಲ್ಲಿ ಚೆನ್ನಾಗಿ ಬೇರು ಬಿಟ್ಟಿತು ಎಂಬ ಅಂಶ ಗಮನಾರ್ಹವಾದುದು. ೧೮೧೪ರಲ್ಲಿ ನಾರ್ವೆ ಮತ್ತು ಡೆನ್ಮಾರ್ಕ್ ಬೇರೆಬೇರೆ ರಾಷ್ಟ್ರಗಳಾಗಿ ಬೇರ್ಪಡುವ ತನಕ ನಾರ್ವೀಜಿಯನ್ ಎಂದೇ ಕರೆಯಬಹುದಾದ ಸ್ವತಂತ್ರ ಸಾಹಿತ್ಯ ಕಂಡು ಬರುವುದಿಲ್ಲ. ಅನಂತರ ಹುಲುಸಾಗಿ ಬೆಳೆದು ೧೯ನೆಯ ಶತಮಾನದ ಕೊನೆಗೆ-ಮುಖ್ಯವಾಗಿ ನಾಟಕ ಕ್ಷೇತ್ರದಲ್ಲಿ ಇಬ್ಸನ್ನನ ಅಮೋಘ ಸಾಧನೆಗಳಿಂದಾಗಿ-ಪ್ರಭಾವಶಾಲಿ

ಸಾಹಿತ್ಯವೆಂದು ಪರಿಗಣಿತ ವಾಯಿತು. ಸತ್ತ್ವ ಮತ್ತು ಸಮೀಚೀನ ದೃಷ್ಟಿ ಈ ಸಾಹಿತ್ಯದ ಮುಖ್ಯಗುಣಗಳು. ಇದಕ್ಕೆ ಒಂದು ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸವಿದೆ, ಪರಂಪರೆಯಿದೆ. ಇದರ ಬೆಳೆವಣಿಗೆ ಐಸ್‌ಲ್ಯಾಂಡಿಕ್ ಹಾಗೂ ಡೇನಿಷ್ ಸಾಹಿತ್ಯದಲ್ಲಿ ಹೆಣೆದುಕೊಂಡು ಬಿಟ್ಟಿದೆ. ಹಿಂದಿನಿಂದಲೂ ಬಂದ ಪುರಾಣಕಥೆಗಳು, ಸಾಹಸದ ಕವಿತೆಗಳು ಮತ್ತು ವೀರಕಥೆಗಳು ನಾರ್ವೀಜಿಯನ್ ಸಾಹಿತ್ಯದ ಮೊದಲ ಬೆಳವಣಿಗೆಗೆ ಬಹುಮಟ್ಟಿಗೆ ಕಾರಣವೆನಿಸಿವೆ.

ಹನ್ನೆರಡನೆಯ ಶತಮಾನದ ಕೊನೆಯಲ್ಲಿ ರಚಿತವಾದ ಮೂರು ಲ್ಯಾಟಿನ್ ಕೃತಿಗಳು ಸಾಹಿತ್ಯಕ್ಕಿಂತಲೂ ಹೆಚ್ಚಾಗಿ ಭಾಷಾದೃಷ್ಟಿಯಿಂದ ಮುಖ್ಯವಾದವು. ದಿ ಕಿಂಗ್ಸ್ ಮಿರರ್ (೧೨೫೦) ಎಂಬುದು ನೀತಿಭೋದಕ ಕವನ. ಇದರಲ್ಲಿ ಆ ಕಾಲದ ಜೀವನದ ರೀತಿನೀತಿಗಳ ನಿರೂಪಣೆಯಿದೆ. ಹದಿಮೂರನೆಯ ಶತಮಾನದಲ್ಲಿ ಲಾವಣಿ ಹೆಚ್ಚಾಗಿ ಬಳಕೆಯಲ್ಲಿತ್ತು. ಡ್ರೀಮ್ಸ್ ಬ್ಯಾಲಡ್ ಎಂಬುದು ಈ ಬಗೆಯ ಕಾವ್ಯದ ಉತ್ತಮ ನಿದರ್ಶನವಾಗಿ ಉಳಿದು ಬಂದಿದೆ. ಇದರಲ್ಲಿ ನಾಯಕ ಕನಸಿನಲ್ಲಿ ಕಂಡ ಪರ್ಗೇಟರಿ (ಶುದ್ಧಿಲೋಕ) ನರಕ ಮತ್ತು ಸ್ವರ್ಗಗಳ ಅನುಭವಗಳ ಕಥೆಯನ್ನು ಹೇಳುತ್ತಾನೆ. ಆ ಕಾಲದಲ್ಲಿ ಭಾಷಾಂತರಕ್ಕೂ ಪ್ರೋತ್ಸಾಹವಿತ್ತು. ಬೈಬಲಿನ ವ್ಯಾಖ್ಯಾನ ಸಹಿತವಾದ ಭಾಷಾಂತರ ಪ್ರಾರಂಭವಾದದ್ದು ಆಗಲೇ. ಎಕ್ಸೋಡಸ್ ಎಂಬ ೧೮ನೆಯ ಪ್ರಕರಣದವರೆಗೂ ಈ ಅನುವಾದ ಕಾರ್ಯ ಮುಂದುವರಿದು ನಿಂತುಹೋಯಿತು.

೧೪ರಿಂದ ೧೮ನೆಯ ಶತಮಾನದವರೆಗೂ ಡೇನಿಷ್ ಭಾಷೆಗೇ ಸಂಪೂರ್ಣ ಪ್ರಭುತ್ವವಿತ್ತು. ೧೭೮೦ರಲ್ಲಿ ನಾರ್ವೆ ಮತ್ತು ಡೆನ್‌ಮಾರ್ಕ್‌ಗಳ ಮಧ್ಯೆ ಒಂದು ರೀತಿಯ ರಾಜಕೀಯ ಒಗ್ಗಟ್ಟು ಉಂಟಾಯಿತು. ಈ ಕಾಲಕ್ಕೆ ಅಗ್ರಗಣ್ಯರಾದ ಸಾಹಿತಿಗಳು ಎಂದು ಹೆಸರು ಪಡೆದವರು ಪೀಟರ್ ಡಾಸ್ ಮತ್ತು ಲೂಡ್‌ವಿಗ್ ಹೋಲ್‌ಬರ್ಗ್. ಪೀಟರ್ ಡಾಸ್ ಒಬ್ಬ ಪಾದ್ರಿಯ ಜೀವನವನ್ನು ಬಣ್ಣಿಸುವ ಕವನವನ್ನು ರಚಿಸಿದ. ಹೋಲ್‌ಬರ್ಗ್‌ನನ್ನು ಆಧುನಿಕ ಡೇನಿಷ್ ಮತ್ತು ನಾರ್ವೀಜಿಯನ್ ಸಾಹಿತ್ಯದ ನಿರ್ಮಾಪಕನೆಂದು ಕರೆಯುತ್ತಾರೆ. ಆತ ಉತ್ತರದ ವೋಲ್ಟೇರ್ ಎಂದೂ ಖ್ಯಾತಿ ಪಡೆದ. ೧೭೬೦ರಲ್ಲಿ ಸ್ಥಾಪನೆಗೊಂಡ ರಾಯಲ್‌ನಾರ್ವೀಜಿಯನ್ ಸೊಸೈಟಿ ಆಫ್ ಲರ್‌ನಿಂಗ್ ಎಂಬ ಸಂಸ್ಥೆ ಸ್ಕ್ಯಾಂಡಿನೇವಿಯನ್ ಸಾಹಿತ್ಯದ ಮೇಲೆ ಜರ್ಮನ್ ಸಾಹಿತ್ಯ ಬೀರುತ್ತಿದ್ದ ಅತಿಯಾದ ಪ್ರಭಾವವನ್ನು ತಡೆಗಟ್ಟಲು ಪ್ರಯತ್ನ ಮಾಡಿತು.

ವರ್ಗ್‌ಲೆಂಡ್ ಯುಗ: ೧೮೧೪ರ ಅನಂತರ ಒಂದು ಸಂಭ್ರಮದ ಹೊಸ ಯುಗವೇ ಪ್ರಾರಂಭವಾಯಿತು. ಇಡೀ ದೇಶ ಸ್ವತಂತ್ರ ನಾರ್ವೀಜಿಯನ್ ಸಂಸ್ಕೃತಿಯನ್ನು ರೂಪಿಸುವ ಸಾಹಸದಲ್ಲಿ ತೊಡಗಿತು. ನವ ನಾರ್ವೀಜಿಯನ್ ಚಳವಳಿಯಲ್ಲಿ ಮಹತ್ತರವಾದ ಪಾತ್ರ ವಹಿಸಿದವರು ಹೆನ್ರಿಕ್ ವರ್ಗ್‌ಲೆಂಡ ಮತ್ತು ವೆಲ್‌ಹ್ಯಾವನ್. ಕೆಲವು ವಿಷಯಗಳಲ್ಲಿ ಇವರಿಬ್ಬರಿಗೂ ಅಭಿಪ್ರಾಯ ಭೇದವಿತ್ತು.

ಡೇನಿಷ್ ಅಂಶವನ್ನು ನಾರ್ವೀಜಿಯನ್ ಸಾಹಿತ್ಯದಿಂದ ತೊಡೆದು ಹಾಕಬಾರದೆಂದು ವೆಲ್‌ಹ್ಯಾವನ್ನನ ಧೋರಣೆಯಾಗಿತ್ತು. ಹೆನ್ರಿಕ್ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವಂಥ ಸಾಹಿತ್ಯ ನಿರ್ಮಾಣಕ್ಕೆ ಪ್ರಾಶಸ್ತ್ಯ ಕೊಟ್ಟರೆ ಮಾತ್ರ ಡೆನ್ಮಾರ್ಕಿನ ಸಂಬಂಧ ತೊರೆದುದು ಸಾರ್ಥಕವೆಂದು ವರ್ಗ್‌ಲೆಂಡ್ ಹೊಸ ಜಾಗೃತಿಯ ಕ್ರಾಂತಿವಾಣಿಯಾದ. ಕವಿಯೂ ವಾಗ್ಮಿಯೂ ಸಮಾಜ ಸುಧಾರಕನೂ ಸಹ ಆಗಿದ್ದ ಅವನು ೧೮೩೧ರಲ್ಲಿ ಕ್ರಿಯೇಷನ್, ಹ್ಯೂಮ್ಯಾನಿಟಿ, ಮೆಸಯ ಎಂಬ ಕೃತಿಗಳನ್ನು ರಚಿಸಿದ. ರಾಷ್ಟ್ರಪ್ರೇಮಿಗಳ ತಂಡದ ನಾಯಕನಾದ ವರ್ಗ್‌ಲೆಂಡ್ ಮತ್ತು ವಿದ್ಯಾವಂತವರ್ಗದ ಮುಖಂಡನಾದ ವೆಲ್‌ಹ್ಯಾವನ್– ಇದರ ನಡುವೆ ಒಂದು ಘರ್ಷಣೆಯೇ ನಡೆದು ವಾದವಿವಾದದ ಕೋಲಾಹಲವೇ ಉಂಟಾಯಿತು.

ರಾಷ್ಟ್ರೀಯ ರೊಮ್ಯಾಂಟಿಕ್ ಕಾವ್ಯ: ೧೯ನೆಯ ಶತಮಾನದ ಮಧ್ಯಕಾಲದ ಸಾಹಿತ್ಯದಲ್ಲಿ ಗತಕಾಲದ ನಾರ್ವೀಜಿಯನ್ ಸಂಸ್ಕೃತಿಯಲ್ಲಿ ವಿಶೇಷ ಆಸಕ್ತಿ ಕಂಡುಬಂದಿತು. ಈ ಪ್ರೇರಣೆಯಿಂದಾಗಿ ೧೮೪೧–೪೪ರ ಅವಧಿಯಲ್ಲಿ ನಾರ್ವೀಜಿಯನ್ ಜನಪದ ಕಥೆಗಳ ಸಂಗ್ರಹಗಳು ಹೊರಬಂದವು. ಪಿ.ಎನ್. ಮಂಚ್ (೧೮೧೦–೬೩) ಎಂಬಾತ ನಾರ್ವೀಜಿಯನ್ ಜನತೆಯ ಚರಿತ್ರೆಯನ್ನು ಕುರಿತು ಎಂಟು ಸಂಪುಟಗಳ ಬೃಹತ್ ಗ್ರಂಥಗಳನ್ನು ಬರೆದ. ಇದರ ಫಲವಾಗಿ ನಾರ್ವೆ ಜನತೆಯಲ್ಲಿ ದೇಶದ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಗಳ ಬಗ್ಗೆ ಹೊಸ ಪ್ರಜ್ಞೆ ಮೂಡಿತು. ಇದೇ ಕಾಲಕ್ಕೆ ಹಳ್ಳಿಗಾಡಿನ ಭಾಷೆಗಳನ್ನಾಧರಿಸಿ ಒಂದು ಸಾಹಿತ್ಯಿಕ ಭಾಷೆಯನ್ನು ರೂಪಿಸಲು ಲ್ಯಾಂಡ್ ಸ್ವಿಲ್ ಎಂಬ ಚಳವಳಿ ನಡೆಯಿತು. ಇದಕ್ಕೆ ಸ್ಫೂರ್ತಿಯನ್ನೂ ಬೆಂಬಲವನ್ನೂ ನೀಡಿದವ ಐವರ್ ಆಸೆನ್ (೧೮೧೩ ೯೬). ೫೦–೬೦ರ ದಶಕಗಳಲ್ಲಿದ್ದ ಲೇಖಕರ ಪೈಕಿ ಮುಂದೆ ನಾಟಕ ಕ್ಷೇತ್ರದಲ್ಲಿ ಹೆಸರು ಮಾಡಿದ ಇಬ್ಸನ್ ಮತ್ತು ಜಾರನ್‌ಸನ್ ಇಬ್ಬರೂ ಅದ್ವಿತೀಯರೆನಿಸಿ ಕೊಂಡರು. ಇದೇ ಸಮಯಕ್ಕೆ, ಆಗಿ ಹೋದ ವೀರರೂ ಸಾಹಸಿಗಳೂ ಹಾಗೂ ಹಳ್ಳಿಗಾಡಿನ ರೈತರ ಬದುಕಿನ ಬಗ್ಗೆ ವಿಶೇಷ ಗಮನ ಹರಿಯಿತು. ಆಸ್‌ಮಂಡ್ ಒಲಾಫ್‌ಸನ್ ವಿಂಜೆ (೧೮೧೮–೭೦) ಎಂಬಾತ ಚೆಲುವಾದ ಭಾವಗೀತೆಗಳನ್ನು ಬರೆದು ಹೆಸರುವಾಸಿಯಾದ.

ವಾಸ್ತವಿಕಾ ಪ್ರಧಾನ ಸಾಹಿತ್ಯ: ೧೮೫೦ರಲ್ಲಿ ವರ್ಗ್‌ಲೆಂಡಿನ ತಂಗಿಯಾದ ಕ್ಯಾಮಿಲಕೋಲೆಟ್ ಎಂಬಾಕೆ ಗವರ್ನರ್ಸ್ ಡಾಟರ್ಸ್ ಎಂಬ ಕಾದಂಬರಿಯನ್ನು ಬರೆದಳು. ಇದರಲ್ಲಿ ಸಮಾಜದಲ್ಲಿ ಹೆಂಗಸಿನ ಸ್ಥಾನಮಾನವನ್ನು ಕುರಿತ ಚರ್ಚೆಯಿದೆ. ಮದುವೆಯಾದ ಹೆಂಗಸು ಎದುರಿಸಬೇಕಾದ ಸಮಸ್ಯೆ ಸವಾಲುಗಳ ಕಡೆಗೂ ಈ ಕೃತಿ ಗಮನ ಹರಿಸಿದೆ. ಈ ಕಾದಂಬರಿ ಹೊಸ ಪ್ರಜ್ಞೆಯಿಂದ ಕೂಡಿದ ಒಂದು ಬರೆವಣಿಗೆಗೆ ನಾಂದಿಯಾಯಿತು. ಸಮಾಜದ ನಾನಾ ಸಮಸ್ಯೆಗಳನ್ನು ಕುರಿತು ಇಂಥ ಎಚ್ಚೆತ್ತ ಪ್ರಜ್ಞೆಯಿಂದ ಮತ್ತು ವಾಸ್ತವಿಕ ದೃಷ್ಟಿಯಿಂದ ಸಾಹಿತ್ಯ ನಿರ್ಮಾಣ

ಮಾಡಿದವರು ಇಬ್ಸನ್ ಮತ್ತು ಜಾರನ್‌ಸನ್. ಈ ಹೊತ್ತಿಗಾಗಲೇ ಬ್ರ್ಯಾಂಡ್ ಮತ್ತು ಪೀಟರ್‌ಗಿಂಟ್ ಎಂಬ ನಾಟಕಗಳನ್ನು ಬರೆದಿದ್ದ ಇಬ್ಸನ್ ಈ ಹೊಸ ಬಗೆಯ ಸಮಸ್ಯಾತ್ಮಕ ನಾಟಕಗಳ ಮಾಲೆಯ ಮೊದಲ ನಾಟಕವಾದ ಪಿಲ್ಲರ್ಸ್ ಆಫ್ ಸೊಸೈಟಿಯನ್ನು ರಚಿಸಿ (೧೮೭೭) ಸಾಹಿತ್ಯ ಲೋಕದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿದ, ಅವನ ನಾಟಕಗಳ ಉದ್ದೇಶ ಮಾನವ ಸಂಬಂಧಗಳನ್ನು ಒಳಹೊಕ್ಕು ಪರೀಕ್ಷಿಸುವುದು. ಸಮಾಜದ ಟೊಳ್ಳು-ಗಟ್ಟಿಗಳನ್ನು ಬೆದಕಿ ನೋಡುವುದು, ಮೌಢ್ಯ ಠಕ್ಕುಗಳನ್ನು ಅಪಹಾಸ್ಯಕ್ಕೆ ವಿಡಂಬನೆಗೆ ಗುರಿ ಮಾಡುವುದು. ಈ ಮೂಲಕ ಅವನು ಹೊಸ ಹೊಸ ಪ್ರಶ್ನೆಗಳನ್ನು ಕೇಳಿದನೇ ಹೊರತು ಅವಕ್ಕೆ ಉತ್ತರ ನೀಡುವ ಗೋಜಿಗೆ ಹೋಗಲಿಲ್ಲ. ಹೀಗೆ ಇಬ್ಸನ್ ನಾಟಕದ ತಂತ್ರ, ವಸ್ತುಗಳಿಗೆ ಹೊಸ ಸ್ವರೂಪವನ್ನೇ ಕೊಟ್ಟ ಮಹಾಮೇಧಾವಿ ಎನಿಸಿದ. ಜಾರನ್‌ಸನ್ ಬರೆದ ನಾಟಕ ಎ ಬ್ಯಾಂಕ್‌ರಪ್ಟ್‌ಸಿ ಎಂಬುದು ಹಳ್ಳಿಗಾಡಿನ ರೈತರ ಜೀವನವನ್ನು ಕುರಿತು ಬರೆದ ಯಶಸ್ವಿಯಾದ ನಾಟಕಪ್ರಯೋಗ. ರೈತರ ಸಹಜ ಸರಳ ಸುಂದರ ಬದುಕನ್ನು ಕುರಿತ ಯಥಾರ್ಥ ನಿರೂಪಣೆಗಳನ್ನು ಕೊಡುವ ಜಾರನ್‌ಸನ್‌ನ ಕೃತಿಗಳು ನಾರ್ವೀಜಿಯನ್ ಸಾಹಿತ್ಯಕ್ಕೆ ಹೊಸ ಸತ್ತ್ವವನ್ನು ಕೊಟ್ಟವು.

ನಾಲ್ವರು ಮಹನೀಯರು: ಜೋನ ಲೀ ಮತ್ತು ಅಲೆಕ್ಸಾಂಡ್‌ರ್ ಕೀಲಂಡ್ ಎಂಬ ಕಾದಂಬರಿಕಾರರು ಇಬ್ಸನ್ ಮತ್ತು ಜಾರನ್‌ಸನ್ನರ ಮಟ್ಟಕ್ಕೆ ಏರುವ ಸಾಹಿತಿಗಳೆಂದು ಭಾವಿಸಲಾಗಿದೆ. ಈ ನಾಲ್ವರನ್ನೂ ನಾರ್ವೀಜಿಯನ್ ಸಾಹಿತ್ಯದ ದಿಗ್ಗಜಗಳೆಂದು ಕರೆಯುವುದು ವಾಡಿಕೆ. ಈ ನಾಲ್ವರ ಪ್ರಸಿದ್ಧ ಕೃತಿಗಳನ್ನು ಹೆಸರಿಸುವುದು ಅಗತ್ಯ. ಇಬ್ಸನ್ನಿನ ಕೃತಿಗಳಲ್ಲಿ ಡಾಲ್ಸ್ ಹೌಸ್, ಘೋಸ್ಟ್ಸ್, ಎನ್ ಎನಿಮಿ ಆಫ್ ದಿ ಪೀಪಲ್ ಮತ್ತು ದಿ ವೈಲ್ಡ್ ಡಕ್ -ಎಂಬುವು ಮುಖ್ಯವಾದವು. ಇವು ಯೂರೋಪಿನ ನಾಟಕ ಇತಿಹಾಸದಲ್ಲೇ ಕ್ರಾಂತಿಯನ್ನುಂಟುಮಾಡಿದ ಮೌಲಿಕ ಕೃತಿಗಳು. ಜಾರನ್‌ಸನ್ ಬರೆದ ನಾಟಕಗಳಲ್ಲಿ ಮುಖ್ಯವಾದುವು ದಿ ನ್ಯೂಸಿಸ್ಟಮ್, ಎ ಗಾಂಟ್‌ಲೆಟ್, ಬಿಯಾಂಡ್ ಅವರ್ ಪವರ್. ಅವನು ದಿ ಹೆರಿಟೇಜ್ ಆಫ್ ದಿ ಕುರುಟ್ಸ್ ಎಂಬ ಕಾದಂಬರಿಯನ್ನೂ ಬರೆದ. ಗೋ ಅಹೆಡ್, ಒನ್ ಆಫ್ ಲೈಫ್ಸ್ ಸ್ಲೇವ್ಸ್ ಮತ್ತು ದಿ ಫ್ಯಾಮಿಲಿ ಅಟ್ ಲಿಲೀ ಎಂಬ ನಾಟಕಗಳನ್ನೂ ದಿ ವಿಷನರಿ ಎಂಬ ಕಾದಂಬರಿಯನ್ನು ಜೋನ ಲೀ ಎಂಬಾತ ಬರೆದ. ಕೀಲಂಡ್ ಎಂಬ ಸಾಹಿತಿ ತನ್ನ ಗಾರ್ಮೆನ್ ಅಂಡ್ ವರ್ಸ್, ವರ್ಕರ್ಸ್ ಮತ್ತು ಪಾಯಿಸನ್ ಎಂಬ ಕಾದಂಬರಿ ಗಳನ್ನು ತನ್ನದೇ ಆದ ಮೋಹಕ ಶೈಲಿಯಲ್ಲಿ ಬರೆದು ಪ್ರಸಿದ್ಧಿ ಪಡೆದ. ಆ ಕಾಲದ ಹ್ಯಾನ್ಸ್ ಜೇಯಗಿರ್ (೧೮೫೪-೧೯೧೦) ಎಂಬಾತ ಫ್ರಮ್ ದಿ ಕ್ರಿಶ್ಚಾನಿಯಾ ಬೋಹೀಮಿ (೧೮೮೫) ಎಂಬ ಕಾದಂಬರಿಯನ್ನು ಬರೆದು ದೊಡ್ಡ ಕೋಲಾಹಲವನ್ನೇ ಎಬ್ಬಿಸಿದ. ಸ್ವಚ್ಛಂದ ಲೈಂಗಿಕ ಜೀವನಕ್ಕೆ ಈ ಕಾದಂಬರಿ ಎಡೆಕೊಟ್ಟಿತೆಂಬ ಭಾವನೆ ಆ ಗುಲ್ಲಿಗೆ

ಕಾರಣವಾಯಿತು. ಸ್ವಯಂ ನಾಟಕಕಾರನೂ ವಿಮರ್ಶಕನೂ ಆಗಿದ್ದ ಆರ್ನಿಗರ್ ಬೋರಿ ಎಂಬಾತ ಪೆಸೆಂಟ್ಸ್ ಸ್ಟಡೀಸ್ ಎಂಬ ಕಾದಂಬರಿಯನ್ನು ಬರೆದದ್ದಲ್ಲದೆ ಹಾಫ್ಟುಸಾನ್ (೧೮೯೫) ಎಂಬ ಕಾವ್ಯಮಾಲೆಯನ್ನೂ ರಚಿಸಿದ.

ಹೊಸ ಅಸಂಬದ್ಧ ಸಾಹಿತ್ಯ: ೧೮೯೦ರ ಹೊತ್ತಿಗೆ ಯಾವ ಬಗೆಯ ಸಾಮಾಜಿಕ ಪ್ರಜ್ಞೆ ಮತ್ತು ಕಾಳಜಿಯನ್ನೂ ತೋರಿಸದ, ಅಸಂಬದ್ಧವಾಗಿ ಬರೆಯುವುದನ್ನೇ ಧೋರಣೆಯಾಗಿಟ್ಟುಕೊಂಡ ಒಂದು ಹೊಸ ಪ್ರವೃತ್ತಿ ತಲೆದೋರಿತು. ಮನುಷ್ಯ ಸುಪ್ತ ಸ್ತರಗಳಲ್ಲಿ ಹುದುಗಿರುವ ಭಾವನೆಗಳು ಯಾವ ಸಾಮಾಜಿಕ ಕಟ್ಟಳೆಗಾಗಲಿ ತರ್ಕಕ್ಕಾಗಲಿ ಒಳಪಡುವುದಿಲ್ಲವೆಂಬ ಸಿದ್ಧಾಂತವನ್ನು ಮಂಡಿಸುವ ಫ್ರಂಮ್ ದಿ ಅನ್‌ಕಾನ್‌ಷಸ್ ಲೈಫ್ ಆಫ್ ದಿ ಮೈಂಡ್ ಎಂಬ ಪ್ರಬಂಧವನ್ನು ನ್ಯೂಟ್ ಹ್ಯಾಮ್‌ಸನ್ ಎಂಬಾತ ೧೮೯೦ರಲ್ಲಿ ಬರೆದ. ಮಾನವ ವ್ಯಕ್ತಿತ್ವಕ್ಕೆ ವಿಶಿಷ್ಟವಾದ ಅಂಶಗಳಿಗೇ ಗಮನ ಕೊಡಬೇಕೇ ಹೊರತು ಸರ್ವೇ ಸಾಮಾನ್ಯವಾದ ಅಥವಾ ಮಾದರಿಯ ಚಿತ್ರಣಕ್ಕಲ್ಲವೆಂದು ಆತ ಭೋದಿಸಿದ.

ಈ ಸಿದ್ಧಾಂತದ ನಿದರ್ಶನವಾಗಿ ಆತ ಬರೆದ ಮೊಟ್ಟಮೊದಲ ಕಾದಂಬರಿಗಳು ಹಂಗರ್ (೧೮೯೦), ಮಿಸ್ಟರೀಸ್ (೧೮೯೨) ಮತ್ತು ಪ್ಯಾನ್ (೧೮೮೪) ಎಂಬುವು. ಅನಂತರ ಆತ ರಚಿಸಿದ ಕೃತಿಗಳಲ್ಲಿ ಸಂಪ್ರದಾಯಪ್ರಿಯತೆಯೂ ನೀತಿಬೋಧನೆಯೂ ಕಂಡುಬರುತ್ತವೆ. ಗ್ರೋತ್ ಆಫ್ ದಿ ಸಾಯಿಲ್ ಎಂಬುದು ಇವನ ಇನ್ನೊಂದು ಪ್ರಸಿದ್ಧ ಕೃತಿ. ತನ್ನ ಅತ್ಯುತ್ಕೃಷ್ಟ ಸಾಹಿತ್ಯ ನಿರ್ಮಾಣಕ್ಕೆ ಆತ ೧೯೨೦ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದ. ಆತನ ಅನೇಕ ಕಾದಂಬರಿಗಳು ಇಂಗ್ಲಿಷಿಗೆ ಭಾಷಾಂತರವಾಗಿವೆ.

ಭಾವಗೀತೆಯ ಕ್ಷೇತ್ರದಲ್ಲೂ ಈ ಸಮಯಕ್ಕೆ ಹೊಸ ಚಟುವಟಿಕೆಯೂ ಹುಮ್ಮಸ್ಸೂ ಕಂಡುಬಂದುವು. ಈ ಕ್ಷೇತ್ರದಲ್ಲಿ ಬಹಳ ಕೀರ್ತಿ ಪಡೆದ ಕವಿಯ ಹೆಸರು ಸಿಗ್‌ಬಜೋರನ್ ಅಬ್ಸ್ಟ್‌ಫೆಲ್ಡರ್ (೧೮೬೬-೧೯೦೦). ೧೮೯೦ರ ದಶಕದಲ್ಲಿ ಸುಂದರವಾದ ಭಾವಗೀತೆಗಳನ್ನು ರಚಿಸಿ ಹೆಸರು ಪಡೆದ ಇನ್ನೊಬ್ಬ ಕವಿ ನಿಲ್ಸ್‌ಕಾಲೆಟ್ ವೋಗ್ಟ್ (೧೮೬೪-೧೯೩೭). ನಾಟಕ ಬರೆದು ಬೆಳಕಿಗೆ ಬಂದ ಗುನ್ನಾರ್‌ಹೇಬರ್ (೧೮೫೭-೧೯೨೯) ಎಂಬುವನ ಕೃತಿಗಳಲ್ಲಿ ವಿಡಂಬನ ಕುಶಲತೆಯೂ ಕಾವ್ಯಾತ್ಮಕ ಸೊಗಸೂ ಸೇರಿಕೊಂಡಿವೆ. ದಿ ಬಾಲ್ಕನಿ, ಗೆರ್ಟ್ಸ್ ಗಾರ್ಡನ್, ಟ್ರಾಜಿಡಿ ಆಫ್ ಲೊವ್ ಎಂಬವು ಇವನಿಗೆ ಹೆಸರು ತಂದ ನಾಟಕಗಳು. ಇದೇ ಪೀಳಿಗೆಗೆ ಸೇರಿದ ಅತ್ಯಂತ ಸಮರ್ಥ ಬರೆಹಗಾರನೆಂದರೆ ಹ್ಯಾರ್‌ಸ್ಕಿಂಕ್ (೧೮೬೫-೧೯೨೦). ಇವನು ದಿಡ್ರೋವರ್ (೧೯೧೮-೧೯) ಎಂಬ ಮೂರು ಸಂಪುಟಗಳ ಕಾದಂಬರಿಯನ್ನೂ ರಚಿಸಿದ. ಚಿಂತನಶೀಲತೆ ಮತ್ತು ವಿಶ್ಲೇಷಣಾ ಶಕ್ತಿ ಇವನ ಕೃತಿಗಳಲ್ಲಿ ಕಂಡುಬರುವ ಪ್ರಧಾನ ಗುಣಗಳು.

೧೯ನೆಯ ಶತಮಾನದಲ್ಲಿ ಖ್ಯಾತಿಗಳಿಸಿದ್ದ ಮತ್ತೊಬ್ಬ ಕವಿ ಬ್ಯಾರ್ನ್‌ಸ್ಟೇರ್ನೆ ಬ್ಯಾನ್‌ಸನ್(೧೮೩೨–೧೯೧೦). ನಾಟಕಕಾರನೂ ಕಾದಂಬರಿಕಾರನೂ ರಾಜಕೀಯ ಮುಖಂಡನೂ ನಾರ್ವೀಜಿಯನ್ ರಂಗಭೂಮಿಯ ಮೇಲಿನ ಡೇನಿಷ್ ಪ್ರಭಾವವನ್ನು ಮುಕ್ತಗೊಳಿಸಲು ಹೋರಾಡಿದಂಥ ನಾಟಕ ವಿಮರ್ಶಕನೂ ಆಗಿದ್ದ ಈತ ೧೯೦೩ರಲ್ಲಿ ನೋಬೆಲ್ ಪಾರಿತೋಷಿಕವನ್ನು ಪಡೆದ. ಈತನ ಪೊಯೆಮ್ಸ್ ಅಂಡ್ ಸಾಂಗ್ಸ್ (೧೮೭೦) ಎಂಬ ಕವನ ಮತ್ತು ಹಾಡುಗಳ ಸಂಗ್ರಹದಲ್ಲಿ ನಾರ್ವೆಯ ರಾಷ್ಟ್ರಗೀತೆಯೂ ಸೇರಿದೆ. ಇವನ ಪ್ರಮುಖ ಕೃತಿಗಳಲ್ಲಿ ಮೇರಿ ಸ್ಟೂಆರ್ಟ್ ಇನ್ ಸ್ಕಾಟ್ಲೆಂಡ್ (೧೮೬೪), ದಿ ನ್ಯೂಲಿ ಮ್ಯಾರೀಡ್ (೧೮೬೫), ದಿ ಫಿಷರ್ ಮೇಯ್ಡ್ನ್ (೧೮೬೮), ಇ ಬ್ಯಾಂಕ್ರಪ್ಟ್‌ಸಿ (೧೮೭೫), ದಿ ಕಿಂಗ್ (೧೮೭೭), ಬಿಯಾಂಡ್ ಹ್ಯೂಮನ್ ಪವರ್ (೧೮೬೩), ಫ್ಲ್ಯಾಗ್ಸ್ ಆರ್ ಫ್ಲೈಯಿಂಗ್ ಇನ್ ದಿ ಟೌನ್ ಅಂಡ್ ಪೋರ್ಟ್ (೧೮೮೪)– ಮುಂತಾದವು ಸೇರಿವೆ.

೨೦ನೆಯ ಶತಮಾನ: ಈ ಶತಮಾನದ ಮೊದಲ ಭಾಗದಲ್ಲಿ ನಾಟಕಕ್ಕಿಂತ ಹೆಚ್ಚಾಗಿ ಕಾದಂಬರಿ ಕ್ಷೇತ್ರದಲ್ಲಿ ಉತ್ತಮ ಪ್ರಯೋಗಗಳು ನಡೆದವು. ಮುಖ್ಯವಾಗಿ ಹ್ಯಾಮ್ ಸುಮ್, ಕಿಂಕ್, ಸೀಗ್ರಿಡ್, ಊನ್‌ಸೆಟ್ ಮತ್ತು ಓಲಾರ್ ಡನ್ ಇವರ ಸಾಧನೆಗಳು ಗಣನೀಯವಾದವು. ಭಾವಗೀತೆಯ ಕ್ಷೇತ್ರದಲ್ಲೂ ಹೆಚ್ಚಿನ ಚಟುವಟಿಕೆ ಕಂಡುಬಂತು. ಈ ಕಾಲದ ಸಾಹಿತಿಗಳೆಲ್ಲರ ಧೋರಣೆ ಸಮಾನವಾಗಿರಲಿಲ್ಲ. ಆದರೂ ಅವರ ಕೃತಿಗಳಲ್ಲಿ ಹೆಚ್ಚಾಗಿ ಕಂಡುಬರುವುದು ಅಶಾಂತಿ ಹಾಗೂ ಸಂದೇಹ. ಇನ್ನೊಂದು ವಿಶೇಷವೆಂದರೆ ಅವರ ಬರೆವಣಿಗೆಗಳಲ್ಲಿ ಹೊಸದಾಗಿ ಎದ್ದು ಕಾಣುವ ಪ್ರಾದೇಶಿಕತೆ. ಒಬ್ಬೊಬ್ಬ ಸಾಹಿತಿ ನಾರ್ವೆಯ ಒಂದೊಂದು ಪ್ರದೇಶಕ್ಕೆ ತನ್ನ ಕೃತಿಗಳನ್ನು ಮೀಸಲಾಗಿಟ್ಟು ಅಲ್ಲಿಯ ಜನಜೀವನದ ಚಿತ್ರವನ್ನು ನಿರೂಪಿಸಿದ. ಹೀಗೆ ರಚಿತವಾದ ಹತ್ತು ಸಂಪುಟಗಳನ್ನೊಳಗೊಂಡ ದಿ ಡ್ಯಾನ್ಸ್ ತ್ರೂ ದಿ ಷ್ಯಾಡೋ ವರ್ಡ್ (೧೯೧೧–೨೪) ಎಂಬ ಕಾದಂಬರಿ ಕ್ರಿಸ್ಟೋಪೆಕ್ ಉಪ್‌ಡಾಲ್‌ನ (೧೮೭೮–೧೯೬೧) ಮಹತ್ತರ ಸಾಧನೆ. ಎರಡನೆಯದಾಗಿ ಕೈಗಾರಿಕೆಗಳು ಬೆಳೆಯುತ್ತ ಬಂದುದರ ಪರಿಣಾಮವಾಗಿ ಬಂಡವಾಳಗಾರ ಕಾರ್ಮಿಕ ವರ್ಗಗಳ ಮಧ್ಯೆ ಉಂಟಾದ ಘರ್ಷಣೆಗಳನ್ನು ಚಿತ್ರಿಸುವ ಪ್ರವೃತ್ತಿ ಕೆಲವು ಕಾದಂಬರಿಗಳಲ್ಲಿ ಕಾಣುತ್ತದೆ. ಆಸ್ಟುರ್ ಬ್ರ್ಯಾಟೆನ್ (೧೮೮೧–೧೯೩೯) ಎಂಬ ಕಾದಂಬರಿಕಾರ ಹೇಳಿ ಕೇಳಿ ಕಾರ್ಮಿಕ ವರ್ಗದ ಪ್ರತಿನಿಧಿಯಾಗಿ ಆತ ಬೆಳೆದ ವಾತಾವರಣವೂ ಎತ್ತಿಕೊಂಡ ಸಾಮಗ್ರಿಯೂ ಶ್ರಮಜೀವಿಗಳ ಹೋರಾಟವನ್ನು ಚಿತ್ರಿಸಲು ಸಹಾಯಮಾಡಿತು.

ಜೊಹಾನ್ ಫಾಲ್ಕ್‌ಬರ್‌ಸೆಟ್ (೧೮೭೯) ರೊರೊಸ್ ಪ್ರದೇಶದ ತಾಮ್ರದ ಗಣಿಗಳಲ್ಲಿ ೧೭–೧೮ನೆಯ ಶತಮಾನಗಳಲ್ಲಿ ದುಡಿದ ಕಾರ್ಮಿಕರ ಜೀವನವನ್ನು ಅತ್ಯಂತ ಸಹಾನುಭೂತಿಯಿಂದ ವಿವರಿಸಿದ. ಕ್ರಿಶ್ಚಿಯಾನುಸ್ ಸೆಕ್ಸ್‌ಟ್ಜಸ್ (೧೯೨೭–೩೫) ಮತ್ತು ಬ್ರೆಡ್ ಆಫ್ ನೈಟ್ ಎಂಬುವು ಅವನ ಮುಖ್ಯ ಕೃತಿಗಳು. ಕಾದಂಬರಿ

ರಚನೆಯಲ್ಲಿ ಅಸಾಧಾರಣ ಪ್ರತಿಭೆ ಮೆರೆದ ಇನ್ನಿಬ್ಬರು ಸೀಗ್‌ಫ್ರಿಡ್ ಊನ್‌ಸೆಟ್ ಮತ್ತು ಓಲಾರ್‌ಡನ್. ಊನ್‌ಸೆಟ್ ೧೯೨೮ರಲ್ಲಿ ನೊಬೆಲ್ ಬಹುಮಾನ ಪಡೆದಳು. ಈಕೆಯ ಕೃತಿಗಳಲ್ಲಿ ಕ್ರಿಸ್ಟಿನ್ ಲಾವ್ರೆನ್ಸ್ ಡ್ಯಾಟರ್ (೧೯೨೦-೨೨) ಎಂಬುದು ಅತ್ಯುತ್ತಮ ಕಾದಂಬರಿ ಎನಿಸಿಕೊಂಡಿದೆ. ರೋಮನ್ ಚರ್ಚಿಗೆ ಅಂದರೆ ಕ್ರಿಶ್ಚನ್ ಧರ್ಮಕ್ಕೆ ಮರೆಹೋಗುವುದೇ ಸಮಕಾಲೀನ ಸಮಸ್ಯೆಗಳಿಗೆ ಪರಿಹಾರವೆಂದು ಈಕೆ ಪ್ರತಿಪಾದಿಸಿದಳು. ಓಲಾನ್ ಡನ್ ರಚಿಸಿದ ದಿ ಮೆನ್ ಆಫ್ ಜೂವಿಕ್ ಎಂಬ ಅದ್ಭುತವಾದ ಸಾಹಸಕಥೆ. ಅನೇಕ ಸಂಪುಟಗಳನ್ನೊಳಗೊಂಡ ಬೃಹತ್ ಕೃತಿ. ಈ ಕಾದಂಬರಿಯ ಶೈಲಿಯಲ್ಲಿಯೂ ಭಾಷೆಯಲ್ಲಿಯೂ ನಾರ್ವೆ ನೆಲದ ಸೊಗಡಿದೆ. ಅಲ್ಲಿನ ಪ್ರತಿಯೊಂದು ವಾಕ್ಯದಲ್ಲಿಯೂ ಕವಿ ತನ್ನ ದೇಶದ ಸಂಸ್ಕೃತಿಯ ಸಾರವನ್ನು ಬಟ್ಟಿಯಿಳಿಸಿದ್ದಾನೆಂಬ ಕಾರಣದಿಂದ ಆ ಕೃತಿ ಜನಮನವನ್ನು ಸೂರೆಗೊಂಡಿತು. ಜೋಹೆನ್ ಬೋಜರ್ ಬರೆದ ದಿ ಲಾಸ್ಟ್ ಆಫ್ ದಿ ವೈಕಿಂಗ್ಸ್ ಎಂಬುದು ಜನಪ್ರಿಯತೆಗಳಿಸಿದ ಇನ್ನೊಂದು ಕಾದಂಬರಿ.

ಇತ್ತೀಚಿನ ನಾರ್ವೀಜಿಯನ್ ಬರೆಹಗಾರರು ಕಾದಂಬರಿ, ಕಾವ್ಯ ನಾಟಕ ಹೀಗೆ ನಾನಾ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿ ತಮ್ಮ ಬಹುಮುಖ ಸಾಮರ್ಥ್ಯವನ್ನು ತೋರಿದ್ದಾರೆ. ಭಾವಗೀತೆಯಲ್ಲಿ ಹೆಚ್ಚಿನ ಆಸಕ್ತಿ ಉಂಟಾದುದರ ಫಲವಾಗಿ ಆ ಕ್ಷೇತ್ರದಲ್ಲಿ ಒಂದು ಪುನರುಜ್ಜೀವನವೇ ಉಂಟಾಯಿತು. ಸೊಗಸಾದ ಭಾವಗೀತೆಗಳನ್ನು ಬರೆದು ವಿಶೇಷ ಮನ್ನಣೆಪಡೆದವರು ನಿಲ್ ಕಾಲೆಟ್ ವಾಜ್ಟ್, ಓಲಾಫ್ ಬುಕ್, ಹೆರ್ಮಾನ್ ವಿಲ್ಡೆನ್‌ವೆರ್ಗ್, ಆರ್ನೂಲಿ ಓವರ್‌ಲಾ, ಗುನ್ನಾರ್ ರವರಿ ಆ್ಯಂಡರ್‌ಸನ್ ಎಂಬುವವರು. ಎರಡನೆಯ ಮಹಾಯುದ್ಧದಲ್ಲಿ ನಾರ್ವೆ ಜರ್ಮನಿಯ ಆಕ್ರಮಣಕ್ಕೆ ತುತ್ತಾದಾಗ ಮೇಲೆ ಹೇಳಿದವರ ಪೈಕಿ ಹೆರ್‌ಮನ್ ವಿಲ್ಡೆನ್‌ವೆರ್ಗ್, ಆರ್ನೂಲಿ ಓವರಲಾ, ಗುನ್ನಾರ್ ಎಂಬುವರು ತಮ್ಮ ನಾಡಿನ ವಿಮೋಚನೆಗಾಗಿ ಕಾವ್ಯಶಕ್ತಿಯನ್ನು ಧಾರೆಯೆರೆದು ಅವರ ಸ್ವಾತಂತ್ರ್ಯಪ್ರೇಮವನ್ನೂ ಕೆಚ್ಚನ್ನೂ ವ್ಯಕ್ತಪಡಿಸಿದರು; ಕಾವ್ಯಕ್ಕೆ ಕ್ಷಾತ್ರ ತೇಜಸ್ಸನ್ನು ಕೊಟ್ಟರು. ಒಟ್ಟಿನಲ್ಲಿ ಜಾನಪದ ಸತ್ತ್ವ ಹಾಗೂ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಸಮಾಜದ ಸಮಸ್ಯೆಗಳ ಪ್ರಜ್ಞೆ ಇವೆರಡೂ ಈ ಸಾಹಿತಿಗಳ ಕೃತಿಗಳಲ್ಲಿ ಕಂಡುಬರುವ ಮುಖ್ಯ ಗುಣಗಳು. (ಎಚ್.ಜಿ.ಎಸ್.ಆರ್.)

ಪ್ಯಾಬ್ಲೊ ನೆರೂದ (೧೯೦೪-೧೯೭೩)

ಚಿಲಿ ದೇಶದ ಬಹು ದೊಡ್ಡ ಕವಿ. ೨೦ನೆಯ ಶತಮಾನದ ಸ್ಪ್ಯಾನಿಷ್ ಅಮೆರಿಕನ್ ಕವಿಗಳಲ್ಲಿ ಅತ್ಯಂತ ಶ್ರೇಷ್ಠನಾದವ. ಸ್ವಂತಿಕೆ, ಸೃಜನ ಸಮೃದ್ಧಿಗಳುಳ್ಳ ಪ್ರತಿಭಾವಂತ. ಬರೆದುದು ಮಾತೃಭಾಷೆ ಸ್ಪ್ಯಾನಿಷ್‌ನಲ್ಲಿ. ೧೯೦೪ನೆಯ ಜುಲೈ ೧೨ರಂದು ಮಧ್ಯ ಚಿಲಿಯ ಪರ್‍ರಲ್ ಎಂಬ ಒಂದು ಸಣ್ಣ ಊರಿನಲ್ಲಿ ಹುಟ್ಟಿದ. ತಂದೆ ಜೋಸ್ ಡೆಲ್ ಕಾರ್ಮೆನ್ ರೆಯಿಸ್ ರೈಲ್ವೆ ಕಾರ್ಮಿಕ. ತಾಯಿ ರೋಸಾ ಬಾಸೋಲ್ಟೊ. ಈತನ ಹುಟ್ಟು ಹೆಸರು ನೆಫ್ತಾಲಿ ರಿಕಾರ್ಡೊ ರೆಯಿಸ್ ಬೆಸುಯಾಲ್ಟೊ.

ಹುಟ್ಟಿದ ಒಂದೇ ತಿಂಗಳೊಳಗೆ ತಾಯಿಯನ್ನು ಕಳೆದುಕೊಂಡ. ಎರಡು ವರ್ಷಗಳ ಅನಂತರ ರೆಯಿಸ್ ಕುಟುಂಬ ದಕ್ಷಿಣದ ಹೊಸನಾಡಿಗೆ ಹೋಗಿ ಟೆಮುಕೊ ಎಂಬ ಊರಿನಲ್ಲಿ ನೆಲೆಸಿತು. ತಂದೆ ಮರು ಮದುವೆಯಾದ.

೧೯೧೦ರಲ್ಲಿ ಟೆಮುಕೊದಲ್ಲೇ ಹತ್ತು ವರ್ಷಗಳ ಶಾಲಾವ್ಯಾಸಂಗವನ್ನು ಮುಗಿಸಿದ. ಹತ್ತು ವರ್ಷದವನಾಗಿದ್ದಾಗಲೇ ಕವಿತೆಗಳನ್ನು ರಚಿಸತೊಡಗಿದ. ಆದರೆ ತಂದೆಯ ಹೆದರಿಕೆಗೆ ಗುಟ್ಟಾಗಿ ಬರೆಯುತ್ತಿದ್ದ. ನೆರೂದನನ್ನು ಚೆಕ್ ಕವಿ ಮತ್ತು ನಾಟಕಕಾರ ಯಾನ್ ಬಹುವಾಗಿ ಮೆಚ್ಚಿಕೊಂಡಿದ್ದರ ಗುರುತಾಗಿ ತನ್ನ ಕಾವ್ಯನಾಮವನ್ನು ಪ್ಯಾಬ್ಲೊ ನೆರೂದ ಎಂದಿಟ್ಟುಕೊಂಡು ಮುಂದೆ ೧೯೪೬ರಲ್ಲಿ ಆ ಹೆಸರನ್ನೇ ಕಾನೂನುಬದ್ಧವಾಗಿ ತನ್ನ ಹೆಸರಾಗಿ ಸ್ಥಿರೀಕರಿಸಿಕೊಂಡ.

ಈತನ ಜೀವನದ ಪ್ರಥಮ ಮಹತ್ತರ ಘಟನೆಯೆಂದರೆ ೧೨ನೆಯ ವಯಸ್ಸಿನಲ್ಲಿ ಚಿಲಿಯ ಸುಪ್ರಸಿದ್ಧ ಕವಿ ಗೇಬ್ರಿಯೆಲಾ ಮಿಸ್ತ್ರಾಲ್‌ನ ಪರಿಚಯ ಪಡೆದದ್ದು. ಅದರಿಂದ ಪ್ರಾಚೀನ ಮಹಾಕವಿಗಳ ಕಾವ್ಯ ಪರಿಚಯವಾಯಿತು. ಈತನ ಕಾವ್ಯ ಮನೋಧರ್ಮದ ವಿಕಾಸಕ್ಕೆ ಈ ಪ್ರಭಾವ ತುಂಬ ಸಹಕಾರಿಯಾಯಿತು. ನೆರೂದನದು ಮೊದಲಿನಿಂದಲೂ ಕ್ರಾಂತಿಕಾರಕ ಪ್ರವೃತ್ತಿ. ಪೀಟರ್ ಕ್ರೊಪೊಟ್ಕಿನ್ನನ ಪ್ರಭುತ್ವರಹಿತ ಕಮ್ಯೂನಿಸಂ ಸಿದ್ಧಾಂತವನ್ನು ಬೆಂಬಲಿಸುತ್ತಿದ್ದ ಜೀನ್ ಗ್ರೇವನ ಗ್ರಂಥಗಳನ್ನೆಲ್ಲ ಭಾಷಾಂತರಿಸಿದ. ನಿರಂಕುಶ ಪ್ರಭುತ್ವ ಇಲ್ಲವೆ ಅಧಿಕಾರಶಾಹಿಗಳಿಂದ ಮುಕ್ತವಾದ ಸಮಾಜ ಸ್ಥಾಪನೆಗಾಗಿ ಉಗ್ರ ಹೋರಾಟಗಾರನಾದ.

೧೯೨೧ರಲ್ಲಿ ರಾಜಧಾನಿ ಸ್ಯಾಂಟೀಯಾಗೊ ನಗರಕ್ಕೆ ಬಂದು ಚಿಲಿ ವಿಶ್ವವಿದ್ಯಾನಿಯದ ಪೆಡಗಾಗಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಫ್ರೆಂಚನ್ನು ವಿಶೇಷ ಅಧ್ಯಯನಕ್ಕಾಗಿ ಆರಿಸಿಕೊಂಡು ಪದವಿ ತರಗತಿಗೆ ಸೇರಿದ. ಆದರೆ ಕಾವ್ಯದ ಸೆಳೆತದಲ್ಲಿ ವ್ಯಾಸಂಗ ಹಿಂದೆ ಬಿತ್ತು. ಕವನ ರಚನೆ, ಸಾಹಿತ್ಯಚರ್ಚೆಗಳಲ್ಲೇ ಮುಳುಗಿದ. ೧೯೨೩ರಲ್ಲಿ ಕ್ರೆಪುಸ್ಕುಲೇರಿಯಾ ಎಂಬ ತನ್ನ ಪ್ರಥಮ ಕವನ ಸಂಕಲನವನ್ನು ಸ್ವಂತ ವೆಚ್ಚದಲ್ಲಿ ಪ್ರಕಟಿಸಿದ. ಅದರ ಮರು ವರ್ಷ ಅದೇ ಅಸಂಖ್ಯಾತ ವಾಚಕರನ್ನು ಆಕರ್ಷಿಸಿದ ಟ್ವೆಂಟಿ ಲವ್ ಪೊಯೆಮ್ಸ್ ಅಂಡ್ ಎ ಸಾಂಗ್ ಆಫ್ ಡಿಸ್ಪೇರ್– ಎಂಬ ಕವನ ಸಂಕಲನ; ಕವಿಗೆ ಪ್ರಚಂಡ ಜನಪ್ರಿಯತೆಯನ್ನು ತಂದ ಕೃತಿ. ಸ್ಪೇನ್ ಒಂದರಲ್ಲೇ ಇದರ ಎರಡೂವರೆ ಲಕ್ಷ ಪ್ರತಿಗಳು ಮಾರಾಟವಾದವು. ಈಗಲೂ ಇದು ಅತ್ಯಂತ ಜನಪ್ರಿಯವಾದ ಕೃತಿ ಎನಿಸಿದೆ. ೧೯೬೯ರಲ್ಲಿ ಇದರ ಇಂಗ್ಲಿಷ್ ಭಾಷಾಂತರ ಬಂತು. ಕವಿ ಪ್ರಖ್ಯಾತನಾದ. ಈತನ ಕವನಗಳು ಸಹಸ್ರಾರು ನೊಂದಜೀವಿಗಳಿಗೆ ಕಲ್ಯಾಣದ ಹೊಸ ಭರವಸೆಯನ್ನು ತಂದವು. ಕೇವಲ ಇಪ್ಪತ್ತು ವರ್ಷ ವಯಸ್ಸಿನಲ್ಲೇ ನೆರೂದ ಚಿಲಿಯ ಪ್ರಮುಖ ಕವಿಯೆನಿಸಿದ. ಫ್ರೆಂಚ್ ವ್ಯಾಸಂಗ ಕೈಬಿಟ್ಟಿತು. ಕಾವ್ಯ ಕೈಬಿಟ್ಟಿತು. ಅಟೆಂಪ್ಟ್ ಆಫ್ ದಿ ಇನ್‌ಫನಿಟ್ ಮ್ಯಾನ್; ರಿಂಗ್ಸ್; ದಿ ಎಂಥೂಸಿಯಾಸ್ಟಿಕ್ ಸ್ಲಿಂಗ್ ಷೂಟರ್ ಮುಂತಾದ ಕವನ ಸಂಕಲನಗಳು ಬಂದವು.

೧೯೨೭ರಲ್ಲಿ ರಂಗೂನಿಗೆ ಚಿಲಿಯ ಗೌರವ ಕಾನ್ಸಲ್ ಆಗಿ ನೇಮಕಗೊಂಡ. ಅಲ್ಲಿಂದ ರಾಯಭಾರಿ ಜೀವನ ಆರಂಭವಾಯಿತು. ಕೊಲಂಬೊ, ಜಕಾರ್ತ, ಜಾವಾಗಳಲ್ಲಿ ರಾಯಭಾರಿಯಾಗಿದ್ದಾಗ ಜಾವಾದಲ್ಲಿ ಮೇರಿಯಾ ಹಾಗೆನಾರ್ ಎಂಬ ಒಬ್ಬ ಡಚ್ ಹುಡುಗಿಯನ್ನು ಮದುವೆಯಾದ. ಅನಂತರ ಸಿಂಗಪುರದಲ್ಲಿದ್ದಾಗ ತನ್ನ ರಾಯಭಾರಿ ಜೀವನದ ಅನುಭವಗಳನ್ನೆಲ್ಲ ಸ್ವಾರಸ್ಯವಾಗಿ ಬರೆದಿಟ್ಟ. ನೆರೂದನ ದಾಂಪತ್ಯ ಜೀವನ ಸುಖಮಯವಾಗಲಿಲ್ಲ. ತೀವ್ರವಾದ ವ್ಯಾಕುಲ ಹಾಗೂ ಏಕಾಂಗಿತನಗಳಲ್ಲಿ ನರಳಿದ. ಜೋಸಿ ಬ್ಲಿಸ್ ಎಂಬ ಬರ್ಮೀ ಹುಡುಗಿಯೊಂದಿಗೆ ಬೆಳೆದ ಅನುರಾಗದಲ್ಲಿ ಈ ವ್ಯಥೆ ಮರೆಯಿತು. ದಕ್ಷಿಣ ಏಷ್ಯದಲ್ಲಿ ಕಳೆದ ದಿನಗಳಲ್ಲೇ ರೆಸಿಡೆನ್ಸ್ ಆನ್ ಅರ್ತ್ ಎಂಬ ಕಾವ್ಯವನ್ನು ರಚಿಸಿದ.

೧೯೩೩ರಲ್ಲಿ ಬ್ಯೂನಸ್ ಐರಿಸ್‌ನಲ್ಲಿ ಚಿಲಿಯ ಕಾನ್ಸಲ್ ಆದ. ಆಗಲೇ ಸ್ಪ್ಯಾನಿಷ್ ಕವಿ ಫ್ರೆಡ್ರಿಕೊ ಗಾರ್ಸಿಯಾ ಲೋರ್ಕಾನ ಪರಿಚಯವಾಯಿತು. ಮರುವರ್ಷ ಬಾರ್ಸಿಲೋನಾಕ್ಕೆ ಅನಂತರ ಮ್ಯಾಡ್ರಿಡ್‌ಗೆ ವರ್ಗವಾಯಿತು. ಅಲ್ಲಿ ಡೇಲಿಯಾ ಡೆಲ್ ಕ್ಯಾರಿಲ್ ಎಂಬಾಕೆಯನ್ನು ಮತ್ತೆ ಮದುವೆಯಾದ.

ಇದ್ದಕ್ಕಿದ್ದಂತೆ ಯುರೋಪಿನ ಸಾಹಿತ್ಯಾಕಾಶದಲ್ಲಿ ನವೋಜ್ವಲ ತಾರೆಯಾಗಿ ಮೂಡಿದ ನೆರೂದನನ್ನು ಸ್ಪೇನಿನ ಬುದ್ಧಿಜೀವಿಗಳೆಲ್ಲ ನಮನ, ಅಭಿನಂದನ ಗ್ರಂಥಗಳನ್ನರ್ಪಿಸಿ ಸ್ವಾಗತಿಸಿದರು.

೧೯೩೬ರಲ್ಲಿ ನಡೆದ ಸ್ಪೇನಿನ ಅಂತರ್ಯುದ್ಧ ನೆರೂದನ ಕಾವ್ಯಜೀವನಕ್ಕೆ ಭಂಗ ತಂದಿತು. ಕವಿಯ ಪರಮ ಮಿತ್ರನಾದ ಗಾರ್ಸಿಯ ಲೋರ್ಕಾ ಮರಣದಂಡನೆಗೆ ಗುರಿಯಾದುದು, ಮಿಗ್ಯುವೆಲ್ ಹೆರ್ನಾಂಡೆಜ್ ಸೆರೆಯಾದುದು, ನೆರೂದನ ರಾಜಕೀಯ ಧೋರಣೆಯನ್ನು ನಿರ್ಣಯಿಸಿದವು.

ಬದಲಾಯಿತು ಲೋಕ, ಅಂತೆಯೆ ನನ್ನೀ ಕಾವ್ಯ;
ಈ ಸಾಲುಗಳ ಮೇಲೆ ಬಿದ್ದ ನೆತ್ತರ
ಆಯಿತು ಚಿರಂತರ ಉತ್ತರೋತ್ತರ
ಅಳಿಸಲಾರದು ಇದು ಎಂದೆಂದೂ
ಪ್ರೇಮದಂತೆ ಇದು ಸ್ಥಿರ

ಎಂದು ಕವಿ ತನ್ನ ನಿರ್ಧಾರವನ್ನು ಕಾವ್ಯದಲ್ಲಿ ಬಿಂಬಿಸಿದ. ಈತನ ಜೀವನದಲ್ಲಿ ಇದೊಂದು ಮಹತ್ತರ ತಿರುವು. ಅಲ್ಲಿಂದ ಮುಂದೆ ಈತನ ಕಾವ್ಯ ಸಾಮಾಜಿಕ ಮತ್ತು ರಾಜಕೀಯ ನ್ಯಾಯಕ್ಕಾಗಿ ಹೋರಾಡಲು ಮೀಸಲಾಯಿತು. ಸ್ಪೇನ್ ಇನ್ ದಿ ಹಾರ್ಟ್ ಕವನ ಬಂದುದು ಆಗಲೇ.

೧೯೩೮ರಲ್ಲಿ ಈತ ಚಿಲಿಗೆ ಹಿಂತಿರುಗಿದ. ಮತ್ತೆ ಸರ್ಕಾರ ಈತನನ್ನು ಮೆಕ್ಸಿಕೋಗೆ ರಾಯಭಾರಿಯಾಗಿ ಕಳಿಸಿತು. ಅಲ್ಲಿ ಈತನ ಬಾಳಿನ ಇನ್ನೊಂದು ಉತ್ಕಟ ಕಾವ್ಯಸೃಷ್ಟಿಯ ಕಾಲ ಆರಂಭವಾಯಿತು. ಎರಡನೆಯ ಮಹಾಯುದ್ಧ

ಹಾಗೂ ಮೆಕ್ಸಿಕೋದ ಫ್ರೆಸ್ಕೊ ಚಿತ್ರಗಳ ಸ್ಫೂರ್ತಿಯಿಂದ ಕಾವ್ಯ ಬರತೊಡಗಿತು. ೧೯೪೫ರಲ್ಲಿ ಸೆನೆಟ್ಟಿಗೆ ಚುನಾಯಿತನಾದ. ಪ್ರೆಸಿಡೆಂಟ್ ವಿಡೇಲಾನೊಂದಿಗೆ ವಿರಸವಾಗಿ ಮೆಕ್ಸಿಕೋಗೆ ಹಿಂತಿರುಗಿದ. ೧೯೪೮ರಲ್ಲಿ ಪ್ಯಾರಿಸ್ ಶಾಂತಿ ಸಮ್ಮೇಳನಕ್ಕೆ ಹೋದ. ೧೯೪೯ರಲ್ಲಿ ಇಟಲಿ, ಫ್ರಾನ್ಸ್, ಸೋವಿಯೆತ್ ದೇಶ, ಚೀನದೇಶಗಳಲ್ಲಿ ಪ್ರವಾಸ ಮಾಡಿದ. ೧೯೫೩ರಲ್ಲಿ ಚಿಲಿಗೆ ಹಿಂದಿರುಗಿದ. ೧೯೫೯ರಲ್ಲಿ ಚಿಲಿ ಬರೆಹಗಾರರ ಒಕ್ಕೂಟದ ಅಧ್ಯಕ್ಷನಾದ. ಚಿಲಿಯಲ್ಲಿ ಬಲಪಕ್ಷದವರ ಸರ್ಕಾರ ಬಂದಾಗ ಕಮ್ಯೂನಿಸ್ಟನಾಗಿದ್ದ ಕವಿ ತಲೆಮರೆಸಿಕೊಳ್ಳಬೇಕಾಯಿತು. ಆದರೆ ಈ ಅಜ್ಞಾತವಾಸ ಕಾವ್ಯ ಕುಡಿವರಿದು ಬೆಳೆಯಲು ಅನುಕೂಲವಾಯಿತು. ಕ್ಯಾಂಟೊ ಜನರಲ್ ಕಾವ್ಯ ಇದೇ ಕಾಲದಲ್ಲಿ ರಚಿತವಾಯಿತು. ಅಮೆರಿಕ ಭೂಖಂಡವನ್ನು ಕುರಿತ ಅತಿ ಮಹತ್ತ್ವದ ಮಹಾಕಾವ್ಯ ಇದು. ೧೯೫೨ರಲ್ಲಿ ಚಿಲಿ ದೇಶದವಳೇ ಆದ ಮ್ಯಾಟಿಲ್ಡಾ ಉರೂಟಿಯಾಳೊಂದಿಗೆ ಮದುವೆ ಆಯಿತು. ಇದು ಮೂರನೆಯ ಮದುವೆ. ಇಸ್ಲಾನೆಗ್ರಾದಲ್ಲಿ ಮನೆ, ಸ್ಯಾಂಟೀಯಾಗೊದಲ್ಲಿ ಸ್ಯಾನ್ ಕ್ರಿಸ್ಟೋಬೆಲ್ ಬೆಟ್ಟದ ಬದಿಯ ಲಾ ಖ್ಯಾಸ್ಕೋನಾ ಎಂಬ ಮನೆ, ವ್ಯಾಲ್ಪರೈಸೋನಲ್ಲಿ ಲಾ ಸೆಬಾಸ್ಟಿಯಾನಾ ಎಂಬ ಮನೆ–ಹೀಗೆ ಕವಿಯ ಮನೆಗಳು ಮೂರು. ಇವು ಮೂರೂ ಮನೆಗಳು ಕವಿಯ ಒಳ್ಳೆಯ ಅಭಿರುಚಿಗೆ ಮಾದರಿಯಾಗಿದ್ದವು. ಸೊಗಸಾದ, ಅಪೂರ್ವವಾದ ಕಲಾಕೃತಿಗಳ ಸಂಗ್ರಹ ಕವಿಯ ಹವ್ಯಾಸವಾಗಿತ್ತು. ತನ್ನ ಪ್ರಿಯಮಿತ್ರ ಆಲೆಂಡ್ ಚಿಲಿಯ ಅಧ್ಯಕ್ಷನಾದಾಗ ನೆರೂದ ಪ್ಯಾರಿಸ್‌ನಲ್ಲಿ ೧೯೭೨ರವರೆಗೂ ಚಿಲಿಯ ರಾಯಭಾರಿಯಾಗಿದ್ದ. ೧೯೬೦–೬೬ರ ಅವಧಿಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ, ಕ್ಯೂಬಾದಲ್ಲಿ ಪ್ರವಾಸ ಮಾಡಿದ.

ಆಲೆಂಡ್‌ನ ರಾಜಕೀಯಹತ್ಯೆ ಕವಿಯ ಮನಸ್ಸಿಗೆ ದೊಡ್ಡ ಆಘಾತ ಉಂಟುಮಾಡಿತು. ಕ್ಯಾನ್ಸರ್ ರೋಗಕ್ಕೆ ಬಲಿಯಾಗಿ ಸ್ವದೇಶಕ್ಕೆ ಹಿಂತಿರುಗಿದ ಕವಿ ಕೆಲವೇ ದಿನಗಳಲ್ಲಿ ಅಂದರೆ ೧೯೭೩ರ ಸೆಪ್ಟೆಂಬರ್ ೨೩ರಂದು ಆಸ್ಪತ್ರೆಯಲ್ಲಿ ಮರಣಹೊಂದಿದ. ಫ್ಯಾಸಿಸ್ಟ್ ಸರ್ಕಾರದ ದಮನಕಾರಿ ಕೃತ್ಯಗಳೇ ಕವಿಯ ಸಾವನ್ನು ಕ್ಷಿಪ್ರಗೊಳಿಸಿದವು. ಸತ್ತ ಮೇಲೂ ಕವಿಯ ಮನೆಮಠಗಳನ್ನೆಲ್ಲ ಜಪ್ತಿ ಮಾಡಿ ಸಿಕ್ಕ ಅನೇಕ ಕೃತಿಗಳ ಹಸ್ತಪ್ರತಿಗಳನ್ನು ಸರ್ಕಾರದ ಸೇನೆ ಸುಟ್ಟುಹಾಕಿತು.

ನೆರೂದನ ಒಟ್ಟು ಕೃತಿಗಳು ಅರವತ್ತು. ಇವೆಲ್ಲದರ ಮೊದಲ ಸಮಗ್ರ ವಿಮರ್ಶಾ ಸಮೀಕ್ಷೆಯಾದ ಅಮೇಡೊ ಅಲೋನ್ಸೊನ ಪೊಯೆಸಿಯಾ ಯಿ ಎಸ್ಟಿಲೊ ಎನ್ ಪ್ಯಾಬ್ಲೊ ನೆರೂದ ಎಂಬ ಗ್ರಂಥ ೧೯೪೦ರಲ್ಲಿ ಪ್ರಕಟವಾಯಿತು. ೧೯೫೭ರಲ್ಲಿ ನೆರೂದ ಕಾವ್ಯದ ಮೇಲೆ ಮತ್ತೆರಡು ವಿಮರ್ಶಾಗ್ರಂಥಗಳು ಬಂದವು. ಒಂದು–ಮೇರಿಯೊ ಜಾರ್ಜ್ ಡಿ ಲೆಲಿಸ್‌ನ ಪ್ಯಾಬ್ಲೊ ನೆರೂದ ಎಂಬ ಗ್ರಂಥ. ಎರಡು–ರಾಬರ್ಟೊ ಸಲಮಾ ಬರೆದ ಪ್ಯಾಬ್ಲೊ ನೆರೂದನ ಕಾವ್ಯ ವಿಮರ್ಶೆ ಎಂಬ ಗ್ರಂಥ. ರೆಸಿಡೆನ್ಸ್ ಆನ್ ಅರ್ತ್–ಕಾವ್ಯದ ವಿವರವಾದ ವ್ಯಾಖ್ಯಾನ,

ವಿಮರ್ಶೆಗಳೂ ಬಂದಿವೆ. ಮಾರ್ಗರಿಟಾ ಎಗ್ಯೂರೆ ಬರೆದ ನೆರೂದನ ಜೀವನ ಚರಿತ್ರೆ 'ಪ್ರತಿಭಾವಂತ ನೆರೂದ' ಎಂಬುದೇ ಮೊದಲನೆಯದು (೧೯೬೭). ಇದರಲ್ಲಿ ಎಲ್ಲ ವಿವರಗಳೂ ಕಾಲಕ್ರಮದಲ್ಲಿ ಇವೆ. ನೆರೂದನ ಆತ್ಮಕಥೆಯೂ ಇದೆ.

ಪ್ರಚಂಡ ಜನಪ್ರಿಯತೆಯನ್ನು ಗಳಿಸಿದ ಪ್ರಭಾವಶಾಲಿ, ಶಕ್ತಿಶಾಲಿ, ಸೃಜನಶೀಲ ಕವಿ ನೆರೂದ. ಈತನದು ನಿರಂತರವಾದ ಸಮೃದ್ಧವಾದ ಬರೆಹ. ಈತನ ಕಾವ್ಯ, ಬಾಳಿನಲ್ಲಿ ಪಡೆದ ಅನುಭವಗಳ ಸಾರವನ್ನು ಹೀರಿ ಕವಿಯ ಚೇತನ ವಿಕಾಸಗೊಂಡಂತೆ, ಬದಲಾಗುತ್ತ ಹೋಯಿತು. ಶೃಂಗಾರಮಯವಾಗಿದ್ದ ಕಾವ್ಯ ಕಾಲ ಕಳೆದಂತೆ, ಮನೋಭಾವ ಪಕ್ವವಾದಂತೆ ಪಾರಮಾರ್ಥಿಕ ಗಂಭೀರತೆಯನ್ನು ತಳೆಯಿತು. ಸುತ್ತಣ ಲೋಕದ ವಿಷಮತೆ, ಅನ್ಯಾಯಗಳಿಗೆ ಸಿಡಿದೆದ್ದು ಸಾಮಾಜಿಕ ನ್ಯಾಯ ರಾಜಕೀಯ ಧರ್ಮಗಳಿಗಾಗಿ ಮೊಳಗಿದ ಕಾವ್ಯವಾಣಿ, ಲೋಕವ್ಯವಹಾರಗಳಿಂದ ಒಳಗೆಳೆದು ಕೊಂಡ ಮನಸ್ಸು ಅಂತರ್ಮುಖಿಯಾದಾಗ ಜೀವನದ ನಿಗೂಢ ಸತ್ಯಗಳನ್ನರಸ ತೊಡಗಿತು. ರೆಸಿಡೆನ್ಸ್ ಆನ್ ಅರ್ತ್ ಕಾವ್ಯದಲ್ಲಿ ಇದು ವ್ಯಕ್ತವಾಗುತ್ತದೆ. ಅಲ್ಲಿನ ಅನೇಕ ಕವನಗಳು ಒಗಟಿನಂತಿರುವ ಬೆಡಗಿನ ವಚನಗಳಾಗಿವೆ. ನಿರಂತರ ಬೆಳವಣಿಗೆ, ನಿತ್ಯನೂತನತೆ, ವೈವಿಧ್ಯ-ಇವು ನೆರೂದನ ಕಾವ್ಯದ ಲಕ್ಷಣಗಳು. ೧೯೩೦ರ ಅನಂತರ ಕಮ್ಯೂನಿಸ್ಟ್ ತತ್ತ್ವಗಳಿಗೆ ಮಾರುಹೋಗಿ ಕಾವ್ಯವೆಲ್ಲ ಪೂರ್ಣವಾಗಿ ಕಮ್ಯೂನಿಸ್ಟ್ ದೃಷ್ಟಿಯನ್ನು ತಳೆಯಿತು. ವ್ಯಕ್ತಿನಿಷ್ಠ ಭಾವ ಮತ್ತು ಇಂದು ಜಗತ್ತನ್ನೆಲ್ಲ ಆವರಿಸಿರುವ ತೀವ್ರ ವಿಷಾದ ಭಾವ ಈತನ ಕವನಗಳ ಸಾಮಾನ್ಯ ಲಕ್ಷಣಗಳು. ಸಮಕಾಲೀನ ಸಮಸ್ಯೆಗಳಿಗೆ ಪ್ರತಿಕ್ರಿಯೆಯಾಗಿ ಬಂದ ಕವನಗಳೂ ಕೇವಲ ಸಾಮೂಹಿಕ ಕವಿತೆಗಳಾಗದೆ ನೆರೂದನ ಪ್ರತಿಭಾ ಮಾಯಾದಂಡದ ಸ್ಪರ್ಶದಿಂದ ಸಾರ್ವಕಾಲಿಕ ಸಾರ್ವತ್ರಿಕ, ಮೌಲ್ಯಗಳ ಅಭಿವ್ಯಕ್ತಿಯಾದವು. ಸಾಂಪ್ರದಾಯಿಕ ತಂತ್ರಗಳನ್ನು ತೊರೆದು ನೆರೂದ ತನ್ನದೇ ಆದ ವಿಶಿಷ್ಟ ತಂತ್ರಗಳನ್ನು ಬಳಸಿದ. ಈ ಹೊಸ ಪ್ರಯೋಗಗಳು ವೈಯಕ್ತಿಕ ಎಂಬಷ್ಟು ಪ್ರತ್ಯೇಕವಾಗಿವೆ. ಈ ನೂತನ ಕಾವ್ಯಶೈಲಿಗೆ ನೆರೂದಿಸ್ಮೊ ಎಂದೇ ಹೆಸರು ಬಂತು. ವಾಸ್ತವತೆ, ವ್ಯವಹಾರ ಕೌಶಲ್ಯ ಎರಡೂ ಇದರಲ್ಲಿ ಎದ್ದುಕಾಣುತ್ತದೆ. ಹಲವೆಡೆ ನೆರೂದ ಸರ್ರಿಯಲಿಸ್ಟ್ ತಂತ್ರಗಳನ್ನು ಬಳಸಿದರೂ ಆತ ಸರ್ರಿಯಲಿಸ್ಟ್ ಪಂಥದ ಕವಿ ಅಲ್ಲ. ರೆಸಿಡೆನ್ಸ್ ಆನ್ ಅರ್ತ್‌ನಲ್ಲಿ ಸರ್ರಿಯಲಿಸ್ಟ್ ಶೈಲಿಯ ಸಾಮಾನ್ಯ ಲಕ್ಷಣಗಳೆಲ್ಲ ಇವೆ. ನವ್ಯತೆಯನ್ನು ಬೇಕೆಂದೇ ನಿರಾಕರಿಸಿದ ಈತನ ಮನೋಧರ್ಮ ರೊಮ್ಯಾಂಟಿಕ್ ಮತ್ತು ಫ್ರೆಂಚ್ ಸಾಂಕೇತಿಕತೆಗಳ ಸಮನ್ವಯ ವನ್ನು ಸಾಧಿಸಲು ಪ್ರಯತ್ನಿಸಿತು. ಈತನ ಕಾವ್ಯದ ಸಾಮಾನ್ಯವಸ್ತು ಶೃಂಗಾರ ಇಲ್ಲವೆ ತಾತ್ತ್ವಿಕ ಜಿಜ್ಞಾಸೆ. ಎಲ್ಲದರಲ್ಲೂ ಇರುವ ಒಳದನಿ ವ್ಯಥೆ ಮತ್ತು ವೇದನೆ. ಈತನ ಕಾವ್ಯ ಪ್ರತಿಮೆಗಳನ್ನು ಸಮೃದ್ಧವಾಗಿ ಸೃಷ್ಟಿಸುತ್ತದೆ. ಓತಪ್ರೋತವಾಗಿ ಒಂದಾದ ಮೇಲೊಂದು ಚಿತ್ರಗಳು ಮೂಡಿಬರುತ್ತವೆ. ಅವನ್ನು ಜೋಡಿಸುವ ತಾರ್ಕಿಕ ಕೊಂಡಿ ಮಾತ್ರ ಕಾಣುವುದಿಲ್ಲ. ರಾಜಕೀಯ ಅಥವಾ ತಾತ್ತ್ವಿಕ ಸಿದ್ಧಾಂತಗಳ ಒತ್ತೂ ಅಲ್ಲಿ

ಇರುವುದಿಲ್ಲ. ರೆಸಿಡೆನ್ಸ್ ಆನ್ ಅರ್ತ್‌ನ ಮೂರನೆಯ ಭಾಗದಲ್ಲಿ ಸರ್ರಿಯಲಿಸ್ಟ್ ರೀತಿಯೇ ಪ್ರಧಾನವಾಗಿದ್ದರೂ ಇದು ಸರ್ರಿಯಲಿಸ್ಟ್ ಕಾವ್ಯದಿಂದ ಬೇರೆಯಾಗಿಯೇ ನಿಲ್ಲುತ್ತವೆ. ಬದುಕಿನ ಮೂಲಭೂತ ಸತ್ಯಗಳ ಮುಖಾಮುಖಿ ಅರಿವಿನಿಂದ ಉಂಟಾಗುವ ಭಾವತೀವ್ರತೆ, ಗಂಭೀರ ಅಭಿವ್ಯಕ್ತಿ ಈ ಕಾವ್ಯದ ವಿಶಿಷ್ಟ ಅಂಶಗಳು.

ಲ್ಯಾಟಿನ್ ಅಮೆರಿಕ ದೇಶಗಳ ವಿಶಿಷ್ಟ ಮನೋಧರ್ಮವನ್ನು ಆಯಾ ದೇಶದ ಇತಿಹಾಸ ಮತ್ತು ನೈಸರ್ಗಿಕ ರೂಪ ಲಕ್ಷಣಗಳಿಂದಲೇ ಉದ್ಭವವಾದ ಪ್ರತಿಮೆಗಳಲ್ಲಿ ಅಭಿವ್ಯಕ್ತಿಸಿರುವ ನೆರೂದನ ಅಸಾಧಾರಣ ಪ್ರತಿಭೆಯನ್ನು ಕಾವ್ಯವಿಮರ್ಶಕರೆಲ್ಲ ಮೆಚ್ಚಿಕೊಂಡಿದ್ದಾರೆ. ರಾಜಕೀಯ ವಿಚಾರಗಳೇ ಸಾಮಾನ್ಯ ವಸ್ತುವಾಗಿರುವ ಎಲಿಮೆಂಟರಿ ಓಡ್ಸ್ ಕವನಗಳು ಕಲಾತ್ಮಕ ಅಭಿವ್ಯಕ್ತಿ ವಿಶೇಷದಿಂದಾಗಿ ಅಮೂಲ್ಯವಾಗಿವೆ.

ಕೇವಲ ಆದರ್ಶದ ಕನಸುಗಾರಿಕೆ ನೆರೂದನ ಸ್ವಭಾವವಲ್ಲ; ವರ್ತಮಾನದ ಸಮಾಜ ಕಲ್ಯಾಣವೇ ಈತನ ಸದ್ಯದ ಮತ್ತು ತುರ್ತಿನ ಗುರಿ. ಕಮ್ಯೂನಿಸ್ಟ್ ತತ್ತ್ವಗಳಿಗೆ ಒಲಿದ ಮೇಲೆ ಈತ ಬರೆದುದೆಲ್ಲ ಫ್ಯಾಸಿಸ್ಟರ ವಿರುದ್ಧ, ಶೋಷಣೆಯ ವಿರುದ್ಧ, ಅನ್ಯಾಯಕೆಂದೆಂದೂ ತಲೆಬಾಗದವರ, ಹೋರಾಟದಲ್ಲೆಂದೂ ಸೋಲದವರ ಕವಿ ಎನಿಸಿದ ನೆರೂದ. ಬಾಳಿನ ಕೊನೆಯ ಕ್ಷಣದವರೆಗೂ ತನ್ನ ಧ್ಯೇಯಸಾಧನೆಗಾಗಿ ಅವಿಶ್ರಾಂತವಾಗಿ ದುಡಿದ. ತನ್ನ ಬಾಳಿನ ನೆನಪುಗಳನ್ನೂ ಕವನಗಳನ್ನೂ ಚಿರಸ್ಮರಣೀಯ ಪದಗಳಲ್ಲಿ ಬರೆಯುತ್ತಲೇ ಇದ್ದ. ದಿನನಿತ್ಯದ ಸಣ್ಣ ಸಂಗತಿಗಳು, ಕಡಲು, ಈ ನೆಲದ ಬದುಕು, ಶೋಷಣೆ, ಅವಮಾನ, ನೂರಾರು ದೈನ್ಯಗಳಿಗೆ ಒಳಗಾದವರ ನೋವು, ಈ ಎಲ್ಲಕ್ಕೂ ಈತನ ಕಾವ್ಯ ಕಂಠದಾನ ಮಾಡಿತು. ನೆರೂದ ಇಡೀ ಮಾನವ ಕುಲದ ಮುಖವಾಣಿ. ಎಲ್ಲರ ಆಶೋತ್ತರಗಳ ಅಭಿವ್ಯಕ್ತಿ.

ಇಂಗ್ಲಿಷಿಗೆ ಮತ್ತು ಬೇರೆ ಬೇರೆ ಭಾಷೆಗಳಿಗೆ ಅನುವಾದವಾಗಿರುವ ನೆರೂದನ ಕೃತಿಗಳು;

೧. ರೆಸಿಡೆನ್ಸ್ ಆನ್ ಅರ್ತ್ ಅಂಡ್ ಅದರ ಪೊಯೆಮ್ಸ್: ೧೯೪೬, ೧೯೬೨. ಅನುಕ್ರಮವಾಗಿ ಏಂಜೆಲ್ ಫೊರಸ್, ಕ್ಲೇಟನ್ ಎಷ್ಲಮನ್.

೨. ದಿ ಹೈಟ್ಸ್ ಆಫ್ ಮಾಚ್ಚುಪಿಚ್ಚು, ೧೯೬೭. ನ್ಯಾಥಾನಿಯಲ್ ಟಾರ್ನ್.

೩. ಪೀಸ್ ಫಾರ್ ಟ್ವೈಲೈಟ್ಸ್ ಟು ಕಮ್, ೧೯೫೦.

೪. ಎಲಿಮೆಂಟರಿ ಓಡ್ಸ್, ೧೯೬೧. ಕಾರ್ಲೋಸ್ ಲೋ ಜಾನೊ.

೫. ಸೆಲೆಕ್ಟೆಡ್ ಪೋಯೆಮ್ಸ್ ಬೈ ಪಾಬ್ಲೋ ನೆರೂದ, ೧೯೪೪. ಏಂಜೆಲ್ ಫ್ಲೋರೆಸ್.

೬. ಲೆಟ್ ದಿ ರೇಯ್ಲ್ ಸ್ಪ್ಲಿಟರ್ ಅವೇಕ್ ಆ್ಯಂಡ್ ಅದರ್ ಪೊಯೆಮ್ಸ್, ೧೯೫೦.

೭. ಸೆಲೆಕ್ಟೆಡ್ ಪೋಯೆಮ್ಸ್, ೧೯೬೧, ಬೆನ್ ಲಿಟಲ್

೮. ಟ್ವೆಂಟಿ ಪೋಯೆಮ್ಸ್ ಆಫ್ ಪಾಬ್ಲೋ ನೆರೂದ. ೧೯೬೬. ರಾಬರ್ಟ್ ಬ್ಲೈ ಮತ್ತು ಜೇಮ್ಸ್ ರೈಟ್

೯. ಮರಳಿ ಬರುವೆ (ನೆರೂದನ ಕೆಲವು ಆಯ್ದ ಕವನಗಳು), ೧೯೭೭, ಕನ್ನಡಕ್ಕೆ–ತೇಜಸ್ವಿನಿ ನಿರಂಜನ.

೧೦. ಆಯ್ದ ಕವನಗಳು, ೧೯೭೭, ಕನ್ನಡಕ್ಕೆ – ನಿಸಾರ್ ಅಹಮದ್. ಸಮಿಟ್ಸ್ ಆಫ್ ಮಾಚ್ಚುಪಿಚ್ಚು ಕವನ (ಕ್ಯಾಂಟೊ ಜನರಲ್‌ನಿಂದ ಆಯ್ದು), ವ್ಹಿಟ್ ಬರ್ನೆಟ್ ಸಂಪಾದಿತ ದಿ ವರ್ಲ್ಡ್ ಬೇಸ್ಟ್ ಕವನ ಸಂಕಲನದಲ್ಲಿ (೧೯೫೦) ಸೇರಿಸಲ್ಪಟ್ಟಿದೆ.

ನೆರೂದ ಭಾಷಾಂತರಿಸಿದ ಕೃತಿಗಳು: ೧ ದಿ ಡಾಟರ್ಸ್ ಆಫ್ ಆಲ್ಬಿಯೋನ್. ೨ ದಿ ಮೆಂಟಲ್ ಟ್ರ್ಯಾವಲರ್. ಮೂಲ: ವಿಲಿಯಂ ಬ್ಲೇಕ್. ೩ ರೋಮಿಯೋ ಜೂಲಿಯಟ್–ಷೇಕ್ಸ್‌ಪಿಯರ್.

ನೆರೂದ ಗಳಿಸಿದ ಪ್ರಶಸ್ತಿಗಳು: ೧ ಇಂಟರ್‌ನ್ಯಾಷನಲ್ ಪೀಸ್ ಪ್ರೈಜ್ ೧೯೫೦ (ನೀಗ್ರೋ ಗಾಯಕ ಪಾಲ್ ರೋಬ್ಸನ್‌ನೊಂದಿಗೆ ಹಂಚಿಕೊಂಡ). ೨ ಲೆನಿನ್ ಪೀಸ್ ಪ್ರೈಜ್, ೧೯೫೩. ೩ ಚಿಲಿಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ. ೪ ನೊಬೆಲ್ ಪಾರಿತೋಷಕ, ೧೯೭೧. ೫ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್. ೬ ಚಿಲಿ ವಿಶ್ವವಿದ್ಯಾನಿಲಯ ಮತ್ತು ಹಾರ್ವರ್ಡ್ ವಿಶ್ವವಿದ್ಯಾನಿಲಯಗಳ ಗೌರವ ಸದಸ್ಯತ್ವ **(ಕೆ.ಬಿ.ಪಿ.)**

ಸ್ಪೇನಿನ ಅಂತರ್ಯುದ್ಧದಲ್ಲಿ (೧೯೩೬–೩೯) ನೆರೂದ ಉದಾರ ಮನೋಧರ್ಮದ ಸ್ಪ್ಯಾನಿಷ್ ರಿಪಬ್ಲಿಕನರ ವಾಮಪಂಥೀಯ ಪಕ್ಷವನ್ನು ಬೆಂಬಲಿಸಿದ. ೧೯೪೮ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸರ್ಕಾರವು ಬಹಿಷ್ಕರಿಸಿದಾಗ ನೆರೂದ ಮತ್ತು ಅವನಂತೆ ಹೋರಾಡಿದವರು ದೇಶಭ್ರಷ್ಟತೆ ಬಂಧನ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಯಿತು. ನೆರೂದ ದೇಶವನ್ನು ಬಿಟ್ಟು ಹೋದ. ೧೯೫೨ರಲ್ಲಿ ಪಕ್ಷದ ಮೇಲಿನ ಬಹಿಷ್ಕಾರವನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಂಡಾಗ ಸ್ಪೇನಿಗೆ ಹಿಂದಿರುಗಿದ.

ಸಂಕೇತ ಪಂಥದಲ್ಲಿ ಕಾವ್ಯರಚನೆ ಪ್ರಾರಂಭಿಸಿದ ಈ ಕವಿ ಅನಂತರ ಸರ್ರಿಯಲಿಸಮ್‌ಗೆ ಒಂದು ಕಡೆಗೆ ವಾಸ್ತವತೆಯನ್ನು ಆರಿಸಿಕೊಂಡ ಪ್ರಾರಂಭದಲ್ಲಿ ಪ್ರಣಯ ಕಾವ್ಯವನ್ನು ಬರೆದ, ಅನಂತರ ತನ್ನ ಸಾಮಾಜಿಕ ಮತ್ತು ರಾಜಕೀಯ ನಂಬಿಕೆಗಳನ್ನು ಕವನಗಳಲ್ಲಿ ಅಭಿವ್ಯಕ್ತಿಗೊಳಿಸಿದ.

೧೯೫೦ರಲ್ಲಿ ಪ್ರಕಟವಾದ 'ಕ್ಯಾಂಟೋ ಜನರಲ್' ಒಂದು ಮಹಾಕಾವ್ಯ. ಇದು ಸ್ಪೇನಿನ ಚರಿತ್ರೆಯನ್ನು ಕಮ್ಯುನಿಸ್ಟ್ ದೃಷ್ಟಿಯಿಂದ ವ್ಯಾಖ್ಯಾನಿಸುತ್ತದೆ. ದಾರಿದ್ರ್ಯ ಮತ್ತು ದಬ್ಬಾಳಿಕೆಗಳಿಂದ ಸ್ವಾತಂತ್ರ್ಯ ಪಡೆಯಲು ಜನತೆ ನಡೆಸಿದ ಹೋರಾಟವನ್ನು ಚಿತ್ರಿಸುತ್ತದೆ.

ಪೆರುವಿನಲ್ಲಿರುವ ಮಚುಪಿಚು ಎನ್ನುವ ಸ್ಥಳದಲ್ಲಿ ಚಾರಿತ್ರಿಕ ಅವಶೇಷಗಳನ್ನು ಕವಿ ಕಂಡ. ಈ ಅನುಭವವೇ 'ಮಚುಪಿಚುವಿನ ಉನ್ನತ ಸ್ಥಳಗಳು' (೧೯೫೮) ಕವನಕ್ಕೆ ಸ್ಫೂರ್ತಿಯನ್ನು ನೀಡಿತು. ಮಚುಪಿಚುವಿನಲ್ಲಿ ಎತ್ತರದ ಸ್ಥಳದಲ್ಲಿ ನಿಂತು ನಗರದ ಅವಶೇಷಗಳನ್ನು ಕಂಡ ಕವಿ, ಅಲ್ಲಿನ ಜನರು ಬದುಕಿದ್ದಾಗ ಅವರಿಗೆ ದನಿ ಇರಲಿಲ್ಲ, ತಾನು ಅವರ ದನಿಯಾಗುತ್ತೇನೆ ಎಂದು ನಿರ್ಧರಿಸುತ್ತಾನೆ. ಕಾವ್ಯ ಜಗತ್ತಿನಲ್ಲಿ ತನ್ನ ವೈಯಕ್ತಿಕ ಅನುರಾಗಗಳನ್ನು ಮೀರಿ ಕವಿ ಮೂಕ ಜನತೆಯ ದನಿಯಾಗುವ ಪ್ರಕ್ರಿಯೆ ಇಲ್ಲಿದೆ. 'ಭೂಮಿಯ ಮೇಲೆ ವಾಸ ಮತ್ತು ಇತರ ಕವನಗಳು' ಮೂರು ಸಂಪುಟಗಳ ಕವನ ಸಂಗ್ರಹ; ಈ ಕವನಗಳಲ್ಲಿ ಕವಿಯು ಬೇರೆ ಬೇರೆ ನಾಗರಿಕತೆಗಳು ಸಾಧಿಸಿದ ವಿನಾಶದ ಚಿತ್ರಗಳನ್ನು ಕೊಡುತ್ತ ಗಂಭೀರ ವಿಷಾದದ ಮನಸ್ಥಿತಿಯನ್ನು ಪಡೆಯುತ್ತಾನೆ. ನೆರೂದ ಆತ್ಮವೃತ್ತದ ಅಂಶಗಳಿಂದ ಹಲವು ಕವನಗಳನ್ನು ಬರೆದ. **(ಎಲ್.ಎಸ್.ಎಸ್.)**


ಲೇಖಕರ ಸೂಚಿ

ಎಲ್.ಎಸ್.ಎಸ್.	ಶೇಷಗಿರಿರಾವ್, ಎಲ್.ಎಸ್. ಪ್ರಾಧ್ಯಾಪಕರು (ವಿ) ಜ್ಞಾನಗಂಗೋತ್ರಿ, ಬೆಂಗಳೂರು
ಎಸ್.ವಿ.ಆರ್.	ರಂಗಣ್ಣ, ಎಸ್.ವಿ. (ದಿ) ಇಂಗ್ಲಿಷ್ ಪ್ರಾಧ್ಯಾಪಕರು ಮಹಾರಾಜ ಕಾಲೇಜು, ಮೈಸೂರು
ಜಿ.ಎಸ್.ಎಸ್.	ಗೀತಾನಾವಲ್ ಶ್ರೀನಿವಾಸ್ ಪ್ರಾಧ್ಯಾಪಕಿ ಕನ್ನಡ ವಿಭಾಗ ಸರ್ಕಾರಿ ಪದವಿಪೂರ್ವ ಕಾಲೇಜು ಶ್ರೀರಂಗಪಟ್ಟಣ, ಮಂಡ್ಯ
ಸಿ.ಪಿ.ಕೆ.	ಕೃಷ್ಣಕುಮಾರ್, ಸಿ.ಪಿ. ಕನ್ನಡ ಪ್ರಾಧ್ಯಾಪಕ (ವಿ) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
ಎಚ್.ಎಸ್.ಎಸ್.ಎ.	ಶಾರದಾಬಾಯಿ ರೀಡರ್, ಇತಿಹಾಸ ವಿಭಾಗ ಎ.ಪಿ.ಎಸ್. ಕಾಲೇಜು, ಬೆಂಗಳೂರು
ಜಿ.ಕೆ.ಯು.	ಕುರ್ಡಿ, ಜಿ.ಎನ್. (ದಿ) ಅಡ್ವೊಕೇಟ್ ಎಲ್–೭೫, ೨ನೆಯ ಹಂತ ಜಯನಗರ, ತೊಣಚಿಕೊಪ್ಪಲು, ಮೈಸೂರು
ಕೆ.ಬಿ.ಪಿ.	ಪ್ರಭುಪ್ರಸಾದ್, ಕೆ.ಬಿ. ಇಂಗ್ಲಿಷ್ ಪ್ರಾಧ್ಯಾಪಕ (ವಿ) ೧೧, ದೇವಸ್ಥಾನದ ರಸ್ತೆ ಜಯಲಕ್ಷ್ಮೀಪುರಂ, ಮೈಸೂರು
ಎಚ್.ಕೆ.ಆರ್.	ರಾಮಚಂದ್ರಮೂರ್ತಿ, ಎಚ್.ಕೆ. ಪ್ರಾಧ್ಯಾಪಕ (ವಿ) ಇಂಗ್ಲಿಷ್ ವಿಭಾಗ ನ್ಯಾಷನಲ್ ಕಾಲೇಜು, ಬೆಂಗಳೂರು

ಎಸ್.ವಿ.ಎಸ್.ಯು.	ಶ್ರೀನಿವಾಸ್ ವಿ. ಸುತ್ರಾವೆ ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ ಸರ್ಕಾರಿ ಕಾಲೇಜು, ಚಿತ್ರದುರ್ಗ
ಎಸ್.ಕೆ.ಆರ್.	ರಾಮಚಂದ್ರರಾವ್, ಎಸ್.ಕೆ. ೩೦೫, ೧೧ನೆಯ ಬ್ಲಾಕ್ ಜಯನಗರ, ಬೆಂಗಳೂರು
ಡಿ.ಎನ್.ಎ.	ಧ್ರುವನಾರಾಯಣ ಎಲ್.ವಿ.ಡಿ. ಕಾಲೇಜು ರಾಯಚೂರು
ಜಿ.ಹೆಚ್.ಇ.	ಗಿರಿ ಹೆಗಡೆ ಸಹಪ್ರಾಧ್ಯಾಪಕ ಮತ್ತು ಅಧ್ಯಕ್ಷರು ಕಮ್ಯುನಿಕೇಟಿವ್ ಡಿಸ್‌ಆರ್ಡರ್ ವಿಭಾಗ ಮಿನ್ನೆಸೋಟ (ಯು.ಎಸ್.ಎ.)
ಎಚ್.ಎಸ್.ಎಚ್.	ಹರಿಶಂಕರ್, ಎಚ್.ಎಸ್. ಪ್ರಾಧ್ಯಾಪಕ (ವಿ) ಭಾಷಾಂತರ ವಿಭಾಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
ಜಿ.ಎಚ್.ಆರ್.	ರಾಮರಾವ್, ಜಿ.ಎಚ್. (ದಿ) ಮುದ್ರಕ ಮತ್ತು ಪ್ರಕಾಶಕ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು
ಟಿ.ಆರ್.ಎನ್.	ನಾಗಪ್ಪ, ಟಿ.ಆರ್. (ದಿ) ವಯಸ್ಕರ ಶಿಕ್ಷಣ ಸಮಿತಿ ಮೈಸೂರು
ಪಿ.ಎಂ.ಎಚ್.	ಹೆಗಡೆ, ಪಿ.ಎಂ. ಅಧ್ಯಾಪಕ ಇಂಗ್ಲಿಷ್ ವಿಭಾಗ ಎಂ.ಎಂ. ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು ಶಿರಸಿ, ದಕ್ಷಿಣಕನ್ನಡ
ಪಿ.ಜಿ.ಡಿ.	ಪ್ರಧಾನ ಗುರುದತ್ತ ಅಧ್ಯಕ್ಷರು ಕುವೆಂಪು ಭಾಷಾಭಾರತಿ ಬೆಂಗಳೂರು

ಎಂ.ಆರ್.	ರಾಮರಾವ್, ಎಂ. ಪ್ರಧಾನ ಸಂಪಾದಕ (ವಿ) ಇಂಗ್ಲಿಷ್–ಕನ್ನಡ ನಿಘಂಟು ಪ್ರಸಾರಾಂಗ, ಮೈಸೂರು
ಎಂ.ಕೆ.ಕೆ.	ಕೇಶವಸ್ವಾಮಿ, ಎಂ.ಕೆ. ಜಯನಗರ, ಬೆಂಗಳೂರು
ಕೆ.ಆರ್.ಜಿ.	ಕುಲಕರ್ಣಿ, ಆರ್.ಜಿ. ಸಾಯಿಬಾಬಾ ಕಾಲೇಜು ಬೆಂಗಳೂರು
ಕೆ.ವಿ.ಎಸ್.ಟಿ.	ಶ್ರೀನಿವಾಸ್ ತಾತಾಚಾರ್, ಕೆ.ವಿ. ಸಂಪಾದಕ (ವಿ) ಇಂಗ್ಲಿಷ್–ಕನ್ನಡ ನಿಘಂಟು ಪ್ರಸಾರಾಂಗ, ಮಾನಸಗಂಗೋತ್ರಿ ಮೈಸೂರು
ಎಚ್.ಜಿ.ಎಸ್.ಆರ್.	ಸೂರ್ಯನಾರಾಯಣರಾವ್, ಎಚ್.ಜಿ. ಪ್ರಾಧ್ಯಾಪಕ (ವಿ) ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ರಾಮಕೃಷ್ಣ ಆಶ್ರಮ, ಮೈಸೂರು





ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ತಲಾ ೨ ಕೋಟಿ ರೂ. ಅನುದಾನವನ್ನು ಮೀಸಲಿಟ್ಟು, ಈಗಾಗಲೇ ಒಂದು ಕೋಟಿ ರೂ. ಬಿಡುಗಡೆ ಮಾಡಲಾಗಿದೆ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಬುದ್ಧವೂ ಆದ ಕನ್ನಡವು ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಕ ಅನನ್ಯತೆಯಿಂದ ಜಾಗತಿಕಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಕನ್ನಡ ಭಾಷಾಭಿವೃದ್ಧಿಗೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ರೂಪಿಸಿಕೊಂಡ ಹಲವಾರು ಯೋಜನೆಗಳಲ್ಲಿ ಕನ್ನಡ ವಿಶ್ವಕೋಶವನ್ನು ಆಧರಿಸಿದ ವಿಷಯವಾರು ಗ್ರಂಥಗಳ ಪ್ರಕಟಣಾ ಯೋಜನೆಯೂ ಒಂದಾಗಿದ್ದು, ಆಯಾ ವಿಷಯತಜ್ಞರು, ಪರಿಣತರು ಸಂಪಾದಿಸಿಕೊಟ್ಟ ಈ ಕೃತಿಗಳು ಬಿಡುಗಡೆಯಾಗುತ್ತಿರುವುದು ಸಂತೋಷದ ಸಂಗತಿ. ಇದಕ್ಕೆ ಶ್ರಮಿಸಿದ ಪ್ರಧಾನ ಸಂಪಾದಕರು, ಸಂಪಾದಕರು, ಮತ್ತೆಲ್ಲರನ್ನೂ ಅಭಿನಂದಿಸುತ್ತೇನೆ. ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ.

(ಡಿ. ವಿ. ಸದಾನಂದ ಗೌಡ)
ಮುಖ್ಯಮಂತ್ರಿ

ಬೆಲೆ : ಒಂದು ನೂರು ರೂಪಾಯಿಗಳು